ವಿಷಯಾನುಕ್ರಮಣಿಕೆ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೩೧

ಶ್ರೀ ವ್ಯಾಸಮಹರ್ಷಿಪ್ರಣೀತಂ

ಶ್ರೀ

ವರಾಹಮಹಾಪುರಾಣಂ

(ಕನ್ನಡ ಅನುವಾದ ವಿವರಣೆಗಳೊಡನೆ)

ಮೊದಲನೆಯ ಭಾಗ

(೧-೫೩ ಅಧ್ಯಾಯಗಳು)

ಅನುವಾದಕ:

ಆಸ್ಥಾನ ವಿದ್ವಾನ್, ಮ. ರ. ವರದಾಚಾರ್ಯ

ಕರ್ಣಾಟಾಧ್ಯಾಪಕ, ಮಹಾರಾಜರವರ ಕಾಲೇಜ್, ಮೈಸೂರು.

ಮೈಸೂರು:

ಶ್ರೀ ಹನುಮಾನ್ ಪ್ರೆಸ್

೧೯೪೬

॥ ಶ್ರೀಃ ॥

-x-

ಮು ನ್ನು ಡಿ

ಶ್ರೀವ್ಯಾಸಮಹರ್ಷಿಪ್ರಣೀತಗಳೆನಿಸಿಕೊಂಡಿರುವ ಅನೇಕ ಪುರಾಣಗಳ ಮತ್ತು ಮಹಾಭಾರತದ ಆದಿಯಲ್ಲಿ,

" ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮಂ |
ದೇವೀಂ ಸರಸ್ವತೀಂ ವ್ಯಾಸಂ ತತೋ**ಜಯ**ಮುದೀರಯೇತ್ ॥ "

ಎಂಬ ಮಂಗಳಶ್ಲೋಕವಿದೆ.

ಜಯ ಎಂಬ ಶಬ್ದಕ್ಕೆ ಸಾಮಾನ್ಯವಾಗಿ ವಿಜಯವೆಂದು ಅರ್ಥವು ರೂಢಿಯಲ್ಲಿದೆ. ಆದರೆ ಮೇಲಿನ ಈ ಮಂಗಳಶೋಕದಲ್ಲಿರುವ **ಜಯ** ಶಬ್ದಕ್ಕೆ ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧಪುರುಷಾರ್ಥಸಾಧನವೆಂದೂ, ಪುರುಷಾರ್ಥಸಾಧನಗಳಾದ ಅಷ್ಟಾದಶ (ಹದಿನೆಂಟು) ಪುರಾಣ ಮತ್ತು ರಾಮಾಯಣ ಮಹಾಭಾರತಗಳೆಂದೂ ಅರ್ಥ.

" ಚತುರ್ಣಾಂ ಪುರುಷಾರ್ಥಾನಾಂ ಸಾಧನಂತು ಜಯೋಮತಃ | "

ಎಂದು ಕೋಶದಲ್ಲೂ,

" ಅಷ್ಟಾದಶ ಪುರಾಣಾನಿ ರಾಮಸ್ಯ ಚರಿತಂ ತಥಾ |
ಕಾರ್ಷ್ಣಂ ವೇದಃ ಪಂಚಮಶ್ಚ ಯಂ ಮಹಾಭಾರತಂ ವಿದುಃ |
ಜಯೇತಿ ನಾಮ್ನಾ ತ್ವೇತಾಂಸ್ತು ಪ್ರವದಂತಿ ಮನೀಷಿಣಃ ॥ "

ಎಂದು ಭವಿಷ್ಯಮಹಾಪುರಾಣದಲ್ಲೂ ಹೇಳಿದೆ.

ನಮ್ಮನ್ನಾಳುವ ಮಹಾಸ್ವಾಮಿಯವರಾದ **ಶ್ರೀಮನ್ಮಹಾರಾಜ ಶ್ರೀಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.,** ಯವರು ತಮ್ಮ ಪ್ರಜೆಗಳನ್ನು ಧರ್ಮಾರ್ಥಾದಿ ಪುರುಷಾರ್ಥಗಳನ್ನು ಪಡೆಯುವಂತೆ ಸಂರಕ್ಷಿಸುವುದರ ಜತೆಗೆ ಈ ಜಯವನ್ನೂ ಎಂದರೆ ಹದಿನೆಂಟು ಪುರಾಣಗಳೇ ಮೊದಲಾದ ಪವಿತ್ರ ಗ್ರಂಥಗಳನ್ನು ಪ್ರಕಟಿಸುವುದರಿಂದಲೂ ಮಹಾಸ್ವಾಮಿಯವರ ದಿವ್ಯನಾಮಧೇಯವು ಸುಸಾರ್ಥಕವಾಗಿದೆಯೆಂಬುದು ವ್ಯಕ್ತವಾಗುವುದು.

ಮೇಲಿನ ಮಂಗಳಶ್ಲೋಕದಲ್ಲಿ ಹೇಳಿರುವಂತೆ ಪುರಾಣವನ್ನು ಆರಂಭಿಸು ವುದಕ್ಕೆ ಮೊದಲು ನಾವು ನರನಾರಾಯಣರನ್ನೂ ಸರಸ್ವತೀ ವ್ಯಾಸರನ್ನೂ ನಮಸ್ಕರಿಸುವುದರ ಜತೆಗೆ ಸಂಸ್ಕೃತದಲ್ಲಿ (ದೇವನಾಗರಿಲಿಪಿಯಲ್ಲಿ) ದ್ದು ಸಾಮಾನ್ಯರಿಗೆ ದುರ್ಲಭವಾಗಿದ್ದ ಇಹಪರಶ್ರೇಯಸ್ಸಾಧನಗಳಾದ ಪುರಾಣಗಳನ್ನು ಕನ್ನಡದಲ್ಲಿ ಅನುವಾದದೊಡನೆ ಪ್ರಕಟಿಸಿ, ಪುರಾಣಾಮೃತವು ಸರ್ವರಿಗೂ ಸುಲಭ ನಾಗಿ ದೊರೆಯುವಂತೆ ಮಾಡಿ ಪರಮೋಪಕಾರಮಾಡಿರುವ ನಮ್ಮನ್ನಾಳುವ ಮಹಾಸ್ವಾಮಿಯವರನ್ನು " ಜಯಮುದೀರಯೇತ್ " ಎಂಬಂತೆ ವಂದಿಸುವುದು ನಮ್ಮ ಕರ್ತವ್ಯವಾಗಿದೆ.

ಶ್ರೀವರಾಹಮಹಾಪುರಾಣವು, ಹದಿನೆಂಟು ಮಹಾಪುರಾಣಗಳಲ್ಲಿ ಹನ್ನೆರಡ ನೆಯದು " ವಾರಾಹಂ ದ್ವಾದಶಂ " ಎಂದು ವರಾಹ ಪುರಾಣ (೧೧೨ ನೆಯ ಅಧ್ಯಾಯ)ದಲ್ಲೂ, ವಿಷ್ಣುಪುರಾಣದಲ್ಲೂ ಹೇಳಿದೆ. ಈ ಸಾತ್ವಿಕಮಹಾಪುರಾಣವು ಸರ್ವಪಾತಕನಾಶಕವೂ ಸುಪುತ್ರಾದಿ ಸರ್ವೇಷ್ಟಾರ್ಥಪ್ರದವೂ, ಪರದಲ್ಲಿ ಮುಕ್ತಿ ದಾಯಕವೂ ಆದುದೆಂದೂ (ವ. ಪು. ೧೧೨ನೆಯ ಅಧ್ಯಾಯ), " ಪುರಾಣಾನಾಂ ಹಿ ಸರ್ವೇಷಾಂ ವಾರಾಹಂ ಘೃತಸಮ್ಮಿತಂ—ಪುರಾಣಗಳೆಂಬ ದಿವ್ಯಗೋರಸ ಗಳಲ್ಲಿ ವರಾಹಪುರಾಣವು ತುಪ್ಪವಾಗಿದೆ " ಯೆಂದೂ ಶ್ರೀವರಾಹಮೂರ್ತಿ ಯಿಂದಲೇ ಉಕ್ತವಾಗಿದೆ. ಇದರ ಮಹಿಮೆಯು ಅಮಿತವಾಗಿದೆ. ಈ ಶ್ರೀವರಾಹ ಮಹಾಪುರಾಣವನ್ನು ಕನ್ನಡ ಅನುವಾದದೊಡನೆ ಬರೆಯಲು ಮಹಾಸ್ವಾಮಿ ಯವರು ನನಗೆ ಅಪ್ಪಣೆಮಾಡಿ ಸೇವೆಗೆ ಅವಕಾಶವನ್ನು ದಯೆಪಾಲಿಸಿದುದು ನನ್ನ ಭಾಗ್ಯವೆಂದೆಣಿಸಿ, ರಾಜಭಕ್ತಿಪೂರ್ವಕವಾದ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ.

ಶ್ರೀವರಾಹಪುರಾಣವನ್ನು ಅನುವಾದದೊಡನೆ ಬರೆಯಲು ನಾನು ಉಪ ಯೋಗಿಸಿಕೊಂಡಿರುವ ಮಾತೃಕೆ (ಮೂಲಪ್ರತಿ) ಗಳು ಮುಖ್ಯವಾಗಿ ಎರಡು. ಮೊದಲನೆಯದು ಬೊಂಬಾಯಿನ ಶ್ರೀವೇಂಕಟೇಶ್ವರ ಯಂತ್ರಾಲಯದಲ್ಲಿ ಮುದ್ರಿತವಾಗಿರುವ ಪ್ರತಿ. ಎರಡನೆಯದು ಕಲ್ಕತ್ತಾದ ಸಂಸ್ಕೃತಕಾಲೇಜಿನ ಸಂಸ್ಕೃತವಿಶಾರದರಾದ ಪಂಡಿತ್ ಹೃಷಿಕೇಶ ಶಾಸ್ತ್ರಿಗಳಿಂದ ಕಲ್ಕತ್ತಾದಲ್ಲಿ ಮುದ್ರಿತವಾಗಿರುವ ಪ್ರತಿ. ಎರಡನೆಯದು ಮೊದಲನೆಯದಕ್ಕಿಂತಲೂ ಉತ್ತಮ ವಾಗಿದೆಯಾದರೂ ಎರಡರಲ್ಲೂ ಸ್ಖಾಲಿತ್ಯಗಳು ಹೆಚ್ಚಾಗಿವೆ. ಅನ್ವಯಕ್ಕೆ ಹೊಂದದೆಯೂ, ಅರ್ಥವಾಗದೆಯೂ, ವ್ಯಾಕರಣವಿರೋಧವಾಗಿಯೂ ಇರುವ ಭಾಗಗಳು ಎಷ್ಟೋ ಇವೆ. ಶ್ಲೋಕಸಂಖ್ಯೆಗಳಲ್ಲೂ ಪಾಠಗಳಲ್ಲೂ ಹಲವೆಡೆಗಳಲ್ಲಿ ವ್ಯತ್ಯಾಸವಿದೆ.

ಮೇಲೆ ಹೇಳಿದ ಎರಡು ಪ್ರತಿಗಳಲ್ಲಿ ಪಾಠವು ಭಿನ್ನವಾಗಿದ್ದಲ್ಲಿ, ಯಾವುದು ಉತ್ತಮವೆಂದು ತೋರುವುದೋ ಅದನ್ನೇ ಬರೆದು ಅನುವಾದಮಾಡಿದೆ. ಎರಡರಲ್ಲೂ ಅರ್ಥವಾಗದೆಡೆಗಳಲ್ಲಿ ಮೈಸೂರು ಪ್ರಾಚ್ಯಕೋಶಾಲಯ (Oriental Library)ದಲ್ಲಿ ಕೆಲವು ಅಧ್ಯಾಯಗಳನ್ನು ಮಾತ್ರವೇ ಒಳಗೊಂಡಿರುವ ಗ್ರಂಥಾಕ್ಷರದ ತಾಳಪ್ರತಿಯ ಪಾಠವನ್ನು ನೋಡಿಯೂ, ಸ್ವತಂತ್ರವಾಗಿ ತಿದ್ದಿಯೂ ಶ್ಲೋಕಗಳನ್ನೂ, ಅನುವಾದವನ್ನೂ ಬರೆದು, ಬೊಂಬಾಯಿ, ಕಲ್ಕತ್ತಾಗಳ ಪ್ರತಿಗಳಲ್ಲಿರುವ ಪಾಠವನ್ನು ಆವರಣಚಿಹ್ನೆಗಳಲ್ಲಿ ಅಥವಾ ಕೆಳಗಡೆ ಟಿಪ್ಪಣಿಯಲ್ಲಿ ಬರೆದಿದೆ.

ಶ್ರೀವರಾಹಪುರಾಣದಲ್ಲಿ ಕಾಂಡ ಅಥವಾ ಖಂಡವಿಭಾಗವಿಲ್ಲ. ಅಧ್ಯಾಯ ವಿಭಾಗಮಾತ್ರವೇ ಇದೆ. ಒಟ್ಟು ೨೧೮ ಅಧ್ಯಾಯ ಗಳಿವೆ. ವರಾಹಪುರಾಣದ ಗ್ರಂಥ (ಶ್ಲೋಕ) ಸಂಖ್ಯೆ ಇಪ್ಪತ್ತನಾಲ್ಕುಸಾವಿರವೆಂದು ದೇವೀಭಾಗವತ, ಮತ್ಸ್ಯಪುರಾಣಗಳಲ್ಲಿ ಹೇಳಿದೆ. ಆದರೆ ನಮಗೆ ದೊರೆತಿರುವ ಮೇಲಿನ ಎರಡು ಪ್ರತಿಗಳಲ್ಲೂ ಗದ್ಯವನ್ನೂ ಪರಿಗಣಿಸಿದರೂ ಹನ್ನೆರಡುಸಾವಿರ ಗ್ರಂಥಕ್ಕಿಂತಲೂ ಕಡಿಮೆಯಾಗಿಯೇ ಇದೆ. ಬೊಂಬಾಯಿನ ವೇಂಕಟೇಶ್ವರ ಯಂತ್ರಾಲಯಾಧ್ಯಕ್ಷರವರೂ "ವರಾಹಪುರಾಣವು ಅಪೂರ್ಣವಾಗಿರುವಂತಿದೆಯೆಂದು ಕೇಳಿದ್ದೇವೆ." ಎಂದು ಬರೆದಿರುವರು. ಪುರಾಣದ ಕಡೆಯಲ್ಲಿ ಫಲಶ್ರುತಿಯ ಅಧ್ಯಾಯವೂ ವಿಷಯಾನುಕ್ರಮಣಿಕಾಧ್ಯಾಯವೂ ಇರುವುದರಿಂದ ಪುರಾಣವು ಮುಗಿದಿದೆಯೆಂದೂ, ನಡುನಡುವೆ ಕೆಲವು ಅಧ್ಯಾಯಗಳೊ ಅಥವಾ ಅಧ್ಯಾಯಗಳಲ್ಲಿ ಅನೇಕ ಶ್ಲೋಕಗಳೋ ಲುಪ್ತವಾಗಿರಬಹುದೆಂದೂ, ಆದುದರಿಂದಲೇ ಕೆಲವು ಕಡೆಗಳಲ್ಲಿ ವಿಚಾರವು ಹಿಂದುಮುಂದಕ್ಕೆ ಹೊಂದದಂತೆ ಇದೆಯೆಂದೂ ತೋರುತ್ತದೆ. ಅಂತಹ ಸಂದರ್ಭಗಳಲ್ಲಿ ಮುಖ್ಯವಾದ ಕೆಲವನ್ನು ಆಯಾ ಅಧ್ಯಾಯದಲ್ಲೇ ಟಿಪ್ಪಣಿಯಲ್ಲಿ ಸೂಚಿಸಿದೆ. ಕೆಲವೆಡೆಗಳಲ್ಲಿ ಶ್ಲೋಕಗಳು ಸಂದರ್ಭಕ್ಕೆ ಸರಿಯಾದ ಕ್ರಮದಲ್ಲಿರದೆ ಪಲ್ಲಟವಾಗಿವೆ ಒಂದು ಶ್ಲೋಕದ ಉತ್ತರಾರ್ಧವೂ ಮುಂದಿನ ಶ್ಲೋಕದ ಪೂರ್ವಾರ್ಧವೂ ಸೇರಿ, ವಾಕ್ಯವಾಗುವಂತೆ ಇದೆ. ಅಂತಹ ಸಂದರ್ಭದಲ್ಲಿ ಅನ್ವಯಾನುಸಾರವಾಗಿ ಸರಿಪಡಿಸಿಕೊಂಡು ಶ್ಲೋಕಸಂಖ್ಯೆಯನ್ನೂ ಅನುವಾದವನ್ನೂ ಬರೆದಿದೆ. ಶ್ಲೋಕಗಳಿಗೆ ನಾಲ್ಕು ಪಾದಗಳೇ ಇರಬೇಕೆಂಬ ನಿಯಮವು ಪುರಾಣಗಳಲ್ಲಿ ಕಾಣುವುದಿಲ್ಲ. ಕೆಲವು ಶ್ಲೋಕಗಳಲ್ಲಿ ಎರಡೇ ಪಾದಗಳೂ ಮತ್ತೆ ಕೆಲವರಲ್ಲಿ ಆರು ಏಳು ಪಾದಗಳೂ ಇರುವವು.

ಶ್ರೀವರಾಹಪುರಾಣದಲ್ಲಿ ಶ್ರೀಮನ್ನಾರಾಯಣನಿಗೇ ಪರತ್ವವನ್ನು ಹೇಳಿದೆಯಾದರೂ "ತ್ರಿಮೂರ್ತಿಗಳಲ್ಲಿ ಭೇದಭಾವನೆಯು, ಪಾಪಕಾರಣ" ವೆಂದು

ಹೇಳಿದೆ. ಯಾರ ನಿಂದೆಯೂ ಇಲ್ಲ. ಸರ್ವ ಪಾಪನಾಶಕಗಳೂ ಇಷ್ಟಾರ್ಥ ದಾಯಕಗಳೂ ಮುಕ್ತಿಪ್ರದಗಳೂ ಆದ ಅನೇಕ ವ್ರತದಾನತೀರ್ಥಯಾತ್ರಾದಿ ಗಳನ್ನು ರಸಭರಿತವಾದ ಕಥೆಗಳೊಡನೆ ಹೇಳಿದೆ, ಆದುದರಿಂದಲೇ ಇದು ಸಾತ್ವಿಕಪುರಾಣವೆಂದೆನಿಸಿಕೊಂಡಿದೆಯೆಂದು ತೋರುತ್ತದೆ. ಇದರ ಒಂದೊಂದು ಅಧ್ಯಾಯದ ಶ್ರವಣಾದಿಗಳಿಂದಲೇ ಉತ್ತಮಫಲವು ಲಭಿಸುವುದೆಂದೂ ಉಕ್ತ ವಾಗಿದೆ. ಪೂರ್ವಾಚಾರ್ಯರನೇಕರು ತಮ್ಮ ತತ್ವವಿಚಾರಗಳಲ್ಲಿ ಶ್ರೀವರಾಹ ಪುರಾಣದ ಉಕ್ತಿಗಳನ್ನು ಆಧಾರವಾಗಿ ಪರಿಗ್ರಹಿಸಿರುವರು. "ಪರಮಾದ್ಭುತ" ವೆನಿಸಿಕೊಂಡಿರುವ ಇದು ಸರ್ವಜನಾದರಣೀಯವಾಗಿದೆ.

ವ್ಯಯ ಸಂ॥ ಜ್ಯೇಷ್ಠ
ಶುದ್ಧ ೨ ಸ್ಥಿರವಾರ
1—6—1946

ಅನುವಾದಕ,
ಮಡೇನೂರ ರಘುನಾಥಾಚಾರ್ಯರ ಮಗ ವರದಾಚಾರ್ಯ.

ಶ್ರೀವರಾಹಪುರಾಣದಲ್ಲಿ ಮೊದಲನೆಯ ಭಾಗದ

ವಿಷಯಾನುಕ್ರಮಣಿಕೆ

ಪುಟಸಂಖ್ಯೆ

ಮೊದಲನೆಯ ಅಧ್ಯಾಯ.

ಮಂಗಳಾಚರಣೆ. 1–2

ಸೂತಮುನಿಯ ಪ್ರಸ್ತಾವನೆ. 2

ಭೂದೇವಿಯು ಶ್ರೀವರಾಹನನ್ನು ಕುರಿತು ಮಾಡಿದ ಪ್ರಶ್ನೆ. 2–5

ಶ್ರೀವರಾಹನ ಬಾಯಮೂಲಕ ಭೂದೇವಿಗೆ ಆದ(ಆತನುದರದ) ಸಪ್ತಲೋಕದ ದರ್ಶನ. 5

ಭೂದೇವಿಯ ವರಾಹಸ್ತುತಿ. 6–8

ಎರಡನೆಯ ಅಧ್ಯಾಯ.

ಪುರಾಣ ಲಕ್ಷಣ. 9–10

ಸೃಷ್ಟಿ ವಿಚಾರ. 10–20

ಬ್ರಹ್ಮರುದ್ರಸನತ್ಕುಮಾರ ಮರೀಚ್ಯಾದಿಗಳ ಜನನ. ,,

ಯುಗ ಮಹಿಮೆ. 20–26

ಪ್ರಿಯವ್ರತನ ಕಥೆ. ,,

ಪ್ರಿಯವ್ರತ ನಾರದರ ಸಂವಾದ. ,,

ನಾರದನಿಗೆ ಆದ ವೇದಜನನಿಸಾವಿತ್ರಿಯ ದರ್ಶನ. ,,

ಶಾಪಾನುಗ್ರಹಾದಿಗಳು. ,,

ಮೂರನೆಯ ಅಧ್ಯಾಯ.

ಪ್ರಿಯವ್ರತ ನಾರದ ಸಂವಾದ—

ನಾರದನ ಪೂರ್ವಜನ್ಮ ವೃತ್ತಾಂತ. 27–29

ನಾರದನ ಬ್ರಹ್ಮಪಾರಸ್ತೋತ್ರ. 29–33

ನಾರದನ ನಾರಾಯಣ ದರ್ಶನ. 33

ನಾರದನ ವರಪ್ರಾಪ್ತಿ. 34–35

ಪುಟಸಂಖ್ಯೆ

ನಾಲ್ಕನೆಯ ಅಧ್ಯಾಯ.

ನಾರಾಯಣನ ವ್ಯಾಪಕತ್ವ.—

ನಾರಾಯಣನ ದಶಾವತಾರ. 36–37

ನಾರಾಯಣನ ಅಷ್ಟಮೂರ್ತಿಗಳು. ,,

ಪ್ರಿಯವ್ರತನ ಮುಂದಿನ ಕಥೆ. 38

ಅಶ್ವಶಿರರಾಜನ ವೃತ್ತಾಂತ. 39–45

ಅಶ್ವಶಿರನಿಗೆ ಕಪಿಲ ಜೈಗೀಷವ್ಯರು ನಾರಾಯಣನು ಸರ್ವಾಂತರ್ಯಾಮಿಯೆಂದು ತೋರಿಸಿದುದು. ,,

ಐದನೆಯ ಅಧ್ಯಾಯ.

ಕರ್ಮ ಜನ್ಯ ಮೋಕ್ಷವಿಚಾರ—

ಅಶ್ವಶಿರ ಕಪಿಲರ ಸಂವಾದ. 46–49

ರೈಭ್ಯೋಪಾಖ್ಯಾನ. ,,

ರೈಭ್ಯ ವಸು ಬೃಹಸ್ಪತಿಗಳ ಸಂವಾದ. ,,

ಬೃಹಸ್ಪತಿಯು(ರೈಭ್ಯನಿಗೆ)ಮಾಡುವ ಕರ್ಮವನ್ನೆಲ್ಲ ನಾರಾಯಣನಿಗೆ ಅರ್ಪಿಸಬೇಕೆಂದು ಉದಾಹರಣೆಗಾಗಿ ಹೇಳಿದ ಸಂಯಮುನನೆಂಬ ಬ್ರಾಹ್ಮಣನ ಮತ್ತು (ಮುಕ್ತನಾದ) ನಿಷ್ಠುರಕನೆಂಬ ಬೇಡನ ಸಂವಾದ 49–54

ಅಶ್ವಶಿರನ ಯಜ್ಞಮೂರ್ತಿಸ್ತುತಿ, ಮುಕ್ತಿ. 56–59

ಆರನೆಯ ಅಧ್ಯಾಯ.

ವಸುರಾಜರ್ಷಿಯ ಧರ್ಮಾಸಕ್ತಿ. 61

ವಸುರಾಜರ್ಷಿಯ ಪುಂಡರೀಕಾಕ್ಷಪಾರಸ್ತೋತ್ರ. 62–63

ವಸುರಾಜನದೇಹದಿಂದುದಿಸಿದ ಧರ್ಮವ್ಯಾಧನು ಹೇಳಿದ ಜನ್ಮಾಂತರದ ಕಥೆ. 63–67

ಬೇಡನಿಗೆ ವಸುರಾಜನ ವರದಾನ, ವಸುವಿನ ಮುಕ್ತಿ. 68–69

ಏಳನೆಯ ಅಧ್ಯಾಯ.

ರೈಭ್ಯ ಸನತ್ಕುಮಾರರ ಸಂವಾದ. 70–76

ಪುಟಸಂಖ್ಯೆ

ವಿಶಾಲ ರಾಜನ ಪಿತೃದರ್ಶನ ವಿಚಾರ. 70–76

ಗಯಾಪಿಂಡಪ್ರದಾನ ಮಹಿಮೆ. ,,

ರೈಭ್ಯನ ಗದಾಧರಸ್ತೋತ್ರ. 77–80

ರೈಭ್ಯನ ಮುಕ್ತಿ. 81

ಎಂಟನೆಯ ಅಧ್ಯಾಯ.

ವಸುರಾಜನ ದೇಹದಿಂದುದಿಸಿದ ಧರ್ಮವ್ಯಾಧನ ಕಥೆ.—

ಅವನ ಧರ್ಮಕರ್ಮಾಸಕ್ತಿ, ಜೀವನಕ್ರಮ. 83–84

ಅವನು ಮತಂಗಋಷಿಪುತ್ರನಿಗೆ ಕನ್ಯಾದಾನ ಮಾಡಿದುದು. 85–86

ಅವನು ಮತಂಗಮುನಿಗೆ ಗೋದುವೆ, ಬತ್ತ ಮೊದಲಾದುವೂ ಪ್ರಾಣಿಗಳೆಂಬುದನ್ನೂ, ಪಂಚಮಹಾಯಜ್ಞಗಳನ್ನೂ ತಿಳಿಸಿದುದು. 87–88

ಅವನು ಪುರುಷೋತ್ತಮತೀರ್ಥದಲ್ಲಿ ತಪೋನಿರತನಾದುದು. 92–94

ಅವನ ಪುರುಷೋತ್ತಮ ಸ್ತೋತ್ರ. ,,

ಅವನಿಗೆ ದೇವನು ಪ್ರತ್ಯಕ್ಷನಾಗಿ ವರವನ್ನಿತ್ತುದು. 95–96

ಒಂಬತ್ತನೆಯ ಅಧ್ಯಾಯ.

ಆದಿಕೃತಯುಗ ವೃತ್ತಾಂತ—

ಭೂರಾದಿಲೋಕಗಳ ಮತ್ತು ವೇದಶಾಸ್ತ್ರಗಳ ಉತ್ಪತ್ತಿ. 97–99

ಚಂದ್ರಸೂರ್ಯಾದಿಗಳ ಉತ್ಪತ್ತಿ. 99-100

ಚಾತುರ್ವರ್ಣ್ಯಸೃಷ್ಟಿ. 100

ನಾನಾವಿಧಸೃಷ್ಟಿಯಿಂದ ಭೂರಾದಿಲೋಕಪೂರಣ. 100-101

ಮತ್ಸ್ಯಾವತಾರ. 102

ದೇವಾದಿಗಳು ಮಾಡಿದ ಹರಿಸ್ತುತಿ. 103-104

ವೇದೋದ್ಧರಣ. 104–105

ಪುಟಸಂಖ್ಯೆ

ಹತ್ತನೆಯ ಅಧ್ಯಾಯ.

ಸೃಷ್ಟಿವರ್ಣನೆ. 106

ಭಜಿಸಿದ ದೇವತೆಗಳಿಗೆ ವಿರಾಡ್ರೂಪದರ್ಶನ, ವರದಾನ. 106–109

ಅತ್ರೇಯಮುನಿಯು ಇಂದ್ರನಿಗೆ ಶಾಪವನ್ನೂ ಸುಪ್ರತೀಕರಾಜನಿಗೆ (ದುರ್ಜಯನೆಂಬ) ಪುತ್ರವರವನ್ನೂ ಕೊಟ್ಟುದು. 110-111

ದುರ್ಜಯಚರಿತೆ—

ದುರ್ಜಯನು ಭಾರತಾದಿ ವರ್ಷಗಳೆಲ್ಲವನ್ನೂ ಜಯಿಸಿ, ದೇವೇಂದ್ರನನ್ನು ಮನುಷ್ಯಲೋಕಕ್ಕೆ ಓಡಿಸಿದುದು. 112-114

ದುರ್ಜಯನು ವಿದ್ಯುತ್ಸುವಿದ್ಯುತ್ತುಗಳೆಂಬ ಮುನಿಗಳಿಗೆ ಸ್ವರ್ಗಾದಿಲೋಕಪಾಲಕತ್ವವನ್ನು ಕೊಟ್ಟುದು. 115-116

ಸ್ವಾಯಂಭುವ ಮನುವಿನ ಪುತ್ರರಾದ ಹೇತೃಪ್ರಹೇತೃಗಳ ಕಥೆ. ದುರ್ಜಯನಿಗೆ ಅವರ ಪುತ್ರಿಯರ ವಿವಾಹ. 116-121

ಬೇಟೆಗಾಗಿ ವನಕ್ಕೆ ಬಂದ ದುರ್ಜಯನು ಗೌರಮುಖನೆಂಬ ಮುನಿಯನ್ನು ಸಂದರ್ಶಿಸಿದುದು. 122–123

ಹನ್ನೊಂದನೆಯ ಅಧ್ಯಾಯ.

ಮತ್ತೆ ದುರ್ಜಯಚರಿತ್ರೆ—

ಗೌರಮುಖಮುನಿಯು, ವಿಷ್ಣುವಿನಿಂದ ದಿವ್ಯಮಣಿಯನ್ನು ಪಡೆದು, ಅದರ ಪ್ರಭಾವದಿಂದ ಅಕ್ಷೌಹಿಣೀಸೈನ್ಯಸಮೇತನಾದ ದುರ್ಜಯನಿಗೆ ಅತಿಶಯವಾದ ಆತಿಥ್ಯವನ್ನು ಮಾಡಿದುದು. ಆಶ್ರಮದ ರಾತ್ರಿಯ ವರ್ಣನೆ. 124–139

ಋಷಿಯ ದಿವ್ಯಮಣಿಯ ಮಹಿಮೆಯನ್ನರಿತು, ಅದನ್ನು ಅಪಹರಿಸಲು ಬಯಸಿದ ದುರ್ಜಯನಿಗೂ, ಮಣಿಯಿಂದುದಿಸಿದ ಸುಪ್ರಭಾದಿಗಳಾದ ಹದಿನೈದುಜನ ಮಹಾವೀರರಿಗೂ ನಡೆದ ಘೋರಯುದ್ಧ. 140–146

ಗೌರಮುಖನಿಂದ ಸ್ಮೃತನಾದ ಹರಿಯು ತನ್ನ ಚಕ್ರದಿಂದ ದುರ್ಜಯಾದಿಗಳನ್ನು ನಿಮಿಷಮಾತ್ರದಲ್ಲಿ ಸಂಹರಿಸಿ, ಆ ವನಕ್ಕೆ ನೈಮಿಷಾರಣ್ಯವೆಂಬ ಹೆಸರಿತ್ತುದು. 147–149

ಪುಟಸಂಖ್ಯೆ

ಹನ್ನೆರಡನೆಯ ಅಧ್ಯಾಯ.

ದುರ್ಜಯನ ಮರಣವಾರ್ತೆಯನ್ನು ಕೇಳಿದ ಸುಪ್ರತೀಕ ರಾಜನು, ದುಃಖಿಸಿ, ಬಳಿಕ ತತ್ವಬುದ್ಧಿಯಿಂದ ಚಿತ್ರಕೂಟ ಪರ್ವತಕ್ಕೆ ಹೋಗಿ, ಶ್ರೀರಾಮನನ್ನು ಸ್ತುತಿಸಿ, ಅವನಲ್ಲಿ ಐಕ್ಯನಾದುದು. 150–156

ಹದಿಮೂರನೆಯ ಅಧ್ಯಾಯ.

ವಿಷ್ಣುಕಾರ್ಯದಿಂದ ಆಶ್ಚರ್ಯಪಟ್ಟ ಗೌರಮುಖನು, ಅವನನ್ನು ಚೆನ್ನಾಗಿ ಅರಾಧಿಸಲು ಪ್ರಭಾಸವೆಂಬ ಸೋಮತೀರ್ಥಕ್ಕೆ ಹೋದುದು. 157

ಗೌರಮುಖನೆಡೆಗೆ ಮಾರ್ಕಂಡೇಯಮುನಿಯ ಆಗಮನ. 158

ಆತನು ಗೌರಮುಖನಿಗೆ ಹೇಳಿದ ಪಿತೃಸೃಷ್ಟಿ. 159-163

ಆತನು ಗೌರಮುಖನಿಗೆ ಹೇಳಿದ ಶ್ರಾದ್ಧಕಾಲ. 163-168

ಆತನು ಗೌರಮುಖನಿಗೆ ಹೇಳಿದ ಪಿತೃಗೀತೆ. 168–170

ಹದಿನಾಲ್ಕನೆಯ ಅಧ್ಯಾಯ.

ಶ್ರಾದ್ಧದಲ್ಲಿ ನಿಮಂತ್ರಣಕ್ಕೆ ಯೋಗ್ಯಾಯೋಗ್ಯರ ವಿಚಾರ. 171–172

ಶ್ರಾದ್ಧದಲ್ಲಿ ನಿಮಂತ್ರಣಕ್ಕೆ ಹೇಳುವ ಮತ್ತು ಬಂದವರನ್ನು ಆದರಿಸುವ ಕ್ರಮ. 173

ಶ್ರಾದ್ಧದಲ್ಲಿ ನಿಮಂತ್ರಣಕ್ಕೆ ಬೇಕಾದ ಬ್ರಾಹ್ಮಣರ ಸಂಖ್ಯಾದಿ ವಿಚಾರ. 173

ಶ್ರಾದ್ಧಕ್ರಮ. 173-183

ಹದಿನೈದನೆಯ ಅಧ್ಯಾಯ.

ಗೌರಮುಖನ ಹಿಂದಿನ ಜನ್ಮಗಳ ಸ್ಮರಣೆ. 184-185

ಆತನು ಪಿತೃಗಳನ್ನು ಪೂಜಿಸಿದುದು. 185

ಆತನು ಹರಿಯನ್ನು ದಶಾವತಾರ ಸ್ತೋತ್ರದಿಂದ ಸ್ತುತಿಸಿ ಅವನಲ್ಲಿ ಐಕ್ಯನಾದುದು. 186-190

ಪುಟಸಂಖ್ಯೆ

ಹದಿನಾರನೆಯ ಅಧ್ಯಾಯ.

ದುರ್ವಾಸಶಾಪದಿಂದ ಪದಚ್ಯುತನಾದ ಇಂದ್ರನು ಕಾಶಿಯಲ್ಲಿ ಬಂದು ನೆಲಸಿದುದು. 191-192

ದುರ್ಜಯನ ಮರಣವನ್ನು ಕೇಳಿ, ವಿದ್ಯುತ್ಸುವಿದ್ಯುತ್ತುಗಳು ದೇವತೆಗಳಮೇಲೆ ಯುದ್ಧಕ್ಕೆ ಪ್ರಯತ್ನಿಸಿದುದು. 192-193

ಅವರನ್ನು ಜಯಿಸುವ ಶಕ್ತಿಯನ್ನು ಪಡೆಯಲು ದೇವತೆಗಳು ಬೃಹಸ್ಪತಿಯ ಉಪದೇಶದಂತೆ ಗೋಮೇಧ ಯಜ್ಞಮಾಡಲು ನಿಶ್ಚಯಿಸಿ, ಯಜ್ಞಪಶುಗಳನ್ನು ಸಂಚಾರಕ್ಕೆ ಬಿಟ್ಟು, ಸರಮೆಯೆಂಬ ನಾಯನ್ನು ರಕ್ಷಣೆಗಾಗಿ ಕಳುಹಿಸಿದುದು. 193

ರಾಕ್ಷಸರು ಆ ಹಸುಗಳನ್ನು ಅಪಹರಿಸಿ, ಸರಮೆಗೆ ಹಾಲನ್ನು ಲಂಚಕೊಟ್ಟುದು. 194-195

ಹಸುಗಳನ್ನು ಕಾಣೆನೆಂದು ಸುಳ್ಳುಹೇಳಿದ ಸರಮೆಯು ಇಂದ್ರನಿಂದ ಒದೆಯಿಸಿಕೊಂಡು ಹಾಲನ್ನು ಕಕ್ಕುತ್ತಾ ಹೋಗಿ ಹಸುಗಳನ್ನು ತೋರಿಸಿದುದು. 195–197

ದೇವತೆಗಳು ಯಜ್ಞದಿಂದ ಶಕ್ತಿಪಡೆದು ಶತ್ರುಗಳನ್ನು ಜಯಿಸಿ ಮತ್ತೆ ಸ್ವರ್ಗಾಧಿಪತ್ಯವನ್ನು ಪಡೆದುದು. 197-198

ಸರಮೋಪಾಖ್ಯಾನ ಶ್ರವಣಫಲ. 198-199

ಹದಿನೇಳನೆಯ ಅಧ್ಯಾಯ.

ಮಹಾತಪಮುನಿಯ ಮತ್ತು ಪ್ರಜಾಪಾಲರಾಜನ ಚರಿತ್ರೆ—

ಮಣಿಜನಾದ ಸುಪ್ರಭನು ಶ್ರುತಕೀರ್ತಿಮಹಾರಾಜನಿಗೆ ಪ್ರಜಾಪಾಲನೆಂಬ ಹೆಸರಿನಿಂದ ಪುತ್ರನಾಗಿ ಉದಿಸಿ, ಮಹಾತಪಮುನಿಯ ಆಶ್ರಮಕ್ಕೆ ಹೋದುದು. 200-201

ಮಹಾತಪನ ಆಶ್ರಮದ ವರ್ಣನೆ. 202-203

ಮಹಾತಪನ ಸಂದರ್ಶನ. ಅವನಿಂದ ಮುಕ್ತಿಮಾರ್ಗ ಶ್ರವಣ. 204-205

ಮುಕ್ತಿಯನ್ನು ಬಯಸುವವರು ವಿಷ್ಣುವನ್ನು ಒಲಿಸಲು ಹೇಗೆ ಪೂಜಿಸಬೇಕೆಂದು ಪ್ರಶ್ನಿಸಿದ ಪ್ರಜಾಪಾಲನಿಗೆ,

ಪುಟಸಂಖ್ಯೆ

ಮಹಾತಪಮುನಿಯು ಬ್ರಹ್ಮಾದಿ ಸಕಲ ದೇವತೆಗಳೂ ವಿಷ್ಣುವಿನಿಂದಲೇ ಉದಿಸಿದವರೆಂದು ಹೇಳಿದುದು. 206

ಅಗ್ನಿ, ಅಶ್ವಿನೀದೇವತೆಗಳು, ಗೌರಿ, ಗಣಪತಿ ಮೊದಲಾದವರೆಲ್ಲರೂ ಗರ್ವಿತರಾಗಿ ಸೋತು, ಮತ್ತೆ ವಿಷ್ಣುವಿಗೆ ಶರಣಾಗತರಾಗಿ ಸ್ತುತಿಸಿ ಮರೆಹೊಕ್ಕರೆಂದುದು. 207-214

ದೇವನು ಲೀಲೆಗಾಗಿ ಅವರನ್ನು ಸೃಷ್ಟಿಸಿದ್ದಾಗಿ ಹೇಳಿ ಅವರಿಗೆ ಸಾಕಾರ ನಿರಾಕಾರವೆಂಬ ಎರಡೆರಡು ರೂಪಗಳನ್ನು ಕೊಟ್ಟನೆಂಬುದು. 214-217

ಹದಿನೆಂಟನೆಯ ಅಧ್ಯಾಯ.

ಅಗ್ನಿ, ಗಣಪತಿ ಮೊದಲಾದ ದೇವತೆಗಳ ಸೃಷ್ಟಿ. ತಿಥಿ, ಆಹಾರ ಮೊದಲಾವುಗಳ ವಿಚಾರವಾಗಿ ಪ್ರಜಾಪಾಲನ ಪ್ರಶ್ನೆ. 218-219

ಮಹಾತಪನು ಹೇಳಿದ ಪಂಚಮಹಾಭೂತೋತ್ಪತ್ತಿ ಕ್ರಮ. 219-221

ಅಗ್ನಿಯ ಉತ್ಪತ್ತಿ, ಹೆಸರುಗಳು, ಅವನಿಗೆ ಬ್ರಹ್ಮನ ವರ. 220-224

ಹತ್ತೊಂಬತ್ತನೆಯ ಅಧ್ಯಾಯ.

ಅಗ್ನಿ ಪ್ರಾಶಸ್ತ್ಯ. 225-226

ಅಗ್ನಿಯ(ಲ್ಲಿ)ಹೋಮದಿಂದ ಸರ್ವದೇವಪಿತ್ರಾದಿಗಳ ತೃಪ್ತಿ ವಿಚಾರ. 226

ಅಗ್ನಿತಿಥಿಯಾದ ಪಾಡ್ಯದ ಉಪವಾಸಾದಿಗಳ ಫಲ. 227

ಇಪ್ಪತ್ತನೆಯ ಅಧ್ಯಾಯ.

ಸೂರ್ಯೋತ್ಪತ್ತಿ. 228-229

ಸೂರ್ಯ ಸಂಜ್ಞಾದೇವಿಯರ ವಿವಾಹ. ,,

ಅವರಿಗೆ ಯಮ ಯಮುನೆಯರ ಜನನ. ,,

ಸಂಜ್ಞಾದೇವಿಯು ಛಾಯಾದೇವಿಯನ್ನು ತನಗೆ ಬದಲಾಗಿ ನಿಲ್ಲಿಸಿ ತಾನು ಹೆಣ್ಣುಕುದುರೆಯಾಗಿ ಹೊರಟುಹೋದುದು. ,,

ಸೂರ್ಯ ಛಾಯೆಯರಿಂದ ಶನಿ ತಪತಿಗಳ ಉತ್ಪತ್ತಿ. 230

ಯಮನಿಗೆ ಛಾಯೆಯ ಶಾಪ, ಸೂರ್ಯನ ವರ. 231

	ಪುಟಸಂಖ್ಯೆ
ಅಶ್ವಿನೀ ದೇವತೆಗಳ ಉತ್ಪತ್ತಿ(ಸೂರ್ಯಸಂಜ್ಞೆಯರಿಂದ).	232
ಅಶ್ವಿನೀ ದೇವತೆಗಳು ನಾರಾಯಣನನ್ನು ಒಲಿಸಿದುದು.	233
ಅಶ್ವಿನೀದೇವತೆಗಳು ಮಾಡಿದ ಬ್ರಹ್ಮಪಾರಸ್ತೋತ್ರ.	234–235
ಅಶ್ವಿನೀದೇವತೆಗಳು ಪಡೆದ ಸೌಂದರ್ಯಾದಿ ವರಗಳು.	236
ಅಶ್ವಿನೀದೇವತೆಗಳ ಜನ್ಮ ಶ್ರವಣದ ಮತ್ತು ಅವರ ತಿಥಿಯಾದ ಬಿದಿಗೆಯ ವ್ರತದ ಫಲ.	236–237

ಇಪ್ಪತ್ತೊಂದನೆಯ ಅಧ್ಯಾಯ.

ಗೌರೀರುದ್ರರ ಸೃಷ್ಟಿ, ವಿವಾಹ.	238–239
ಪ್ರಜಾಸೃಷ್ಟಿಶಕ್ತಿಯನ್ನು ಪಡೆಯಲು ರುದ್ರನು ನೀರಿನಲ್ಲಿ ಮುಳುಗಿದುದು.	239
ಬಳಿಕ ದಕ್ಷಬ್ರಹ್ಮನಿಂದ ದೇವಾದಿ ಪ್ರಜೆಗಳ ಸೃಷ್ಟಿ.	240
ಗೌರಿಯು ದಕ್ಷಬ್ರಹ್ಮನಿಗೆ ಪುತ್ರಿಯಾದುದು. ದಕ್ಷಬ್ರಹ್ಮನ ಯಜ್ಞ.	240–242
ನೀರಿನಿಂದೆದ್ದ ರುದ್ರನು ಸೃಷ್ಟಿಯು ದಕ್ಷಬ್ರಹ್ಮನಿಂದಾದುದಕ್ಕಾಗಿ ಕೋಪಗೊಂಡು ದಕ್ಷಯಜ್ಞವನ್ನು ಧ್ವಂಸ ಮಾಡಿದುದು.	243-247
ರುದ್ರಗಣ ದೇವಾದಿಗಳ ಯುದ್ಧ.	,,
ಹರಿಹರರ ಮತ್ತು ನಾರಾಯಣಾಸ್ತ್ರ ಪಾಶುಪತಾಸ್ತ್ರಗಳ ದೀರ್ಘಯುದ್ಧ	248–249
ಬ್ರಹ್ಮನು ಬಂದು ಹರಿಹರರಿಗೂ ಅವರ ಅಸ್ತ್ರಗಳಿಗೂ ಪರಸ್ಪರ ಸಮಾಧಾನವನ್ನುಂಟುಮಾಡಿದುದು.	250
ರುದ್ರನಿಗೆ ಯಜ್ಞದಲ್ಲಿ ಭಾಗವು ಸಲ್ಲುವಂತೆಯೂ, ದೇವತೆಗಳೆಲ್ಲರೂ ರುದ್ರನನ್ನು ಸ್ತುತಿಸುವಂತೆಯೂ, ರುದ್ರನು ದಕ್ಷಯಜ್ಞವು ಪೂರ್ತಿಯಾಗುವಂತೆ ಅನುಗ್ರಹಿಸಿ ಎಲ್ಲರಿಗೂ ಸುಖವನ್ನುಂಟು ಮಾಡುವಂತೆಯೂ ಮಾಡಿದುದು.	,,
ದೇವತೆಗಳ ರುದ್ರಸ್ತುತಿ.	251–252
ದಕ್ಷಾದಿದೇವತೆಗಳಿಗೆ ರುದ್ರನ ವರದಾನ, ರುದ್ರನ ಪಶುಪತಿತ್ವ.	254

ಪುಟಸಂಖ್ಯೆ

ಬ್ರಹ್ಮನ ಮಾತಿನಂತೆ ದಾಕ್ಷಾಯಿಣಿ(ಗೌರಿ)ಯನ್ನು ಮತ್ತೆ ರುದ್ರನಿಗೆ ಒಪ್ಪಿಸಿದುದು. 255–256

ಗೌರೀ ರುದ್ರರ ಕೈಲಾಸಗಮನ. ಬ್ರಹ್ಮಾದಿಗಳ ಸ್ವಸ್ಥಾನ ಪ್ರಯಾಣ 255–256

ಇಪ್ಪತ್ತೆರಡನೆಯ ಅಧ್ಯಾಯ.

ಪಾರ್ವತಿಯ ವಿವಾಹ ವಿಚಾರ—

ದಾಕ್ಷಾಯಣಿಯು ತಪಸ್ಸಿನಿಂದ ದೇಹವನ್ನು ತ್ಯಜಿಸಿ, ಪಾರ್ವತಿಯಾಗಿ ಜನಿಸಿ, ಮತ್ತೆ ಶಿವನನ್ನೇ ಪತಿಯಾಗಿ ಪಡೆಯಲು ಅವನನ್ನು ಕುರಿತು ತಪಸ್ಸನ್ನಾಚರಿಸಿದುದು. 257–258

ಮಹೇಶ್ವರನು ವೃದ್ಧಬ್ರಾಹ್ಮಣ ವೇಷದಿಂದ ಅವಳ ಧರ್ಮವನ್ನು ಪರೀಕ್ಷಿಸಿದುದು. ಪಾಣಿಗ್ರಹಣ. 259–261

ಸ್ವಸ್ವರೂಪವನ್ನು ಧರಿಸಿದ ಶಿವನಿಗೂ ಪಾರ್ವತಿಗೂ ಸಲ್ಲಾಪ. 261–262

ಪಾರ್ವತಿಯು ತಂದೆಗೆ ತನ್ನ ವಿವಾಹ ವಿಚಾರವನ್ನು ತಿಳಿಸಿದುದು. 262–264

ಹಿಮವಂತನು ಬ್ರಹ್ಮನ ಅನುಮತಿಯಂತೆ ಪಾರ್ವತಿಯನ್ನು ಈಶ್ವರನಿಗೆ ಕೊಟ್ಟು, ಅತಿವೈಭವದಿಂದ ವಿವಾಹವನ್ನು ಮಾಡಿದುದು. 264–265

ಪಾರ್ವತಿಗೆ ಬ್ರಹ್ಮನ ಅಭಿನಂದನ. 266

ಪಾರ್ವತಿಗೆ ವಿವಾಹವಾದ ತದಿಗೆಯ ವ್ರತಾದಿಗಳ ಫಲ. 267–268

ಇಪ್ಪತ್ತಮೂರನೆಯ ಅಧ್ಯಾಯ.

ಗಣಪತಿಯ ವಿಚಾರ—

ದೇವಾದಿಗಳು ಕೈಲಾಸಕ್ಕೆ ಹೋಗಿ ದುಷ್ಕಾರ್ಯಕ್ಕೆ ವಿಘ್ನಕಾರಿಯನ್ನಾರನ್ನಾದರೂ ಸೃಷ್ಟಿಸಬೇಕೆಂದು ರುದ್ರನನ್ನು ಪ್ರಾರ್ಥಿಸಿದುದು. 269–270

ಪುಟಸಂಖ್ಯೆ

ಪಾರ್ವತಿಯು ಮುಖವನ್ನು ನೋಡುತ್ತಿದ್ದ ರುದ್ರನ ನಗುವಿನಿಂದ ಅತಿರೂಪತೇಜೋವಂತನಾದ ಪುತ್ರನೊಬ್ಬನು ಉದಿಸಿದುದು. 271–272

ಲೋಕಸಮ್ಮೋಹಕನಾದ ಅವನನ್ನು ಪಾರ್ವತಿಯು ಎವೆಯಿಕ್ಕದೆ ಪ್ರೀತಿಯಿಂದ ನೋಡುತ್ತಿರಲು, ಆ ಕುಮಾರನ ಸೌಂದರ್ಯವೇ ಅದಕ್ಕೆ ಕಾರಣವೆಂದರಿತು, ಉಗ್ರಕೋಪದಿಂದ ಅವನನ್ನು ಗಜಮುಖನೂ ಲಂಬೋದರನೂ ಆಗೆಂದು ಶಪಿಸಿದುದು. 272–273

ಕೋಪದಿಂದ ವ್ಯೈಯ್ಯೋದರಿದ ಶಿವನ(ರುದ್ರನ) ಬೆವರ ಸೀರಿನಿಂದ ಅಸಂಖ್ಯಾತರಾದ ಗಜಮುಖರುದಿಸಿ ಲೋಕವನ್ನು ಅಲ್ಲೋಲಕಲ್ಲೋಲ ಮಾಡಿದುದು. 273–274

ರುದ್ರನೂ ದೇವತೆಗಳೂ ಚಿಂತಿಸುತ್ತಿರಲು, ಬ್ರಹ್ಮನು ಅಲ್ಲಿ ಬಂದು, ರುದ್ರನ ಮುಖದಿಂದುದಿಸಿದವನು ಉಳಿದ ವಿನಾಯಕರಿಗೆ ಪ್ರಭುವಾಗಲೆಂದು ಹೇಳಿ, ರುದ್ರನು ಆತನಿಗೆ ಹಲವು ವರಗಳನ್ನು ಕೊಡುವಂತೆ ಮಾಡಿದುದು. 274–275

ರುದ್ರನು ಗಜಮುಖನಿಗೆ ಸರ್ವಕರ್ಮಗಳಲ್ಲೂ ಅಗ್ರಪೂಜೆಯೇ ಮೊದಲಾದ ಅನೇಕ ವರಗಳನ್ನು ಕೊಟ್ಟು, ಸುವರ್ಣ ಕಲಶೋದಕದಿಂದ ಅಭಿಷೇಕ ಮಾಡಿದುದು. 276

ಅಭಿಷೇಕಕಾಲದಲ್ಲಿ ದೇವತೆಗಳು ಮಾಡಿದ ವಿನಾಯಕಸ್ತುತಿ. 277

ಗಣಪತಿಯ ಜನ್ಮದಿನವಾದ ಚೌತಿಯ ವ್ರತದ ಫಲ. ,,

ಗಣಪತಿಯ ಜನ್ಮಶ್ರವಣ ಫಲ. 278

ಇಪ್ಪತ್ತನಾಲ್ಕನೆಯ ಅಧ್ಯಾಯ.

ಸರ್ಪಗಳ ವಿಚಾರ—

ಕಶ್ಯಪನಿಂದ ಕದ್ರುವಿನಲ್ಲಿ ಅನಂತವಾಸುಕ್ಯಾದಿಗಳ ಜನನ. 279–280

ಹೆಚ್ಚಿದ ನಾಗರಿಂದ ಪ್ರಪಂಚವು ಹಾಳಾಗುತ್ತಿರಲು

ಪುಟಸಂಖ್ಯೆ

ಎಲ್ಲರೂ ಬ್ರಹ್ಮನಲ್ಲಿ ಮೊರೆಯಿಟ್ಟುದು. 281–282

ವಾಸುಕಿಯೇ ಮೊದಲಾದ ನಾಗರಿಗೆ ಬ್ರಹ್ಮನ ಶಾಪ. 282–283

ನೀನೇ ವಿಷವೇಗವನ್ನುಂಟುಮಾಡಿ, ನಮ್ಮನ್ನು ಈಗ ಶಪಿಸುವುದು ಸರಿಯಲ್ಲವೆಂದು, ಕ್ಷಮೆಯನ್ನೂ ಬೇರೆಯಾದ ವಾಸಸ್ಥಳವನ್ನೂ ನಾಗರು ಬೇಡಿದುದು. 283–284

ಬ್ರಹ್ಮನು, ನಾಗರಿಗೆ ಪಾತಾಳ ವಿತಲ ಸುತಲಗಳೆಂಬ ಮೂರು ಲೋಕಗಳನ್ನು ವಾಸಕ್ಕೆ ಕೊಟ್ಟು, ಕೆಲವು ನಿಯಮಗಳನ್ನೂ ಮಾಡಿದುದು. 284–285

ನಾಗರಿಗೆ ಪ್ರಿಯತಿಥಿಯಾದ ಪಂಚಮಿಯ ವ್ರತದ ಫಲ. 286

ಇಪ್ಪತ್ತೈದನೆಯ ಅಧ್ಯಾಯ.

ಷಣ್ಮುಖ ವಿಚಾರ—

ರಾಕ್ಷಸರನ್ನು ಜಯಿಸಲು ತಕ್ಕ ಸೇನಾಪತಿಯು ಅಗತ್ಯವೆಂದು ಬ್ರಹಸ್ಪತಿಯು ಉಪದೇಶಿಸಲು, ದೇವತೆಗಳು ಬ್ರಹ್ಮನನ್ನು ಪ್ರಾರ್ಥಿಸಿದುದು. 287–289

ಬ್ರಹ್ಮನು ಎಲ್ಲರೊಡನೆ ರುದ್ರನ ಬಳಿಗೆ ಹೋದುದು. 290

ದೇವತೆಗಳು ಮಾಡಿದ ರುದ್ರಸ್ತುತಿ. 290–294

ದೇವತೆಗಳ ಪ್ರಾರ್ಥನೆಯಂತೆ, ಶಕ್ತಿಯನ್ನು ಮಥಿಸಿ ಕುಮಾರ (ಷಣ್ಮುಖ)ನನ್ನು ಸೃಷ್ಟಿಸಿದುದು. 295

ಕುಮಾರ(ಷಣ್ಮುಖ)ನಿಗೆ ರುದ್ರಾದಿಗಳ ದೇವಸೇನಾಪತಿತ್ವವೇ ಮೊದಲಾದ ವಿವಿಧ ವರದಾನ 296–297

ಕುಮಾರನಿಗೆ ಷಾಣ್ಮಾತುರ, ಕಾರ್ತಿಕೇಯ, ಪಾವಕಿ ಎಂಬ ಹೆಸರುಗಳು ಬರಲು ಕಾರಣ. 298

ಕುಮಾರಾಭಿಷೇಕ ದಿನವಾದ ಷಷ್ಠಿಯ ವ್ರತದ ಫಲ. 299

ಇಪ್ಪತ್ತಾರನೆಯ ಅಧ್ಯಾಯ.

ಆದಿತ್ಯೋತ್ಪತ್ತಿ. 300-301

ಪುಟಸಂಖ್ಯೆ

ಆತನಿಗೆ ಸೂರ್ಯ, ರವಿ ಎಂಬುದೇ ಮೊದಲಾದ ಹೆಸರುಗಳಾಗಲು ಕಾರಣ. 300-301

ದ್ವಾದಶಾದಿತ್ಯೋತ್ಪತ್ತಿ. 302

ದೇವತೆಗಳ ಆದಿತ್ಯಸ್ತುತಿ. 302-304

ಸೂರ್ಯನ ಮೂರ್ತಿಗ್ರಹಣ ದಿನವಾದ ಸಪ್ತಮಿಯ ವ್ರತದಫಲ 304

ಇಪ್ಪತ್ತೇಳನೆಯ ಅಧ್ಯಾಯ.

ಅಷ್ಟ ಮಾತೃತ್ಪತ್ತಿ, ಅಂಧಕಾಸುರ ಸಂಹಾರ—

ಅಂಧಕಾಸುರ ಪೀಡಿತರಾದ ದೇವತೆಗಳು ಬ್ರಹ್ಮನೊಡನೆ ಶಿವನ ಸನ್ನಿಧಿಗೆ ಹೋದುದು. 306-308

ಶಿವನು ಅವರನ್ನು ಸತ್ಕರಿಸುವಷ್ಟರಲ್ಲೇ ಸೇನೆಯೊಡನೆ ಅಂಧಕನು ಅಲ್ಲೇ ಬಂದು, ಶಿವಪಾರ್ವತಿಯರನ್ನು ಕೊಲ್ಲಲು ಯತ್ನಿಸಿದುದು. 308

ದೇವಸಹಿತನಾದ ರುದ್ರನಿಗೂ ಅಂಧಕನಿಗೂ ಯುದ್ಧ. ಗಜಾಸುರವಧೆ. ಶಿವನು ಗಜಚರ್ಮಾಂಬರನಾದುದು. 309-310

ನಾರಾಯಣನು ರುದ್ರನ ಸಹಾಯಕ್ಕೆ ಬಂದುದು. 310-311

ರುದ್ರನು ತ್ರಿಶೂಲದಿಂದ ಅಂಧಕನನ್ನು ಚುಚ್ಚಿ ಎತ್ತಿ ಹಿಡಿದುದು. ಅಂಧಕರಕ್ತದಿಂದ ಹಲವರು ಅಂಧಕರು ದಿಸಿದುದು. 311-312

ರುದ್ರನ ಕೋಪದ ಜ್ವಾಲೆಯಿಂದ ಯೋಗೇಶ್ವರಿಯು ದಿಸಿದುದು, ವಿಷ್ಣುಬ್ರಹ್ಮಾದಿಗಳು ಒಬ್ಬೊಬ್ಬರು ದೇವಿಯರನ್ನು ನಿರ್ಮಿಸಿದುದು. 312-313

ಅಷ್ಟಮಾತೃಗಳ ಸ್ವರೂಪ, ಅಷ್ಟಮಾತೃಗಳು ಅಂಧಕನ ರಕ್ತವನ್ನು ಇಂಗಿಸಿದುದು, ಅಂಧಕ ಮೃತಿ. 313-314

ಅಷ್ಟಮಾತೃಗಳಿಗೆ ನಿರ್ದಿಷ್ಟವಾದ ಅಷ್ಟಮಿಯ ವ್ರತದಫಲ. 315

ಪುಟಸಂಖ್ಯೆ

ಇಪ್ಪತ್ತೆಂಟನೆಯ ಅಧ್ಯಾಯ.

ದುರ್ಗಿಯ ಉತ್ಪತ್ತಿ, ವೇತ್ರಾಸುರ ಸಂಹಾರ—

ಸಿಂಧುದ್ವೀಪನೆಂಬ ರಾಜನು, ವೇತ್ರವತಿಯಲ್ಲಿ ಇಂದ್ರಶತ್ರುವಾದ ವೇತ್ರಾಸುರನೆಂಬ ಪುತ್ರನನ್ನು ಪಡೆದುದು. 316-319

ವೇತ್ರಾಸುರನು ಇಂದ್ರಾದಿದೇವತೆಗಳನ್ನು ಜಯಿಸಿದುದು. 319

ಇಂದ್ರಾದಿ ಲೋಕಪಾಲರು ಬ್ರಹ್ಮನೆಡೆಗೆ ಹೋಗಿ ಮೊರೆಯಿಟ್ಟುದು. 320-321

ಗಂಗೆಯೊಳಗೆ ತಪಸ್ಸು ಮಾಡುತ್ತಿದ್ದ ಬ್ರಹ್ಮನು ಚಿಂತಿಸಲು ಅಷ್ಟಭುಜಳೂ, ಸಿಂಹವಾಹನೆಯೂ ಆದ ದುರ್ಗಾದೇವಿಯು ಗಂಗೆಯ ನೀರಿನಿಂದೆದ್ದು ಅವನೆದುರಿಗೆ ನಿಂತುದು. 321

ದುರ್ಗಾದೇವಿಯು ವೇತ್ರಾಸುರನನ್ನು ಸಂಹರಿಸಿದುದು. 322

ದೇವತೆಗಳ ದುರ್ಗಿಯ ಸ್ತುತಿ. 322-324

ಬ್ರಹ್ಮನ ವರದಾನ. ಮುಂದೆ ದುರ್ಗಿಯಿಂದ ಮಹಿಷಾಸುರ ವಧೆಯಾಗಬೇಕೆಂದುದು. ದೇವಿಯ ಹಿಮಾಲಯಗಮನ.

ನವಮಿ ಅಥವಾ ನಂದಾತಿಥಿಯ ವ್ರತದಫಲ. 326

ಇಪ್ಪತೊಂಬತ್ತನೆಯ ಅಧ್ಯಾಯ.

ದಿಗ್ದೇವಿಯರ ಉತ್ಪತ್ತಿ. 827–328

ಅವರು ಬ್ರಹ್ಮನಲ್ಲಿ ಪತಿಗಳನ್ನೂ ವಾಸಸ್ಥಳವನ್ನೂ ಬೇಡಿದುದು. 328

ಬ್ರಹ್ಮನು ಲೋಕಪಾಲಕರನ್ನು ಸೃಷ್ಟಿಸಿ, ಅವರಿಗೆ ಕೊಟ್ಟು ವಿವಾಹಮಾಡಿದುದು. 329

ದಶಮಿತಿಥಿಯನ್ನು ಅವರಿಗೆ ಅನುಗ್ರಹಿಸಿದುದು. ದಶಮಿವ್ರತದಫಲ, ದಿಗ್ಜನ್ಮಶ್ರವಣಫಲ. 330

ಮೂವತ್ತನೆಯ ಅಧ್ಯಾಯ.

ಕುಬೇರೋತ್ಪತ್ತಿ, ಬ್ರಹ್ಮನು ಅವನಿಗೆ ಏಕಾದಶೀತಿಥ್ಯಾದಿ ವರಗಳನ್ನು ಕೊಟ್ಟುದು. ಏಕಾದಶೀ ವ್ರತದಫಲ. 331-333

ಪುಟಸಂಖ್ಯೆ

ಮೂವತ್ತೊಂದನೆಯ ಅಧ್ಯಾಯ.

ವಿಷ್ಣುವಿನ ಅವತಾರ. 334-335

ವಿಷ್ಣುವಿನ ನಾಮಕರಣ. 336

ವಿಷ್ಣುವಿಗೆ ಪ್ರಜಾಪಾಲನಾಧಿಕಾರ. ನಾನಾಯುಧಾದಿ ವರದಾನ. 336-338

ವಿಷ್ಣುತಿಥಿಯಾದ ದ್ವಾದಶೀವ್ರತಫಲ. ವಿಷ್ಣುವಿಚಾರ ಶ್ರವಣಫಲ. 338-339

ಮೂವತ್ತೆರಡನೆಯ ಅಧ್ಯಾಯ.

ಧರ್ಮ ವಿಚಾರ—

ಪರಬ್ರಹ್ಮನ ದೇಹದಿಂದ ಧರ್ಮಪುರುಷನುದಿಸಿದುದು, ಅವನ ಸ್ವರೂಪ. 340-342

ಚಂದ್ರನ ಪೀಡೆಯಿಂದ ಧರ್ಮವು ವನಗತವಾದುದು. 342

ಧರ್ಮನಾಶದಿಂದ ಲೋಕದಲ್ಲುಂಟಾದ ಅನರ್ಥ. 342-343

ಬ್ರಹ್ಮನು ದೇವಾಸುರರೊಡನೆ ಧರ್ಮನಿದ್ದೆಡೆಗೆ ಹೋಗಿ, ಅವರಿಂದ ಧರ್ಮನನ್ನು ಸ್ತೋತ್ರಮಾಡಿಸಿದುದು. 344

ಧರ್ಮಸ್ತುತಿ. 345-346

ಒಲಿದ ಧರ್ಮ(ವೃಷ)ನ ಶಾಂತದೃಷ್ಟಿಗೊಳಗಾದ ಅವರೆಲ್ಲರೂ ಜ್ಞಾನಿಗಳಾಗಿ ಸದ್ಧರ್ಮಯುತರಾದುದು. 346

ಬ್ರಹ್ಮನು ತ್ರಯೋದಶೀತಿಥಿಯೇ ಮೊದಲಾದುವನ್ನು ಧರ್ಮನಿಗೆ ಅನುಗ್ರಹಿಸಿದುದು. 347

ಧರ್ಮೋತ್ಪತ್ತಿ ಶ್ರವಣದ ಮತ್ತು ತ್ರಯೋದಶೀ ವ್ರತದಫಲ. 348

ಮೂವತ್ತಮೂರನೆಯ ಅಧ್ಯಾಯ.

ಮತ್ತೆ ರುದ್ರನ ವಿಚಾರ—

ರುದ್ರೋತ್ಪತ್ತಿ, ರುದ್ರನೆಂಬ ಹೆಸರಿಗೆ ಕಾರಣ. 349-350

ದಕ್ಷಾದಿನವಪ್ರಜೇಶ್ವರ ಸೃಷ್ಟಿ. 350

ರುದ್ರಕೋಪ, ಪಿಶಾಚಾದ್ಯುತ್ಪತ್ತಿ. 351

ದಕ್ಷಯಜ್ಞಭಂಗ, ದೇವತೆಗಳಿಗೆ ಪಶುತ್ವ. 352

	ಪುಟಸಂಖ್ಯೆ
ಬ್ರಹ್ಮಾಗಮನ, ದೇವತೆಗಳ ರುದ್ರಸ್ತುತಿ.	353-356
ರುದ್ರತುಷ್ಟಿ, ಕ್ಷಮೆ.	356
ಚತುರ್ದಶಿಯು ರುದ್ರನಿಗೆ ಮೀಸಲಾದುದು.	357
ಚತುರ್ದಶೀವ್ರತಫಲ.	,,
ರುದ್ರಕಥಾಶ್ರವಣ ಫಲ.	358

ಮೂವತ್ತನಾಲ್ಕನೆಯ ಅಧ್ಯಾಯ.

ಪಿತೃಸೃಷ್ಟಿ, ಅವರಿಗೆ ನಾಮಸ್ಥಾನವೃತ್ತಿಗಳ ಕಲ್ಪನೆ.	359-361
ಅವರ ತಿಥಿಯಾದ ಅಮಾವಾಸ್ಯೆಯ ತರ್ಪಣಾದಿಗಳಫಲ.	361

ಮೂವತ್ತೈದನೆಯ ಅಧ್ಯಾಯ.

ಸೋಮೋತ್ಪತ್ತಿ ಸ್ಥಿತಿರಹಸ್ಯ—

ಅತ್ರಿಯಿಂದ ಸೋಮ ಜನನ.	362
ದಕ್ಷಶಾಪದಿಂದ ಚಂದ್ರಕ್ಷಯ, ಅದರಿಂದಾದ ಅನರ್ಥ.	363
ವಿಷ್ಣುವಿನ ಉಪದೇಶದಂತೆ ದೇವತೆಗಳು ಕ್ಷೀರಸಮುದ್ರವನ್ನು ಕಡೆದು ಮತ್ತೆ ಚಂದ್ರನನ್ನು ಪಡೆದುದು.	364
ಚಂದ್ರಪ್ರಭಾವ, ರುದ್ರನು ಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿದುದು, ಚಂದ್ರನಿಗೆ ಹುಣಿಮೆಯು ಮೀಸಲಾದುದು.	365
ಹುಣಿಮೆಯ ವ್ರತದ ಫಲ.	366

ಮೂವತ್ತಾರನೆಯ ಅಧ್ಯಾಯ.

ಪ್ರಾಚೀನೇತಿಹಾಸ—

ಹಿಂದೆ ವಣಿಜರಾಗಿದ್ದವರ ಮುಂದಿನ ಜನ್ಮವಿಚಾರ.	367-368
ಪ್ರಜಾಪಾಲನು ಹಿಂದಿನ ಕಥೆಗಳೆಲ್ಲವನ್ನೂ ಕೇಳಿ ತಪಸ್ಸಿಗಾಗಿ ಬೃಂದಾವನಕ್ಕೆ ಹೋದುದು.	369
ಪ್ರಜಾಪಾಲನ ಗೋವಿಂದ ಸ್ತುತಿ, ಪ್ರಜಾಪಾಲನ ಮುಕ್ತಿ.	369-373

ಪುಟಸಂಖ್ಯೆ

ಮೂವತ್ತೇಳನೆಯ ಅಧ್ಯಾಯ.

ಪ್ರಾಚೀನೇತಿಹಾಸ—

ಭಗವದ್ಭಕ್ತರ ಮಾನಸಿಕ, ಕಾಯಿಕ, ವಾಚಿಕ ವ್ರತಗಳು. 374-375

ಆರುಣಿಯೆಂಬ ತಪಸ್ವಿಯ ವೃತ್ತಾಂತ, ಆರುಣಿಯನ್ನು ಕೊಲ್ಲಲು ಬಂದ ಬೇಡನು ಅವನ ಬ್ರಹ್ಮತೇಜಸ್ಸಿನಿಂದ ಸಾಧುವಾಗಿ ಅವನಿಂದ ಉಪದೇಶವನ್ನು ಬೇಡುತ್ತ ನಿಂತು, ಆರುಣಿಯನ್ನು ಕೊಲ್ಲಲು ಬಂದ ಹುಲಿಯನ್ನು ಕೊಂದುದು. 375-378

ಪ್ರಾಣಬಿಡುವಾಗ ಆರುಣಿಯಿಂದ "ನಮೋನಾರಾಯಣಾಯ" ಎಂಬ ವಾಕ್ಯವನ್ನು ಕೇಳಿದ ಹುಲಿಯು ಪುರುಷನಾದುದು. 378

ಆ ಪುರುಷನು "ದೀರ್ಘಬಾಹುವೆಂಬ ರಾಜನಾಗಿದ್ದೆ"ನೆಂದು ತನ್ನ ಹಿಂದಿನ ಕಥೆಯನ್ನೂ ವಿಷ್ಣುಸ್ಮರಣೆಯ ಮಹಿಮೆಯನ್ನೂ ಹೇಳಿದುದು. 379-381

ಆರುಣಿಯು ಬೇಡನಿಗೆ ಧರ್ಮೋಪದೇಶಮಾಡಿ, ತಪಸ್ಸಿಗೆ ತಾನು ಬೇರೆಡೆಗೆ ಹೋದುದು. 382-384

ಮೂವತ್ತೆಂಟನೆಯ ಅಧ್ಯಾಯ.

ಪ್ರಾಚೀನೇತಿಹಾಸ—

ಆರುಣಿಯ ಉಪದೇಶವನ್ನು ಪಡೆದ ವ್ಯಾಧನ ತಪಸ್ಸು, ವ್ಯಾಧನ ಬಳಿಗೆ ದುರ್ವಾಸರ ಆಗಮನ. 385-386

ವ್ಯಾಧನು ತಪಶ್ಶಕ್ತಿಯಿಂದ ದುರ್ವಾಸರಿಗೆ ಬೇಕಾದುದೆಲ್ಲವನ್ನೂ ಸಂಪಾದಿಸಿ, ದೇವಿಕಾನದಿಯನ್ನು ಅವರ ಸಮೀಪಕ್ಕೆ ಬರಿಸಿ ಸತ್ಕರಿಸಿದುದು. 387-391

ದುರ್ವಾಸರು ವ್ಯಾಧನಿಗೆ ಬ್ರಹ್ಮವಿದ್ಯೆಯನ್ನೂ ಸತ್ಯತಪನೆಂಬ ಆದಿಋಷಿತ್ವವನ್ನೂ ಅನುಗ್ರಹಿಸಿದುದು. 391-392

ಮೂವತ್ತೊಂಬತ್ತನೆಯ ಅಧ್ಯಾಯ.

ಸತ್ಯತಪ ದುರ್ವಾಸರ ಸಂವಾದ—

ಸತ್ಯತಪ (ವ್ಯಾಧ)ನಿಗೆ ದುರ್ವಾಸರು ಶರೀರದಲ್ಲಿ ಅಧರ್ಮ, ಧರ್ಮ, ಭೋಗಗಳೆಂಬ ಮೂರು ಭೇದವನ್ನೂ, ಬ್ರಾಹ್ಮಣಾದಿ ವರ್ಣಗಳಿಗೆ ಕರ್ಮವನ್ನೂ ತಿಳಿಸಿದುದು. 393-396

ಪುಟಸಂಖ್ಯೆ

ತಪೋಯಜ್ಞಗಳನ್ನು ಮಾಡಲಾರದ ಸರ್ವವರ್ಣದವರೂ ಸುಲಭವಾಗಿ. ದೇವನನ್ನು ಪಡೆಯುವ ಮಾರ್ಗವನ್ನು ತಿಳಿಸಬೇಕೆಂದು ಸತ್ಯತಪನು ಕೇಳಿದುದು. 397

ದುರ್ವಾಸರು, ರಸಾತಲದಲ್ಲಿ ಮುಳುಗಿದ್ದ ಭೂದೇವಿಯು ಮಾಡಿದ ಅನೇಕ ವ್ರತಗಳಲ್ಲಿ ಮೊದಲನೆಯದಾದ ಮತ್ಸ್ಯ ದ್ವಾದಶೀವ್ರತವನ್ನು ಸತ್ಯತಪನಿಗೆ ತಿಳಿಸಿದುದು. ಮತ್ಸ್ಯ ದ್ವಾದಶೀವ್ರತದ ಕಾಲ, ವಿಧಾನ, ಫಲಾದಿಗಳು. 399-410

ನಲವತ್ತನೆಯ ಅಧ್ಯಾಯ.

ಕೂರ್ಮದ್ವಾದಶೀವ್ರತದ ಕಾಲ, ಕ್ರಮಫಲಾದಿಗಳ ವಿಚಾರ. 411-414

ನಲವತ್ತೊಂದನೆಯ ಅಧ್ಯಾಯ.

ವರಾಹದ್ವಾದಶೀ ವ್ರತದಕಾಲ, ಕ್ರಮ, ಫಲಾದಿಗಳು. 415-418

ವರಾಹದ್ವಾದಶೀ ವ್ರತದಿಂದ ಬ್ರಹ್ಮಹತ್ಯಾಪಾಪವನ್ನು ಕಳೆದು ಕೊಂಡು ಮುಕ್ತನಾದ ವೀರಧನ್ವಮಹಾರಾಜೋಪಾಖ್ಯಾನ. 418-423

ನಾರಾಯಣನ ಮತ್ತು ದ್ವಾದಶೀ ವ್ರತಗಳ ಮಹಿಮೆ. 423-425

ನಲವತ್ತೆರಡನೆಯ ಅಧ್ಯಾಯ.

ನರಸಿಂಹದ್ವಾದಶೀ ವ್ರತದ ಕಾಲ, ಕ್ರಮ. 426-427

ನರಸಿಂಹದ್ವಾದಶೀ ವ್ರತವನ್ನು ಮಾಡಿ, ಹರಿಯಿಂದ ಚಕ್ರವನ್ನೂ (ಕಳೆದುಕೊಂಡಿದ್ದ) ರಾಜ್ಯವನ್ನೂ ಪಡೆದ ವತ್ಸರಾಜನ ಕಥೆ. 427-429

ನಲವತ್ತಮೂರನೆಯ ಅಧ್ಯಾಯ.

ವಾಮನದ್ವಾದಶೀವ್ರತದ ಕಾಲ, ಕ್ರಮ. 430-432

ವಾಮನದ್ವಾದಶೀವ್ರತದಿಂದ ಉಗ್ರಾಶ್ವನೆಂಬ ಪುತ್ರನನ್ನು ಪಡೆದ ಹರ್ಯಶ್ವರಾಜನ ಕಥೆ, ವ್ರತಫಲ. 432-434

ನಲವತ್ತನಾಲ್ಕನೆಯ ಅಧ್ಯಾಯ.

ಪರಶುರಾಮದ್ವಾದಶೀವ್ರತದಕಾಲ, ಕ್ರಮ. 435-436

ಆ ವ್ರತವನ್ನು ಮಾಡಿ ನಳನೆಂಬ ಪುತ್ರನನ್ನು ಪಡೆದ ವೀರಸೇನ ಮಹಾರಾಜನ ಚರಿತ್ರೆ, ಪರಶುರಾಮದ್ವಾದಶೀವ್ರತಫಲ. 437-439

ಪುಟಸಂಖ್ಯೆ

ನಲವತ್ತೈದನೆಯ ಅಧ್ಯಾಯ.

ಶ್ರೀರಾಮದ್ವಾದಶೀ ವ್ರತದಕಾಲ, ಕ್ರಮ. 440-441

ಅಪುತ್ರವಂತನಾಗಿದ್ದ ದಶರಥನು ಈ ವ್ರತದಿಂದ ಶ್ರೀರಾಮಾದಿ ಪುತ್ರರನ್ನು ಪಡೆದುದು, ಈ ವ್ರತದ ಫಲ. 441-442

ನಲವತ್ತಾರನೆಯ ಅಧ್ಯಾಯ.

ಶ್ರೀಕೃಷ್ಣದ್ವಾದಶೀವ್ರತದಕಾಲ, ಕ್ರಮ. 443-444

ವಸುದೇವದೇವಕಿಯರು ಆವ್ರತವನ್ನಾಚರಿಸಿ, ಶ್ರೀಕೃಷ್ಣನನ್ನು ಪುತ್ರನನ್ನಾಗಿ ಪಡೆದುದು. 444-446

ನಲವತ್ತೇಳನೆಯ ಅಧ್ಯಾಯ.

ಬುದ್ಧದ್ವಾದಶೀ ವ್ರತದಕಾಲ, ಕ್ರಮ. 447-448

ಹಿಂದಿನ ಜನ್ಮದಲ್ಲಿ ಆ ವ್ರತವನ್ನು ಮಾಡಿದ್ದುದರಿಂದ ಆ ದ್ವಾದಶೀದೇವಿಯಿಂದ ರಕ್ಷಿತನಾದ ನೃಗರಾಜನ ಕಥೆ, ವ್ರತಫಲ. 448-452

ನಲವತ್ತೆಂಟನೆಯ ಅಧ್ಯಾಯ.

ಕಲ್ಕಿದ್ವಾದಶೀ ವ್ರತದ ಕಾಲ, ರೀತಿ. 453-454

ರಾಜ್ಯವನ್ನು ಕಳೆದುಕೊಂಡಿದ್ದ ವಿಶಾಲರಾಜನು, ನರ ಮುನಿಯ ಉಪದೇಶದಂತೆ ಕಲ್ಕಿದ್ವಾದಶೀವ್ರತವನ್ನಾಚರಿಸಿ, ಮತ್ತೆ ಚಕ್ರವರ್ತಿಯಾದ ವಿಚಾರ. 454-458

ನಲವತ್ತೊಂಬತ್ತನೆಯ ಅಧ್ಯಾಯ.

ಪದ್ಮನಾಭದ್ವಾದಶೀ ವ್ರತದಕಾಲ, ಮತ್ತು ವಿಧಿ. 459-460

ಹಿಂದೆ ಆ ವ್ರತದಲ್ಲಿ ದೀಪವನ್ನಿರಿಸಿದ್ದುದರಿಂದ ರಾಜರಾಣಿಯರಾಗಿ ಜನಿಸಿದ್ದ ಭದ್ರಾಶ್ವಕಾಂತಿಮತಿಯರನ್ನು ಅಭಿನಂದಿಸಿ ಅಗಸ್ತ್ಯಮುನಿಯು ಹಿಂದಿನ ಅವರ ಕಥೆಯನ್ನು ಹೇಳಿದುದು. 460-467

ಭದ್ರಾಶ್ವನು ಪದ್ಮನಾಭದ್ವಾದಶೀ ವ್ರತವನ್ನು ಮಾಡಿ ಉತ್ತಮ ಫಲವನ್ನು ಪಡೆದುದು. 468

ಪುಟಸಂಖ್ಯೆ

ಐವತ್ತನೆಯ ಅಧ್ಯಾಯ.

ಧರಣೀವ್ರತ (ದಾಮೋದರದ್ವಾದಶೀವ್ರತ)ದ ಕಾಲ, ಕ್ರಮ. 470-475

ಆ ವ್ರತವನ್ನಾಚರಿಸಿ ಫಲವನ್ನು ಪಡೆದವರ ವಿಚಾರ. 475-476

ವ್ರತಾಚರಣೆಯ ಮತ್ತು ಶ್ರವಣದ ಫಲ. 477

ಐವತ್ತೊಂದನೆಯ ಅಧ್ಯಾಯ.

ಸತ್ಯತಪನು ದುರ್ವಾಸರಿಂದ ವ್ರತಗಳ ವಿಚಾರವನ್ನು ಕೇಳಿ, ಹಿಮಾಲಯಕ್ಕೆ ಹೊರಟುಹೋದುದು. 478

ಅಗಸ್ತ್ಯಗೀತೆ–ಅಗಸ್ತ್ಯನು ಭದ್ರಾಶ್ವರಾಜನಿಗೆ ಪಶುಪಾಲೋಪಾಖ್ಯಾನದಿಂದ ದೇಹೇಂದ್ರಿಯಾತ್ಮಸ್ವರೂಪವನ್ನೂ ಮೋಕ್ಷಧರ್ಮವನ್ನೂ ನಿರೂಪಿಸಿದುದು. 480-485

ಐವತ್ತೆರಡನೆಯ ಅಧ್ಯಾಯ.

ಪಶುಪಾಲೋಪಾಖ್ಯಾನದ ಮುನ್ನಡೆ—ಮೋಕ್ಷಧರ್ಮನಿರೂಪಣೆ. 486-488

ಐವತ್ತಮೂರನೆಯ ಅಧ್ಯಾಯ.

ಪಶುಪಾಲೋಪಾಖ್ಯಾನದ ಮುನ್ನಡೆ–ಮೋಕ್ಷಧರ್ಮ. 489-496

ಶ್ರೀ ವರಾಹಪುರಾಣದಲ್ಲಿ ಮೊದಲನೆಯಭಾಗದ ಮುಖ್ಯ ವಿಷಯಗಳ

ವರ್ಣಾನುಕ್ರಮವಾದ ಸೂಚಿಕೆ

ವಿಷಯ	ಅಧ್ಯಾಯ	ಪುಟ
ಅಗಸ್ತ್ಯಗೀತೆ–ಪಶುಪಾಲೋಪಾಖ್ಯಾನ.	51–53	480–496
ಅಗ್ನಿಯ ಉತ್ಪತ್ತಿ, ಹೆಸರುಗಳು.	18	220
ಅಗ್ನಿ ಪ್ರಾಶಸ್ತ್ಯ.	19	225
ಅಂಧಕಾಸುರ ಸಂಹಾರ.	27	313
ಅಶ್ವಶಿರ ರಾಜ ವೃತ್ತಾಂತ.	4	39
ಅಶ್ವಶಿರ ಕಪಿಲರ ಸಂವಾವ.	5	46
ಅಶ್ವಶಿರನ ಯಜ್ಞಮೂರ್ತಿ ಸ್ತುತಿ.	5	56
ಅಶ್ವಿನಿ ದೇವತೆಗಳ ಚರಿತ್ರೆ.	20	232
ಅಷ್ಟಮಾತೃಗಳ ವಿಚಾರ.	27	306
ಆದಿತ್ಯ(ಸೂರ್ಯ)ಜನ್ಮಾದಿ ವಿಚಾರ.	26	300
ಅರುಣಿ ಮುನಿಯ ಕಥೆ.	37	375
ಇಂದ್ರನ ಪದಚ್ಯುತಿ.	10	114
ಇಂದ್ರನು ಮತ್ತೆ ಸ್ವರ್ಗಾಧಿಪತ್ಯವನ್ನು ಪಡೆದುದು.	16	197–198
ಉಮಾದೇವಿಯ ಚರಿತ್ರೆ.	22	258
ಕಪಿಲ ಜೈಗೀಷವ್ಯರ ವಿಚಾರ.	4	39
ಕಲ್ಕಿದ್ವಾದಶೀ ವ್ರತ.	48	453
ಕಾಯಿಕ ಮಾನಸಿಕ ವಾಚಿಕ ವ್ರತಗಳು.	37	374

ವಿಷಯ	ಅಧ್ಯಾಯ	ಪುಟ
ಕೂರ್ಮದ್ವಾದಶೀ ವ್ರತ.	40	411
ಗಣೇಶ ಚರಿತ್ರೆ.	23	269
ಗಯಾಪಿಂಡ ಪ್ರದಾನ ಮಹಿಮೆ.	7	74
ಗೌರಮುಖಮುನಿವೃತ್ತಾಂತ.	10	122
,,	11	124
,,	13	157
,,	15	186–190
ಗೌರೀ ರುದ್ರರ ಸೃಷ್ಟಿ, ವಿವಾಹ.	21	238
ಚಂದ್ರನ ವಿಚಾರ.	35	362
ಚಾತುರ್ವರ್ಣ್ಯ ಸೃಷ್ಟಿ.	9	100
ದಕ್ಷ–ಬ್ರಹ್ಮನ ವಿಚಾರ.	21	240
ದಕ್ಷ–ಬ್ರಹ್ಮನ ಯಜ್ಞ.	21	241
ದಾಮೋದರ ದ್ವಾದಶೀ ವ್ರತ.	50	470
ದಾಕ್ಷಾಯಣಿಯನ್ನು ರುದ್ರನಿಗೆ ಒಪ್ಪಿಸಿದುದು.	21	255
ದಿಗ್ದೇವಿಯರ ಜನನ ವಿವಾಹಾದಿ ವಿಚಾರ.	29	327
ದುರ್ಗಾದೇವಿಯ ಚರಿತ್ರೆ.	28	316
ದುರ್ಜಯಚರಿತ್ರೆ.	10–11	112–124
ಧರಣೀವ್ರತ.	50	470
ಧರ್ಮ(ವೃಷ)ಪುರುಷ ಚರಿತ್ರೆ.	32	340
ಧರ್ಮವ್ಯಾಧನ ಕಥೆ.	8	83
ನರಸಿಂಹ ದ್ವಾದಶೀ ವ್ರತ.	42	426
ನಾರದರ ಸಾವಿತ್ರಿಯ ದರ್ಶನ.	2	20

ವಿಷಯ	ಅಧ್ಯಾಯ	ಪುಟ
ನಾರದರ ಬ್ರಹ್ಮಪಾರಸ್ತೋತ್ರ.	3	29
,, ನಾರಾಯಣ ದರ್ಶನ.	3	33
ನಾರಾಯಣನ ವ್ಯಾಪಕತ್ವ.	4	
,, ದಶಾವತಾರ.	4	36
,, ಅಷ್ಟಮೂರ್ತಿಗಳು.	4	37
ನಾರಾಯಣಾಸ್ತ್ರ ಪಾಶುಪತಾಸ್ತ್ರಗಳ ಯುದ್ಧ.	21	249
ನೈಮಿಷಾರಣ್ಯವೆಂಬ ಹೆಸರಿಗೆ ಕಾರಣ.	11	148
ಪದ್ಮನಾಭ ದ್ವಾದಶೀ ವ್ರತ.	49	459
ಪರಶುರಾಮ ದ್ವಾದಶೀವ್ರತ.	44	435
ಪಶುಪಾಲೋಪಾಖ್ಯಾನ.	51-53	480–496
ಪ್ರಜಾಪಾಲರಾಜನ ಚರಿತ್ರೆ ಮತ್ತು ಪ್ರಜಾಪಾಲ ಮಹಾತಪರ ಸಂವಾದ.	17-36	200-373
ಪಾರ್ವತಿಯ ಜನನ, ವಿವಾಹ.	22	257-268
ಪಾಶುಪತಾಸ್ತ್ರ ನಾರಾಯಣಾಸ್ತ್ರಗಳ ಯುದ್ಧ.	21	249
ಪಿತೃ ಸೃಷ್ಟಿ.	13	159
ಪಿತೃ ಗೀತೆ.	13	166
ಪ್ರಿಯವ್ರತನ ಕಥೆ ಮತ್ತು ಪ್ರಿಯವ್ರತ ನಾರದರ ಸಂವಾದ.	2-4	21-38
ಪುರಾಣ ಲಕ್ಷಣ.	2	9
ಬ್ರಹ್ಮರುದ್ರ ಮರೀಚ್ಯಾದಿಗಳ ಜನನ.	2	10
ಬುದ್ಧ ದ್ವಾದಶೀ ವ್ರತ.	47	447
ಭದ್ರಾಶ್ವರಾಜಾಗಸ್ತ್ಯರ ಸಂವಾದ.	49	460

ವಿಷಯ	ಅಧ್ಯಾಯ	ಪುಟ
ಭೂದೇವಿಯ ವರಾಹಸ್ತುತಿ.	1	6
ಭೂದೇವಿಯು ವರಾಹನಲ್ಲಿ ಕೇಳಿದ ಪ್ರಶ್ನೆ.	1	2
ಭೂದೇವಿಗಾದ ವಿಶ್ವರೂಪ ದರ್ಶನ.	1	5
ಭೂರಾದಿ ಲೋಕೋತ್ಪತ್ತಿ.	9	97
ಮತ್ಸ್ಯದ್ವಾದಶೀ ವ್ರತ.	39	399
ಮತ್ಸ್ಯಾವತಾರ.	9	102
ಮಹಾತಪ ಮುನಿಯ ಮತ್ತು ಪ್ರಜಾಪಾಲ ರಾಜನ ಚರಿತ್ರೆ ಮತ್ತು ಸಂವಾದ.	17-36	200-376
ಮೋಕ್ಷ ಧರ್ಮ ನಿರೂಪಣೆ.	51-53	480-496
ಯುಗ ಮಹಿಮೆ.	2	20
ರುದ್ರೋತ್ಪತ್ತಿ ವಿವಾಹಾದಿ ವಿಚಾರ.	21-33	238-359
ರೈಭ್ಯೋಪಾಖ್ಯಾನ.	5	48
ರೈಭ್ಯ ಸನತ್ಕುಮಾರ ಸಂವಾದ.	7	71
ವರಾಹ ದ್ವಾದಶೀ ವ್ರತ.	41	415
ವಸು ರಾಜರ್ಷಿ ಚರಿತ್ರೆ.	6	60
ವಾಮನ ದ್ವಾದಶೀ ವ್ರತ.	43	430
ವ್ಯಾಧ ಚರಿತ್ರೆ.	37-39	375-397
ವ್ಯಾಧ ದುರ್ವಾಸ ಸಂವಾದ	38-51	306
ವ್ಯಾಧನು ಸತ್ಯತಪನಾದುದು.	38	391
ವಿನಾಯಕ ಕಥೆ.	23	269
ವಿಶಾಲರಾಜನ ಕಲ್ಕಿದ್ವಾದಶೀವ್ರತ.	48	453
ವಿಷ್ಣುವಿನ ಆವತಾರ.	31	334

ವಿಷಯ	ಅಧ್ಯಾಯ	ಪುಟ
ವೇತ್ರವತಿಯ ಕಥೆ.	28	318
ವೇತ್ರಾಸುರ ವಧೆ.	28	322
ವೇದಶಾಸ್ತ್ರೋತ್ಪತ್ತಿ.	9	99
ಶ್ರಾದ್ಧಕಾಲ, ಶ್ರಾದ್ಧವಿಚಾರ (ವಿವರವಾಗಿ).	13-14	163-183
ಶ್ರೀಕೃಷ್ಣದ್ವಾದಶೀ ವ್ರತ.	46	443
ಶ್ರೀರಾಮದ್ವಾದಶೀ ವ್ರತ.	45	440
ಷಣ್ಮುಖ ಚರಿತ್ರೆ.	25	287
ಸತ್ಯ ತಪೋಖ್ಯಾನ.	38	391
ಸಂಯಮನಮುನಿನಿಷ್ಠುರಕ(ವ್ಯಾಧ)ರ ಸಂವಾದ.	5	50
ಸರಮೆಯೆಂಬ ದೇವತೆಗಳ ನಾಯಿಯ ಕಥೆ.	16	193
ಸರ್ಪಚರಿತ್ರೆ.	24	279
ಸಿಂಧುದ್ವೀಪ ಮಹಾರಾಜನು ವೇತ್ರಾಸುರನನ್ನು ಪುತ್ರನನ್ನಾಗಿ ಪಡೆದುದು.	28	316
ಸುಪ್ರತೀಕರಾಜನ ತತ್ವಜ್ಞಾನ, ರಾಮಸ್ತುತಿ.	12	150
ಸೂರ್ಯ ಸಂಜ್ಞಾದೇವಿಯರ ವಿಚಾರ.	20	228
ಸೃಷ್ಟಿ ವಿಚಾರ.	2	10
ಸೃಷ್ಟಿವರ್ಣನೆ.	10	106
ಸೋಮೋತ್ಪತ್ತಿ ರಹಸ್ಯ.	35	362
ಹರಿಹರ ಯುದ್ಧ.	21	248
,, ಸಮಾಧಾನ.	,,	250

॥ ಶ್ರೀರಸ್ತು ॥

÷

ಶ್ರೀ ವರಾಹ ಮಹಾ ಪುರಾಣಂ

ಅಥ ಪ್ರಥಮೋಽನುಕ್ರಮಣಿಕಾಧ್ಯಾಯ ಆರಭ್ಯತೇ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಂ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥ *

ನಮಸ್ತಸ್ಮೈ ವರಾಹಾಯ ಲೀಲಯೋದ್ಧರತೇ ಮಹೀಂ ।
ಖುರಮಧ್ಯಗತೋ ಯಸ್ಯ ಮೇರುಃ ಖಣಖಣಾಯತೇ ॥ ೧ ॥

ಮೊದಲನೆಯ ಅನುಕ್ರಮಣಿಕಾಧ್ಯಾಯ

* ಶ್ರೀಮನ್ನಾರಾಯಣನನ್ನೂ, ನರರಲ್ಲಿ ಉತ್ತಮನಾದ ನರ (ಅರ್ಜುನ) ನನ್ನೂ ಅಥವಾ ನರನಾರಾಯಣರನ್ನೂ, ಸರಸ್ವತೀದೇವಿಯನ್ನೂ ನಮಸ್ಕರಿಸಿ, ಬಳಿಕ ಶ್ರೀವರಾಹಮಹಾಪುರಾಣವನ್ನು ಕೀರ್ತಿಸಬೇಕು.

೧. ಮಹಾವರಾಹರೂಪವನ್ನು ಧರಿಸಿ, ಲೀಲೆಯಿಂದ ಭೂಮಿಯನ್ನುದ್ಧರಿಸುವ ಯಾರ ಕಾಲ ಗೊರಸಿನ ನಡುವೆ ಸೇರಿದ ಮೇರುಪರ್ವತವು ಹೊಳೆಯುತ್ತ ಖಣಖಣ ಶಬ್ದವನ್ನು ಮಾಡುವುದೋ ಆ ಶ್ರೀ ವರಾಹದೇವನಿಗೆ ನಮಸ್ಕಾರ.

ದಂಷ್ಟ್ರಾಗ್ರೇಣೋದ್ಧೃತಾ ಗೌರುದಧಿಪರಿವೃತಾ ಪರ್ವತೈರ್ನಿಮ್ನಗಾಭಿಃ ।
ಸಾಕಂ ಮೃತ್ಪಿಂಡವದ್ಪ್ರಹದುರುವಪುಷಾನಂತರೂಪೇಣ ಯೇನ ॥
ಸೋಽಯಂ ಕಂಸಾಸುರಾರಿರ್ಮುರನರಕದಶಾಸ್ಯಾಂತಕೃತ್ಸರ್ವಸಂಸ್ಥಃ ।
ಕೃಷ್ಣೋ ವಿಷ್ಣುಃ ಸುರೇಶೋ ನುದತು ಮಮ ರಿಪೂನಾದಿದೇವೋ
ವರಾಹಃ ॥ ೨ ॥

॥ ಸೂತ ಉವಾಚ ॥

ಯಸ್ಮಿನ್ ಕಾಲೇ ಕ್ಷಿತಿಃ ಪೂರ್ವಂ ವರಾಹವಪುಷಾ ತು ಸಾ ।
ಉದ್ಧೃತಾ ವಿಭುನಾ ಶಕ್ತ್ಯಾ ಪಪ್ರಚ್ಛ ಪರಮೇಶ್ವರಂ ॥ ೩ ॥

॥ ಧರಣ್ಯುವಾಚ ॥

ಕಲ್ಪೇ ಕಲ್ಪೇ ಭವಾನೇವಂ ಮಾಂ ಸಮುದ್ಧರತಿ ಪ್ರಭೋ ।
ನ ಚಾಹಂ ವೇದ ತೇ ಮೂರ್ತಿಮಾದಿಸರ್ಗೇ ಚ ಕೇಶವ ॥ ೪ ॥

---

೨. ಪೂರ್ವದಲ್ಲಿ ಅತಿ ವಿಶಾಲವೂ ಸ್ಥೂಲವೂ ಆದ ದೇಹವುಳ್ಳ ಅದಿಶೇಷ ರೂಪದಿಂದ ಧರಿಸಿದ್ಧ, ಸಾಗರಗಳು ಸುತ್ತಿ, ಪರ್ವತನದಿಗಳೊಡಗೂಡಿರುವ ವಿಶಾಲವಾದ ಭೂಮಂಡಲವನ್ನು ಒಂದು ದಾಡೆಯ ತುದಿಯಿಂದ ಒಂದು ಮಣ್ಣಿನ ಉಂಡೆಯನ್ನು ಎತ್ತುವಂತೆ ವಿನೋದದಿಂದೆತ್ತಿ ಉದ್ಧರಿಸಿದವನೂ, ಕಂಸಾಸುರ ಮರಾಸುರ ನರಕಾಸುರ ರಾವಣಾಸುರ ವಿನಾಶಕನೂ, ಸರ್ವಾಂತರ್ಯಾಮಿಯೂ ಕೃಷ್ಣನೂ, ವಿಷ್ಣುವೂ, ಸುರೇಶನೂ ಆದ ಆ ಶ್ರೀಆದಿವರಾಹದೇವನು ನಮ ವೈರಿಗಳನ್ನು ನಾಶಮಾಡಲಿ.

೩. ಸೂತಮುನಿ— ಶ್ರೀವರಾಹದೇಹಧಾರಿಯಾದ ಪರಮಾತ್ಮನು ಭೂದೇವಿಯನ್ನು ಪ್ರಲಯಜಲಧಿಯಿಂದ ಲೀಲೆಯಿಂದುದ್ಧರಿಸಿದಾಗ ಅವಳು ಆ ಪರಮೇಶ್ವರನನ್ನು ಕೇಳಿದಳು

೪. ಭೂದೇವಿ—ಪ್ರಭುವೇ, ಕೇಶವಾ, ಕಲ್ಪ ಕಲ್ಪದಲ್ಲಿಯೂ ನೀನು ಹೀಗೆ ನನ್ನನ್ನುದ್ಧರಿಸುತ್ತೀಯೆ. ಆದರೂ ಮೊದಲ ಸೃಷ್ಟಿಯಲ್ಲಿಯೂ ನಿನ್ನಸ್ವರೂಪವನ್ನು ನಾನರಿಯೆನು.

ವೇದೇಷು ಚೈವ ನಷ್ಟೇಷು ಮತ್ಸ್ಯೋ ಭೂತ್ವಾ ರಸಾತಲಾತ್ ।
ಪ್ರವಿಶ್ಯ ತಾನಥೋತ್ಕೃಷ್ಯ ಬ್ರಹ್ಮಣೇ ದತ್ತವಾನಸಿ || ೫ ||

ಅನ್ಯತ್ಸುರಾಸುರಮಿತೇ ತ್ವಂ ಸಮುದ್ರಸ್ಯ ಮಂಥನೇ ।
ಧೃತವಾನಸಿ ಕೌರ್ಮ್ಯೇಣ ಮಂದರಂ ಮಧುಸೂದನ || ೬ ||

ಪುನಶ್ಚ ಗಾಂ ಜಗನ್ನಾಥ ನಿಮಜ್ಜಂತೀಂ ರಸಾತಲಾತ್ ।
ಉಜ್ಜಹಾರೈಕದಂಷ್ಟ್ರೇಣ ಭಗವನ್ವೈ ಮಹಾರ್ಣವಾತ್ || ೭ ||

ಅನ್ಯದ್ಧಿರಣ್ಯಕಶಿಪುರ್ವರದಾನೇನ ದರ್ಪಿತಃ ।
ಆಬಾಧ್ಯಮಾನಃ ಪೃಥಿವೀಂ ಸ ತ್ವಯಾ ವಿನಿಪಾತಿತಃ || ೮ ||

ಬಲಿಃ ಪ್ರಬದ್ಧೋ ಭಗವನ್ ತ್ವಯಾ ವಾಮನರೂಪಿಣಾ ।
ಪುನರ್ನಿಃಕ್ಷತ್ರಿಯಾ ದೇವ ತ್ವಯಾ ಚಾಪಿ ಪುರಾಕೃತಾ || ೯ ||

---

೫. ವೇದಗಳು ನಷ್ಟವಾಗಲು ಮತ್ಸ್ಯರೂಪದಿಂದ ಪಾತಾಳವನ್ನು ಹೊಕ್ಕು, ಅವನ್ನು ತಂದು ಬ್ರಹ್ಮನಿಗೆ ಕೊಟ್ಟೆ.

೬. ಸುರಾಸುರರು ಕ್ಷೀರಸಮುದ್ರವನ್ನು ಕಡೆಯುವಾಗ ಮಂದರಪರ್ವತ ವನ್ನು ಕೂರ್ಮ ರೂಪದಿಂದ ಧರಿಸಿದೆಯಲ್ಲವೆ ! ಮಧುಸೂದನ !

೭. ಭಗವಂತನೇ, ಜಗನ್ನಾಥ, ರಸಾತಲದಲ್ಲಿ ಮುಳಗಿ ಹೋಗುತ್ತಿದ್ದ ಭೂಮಿಯಾದ ನನ್ನನ್ನು ಮಹಾ ಸಾಗರದಿಂದ ವರಾಹನಾಗಿ ಒಂದೇ ದಾಡೆ ಯಿಂದೆತ್ತಿದೆ.

೮. ಆಲ್ಲದೆ ವರದಾನದಿಂದ ಕೊಬ್ಬಿದ ಪೃಥಿವಿಯನ್ನು ಬಾಧಿಸುತ್ತಿದ್ದ ಹಿರಣ್ಯಕಶಿಪುವನ್ನು ನೀನು ನರಸಿಂಹನಾಗಿ ಕೊಂದೆ.

೯-೧೦. ವಾಮನ ರೂಪದಿಂದ ಬಲಿಯನ್ನು ಬಂಧಿಸಿದೆ. ದೇವಾ, ಪ್ರಭೂ ಮತ್ತೆ ಪರಶುರಾಮನಾಗಿ ಹಲವುಸಾರಿ ಭೂಮಿಯನ್ನು ಕ್ಷತ್ರಿಯರಿಲ್ಲದುದನ್ನಾಗಿ

ಜಾಮದಗ್ನ್ಯೇನ ರಾಮೇಣ ತ್ವಯಾ ಭೂತ್ವಾಽ ಸಕೃತ್ಪ್ರಭೋ ।
ಪುನಶ್ಚ ರಾವಣೋ ರಕ್ಷಃ ಕ್ಷಪಿತಂ ಕ್ಷಾತ್ರ ತೇಜಸಾ ॥ ೧೦ ॥

ನ ಚ ಜಾನಾಮ್ಯಹಂ ದೇವ ತವ ಕಿಂಚಿದ್ವಿಚೇಷ್ಟಿತಮ್ ।
ಉದ್ಧೃತ್ಯ ಮಾಂ ಕಥಂ ಸೃಷ್ಟಿಂ ಸೃಜಸೇ ಕಿಂಚ ಕಾರಣಮ್ ॥ ೧೧ ॥

ಸಕೃದ್ಧ್ರಿಯೇತ ಕೃತ್ವಾ ಚ ಪಾಲ್ಯತೇ ಚಾಪಿ ಕೇನ ವಾ ।
ಕೇನ ವಾ ಸುಲಭೋ ದೇವೋ ಭವೇಸ್ತ್ವಂ ಸತತಂ ವಿಭೋ ॥ ೧೨ ॥

ಕಥಂ ಚ ಸೃಷ್ಟೇರಾದಿಃ ಸ್ಯಾದವಸಾನಂ ಕಥಂ ಭವೇತ್ ।
ಕಥಂ ಯುಗಸ್ಯ ಗಣನಾ ಸಂಖ್ಯಾಸ್ಯಾನು ಚತುರ್ಯುಗಮ್ ॥ ೧೩ ॥

ಕೋವಾ ವಿಶೇಷಸ್ತೇಷ್ವಸ್ಮಿನ್ ಕಾ ವಾ ವಾಂಛಾ ಮಹೇಶ್ವರ ।
ಯಜ್ವಾನಃ ಕೇಚ ರಾಜಾನಃ ಕೇ ಚ ಸಿದ್ಧಿಂ ಪರಾಂಗತಾಃ ॥ ೧೪ ॥

ಮಾಡಿದೆ. ಮತ್ತು ರಾಕ್ಷಸನಾದ ರಾವಣನನ್ನು ಶ್ರೀ ರಾಮನಾಗಿ ಕ್ಷತ್ರಿಯ ತೇಜದಿಂದ ನಾಶಮಾಡಿದೆ.

೧೧. ದೇವಾ, ನಾನು ನಿನ್ನ ಕೆಲಸಗಳನ್ನೇನೂ ತಿಳಿಯೆನು. ನನ್ನನ್ನು ಉದ್ಧರಿಸಿ, ನೀನು ಹೇಗೆ ಸೃಷ್ಟಿಮಾಡುತ್ತೀಯೆ ? ಕಾರಣವೇನು ?

೧೨. ವಿಭುವೇ ಸೃಷ್ಟಿಯಿಂದ ಕೂಡಿದ ನನ್ನನ್ನು ಸುಲಭವಾಗಿ ಧರಿಸುವವರೂ ಪಾಲಿಸುವವರೂ ಯಾರು ? ನೀನು ಏತರಿಂದ ಅಥವಾ ಯಾರಿಂದ ಸುಲಭನು ?

೧೩. ಸೃಷ್ಟಿಯ ಮೊದಲೂ ಕಡೆಯೂ ಹೇಗಾಗುವುದು ? ಯುಗ ಗಣನೆಯು ಹೇಗೆ ? ನಾಲ್ಕುಯುಗಗಳಿಗೂ ಕ್ರಮವಾಗಿ ಕಾಲ (ವರ್ಷ) ವೆಷ್ಟು ?

೧೪–೧೫. ಆ ಯುಗಗಳಲ್ಲಿ ವಿಶೇಷವೇನು ? ಇದರಲ್ಲಿ ಇಷ್ಟವೇನು ? ಆ ಯುಗಗಳಲ್ಲಿ ಯಾವ ಯಜಮಾನರೂ ರಾಜರೂ ಪರಮಸಿದ್ಧಿಯನ್ನು

ಏತತ್ಸರ್ವಂ ಸಮಾಸೇನ ಕಥಯಸ್ವ ಪ್ರಸೀದ ಮೇ ।
ಇತ್ಯುಕ್ತಃ ಕ್ರೋಡರೂಪೇಣ ಜಹಾಸ ಪರಮೇಶ್ವರಃ ॥ ೧೫ ॥

ಹಸತಸ್ತಸ್ಯ ಕ್ಷುಂತೌ ತು ಜಗದ್ಧಾತ್ರೀ ದದರ್ಶ ಹ ।
ರುದ್ರಾನ್ ದೇವಾನ್ಸಹವಸೂನ್ಸಿದ್ಧಸಂಘಾನ್ಮಹರ್ಷಿಭಿಃ ॥ ೧೬ ॥

ಸಚಂದ್ರಸೂರ್ಯಗ್ರಹಸಪ್ತಲೋಕಾ ।
ನಂತಃ ಸ್ಥಿತಾಂಸ್ತತ್ರ ಉಪಾತ್ತಧರ್ಮಾನ್ ॥ ೧೭ ॥

ಇತೀದೃಶಂ ಪಶ್ಯತಿ ಸಾಸಮಸ್ತಂ
ಯಾವತ್ಕ್ಷಿತಿರ್ವೇಪಿತಸರ್ವಗಾತ್ರಾ
ಉನ್ಮೀಲಿತಾಸ್ಯಸ್ತು ಯದಾಮಹಾತ್ಮಾ
ದೃಷ್ಟೋ ಧರಣ್ಯಾಮಲಸರ್ವಗಾತ್ರ್ಯಾ ।
ತಾವತ್ಸ್ವರೂಪೇಣ ಚತುರ್ಭುಜೇನ
ಮಹೋದಧೌ ಸುಪ್ತಮಥೋನ್ವಪಶ್ಯತ್ ॥ ೧೮ ॥

ಪಡೆದರು ? ಮಹೇಶ್ವರನೇ, ಇದೆಲ್ಲವನ್ನೂ ನನ್ನಲ್ಲಿ ದಯೆಯಿಂದ ಸಂಗ್ರಹವಾಗಿ ಹೇಳು. ಎನಲು ವರಾಹರೂಪದಿಂದಲೇ ಪರಮೇಶ್ವರನು ನಕ್ಕನು.

೧೬–೧೭. ನಗುತ್ತಿದ್ದ ಆ ವರಾಹಮೂರ್ತಿಯ ಬಾಯಮೂಲಕವಾಗಿ ಜಗದ್ಧಾತ್ರಿಯಾದ ಆ ಭೂದೇವಿಯು ಅವನುದರದೊಳಗೆ ಧರ್ಮಾವಲಂಬಿಗಳಾದ ರುದ್ರರನ್ನೂ ವಸುಗಳೊಂದಿಗಿರುವ ದೇವತೆಗಳನ್ನೂ ಮಹರ್ಷಿಸಿದ್ಧಸಂಘಗಳನ್ನೂ ಚಂದ್ರಸೂರ್ಯಗ್ರಹಗಳಿಂದ ಕೂಡಿದ ಸಪ್ತಲೋಕಗಳನ್ನೂ ಕಂಡಳು.

೧೮. ಇದೆಲ್ಲವನ್ನೂ ನೋಡಿ ನಡುಗುತ್ತಾ ನಿರ್ಮಲಸರ್ವಾಂಗಿಯಾದ ಆ ಭೂದೇವಿಯು ನಗುಮೊಗದ (ಬಾಯಿತೆರೆದಿರುವ) ಆ ಮಹಿಮನನ್ನು ಮತ್ತೆ ನೋಡಿದಾಗ ಆತನು ಚತುರ್ಭುಜದ ನಿಜರೂಪದಿಂದ ಮಹೋದಧಿಯಲ್ಲಿ ಮಲಗಿರುವವನಾಗಿ ಕಾಣಿಸಿದನು.

ಶೇಷಪರ್ಯಂಕಶಯನೇ ಸುಪ್ತಂ ದೇವಂ ಜನಾರ್ದನಮ್ ।
ದೃಷ್ಟ್ವಾ ತನ್ನಾಭಿಪಂಕೇರುಹಾಂತಸ್ಥಂ ತಂ ಚತುರ್ಭುಜಮ್ ॥
ಕೃತಾಂಜಲಿಪುಟಾ ದೇವೀ ಸ್ತುತಿಂ ಧಾತ್ರೀ ಜಗಾದ ಹ ॥ ೧೯ ॥

॥ ಧರಣ್ಯುವಾಚ ॥

ನಮಃ ಕಮಲಪತ್ರಾಕ್ಷ ನಮಸ್ತೇ ಪೀತವಾಸಸೇ ।
ನಮಃ ಸುರಾರಿವಿಧ್ವಂಸಕಾರಿಣೇ ಪರಮಾತ್ಮನೇ ॥ ೨೦ ॥

ಶೇಷಪರ್ಯಂಕಶಯನೇ ಧೃತವಕ್ಷಸ್ಥಲಶ್ರಿಯೇ ।
ನಮಸ್ತೇ ಸರ್ವದೇವೇಶ ನಮಸ್ತೇ ಮೋಕ್ಷಕಾರಿಣೇ ॥ ೨೧ ॥

ನಮಃ ಶಾರ್ಙ್ಗಾಸಿಚಕ್ರಾಯ ಜನ್ಮಮೃತ್ಯುವಿವರ್ಜಿತ ।
ನಮೋ ನಾಭ್ಯುತ್ಥಿತಮಹಾಕಮಲಾಸನ ಜನ್ಮನೇ ॥ ೨೨ ॥

---

೧೯. ಶೇಷಶಯ್ಯೆಯಲ್ಲಿ ಮಲಗಿರುವ ದೇವನಾದ ಜನಾರ್ದನನನ್ನೂ ಅವನ ನಾಭಿಕಮಲದಲ್ಲಿರುವ ಚತುರ್ಭುಜ ಬ್ರಹ್ಮನನ್ನೂ ನೋಡಿ ಕೈಮುಗಿದುಕೊಂಡು ಭೂದೇವಿಯು ಮುಂದಿನಂತೆ ಸ್ತುತಿಸಿದಳು.

೨೦. ಭೂದೇವಿ—ಕಮಲಾಕ್ಷ, ನಾನು ನಮಿಸುವೆನು. ಪೀತವಸ್ತ್ರ, ನಮಿಸುವೆನು. ರಾಕ್ಷಸರ ನಾಶಕನೆ ಪರಮಾತ್ಮನೇ, ನಮಿಸುವೆನು.

೨೧. ಸಿರಿಯನ್ನು ಎದೆಯಲ್ಲಿ ಧರಿಸಿ ಶೇಷನಲ್ಲಿ ಮಲಗಿರುವನೇ ಮೋಕ್ಷದಾಯಕನೆ ಸರ್ವೇಶನೇ, ನಮಿಸುವೆನು.

೨೨. ಶಾರ್ಙ್ಗಚಕ್ರಗಳನ್ನು ಧರಿಸಿರುವನೇ, ಹುಟ್ಟುಸಾವುಗಳನ್ನು ಬಿಟ್ಟಿರುವನೇ, ಹೊಕ್ಕುಳಿನ ಕಮಲದಲ್ಲಿ ಬ್ರಹ್ಮನನ್ನು ಪಡೆದಿರುವನೇ ನಮಿಸುವೆನು.

ನಮೋ ವಿದ್ರುಮರಕ್ತೋಷ್ಠಪಾಣಿಪಲ್ಲವಶೋಭಿನೇ |
ಶರಣಂ ತ್ವಾಂ ಪ್ರಪನ್ನಾಸ್ಮಿ ತ್ರಾಹಿ ನಾರೀಮನಾಗಸಂ || ೨೩ ||

ಪೂರ್ಣನೀಲಾಂಜನಾಕಾರಂ ವಾರಾಹಂ ತೇ ಜನಾರ್ದನ |
ದೃಷ್ಟ್ವಾ ಭೀತಾಸ್ಮಿ ಭೂಯೋಽಪಿ ಜಗತ್ತ್ವದ್ದೇಹಗೋಚರಮ್ ||
ಇದಾನೀಂ ಕುರು ಮೇ ನಾಥ ದಯಾಂ ತ್ರಾಹಿ ಮಹಾಪ್ರಭೋ || ೨೪ ||

ಕೇಶವಃ ಪಾತು ಮೇ ಪಾದೌ ಜಂಘೇ ನಾರಾಯಣೋ ಮಮ |
ಮಾಧವೋ ಮೇ ಕಟಿಂ ಪಾತು ಗೋವಿಂದೋ ಗುಹ್ಯಮೇವ ಚ || ೨೫ ||

ನಾಭಿಂ ವಿಷ್ಣುಸ್ತು ಮೇ ಪಾತು ಉದರಂ ಮಧುಸೂದನಃ |
ಉರಸ್ತ್ರಿವಿಕ್ರಮಃ ಪಾತು ಹೃದಯಂ ಪಾತುವಾಮನಃ || ೨೬ ||

---

೨೩. ಹವಳಬಣ್ಣದ ಕೆಂಪುತುಟಿಯಿಂದಲೂ ಚಿಗುರುಗಯ್ಯಿಂದಲೂ ಹೊಳೆಯುವನೆ, ನಾನು ವಂದಿಸುವೆನು. ನಿನ್ನನ್ನು ಮರೆಹೊಕ್ಕಿರುವೆನು ಪಾಪರಹಿತಳಾದ ಅಬಲೆಯನ್ನು ಕಾಪಾಡು.

೨೪. ಜನಾರ್ದನಾ, ಕಣ್ಣುಕಪ್ಪಿನಂತೆ ಬಹು ನೀಲವಾದ ನಿನ್ನ ವರಾಹ ರೂಪವನ್ನೂ ನಿನ್ನ ದೇಹದೊಳಗೆ ತೋರಿದ ಜಗತ್ತನ್ನೂ ನೋಡಿ, ಬಹಳವಾಗಿ ಹೆದರಿರುವೆನು. ನಾಥ, ಈಗ ನನ್ನಮೇಲೆ ದಯೆಯನ್ನಿಡು. ಮಹಾಪ್ರಭುವೇ, ನನ್ನನ್ನು ರಕ್ಷಿಸು.

೨೫. ನನ್ನ ಕಾಲುಗಳನ್ನು ಕೇಶವನು ರಕ್ಷಿಸಲಿ. ನಾರಾಯಣನು ನನ್ನ ಮೊಳಕಾಲನ್ನು ರಕ್ಷಿಸಲಿ. ಮಾಧವನು ನಡುವನ್ನೂ ಗೋವಿಂದನು ಗುಹ್ಯವನ್ನೂ ರಕ್ಷಿಸಲಿ.

೨೬. ವಿಷ್ಣುವು ಹೊಕ್ಕುಳನ್ನೂ ಮಧುಸೂದನನು ಉದರವನ್ನೂ ತ್ರಿವಿಕ್ರಮನು ಉರಸ್ಸನ್ನೂ ವಾಮನನು ಹೃದಯವನ್ನೂ ಕಾಪಾಡಲಿ.

ಶ್ರೀಧರಃ ಪಾತು ಮೇ ಕಂಠಂ ಹೃಷೀಕೇಶೋ ಮುಖಂ ಮಮ ।
ಪದ್ಮನಾಭಸ್ತು ನಯನೇ ಶಿರೋ ದಾಮೋದರೋ ಮಮ ॥ ೨೭ ॥

ಏವಂ ನ್ಯಸ್ಯ ಹರೇರ್ನ್ಯಾಸಂ ನಾಮಾನಿ ಜಗತೀ ತದಾ ।
ನಮಸ್ತೇ ಭಗವನ್ ವಿಷ್ಣೋ ಇತ್ಯುಕ್ತ್ವಾ ವಿರರಾಮ ಹ ॥ ೨೮ ॥

ಇತಿ ವರಾಹಪುರಾಣೇ ಅನುಕ್ರಮಣಿಕಾಯಾಂ ಪ್ರಥಮೋಽಧ್ಯಾಯಃ

---

೨೭. ಶ್ರೀಧರನು ನನ್ನ ಕಂಠವನ್ನೂ ಹೃಷೀಕೇಶನು ನನ್ನ ಮುಖವನ್ನೂ ಪದ್ಮನಾಭನು ಕಣ್ಣುಗಳನ್ನೂ ದಾಮೋದರನು ತಲೆಯನ್ನೂ ಕಾಪಾಡಲಿ.

೨೮. ಹೀಗೆ ಹರಿನಾಮಗಳನ್ನು ನ್ಯಾಸವಾಗಿಟ್ಟು, ಭೂದೇವಿಯು "ಭಗವಂತನೇ, ವಿಷ್ಣುವೇ, ನಿನಗೆ ನಮಸ್ಕಾರ.' ಎಂದು ಸುಮ್ಮನಾದಳು.

ಅಧ್ಯಾಯದ ಸಾರಾಂಶ :—

ಮಂಗಳಾಚರಣೆ, ಸೂತಮುನಿಯ ಪ್ರಸ್ತಾವನೆ, ಶ್ರೀ ವರಾಹನು ಭೂದೇವಿಯನ್ನು ಪ್ರಲಯ ಜಲಧಿಯಿಂದ ಉದ್ಧರಿಸಿದಾಗ ಆ ದೇವಿಯು ಆ ದೇವನನ್ನು ಸ್ತುತಿಸಿ, ಸೃಷ್ಟಿಯ ವಿಚಾರದಲ್ಲಿ ಮಾಡಿದ ಪ್ರಶ್ನೆ, ಅದರಿಂದ ನಕ್ಕ ವರಾಹನ ಬಾಯ ಮೂಲಕ ಆಕೆಗೆ ಆದ ಅವನುದರದಲ್ಲಿದ್ದ ಸಪ್ತಲೋಕ ದರ್ಶನ, ಅದರಿಂದ ಭಯಸಂಭ್ರಮಾಶ್ಚರ್ಯಗಳುಳ್ಳ ಆಕೆಯು ಕಣ್ಣುಮುಚ್ಚಿ ಮತ್ತೆ ತೆರೆದು ನೋಡಲು ಮಹಾಸಾಗರದಲ್ಲಿ ಶೇಷಶಾಯಿಯಾಗಿರುವ ಚತುರ್ಭುಜನಾದ ಆತನನ್ನು ಕಂಡು, ಆಕೆಯು ಮಾಡಿದ ಸ್ತುತಿ, ಇವುಗಳನ್ನು ಹೇಳುವಲ್ಲಿಗೆ ಶ್ರೀ ವರಾಹಪುರಾಣದ ಮೊದಲನೆ ಅಧ್ಯಾಯ.

|| ಶ್ರೀಃ ||

-x-

ದ್ವಿತೀಯೋಧ್ಯಾಯಃ

ಅಥ ಸೃಷ್ಟಿ ಸ್ಥಿತಿ ಯುಗ ಮಾಹಾತ್ಮ್ಯಂ

॥ ಸೂತ ಉವಾಚ ॥

ತತಸ್ತುಷ್ಟೋ ಹರಿರ್ಭಕ್ತ್ಯಾ ಧರಣ್ಯಾತ್ಮಶರೀರಗಃ |
ಮಾಯಾಂ ಪ್ರಕಾಶ್ಯ ತೇನೈವ ಸ್ಥಿತೋ ವಾರಾಹಮೂರ್ತಿನಾ || ೧ ||

ಜಗಾದ ಕಿಂತೇ ಸುಶ್ರೋಣಿ ಪ್ರಶ್ನಮೇತಂ ಸುದುರ್ಲಭಂ |
ಕಥಯಾಮಿ ಪುರಾಣಸ್ಯ ವಿಷಯಂ ಸರ್ವಶಾಸ್ತ್ರತಃ || ೨ ||

ಪುರಾಣಾನಾಂ ಹಿ ಸರ್ವೇಷಾಂ ಅಯಂ ಸಾಧಾರಣಃ ಸ್ಮೃತಃ ||
ಶ್ಲೋಕಂ ಧರಣಿ ನಿಶ್ಚಿತ್ಯ ನಿಶ್ಶೇಷಂ ತ್ವಮತಃ ಶೃಣು ॥ ೩ ॥

ಎರಡನೆಯ ಅಧ್ಯಾಯ

ಸೃಷ್ಟಿಸ್ಥಿತಿಯುಗಗಳ ಮಹಿಮೆ.

೧-೩. ಸೂತಮುನಿ—ಭೂದೇವಿಯ ಭಕ್ತಿಗೆ ಒಲಿದು ತನ್ನ ನಿಜರೂಪವನ್ನು ಧರಿಸಿದ್ದ ಹರಿಯು, ಮತ್ತೆ ಮಾಯೆಯನ್ನು ತೋರಿ, ಅದೇ ವರಾಹರೂಪದಿಂದ ನಿಂತು "ಸುಂದರಾಂಗೀ, ಅತ್ಯಪೂರ್ವವಾದ ಈ ಪ್ರಶ್ನೆಗೆ ಉತ್ತರವಾಗಿ ನಿನಗೆ ಪುರಾಣದ ವಿಷಯವನ್ನು ಸರ್ವಶಾಸ್ತ್ರ(ಗಳ ಆಧಾರ) ದಿಂದ ಹೇಳುತ್ತೇನೆ. ಎಲ್ಲಾ ಪುರಾಣಗಳಿಗೂ ಸಾಮಾನ್ಯ ಲಕ್ಷಣವೆಂದು ಮುಂದೆ ಶ್ಲೋಕದಲ್ಲಿ ಹೇಳಿರುವುದನ್ನು ತಿಳಿದು ಬಳಿಕ ಪೂರ್ತಿಯಾಗಿ ಕೇಳು" ಎಂದನು.

॥ ಶ್ರೀ ವರಾಹ ಉವಾಚ ॥

ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।
ವಂಶಾನುಚರಿತಂಚೈವ ಪುರಾಣಂ ಪಂಚಲಕ್ಷಣಮ್ ॥ ೪ ॥

ಆದಿಸರ್ಗಮಹಂ ತಾವತ್ಕಥಯಾಮಿ ವರಾನನೇ ।
ಯಸ್ಮಾದಾರಭ್ಯ ದೇವಾನಾಂ ರಾಜ್ಞಾಂ ಚರಿತಮೇವ ಚ ॥ ೫ ॥

ಜ್ಞಾಯತೇ ಚತುರಂಶಶ್ಚ ಪರಮಾತ್ಮಾ ಸನಾತನಃ ॥ ೬ ॥

ಆದಾವಹಂ ವ್ಯೋಮ ಮಹತ್ತತೋಣುಃ
ಏಕೈವ ಮತ್ತಃ ಪ್ರಬಭೂವ ಬುದ್ಧಿಃ ।
ತ್ರಿಧಾತು ಸಾ ಸತ್ವರಜಸ್ತಮೋಭಿಃ
ಪೃಥಕ್ ಪೃಥಕ್ ಸತ್ವರೂಪೈರುಪೇತಾ ॥ ೭ ॥

---

೪. ಶ್ರೀವರಾಹ—ಸರ್ಗ (ಆ ದಿಸೃಷ್ಟಿ), ಪ್ರತಿಸರ್ಗ (ಪ್ರಜಾಸೃಷ್ಟಿ), ವಂಶ ಮನ್ವಂತರ ವಂಶಾನುಚರಿತ ಎಂದು ಪುರಾಣಕ್ಕೆ ಐದುಲಕ್ಷಣಗಳು.

೫-೬. ವರಾನನೆ, ಯಾವುದರಿಂದ ಮೊದಲುಗೊಂಡು ದೇವತೆಗಳ ಮತ್ತು ರಾಜರ ಚರಿತ್ರೆಯೂ ಸನಾತನನೂ * ಚತುರಂಶನೂ ಆದ ಪರಮಾತ್ಮನ ವಿಚಾರವೂ ತಿಳಿಯುವುದೋ ಅಂತಹ ಮೊದಲನೆಯದಾದ ಸರ್ಗ (ಸೃಷ್ಟಿ) ವಿಷಯವನ್ನು ಹೇಳುತ್ತೇನೆ.

೭-೮. ಆದಿಯಲ್ಲಿ ನಾನು ಅವ್ಯಾಕೃತಶರೀರಕನಾಗಿದ್ದೆನು. ಅಂತಹ ನನ್ನಿಂದ ಸೂಕ್ಷ್ಮವಾದ ಮಹತ್ತತ್ವ ಅಥವಾ ಬುದ್ಧಿಯುದಿಸಿತು. ಆ ಬುದ್ಧಿಯು ಸಾತ್ವಿಕ ರಾಜಸ ತಾಮಸವೆಂಬ ಮೂರುವಿಭಾಗವುಳ್ಳದು. ಆ ಮಹತ್ತತ್ವದಿಂದ ಸಾತ್ವಿಕ ರಾಜಸ ತಾಮಸವೆಂಬ ಅಹಂಕಾರವುಂಟಾಯಿತು. ಆ ಎರಡು

---

* ಅವ್ಯಕ್ತ ಅಥವಾ ಪ್ರಧಾನಸ್ವರೂಪ, ಪುರುಷಸ್ವರೂಪ, ವ್ಯಕ್ತಸ್ವರೂಪ ಮತ್ತು ಕಾಲಸ್ವರೂಪ ಇವೇ ಪರಮಾತ್ಮನ ಚತುರಂಶಗಳು.

ತಸ್ಮಿಂಸ್ತ್ರಿಕೇಹಂ ತಮಸೋ ಮಹಾನ್ಸ
ಸದೋಚ್ಯತೇ ಸರ್ವವಿದಾಂಪ್ರಧಾನಃ ।
ತಸ್ಮಾದಪಿ ಕ್ಷೇತ್ರವಿದೂರ್ಜಿತೋಯೋ
ಬಭೂವ ಬುದ್ಧಿಸ್ತು ತತೋ ಬಭೂವ ॥ ೮ ॥

ತಸ್ಮಾತ್ತು ತೇಭ್ಯಃ ಶ್ರವಣಾದಿಹೇತವಃ
ತತೋಕ್ಷಮಾಲಾಜಗತೋ ವ್ಯವಸ್ಥಿತಾ ।
ಭೂತೈರ್ಗತೈರೇವ ಚ ಪಿಂಡಮೂರ್ತಿಃ
ಮಯಾ ಭದ್ರೇ ವಿಹಿತಾ ತ್ವಾತ್ಮನೈವ ॥ ೯ ॥

ಶೂನ್ಯಂ ತ್ವಾಸೀತ್ತತ್ರ ಶಬ್ದಸ್ತು ಖಂಚ
ತಸ್ಮಾದ್ವಾಯುಸ್ತತ ಏವಾನು ತೇಜಃ ।
ತಸ್ಮಾದಾಪಸ್ತತ ಏವಾನು ದೇವಿ
ಮಯಾಸೃಷ್ಟಾ ಭವತೀ ಭೂತಧಾತ್ರೀ ॥ ೧೦ ॥

ತತ್ವಗಳಲ್ಲಿಯೂ ಸರ್ವಜ್ಞರಲ್ಲಿ ಪ್ರಧಾನನಾದ ನಾನು ಅಂತರ್ಯಾಮಿಯಾಗಿದ್ದೇನೆಂದು ಹೇಳಿಕೆಯಾಗಿದೆ. ಅಂತಹ ಅಹಂಕಾರತತ್ವದಲ್ಲಿ ಕ್ಷೇತ್ರಜ್ಞಸಮಷ್ಟಿಯಿಂದ ಕೂಡಿದ ಸಾತ್ವಿಕಾಹಂಕಾರದಿಂದ ಜ್ಞಾನೇಂದ್ರಿಯಗಳುದಿಸಿದುವು.

೯. ಅಹಂಕಾರದ ಮೂರು ರೂಪಗಳಲ್ಲಿ ಸಾತ್ವಿಕಾಹಂಕಾರದಿಂದ ಪ್ರಪಂಚಕ್ಕೆ ಶ್ರವಣಾದಿಗಳಿಗೆ ಕಾರಣಗಳಾದ ಏಕಾದಶೇಂದ್ರಿಯಗಳುಂಟಾದುವು. ಅಲ್ಲದೆ ಅದೇ ತಾಮಸಾಹಂಕಾರತತ್ವದಿಂದುದಿಸಿದ ಪಂಚಭೂತಗಳಿಂದಲೇ ಅವ್ಯಕ್ತನಾದ ನಾನು ಅನುಪ್ರವೇಶಮಾಡಿ, ಪಿಂಡಮೂರ್ತಿಯಾದ ಅಂಡವನ್ನು ಸೃಷ್ಟಿಸಿದೆನು.

೧೦. ಆಕಾಶವು ಶಬ್ದಗುಣಕಮಾತ್ರವಾಗಿದ್ದು ಶೂನ್ಯವಾಗಿದ್ದಿತು. ಬಳಿಕ ಅದರಿಂದ ವಾಯುವೂ ಆ ವಾಯುವಿನಿಂದ ಅಗ್ನಿಯೂ ಅಗ್ನಿಯಿಂದ ಜಲವೂ ಆಮೇಲೆ ಜಲದಿಂದ ಭೂತಧಾತ್ರಿಯಾದ ಪೃಥ್ವಿಯೆಂಬ ನೀನೂ ನನ್ನಿಂದ ಸೃಷ್ಟಿಸಲ್ಪಟ್ಟಿರಿ.

ಯೋಗೇ ಪೃಥಿವ್ಯಾಂ ಜಲವತ್ತತೋಽಪಿ
ಸಬುದ್ಬುದಂ ಕಲಲಂ ತ್ವಂಡಮೇವ ।
ತಸ್ಮಿನ್ ಪ್ರವೃದ್ಧಿಂ ಚ ಗತೇಽಹಮಾಸಂ
ಅಪೋಮಯಶ್ಚಾತ್ಮನಾತ್ಮಾನ ಮಾದೌ ॥ ೧೧ ॥

ಸೃಷ್ಟ್ವಾ ನಾರಾಸ್ತಾ ಅಥೋ ತತ್ರ ಚಾಹಂ
ಯೇನೈವ ಸ್ಯಾನ್ನಾಮ ನಾರಾಯಣೇತಿ ।
ಕಲ್ಪೇ ಕಲ್ಪೇ ತತ್ರ ಶಯಾಮಿ ಭೂಯಃ
ಸುಪ್ತಸ್ಯಮೇ ನಾಭಿಜಃ ಸ್ಯಾದ್ಯಥಾದ್ಯ ॥ ೧೨ ॥

ಏವಂ ಭೂತಸ್ಯ ಮೇ ದೇವಿ ನಾಭಿಪದ್ಮೇ ಚತುರ್ಮುಖಃ ।
ಉತ್ತಸ್ಥೌ ಸಮಯಾ ಪ್ರೋಕ್ತಃ ಪ್ರಜಾಃ ಸೃಜ ಮಹಾಮತೇ ॥ ೧೩ ॥

ಏವಮುಕ್ತ್ವಾ ತಿರೋಭಾವಂ ಗತೋಽಹಂ ಸೋಽಪಿ ಚಿಂತಯನ್ ।
ಆಸ್ತೇ ಯಾವಜ್ಜಗದ್ಧಾತ್ರಿ ನಾಧ್ಯಗಚ್ಛತ್ತು ಕಿಂಚನ ॥ ೧೪ ॥

---

೧೧. ಪೃಥ್ವಿಯೊಡನೆ ನೀರಿನಂತೆ (ತೇಜಸ್ಸೇ ಮೊದಲಾದ) ಇತರ ಭೂತಗಳ ಸಂಬಂಧವೂ ಉಂಟಾಗಲು ಗುಳ್ಳೆಯಿಂದ ಕೂಡಿದ ಪಿಂಡರೂಪವಾದ ಅಂಡವುದಿಸಿತು. ಅದು ಬೆಳೆಯಲು ನನಗೆ ನಾನೇ ಅಪೋಮಯನಾಗಿ ಅದರಲ್ಲಿದ್ದೆನು.

೧೨. ಆ ನಾರವನ್ನು (ನೀರನ್ನು) ಸೃಷ್ಟಿಸಿ, ಬಳಿಕ ನಾನು ಅದರಲ್ಲಿ ಇದ್ದುದರಿಂದಲೇ ನನಗೆ ನಾರಾಯಣನೆಂದು ಹೆಸರು. ನಾನು ಮತ್ತೆ ಕಲ್ಪ ಕಲ್ಪದಲ್ಲಿಯೂ ಅದರಲ್ಲಿ ಮಲಗುವೆನು. ಮಲಗಿದ ನನ್ನ ನಾಭಿಕಮಲದಲ್ಲಿ ಬ್ರಹ್ಮನು ಈಗಿನಂತೆಯೇ ಇರುವನು.

೧೩. ಇಂತಹ ನನ್ನ ನಾಭಿಕಮಲದಲ್ಲಿ ಬ್ರಹ್ಮನು ಎಂದ್ದುನಿಂತನು. ಅವನಿಗೆ "ಎಲೈ ಮಹಾಮತಿಯೇ, ಪ್ರಜೆಗಳನ್ನು ಸೃಜಿಸು" ಎಂದು ಹೇಳಿದನು.

೧೪. ಲೋಕಮಾತೇ, ನಾನು ಹೀಗೆಂದು ಕಣ್ಮರೆಯಾಗಲು ಆ ಬ್ರಹ್ಮನು ಚಿಂತಿಸುತ್ತಾ ಏನೂ ತೋಚದೆ ಸುಮ್ಮನಿದ್ದನು.

ತಾವತ್ತಸ್ಯ ಮಹಾರೋಷೋ ಬ್ರಹ್ಮಣೋಽವ್ಯಕ್ತಜನ್ಮನಃ ।
ಸಂಭೂಯತೇನ ಬಾಲಃ ಸ್ಯಾದೇಕೋ ರೋಷಾತ್ಮಸಂಭವಃ ॥ ೧೫ ॥

ಯೋ ರುದನ್ವಾರಿತಸ್ತೇನ ಬ್ರಹ್ಮಣಾವ್ಯಕ್ತಮೂರ್ತಿನಾ ।
ಬ್ರವೀತಿ ನಾಮ ಮೇ ದೇಹಿ ತಸ್ಯ ರುದ್ರೇತ್ಯಸೌ ದದೌ ॥ ೧೬ ॥

ಸೋಽಪಿ ತೇನ ಸೃಜಸ್ವೇತಿ ಪ್ರೋಕ್ತೋ ಲೋಕಮಿಮಂ ಶುಭೇ ।
ಅಶಕ್ತಃ ಸೋಽಪಿ ಸಲಿಲೇ ಮಮಜ್ಜ ತಪಸೇ ಧೃತಃ ॥ ೧೭ ॥

ತಸ್ಮಿನ್ ಸಲಿಲಮಗ್ನೇ ತು ಪುನರನ್ಯಂ ಪ್ರಜಾಪತಿಮ್ ।
ಬ್ರಹ್ಮಾ ಸಸರ್ಜ ಭೂತೇಷು ದಕ್ಷಿಣಾಂಗುಷ್ಠತಃ ಪರಮ್ ॥ ೧೮ ॥

ವಾಮೇ ಚೈವ ತಥಾಂಗುಷ್ಠೇ ತಸ್ಯ ಪತ್ನೀಮಥಾಸೃಜತ್ ॥ ೧೯ ॥

ಸ ತಸ್ಯಾಂ ಜನಯಾಮಾಸ ಮನುಂ ಸ್ವಾಯಂಭುವಂ ಪ್ರಭುಃ ।
ತಸ್ಮಾತ್ಸಂಭಾವಿತಾ ಬುದ್ಧಿಃ ಪ್ರಜಾನಾಂ ಬ್ರಹ್ಮಣಾ ಪುರಾ ॥ ೨೦ ॥

೧೫-೧೬. ಆಗ ಅವ್ಯಕ್ತಜನ್ಮನಾದ ಬ್ರಹ್ಮನಿಗೆ ಮಹಾರೋಷವುಂಟಾಯಿತು. ಆದರಿಂದ ರೋಷಾತ್ಮಸಂಭೂತನಾದ ಒಬ್ಬ ಬಾಲನು ಉದಿಸಿದನು. ಅವ್ಯಕ್ತಮೂರ್ತಿಯಾದ ಬ್ರಹ್ಮನು ಅಳುತ್ತಿರುವ ಆ ಬಾಲನನ್ನು ತಡೆಯಲು, ಅವನು "ನನಗೆ ಹೆಸರಿಡು" ಎಂದನು ಬ್ರಹ್ಮನು ರುದ್ರನೆಂದು ಹೆಸರಿಟ್ಟನು.

೧೭-೧೯. ಬ್ರಹ್ಮನು ಲೋಕವನ್ನು ಸೃಜಿಸೆಂದು ಅವನಿಗೆ ಹೇಳಿದರೂ ಅಶಕ್ತನಾಗಿ ತಪಸ್ಸನ್ನು ಕೈಕೊಂಡು ನೀರಿನಲ್ಲಿ ಮುಳುಗಿದನು. ಆಗ ಬ್ರಹ್ಮನು ತಿರುಗಿ ತನ್ನ ಬಲಗಾಲಿನ ಹೆಬ್ಬೆರಳಿನಿಂದ ಮತ್ತೊಬ್ಬ ಸೃಷ್ಟಿಕರ್ತನನ್ನೂ ಎಡಗಾಲ ಹೆಬ್ಬೆರಳಿನಿಂದ ಅವನಿಗೆ ಪತ್ನಿಯನ್ನೂ ಸೃಜಿಸಿದನು.

೨೦. ಆ ಪ್ರಭುವು ಅವಳಲ್ಲಿ ಸ್ವಾಯಂಭುವ ಮನುವನ್ನು ಪಡೆದನು. ಆ ಬ್ರಹ್ಮನಿಂದಲೇ ಪ್ರಜೆಗಳಿಗೆ ಬುದ್ಧಿಯೂ ಉಂಟಾಯಿತು.

|| ಧರಣ್ಯುವಾಚ ||

ವಿಸ್ತರೇಣ ಸಮಾಚಕ್ಷ್ವ ಆದಿಸರ್ಗಂ ಸುರೇಶ್ವರ ।
ಬ್ರಹ್ಮಾ ನಾರಾಯಣಾಖ್ಯೋಽಯಂ ಕಲ್ಪಾದೌ ಚಾಭವದ್ಯಥಾ || ೨೧ ||

|| ಶ್ರೀ ಭಗವಾನುವಾಚ ||

ಸಸರ್ಜ ಸರ್ವಭೂತಾನಿ ಯಥಾ ನಾರಾಯಣಾತ್ಮಕಃ ।
ಕಥ್ಯಮಾನಂ ಮಯಾ ದೇವಿ ತದಶೇಷಂ ಕ್ಷಿತೇ ಶೃಣು || ೨೨ ||

ಗತಕಲ್ಪಾವಸಾನೇ ತು ನಿಶಿ ಸುಪ್ತಃ ಸ್ಥಿತಃ ಶುಭೇ ।
ಸತ್ವೋದ್ರಿಕ್ತಸ್ತಥಾ ಬ್ರಹ್ಮಾ ಶೂನ್ಯಂ ಲೋಕಮವೈಕ್ಷತ || ೨೩ ||

ನಾರಾಯಣಃ ಪರೋಽಚಿಂತ್ಯಃ ಪರಾಣಾಮಪಿ ಪೂರ್ವಜಃ ।
ಬ್ರಹ್ಮಸ್ವರೂಪೋ ಭಗವಾನನಾದಿಃ ಸರ್ವಸಂಭವಃ || ೨೪ ||

ಇದಂ ಚೋದಾಹರಂತ್ಯತ್ರ ಶ್ಲೋಕಂ ನಾರಾಯಣಂ ಪ್ರತಿ ।
ಬ್ರಹ್ಮಸ್ವರೂಪಿಣಂ ದೇವಂ ಜಗತಃ ಪ್ರಭುಮವ್ಯಯಮ್ || ೨೫ ||

---

೨೧. ಭೂದೇವಿ—ಸುರೇಶ್ವರಾ, ನನಗೆ ಆದಿಸೃಷ್ಟಿಯನ್ನು ವಿವರವಾಗಿ ಹೇಳು. ನಾರಾಯಣನೆಂಬ ಹೆಸರುಳ್ಳ ಈ ಬ್ರಹ್ಮನು ಕಲ್ಪಾದಿಯಲ್ಲಿ ಹೇಗಿದ್ದನು?

೨೨. ಶ್ರೀಭಗವಂತ—ಭೂದೇವೀ, ನಾರಾಯಣಾತ್ಮಕನು ಸರ್ವಭೂತಗಳನ್ನೂ ಹೇಗೆ ಸೃಜಿಸಿದನೆಂಬುದನ್ನು ನಾನು ಹೇಳುತ್ತೇನೆ. ಕೇಳು.

೨೩. ಕಳೆದ ಕಲ್ಪದ ಕಡೆಯಲ್ಲಿ ರಾತ್ರಿ ಮಲಗಿದ್ದು, ಸತ್ವೋದ್ರೇಕಗೊಂಡ ಬ್ರಹ್ಮನು ಶೂನ್ಯವಾಗಿದ್ದ ಲೋಕವನ್ನು ನೋಡಿದನು.

೨೪. ಪರನೂ ಅಚಿಂತ್ಯನೂ ಪರಮಾತ್ಮನೂ ಬ್ರಹ್ಮಸ್ವರೂಪನೂ ಭಗವಂತನೂ ಅನಾದಿಯೂ ಆದ ನಾರಾಯಣನೇ ಸರ್ವಜನಕನು.

೨೫-೨೬. ಜಗತ್ಪ್ರಭುವೂ ಬ್ರಹ್ಮಸ್ವರೂಪಿಯೂ ನಾಶರಹಿತನೂ ಆದ ನಾರಾಯಣದೇವನ ವಿಷಯದಲ್ಲಿ, ನೀರು ನರನೆಂಬ ಪರಮಾತ್ಮನಿಂದುದಿಸಿ

ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ |
ಅಯನಂ ತಸ್ಯ ತಾಃ ಪೂರ್ವಂ ತೇನ ನಾರಾಯಣಃ ಸ್ಮೃತಃ || ೨೬ ||

ಸೃಷ್ಟಿಂ ಚಿಂತಯತಸ್ತಸ್ಯ ಕಲ್ಪಾದಿಷು ಯಥಾಪುರಾ |
ಅಬುದ್ಧಿಪೂರ್ವಕಸ್ತಸ್ಯ ಪ್ರಾದುರ್ಭೂತಸ್ತಮೋಮಯಃ || ೨೭ ||

ತಮೋ ಮೋಹೋ ಮಹಾಮೋಹಸ್ತಾಮಿಸ್ರೋ ಹ್ಯಂಧಸಂಜ್ಞಿತಃ |
ಅವಿದ್ಯಾ ಪಂಚಪರ್ವೈಷಾ ಪ್ರಾದುರ್ಭೂತಾ ಮಹಾತ್ಮನಃ || ೨೮ ||

ಪಂಚಧಾವಸ್ಥಿತಸ್ಸರ್ಗೋ ಧ್ಯಾಯತಃ ಪ್ರತಿಬೋಧವಾನ್ |
ಸ ಮುಖ್ಯಸರ್ಗೋ ವಿಜ್ಞೇಯಃ ಸರ್ಗವಿದ್ಭಿರ್ವಿಚಕ್ಷಣೈಃ || ೨೯ ||

ಪುನರನ್ಯಮಭೂತ್ತಸ್ಯ ಧ್ಯಾಯತಃ ಸರ್ಗಮುತ್ತಮಮ್ |
***ತಿರ್ಯಕ್ಸ್ರೋತಸ್ತು ವೈ ಯಸ್ಮಾತ್ತಿರ್ಯಕ್ಸ್ರೋತಸ್ತು**
ವೈಸ್ಮೃತಃ || ೩೦ ||

ದುದರಿಂದ ಅದಕ್ಕೆ ನಾರವೆಂದೂ ಅದಕ್ಕೆ ಅವನು ಆಶ್ರಯನಾದುದರಿಂದಲೂ ಆ ನೀರೇ (ನಾರವೇ) ಅವನಿಗೆ ಮೊದಲು ನೆಲೆಯಾದುದರಿಂದಲೂ ಆ ಪರಮಾತ್ಮನಿಗೆ ನಾರಾಯಣನೆಂದು ಹೆಸರು ಎಂಬರ್ಥವುಳ್ಳ ಶ್ಲೋಕವನ್ನು ಹೇಳುವರು.

೨೭-೨೮. ಮುಂಚೆ ಕಲ್ಪಾದಿಯಲ್ಲಿ ಹೇಗೋ ಹಾಗೆಯೇ ಸೃಷ್ಟಿಯನ್ನು ಯೋಚಿಸುತ್ತಿದ್ದ ಚತುರ್ಮುಖಸ್ವರೂಪಿಯಾದ ವಿಷ್ಣುವಿಗೆ ಅಬುದ್ಧಿಪೂರ್ವಕವಾಗಿ ತಮೋಮಯವಾದ ತಮಸ್ಸು, ಮೋಹ, ಮಹಾಮೋಹ, ತಾಮಿಸ್ರ, ಅಂಧತಾಮಿಸ್ರ ಎಂಬ ಐದುಬಗೆಯಾದ ಅವಿದ್ಯೆಯುಂಟಾಯಿತು.

೨೯. ಮತ್ತೂ ಯೋಚಿಸುತ್ತಲೇ ಇದ್ದ ಅವನಿಗೆ ಐದುಬಗೆಯ ಸೃಷ್ಟಿ÷ ಹೊಳೆಯಿತು. ಸೃಷ್ಟಿಯನ್ನರಿತ ವಿದ್ವಾಂಸರು ಅದನ್ನು ಮುಖ್ಯ ಸೃಷ್ಟಿಯೆಂದು ಅರಿಯಬೇಕು.

೩೦. ಇನ್ನೂ ಉತ್ತಮಸೃಷ್ಟಿಯನ್ನು ಚಿಂತಿಸುತ್ತಿದ್ದ ಆತನಿಂದ ತಿರ್ಯಕ್ಸ್ರೋತಸ್ಸೆಂಬ ಸೃಷ್ಟಿಯುಂಟಾಯಿತು. ಆದುದರಿಂದ ಅದಕ್ಕೆ ತಿರ್ಯಕ್ಸ್ರೋತವೆಂದೇ ಹೆಸರಾಯಿತು.

---

* ಸ್ರೋತಸ್ = ಇಂದ್ರಿಯ ; ನೀರಿನವೇಗ, ತಾನಾಗಿ ಹರಿಯುವಪ್ರವಾಹ

÷ ಮರ, ಗಿಡ, ಪೊದೆ, ಬಳ್ಳಿ, ಹುಲ್ಲು, ಎಂದು ಐದುಬಗೆ.

ಪಶ್ವಾದಯಸ್ತೇ ವಿಖ್ಯಾತಾಃ ಉತ್ಪಥಗ್ರಾಹಿಣಃ ಕೃತಾಃ ।
ತಮುಷ್ಯಸಾಧನಂ ಮತ್ವಾ ತಿರ್ಯಕ್ಸ್ರೋತಶ್ಚತುರ್ಮುಖಃ ॥ ೩೧ ॥

ಊರ್ಧ್ವಸ್ರೋತಸ್ತ್ರಿಧಾ ಯಸ್ತು ಸಾತ್ವಿಕೋ ಧರ್ಮವರ್ತನಃ ।
ತಥೋರ್ಧ್ವಚಾರಿಣೋ ದೇವಾ ಸರ್ವೇ ಗರ್ಭಸಮುದ್ಭವಾಃ ॥ ೩೨ ॥

ತದಾ ಸೃಷ್ಟ್ವಾನ್ಯಸರ್ಗಂ ತು ತದಾ ತಧ್ಯೌ ಪ್ರಜಾಪತಿಃ ।
ಅಸಾಧಕಾಂಸ್ತು ತಾನ್ಮತ್ವಾ ಮುಖ್ಯಸರ್ಗಾದಿಸಂಭವಾನ್ ॥ ೩೩ ॥

ತತಃ ಸ ಚಿಂತಯಾಮಾಸ ಅರ್ವಾಕ್ಸ್ರೋತಸ್ತು ಸಪ್ರಭುಃ ।
ಅರ್ವಾಕ್ಸ್ರೋತಸಿ ಚೋತ್ಪನ್ನಾ ಮನುಷ್ಯಾಃ ಸಾಧಕಾಮತಾಃ ॥ ೩೪ ॥

ತೇ ಚ ಪ್ರಕಾಶಬಹುಲಾಸ್ತಮೋದ್ರಿಕ್ತಾ ರಜೋಧಿಕಾಃ ।
ತಸ್ಮಾತ್ತೇ ದುಃಖಬಹುಲಾ ಭೂಯೋಭೂಯಶ್ಚ ಕಾರಿಣಃ ॥ ೩೫ ॥

೩೧-೩೨. ಅದರಿಂದ ಉನ್ಮಾರ್ಗಗಾಮಿಗಳಾದ ಪಶ್ವಾದಿಗಳುದಿಸಿದುವು. ಬ್ರಹ್ಮನು ಆ ತಿರ್ಯಕ್ಸ್ರೋತಸ್ಸನ್ನೂ ಅಸಾಧಕವೆಂದರಿತು, ಊರ್ಧ್ವಸ್ರೋತಸ್ಸೆಂಬ ಸೃಷ್ಟಿಯನ್ನು ಮಾಡಿದನು. ಅದು ಸಾತ್ವಿಕವಾದುದೂ ಧರ್ಮಪ್ರವರ್ತನೆಯುಳ್ಳುದೂ ಆಗಿದ್ದಿತು. ಅದರಿಂದ ಊರ್ಧ್ವಚರರೂ ಗರ್ಭಸಂಭವರೂ ಆದ ಸರ್ವದೇವತೆಗಳೂ ಉದಿಸಿದರು.

೩೩-೩೪. ಮುಖ್ಯಸರ್ಗಾದಿಯಾಗಿ ಉದಿಸಿದ ಅವೆಲ್ಲವನ್ನೂ ಅಸಾಧಕವೆಂದು ತಿಳಿದು, ಬ್ರಹ್ಮದೇವನು ಮತ್ತೆ ಯೋಚಿಸಿ, ಅರ್ವಾಕ್ಸ್ರೋತಸ್ಸನ್ನು ಸೃಜಿಸಿದನು. ಈ ಅರ್ವಾಕ್ಸ್ರೋತಸ್ಸಿನಲ್ಲಿ ಉದಿಸಿದ ಮನುಷ್ಯರು ಸಾಧಕರೆಂದೆನಿಸಿಕೊಂಡರು.

೩೫. ಆ ಮಾನವರು ಬಹು ಜ್ಞಾನವುಳ್ಳವರು (ಪ್ರಕಾಶ ಬಹುಲರು,) ತಮೋದ್ರೇಕವುಳ್ಳವರು, ರಜೋಧಿಕರು. ಆದುದರಿಂದ ಅವರು ದುಃಖಬಾಹುಳ್ಯವುಳ್ಳವರು. ಮತ್ತೆ ಮತ್ತೆ ಕರ್ಮ ಮಾಡುವರು.

ಇತ್ಯೇತೇ ಕಥಿತಾಃ ಸರ್ಗಾಃ ಷಡೇತೇ ಸುಭಗೇ ತವ ।
ಪ್ರಥಮೋ ಮಹತಃ ಸರ್ಗಸ್ತನ್ಮಾತ್ರಾಖ್ಯೋ ದ್ವಿತೀಯಕಃ ॥ ೩೬ ॥

ವೈಕಾರಿಕಸ್ತೃತೀಯಸ್ತು ಸರ್ಗಶ್ಚೇಂದ್ರಿಯಕಃ ಸ್ಮೃತಃ ।
ಇತ್ಯೇಷ ಪ್ರಾಕೃತಃ ಸರ್ಗಃ ಸಂಭೂತೋ ಬುದ್ಧಿಪೂರ್ವಕಃ ॥ ೩೭ ॥

ಮುಖ್ಯಸರ್ಗಶ್ಚತುರ್ಥಸ್ತು ಮುಖ್ಯಾ ವೈ ಸ್ಥಾವರಾಃ ಸ್ಮೃತಾಃ ।
ತಿರ್ಯಕ್ಸ್ರೋತಸ್ತು ಯಃ ಪ್ರೋಕ್ತಃ ತೈರ್ಯಕ್ಸ್ರೋತಃ ಸ
ಉಚ್ಯತೇ ॥ ೩೮ ॥

ತಥೋರ್ಧ್ವಸ್ರೋತಸಾಂ ಶ್ರೇಷ್ಠಃ ಸಪ್ತಮಃ ಸ ತು ಮಾನವಃ ।
ಅಷ್ಟಮೋಽನುಗ್ರಹಃ ಸರ್ಗಃ ಸಾತ್ವಿಕಸ್ತಾಮಸಶ್ಚ ಸಃ ॥ ೩೯ ॥

ಪಂಚೈತೇ ವೈಕೃತಾಃ ಸರ್ಗಾಃ ಪ್ರಾಕೃತಾಸ್ತು ತ್ರಯಃ ಸ್ಮೃತಾಃ ।
ಪ್ರಾಕೃತೋ ವೈಕೃತಶ್ಚೈವ ಕೌಮಾರೋ ನವಮಃ ಸ್ಮೃತಃ ॥ ೪೦ ॥

೩೬-೩೭. ಸುಂದರಿ, ಹೀಗೆ ಈ ಆರು ಸೃಷ್ಟಿಗಳನ್ನು ನಿನಗೆ ಹೇಳಿದ್ದೇನೆ. ಮೊದಲನೆಯದು ಮಹತ್ಸೃಷ್ಟಿ. ಎರಡನೆಯದು ತನ್ಮಾತ್ರವೆಂದು ಹೆಸರುಳ್ಳದು. ವೈಕಾರಿಕವೆಂಬುದು ಮೂರನೆಯದು. ಇದಕ್ಕೆ ಐಂದ್ರಿಕವೆಂದೂ ಹೆಸರು ಈ ಪ್ರಾಕೃತ ಸರ್ಗವು ಪರಬ್ರಹ್ಮನ ಬುದ್ಧಿಪೂರ್ವಕವಾಗಿ ಉದಿಸಿದುದು.

೩೮. ನಾಲ್ಕನೆಯದು ಮುಖ್ಯಸರ್ಗ. ಇದರಲ್ಲುದಿಸಿದ ಸ್ಥಾವರಗಳು ಮುಖ್ಯಗಳೆನಿಸಿಕೊಳ್ಳುವುವು. ತಿರ್ಯಕ್ಸ್ರೋತವೆಂಬುದಕ್ಕೆ ತೈರ್ಯಕ್ಸ್ರೋತವೆಂದೂ ಹೆಸರುಂಟು. ಇದು ಐದನೆಯ ಸೃಷ್ಟಿ.

೩೯. ಆರನೆಯ ಊರ್ಧ್ವಸ್ರೋತಸ್ಸು (ದೇವತೆ) ಗಳಿಗಿಂತಲೂ, ಏಳನೆಯ (ಅರ್ವಾಕ್ಸ್ರೋತಸ್ಸಿನ) ಮನುಷ್ಯರು ಉತ್ತಮರು. ಎಂಟನೆಯದಾದ ಅನುಗ್ರಹ ಸೃಷ್ಟಿಯು ಸಾತ್ವಿಕವೂ, ತಾಮಸವೂ ಆದುದು.

೪೦. ಇವೈದೂ ವೈಕೃತಸರ್ಗಗಳೆನಿಸಿಕೊಳ್ಳುವುವು. ಮೊದಲನೆಯ ಮೂರೂ (ಮಹದಾದಿಗಳು) ಪ್ರಾಕೃತಸೃಷ್ಟಿಯೆನಿಸಿಕೊಳ್ಳುವುವು. ಪ್ರಾಕೃತವೂ, ವೈಕೃತವೂ ಆದ ಕೌಮಾರವು ಒಂಬತ್ತನೆಯದು.

---

* ಕಥಿತಾಃ

ಇತ್ಯೇತೇ ವೈ ಸಮಾಖ್ಯಾತಾ ನವ ಸರ್ಗಾಃ ಪ್ರಜಾಪತೇಃ ।
ಪ್ರಾಕೃತಾ ವೈಕೃತಾಶ್ಚೈವ ಜಗತೋ ಮೂಲಹೇತವಃ ॥
ಇತ್ಯೇತೇ ಕಥಿತಾಃ ಸರ್ಗಾಃ ಕಿಮನ್ಯಚ್ಛ್ರೋತುಮಿಚ್ಛಸಿ ॥ ೪೧ ॥

ಅತಸ್ಥಿತಿಃ—

॥ ಧರಣ್ಯುವಾಚ ॥

ನವಧಾ ಸೃಷ್ಟಿರುತ್ಪನ್ನಾ ಬ್ರಹ್ಮಣೋವ್ಯಕ್ತಜನ್ಮನಃ ।
ಕಥಂ ಸಾ ವವೃಧೇ ದೇವ ಏತನ್ಮೇ ಕಥಯಾಚ್ಯುತ ॥ ೪೨ ॥

॥ ವರಾಹ ಉವಾಚ ॥

ಪ್ರಥಮಂ ಬ್ರಹ್ಮಣಾ ಸೃಷ್ಟಾ ರುದ್ರಾದ್ಯಾಸ್ತು ತಪೋಧನಾಃ ।
ಸನಕಾದಯಸ್ತತಃ ಸೃಷ್ಟಾ ಮರೀಚ್ಯಾದಯ ಏವ ಚ ॥ ೪೩ ॥

ಮರೀಚಿರತ್ರಿಶ್ಚ ತಥಾ ಅಂಗಿರಾಃ ಪುಲಹಃ ಕ್ರತುಃ ।
ಪುಲಸ್ತ್ಯಶ್ಚ ಮಹಾತೇಜಾಃ ಪ್ರಚೇತಾ ಭೃಗುರೇವ ಚ ॥
ನಾರದೋ ದಶಮಶ್ಚೈವ ವಸಿಷ್ಠಶ್ಚ ಮಹಾತಪಾಃ ॥ ೪೪ ॥

---

೪೧. ಪ್ರಾಕೃತವೈಕೃತಗಳೂ, ಕೌಮಾರವೂ ಕೂಡಿ ಒಂಬತ್ತು ಬಗೆಯಾದ ಬ್ರಹ್ಮನ ಸೃಷ್ಟಿಗಳು ಜಗತ್ತಿಗೆ ಮೂಲಕಾರಣಗಳು ಹೀಗೆ ಸೃಷ್ಟಿಗಳನ್ನು ಹೇಳಿದೆನು. ಮತ್ತೇನನ್ನು ಕೇಳಲು ಬಯಸುವೆ ?

ಇನ್ನು ಸ್ಥಿತಿಯ ವಿಚಾರ—

೪೨. ಭೂದೇವಿ—ದೇವನೇ, ಅಚ್ಯುತ, ಅವ್ಯಕ್ತ ಜನ್ಮನಾದ ಬ್ರಹ್ಮನಿಂದ ಒಂಬತ್ತು ಬಗೆಯಾಗಿ ಆದ ಸೃಷ್ಟಿಯು ಹೇಗೆ ಬೆಳೆಯಿತು ಎಂಬುದನ್ನು ನನಗೆ ಹೇಳು.

೪೩-೪೪. ವರಾಹ—ಬ್ರಹ್ಮನು ಮೊದಲು ರುದ್ರರೇ ಮೊದಲಾದ ತಪೋಧನರನ್ನೂ, ಬಳಿಕ ಸನಕಾದಿಗಳನ್ನೂ, ಮರೀಚ್ಯಾದಿಗಳನ್ನೂ ಸೃಷ್ಟಿಸಿದನು. ಮರೀಚಿ, ಅತ್ರಿ, ಅಂಗಿರಸ್ಸು, ಪುಲಹ, ಕ್ರತು, ಪುಲಸ್ತ್ಯ, ಮಹಾತೇಜನಾದ ಪ್ರಚೇತಸ್ಸು, ಭೃಗು, ನಾರದ, ಮಹಾತಪಸ್ವಿಯಾದ ವಸಿಷ್ಠ ಈ ಹತ್ತು ಮಂದಿಯೂ ಮರೀಚ್ಯಾದಿಗಳು.

ಸನಕಾದಯೋ ನಿವೃತ್ತ್ಯಾಖ್ಯೇ ತೇನ ಧರ್ಮೇ ಪ್ರಯೋಜಿತಾಃ |
ಪ್ರವೃತ್ತ್ಯಾಖ್ಯೇ ಮರೀಚ್ಯಾದ್ಯಾ ಮುಕ್ತ್ವೈಕಂ ನಾರದಂ ಮುನಿಮ್ || ೪೫ ||

ಯೋಽಸೌ ಪ್ರಜಾಪ್ರತಿಸ್ತ್ವಾದ್ಯೋ ದಕ್ಷಿಣಾಂಗುಷ್ಠಸಂಭವಃ |
ತಸ್ಮಾದೌ ತತ್ರ ವಂಶೇ ತು ಜಗದೇತಚ್ಚರಾಚರಮ್ || ೪೬ ||

ದೇವಾಶ್ಚ ದಾನವಾಶ್ಚೈವ ಗಂಧರ್ವೋಽರಗಪಕ್ಷಿಣಃ |
ಸರ್ವೇ ದಕ್ಷಸ್ಯ ಕನ್ಯಾಸು ಜಾತಾಃ ಪರಮಧಾರ್ಮಿಕಾಃ || ೪೭ ||

|| ಅಥ ರುದ್ರಸರ್ಗಃ ||

ಯೋಽಸೌ ರುದ್ರೇತಿ ವಿಖ್ಯಾತಃ ಪುತ್ರಃ ಕ್ರೋಧಸಮುದ್ಭವಃ |
ಭ್ರುಕುಟೀ ಕುಟಿಲಾತ್ತಸ್ಯ ಲಲಾಟಾತ್ಪರಮೇಷ್ಠಿನಃ || ೪೮ ||

ಅರ್ಧನಾರೀನರವಪುಃ ಪ್ರಚಂಡೋಽತಿ ಭಯಂಕರಃ |
ವಿಭಜಾತ್ಮಾನಮಿತ್ಯುಕ್ತ್ವಾ ಬ್ರಹ್ಮಾ ಚಾಂತದರ್ಧೇ ಪುನಃ || ೪೯ ||

---

೪೫. ಸನಕಾದಿಗಳನ್ನು ನಿವೃತ್ತಿ (ವಿರಕ್ತಿ) ಧರ್ಮದಲ್ಲಿಯೂ, ನಾರದನೊಬ್ಬನನ್ನುಳಿದು ಮರೀಚ್ಯಾದಿಗಳೆಲ್ಲರನ್ನೂ ಪ್ರವೃತ್ತಿ (ಲೋಕವ್ಯಾಪಾರ) ಧರ್ಮದಲ್ಲಿಯೂ, ಆ ಬ್ರಹ್ಮನೇ ನಿಯಮಿಸಿದನು.

೪೬-೪೭. ಅವನ ಬಲಗಾಲ ಹೆಬ್ಬೆರಳಿನಿಂದುದಿಸಿದ ಮೊದಲನೆಯ ಬ್ರಹ್ಮನ ವಂಶದಲ್ಲಿ ಚರಾಚರಗಳಿಂದ ಕೂಡಿದ ಈ ಜಗತ್ತೂ, ಪರಮಧಾರ್ಮಿಕರೂ, ದೇವದಾನವಗಂಧರ್ವೋರಗಪಕ್ಷಿಗಳೂ, ದಕ್ಷಪುತ್ರಿಯರಲ್ಲುದಿಸಿದರು.

ಇನ್ನು ರುದ್ರಸೃಷ್ಟಿಯ ವಿಚಾರ—

೪೮-೪೯. ಹುಬ್ಬುಗಂಟುಹಾಕಿಕೊಂಡ ಬ್ರಹ್ಮನ ಕೋಪದಿಂದ ಅವನ ಹಣೆಯಲ್ಲುದಿಸಿದ ರುದ್ರನೆಂದು ಪ್ರಸಿದ್ಧನೂ, ಅರ್ಧನಾರೀನರದೇಹವುಳ್ಳವನೂ ಪ್ರಚಂಡನೂ, ಅತಿಭಯಂಕರನೂ, ಆದ ಮಗನಿಗೆ 'ನಿನ್ನನ್ನು ವಿಭಾಗಿಸು' ಎಂದು ಹೇಳಿ, ಬ್ರಹ್ಮನು ಮತ್ತೆ ಕಣ್ಮರೆಯಾದನು.

ತಥೋಕ್ತೋಽಸೌ ದ್ವಿಧಾ ಸ್ತ್ರೀತ್ವಂ ಪುರುಷತ್ವಂ ಚಕಾರ ಸಃ ।
ಬಿಭೇದ ಪುರುಷತ್ವಂ ಚ ದಶಧಾ ಚೈಕಧಾ ಚ ಸಃ ॥ ೫೦ ॥

ತತಸ್ತ್ವೇಕಾದಶ ಖ್ಯಾತಾಃ ರುದ್ರಾ ಬ್ರಹ್ಮಸಮುದ್ಭವಾಃ ।
ಅಯಮುದ್ದೇಶತಃ ಪ್ರೋಕ್ತೋ ರುದ್ರಸರ್ಗೋ ಮಯಾನಘೇ ॥ ೫೧ ॥

॥ ಅಥ ಯುಗಮಾಹಾತ್ಮ್ಯಂ ॥

ಇದಾನೀಂ ಯುಗಮಾಹಾತ್ಮ್ಯಂ ಕಥಯಾಮಿ ಸಮಾಸತಃ ॥ ೫೨ ॥

ಕೃತಂ ತ್ರೇತಾದ್ವಾಪರಶ್ಚ ಕಲಿಶ್ಚೇತಿ ಚತುರ್ಯುಗಮ್ ॥ ೫೩ ॥

ಏತಸ್ಮಿನ್ಯೇ ಮಹಾಸತ್ವಾ ರಾಜಾನೋ ಭೂರಿದಕ್ಷಿಣಾಃ ।
ದೇವಾಸುರಾಶ್ಚ ಯೇ ಚಕ್ರುಃ ಧರ್ಮಂ ಕರ್ಮ ಚ ತಚ್ಛೃಣು ॥ ೫೪ ॥

೫೦-೫೧. ಬ್ರಹ್ಮನಿಂದ ಹಾಗೆ ಹೇಳಿಸಿಕೊಂಡ ರುದ್ರನು, ತನ್ನ ಸ್ತ್ರೀಪುರುಷ ರೂಪಗಳನ್ನು ಎರಡಾಗಿ ವಿಭಾಗಮಾಡಿ, ಮತ್ತೆ ಪುರುಷರೂಪವನ್ನು ಹನ್ನೊಂದು ಭಾಗವಾಗಿ ಬೇರ್ಪಡಿಸಿದನು. ಆದುದರಿಂದ ಬ್ರಹ್ಮನಿಂದುದಿಸಿದವರು ಏಕಾದಶ (ಹನ್ನೊಂದುಜನ) ರುದ್ರರೆಂದು ಪ್ರಸಿದ್ಧರಾದರು. ಪಾಪರಹಿತೆಯೇ, ಈ ರುದ್ರ ಸೃಷ್ಟಿಯನ್ನು ನಾನು ಉದ್ದೇಶ ಪೂರ್ವಕವಾಗಿ ಹೇಳಿದೆನು.

೫೨. ಇನ್ನು ಯುಗಮಹಿಮೆ—ಈಗ ಯುಗಮಹಿಮೆಯನ್ನು ಸಂಗ್ರಹ ವಾಗಿ ಹೇಳುತ್ತೇನೆ.

೫೩-೫೪. ಕೃತ, ತ್ರೇತಾ, ದ್ವಾಪರ, ಕಲಿ ಎಂದು ನಾಲ್ಕು ಯುಗಗಳು. ಇದರಲ್ಲಿ ಮಹಾಸತ್ವರೂ, ಬೇಕಾದಹಾಗೆ ದಕ್ಷಿಣೆ ಕೊಡುವವರೂ ಆದ ಯಾವ ರಾಜರೂ, ದೇವಾಸುರರೂ ಧರ್ಮಕರ್ಮವನ್ನು ಮಾಡಿದರೋ ಅದನ್ನು ಕೇಳು.

ಆಸೀತ್ಪ್ರಥಮಕಲ್ಪೇತು ಮನುಃ ಸ್ವಾಯಂಭುವಃ ಪುರಾ ।
ತಸ್ಯ ಪುತ್ರದ್ವಯಂ ಜಜ್ಞೇ ಅತಿಮಾನುಷಚೇಷ್ಟಿತಮ್ ॥ ೫೫ ॥

ಪ್ರಿಯವ್ರತೋತ್ತಾನಪಾದನಾಮಾನಂ ಧರ್ಮವತ್ಸಲಮ್ ।
ತತ್ರ ಪ್ರಿಯವ್ರತೋ ರಾಜಾ ಮಹಾಯಜ್ವಾ ತಪೋಬಲಃ ॥ ೫೬ ॥

ಸ ಚೇಷ್ಟ್ವಾ ವಿವಿಧೈರ್ಯಜ್ಞೈಃ ವಿಪುಲೈರ್ಭೂರಿದಕ್ಷಿಣೈಃ ।
ಸಪ್ತದ್ವೀಪೇಷು ಸಂಸ್ಥಾಪ್ಯ ಭರತಾದೀನ್ ಸುತಾನ್ನಿಜಾನ್ ।
ಸ್ವಯಂ ವಿಶಾಲಾಂ ವರದಾಂ ಗತ್ವಾತೇಪೇ ಮಹತ್ತಪಃ ॥ ೫೭ ॥

ತಸ್ಮಿನ್ ಸ್ಥಿತಸ್ಯ ತಪಸಿ ರಾಜ್ಞೋ ವೈ ಚಕ್ರವರ್ತಿನಃ ।
ಉಪೇಯಾನ್ನಾರದಸ್ತತ್ರ ದಿದೃಕ್ಷುರ್ಧರ್ಮಚಾರಿಣಮ್ ॥ ೫೮ ॥

ಸ ದೃಷ್ಟ್ವಾ ನಾರದಂ ವ್ಯೋಮ್ನಿ ಜ್ವಲದ್ಭಾಸ್ಕರತೇಜಸಂ ।
ಅಭ್ಯುತ್ಥಾನೇನ ರಾಜೇಂದ್ರ ಉತ್ತಸ್ಥೌ ಹರ್ಷಿತಸ್ತದಾ ॥ ೫೯ ॥

೫೫-೫೭. ಹಿಂದೆ ಮೊದಲನೆಯ ಕಲ್ಪದಲ್ಲಿ ಸ್ವಾಯಂಭುವನೆಂಬ ಮನು ಇದ್ದನು. ಅವನಿಗೆ, ಮನುಷ್ಯರಿಗಸಾಧ್ಯವಾದ ಕೆಲಸವನ್ನು ಮಾಡುವವರೂ, ಧರ್ಮಾಸಕ್ತರೂ ಆದ ಪ್ರಿಯವ್ರತ, ಉತ್ತಾನಪಾದರೆಂಬ ಇಬ್ಬರು ಗಂಡುಮಕ್ಕಳುದಿಸಿದರು. ಅವರಲ್ಲಿ ಮಹಾಯಜ್ವನೂ, ತಪೋಬಲವುಳ್ಳವನೂ, ಆದ ಪ್ರಿಯವ್ರತರಾಜನು ಬಹು ದಕ್ಷಿಣೆಯುಳ್ಳ ಬಗೆಬಗೆಯ ಮಹಾಯಜ್ಞಗಳನ್ನು ಮಾಡಿ, ಸಪ್ತದ್ವೀಪಗಳಲ್ಲಿ ಭರತನೇ ಮೊದಲಾದ ತನ್ನ ಮಕ್ಕಳನ್ನು ನೆಲೆಗೊಳಿಸಿ. ತಾನು, ವರಪ್ರದವಾದ ವಿಶಾಲೆ (ಉಜ್ಜಯಿನಿ) ಗೆ ಹೋಗಿ, ಮಹಾತಪಸ್ಸನ್ನು ಮಾಡಿದನು.

೫೮. ಒಂದು ದಿನ ತಪಸ್ಸಿನಲ್ಲಿದ್ದ ಚಕ್ರವರ್ತಿಯಾದ ಪ್ರಿಯವ್ರತನ ಹತ್ತಿರಕ್ಕೆ ಧರ್ಮಾಚರಣೆಯಲ್ಲಿದ್ದ ಅವನನ್ನು ನೋಡುವುದಕ್ಕಾಗಿ ನಾರದನು ಬಂದನು.

೫೯. ಹೊಳೆಯುವ ಸೂರ್ಯನಂತೆ ತೇಜಸ್ವಿಯಾದ ನಾರದನನ್ನು ಆಕಾಶದಲ್ಲಿ ಬರುವಾಗಲೇ ಕಂಡು, ಸಂತಸಗೊಂಡ ಆ ರಾಜೇಂದ್ರನು ಎದ್ದು, ಇದಿರುಗೊಂಡನು.

ತಸ್ಯಾಸನಂ ಚ ಪಾದ್ಯಂ ಚ ಸಮ್ಯಕ್ ಕೃತ್ವಾ ನಿವೇದ್ಯ ವೈ ।
ಸ್ವಾಗತಾದಿಭಿರಾಲಾಪೈಃ ಪರಸ್ಪರಮುಪೋಚತಾಮ್ ॥ ೬೦ ॥

ಕಥಾಂತೇ ನಾರದಂ ರಾಜಾ ಪಪ್ರಚ್ಛ ಬ್ರಹ್ಮವಾದಿನಮ್ ॥ ೬೧ ॥

॥ ಪ್ರಿಯವ್ರತ ಉವಾಚ ॥

ಭಗವನ್ ಕಿಂಚಿದಾಶ್ಚರ್ಯಮಸ್ಮಿನ್ ಕೃತಸಂಜ್ಞಿತೇ ।
ಯುಗೇ ದೃಷ್ಟಂ ಶ್ರುತಂ ಚಾಪಿ ತನ್ಮೇ ಕಥಯ ನಾರದ ॥ ೬೨ ॥

॥ ನಾರದ ಉವಾಚ ॥

ಆಶ್ಚರ್ಯಮೇಕಂ ದೃಷ್ಟಂ ಮೇ ತಚ್ಛೃಣುಷ್ವ ಪ್ರಿಯವ್ರತ ।
ಹ್ಯಸ್ತನೇಹನಿ ರಾಜೇಂದ್ರ ಶ್ವೇತಾಖ್ಯಂ ಗತವಾನಹಮ್ ॥ ೬೩ ॥

ದ್ವೀಪಂ ತತ್ರ ಸರೋದೃಷ್ಟಂ ಫುಲ್ಲಪಂಕಜಮಾಲಿನಃ ।
ಸರಸಸ್ತಸ್ಯ ತೀರೇ ತು ಕುಮಾರೀಂ ಪೃಥುಲೋಚನಾಮ್ ॥ ೬೪ ॥

ದೃಷ್ಟ್ವಾಹಂ ವಿಸ್ಮಯಾಪನ್ನಸ್ತಾಂ ಕನ್ಯಾಮಾಯತೇಕ್ಷಣಾಮ್ ।
ಪೃಷ್ಟವಾನಸ್ಮಿ ರಾಜೇಂದ್ರ ತದಾ ಮಧುರಭಾಷಿಣೀಮ್ ॥ ೬೫ ॥

೬೦-೬೧. ಅವನ ಸುಖಾಗಮಾದಿಗಳನ್ನು ಕೇಳಿ, ಅರ್ಘ್ಯಪಾದ್ಯಪೀಠಾದಿಗಳಿಂದುಪಚರಿಸಿ, ಮಾತನಾಡುತ್ತಿದ್ದು, ಕಡೆಯಲ್ಲಿ ಬ್ರಹ್ಮವಾದಿಯಾದ ಆ ನಾರದನನ್ನು ಮುಂದಿನಂತೆ ಕೇಳಿದನು.

೬೨. ಪ್ರಿಯವ್ರತ—ಪೂಜ್ಯನಾದ ನಾರದನೇ, ಈ ಕೃತಯುಗದಲ್ಲಿ ನೀನು ನೋಡಿದ ಅಥವಾ ಕೇಳಿದ ಯಾವುದಾದರೂ ಆಶ್ಚರ್ಯವನ್ನು ನನಗೆ ಹೇಳು.

೬೩-೬೬. ನಾರದ—ಪ್ರಿಯವ್ರತನೇ, ನಾನು ನೋಡಿದ ಆಶ್ಚರ್ಯವೊಂದನ್ನು ಕೇಳು. ರಾಜೇಂದ್ರಾ, ನಾನು ನೆನ್ನೆಯ ದಿನ ಶ್ವೇತವೆಂಬ ದ್ವೀಪಕ್ಕೆ ಹೋಗಿದ್ದೆನು. ಅಲ್ಲಿ ಅರಳಿದ ತಾವರೆಗಳಿಂದೊಪ್ಪುವ ಸರೋವರದ ದಡದಲ್ಲಿ ವಿಶಾಲಾಕ್ಷಿಯಾದ ಕನ್ನೆಯೊಬ್ಬಳನ್ನು ಕಂಡು ಆಶ್ಚರ್ಯಗೊಂಡು, ಮಧುರಭಾಷಿಣಿ

ಕಾಸಿ ಭದ್ರೇ ಕಥಂ ವಾಸಿ ಕಿಂ ವಾ ಕಾರ್ಯಮಿಹ ತ್ವಯಾ ।
ಕರ್ತವ್ಯಂ ಚಾರುಸರ್ವಾಂಗಿ ತನ್ಮಮಾಚಕ್ಷ್ವ ಶೋಭನೇ ॥ ೧೬ ॥

ಏವಮುಕ್ತಾ ಮಯಾ ಸಾಹಿ ಮಾಂ ದೃಷ್ಟ್ವಾನಿಮಿಷೇಕ್ಷಣಾ ।
ಸ್ಮೃತ್ವಾ ತೂಷ್ಣೀಂ ಸ್ಥಿತಾ ಯಾವತ್ತಾವನ್ಮೇ ಜ್ಞಾನಮುತ್ತಮಮ್ ॥ ೧೭ ॥

ವಿಸ್ಮೃತಂ ಸರ್ವವೇದಾಶ್ಚ ಸರ್ವಶಾಸ್ತ್ರಾಣಿ ಚೈವ ಹಿ ।
ಯೋಗಶಾಸ್ತ್ರಾಣಿ ಶಿಕ್ಷಾಶ್ಚ ವೇದಾನಾಂ ಸ್ಮೃತಯಸ್ತಥಾ ॥ ೧೮ ॥

ಸರ್ವಂ ದೃಷ್ಟ್ವೈವ ಮೇ ರಾಜನ್ ಕುಮಾರ್ಯಾಪಹೃತಂಕ್ಷಣಾತ್ ।
ತತೋಽಹಂ ವಿಸ್ಮಯಾವಿಷ್ಟಶ್ಚಿಂತಾಶೋಕ ಸಮನ್ವಿತಃ ॥ ೧೯ ॥

ತಾಮೇವ ಶರಣಂ ಗತ್ವಾ ಯಾವತ್ಪಶ್ಯಾಮಿ ಪಾರ್ಥಿವ ।
ತಾವದ್ದಿವ್ಯಃ ಪುಮಾಂಸ್ತಸ್ಯಾಃ ಶರೀರೇ ಸಮದೃಶ್ಯತ ॥ ೨೦ ॥

ಯಾದ ಅವಳನ್ನು ‘ಭದ್ರೇ, ನೀನು ಯಾರು? ಇಲ್ಲಿ ಹೇಗಿದ್ದೀಯೆ? ಇಲ್ಲಿ ಮಾಡುವುದೇನು? ಹೇಳು.’ ಎಂದು ಕೇಳಿದೆನು.

೧೭. ಹೀಗೆ ನಾನು ಕೇಳಲು ಅವಳು ಎವೆಯಿಕ್ಕದೆ ನನ್ನನ್ನು ನೋಡಿ, ಯೋಚಿಸುತ್ತಾ ಸುಮ್ಮನಿರಲು, ನನ್ನ ಉತ್ತಮವಾದ ಜ್ಞಾನವು ನನಗೆ ಮರೆತುಹೋಯಿತು.

೧೮-೨೦. ನನ್ನ ಸರ್ವವೇದಶಾಸ್ತ್ರಗಳನ್ನೂ, ಯೋಗಶಾಸ್ತ್ರಗಳನ್ನೂ, ಶಿಕ್ಷೆಗಳನ್ನೂ, ವೇದಸ್ಮೃತಿಗಳನ್ನೂ, ನೋಡಿದಮಾತ್ರದಿಂದಲೇ ಆ ಕನ್ಯೆಯು ಕ್ಷಣದೊಳಗೆ ಅಪಹರಿಸಿಬಿಟ್ಟಳು. ಬಳಿಕ ನಾನು ಆಶ್ಚರ್ಯಗೊಂಡು, ಚಿಂತೆಯಿಂದಲೂ, ದುಃಖದಿಂದಲೂ ಕೂಡಿ, ಅವಳನ್ನೇ ಮರೆಹೊಕ್ಕು, ಮತ್ತೆ ನೋಡಲು, ಅವಳ ದೇಹದಲ್ಲಿ ದಿವ್ಯ ಪುರುಷನೊಬ್ಬನು ಕಾಣಿಸಿದನು.

ತಸ್ಯಾಪಿ ಪುಂಸೋ ಹೃದಯೇ ತ್ವಪರಸ್ತಸ್ಯ ಚೋರಸಿ ।
ಅನ್ಯೋ ರಕ್ತೇಕ್ಷಣಃ ಶ್ರೀಮಾನ್ ದ್ವಾದಶಾದಿತ್ಯಸನ್ನಿಭಃ ॥ ೨೧ ॥

ಏವಂ ದೃಷ್ಟ್ವಾಃ ಪುಮಾಂಸೋತ್ರ ತ್ರಯಃ ಕನ್ಯಾಶರೀರಗಾಃ ।
ಕ್ಷಣೇನ ತತ್ರ ಕನ್ಯೈಕಾ ನ ತಾನ್ಪಶ್ಯಾಮಿ ಸುವ್ರತ ॥ ೨೨ ॥

ತತಃ ಪೃಷ್ಟಾ ಮಯಾ ದೇವೀ ಸಾಕುಮಾರೀ ಕಥಂ ಮಮ ।
ವೇದಾ ನಷ್ಟಾ ಮಮಾಚಕ್ಷ್ವ ಭದ್ರೇ ತನ್ನಾಶಕಾರಣಮ್ ॥ ೨೩ ॥

॥ ಕನ್ಯೋವಾಚ ॥

ಮಾತಾಹಂ ಸರ್ವವೇದಾನಾಂ ಸಾವಿತ್ರೀನಾಮ ನಾಮತಃ ।
ಮಾಂ ನ ಜಾನಾಸಿ ಯೇನ ತ್ವಂ ತತೋ ವೇದಾ ಹತಾಸ್ತವ ॥ ೨೪ ॥

ಏವಮುಕ್ತೇ ತಯಾ ರಾಜನ್ ವಿಸ್ಮಯೇನ ತಪೋಧನ ।
ಪೃಷ್ಟಾ ತ ಏತೇ ಪುರುಷಾ ಏತತ್ಕಥಯ ಶೋಭನೇ ॥ ೨೫ ॥

---

೨೧. ಆ ದಿವ್ಯಪುರುಷನೆದೆಯಲ್ಲಿ ಮತ್ತೊಬ್ಬನೂ, ಆತನೆದೆಯಲ್ಲಿ ಕೆಂಗಣ್ಣುಳ್ಳವನೂ ಶ್ರೀಮಂತನೂ ದ್ವಾದಶಾದಿತ್ಯಸದೃಶನೂ ಆದ ಇನ್ನೊಬ್ಬನೂ ಕಾಣಿಸಿದರು.

೨೨-೨೩. ಎಲೈ ಸುವ್ರತನೇ ಹೀಗೆ ಆ ಕನ್ಯೆಯ ದೇಹದಲ್ಲಿ ಕಂಡ ಮೂವರು ಪುರುಷರೂ ಕ್ಷಣಮಾತ್ರದಲ್ಲಿ ಕಾಣಿಸಲೇ ಇಲ್ಲ. ಮತ್ತೆ ಆ ಕನ್ಯೆಯೊಬ್ಬಳೇ ಆದಳು. ಬಳಿಕ ನಾನು ದೇವಿಯಾದ ಆ ಕನ್ನೆಯನ್ನು "ಭದ್ರೇ! ನನ್ನ ವೇದಗಳು ಹೇಗೆ ಏಕೆ ನಷ್ಟವಾದುವುವೆಂಬುದನ್ನು ಹೇಳು." ಎಂದು ಕೇಳಿದೆನು.

೨೪. ಕನ್ಯೆಯು—ನಾನು ಸರ್ವದೇವಗಳ ಜನನಿ. ನನಗೆ ಸಾವಿತ್ರಿಯೆಂದು ಹೆಸರು. ನೀನು ನನ್ನನ್ನು ತಿಳಿಯದುದರಿಂದಲೇ ನಿನಗೆ ವೇದಗಳು ಮರೆತು ಹೋದುವು. ಎಂದಳು.

೨೫. ರಾಜರ್ಷಿಯೇ ಅವಳು ಹೀಗೆನಲು ನಾನು ಆಶ್ಚರ್ಯದಿಂದ "ಮಂಗಳಾಂಗೀ, ಈ ಪುರುಷರಾರು ? ಹೇಳು" ಎಂದೆನು.

|| ಕನ್ಯೋವಾಚ ||

ಯ ಏಷ ಮಚ್ಛರೀರಸ್ಥಃ ಸರ್ವಾಂಗಶ್ಚಾರುಶೋಭನಃ |
ಏಷ ಋಗ್ವೇದನಾಮಾ ತು ವೇದೋ ನಾರಾಯಣಃ ಸ್ವಯಮ್ |
ವಹ್ನೀಭೂತೋ ದಹತ್ಯಾಶು ಪಾಪಾನ್ಯುಚ್ಚಾರಣಾದನು || ೭೬ ||

ಏತಸ್ಯ ಹೃದಯೇ ಯೋಽಯಂ ದೃಷ್ಟ ಆಸೀತ್ತ್ವಯಾತ್ಮಜಃ |
ಸ ಯಜುರ್ವೇದರೂಪೇಣ ಸ್ಥಿತೋ ಬ್ರಹ್ಮಾ ಮಹಾಬಲಃ || ೭೭ ||

ತಸ್ಯಾಪ್ಯುರಸಿ ಸಂವಿಷ್ಟೋ ಯ ಏಷ ಶುಚಿರುಜ್ವಲಃ |
ಸ ಸಾಮವೇದನಾಮಾತು ರುದ್ರರೂಪೀ ವ್ಯವಸ್ಥಿತಃ || ೭೮ ||

ಏಷ ಆದಿತ್ಯವತ್ಪಾಪಾನ್ಯಾಶು ನಾಶಯತೇ ಸ್ಮೃತಃ || ೭೯ ||

ಏತೇ ತ್ರಯೋ ಮಹಾವೇದಾ ಬ್ರಹ್ಮನ್ದೇವಾಸ್ತ್ರಯಃ ಸ್ಮೃತಾಃ ।
ಏತೇ ವರ್ಣಾ ಅಕಾರಾದ್ಯಾಃ ಸವನಾನ್ಯತ್ರ ನ್ಯೈ ದ್ವಿಜ || ೮೦ ||

೭೬-೭೭. ಕನ್ನೆಯು :—ನನ್ನ ದೇಹದಲ್ಲಿರುವ ಸರ್ವಾಂಗಸುಂದರನಾದ ಇವನು ಋಗ್ವೇದವೆಂದು ಹೆಸರುಳ್ಳ ಸಾಕ್ಷಾನ್ನಾರಾಯಣನು. ಹೆಸರು ಹೇಳಿದ ಮಾತ್ರಕ್ಕೇ ಅಗ್ನಿಯಂತೆ ಪಾಪಗಳನ್ನು ಬೇಗನೆ ಸುಡುವನು. ಇವನೆದೆಯಲ್ಲಿ ನೀನು ನೋಡಿದ ಮಗನು ಯಜುರ್ವೇದ ರೂಪದಿಂದಿರುವ ಮಹಾಬಲನಾದ ಬ್ರಹ್ಮನು.

೭೮. ಬ್ರಹ್ಮನೆದೆಯಲ್ಲಿರುವ ಶುಚಿಯೂ ಪ್ರಕಾಶಮಾನನೂ ಆದ ಇವನು ಸಾಮವೇದವೆಂದು ಹೆಸರುಳ್ಳ ರುದ್ರನು.

೭೯. ಇವನು ಸ್ಮರಿಸಿದರೆ ಸೂರ್ಯನಂತೆ ಪಾಪಗಳನ್ನು ಬೇಗನೆ ಹಾಳುಮಾಡುತ್ತಾನೆ.

೮೦. ಬ್ರಹ್ಮನೇ, ಈ ಮೂರು ಮಹಾವೇದಗಳನ್ನೂ ಮೂವರು ದೇವರೆಂದು ಹೇಳುವರು. ಅಕಾರಾದಿಯಾದ ಈ ವರ್ಣಗಳು * ಸವನಗಳು.

---

* ಸವನ = ಸೋಮಲತೆಯರಸ ಹಿಂಡುವುದು, ಸ್ನಾನ.

ಏತತ್ಸರ್ವಂ ಸಮಾಸೇನ ಕಥಿತಂ ತೇ ದ್ವಿಜೋತ್ತಮ ।
ಗೃಹಾಣ ವೇದಾನ್ ಶಾಸ್ತ್ರಾಣಿ ಸರ್ವಜ್ಞತ್ವಂ ಚ ನಾರದ ॥ ೮೧ ॥

'ಏತಸ್ಮಿನ್ ವೇದಸರಸಿ ಸ್ನಾನಂ ಕುರು ಮಹಾದ್ವಿಜ ।
ಕೃತೇ ಸ್ನಾನೇಽನ್ಯಜನ್ಮೀಯಂ ಯೇನ ಸ್ಮರಸಿ ಸತ್ತಮ ॥ ೮೨ ॥

ಏವಮುಕ್ತ್ವಾ ತಿರೋಭಾವಂ ಗತಾ ಕನ್ಯಾ ನರಾಧಿಪ ।
ಅಹಂ ತತ್ರ ಕೃತಸ್ನಾನಃ ತ್ವಾಂ ದಿದೃಕ್ಷುರಿಹಾಗತಃ ॥ ೮೩ ॥

ಇತಿ ಶ್ರೀ ವರಾಹಪುರಾಣೇ ಆದಿಭೂತಸೃಷ್ಟಿಸ್ಥಿತಿಯುಗಮಾಹಾತ್ಮ್ಯ-
ವರ್ಣನಂ ನಾಮ ದ್ವಿತೀಯೋಽಧ್ಯಾಯಃ

---

೮೧. ದ್ವಿಜೋತ್ತಮನಾದ ನಾರದನೇ, ಇದೆಲ್ಲವನ್ನೂ ನಿನಗೆ ಸಂಗ್ರಹವಾಗಿ ಹೇಳಿದ್ದೇನೆ. ವೇದಶಾಸ್ತ್ರಗಳನ್ನೂ ಸರ್ವಜ್ಞತೆಯನ್ನೂ ಪಡೆ.

೮೨. ಈ ವೇದಸರೋವರದಲ್ಲಿ ಸ್ನಾನಮಾಡು. ಮಾಡಿದರೆ ಬೇರೆಯ ಜನ್ಮದ್ದನ್ನೂ ಜ್ಞಾಪಿಸಿಕೊಳ್ಳುವೆ.

೮೩. ಹೀಗೆ ಹೇಳಿ, ಆ ಕನ್ನೆಯು ಕಣ್ಮರೆಯಾದಳು. ರಾಜನೇ ನಾನು ಆ ಸರೋವರದಲ್ಲಿ ಸ್ನಾನಮಾಡಿ, ನಿನ್ನನ್ನು ನೋಡಲು ಇಲ್ಲಿಗೆ ಬಂದೆನು.

ಅಧ್ಯಾಯದ ಸಾರಾಂಶ :—

ಭೂದೇವಿಯ ಸ್ತೋತ್ರದಿಂದ ಸಂತುಷ್ಟನಾದ ವಿಷ್ಣುವು ಮತ್ತೆ ವರಾಹರೂಪದಿಂದ ಕಾಣಿಸಿಕೊಂಡು ಆಕೆಗೆ ಪುರಾಣಗಳ ಸಾಧಾರಣ ಲಕ್ಷಣಗಳನ್ನು ಹೇಳುವನು. ಬಳಿಕ ಸರ್ಗ ಅಥವಾ ಸೃಷ್ಟಿಯ ವಿಚಾರವನ್ನೂ, ಸ್ಥಿತಿವಿಚಾರವನ್ನೂ ರುದ್ರಸನಕಾದಿಗಳ ಮತ್ತು ಮರೀಚ್ಯಾದಿಗಳ ಉತ್ಪತ್ತಿಯನ್ನೂ, ದಕ್ಷಕನ್ಯೆಯರಲ್ಲಿ ದೇವದಾನವಗಂಧರ್ವೋರಗಾದಿಗಳ ಉತ್ಪತ್ತಿಯನ್ನೂ, ಏಕಾದಶರುದ್ರೋತ್ಪತ್ತಿ, ಯುಗಮಹಿಮೆ, ಸ್ವಾಯಂಭುವ ಮನುವಿನ ಪುತ್ರನಾದ ಪ್ರಿಯವ್ರತ ರಾಜನ ಸಭೆಗೆ ನಾರದನು ಬಂದುದು, ಅವನು ಸಂದರ್ಶಿಸಿದ ವೇದಮಾತೆಯಾದ ಸಾವಿತ್ರೀ ದೇವಿಯ ವಿಚಾರ, ಅವಳಿಂದ ವೇದಾದಿಗಳನ್ನು ಪಡೆದುದು, ಇವುಗಳನ್ನೂ ಹೇಳುವಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಎರಡನೆಯ ಅಧ್ಯಾಯ.

|| ಶ್ರೀಃ ||

-X-

ತೃತೀಯೋಽಧ್ಯಾಯಃ

ಅಥ ನಾರದಪ್ರಾಗ್ಜನ್ಮವೃತ್ತಾಂತಃ

|| ಪ್ರಿಯವ್ರತ ಉವಾಚ ||

ಅನ್ಯಸ್ಮಿನ್ ಭಗವನ್ ಜನ್ಮನ್ಯಾಸೀದ್ಯತ್ತ್ವದ್ವಿಚೇಷ್ಟಿತಮ್ |
ಸರ್ವಂ ಕಥಯ ದೇವರ್ಷೇ ಮಹತ್ಕೌತೂಹಲಂ ಹಿ ಮೇ || ೧ ||

|| ನಾರದ ಉವಾಚ ||

ಸ್ನಾತಸ್ಯ ಮಮ ರಾಜೇಂದ್ರ ತಸ್ಮಿನ್ವೇದಸರಸ್ಯಥ |
ಸಾವಿತ್ರ್ಯಾಶ್ಚ ವಚಃ ಶ್ರುತ್ವಾ ತಸ್ಮಿನ್‌ಜನ್ಮಸಹಸ್ರಿಕಮ್ ||
ಸ್ಮರಣಂ ತತ್‌ಕ್ಷಣಾಜ್ಜಾತಂ ಶೃಣು ಜನ್ಮಾಂತರಂ ಮಮ || ೨ ||

ಮೂರನೆಯ ಅಧ್ಯಾಯ

ನಾರದನ ಪೂರ್ವಜನ್ಮ ವೃತ್ತಾಂತ

೧. ಪ್ರಿಯವ್ರತ—ಪೂಜ್ಯನಾದ ದೇವರ್ಷಿಯೇ, ಬೇರೆಯ ಜನ್ಮದಲ್ಲಿ ನೀನೇನು ಮಾಡಿದೆಯೋ ಅದೆಲ್ಲವನ್ನೂ ನನಗೆ ಹೇಳು. ನನಗೆ ಕೇಳಲು ಬಹಳ ಕುತೂಹಲವಾಗಿದೆ.

೨. ನಾರದ—ರಾಜೇಂದ್ರನೇ, ಸಾವಿತ್ರಿಯ ಮಾತನ್ನು ಕೇಳಿ ಆ ವೇದ ಸರೋವರದಲ್ಲಿ ಸ್ನಾನಮಾಡಿದ ನನಗೆ ಕೂಡಲೇ ಸಾವಿರಾರು ಜನ್ಮಗಳ ಜ್ಞಾಪಕವೂ ಉಂಟಾಯಿತು. ನನ್ನ ಜನ್ಮಾಂತರವೊಂದರ ವಿಚಾರವನ್ನು ಕೇಳು.

ಅಸ್ತ್ಯವಂತೀಪುರಂ ರಾಜಂಸ್ತತ್ರಾಹಂ ಪ್ರಾಗ್ದ್ವಿಜೋತ್ತಮಃ ।
ನಾಮ್ನಾ ಸಾರಸ್ವತಃ ಪೂರ್ವಂ ವೇದವೇದಾಂಗಪಾರಗಃ ॥ ೩ ॥

ಬಹುಭೃತ್ಯಪರೀವಾರೋ ಬಹುಧಾನ್ಯಶ್ಚ ಪಾರ್ಥಿವ ।
ಅನ್ಯಸ್ಮಿನ್ ಕೃತಸಂಜ್ಞೇತು ಯುಗೇ ಪರಮಬುದ್ಧಿಮಾನ್ ॥ ೪ ॥

ತತೋ ಧ್ಯಾತಂ ಮಯೈಕಾಂತೇ ಕಿಮನೇನ ಕರೋಮ್ಯಹಮ್ ।
ದ್ವಂದ್ವೇನ ಸರ್ವಮೇತದ್ಧಿ ನ್ಯಸ್ಯ ಪುತ್ರೇಷು ಯಾಮ್ಯಹಮ್ ॥
ತಪಸೇ ಧೃತಸಂಕಲ್ಪಃ ಸರಃ ಸಾರಸ್ವತಂ ದ್ರುತಮ್ ॥ ೫ ॥

ಏವಂ ಚಿಂತ್ಯ ಮಯಾ ಪೃಷ್ಟಃ ಕರ್ಮಕಾಂಡೇನಕೇಶವಃ ।
ಶ್ರಾದ್ಧೈಶ್ಚ ಪಿತರೋ ದೇವಾ ಯಜ್ಞೈಶ್ಚಾನ್ಯೇ ತಥಾ ಜನಾಃ ॥ ೬ ॥

ತತೋಽಹಂ ನಿರ್ಗತೋ ರಾಜನ್ ತಪಸೇ ಧೃತಮಾನಸಃ ।
ಸಾರಸ್ವತಂ ನಾಮ ಸರೋ ಯದೇತತ್ಪುಷ್ಕರಂ ಸ್ಮೃತಂ ॥ ೭ ॥

೩-೪. ಅವಂತೀಪುರವೆಂಬುದೊಂದು ಊರಿದೆ. ನಾನು ಅಲ್ಲಿ ಪೂರ್ವದ ಕೃತಯುಗದಲ್ಲಿ ವೇದವೇದಾಂಗ ಪಾರಂಗತನೂ ಬಹು ಸೇವಕ ಪರಿವಾರವುಳ್ಳವನೂ ಧಾನ್ಯಸಂಪತ್ತುಳ್ಳವನೂ, ಬಹು ಬುದ್ಧಿವಂತನೂ ಆದ ಸಾರಸ್ವತನೆಂಬ ಹೆಸರಿನ ಬ್ರಾಹ್ಮಣನಾಗಿದ್ದೆನು.

೫. ನಾನು, ಮನಸ್ಸಿನಲ್ಲಿ " ಈ (ದ್ವಂದ್ವ) ವಿಷಯ ಸುಖದಿಂದ ನನಗೇನು ಪ್ರಯೋಜನ ! ಇದೆಲ್ಲವನ್ನೂ ಮಕ್ಕಳಿಗೆ ವಹಿಸಿ, ತಪಸ್ಸಿಗೆ ಮನಸ್ಸನ್ನು ದೃಢಮಾಡಿ ಸಾರಸ್ವತ ಸರೋವರಕ್ಕೆ ಬೇಗನೆ ಹೋಗುತ್ತೇನೆ. "

೬. ಹೀಗೆಂಬುದಾಗಿ ಯೋಚಿಸಿ ಕರ್ಮ(ಕಾಂಡ) ಸಮೂಹದಿಂದ ವಿಷ್ಣುವನ್ನೂ ಶ್ರಾದ್ಧಗಳಿಂದ ಪಿತೃಗಳನ್ನೂ ಯಜ್ಞಗಳಿಂದ ದೇವತೆಗಳನ್ನೂ ಇತರ ಜನರನ್ನೂ ತೃಪ್ತಿಪಡಿಸಿದೆನು.

೭. ರಾಜನೇ, ಬಳಿಕ ನಾನು ತಪಸ್ಸಿಗೆ ಮನಸ್ಸುಮಾಡಿ, ಈಗ ಪುಷ್ಕರವೆಂದು ಕರೆಯುವ ಈ ಸಾರಸ್ವತ ಸರೋವರಕ್ಕೆ ಹೊರಟೆನು.

ತತ್ರ ಗತ್ವಾ ಮಯಾ ವಿಷ್ಣುಃ ಪುರಾಣಃ ಪುರುಷಃ ಶಿವಃ ।
ಆರಾಧಿತೋ ಮಯಾ ಭಕ್ತ್ಯಾ ಜಪಂ ನಾರಾಯಣಾತ್ಮಕಂ ॥ ೮ ॥

ಬ್ರಹ್ಮಪಾರಮಯಂ ರಾಜನ್ ಜಪತಾ ಪರಮಸ್ತವಂ ।
ತತೋ ಮೇ ಭಗವಾಂಸ್ತುಷ್ಟಃ ಪ್ರತ್ಯಕ್ಷತ್ವಂ ಜಗಾಮ ಹ ॥ ೯ ॥

॥ ಪ್ರಿಯವ್ರತ ಉವಾಚ ॥

ಕೀದೃಶಂ ಬ್ರಹ್ಮಪಾರಂತು ಶ್ರೋತುಮಿಚ್ಛಾಮಿ ಸತ್ತಮ ।
ಕಥಯಸ್ವ ಪ್ರಸಾದೇನ ದೇವರ್ಷೇ ಸುಪ್ರಸನ್ನಧೀಃ ॥ ೧೦ ॥

॥ ನಾರದ ಉವಾಚ ॥

ಪರಂ ಪರಾಣಾಮಮೃತಂ ಪುರಾಣಂ
ಪಾರಂಪರಂ ವಿಷ್ಣುಮನಂತವೀರ್ಯಂ ।
ನಮಾಮಿ ನಿತ್ಯಂ ಪುರುಷಂ ಪುರಾಣಂ
ಪರಾಯಣಂ ಪಾರಗತಂ ಪರಾಣಾಂ ॥ ೧೧ ॥

೮-೯. ಅಲ್ಲಿಗೆ (ಸಾರಸ್ವತ ಸರೋವರಕ್ಕೆ) ಹೋಗಿ ಭಕ್ತಿಯಿಂದ ನಾರಾಯಣಾತ್ಮಕವೂ, ಬ್ರಹ್ಮಪಾರಮಯವೂ ಆದ ಪರಮಸ್ತುತಿಯನ್ನು ಜಪಿಸಿ, ಪುರಾಣಪುರುಷನೂ, ಶಿವನೂ ಆದ ವಿಷ್ಣುವನ್ನು ತೃಪ್ತಿಗೊಳಿಸಿದೆನು. ಬಳಿಕ ನನಗೊಲಿದ ಭಗವಂತನು ಪ್ರತ್ಯಕ್ಷನಾದನು.

೧೦. ಪ್ರಿಯವ್ರತ—ಸಜ್ಜನೋತ್ತಮಾ, ದೇವಮುನಿಯೆ. ಬ್ರಹ್ಮಪಾರವೆಂಬುದು ಎಂತಹುದು ? ಸುಪ್ರಸನ್ನನಾಗಿ ದಯೆಯಿಟ್ಟು ಹೇಳು. ಕೇಳಬೇಕೆನಿಸುತ್ತದೆ.

೧೧. ನಾರದ—ಬ್ರಹ್ಮಾದಿಗಳಿಗಿಂತಲೂ ಶ್ರೇಷ್ಠನೂ, ನಾಶರಹಿತನೂ, ಪುರಾತನನೂ, ಸಂಸಾರಮಾರ್ಗದ ಉತ್ಕೃಷ್ಟವಾದ ಬೇರೆಯ ದಡವೂ, ಅನಂತವೀರ್ಯನೂ, ವ್ಯಾಸಾದಿಗಳಿಂದ ರಚಿತವಾದ ಪುರಾಣ (ಪ್ರತಿಪಾದ್ಯ) ನಾಯಕನೂ, ಇತರರಲ್ಲಿ ಅಂತರ್ಯಾಮಿಯೂ, ಸಂಸಾರ ಬಂಧನವಿಲ್ಲದವನೂ ಆದ ವಿಷ್ಣುವನ್ನು ಯಾವಾಗಲೂ ನಮಸ್ಕರಿಸುತ್ತೇನೆ.

ಪುರಾತನಂ ತ್ವಪ್ರತಿಮಂ ಪುರಾಣಂ
ಪರಾಪರಂ ಪಾರಗಮುಗ್ರತೇಜಸಂ ।
ಗಂಭೀರಗಂಭೀರಧಿಯಾಂ ಪ್ರಧಾನಂ
ನತೋಽಸ್ಮಿ ದೇವಂ ಹರಿಮೀಶಿತಾರಂ ॥ ೧೨ ॥

ಪರಾತ್ಪರಂ ಚಾಪರಮಂ ಪ್ರಧಾನಂ
ಪರಾಸ್ಪದಂ ಶುದ್ಧಪದಂ ವಿಶಾಲಂ ।
ಪರಾತ್ಪರೇಶಂ ಪುರುಷಂ ಪುರಾಣಂ
ನಾರಾಯಣಂ ಸ್ತೌಮಿ ವಿಶುದ್ಧಭಾವಃ ॥ ೧೩ ॥

ಪುರಾ ಪುರಂ + ಶೂನ್ಯಮಿದಂ ಸಸರ್ಜ
ತದಾ ಸ್ಥಿತತ್ವಾತ್ಪುರುಷಃ ಪ್ರಧಾನಂ ।
ಜನೇ ಪ್ರಸಿದ್ಧಃ ಶರಣಂ ಮಮಾಸ್ತು
ನಾರಾಯಣೋ ವೀತಮಲಃ ಪುರಾಣಃ ॥ ೧೪ ॥

---

೧೨. ಹಿಂದಿನಿಂದ ಇರುವವನೂ, ಅಸದೃಶನೂ, ಪರಾತ್ಪರನೂ, ಉಗ್ರತೇಜನೂ, ಸರ್ವವಿದ್ಯಾಪಾರಂಗತನೂ, ಅತಿಗಂಭೀರ ಬುದ್ಧಿಯುಳ್ಳವರಲ್ಲಿ ಮುಖ್ಯನೂ, ಈಶ್ವರ (ಆಳುವವ) ನೂ, ಆದ ಹರಿಯನ್ನು ವಂದಿಸುತ್ತೇನೆ.

೧೩. ಪರಾತ್ಪರನೂ, ತನಗಿಂತ ಉತ್ತಮರಿಲ್ಲದವನೂ, ಜಗನ್ಮೂಲನೂ, ಉತ್ಕೃಷ್ಟವೂ, ಪರಿಶುದ್ಧವೂ ಆದ ಸ್ಥಾನವುಳ್ಳವನೂ, ಶುದ್ಧಪದನೂ, * ವಿಶಾಲನೂ, ಶ್ರೇಷ್ಠರಾದ ದೇವರಿಗೂ ಶ್ರೇಷ್ಠನಾದ ಪ್ರಭುವೂ, ಪುರಾಣ ಪುರುಷನೂ ಆದ ನಾರಾಯಣನನ್ನು ಪರಿಶುದ್ಧಭಾವವುಳ್ಳವನಾಗಿ ಸ್ತುತಿಸುತ್ತೇನೆ.

೧೪. ತಾನು ಆಗಲೂ ಇದ್ದುದರಿಂದ* ಪೂರ್ವದಲ್ಲಿ ಶೂನ್ಯವಾಗಿದ್ದ ಈ ಮುಖ್ಯಪುರವನ್ನು + ಸೃಷ್ಟಿಸಿದವನೂ, ಜನಪ್ರಸಿದ್ಧನೂ, ಪುರಾಣಪುರುಷನೂ, ನಿರ್ಮಲನೂ, ಆದ ನಾರಾಯಣನು ನನಗೆ ರಕ್ಷಕನಾಗಲಿ.

---

* ಪದ= ಕಿರಣ, ಶಬ್ದ, ಉದ್ಯೋಗ, ರಕ್ಷಣೆ, ಶ್ಲೋಕ.

+ ಪುರ= ಪಟ್ಟಣ, ದೇಹ, ಮನೆ, ಲೋಕ.

ಪಾರಂ ಪರಂ ವಿಷ್ಣುಮಪಾರರೂಪಂ
ಪುರಾತನಂ ನೀತಿಮತಾಂ ಪ್ರಧಾನಂ ।
ಧೃತಕ್ಷಮಂ ಶಾಂತಿಧರಂ ಕ್ಷಿತೀಶಂ
ಶುಭಂ ಸದಾ ಸ್ತೌಮಿ ಮಹಾನುಭಾವಂ ॥ ೧೫ ॥

ಸಹಸ್ರಮೂರ್ಧಾನಮನಂತಪಾದಂ
ಅನಂತಬಾಹುಂ ಶಶಿಸೂರ್ಯನೇತ್ರಂ ।
ತಮಕ್ಷರಂ ಕ್ಷೀರಸಮುದ್ರನಿದ್ರಂ
ನಾರಾಯಣಂ ಸ್ತೌಮ್ಯಮೃತಂ ಪರೇಶಂ ॥ ೧೬ ॥

---

೧೫. ಗುರುಪರಂಪರೆಯ ಉಪದೇಶ ಪ್ರಾಪ್ತವಾದ ರಹಸ್ಯವಸ್ತುವೂ, ಅಪರಿಮಿತಪರಿಮಾಣರೂಪನೂ, ಅಥವಾ ಅಪೂರ್ವವಾದ ಯಜ್ಞಕರ್ಮಾದಿಗಳಿಗೆ ಸ್ವಕೀರ್ತನಾದಿಗಳಿಂದ ಪರಿಪೂರ್ಣತೆಯನ್ನುಂಟುಮಾಡುವವನೂ, ಪುರಾತನನೂ, ನೀತಿವಂತರಲ್ಲಿ ಅಗ್ರಗಣ್ಯನೂ, ಭೂಧರನೂ, ಕ್ಷಮಾವಂತನೂ, ಶಾಂತನೂ, ಕ್ಷಿತೀಶನೂ, ಮಹಾನುಭಾವನೂ ಆದ ವಿಷ್ಣುವನ್ನು ಯಾವಾಗಲೂ ಸ್ತುತಿಸುತ್ತೇನೆ.

೧೬. ಸಾವಿರ ತಲೆಗಳೂ ಅನಂತವಾದ ಪಾದಗಳೂ, ತೋಳುಗಳೂ, ಚಂದ್ರಸೂರ್ಯರೆಂಬ ಕಣ್ಣುಗಳೂ (ಉಳ್ಳ) ಇರುವ ÷ ಅಕ್ಷರನೂ, ಅಮೃತನೂ, ಪರಮೇಶ್ವರನೂ, ಕ್ಷೀರಸಮುದ್ರಶಾಯಿಯೂ ಆದ ನಾರಾಯಣನನ್ನು ಸ್ತೋತ್ರಮಾಡುತ್ತೇನೆ.

÷. ಅಕ್ಷರ= ಓಂಕಾರ, ಧರ್ಮ, ಯಜ್ಞ, ಮೋಕ್ಷ.

ತ್ರಿವೇದಗಮ್ಯಂ ತ್ರಿನವೈಕಮೂರ್ತಿಂ
ತ್ರಿಶುಕ್ಲಸಂಸ್ಥಂ ತ್ರಿಹುತಾಶಭೇದಂ ।
ತ್ರಿತತ್ವಲಕ್ಷ್ಯಂ ತ್ರಿಯುಗಂ ತ್ರಿನೇತ್ರಂ
ನಮಾಮಿ ನಾರಾಯಣಮಪ್ರಮೇಯಂ ॥ ೧೭ ॥

ಕೃತೇ ಸಿತಂ ರಕ್ತತನುಂ ತಥಾ ಚ ।
ತ್ರೇತಾಯುಗೇ ಪೀತತನುಂ ಪುರಾಣಂ ।
ತಥಾ ಹರಿಂ ದ್ವಾಪರತಃ ಕಲೌ ಚ
ಕೃಷ್ಣೀಕೃತಾತ್ಮಾನಮಥೋ ನಮಾಮಿ ॥ ೧೮ ॥

---

೧೭. ಋಗ್ಯಜುಸ್ಸಾಮಗಳೆಂಬ ಮೂರು ವೇದಗಳಿಂದ ಅರಿಯಬಹುದಾದವನೂ, ದ್ವಾದಶಮೂರ್ತಿಯೂ, ಕ್ಷೀರಸಮುದ್ರ ಶ್ವೇತದ್ವೀಪ ಶುಷ್ಟಸತ್ವಮಯವಾದ ಪರಮಪದಗಳೆಂಬ ಮೂರು ಶುಭ್ರವಾದೆಡೆಗಳಲ್ಲಿರುವನೂ ದಕ್ಷಿಣಾಗ್ನಿ ಗಾರ್ಹಪತ್ಯ ಆಹವನೀಯ ಎಂಬ ಅಗ್ನಿತ್ರಯರೂಪನೂ, ತತ್ವತ್ರಯ * ವೇದ್ಯನೂ, ಯುಗತ್ರಯರೂಪನೂ, ಅಳತೆಗೆ ಸಿಕ್ಕದವನೂ ಆದ ನಾರಾಯಣನನ್ನು ನಮಸ್ಕರಿಸುತ್ತೇನೆ.

೧೮. ಕೃತಯುಗದಲ್ಲಿ ಬೆಳ್ಳಗಿರುವ ದೇಹವನ್ನೂ, ತ್ರೇತಾಯುಗದಲ್ಲಿ ಕೆಂಪಾದ ದೇಹವನ್ನೂ, ದ್ವಾಪರಯುಗದಲ್ಲಿ ಹಳದಿಯ ಬಣ್ಣದ ದೇಹವನ್ನೂ, ಕಲಿಯುಗದಲ್ಲಿ ಕಪ್ಪಾದ ದೇಹವನ್ನೂ, ಧರಿಸಿರುವ ಪುರಾಣಪುರುಷನನ್ನು ನಮಸ್ಕರಿಸುತ್ತೇನೆ.

---

* ತತ್ವತ್ರಯ= ಚಿತ್, ಅಚಿತ್, ಈಶ್ವರ,

ಸಸರ್ಜ ಯೋ ವಕ್ತ್ರತ ಏವ ವಿಪ್ರಾನ್
ಭುಜಾಂತರೇ ಕ್ಷತ್ರಮಥೋರು ಯುಗ್ಮೇ ।
ವಿಶಃ ಪದಾಗ್ರೇಷು ತಥೈವ ಶೂದ್ರಾನ್
ನಮಾಮಿ ತಂ ವಿಶ್ವತನುಂ ಪುರಾಣಂ ॥ ೧೯ ॥

ಪರಾತ್ಪರಂ ಪಾರಗತಂ ಪ್ರಮೇಯಂ
ಯುಧಾಂಪತಿಂ ಕಾರ್ಯತ ಏವ ಕೃಷ್ಣಂ
ಗದಾಸಿಚರ್ಮಾರ್ಯಮ್ಯತೋತ್ಥಪಾಣಿಂ
ನಮಾಮಿನಾರಾಯಣಮಪ್ರಮೇಯಂ ॥ ೨೦ ॥

ಇತಿಸ್ತುತೋ ದೇವವರಃ ಪ್ರಸನ್ನಃ
ಜಗಾದ ಮಾಂ ನೀರದತುಲ್ಯಘೋಷಃ ।
ವರಂ ವೃಣೀಷ್ವೇತ್ಯಸಕೃತ್ತತೋಽಹಂ
ತಸ್ಯೈವ ದೇಹೇ ಲಯಮಿಷ್ಟವಾಂಶ್ಚ ॥ ೨೧ ॥

---

೧೯. ತನ್ನ ಮುಖದಿಂದ ಬ್ರಾಹ್ಮಣರನ್ನೂ, ಬಾಹುಗಳಿಂದ ಕ್ಷತ್ರಿಯ ರನ್ನೂ, ತೊಡೆಗಳಿಂದ ವೈಶ್ಯರನ್ನೂ, ಕಾಲುಗಳ ತುದಿಗಳಿಂದ ಶೂದ್ರರನ್ನೂ ಸೃಷ್ಟಿಸಿದ ವಿಶ್ವಮೂರ್ತಿಯಾದ ಪುರಾಣಪುರುಷನನ್ನು ನಮಸ್ಕರಿಸುತ್ತೇನೆ.

೨೦. ಪರಾತ್ಪರನೂ, ಲೋಕಾತೀತನೂ, ರಾಮಕೃಷ್ಣಾದ್ಯವತಾರಗಳಿಂದ (ಪ್ರಮೇಯನೂ) ವರ್ಣನ ಸಾಧ್ಯನೂ, ರಾಕ್ಷಸನಾಶಕ್ಕಾಗಿ ಯುದ್ಧವೀರಾಗ್ರಗಣ್ಯನೂ, ಕಾರ್ಯದಿಂದ *ಕೃಷ್ಣನೆನಿಸಿಕೊಂಡಿರುವವನೂ, ಶಂಖಚಕ್ರಗದಾ ಖಡ್ಗ ಖೇಟಹಸ್ತನೂ, ಅಳತೆಗಸವಳನೂ ಆದ ನಾರಾಯಣನನ್ನು ನಮಸ್ಕರಿಸುತ್ತೇನೆ.

೨೧. ಹೀಗೆ ಸ್ತುತನಾದ ದೇವೋತ್ತಮನು ಪ್ರಸನ್ನನಾಗಿ ಗುಡುಗಿನಂತೆ ಗಂಭೀರವಾದ ದನಿಯಿಂದ 'ವರವನ್ನು ಬೇಡು' ಎಂದು ನನಗೆ ಹಲವು ಬಾರಿ ಹೇಳಿದನು. ನಾನು ಆತನ ದೇಹದಲ್ಲಿಯೇ ಐಕ್ಯವನ್ನು ಬಯಸಿದೆನು.

---

* ಕೃಷ್ಣ = ಸಕಲಲೋಕಕ್ಕೂ ಸುಖವನ್ನುಂಟುಮಾಡುವವನು.

ಇತಿ ಶ್ರುತ್ವಾ ವಚೋ ಮಹ್ಯಂ ದೇವದೇವಸ್ಸನಾತನಃ ।
ಉವಾಚ ಪ್ರಕೃತಿಂ ಗಚ್ಛ ವಿಪ್ರೈತತ್ತು ಪ್ರಯೋಜನಂ ॥ ೨೨ ॥

ನಾರಂ ಪಾನೀಯಮಿತ್ಯುಕ್ತಂ ಪಿತೄಣಾಂ ತದ್ದದೌ ಭವಾನ್ ।
ತದಾಪ್ರಭೃತಿ ತೇ ನಾಮ ನಾರದೇತಿ ಭವಿಷ್ಯತಿ ॥ ೨೩ ॥

ಏವಮುಕ್ತ್ವಾ ಗತೋ ದೇವಃ ಸದ್ಯೋಽದರ್ಶನಮುಚ್ಚಕೈಃ ।
ಅಹಂ ಕಲೇವರಂ ತ್ಯಕ್ತ್ವಾ ಕಾಲೇನ ತಪಸಾ ತದಾ ॥
ಬ್ರಹ್ಮಲೋಕೇ ಲಯಂ ಪ್ರಾಪ್ತಃ ತದೋತ್ಪತ್ತಿಂ ಚ ಪಾರ್ಥಿವ ॥ ೨೪ ॥

ದಿವಸಶ್ಚ ಪುನಃ ಸೃಷ್ಟಃ ದಶಭಿಸ್ತನಯೈಃ ಸಹ ।
ದಿನಾದಿರ್ಯೋಽಹಿ ದೇವಸ್ಯ ಬ್ರಹ್ಮಣೋಽವ್ಯಕ್ತಜನ್ಮನಃ ॥ ೨೫ ॥

ಸ ಸೃಷ್ಟ್ಯಾದಿಃ ಸಮಸ್ತಾನಾಂ ದೇವಾದೀನಾಂ ನ ಸಂಶಯಃ ।
ಸರ್ವಸ್ಯ ಜಗತಃ ಸೃಷ್ಟಿರೇಷ್ವೈವ ಪ್ರಭುರ್ಧರ್ಮತಃ ॥ ೨೬ ॥

೨೨-೨೩. ಸನಾತನನಾದ ದೇವದೇವನು ಈ ಮಾತನ್ನು ಕೇಳಿ "ಬ್ರಾಹ್ಮಣನೇ, ಪ್ರಕೃತಿಯನ್ನು ಪಡೆ. ಇದರಿಂದ ಪ್ರಯೋಜನವುಂಟು ನಾರವೆಂದರೆ ನೀರು. ನೀನು ಪಿತೃಗಳಿಗೆ ಅದನ್ನು ಕೊಟ್ಟೆ. ಅದು ಮೊದಲು ಗೊಂಡು ನಿನಗೆ ನಾರದನೆಂದು ಹೆಸರಾಗಿದೆ."

೨೪-೨೬. ಹೀಗೆಂದು ಗಟ್ಟಿಯಾಗಿ ಹೇಳಿ ಆ ದೇವದೇವನು ಕೂಡಲೇ ಕಣ್ಮರೆಯಾದನು. ನಾನು ಕಾಲನಂತರದಲ್ಲಿ ತಪಸ್ಸಿನಿಂದ ದೇಹವನ್ನು ಬಿಟ್ಟು ಬ್ರಹ್ಮಲೋಕದಲ್ಲಿ ಲೀನನಾಗಿದ್ದು ಮತ್ತೆ ಅವ್ಯಕ್ತಜನ್ಮನಾದ ಬ್ರಹ್ಮನಿಗೆ ಹಗಲಿನ ಆದಿಯು ಯಾವುದೋ ಅದರಲ್ಲಿ ಹುಟ್ಟಿ, ಹತ್ತುಜನ ಮಕ್ಕಳುಳ್ಳವನಾದೆನು. ಅದೇ, ದೇವಾದಿಗಳಾದೆಲ್ಲರ ಸೃಷ್ಟಿಯು ಮೊದಲೆಂಬುದರಲ್ಲಿ ಸಂದೇಹವಿಲ್ಲ. ಸಮಸ್ತವಾದ ಈ ಜಗತ್ಸೃಷ್ಟಿಯೂ ಸರ್ವೇಶ್ವರನ ಶಕ್ತಿಯಿಂದಲೇ ಉಂಟಾದುದು.

ಏತನ್ಮೇ ಪ್ರಾಕೃತಂ ಜನ್ಮ ಯನ್ಮಾಂ ಪೃಚ್ಛಸಿ ಪಾರ್ಥಿವ ।
ಯಸ್ಮಾನ್ನಾರಾಯಣಂ ಧ್ಯಾತ್ವಾ ಪ್ರಾಪ್ತೋಽಸ್ಮಿ ಗುರುತಾಂ ನೃಪ ॥ ೨೭ ॥

ತಸ್ಮಾತ್ತ್ವಮಪಿ ರಾಜೇಂದ್ರ ಭವ ವಿಷ್ಣುಪರಾಯಣಃ ॥ ೨೮ ॥

ಇತಿ ಶ್ರೀ ವರಾಹಪುರಾಣೇ ಆದಿಭೂತವೃತ್ತಾಂತೇ ನಾರದ ಪ್ರಾಗ್ಜನ್ಮ ವೃತ್ತಾಂತನಿರೂಪಣಂನಾಮ ತೃತೀಯೋಽಧ್ಯಾಯಃ

೨೭-೨೮. ರಾಜನೇ, ಇದೇ, ನೀನು ಕೇಳಿದ ನನ್ನ ಪೂರ್ವಜನ್ಮ. ಇದರಿಂದಲೇ ನಾರಾಯಣನನ್ನು ಧ್ಯಾನಿಸಿ ಗುರುತ್ವವನ್ನು ಪಡೆದಿದ್ದೇನೆ. ಆದುದರಿಂದ ರಾಜೇಂದ್ರನೇ, ನೀನೂ ವಿಷ್ಣುಪರಾಯಣನಾಗು.

ಅಧ್ಯಾಯದ ಸಾರಾಂಶ—

ಪ್ರಿಯವ್ರತರಾಜನು ನಾರದನನ್ನು "ಪೂಜ್ಯನೇ, ನಿನ್ನ ಪೂರ್ವಜನ್ಮ ವೃತ್ತಾಂತವನ್ನು ಹೇಳು" ಎಂದು ಪ್ರಾರ್ಥಿಸಿದನು. ನಾರದನು, ಸಾವಿತ್ರಿಯ ಮಾತಿನಂತೆ ವೇದಸರೋವರದ ಸ್ನಾನದಿಂದ ತನಗೆ ಪೂರ್ವಜನ್ಮದ ಸ್ಮರಣೆ ಯುಂಟಾದುದನ್ನೂ, ತಾನು ಪೂರ್ವದಲ್ಲಿ ಅವಂತಿಯಲ್ಲಿ ವೇದವೇದಾಂಗ ಪಾರಂಗತನೂ, ಐಶ್ವರ್ಯವಂತನೂ, ಆದ ಬ್ರಾಹ್ಮಣನಾಗಿದ್ದು, ಕಡೆಗೆ ವಿರಕ್ತಿಯಿಂದ ಸಾರಸ್ವತ (ಪುಷ್ಕರ) ಸರೋವರಕ್ಕೆ ಹೋಗಿ, ಅಲ್ಲಿ ಭಕ್ತಿಯಿಂದ ವಿಷ್ಣುವನ್ನು ಬ್ರಹ್ಮಪಾರಸ್ತೋತ್ರದಿಂದ ಸ್ತುತಿಸಿ ಸಂತೋಷಪಡಿಸಿದುದನ್ನೂ, ಆ ಸ್ತೋತ್ರವನ್ನೂ, ಪ್ರತ್ಯಕ್ಷನಾದ ವಿಷ್ಣುವಿನ ದೇಹದಲ್ಲಿ ತನಗೆ ಐಕ್ಯವನ್ನು ಬಯಸಿ ಆ ವರವನ್ನೂ, ನಾರದನೆಂಬ ಹೆಸರನ್ನೂ ಆತನಿಂದ ಪಡೆದುದನ್ನೂ, ಕಾಲಾಂತರದಲ್ಲಿ ಬ್ರಹ್ಮಲೋಕದಲ್ಲಿದ್ದು ಮತ್ತೆ ಬ್ರಹ್ಮನ ಹಗಲಿನಲ್ಲಿ ಭೂಮಿಯಲ್ಲಿ ಉದಿಸಿದುದನ್ನೂ ಹೇಳಿದನು. ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಮೂರನೆಯ ಅಧ್ಯಾಯ.

|| ಶ್ರೀಃ ||

—x—

ಚತುರ್ಥೋಽಧ್ಯಾಯಃ

ಅಥ ನಾರಾಯಣವ್ಯಾಪಕತ್ವಂ

|| ಧರಣ್ಯುವಾಚ ||

ಯೋಽಸೌ ನಾರಾಯಣೋ ದೇವಃ ಪರಮಾತ್ಮಾ ಸನಾತನಃ ।
ಭಗವಾನ್ ಸರ್ವಭಾವೇನ ಉತಾಹೋ ನೇತಿ ಶಂಸ ಮೇ || ೧ ||

|| ವರಾಹ ಉವಾಚ ||

ಮತ್ಸ್ಯಃ ಕೂರ್ಮೋ ವರಾಹಶ್ಚ ನರಸಿಂಹೋಽಥ ವಾಮನಃ ।
ರಾಮೋ ರಾಮಶ್ಚ ಕೃಷ್ಣಶ್ಚ ಬುದ್ಧಃ ಕಲ್ಕೀತಿ ತೇ ದಶ || ೨ ||

ಇತ್ಯೇತಾಃ ಕಥಿತಾಸ್ತಸ್ಯ ಮೂರ್ತಯೋ ಭೂತಧಾರಿಣಿ ।
ದರ್ಶನಂ ಪ್ರಾಪ್ತುಮಿಚ್ಛೂನಾಂ ಸೋಪಾನಾನಿ ಚ ಶೋಭನೇ || ೩ ||

ನಾಲ್ಕನೆಯ ಅಧ್ಯಾಯ

ನಾರಾಯಣನ ವ್ಯಾಪಕತ್ವ

೧. ಭೂದೇವಿ—ಈ ನಾರಾಯಣನೆಂಬ ದೇವನೇ ಸರ್ವಭಾವದಿಂದಲೂ, ಸನಾತನನೂ, ಪರಮಾತ್ಮನೂ, ಭಗವಂತನೂ ಅಹುದೋ ಅಲ್ಲವೋ ನನಗೆ ಹೇಳು.

೨-೩. ಶ್ರೀ ವರಾಹ—ಭೂತಧಾರಿಣೀ ! ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಕೃಷ್ಣ, ಬುದ್ಧ, ಕಲ್ಕಿ ಈ ಹತ್ತೂ ಆತನ ಮೂರ್ತಿಗಳೂ, ಅವನ ದರ್ಶನವನ್ನು ಪಡೆಯಲು ಬಯಸುವವರಿಗೆ ಮೆಟ್ಟಲುಗಳೂ ಆಗಿವೆ.

ಯತ್ತಸ್ಯ ಪರಮಂ ರೂಪಂ ತನ್ನ ಪಶ್ಯಂತಿ ದೇವತಾಃ ।
ಅಸ್ಮದಾದಿಸ್ವರೂಪೇಣ ಪೂರಯಂತಿ ತತೋ ಧೃತಿಂ ॥ ೪ ॥

ಬ್ರಹ್ಮಾ ಭಾಗವತೋ ಮೂರ್ತೀ ರಾಜಸಸ್ತಾಮಸಸ್ತಥಾ ।
ಯಾಭಿಃ ಸಂಸ್ಥಾಪ್ಯತೇ ವಿಶ್ವಂ ಸ್ಥಿತೌ ಸಂಚಾಲ್ಯತೇ ಚ ಹ ॥
ತ್ವನೇಕಾ ತಸ್ಯ ದೇವಸ್ಯ ಮೂರ್ತಿರಾದ್ಯಾ ಧರಾ ಧರೇ ॥ ೫ ॥

ದ್ವಿತೀಯಾ ಸಲಿಲಂ ಮೂರ್ತಿಃ ತೃತೀಯಾ ತೈಜಸಿಸ್ಮೃತಾ ।
ಚತುರ್ಥೀ ವಾಯುಮೂರ್ತಿಃ ಸ್ಯಾದಾಕಾಶಾಖ್ಯಾತು ಪಂಚಮಿ ॥ ೬ ॥

ಏತಾಸ್ತು ಮೂರ್ತಯಸ್ತಸ್ಯ * ಕ್ಷೇತ್ರಜ್ಞೇಂದು ದಿವಾಕರಾಃ ।
ಮೂರ್ತಿತ್ರಯಂ ತಥಾತಸ್ಯ ಇತ್ಯೇತಾಶ್ಚಾಷ್ಟಮೂರ್ತಯಃ ॥ ೭ ॥

ಅಭಿವ್ಯಾಪ್ತಮಿದಂ ಸರ್ವಂ ಜಗನ್ನಾರಾಯಣೇನ ಹ ।
ಇತ್ಯೇತತ್ಕಥಿತಂ ದೇವಿ ಕಿಮನ್ಯಚ್ಛ್ರೋತುಮಿಚ್ಛಸಿ ॥ ೮ ॥

---

೪. ಅವನ ಪರಮರೂಪವನ್ನು ದೇವತೆಗಳೂ ನೋಡಲಾರರು. ಆದುದರಿಂದಲೇ ಅವರು ನನ್ನ ಈ ವರಾಹಾದಿರೂಪಗಳಿಂದಲೇ ಸಂತೋಷಪಡುತ್ತಾರೆ.

೫. ಬ್ರಹ್ಮನು ಭಗವಂತನ ರಾಜಸಮೂರ್ತಿ. ಅಲ್ಲದೆ ಯಾವುವು ವಿಶ್ವ (ಪ್ರಪಂಚ) ವನ್ನು ನಿಲ್ಲಿಸುವುವೋ, ರಕ್ಷಿಸುವುವೋ ಅಂತಹ ಆ ದೇವನ ತಾಮಸ ಮೂರ್ತಿಗಳಲ್ಲಿ ಭೂಮಿಯಾದ ನೀನು ಮೊದಲನೆಯವಳು.

೬. ಎರಡನೆಯದು ನೀರು, ಮೂರನೆಯದು ತೇಜಸ್ಸು. ನಾಲ್ಕನೆಯದು ವಾಯು (ಮೂರ್ತಿ) ಆಕಾಶವೆಂಬುದು ಐದನೆಯದು.

೭. ಆರು ಏಳು ಎಂಟನೆಯವುಗಳಾದ ಆತ್ಮ, ಸೂರ್ಯ, ಚಂದ್ರ ಎಂಬ ಮೂರು ಮೂರ್ತಿಗಳೂ ಸೇರಿ, ಇವೆಂಟೂ ಆತನ ಅಷ್ಟಮೂರ್ತಿಗಳು.

೮. ಹೀಗೆ ಈ ಜಗತ್ತೆಲ್ಲವೂ ನಾರಾಯಣನಿಂದ ಅಭಿವ್ಯಾಪ್ತವಾಗಿದೆ ಯೆಂಬುದನ್ನು ಹೇಳಿದ್ದೇನೆ. ದೇವಿ, ಮತ್ತೇನನ್ನು ಕೇಳಲು ಇಚ್ಛಿಸುವೆ?

---

* ಕ್ಷೇತ್ರಜ್ಞಸ್ತ್ವಂ ಹಿಮದ್ಯುತಿಃ

|| ಧರಣ್ಯುವಾಚ ||

ನಾರದೇನೈವಮುಕ್ತಸ್ತು ತದಾ ರಾಜಾ ಪ್ರಿಯವ್ರತಃ ।
ಕೃತವಾನ್ ಕಿಂ ಮಮಾಚಕ್ಷ್ವ ಪ್ರಸಾದಾತ್ಪರಮೇಶ್ವರ || ೯ ||

|| ವರಾಹ ಉವಾಚ ||

ಭವತೀಂಸಪ್ತಧಾಕೃತ್ವಾ ಪುತ್ರಾಣಾಂ ಚ ಪ್ರದಾಯಸಃ ।
ಪ್ರಿಯವ್ರತಸ್ತಪಸ್ತೇಪೇ ನಾರದಾಚ್ಛ್ರುತವಿಸ್ಮಯಃ || ೧೦ ||

ನಾರಾಯಣಾತ್ಮಕಂ ಬ್ರಹ್ಮ ಪರಂ ಜಪ್ತ್ವಾ ಸ್ವಯಂಭುವಃ ।
ತತಃ ಸ ತದ್ಗತಮನಾಃ ಪರಂ ನಿರ್ವಾಣಮಾಪ್ತವಾನ್ || ೧೧ ||

ಶೃಣು ಚಾನ್ಯದ್ವರಾರೋಹೇ ಯದ್ವೃತ್ತಂ ಪರಮೇಷ್ಠಿನಃ ।
ಆರಾಧನಾಯ ಚ ಯತಃ ಪುರಾಕಾಲೇ ನೃಪಸ್ಯ ಹ || ೧೨ ||

---

೯. ಭೂದೇವಿ—ಪರಮೇಶನೇ, ನಾರದನು ಹಾಗೆ ಹೇಳಿದಾಗ ಪ್ರಿಯವ್ರತನು ಏನುಮಾಡಿದನೆಂಬುದನ್ನು ನನಗೆ ದಯೆಯಿಂದ ಹೇಳು.

೧೦. ವರಾಹ—ನಾರದನಿಂದ ಆಶ್ಚರ್ಯವನ್ನು ಕೇಳಿದ ಆ ಪ್ರಿಯವ್ರತನು ಭೂಮಿಯನ್ನು [ನಿನ್ನನ್ನು] ಏಳುಭಾಗಮಾಡಿ ಮಕ್ಕಳಿಗೆ ಕೊಟ್ಟು ತಪಸ್ಸನ್ನು ಮಾಡಿದನು.

೧೧. ಸ್ವಯಂಭುವೂ, ನಾರಾಯಣಾತ್ಮಕನೂ ಆದ ಪರಬ್ರಹ್ಮನನ್ನು ಚೆನ್ನಾಗಿ ಧ್ಯಾನಿಸಿ, ಅವನಲ್ಲಿಯೇ ನೆಟ್ಟಮನಸ್ಸುಳ್ಳವನಾಗಿ ಪರಮನಿರ್ವಾಣವನ್ನು ಪಡೆದನು.

೧೨. * ವರಾರೋಹೇ, ಪರಮೇಷ್ಠಿಯ ಮತ್ತು ಪೂರ್ವದಲ್ಲಿ ಅವನನ್ನು ಸಂತೋಷಗೊಳಿಸಲು ಯತ್ನಿಸಿದ ರಾಜನೊಬ್ಬನ ವೃತ್ತಾಂತವನ್ನು ಕೇಳು.

---

* ವರಾರೋಹಾ = ರೂಪಗುಣ ಶೀಲಾದಿಗಳಿಂದ ಉತ್ತಮಳಾದ ಹೆಂಗಸು

ಆಸೀದಶ್ವಶಿರಾನಾಮ ರಾಜಾ ಪರಮಧಾರ್ಮಿಕಃ ।
ಸೋಽಶ್ವಮೇಧೇನ ಯಜ್ಞೇನ ಯಷ್ಟ್ವಾ ಸುಬಹುದಕ್ಷಿಣಾಃ ॥ ೧೩ ॥

ಸ್ನಾತಶ್ಚಾವಭೃತೇ ಸೋಽಥ ಬ್ರಾಹ್ಮಣೈಃ ಪರಿವಾರಿತಃ ।
ಯಾವದಾಸ್ತೇ ಸ ರಾಜರ್ಷಿಸ್ತಾವದ್ಯೋಗಿವರೋ ಮುನಿಃ ।
ಆಯಯೌ ಕಪಿಲಃ ಶ್ರೀಮಾನ್ ಜೈಗೀಷವ್ಯಶ್ಚ ಯೋಗಿರಾಟ್ ॥ ೧೪ ॥

ತತಸ್ತ್ವರಿತಮುತ್ಥಾಯ ಸ ರಾಜಾ ಸ್ವಾಗತಕ್ರಿಯಾಂ ।
ಚಕಾರ ಪರಯಾ ಯುಕ್ತಃ ಸ ಮುದಾ ರಾಜಸತ್ತಮಃ ॥ ೧೫ ॥

ತಾವರ್ಚಿತಾವಾಸನಗೌ ದೃಷ್ಟ್ವಾ ದೇವೌ ಮಹಾಬಲಃ ।
ಪಪ್ರಚ್ಛ ತೌ ತಿಗ್ಮಧಿಯೌ ಯೋಗಜ್ಞೌ ಸ್ವೇಚ್ಛಯಾಗತೌ ॥ ೧೬ ॥

ಭವಂತೌ ಸಂಶಯಂ ವಿಪ್ರೌ ಪೃಚ್ಛಾಮಿ ಪುರುಷೋತ್ತಮೌ ।
ಕಥಮಾರಾಧಯೇ ದೇವಂ ಹರಿಂ ನಾರಾಯಣಂ ಪರಂ ॥ ೧೭ ॥

೧೩-೧೪. ಅಶ್ವಶಿರನೆಂಬ ಪರಮಧಾರ್ಮಿಕನಾದ ರಾಜನೊಬ್ಬನಿದ್ದನು ರಾಜರ್ಷಿಯಾದ ಆತನು ಬಹುದಕ್ಷಿಣೆಯುಳ್ಳ ಅಶ್ವಮೇಧಯಜ್ಞವನ್ನು ಮಾಡಿ, ಅವಭೃತಸ್ನಾನವಾದ ಬಳಿಕ ಬ್ರಾಹ್ಮಣರಿಂದ ಪರಿವೃತನಾಗಿದ್ದನು. ಆಗ ಯೋಗಿವರನಾದ ಕಪಿಲಮುನಿಯೂ, ಶ್ರೀಮಂತನಾದ ಜೈಗೀಷವ್ಯನೆಂಬ ಯೋಗಿರಾಜನೂ ಅಲ್ಲಿಗೆ ಬಂದರು.

೧೫. ರಾಜಸತ್ತಮನಾದ ಅಶ್ವಶಿರನು ಬೇಗನೆ ಎದ್ದು, ಅತಿಸಂತೋಷದಿಂದ ಸುಖಾಗಮನವನ್ನು ಕೇಳಿ, ತಕ್ಕಂತೆ ಪೂಜಿಸಿದನು.

೧೬-೧೭. ಪೂಜೆಯನ್ನು ಕೈಕೊಂಡು, ಪೀಠದಲ್ಲಿ ಕುಳಿತಿರುವ, ಚುರುಕಾದ ಬುದ್ಧಿಯುಳ್ಳವರೂ, ಯೋಗವನ್ನರಿತವರೂ, ತಾವಾಗಿ ಬಂದಿರುವವರೂ ಆದ ಅವರನ್ನು ನೋಡಿ, ಮಹಾಬಲವುಳ್ಳ ಆ ರಾಜನು "ಪುರುಷೋತ್ತಮರಾದ ಬ್ರಾಹ್ಮಣರೇ, ನನಗಿರುವ ಸಂದೇಹವನ್ನು ನಿಮ್ಮಲ್ಲಿ ಕೇಳುತ್ತೇನೆ. ದೇವನೂ, ಪರನೂ ಆದ ಆ ನಾರಾಯಣನನ್ನು ಹೇಗೆ ಆರಾಧಿಸಲಿ?" ಎಂದು ಕೇಳಿದನು.

|| ವಿಪ್ರಾವೂಚತುಃ ||

ಕ ಏಷ ಪ್ರೋಚ್ಯತೇ ರಾಜನ್ ತ್ವಯಾ ನಾರಾಯಣೋ ಗುರುಃ |
ಆವಾಂ ನಾರಾಯಣೌ ದ್ವೌ ತು ತ್ವತ್ಪ್ರತ್ಯಕ್ಷಗತೌ ನೃಪ || ೧೮ ||

|| ಅಶ್ವಶಿರಾ ಉವಾಚ ||

ಭವಂತೌ ಬ್ರಾಹ್ಮಣೌ ಸಿದ್ಧೌ ತಪಸಾ ದಗ್ಧಕಿಲ್ಬಿಷೌ |
ಕಥಂ ನಾರಾಯಣಾವಾವಾಮಿತಿ ವಾಕ್ಯಮುದೀರಿತಂ || ೧೯ ||

ಶಂಖಚಕ್ರಗದಾಪಾಣಿಃ ಪೀತವಾಸಾ ಜನಾರ್ದನಃ |
ಗರುಡಸ್ಥೋ ಮಹಾದೇವಃ ಕಸ್ತಸ್ಯ ಸದೃಶೋ ಭುವಿ || ೨೦ ||

ತಸ್ಯ ರಾಜ್ಞೋ ವಚಃ ಶ್ರುತ್ವಾ ತೌ ವಿಪ್ರೌ ಸಂಶಿತವ್ರತೌ |
* ಜಹಸತುಃ ಪಶ್ಯ ವಿಷ್ಣುಂ ರಾಜನ್ನಿತಿ ಜಜಲ್ಪತುಃ || ೨೧ ||

---

೧೮. ಬ್ರಾಹ್ಮಣರು—ರಾಜನೇ ನೀನು ಗುರುವಾದ ನಾರಾಯಣನೆಂದು ಯಾರನ್ನು ಹೇಳುತ್ತೀಯೋ, ಆ ನಾರಾಯಣನೇ ಪ್ರತ್ಯಕ್ಷವಾಗಿ ಬಂದಿರುವ ನಾವು.

೧೯. ಅಶ್ವಶಿರ—ನೀವು ಬ್ರಾಹ್ಮಣರು. ಸಿದ್ಧರು. ತಪಸ್ಸಿನಿಂದ ಪಾಪವನ್ನು ಸುಟ್ಟವರು. ನಾವೇ ನಾರಾಯಣನೆಂದು ಹೇಗೆ ಹೇಳುವಿರಿ ?

೨೦. ಆ ಜನಾರ್ದನನು ಶಂಖಚಕ್ರಗದಾಪಾಣಿಯೂ, ಗರುಡವಾಹನನೂ, ಪೀತಾಂಬರಧಾರಿಯೂ ಆದ ಮಹಾದೇವನು. ಲೋಕದಲ್ಲಿ ಯಾರುತಾನೆ ಅವನಿಗೆ ಸಮ ?

೨೧. ಆ ದೊರೆಯ ಮಾತುಗಳನ್ನು ಕೇಳಿ, ಬಹುತೀಕ್ಷ್ಣವ್ರತಿಗಳಾದ ಆ ಬ್ರಾಹ್ಮಣರು ನಕ್ಕು, "ದೊರೆಯೇ, ವಿಷ್ಣುವನ್ನು ನೋಡು" ಎಂದರು.

---

* ಛಂದೋಭಂಗ

ಏವಮುಕ್ತ್ವಾ ಸ ಕಪಿಲಃ ಸ್ವಯಂ ವಿಷ್ಣುರ್ಬಭೂವ ಸಃ ।
ಜೈಗೀಷವ್ಯಶ್ಚ ಗರುಡಸ್ತತ್ ಕ್ಷಣಂ ಸಮಜಾಯತ ॥ ೨೨ ॥

ತತೋ ಹಾಹಾಕೃತಂ ತ್ವಾಸೀತ್ತತ್ ಕ್ಷಣಾದ್ರಾಜಮಂಡಲಂ ।
ದೃಷ್ಟ್ವಾ ನಾರಾಯಣಂ ದೇವಂ ಗರುಡಸ್ಥಂ ಸನಾತನಂ ॥ ೨೩ ॥

ಕೃತಾಂಜಲಿಪುಟೋ ಭೂತ್ವಾ ತತೋ ರಾಜಾ ಮಹಾಯಶಾಃ ।
ಉವಾಚ ಶಾಮ್ಯತಾಂ ವಿಪ್ರಾ ನಾಯಂ ವಿಷ್ಣುರಥೇದೃಶಃ ॥ ೨೪ ॥

ಯಸ್ಯ ಬ್ರಹ್ಮಾ ಸಮುತ್ಪನ್ನೋ ನಾಭಿಪಂಕಜಮಧ್ಯಗಃ ।
ತಸ್ಮಾಚ್ಚ ಬ್ರಹ್ಮಣೋ ರೂಢಃ ಸ ವಿಷ್ಣುಃ ಪರಮೇಶ್ವರಃ ॥ ೨೫ ॥

ಇತಿ ರಾಜವಚಃ ಶ್ರುತ್ವಾ ತದಾತೌ ಮುನಿಪುಂಗವೌ ।
ಚಕ್ರತುಃ ಪರಮಾಂ ಮಾಯಾಂ ಯೋಗಮಾಯಾಂ ವಿಶೇಷತಃ ॥ ೨೬ ॥

---

೨೨. ಹೀಗೆಂದು, ಕಪಿಲನು ತಾನು ವಿಷ್ಣುವಾದನು. ಜೈಗೀಷವ್ಯನು ಒಡನೆಯೇ ಗರುಡನಾದನು.

೨೩. ಬಳಿಕ ಗರುಡವಾಹನನೂ ಸನಾತನನೂ ಆದ ನಾರಾಯಣನನ್ನು ನೋಡಿ, ಕೂಡಲೇ, ಆಶ್ಚರ್ಯದಿಂದ ರಾಜಸಮೂಹದಲ್ಲಿ ಹಾಹಾಕಾರ ವುಂಟಾಯಿತು.

೨೪-೨೫. ಕೀರ್ತಿವಂತನಾದ ಅಶ್ವಶಿರನು ಕೈಮುಗಿದುಕೊಂಡು, "ಬ್ರಾಹ್ಮಣರೇ ಶಾಂತರಾಗಿ. ವಿಷ್ಣುವು ಇಂತಹವನಲ್ಲ. ಯಾರ ನಾಭಿಕಮಲದ ನಡುವೆ ಬ್ರಹ್ಮನಿರುವನೋ ಅವನೇ ಪರಮೇಶ್ವರನಾದ ವಿಷ್ಣು" ಎಂದನು.

೨೬. ರಾಜನ ಈ ಮಾತನ್ನು ಕೇಳಿ, ಆ ಮುನಿವರ್ಯರು ಉತ್ತಮವಾದ ಯೋಗಮಾಯೆಯನ್ನು ಹೆಚ್ಚುಮಾಡಿದರು.

ಕಪಿಲಃ ಪದ್ಮನಾಭಸ್ತು ಜೈಗೀಷವ್ಯಃ ಪ್ರಜಾಪತಿಃ ।
ಕಮಲಸ್ಥೋ ಬಭೌ ಬ್ರಹ್ಮಾ ತಸ್ಮಾದ್ರುದ್ರಃ ಪ್ರಭಾಕರಃ ॥ ೨೭ ॥

ದದರ್ಶ ರಾಜಾ ರಕ್ತಾಕ್ಷಂ ಕಾಲಾನಲಸಮದ್ಯುತಿಂ ।
ನೇಕ್ಷ್ಯೋ ಭವತಿ ವಿಶ್ವೇಶೋ ಮಾಯೈಷಾ ಯೋಗಿನಾಂ ಸದಾ ।
ಸರ್ವವ್ಯಾಪೀ ಹರಿಃ ಶ್ರೀಮಾನಿತಿ ರಾಜಾ ಜಗಾದ ಹ ॥ ೨೮ ॥

ತತೋ ವಾಕ್ಯಾವಸಾನೇ ತು ತಸ್ಯ ರಾಜ್ಞೋ ಹಿ ಸಂಸದಿ ॥ ೨೯ ॥

ಮತ್ಕುಣಾ ಮಶಕಾ ಯೂಕಾ ಭ್ರಮರಾಃ ಪಕ್ಷಿಣೋರಗಾಃ ।
ಅಶ್ವಾ ಗಾವೋ ದ್ವಿಪಾಃ ಸಿಂಹಾ ವ್ಯಾಘ್ರಾ ಗೋಮಾಯವೋ
ಮೃಗಾಃ ॥ ೩೦ ॥

ಅನ್ಯೇಪಿ ಪಶವಃ ಕೀಟಾ ಗ್ರಾಮ್ಯಾರಣ್ಯಾಶ್ಚ ಸರ್ವಶಃ ।
ದೃಶ್ಯಂತೇ ರಾಜಭವನೇ ಕೋಟಿಶೋ ಭೂತಧಾರಿಣಿ ॥ ೩೧ ॥

---

೨೭. ಕಪಿಲನು ಪದ್ಮನಾಭನೂ (ವಿಷ್ಣು), ಜೈಗೀಷವ್ಯನು ಬ್ರಹ್ಮನೂ ಆದರು. ವಿಷ್ಣುವಿನ ನಾಭಿಕಮಲದಲ್ಲಿದ್ದುಕೊಂಡು ಬ್ರಹ್ಮನು ಹೊಳೆಯುತ್ತಿದ್ದನು. ಅವನಿಗಿಂತಲೂ ಹೆಚ್ಚಾಗಿ ರುದ್ರನು ಕಾಂತಿವಂತನಾಗಿದ್ದನು.

೨೮. ರಾಜನು ಕೆಂಗಣ್ಣುಳ್ಳ, ಪ್ರಳಯಕಾಲಾಗ್ನಿಯಂತೆ ಹೊಳೆಯುವ ಅವನನ್ನು ನೋಡಿ "ಯಾವಾಗಲೂ ವಿಶ್ವೇಶ್ವರನು ಕಾಣಿಸದವನು. ಇದು ಯೋಗಿಗಳ ಮಾಯೆ ಶ್ರೀಮಂತನಾದ ಹರಿಯು ಸರ್ವವ್ಯಾಪಿ" ಎಂದನು.

೨೯-೩೧. ಭೂತಧಾರಿಣಿ, ಆ ಮಾತುಮುಗಿದೊಡನೆಯೇ ರಾಜಸಭೆಯಲ್ಲಿಯೂ, ಅರಮನೆಯಲ್ಲಿಯೂ, ತಿಗಣೆಗಳೂ, ಸೊಳ್ಳೆಗಳೂ, ಹೇನುಗಳೂ, ದುಂಬಿಗಳೂ, ಹಕ್ಕಿಗಳೊ, ಹಾವುಗಳೂ, ಕುದುರೆಗಳೂ, ಹಸುಗಳೂ, ಆನೆಗಳೂ, ಸಿಂಹಗಳೂ, ನರಿಗಳೂ, ಜಿಂಕೆಗಳೂ, ಕಾಡಿನ ಮತ್ತು ಊರಿನ ಇತರ ಪಶುಗಳೂ ಕ್ರಿಮಿಕೀಟಗಳೂ, ಎಲ್ಲೆಡೆಯಲ್ಲಿಯೂ ಕೋಟಿಗಟ್ಟಲೆಯಾಗಿ ಕಾಣಿಸಿದುವು.

ತದ್ದೃಷ್ಟ್ವಾ ಭೂತಸಂಘಾತಂ ರಾಜಾ ವಿಸ್ಮಿತಮಾನಸಃ ।
ಯಾವಚ್ಚಿಂತಯತೇ ಕಿಂ ಸ್ಯಾದೇತದಿತ್ಯವಗಮ್ಯ ಚ ।
ಜೈಗೀಷವ್ಯಸ್ಯ ಮಾಹಾತ್ಮ್ಯಂ ಕಪಿಲಸ್ಯ ಚ ಧೀಮತಃ ॥ ೩೨ ॥

ಕೃತಾಂಜಲಿಪುಟೋ ಭೂತ್ವಾ ಸ ರಾಜಾಶ್ವಶಿರಾಸ್ತದಾ ।
ಪಪ್ರಚ್ಛ ತಾವೃಷೀ ಭಕ್ತ್ಯಾ ಕಿಮಿದಂ ದ್ವಿಜಸತ್ತಮೌ ॥ ೩೩ ॥

॥ ದ್ವಿಜಾವೂಚತುಃ ॥

ಆವಾಂ ಪೃಷ್ಟೌ ತ್ವಯಾ ರಾಜನ್ ಕಥಂ ವಿಷ್ಣುರಿಹೇಜ್ಯತೇ ।
ಪ್ರಾಪ್ಯತೇ ಚ ಮಹಾರಾಜ ತೇನೇದಂ ದರ್ಶಿತಂ ತವ ॥ ೩೪ ॥

ಸರ್ವಜ್ಞಸ್ಯ ಗುಣಾ ಹ್ಯೇತೇ ಯೇ ರಾಜಂಸ್ತವ ದರ್ಶಿತಾಃ ।
ಸ ಚ ನಾರಾಯಣೋ ದೇವಃ ಸರ್ವಜ್ಞಃ ಕಾಮರೂಪವಾನ್ ॥ ೩೫ ॥

ಸೌಮ್ಯಸ್ತು ಸಂಸ್ಥಿತಃ ಕ್ವಾಪಿ ಪ್ರಾಪ್ಯತೇ ಮನುಜೈಃ ಕಿಲ ।
ಆರಾಧನಂ ನ ಚೈತಸ್ಯ ಪರಮಾರ್ಥಂ ಭವಿಷ್ಯತಿ ॥ ೩೬ ॥

೩೨-೩೩. ರಾಜನಾದ ಅಶ್ವಶಿರನು ಆ ಪ್ರಾಣಿಗಳ ಗುಂಪನ್ನು ನೋಡಿ, ಅಚ್ಚರಿಗೊಂಡವನಾಗಿ, ಇದೇನೆಂದು ಯೋಚಿಸಿ, ಬುದ್ಧಿವಂತರಾದ ಜೈಗೀಷವ್ಯ ಕಪಿಲರ ಮಹಿಮೆಯನ್ನರಿತು, ಅವರನ್ನು "ಬ್ರಾಹ್ಮಣೋತ್ತಮರೆ, ಇದೇನು ?" ಎಂದು ಕೈಮುಗಿದುಕೊಂಡು ಕೇಳಿದನು.

೩೪. ಬ್ರಾಹ್ಮಣರು—ರಾಜನೇ, ನೀನು ನಮ್ಮನ್ನು ಈ ಲೋಕದಲ್ಲಿ ವಿಷ್ಣುವನ್ನು ಹೇಗೆ ಆರಾಧಿಸಬೇಕು ? ಪಡೆಯಬೇಕು ? ಎಂದು ಕೇಳಿದೆ. ಆದುದರಿಂದ ಇದನ್ನು ನಿನಗೆ ತೋರಿಸಿದುದಾಯಿತು.

೩೫. ರಾಜನೇ, ನಿನಗೆ ತೋರಿಸಿದ ಇವು ಸರ್ವಜ್ಞನ ಗುಣಗಳು. ಆ ನಾರಾಯಣನು ಸರ್ವಜ್ಞ. ತನಗೆ ಬೇಕಾದ ರೂಪವನ್ನು ಧರಿಸುವವನು.

೩೬. ಸೌಮ್ಯನಾಗಿ, ಎಲ್ಲೆಲ್ಲಿಯೂ ಇದ್ದುಕೊಂಡು ಮನುಜರಿಗೆ ದೊರೆಯುತ್ತಾನಲ್ಲವೆ ! ಇವನ ಪರಮಾರ್ಥವಾದ (ತಾತ್ವಿಕವಾದ) ಆರಾಧನವು ಆಗುವುದಿಲ್ಲ.

ಕಿಂತು ಸರ್ವಶರೀರಸ್ಥಃ ಪರಮಾತ್ಮಾ ಜಗತ್ಪತಿಃ ।
ಸ್ವದೇಹೇ ದೃಶ್ಯತೇ ಭಕ್ತ್ಯಾ ನೈಕಸ್ಥಾನಗತಸ್ತು ಸಃ ॥ ೩೭ ॥

ಅತೋಽರ್ಥಂ ದರ್ಶಿತಂ ರೂಪಂ ದೇವಸ್ಯ ಪರಮಾತ್ಮನಃ ।
ಆವಯೋಸ್ತವ ರಾಜೇಂದ್ರ ಪ್ರತೀತಿಃ ಸ್ಯಾದ್ಯಥಾ ತವ ॥ ೩೮ ॥

ಏವಂ ಸರ್ವಗತೋ ವಿಷ್ಣುಸ್ತವ ದೇಹೇ ಜನೇಶ್ವರ ।
ಮಂತ್ರಿಣಾಂ ಭೃತ್ಯಸಂಘಸ್ಯ ಸುರಾದ್ಯಾ ಯೇ ಪ್ರದರ್ಶಿತಾಃ ॥ ೩೯ ॥

ಪಶವಃ ಕೀಟಸಂಘಾಶ್ಚ ತೇಽಪಿ ವಿಷ್ಣುಮಯಾ ನೃಪ ।
ಭಾವನಾಂತು ದೃಢಾಂ ಕುರ್ಯಾದ್ಯತಃ ಸರ್ವಮಯೋ ಹರಿಃ ॥ ೪೦ ॥

ನಾಸ್ಯತ್ತತ್ಸದೃಶಂ ಭೂತಮಿತಿ ಭಾವೇನ ಸೇವ್ಯತಾಂ ।
ಏಷ ತೇ ಜ್ಞಾನಸದ್ಭಾವಸ್ತವ ರಾಜನ್ ಪ್ರಕೀರ್ತಿತಃ ॥ ೪೧ ॥

---

೩೭. ಆದರೆ ಸರ್ವಶರೀರದಲ್ಲಿಯೂ ಇರುವ ಜಗತ್ಪತಿಯಾದ ಪರಮಾತ್ಮನನ್ನು ಭಕ್ತಿಯಿಂದ ತಮ್ಮ ದೇಹದಲ್ಲಿಯೇ ನೋಡಬಹುದು. ಅವನು ಒಂದೆಡೆಯಲ್ಲಿರುವವನಲ್ಲ.

೩೮. ರಾಜನೇ, ನಮ್ಮಲ್ಲಿ ನಿನಗೆ ವಿಶ್ವಾಸವೂ, ಸಂತೋಷವೂ ಉಂಟಾಗುವಂತೆ ಮಾಡುವುದಕ್ಕಾಗಿಯೇ ದೇವದೇವನಾದ ಪರಮಾತ್ಮನ ರೂಪವನ್ನು ತೋರಿಸಿದೆವು.

೩೯. ದೊರೆಯೇ, ಹೀಗೆ ಎಲ್ಲೆಲ್ಲಿಯೂ ಇರುವ ವಿಷ್ಣುವು ನಿನ್ನ ದೇಹದಲ್ಲಿಯೂ, ಮಂತ್ರಿಗಳ ದೇಹದದಲ್ಲಿಯೂ, ಸೇವಕರ ದೇಹದಲ್ಲಿಯೂ ಇದ್ದಾನೆ.

೪೦. ದೇವತೆಗಳನ್ನೂ, ಪಶುಗಳನ್ನೂ, ಕೀಟಗಳ ಗುಂಪುಗಳನ್ನೂ ತೋರಿಸಿದೆವಲ್ಲವೆ ! ಅವರೂ ವಿಷ್ಣುಮಯರೇ. ಆದುದರಿಂದ ಹರಿಯು ಸರ್ವವ್ಯಾಪಿಯೆಂಬ ಭಾವನೆಯನ್ನು ದೃಢಪಡಿಸಿಕೊಳ್ಳಬೇಕು.

೪೧. ಅವನಿಗೆ ಸಮಾನವಾದುದು ಯಾವುದೂ ಇಲ್ಲವೆಂಬ ಭಾವದಿಂದ ಸೇವಿಸು. ಎಲೈ ದೊರೆಯೇ, ಜ್ಞಾನದ ಈ ಸದ್ಭಾವವನ್ನು ನಿನಗೆ ಹೇಳಿದೆವು.

ಪರಿಪೂರ್ಣೇನಭಾವೇನ ಸ್ಮರ ನಾರಾಯಣಂ ಗುರುಂ |
ಪೂಜೋಪಹಾರೈರ್ಧೂಪೈಶ್ಚ ಬ್ರಾಹ್ಮಣಾನಾಂಚ ತರ್ಪಣೈಃ ॥
ಧ್ಯಾನೇನ ಸುಸ್ಥಿತೇನಾಶು ಸುಪ್ರಾಪ್ಯಃ ಪರಮೇಶ್ವರಃ ॥ ೪೨ ॥

ಇತಿ ವರಾಹಪುರಾಣೇ ಆದಿಕೃತವೃತ್ತಾಂತೇ ನಾರಾಯಣಸ್ಯ ವ್ಯಾಪಕತ್ವವರ್ಣನಂ ನಾಮ ಚತುರ್ಥೋಽಧ್ಯಾಯಃ

---

೪೨. ಪರಿಪೂರ್ಣವಾದ ಭಾವದಿಂದ ಗುರುವಾದ ನಾರಾಯಣನನ್ನು ಸ್ಮರಿಸು. ಪೂಜೋಪಹಾರಧೂಪಗಳಿಂದಲೂ, ಬ್ರಾಹ್ಮಣನ್ನು ತೃಪ್ತಿಪಡಿಸುವುದರಿಂದಲೂ, ಸರಿಯಾದ ಧ್ಯಾನದಿಂದಲೂ ಪರಮೇಶ್ವರನು ಬೇಗನೆ ಸುಲಭವಾಗಿ ದೊರೆಯುವನು.

ಅಧ್ಯಾಯದ ಸಾರಾಂಶ—

ಭೂದೇವಿಯು ಶ್ರೀ ವರಾಹನನ್ನು—ನಾರಾಯಣನು ಪರಮಾತ್ಮನೋ ಅಲ್ಲವೋ ? ಎಂದು ಪ್ರಶ್ನಿಸುವಳು. ಶ್ರೀವರಾಹನು, ನಾರಾಯಣನ ಪರರೂಪವು ದೇವತೆಗಳಿಗೂ ಅದೃಶ್ಯವಾದುದರಿಂದ ಆತನ ಮತ್ಸ್ಯಾದ್ಯವತಾರರೂಪಗಳೇ ಅವನ ದರ್ಶನವನ್ನು ಪಡೆಯುವವರಿಗೆ ಮೆಟ್ಟಲುಗಳೆಂದು ದಶಾವತಾರ ಮೂರ್ತಿಗಳನ್ನೂ ತಿಳಿಸುವನು. ಬ್ರಹ್ಮನು ಭಗವಂತನ ರಾಜಸಮೂರ್ತಿಯೆಂದೂ ಅಷ್ಟಮೂರ್ತಿಯಾದ ರುದ್ರನು ತಾಮಸಮೂರ್ತಿಯೆಂದೂ ಹೇಳಿ, ಅಷ್ಟಮೂರ್ತಿಗಳ ಸ್ವರೂಪವನ್ನೂ ಹೇಳುವನು. ನಾರಾಯಣನಿಂದ ಜಗತ್ತೆಲ್ಲವೂ ವ್ಯಾಪ್ತವಾಗಿದೆಯೆಂದು ಹೇಳಿ, ಅವನ್ನು ದೃಢಪಡಿಸಲು ಅಶ್ವಶಿರನೆಂಬ ರಾಜನಿಗೆ ಕಪಿಲ ಜೈಗೀಷವ್ಯರೆಂಬಿಬ್ಬರು ಋಷಿಗಳು ನಾರಾಯಣನು ಸರ್ವವ್ಯಾಪಿ ಎಂಬುದನ್ನು ತಿಳಿಸಿದ ಕಾರ್ಯಸಂಭಾಷಣಗಳ ರೂಪವಾದ ಅದ್ಭುತವಾದ ಕಥೆಯನ್ನು ಹೇಳುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನಾಲ್ಕನೆಯ ಅಧ್ಯಾಯ.

॥ ಶ್ರೀಃ ॥

-x-

ಪಂಚಮೋಧ್ಯಾಯಃ

ಅಥ ಕರ್ಮಜನ್ಯಮೋಕ್ಷಾದಿಕಂ

॥ ಅಶ್ವಶಿರಾ ಉವಾಚ ॥

ಭವಂತೌ ಮಮ ಸಂದೇಹಮೇಕಂ ಛೇತ್ತುಮಿಹಾರ್ಹತಃ ।
ಯೇನ ಚ್ಛಿನ್ನೇನ ಜಾಯೇತ ಮಮ ಸಂಸಾರವಿಚ್ಯುತಿಃ ॥ ೧ ॥

ಏವಮುಕ್ತೋ ನೃಪತಿನಾ ತದಾ ಯೋಗಿವರೋ ಮುನಿಃ ।
ಕಪಿಲಃ ಪ್ರಾಹ ಧರ್ಮಾತ್ಮಾ ರಾಜಾನಂ ಯಜತಾಂ ವರಂ ॥ ೨ ॥

॥ ಕಪಿಲ ಉವಾಚ ॥

ಕಸ್ತೇ ಮನಸಿ ಸಂದೇಹೋ ರಾಜನ್ ಪರಮಧಾರ್ಮಿಕೆ ।
ಛಿನದ್ಮಿ ಯೇನ ತಚ್ಛ್ರುತ್ವಾ ಬ್ರೂಹಿ ಯತ್ತೇಭಿವಾಂಛಿತಂ ॥ ೩ ॥

ಐದನೆಯ ಅಧ್ಯಾಯ

ಕರ್ಮದಿಂದಾಗುವ ಮೋಕ್ಷವೇ ಮೊದಲಾದುದು

೧. ಅಶ್ವಶಿರ—ಪೂಜ್ಯರೇ, ಯಾವುದು ನಿವೃತ್ತಿಯಾದರೆ ನನಗೆ ಸಂಸರಾದಿಂದ ಬಿಡುಗಡೆಯಾದೀತೋ ಅಂತಹ (ನನ್ನ) ಸಂದೇಹವೊಂದನ್ನು ಪರಿಹರಿಸಿರಿ.

೨. ದೊರೆಯು ಹೀಗೆನಲು, ಧರ್ಮಾತ್ಮನೂ, ಯೋಗಿವರನೂ ಆದ ಕಪಿಲ ಮುನಿಯು, ಯಾಜ್ಞಿಕೋತ್ತಮನಾದ ಅವನಿಗೆ ಹೀಗೆ ಹೇಳಿದನು.

೩. ಕಪಿಲ— ಪರಮಧಾರ್ಮಿಕನಾದ ದೊರೆಯೇ, ನಿನ್ನ ಮನದ ಸಂದೇಹವೇನು? ಕೇಳು, ಅದನ್ನು ಪರಿಹರಿಸುತ್ತೇವೆ. ನಿನ್ನ ಬಯಕೆಯೇನು? ಹೇಳು.

॥ ರಾಜೋವಾಚ ॥

ಕರ್ಮಣಾ ಪ್ರಾಪ್ಯತೇ ಮೋಕ್ಷ ಉತಾಹೋ ಜ್ಞಾನಿನಾ ಮುನೇ ।
ಏತನ್ಮೇ ಸಂಶಯಂ ಛಿಂಧಿ ಯದಿ ಮೇನುಗ್ರಹಃ ಕೃತಃ ॥ ೪ ॥

॥ ಕಪಿಲ ಉವಾಚ ॥

ಇಮಂ ಪ್ರಶ್ನಂ ಮಹಾರಾಜ ಪುರಾ ಪೃಷ್ಟೋ ಬೃಹಸ್ಪತಿಃ ।
ರೈಭ್ಯೇಣ ಬ್ರಹ್ಮಪುತ್ರೇಣ ರಾಜ್ಞಾ ಚ ವಸುನಾ ತಥಾ ॥ ೫ ॥

ವಸುರಾಸೀನ್ನೃಪಶ್ರೇಷ್ಠೋ ವಿದ್ವಾನ್ದಾನಪತಿಃ ಪುರಾ ।
ಚಾಕ್ಷುಷಸ್ಯ ಮನೋಃ ಕಾಲೇ ಬ್ರಹ್ಮಣೋನ್ವಯವರ್ಧನಃ ॥ ೬ ॥

ವಸುಃ ಸ ಬ್ರಹ್ಮಣಃ ಸದ್ಮ ಗತವಾಸ್ತದ್ದಿದೃಕ್ಷಯಾ ।
ಪಥಿ ಚೈತ್ರರಥಂ ದೃಷ್ಟ್ವಾ ವಿದ್ಯಾಧರವರಂ ನೃಪ ।
ಅಪೃಚ್ಛಚ್ಚ ವಸುಃ ಪ್ರೀತ್ಯಾ ಬ್ರಹ್ಮಣೋವಸರಂ ಪ್ರಭೋ ॥ ೭ ॥

---

೪. ದೊರೆಯು—“ಮುನಿಯೆ, ಮುಕ್ತಿಯು ಕರ್ಮಿಗೆ ದೊರೆಯುವುದೋ, ಅಥವಾ ಜ್ಞಾನಿಗೋ? ನಿನಗೆ ನನ್ನಲ್ಲಿ ಕೃಪೆಯಿದ್ದರೆ ನನ್ನ ಈ ಸಂದೇಹವನ್ನು ಹೋಗಲಾಡಿಸು.” ಎಂದನು.

೫. ಕಪಿಲ—ಮಹರಾಜ, ಈ ಪ್ರಶ್ನೆಯನ್ನು ಹಿಂದೆ ಬ್ರಹ್ಮನ ಮಗನಾದ ರೈಭ್ಯನೂ, ರಾಜನಾದ ವಸುವೂ ಬೃಹಸ್ಪತಿಯನ್ನು ಕೇಳಿದ್ದರು.

೬. ಚಾಕ್ಷುಷಮನುವಿನ ಕಾಲದಲ್ಲಿ ಬ್ರಹ್ಮನ ವಂಶ ವರ್ಧನನೂ, ದಾನಿಗಳೊಡೆಯನೂ ಆದ ವಸುವೆಂಬ ರಾಜೋತ್ತಮನಿದ್ದನು.

೭. ಆ ವಸುವು ಬ್ರಹ್ಮನ ಮನೆಗೆ ಅವನನ್ನು ನೋಡಬೇಕೆಂದು ಹೋದನು. ದಾರಿಯಲ್ಲಿ ವಿದ್ಯಾಧರೋತ್ತಮನಾದ ಚೈತ್ರರಥನೆಂಬುವನನ್ನು ಕಂಡು, ಪ್ರೀತಿಯಿಂದ ವಸುವು ಬ್ರಹ್ಮನು ಏನುಮಾಡುತ್ತಿದ್ದಾನೆಂದು ಕೇಳಿದನು.

ಸೋಽಬ್ರವೀದ್ದೇವ ಸಮಿತಿರ್ವರ್ತತೇ ಬ್ರಹ್ಮಣೋ ಗೃಹೇ ।
ಏವಂ ಶ್ರುತ್ವಾ ವಸುಸ್ತಸ್ಥೌ ದ್ವಾರಿ ಬ್ರಹ್ಮೌಕಸಸ್ತದಾ ॥ ೮ ॥

ತಾವತ್ತತ್ರೈವ ರೈಭ್ಯಸ್ತು ಆಜಗಾಮ ಮಹಾತಪಾಃ ।
ಸರಾಜಾ ಪ್ರೀತಿಮಾನಾಸೀದ್ವಸುಃ ಸಂಪೂರ್ಣಮಾನಸಃ ॥ ೯ ॥

ಉವಾಚ ಪೂಜಯಿತ್ವಾಗ್ರೇ ಕ್ವಪ್ರಯಾತೋಽಸಿ ವೈಮುನೇ ॥ ೧೦ ॥

॥ ರೈಭ್ಯ ಉವಾಚ ॥

ಅಹಂ ಬೃಹಸ್ಪತೇಃ ಪಾರ್ಶ್ವಾದಾಗತೋಽಸ್ಮಿ ಮಹಾನೃಪ
ಕಿಂಚಿತ್ಕಾರ್ಯಾಂತರಂ ಪ್ರಷ್ಟುಮಗಾಂದೇವಪುರೋಹಿತಂ ॥ ೧೧ ॥

ಏವಂ ಬ್ರುವತಿ ರೈಭ್ಯೇತು ಬ್ರಹ್ಮಣಸ್ತನ್ಮಹತ್ಸದಃ ।
ಉತ್ತಸ್ಥೌ ಸ್ವಾನಿ ಧಿಷ್ಣ್ಯಾನಿ ಗತಾ ದೇವಗಣಾಃ ಪ್ರಭೋ ॥ ೧೨ ॥

---

೮. ದೇವತೆಗಳ ಸಮೂಹವು ಬ್ರಹ್ಮನಮನೆಯಲ್ಲಿರುವುದಾಗಿ ಅವನು ಹೇಳಿದನು. ಅದನ್ನು ಕೇಳಿ, ವಸುವು ಬ್ರಹ್ಮನ ಮನೆಯ ಬಾಗಿಲಿನಲ್ಲಿಯೇ ನಿಂತನು.

೯-೧೦. ಅಷ್ಟರಲ್ಲಿಯೇ ಮಹಾತಪಸ್ವಿಯಾದ ರೈಭ್ಯನೂ ಅಲ್ಲಿಗೆ ಬಂದನು. ಉದಾರಮನದ ಆ ವಸುರಾಜನು ಅದರಿಂದ ಸಂತೋಷಪಟ್ಟನು. ಪೂಜಿಸಿದ ಬಳಿಕ, ಮುನಿಯೇ, ಎಲ್ಲಿಹೋಗಿದ್ದೆ ? ಎಂದನು.

೧೧. ರೈಭ್ಯ—ಮಹರಾಜಾ, ನಾನು ಬೃಹಸ್ಪತಿಗಳ ಸಮೀಪದಿಂದ ಬಂದೆನು. ಒಂದಾನೊಂದು ಕಾರ್ಯವನ್ನು ಕೇಳುವುದಕ್ಕಾಗಿ ದೇವಪುರೋಹಿತರಾದ ಅವರಲ್ಲಿ ಹೋಗಿದ್ದೆನು.

೧೨. ಹೀಗೆ ರೈಭ್ಯನು ಹೇಳುತ್ತಿರುವಾಗ ಬ್ರಹ್ಮನ ಆ ಮಹಾಸಭೆಯು ಎದ್ದಿತು. ದೇವತೆಗಳ ತಂಡಗಳು ತಮ್ಮ ತಮ್ಮ ಮನೆಗಳಿಗೆ ಹೋದವು.

ತಾವದ್ಬೃಹಸ್ಪತಿಸ್ತತ್ರ ರೈಭ್ಯೇಣ ಸಹ ಸಂವಿದಂ ।
ಕೃತ್ವಾ ಸ್ವಧಿಷ್ಣ್ಯಮಗಮದ್ವಸುನಾ ಚಾನುಪೂಜಿತಃ ॥ ೧೩ ॥

ರೈಭ್ಯ ಆಂಗೀರಸೋ ರಾಜಾ ವಸುಶ್ಚೋಪವಿವೇಶಹ ।
ಉಪವಿಷ್ಟೇಷು ರಾಜೇಂದ್ರ ತೇಷು ತ್ರಿಷ್ವಪಿ ಸೋಽಬ್ರವೀತ್ ॥ ೧೪ ॥

ಬೃಹಸ್ಪತಿರ್ವೇದಗುರೂ ರೈಭ್ಯಂ ವಚನಮಂತಿಕೇ ।
ಕಿಂಕರೋಮಿ ಮಹಾಭಾಗ ವೇದವೇದಾಂಗಪಾರಗ ॥ ೧೫ ॥

॥ ರೈಭ್ಯ ಉವಾಚ ॥

ಬೃಹಸ್ಪತೇ ಕರ್ಮಿಣಾಂ ಕಿಂ ಪ್ರಾಪ್ಯತೇ ಜ್ಞಾನಿನಾಥವಾ ।
ಮೋಕ್ಷ ಏತನ್ಮಮಾಚಕ್ಷ್ವ ಪೃಚ್ಛತಃ ಸಂಶಯಂ ಪ್ರಭೋ ॥ ೧೬ ॥

॥ ಬೃಹಸ್ಪತಿರುವಾಚ ॥

ಯತ್ಕಿಂಚಿತ್ಕುರುತೇ ಕರ್ಮ* ಪುರುಷಃ ಸಾಧ್ವಸಾಧುವಾ ।
ಸರ್ವಂ ನಾರಾಯಣೇ ನ್ಯಸ್ಯ ಕುರ್ವನ್ನಪಿ ನ ಲಿಪ್ಯತೇ ॥ ೧೭ ॥

---

೧೩. ಅಷ್ಟರಲ್ಲಿ (ಅಲ್ಲಿಗೆ ಬಂದ) ಬೃಹಸ್ಪತಿಯು ರೈಭ್ಯನೊಡನೆ ಮಾತನಾಡುತ್ತಾ, ವಸುವಿನಿಂದಲೂ ಪೂಜೆಗೊಂಡು, (ಅವರೊಡನೆ) ತನ್ನ ಮನೆಗೆ ಹೋದನು.

೧೪, ೧೫. ರಾಜೇಂದ್ರನೇ, ರೈಭ್ಯ ಗುರು ವಸುಗಳು ಮೂವರೂ ಕುಳಿತುಕೊಂಡು ಮಾತನಾಡುತ್ತಿರುವಾಗ ದೇವಗುರುವಾದ ಬೃಹಸ್ಪತಿಯು ರೈಭ್ಯನನ್ನು ನೋಡಿ, "ಮಹಾಭಾಗನೇ, ವೇದವೇದಾಂಗ ಪಾರಗನೇ, ನನ್ನಿಂದಾಗಬೇಕಾದುದು ಏನು?" ಎಂದನು.

೧೬. ರೈಭ್ಯನು—ಗುರುವೇ, ಎನ್ನೊಡೆಯಾ, ಮೋಕ್ಷವು ಕರ್ಮಿಗೆ ದೊರೆಯುವುದೋ ಅಥವಾ ಜ್ಞಾನಿಗೋ? ಎಂಬ ಸಂಶಯವನ್ನು ಕೇಳುತ್ತಿರುವ ನನಗೆ ಉತ್ತರವನ್ನು ಹೇಳು.

೧೭. ಬೃಹಸ್ಪತಿ—ಮನುಷ್ಯರು * ಒಳ್ಳೆಯದನ್ನೇ ಆಗಲಿ, ಕೆಟ್ಟದನ್ನೇ ಆಗಲಿ ಮಾಡುವ ಕರ್ಮವೆಲ್ಲವನ್ನೂ ನಾರಾಯಣನಿಗೆ ಅರ್ಪಿಸಿಬಿಟ್ಟರೆ, ಮಾಡಿದರೂ ಕರ್ಮವು ಅವರಿಗಂಟುವುದಿಲ್ಲ.

---

* ಪುರುಷಃ ಎಂದು ಪುಲ್ಲಿಂಗ ಏಕವಚನವಿದೆ ಆದರೂ ಸ್ತ್ರೀಪುರುಷರಿಬ್ಬರಿಗೂ ಅನ್ವಯಿಸುವಂತೆ 'ಮನುಷ್ಯರು' ಎಂದು ಉಪಯೋಗಿಸಿದೆ.

ಶ್ರೂಯತೇ ಚದ್ವಿಜಶ್ರೇಷ್ಠ ಸಂವಾದೋ ವಿಪ್ರಲುಬ್ಧಯೋಃ ।
ಆತ್ರೇಯೋ ಬ್ರಾಹ್ಮಣಃ ಕಶ್ಚಿದ್ವೇದಾಭ್ಯಾಸರತೋ ಮುನಿಃ ॥ ೧೮ ॥

ತಪಸ್ಯಭಿರತಃ ಪ್ರಾತಃಸ್ನಾಯೀ ತ್ರಿಷವಣೇ ರತಃ ।
ನಾಮ್ನಾ ಸಂಯಮನಃ ಪೂರ್ವಮೇಕಸ್ಮಿನ್ ದಿವಸೇ ನದೀಂ ।
ಧರ್ಮಾರಣ್ಯೇಗತಃ ಸ್ನಾತುಂ ಧನ್ಯಾಂ ಭಾಗೀರಥೀಂ ಶುಭಾಂ ॥೧೯ ॥

ತತ್ರಾಸೀನಂ ಮಹಾಯೂಥಂ ಹರಿಣಾನಾಂ ವಿಚಕ್ಷಣಃ ।
ಲುಬ್ಧೋ ನಿಷ್ಠುರಕೋ ನಾಮ ಧನುಃ ಪಾಣಿಃ ಕೃತಾಂತವತ್ ।
ಆಯಯೌ ತಂ ಜಿಘಾಂಸುಃ ಸನ್‌ಸಜ್ಯಂ ಸಂಯುಜ್ಯಸಾಯಕಂ ॥ ೨೦ ॥

ತತಃ ಸಂಯಮನೋ ವಿಪ್ರೋ ದೃಷ್ಟ್ವಾತಂ ಮೃಗಯಾರತಮ್ಂ ।
ವಾರಯಾಮಾ ಸಮಾ ಭದ್ರ ಜೀವಘಾತಮಿಮಂ ಕುರು ॥ ೨೧ ॥

ಏತಚ್ಛ್ರುತ್ವಾವಚೋ ವ್ಯಾಧಃ ಸ್ಮಿತಪೂರ್ವಮಿದಂ ವಚಃ ।
ಉವಾಚ ನಾಹಂ ಹಿಂಸಾಮಿ ಪೃಥಕ್ ಜೀವಾನ್ದ್ವಿಜೋತ್ತಮ ॥ ೨೨ ॥

೧೮-೧೯. ಬ್ರಾಹ್ಮಣೋತ್ತಮನೇ, ಬ್ರಾಹ್ಮಣನ ಮತ್ತು ಬೇಡನೊಬ್ಬನ ಸಂವಾದವನ್ನು ಕೇಳಿಲ್ಲವೇ ? ಹಿಂದೆ ಅತ್ರಿವಂಶೀಯನೂ, ತಪಸ್ಸಿನಲ್ಲಿ ಆಸಕ್ತನೂ, ಬೆಳಗಿನ ಹೊತ್ತು ಸ್ನಾನಮಾಡುವುದಲ್ಲದೆ ಮೂರುಕಾಲದಲ್ಲಿಯೂ ಯಜ್ಞ ಮಾಡುವುದರಲ್ಲಿ ಆಸಕ್ತಿಯುಳ್ಳವನೂ ಆದ ಸಂಯಮನೆಂಬ ಋಷಿಯೊಬ್ಬನು ಧರ್ಮಾರಣ್ಯದಲ್ಲಿ ಪಾವನವೂ, ಶುಭಕರವೂ ಆದ ಭಾಗೀರಥೀನದಿಗೆ ಸ್ನಾನಕ್ಕಾಗಿ ಒಂದು ದಿವಸ ಬಂದನು.

೨೦. ಅಲ್ಲಿ ಜಿಂಕೆಗಳ ದೊಡ್ಡ ಗುಂಪೊಂದು ಮಲಗಿದ್ದಿತು. ನಿಷ್ಠುರಕನೆಂಬ ಬೇಡನೊಬ್ಬನು ಅದನ್ನು ಕೊಲ್ಲಲು ಬಿಲ್ಲನ್ನು ಹಿಡಿದುಕೊಂಡು ಬಾಣವನ್ನು ಹೂಡಿ ಯಮನಂತೆ ಅಲ್ಲಿಗೆ ಬಂದನು.

೨೧. ಸಂಯಮನು, ಬೇಟೆಯಲ್ಲಿ ಆಸಕ್ತನಾದ ಆ ಬೇಡನನ್ನು ನೋಡಿ "ಭದ್ರನೇ, ಈ ಜೀವಿಗಳ ಕೊಲೆಯನ್ನು ಮಾಡಬೇಡ" ಎಂದು ತಡೆದನು.

೨೨-೨೩. ಬೇಡನು ಈ ಮಾತನ್ನು ಕೇಳಿ ನಗುತ್ತಾ, "ದ್ವಿಜೋತ್ತಮನೆ, ಬೇರೆಯ ಜೀವಿಗಳನ್ನು ನಾನು ಹಿಂಸಿಸುವುದಿಲ್ಲ. ಐಂದ್ರಜಾಲಿಕನು ಮಂತ್ರಗಳಿಂದ

ಪರಮಾತ್ಮಾ ಸ್ವಯಂ ಭೂತ್ವೈಃ ಕ್ರೀಡತೇ ಭಗವಾನ್‌ಸ್ವಯಂ ।
ಕೃತಾ ಮಾಯಾವಲೀಮಂತ್ರೈಃ ತದ್ವದೇತನ್ನಸಂಶಯಃ ॥ ೨೩ ॥

ಅಹಂಭಾವಸ್ಸದಾ ಬ್ರಹ್ಮನ್ ನ ವಿಧೇಯೋ ಮುಮುಕ್ಷುಭಿಃ ।
ಪ್ರಾಣಯಾತ್ರಾರತಂ ಸರ್ವಂ ಜಗದೇತದ್ವಿಚೇಷ್ಟತೇ ।
ತತ್ರಾಹಮಿತಿ ಯಃ ಶಬ್ದಃ ಸ ಸಾಧುತ್ವಂ ನ ಗಚ್ಛತಿ ॥ ೨೪ ॥

ಇತ್ಯಾಕರ್ಣ್ಯ ಸ ವಿಪ್ರೇಂದ್ರೋ ದ್ವಿಜಃ ಸಂಯಮನಸ್ತದಾ ।
ವಿಸ್ಮಯೇನಾಬ್ರವೀದ್ವಾಕ್ಯಂ ಲುಬ್ಧಂ ನಿಷ್ಠುರಕಂ ದ್ವಿಜಃ ॥ ೨೫ ॥

ಕಿಮೇತದುಚ್ಯತೇ ಭದ್ರ ಪ್ರತ್ಯಕ್ಷಂ ಹೇತುಮುದ್ವಚಃ ॥ ೨೬ ॥

ತತಃ ಶ್ರುತ್ವಾ ಪುನರ್ವಿಪ್ರಂ ಲುಬ್ಧಕಃ ಪ್ರಾಹ ಧರ್ಮವಿತ್ ।
ಕೃತ್ವಾ ಲೋಹಮಯಂ ಜಾಲಂ ತಸ್ಯಾಧೋ ಜ್ವಲನಂ ದದೌ ॥ ೨೭ ॥

ದತ್ತ್ವವಹ್ನಿಂ ದ್ವಿಜಂ ಪ್ರಾಹ ಜ್ವಾಲ್ಯತಾಂ ಕಾಷ್ಠಸಂಚಯಃ ।
ತತೋ ವಿಪ್ರೋ ಮುಖೇನಾಗ್ನಿಂ ಪ್ರಜ್ವಾಲ್ಯ ವಿರರಾಮ ಹ ॥ ೨೮ ॥

ಆಶ್ಚರ್ಯಕರವಾದ ಪದಾರ್ಥಗಳನ್ನು ಸೃಷ್ಟಿಸಿ ಆಡುವಂತೆ ಆ ಪರಮಾತ್ಮನು ಪ್ರಾಣಿಗಳೊಡನೆ ತಾನೂ ಆಟವಾಡುತ್ತಾನೆ.

೨೪. ಬ್ರಾಹ್ಮಣನೇ, ಮೋಕ್ಷವನ್ನು ಬಯಸುವವರು ಅಹಂಭಾವವನ್ನು ಮಾಡಬಾರದು. ಪ್ರಾಣಯಾತ್ರೆಯಲ್ಲಿ(ಜೀವನದಲ್ಲಿ) ಆಸಕ್ತಿಯುಳ್ಳ ಜಗತ್ತೆಲ್ಲವೂ ಕರ್ಮ ಮಾಡುತ್ತದೆ. ಅದರಲ್ಲಿ ನಾನು ಎಂಬ ಶಬ್ದವು ಸರಿಹೋಗುವುದಿಲ್ಲ." ಎಂದನು.

೨೫-೨೬. ಬ್ರಾಹ್ಮಣೋತ್ತಮನಾದ ಆ ಸಂಯಮನು ಈ ಮಾತನ್ನು ಕೇಳಿ ಆಶ್ಚರ್ಯದಿಂದ ಬೇಡನಾದ ನಿಷ್ಠುರಕನನ್ನು ನೋಡಿ, "ಭದ್ರನೇ ಇದು ಪ್ರತ್ಯಕ್ಷವಾದ ಕಾರಣವನ್ನು ತೋರಿಸಿ ಹೇಳುವ ಮಾತೋ ?" ಎಂದನು.

೨೭. ಅದನ್ನು ಕೇಳಿ ಧರ್ಮವನ್ನರಿತ ಬೇಡನು, ಲೋಹಮಯವಾದ ಬಲೆಯನ್ನು ಮಾಡಿ ಅದರ ಕೆಳಗೆ ಬೆಂಕಿಯನ್ನಿಟ್ಟನು.

೨೮. ಬ್ರಾಹ್ಮಣನಿಗೂ ಬೆಂಕಿಯನ್ನು ಕೊಟ್ಟು, 'ಸೌದೆಯ ರಾಶಿಯನ್ನುರಿಸು' ಎಂದನು.

ಜ್ವಲಿತೇ ತು ಪುನರ್ವಹ್ನೌ ತಂ ಜಾಲಂ ಲೋಹಸಂಭವಂ ।
ಗವಾಕ್ಷೈರ್ನಿರ್ಗತಜ್ವಾಲಂ ಬಭೌ ಕಾದಂಬಿಗೋಲವತ್ ॥ ೨೯ ॥

ಪೃಥಕ್ ಪೃಥಕ್ ಸಹಸ್ರಾಣಿ ನಿಶ್ಚೇರುಜ್ವರ್ನಾರ್ಚಿಷಃ ।
ಏಕಸ್ಥಾನಗತಸ್ಯಾಪಿ ವಹ್ನೇರಾಯಸ ಜಾಲಕೈಃ ॥ ೩೦ ॥

ತತೋ ಲುಬ್ಧೋಽಬ್ರವೀದ್ವಿಪ್ರಂ ಏಕಾಂ ಜ್ವಾಲಾಂ ಮಹಾಮುನೇ ।
ಗೃಹಾಣ ಯೇನ ಶೇಷಾಣಾಂ ಕರಿಷ್ಯಾಮೀಹ ನಾಶನಂ ॥ ೩೧ ॥

ಏವಮುಕ್ತ್ವಾ ಹುತಾಶೇ ತು ತೋಯಪೂರ್ಣಘಟಂ ದ್ರುತಂ ।
ಚಿಕ್ಷೇಪ ಸಹಸಾ ವಹ್ನಿಃ ಪ್ರಶಶಾಮಾಥ ಪೂರ್ವವತ್ ॥ ೩೨ ॥

ತತೋಽಬ್ರವೀದ್ಲುಬ್ಧಕಸ್ತು ಬ್ರಾಹ್ಮಣಂ ತಂ ತಪೋಧನಂ ।
ಭಗವನ್ಯಾ ತ್ವಯಾ ಜ್ವಾಲಾ ಗೃಹೀತಾಸೀದ್ಧುತಾಶನಾತ್ ।
ಪ್ರಯಚ್ಛ ಯೇನ ಮಾರ್ಗೇಣ ಮಾಂಸಾನ್ಯಾನಾಯ್ಯ ಭಕ್ಷಯೇ ॥ ೩೩ ॥

ಬ್ರಾಹ್ಮಣನು ಬಾಯಿಂದಲೂ ಬೆಂಕಿಯನ್ನು ಚೆನ್ನಾಗಿ ಉರಿಯುವಂತೆ ಮಾಡಿ ಸುಮ್ಮನಾದನು

೨೯. ಬೆಂಕಿಯನ್ನುರಿಸಲು, ಲೋಹದ ಆ ಬಲೆಯು ತೂತುಗಳಿಂದ ಹೊರಟ ಉರಿಯಿಂದ ಉರಿಯ ಗೋಳ (ಚಂಡು) ದಂತೆ ಹೊಳೆಯಿತು.

೩೦. ಬೆಂಕಿಯು ಒಂದೆಡೆಯಲ್ಲಿಯೇ ಇದ್ದರೂ, ಅದರ ಉರಿಗಳು ಕಬ್ಬಿಣದ ಬಲೆಯ ತೂತುಗಳಿಂದ ಬೇರೆಬೇರೆಯಾಗಿ ಸಾವಿರಾರು ಹೊರಟವು.

೩೧. ಬಳಿಕ ಬೇಡನು ಬ್ರಾಹ್ಮಣನಿಗೆ 'ಮಹಾಮುನಿಯೇ. ನೀನೊಂದು ಉರಿಯನ್ನು (ಜ್ವಾಲೆಯನ್ನು) ತೆಗೆದುಕೊ. ನಾನು ಉಳಿದುದನ್ನು ಆರಿಸುತ್ತೇನೆ' ಎಂದನು.

೩೨. ಹೀಗೆ ಹೇಳಿ,ನೀರು ತುಂಬಿದ ಗಡಿಗೆಯನ್ನು ಬೇಗನೆ ಬೆಂಕಿಯಲ್ಲಿ ಹಾಕಿದನು. ಬೆಂಕಿಯು ಮೊದಲಿನಂತೆ ತಟ್ಟನೆ ಆರಿಹೋಯಿತು.

೩೩. ಆಮೇಲೆ ಬೇಡನು ಬ್ರಾಹ್ಮಣನನ್ನು ನೋಡಿ, 'ಪೂಜ್ಯನೇ, ನೀನು ಬೆಂಕಿಯ ಯಾವ ಉರಿಯನ್ನು ಹಿಡಿದುಕೊಂಡಿದ್ದೆಯೋ ಅದನ್ನು ಕೊಡು. ಮಾಂಸವನ್ನು ತಂದು, ಅದರಿಂದ ಬೇಯಿಸಿ, ತಿನ್ನುತ್ತೇನೆ' ಎಂದನು.

ಏವಮುಕ್ತಸ್ತದಾ ವಿಪ್ರೋ ಯಾವದಾಯುಸಜಾಲಕಂ ।
ಪಶ್ಯತ್ಯೇವ ನ ತತ್ರಾಗ್ನಿರ್ಮೂಲನಾಶೇ ಗತಃ ಕ್ಷಯಂ ॥ ೩೪ ॥

ತತೋ ವಿಲಕ್ಷ್ಯಭಾವೇನ ಬ್ರಾಹ್ಮಣಃ ಶಂಸಿತವ್ರತಃ ।
ತೂಷ್ಣೀಂಭೂತಃ ಸ್ಥಿತಸ್ತಾವಲ್ಲುಬ್ಧಕೋ ವಾಕ್ಯಮಬ್ರವೀತ್ ॥ ೩೫ ॥

ಏತಸ್ಮಿನ್ಜ್ವಲಿತೋ ವಹ್ನಿರ್ಬಹುಶಾಖಶ್ಚ ಸತ್ತಮ ।
ಮೂಲನಾಶೇ ಭವೇನ್ನಾಶಸ್ತದ್ವದೇತದಪಿ ದ್ವಿಜ ॥ ೩೬ ॥

ಆತ್ಮಾ ಸ ಪ್ರಕೃತಿಸ್ಥಶ್ಚ ಭೂತಾನಾಂ ಸಂಶ್ರಯೋ ಭವೇತ್ ।
ವಿಕೃತಾದುದ್ಭವಸ್ತಸ್ಯ ಏಷಾ ವೈ ಜಗತಃ ಸ್ಥಿತಿಃ ॥ ೩೭ ॥

ಪಿಂಡಗ್ರಹಣಧರ್ಮೇಣ ಯದಸ್ಯ ವಿಹಿತಂ ವ್ರತಂ ।
ತತ್ತದಾತ್ಮನಿ ಸಂಯೋಜ್ಯ ಕುರ್ವಾಣೋ ನಾವಸೀದತಿ ॥ ೩೮ ॥

---

೩೪. ಹೀಗೆ ಹೇಳಿಸಿಕೊಂಡ ಬ್ರಾಹ್ಮಣನು ಕಬ್ಬಿಣದ ಬಲೆಯನ್ನು ನೋಡಲು, ಅಲ್ಲಿ ಉರಿಯು ಕಾಣಲೇ ಇಲ್ಲ. ಮೂಲವಾದ ಬೆಂಕಿಯು ಆರಿ ಹೋಗಿದ್ದುದರಿಂದ ಅದೂ ಹೋಗಿದ್ದಿತು.

೩೫. ಆಗ ವ್ರತಧಾರಿಯಾದ ಆ ಬ್ರಾಹ್ಮಣನು ಆಶ್ಚರ್ಯಪಟ್ಟು ಸುಮ್ಮನಿರಲು ಬೇಡನು ಹೀಗೆ ಹೇಳಿದನು.

೩೬. 'ಸಜ್ಜನೋತ್ತಮನೇ, ಈ ಬಲೆಯಲ್ಲುರಿಸಿದ ಬೆಂಕಿಯು ಹಲವು ಕವಲುಗಳುಳ್ಳುದಾಗಿದ್ದಿತು. ಮೂಲವಾದ ಬೆಂಕಿಯನ್ನಾರಿಸಲು ಅದೆಲ್ಲಾ ಆರಿಹೋಯಿತು. ಬ್ರಾಹ್ಮಣನೇ ಇದೂ ಅದರಂತೆಯೇ.

೩೭. ಪ್ರಕೃತಿಸ್ಥನಾದ ಆ ಆತ್ಮನು ಪ್ರಾಣಿಗಳಿಗೆ ಆಶ್ರಯನಾಗಿರುತ್ತಾನೆ ಅವನ ವಿಕಾರದಿಂದಲೇ ಉತ್ಪತ್ತಿ. ಇದೇ ಜಗತ್ತಿನ ಸ್ಥಿತಿ.

೩೮. ಆಹಾರವನ್ನು ಪಡೆಯುವುದಕ್ಕಾಗಿ, ದೇಹವನ್ನು ಪಡೆದಿರುವುದರಿಂದ ಮನುಷ್ಯರಿಗೆ ಯಾವುದು ವಿಹಿತವಾದ ವ್ರತವೋ, ನಿಯಮವೋ, ಅದನ್ನು ಪರಮಾತ್ಮನಲ್ಲಿ ಅರ್ಪಿಸಿ, ಮಾಡುವವನು ದುಃಖಪಡುವುದಿಲ್ಲ.'

ಏವಮುಕ್ತೇ ತು ವ್ಯಾಧೇನ ಬ್ರಾಹ್ಮಣೇ ರಾಜಸತ್ತಮ ।
ಪುಷ್ಪವೃಷ್ಟಿರಥಾಕಾಶಾತ್ತಸ್ಯೋಪರಿ ಪಪಾತ ಹ ॥ ೩೯ ॥

ವಿಮಾನಾನಿ ಚ ದಿವ್ಯಾನಿ ಕಾಮಗಾನಿ ಮಹಾಂತಿ ಚ ।
ಬಹುರತ್ನಾನಿ ಮುಖ್ಯಾನಿ ದದೃಶೇ ಬ್ರಾಹ್ಮಣೋತ್ತಮಃ ॥ ೪೦ ॥

ತೇಷು ನಿಷ್ಠುರಕಂ ಲುಬ್ಧಂ ಸರ್ವೇಷು ಸಮುಪಸ್ಥಿತಂ ।
ದದೃಶೇ ಬ್ರಾಹ್ಮಣಸ್ತತ್ರ ಕಾಮರೂಪಿಣಮುತ್ತಮಂ ॥ ೪೧ ॥

ಅದ್ವೈತವಾಸನಾಸಿದ್ಧಂ ಯೋಗಾದ್ಬಹುಶರೀರಕಂ ।
ದೃಷ್ಟ್ವಾ ವಿಪ್ರೋ ಮುದಾ ಯುಕ್ತಃ ಪ್ರಯಯೌ ನಿಜಮಾಶ್ರಮಂ॥ ೪೨ ॥

ಏವಂ ಜ್ಞಾನಂ ಭವೇತ್ಕರ್ಮ ಕುರ್ವತೋಽಪಿ ಸ್ವಜಾತಿಕಂ ।
ಭವೇನ್ಮುಕ್ತಿರ್ದ್ವಿಜಶ್ರೇಷ್ಠ ರೈಭ್ಯ ರಾಜ ವಸೋ ಧ್ರುವಂ ॥ ೪೩ ॥

ಏವಂ ತೌ ಸಂಶಯಚ್ಛೇದಂ ಪ್ರಾಪ್ಯ ರೈಭ್ಯವಸೂ ನೃಪ ।
ಬೃಹಸ್ಪತೇಸ್ತತೋ ಧಿಷ್ಣ್ಯಾಜ್ಜಗ್ಮತುರ್ನಿಜಮಾಶ್ರಮಂ ॥ ೪೪ ॥

---

೩೯. ಹೀಗೆ ಬೇಡನು ಬ್ರಾಹ್ಮಣನಿಗೆ ಹೇಳಲು, ರಾಜೋತ್ತಮನೇ, ಆಕಾಶದಿಂದ ಅವನ ಮೇಲೆ ಹೂಮಳೆಯು ಸುರಿಯಿತು.

೪೦. ಇಷ್ಟಾನುಸಾರವಾಗಿ ಸಂಚರಿಸುವ, ಬಹು ರತ್ನಖಚಿತಗಳಾದ ಹಲವು ದಿವ್ಯವಿಮಾನಗಳು ಬ್ರಾಹ್ಮಣನಿಗೆ ಕಾಣಿಸಿದುವು.

೪೧–೪೨. ಅವುಗಳಲ್ಲೆಲ್ಲಾ ಅದ್ವೈತಸಂಸ್ಕಾರಸಿದ್ಧನೂ, ಯೋಗಬಲದಿಂದ ಬಹು ಶರೀರವುಳ್ಳವನೂ, ಕಾಮರೂಪಿಯೂ, ಉತ್ತಮನೂ ಆದ ನಿಷ್ಠುರಕನು (ಬೇಡ) ಕುಳಿತಿರುವುದನ್ನು ನೋಡಿ, ಸಂತಸಗೊಂಡ ಆ ಬ್ರಾಹ್ಮಣನು ತನ್ನ ಆಶ್ರಮಕ್ಕೆ ಹೊರಟುಹೋದನು.

೪೩. ಬ್ರಾಹ್ಮಣೋತ್ತಮನಾದ ರೈಭ್ಯನೇ, ರಾಜವಸುವೇ, ತನ್ನ ಜಾತಿಯ ಕರ್ಮವನ್ನು ಮಾಡುತ್ತಿದ್ದರೂ ಹೀಗೆ ಜ್ಞಾನವಾದರೆ ನಿಜವಾಗಿಯೂ ಮುಕ್ತಿಯಾಗುವುದು.' ಎಂದನು.

೪೪. ಹೀಗೆ ಸಂಶಯಪರಿಹಾರವನ್ನು ಪಡೆದ ರೈಭ್ಯವಸುಗಳು ಬೃಹಸ್ಪತಿಯ ಮನೆಯಿಂದ ತಮ್ಮ ಆಶ್ರಮಕ್ಕೆ ಹೊರಟು ಹೋದರು.

ತಸ್ಮಾತ್ತ್ವಮಪಿ ರಾಜೇಂದ್ರ ದೇವಂ ನಾರಾಯಣಂ ಪ್ರಭುಂ ।
ಅಭೇದೇನ ಸ್ವದೇಹೇ ತು ಪಶ್ಯ-ತ್ವಾರಾಧಯನ್ ಪ್ರಭುಂ ॥ ೪೫ ॥

ಕಪಿಲಸ್ಯ ವಚಃ ಶ್ರುತ್ವಾ ಸ ರಾಜಾಶ್ವಶಿರಾ ವಿಭುಃ ।
ಜ್ಯೇಷ್ಠಂ ಪುತ್ರಂ ಸಮಾಹೂಯ ಧನ್ಯಂ ಸ್ಥೂಲಶಿರಾಹ್ವಯಂ ।
ಅಭಿಷಿಚ್ಯ ನಿಜೇ ರಾಜ್ಯೇ ಸ ರಾಜಾ ಪ್ರಯಯೌವನಂ ॥ ೪೬ ॥

ನೈಮಿಷಾಖ್ಯಂ ವರಾರೋಹೇ ತತ್ರ ಯಜ್ಞತನುಂ ಹರಿಂ ।
ತಪಸಾರಾಧಯಾಮಾಸ ಯಜ್ಞಮೂರ್ತಿಂ ಸ್ತವೇನ ಚ ॥ ೪೭ ॥

॥ ಧರಣ್ಯುವಾಚ ॥

ಕಥಂ ಯಜ್ಞತನೋಃ ಸ್ತೋತ್ರಂ ರಾಜ್ಞಾ ನಾರಾಯಣಸ್ಯ ಹ ।
ಸ್ತುತಿಃ ಕೃತಾ ಮಹಾಭಾಗ ಪುನರೇತಚ್ಚ ಶಂಸ ಮೇ ॥ ೪೮ ॥

---

೪೫. " ಆದುದರಿಂದ ಎಲೈ ರಾಜೇಂದ್ರನೇ, ಪ್ರಭುವೂ, ದೇವನೂ ಆದ ನಾರಾಯಣನನ್ನು ನೀನೂ ಅಭೇದದಿಂದ ಆರಾಧಿಸುತ್ತ ನಿನ್ನ ದೇಹದಲ್ಲಿಯೇ ನೋಡು. " ಎಂದನು.

೪೬-೪೭. ಕಪಿಲನ ಮಾತನ್ನು ಕೇಳಿ, ರಾಜನಾದ ಅಶ್ವಶಿರನು, ಸುಕೃತಿಯಾದ ಸ್ಥೂಲಶಿರನೆಂಬ ಹಿರಿಯ ಮಗನನ್ನು ಕರೆದು, ಅವನಿಗೆ ತನ್ನ ರಾಜ್ಯದಲ್ಲಿ ಅಭಿಷೇಕ ಮಾಡಿ, ತಾನು ನೈಮಿಷಾರಣ್ಯಕ್ಕೆ ಹೊರಟು ಹೋದನು. ವರಾರೋಹೇ, ಅಲ್ಲಿ ಯಜ್ಞಮೂರ್ತಿಯಾದ ಹರಿಯನ್ನು ತಪಸ್ಸಿನಿಂದಲೂ, ಸ್ತೋತ್ರದಿಂದಲೂ ಆರಾಧಿಸಿದನು.

೪೮. ಭೂದೇವಿ—ಮಹಾಭಾಗ್ಯನೇ, ಅಶ್ವಶಿರರಾಜನು ಯಜ್ಞ ಮೂರ್ತಿಯಾದ ನಾರಾಯಣನನ್ನು ಹೇಗೆ ಸ್ತುತಿಸಿದನೋ ಅದನ್ನು ನನಗೆ ಹೇಳು.

|| ವರಾಹ ಉವಾಚ ||

ನಮಾಮಿನಿತ್ಯಂ ತ್ರಿದಶಾಧಿಪಸ್ಯ
ಭವಸ್ಯ ಸೂರ್ಯಸ್ಯ ಹುತಾಶನಸ್ಯ ।
ಸೋಮಸ್ಯ ರಾಜ್ಞೋ ಮರುತಾಮನೇಕ
ರೂಪಂ ಹರಿಂ ಯಜ್ಞತನುಂ ನಮಸ್ಯೇ || ೪೯ ||

ಸುಭೀಮದಂಷ್ಟ್ರಂ ಶಶಿಸೂರ್ಯನೇತ್ರಂ
ಸಂವತ್ಸರದ್ವ್ಯಾಯನಯುಗ್ಮ ಕುಕ್ಷಿಂ ।
ದರ್ಭಾಂಗರೋಮಾಣಮಘೋಗ್ರಶಕ್ತಿಂ
ಸನಾತನಂ ಯಜ್ಞನರಂ ನಮಾಮಿ || ೫೦ ||

ದ್ಯಾವಾಪೃಥಿವ್ಯೋರಿದಮಂತರಂ ಹಿ
ವ್ಯಾಪ್ತಂ ಶರೀರೇಣ ದಿಶಶ್ಚ ಸರ್ವಾಃ ।
ತಮಾದ್ಯಮೀಶಂ ಜಗತಾಂ ಪ್ರಸೂತಿಂ
ಜನಾರ್ದನಂ ತಂ ಪ್ರಣತೋಽಸ್ಮಿ ನಿತ್ಯಂ || ೫೧ ||

---

೪೯. ವರಾಹ—ಇಂದ್ರಹರಸೂರ್ಯಾಗ್ನಿಸೋಮನೃಪಮರುತ್ತುಗಳ ಹಲವು ರೂಪಗಳುಳ್ಳ ಹರಿಯನ್ನು ಆ ಯಜ್ಞಮೂರ್ತಿಯನ್ನು ನಮಿಸುತ್ತೇನೆ.

೫೦. ಅತಿ ಭಯಂಕರವಾದ ಕೋರೆದಾಡೆಗಳನ್ನೂ ಶಶಿಸೂರ್ಯರೆಂಬ ಕಣ್ಣುಗಳನ್ನೂ, ಎರಡು ಅಯನಗಳುಳ್ಳ ವರ್ಷವೆಂಬುದರವನ್ನೂ, ದರ್ಭೆಯ ರೋಮವನ್ನೂ, ಅತ್ಯುಗ್ರ ಶಕ್ತಿಯನ್ನೂ, ಪಡೆದ ಅನಾದಿಯಜ್ಞಪುರುಷನನ್ನು ನಮಿಸುವೆನು.

೫೧. ಭೂಮ್ಯಾಕಾಶಗಳ ಈ ಅವಕಾಶವನ್ನೂ ಎಲ್ಲಾ ದಿಕ್ಕುಗಳನ್ನೂ, ಶರೀರದಿಂದ ವ್ಯಾಪಿಸಿಕೊಂಡಿರುವವನೂ, ಸ್ತುತ್ಯನೂ, ಈಶನೂ, ಜಗದುತ್ಪತ್ತಿ ಕಾರಣನೂ ಆದ ಜನಾರ್ದನನನ್ನು ಯಾವಾಗಲೂ ವಂದಿಸುತ್ತೇನೆ.

ಸುರಾಸು ರಾಣಾ ಮಜಯೋ ಜಯಾಯ
ಯುಗೇ ಯುಗೇ ಯತ್ಸ್ವಶರೀರ ಮಾದ್ಯಂ ||
ಸೃಜತ್ಯನಾದಿಃ ಪರಮೇಶ್ವರೋಯಃ |
ತಂಯಜ್ಞಮೂರ್ತಿಂ ಪ್ರಣತೋಸ್ಮಿ ನಿತ್ಯಂ || ೫೨ ||

ದಧಾರ ಮಾಯಾಮಯ ಮುಗ್ರತೇಜಾಃ
ಜಯಾಯ ಚಕ್ರಂ ತ್ವಮಲಂ ಸುಶುಭ್ರಂ |
ಸಾರಂಗಶಂಖಾದಿ ಚತುರ್ಭುಜೋಯಃ
ತಂ ಯಜ್ಞಮೂರ್ತಿಂ ಪ್ರಣತೋಸ್ಮಿನಿತ್ಯಂ || ೫೩ ||

ಕ್ವಚಿತ್ ಸಹಸ್ರಂ ಶಿರಸಾಂ ದಧಾನಃ
ಕ್ವಚಿನ್ಮಹಾ ಪರ್ವತತುಲ್ಯಕಾಯಃ |
ಕ್ವಚಿತ್ಸ ಏವ ತ್ರಸರೇಣುತುಲ್ಯೋ
ಯಸ್ತಂ ಸದಾ ಯಜ್ಞನರಂ ನಮಾಮಿ || ೫೪ ||

---

೫೨. ಸುರಾಸುರರಿಂದ ಅಜೇಯನಾದರೂ, ಅನಾದಿಯಾದರೂ, ಜಯಕ್ಕಾಗಿ ಯುಗಯುಗದಲ್ಲಿಯೂ ತನ್ನ ಆದಿಶರೀರವನ್ನು ಸೃಜಿಸುವ ಪರಮೇಶ್ವರನಾದ ಯಜ್ಞಮೂರ್ತಿಯನ್ನು ಯಾವಾಗಲೂ ವಂದಿಸುತ್ತೇನೆ.

೫೩. ಉಗ್ರತೇಜನಾದ ಯಾರು ಜಯಕ್ಕಾಗಿ ಮಾಯಾಮಯವೂ, ನಿರ್ಮಲವೂ ಆದ ಚಕ್ರವನ್ನೂ, ಅತಿ ಶುಭ್ರವಾದ ಶಂಖಶಾರ್ಙಾದಿಗಳನ್ನೂ, ಧರಿಸಿದನೋ ಆ ಚತುರ್ಭುಜನಾದ ಯಜ್ಞಮೂರ್ತಿಯನ್ನು ಯಾವಾಗಲೂ ವಂದಿಸುತ್ತೇನೆ.

೫೪. ಯಾರು ಕೆಲವು ಸಂದರ್ಭಗಳಲ್ಲಿ ಸಾವಿರತಲೆಗಳನ್ನು ಧರಿಸುವನೋ ಕೆಲವು ಸಂಥರ್ಭಗಳಲ್ಲಿ ಪರ್ವತಸಮ ದೇಹನೋ, ಮತ್ತೆ ಕೆಲವು ಸಂದರ್ಭಗಳಲ್ಲಿ ತಾನೇ ತ್ರಸರೇಣು ಸಮಾನನೋ ಆ ಯಜ್ಞಪುರುಷನನ್ನು ನಮಸ್ಕರಿಸುತ್ತೇನೆ.

ಚತುರ್ಮುಖೋಯಃ ಸೃಜತೇ ಸಮಗ್ರಂ
ರಥಾಂಗಪಾಣಿಃ ಪ್ರತಿಪಾಲನಾಯ ।
ಕ್ಷಯಾಯ ಕಾಲಾನಲಸನ್ನಿಭೋ ಯಃ
ತಂ ಯಜ್ಞಮೂರ್ತಿಂ ಪ್ರಣತೋಽಸ್ಮಿ ನಿತ್ಯಂ ॥ ೫೫ ॥

ಸಂಸಾರ ಚಕ್ರಕ್ರಮಣಕ್ರಿಯಾಯೈ
ಯ ಇಜ್ಯತೇ ಸರ್ವಗತಃ ಪುರಾಣಃ ।
ಯೋ ಯೋಗಿನಾಂ ಧ್ಯಾನಗತೋಽಪ್ರಮೇಯಃ
ತಂ ಯಜ್ಞಮೂರ್ತಿಂ ಪ್ರಣತೋಽಸ್ಮಿ ನಿತ್ಯಂ ॥ ೫೬ ॥

ಸಮ್ಯಜ್ಮನಸ್ಯರ್ಪಿತವಾನಹಂ ತೇ
ಯದಾ ಸುದೃಶ್ಯಂ ಸ್ವತನೌ ತು ತತ್ವಂ ।
ನಚಾನ್ಯದಸ್ತೀತಿ ಮತಿಃ ಸ್ಥಿರಾ ಮೇ
ಯತಸ್ತತೋ ಯಾತಿ ವಿಶುದ್ಧಭಾವಂ ॥ ೫೭ ॥

---

೫೫. ಯಾರು ಬ್ರಹ್ಮನಾಗಿ ಲೋಕವನ್ನು ಸಮಗ್ರವಾಗಿ ಸೃಜಿಸುವನೋ, ಯಾರು ರಕ್ಷಣೆಗಾಗಿ ಚಕ್ರಪಾಣಿಯಾದ ವಿಷ್ಣುವೋ, ನಾಶಕ್ಕಾಗಿ ಕಾಲಾಗ್ನಿ ಸಮಾನನಾದ ರುದ್ರನೋ ಆ ಯಜ್ಞಪುರುಷನನ್ನು ನಮಸ್ಕರಿಸುತ್ತೇನೆ.

೫೬. ಸಂಸಾರ ಚಕ್ರಗಮನಕಾರ್ಯಕ್ಕಾಗಿ ಸರ್ವಗತನೂ, ಪುರಾಣನೂ ಆದ ಯಾರನ್ನು ಪೂಜಿಸುವೆವೋ, ಯಾರು ಯೋಗಿಗಳ ಧ್ಯಾನಗೋಚರನೋ, ಅಪ್ರಮೇಯನಾದ ಆ ಯಜ್ಞಮೂರ್ತಿಗೆ ನಿತ್ಯವೂ ಪ್ರಣಾಮಮಾಡುತ್ತೇನೆ.

೫೭. ಯಾವಾಗ ಸ್ವದೇಹದಲ್ಲಿ ಸುದೃಶ್ಯವಾದ ನಿನ್ನ (ತತ್ವ)ಸ್ವರೂಪವನ್ನು ನೋಡಿ, ಮನಸ್ಸಿಗೆ ತಂದುಕೊಂಡೆನೋ ಆಗ ನೀನಲ್ಲದೆ ಬೇರಾವುದೂ ಇಲ್ಲವೆಂದು ನನಗೆ ಉಂಟಾದ ಸ್ಥಿರಬುದ್ಧಿಯು ವಿಶುದ್ಧಭಾವನ್ನುಂಟುಮಾಡುತ್ತದೆ.

ಇತೀರಿತಸ್ತಸ್ಯ ಹುತಾಶನಾರ್ಚಿಃ
ಪ್ರಖ್ಯಂ ತುತೇಜಃ ಪುರತೋ ಬಭೂವ ।
ತಸ್ಮಿನ್ಸ ರಾಜಾ ಪ್ರವಿವೇಶ ಬುದ್ಧಿಂ
ಕೃತ್ವಾಲಯಂ ಪ್ರಾಪ್ತವಾನ್ಯಜ್ಞಮೂರ್ತೌ ॥ ೫೮ ॥

ಇತಿ ವರಾಹಪುರಾಣೇ ಆದಿಕೃತವೃತಾಂತೇ ರೈಭ್ಯವಸುಚರಿತೇ ಕರ್ಮಜಮೋಕ್ಷನಾರಾಯಣಸ್ತೋತ್ರಯೋಃ ನಿರೂಪಣಂ ನಾಮ ಪಂಚಮೋಽಧ್ಯಾಯಃ

---

೫೮. ಹೀಗೆಂದು ಸ್ತುತಿಸಿದ ಅಶ್ವಶಿರರಾಜನ ಮುಂದೆ ಅಗ್ನಿಜ್ವಾಲೆಯಂತಹ ತೇಜಸ್ಸುಂಟಾಯಿತು. ರಾಜನು ಮನಸ್ಸುಮಾಡಿ, ಅದರಲ್ಲಿ ಪ್ರವೇಶಿಸಿ ಯಜ್ಞಮೂರ್ತಿಯಲ್ಲಿ ಐಕ್ಯನಾದನು.

ಅಧ್ಯಾಯದ ಸಾರಾಂಶ :—

ಶ್ರೀವರಾಹನು ಭೂದೇವಿಗೆ–ಅಶ್ವಶಿರನೆಂಬ ದೊರೆಯು ಕಪಿಲಮುನಿಯನ್ನು 'ಮುಕ್ತಿಯು ಕರ್ಮಿಗೆ ದೊರೆಯುವುದೋ? ಜ್ಞಾನಿಗೆ ದೊರೆಯುವುದೋ?' ಎಂದು ಪ್ರಶ್ನಿಸಿದನು. ಕಪಿಲಮುನಿಯು, ಅದೇ ವಿಚಾರದಲ್ಲಿ ಹಿಂದೆ ರೈಭ್ಯವಸುಗಳಿಗೆ ಬೃಹಸ್ಪತಿಯು ಹೇಳಿದ್ದ 'ಮನುಷ್ಯನು ಮಾಡುವ ಕರ್ಮವೆಲ್ಲವನ್ನೂ ತಾನು ಮಾಡುವೆನೆಂದೆಣಿಸದೆ ನಾರಾಯಣನಿಗರ್ಪಿಸಿಬಿಟ್ಟರೆ, ಕರ್ಮವನ್ನಂಟಿಸಿಕೊಳ್ಳದ ಮುಕ್ತಿಯನ್ನು ಪಡೆಯಬಹುದು. ಈ ವಿಚಾರದಲ್ಲಿ ನಿಷ್ಠುರಕನೆಂಬ ಬೇಡನಿಗೂ ಬ್ರಾಹ್ಮಣನಿಗೂ ನಡೆದ ಸಂವಾದವಿದೆ. ಬೇಡನು ಸ್ವಜಾತಿಕರ್ಮವನ್ನು ಮಾಡುತ್ತಿದ್ದರೂ ಪರಮಾತ್ಮನೇ ಎಲ್ಲವನ್ನೂ ಮಾಡಿಸುವನೆಂಬ ಜ್ಞಾನದಿಂದ ಮುಕ್ತಿಯನ್ನು ಪಡೆದನು' ಎಂಬುದೇ ಮೊದಲಾದ ವಿಚಾರಗಳನ್ನು ತಿಳಿಸಿದನು. ಬಳಿಕ ಅಶ್ವಶಿರನು ನೈಮಿಷಾರಣ್ಯಕ್ಕೆ ಹೋಗಿ, ಅಲ್ಲಿ ನಾರಾಯಣನನ್ನು ತಪಸ್ಸಿನಿಂದಲೂ, ಸ್ತೋತ್ರದಿಂದಲೂ ಆರಾಧಿಸಿ ಮುಕ್ತಿಯನ್ನು ಪಡೆದನು. ಎಂದು ಹೇಳಿ, ಅಶ್ವಶಿರನು ಮಾಡಿದ ಯಜ್ಞಮೂರ್ತಿಯಾದ ನಾರಾಯಣನ ಸ್ತುತಿಯನ್ನೂ ಹೇಳುವನು. ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಐದನೆಯ ಅಧ್ಯಾಯ.

॥ ಶ್ರೀಃ ॥

-X-

ಷಷ್ಠೋಽಧ್ಯಾಯಃ

ಅಥ ಪುಂಡರೀಕಾಕ್ಷಪಾರಸ್ತೋತ್ರಂ

॥ ಧರಣ್ಯುವಾಚ ॥

ಸವಸುಃ ಸಂಶಯುಚ್ಛೇದಂ ಪ್ರಾಪ್ಯ ರೈಭ್ಯಶ್ಚ ಸತ್ತಮಃ ।
ಉಭೌ ಕಿಂ ಚಕ್ರತುರ್ದೇವ ಶ್ರುತ್ವಾ ಚಾಂಗಿರಸಂ ವಚಃ ॥ ೧ ॥

॥ ವರಾಹ ಉವಾಚ ॥

ಸವಸುಃ ಸರ್ವಧರ್ಮಜ್ಞಃ ಸ್ವರಾಜ್ಯಂ ಪ್ರತ್ಯಪಾಲಯತ್ ।
ಅಯುಜದ್ಬಹುಭಿರ್ಯಜ್ಞೈರ್ಮಹದ್ಭಿರ್ಭೂರಿದಕ್ಷಿಣೈಃ ॥ ೨ ॥

ಕರ್ಮಕಾಂಡೇನ ದೇವೇಶಂ ಹರಿಂ ನಾರಾಯಣಂ ಪ್ರಭುಂ ।
ತೋಷಯಾಮಾಸ ರಾಜೇಂದ್ರಸ್ತಮಭೇದೇನ ಚಿಂತಯನ್ ॥ ೩ ॥

ಆರನೆಯ ಅಧ್ಯಾಯ

ಪುಂಡರೀಕಾಕ್ಷಪರವಾದ ಸ್ತೋತ್ರ

೧. ಭೂದೇವಿ :—ದೇವ, ಬೃಹಸ್ಪತಿಯ ಮಾತನ್ನು ಕೇಳಿ, ಸಂದೇಹವನ್ನು ಕಳೆದುಕೊಂಡ ಆ ವಸುವೂ, ಸಜ್ಜನೋತ್ತಮನಾದ ರೈಭ್ಯನೂ (ಬಳಿಕ) ಏನು ಮಾಡಿದರು ?

೨. ವರಾಹ :—ಸರ್ವಧರ್ಮಗಳನ್ನೂ ಅರಿತ ಆ ವಸುವು ತನ್ನ ರಾಜ್ಯವನ್ನು ಪರಿಪಾಲಿಸುತ್ತ, ಹೆಚ್ಚಾದ ದಕ್ಷಿಣೆಯುಳ್ಳ ಹಲವು ಮಹಾಯಜ್ಞಗಳನ್ನು ಮಾಡಿದನು.

೩. ದೇವೇಶನೂ, ಪಾಪಹರನೂ, ಒಡೆಯನೂ ಆದ ನಾರಾಯಣನನ್ನು ಅಭೇದದಿಂದ ಧ್ಯಾನಿಸುತ್ತಾ, ಹಲವು ಸತ್ಕರ್ಮಗಳಿಂದ ಸಂತೋಷಪಡಿಸಿದನು.

ತತಃ ಕಾಲೇನ ಮಹತಾ ತಸ್ಯ ರಾಜ್ಞೋ ಮತಿಃ ಕಿಲ ।
ನಿವೃತ್ತರಾಜ್ಯಭೋಗೇಚ್ಛಾ ದ್ವಂದ್ವ ಸ್ಯಾಂತಮುಪೇಯುಷಃ ॥ ೪ ॥

ತತಃ ಪುತ್ರಂ ವಿವಸ್ವಂತಂ ಶ್ರೇಷ್ಠಂ ಭ್ರಾತೃಶತಸ್ಯಹ ।
ಅಭಿಷಿಚ್ಯ ಸ್ವಕೇ ರಾಜ್ಯೇ ತಪೋವನಮುಪಾಗತಃ ॥ ೫ ॥

ಪುಷ್ಕರಂ ನಾಮ ತೀರ್ಥಾನಾಂ ಪ್ರವರಂ ಯತ್ರ ಕೇಶವಃ ।
ಪುಂಡರೀಕಾಕ್ಷನಾಮಾತು ಪೂಜ್ಯತೇ ತತ್ಪರಾಯಣೈಃ ॥ ೬ ॥

ತತ್ರ ಗತ್ವಾಸ ರಾಜರ್ಷಿಃ ಕಾಶ್ಮೀರಾಧಿಪತಿರ್ವಸುಃ ।
ಅತಿತೀವ್ರೇಣ ತಪಸಾ ಸ್ವಶರೀರಮಶೋಷಯತ್ ॥ ೭ ॥

ಪುಂಡರೀಕಾಕ್ಷಪಾರಂತು ಸ್ತವಂಭಕ್ತ್ಯಾ ಜಪನ್ ಬುಧಃ ।
ಆರಿರಾಧಯಿಷುರ್ದೇವಂ ನಾರಾಯಣಮಕಲ್ಮಷಂ ।
ಸ್ತೋತ್ರಾಂತೇ ತಲ್ಲಯಂ ಪ್ರಾಪ್ತಃ ಸರಾಜಾ ರಾಜಸತ್ತಮಃ ॥ ೮ ॥

---

೪. ಬಹುಕಾಲದ ಮೇಲೆ ವಿಷಯ (ಸಂಸಾರ) ಸುಖದ ಕಡೆಗಂಡ ಆ ರಾಜನಿಗೆ ರಾಜ್ಯಸುಖಭೋಗಗಳಲ್ಲಿ ಮನಸ್ಸಿಲ್ಲವಾಯಿತು.

೫. ಬಳಿಕ ತನ್ನ ನೂರುಜನ ಮಕ್ಕಳಲ್ಲಿ ಮೇಲಾದ ವಿವಸ್ವಂತನೆಂಬವನಿಗೆ ಸ್ವರಾಜ್ಯಾಭಿಷೇಕ ಮಾಡಿ, ತಪೋವನಕ್ಕೆ ಹೊರಟು ಹೋದನು.

೬–೭. ಕಾಶ್ಮೀರದೇಶದೊಡೆಯನಾದ ಆ ವಸು ರಾಜರ್ಷಿಯು, ಪರಮಾತ್ಮನಲ್ಲಿ ಆಸಕ್ತರಾದವರು ಪುಂಡರೀಕಾಕ್ಷನೆಂಬ ಹೆಸರಿನ ಆ ಕೇಶವನನ್ನು ಪೂಜಿಸುವ, ತೀರ್ಥಗಳಲ್ಲೆಲ್ಲಾ ಉತ್ತಮವಾದ ಆ ಪುಷ್ಕರವೆಂಬ ತೀರ್ಥಕ್ಕೆ ಹೋಗಿ ಅತ್ಯುಗ್ರವಾದ ತಪಸ್ಸಿನಿಂದ ದೇಹವನ್ನು ಕುಂದಿಸಿದನು.

೮. ಪಾಪರಹಿತನಾದ ನಾರಾಯಣದೇವನನ್ನು ತೃಪ್ತಿಪಡಿಸುವ ಇಚ್ಛೆಯಿಂದ, ಭಕ್ತಿಯಿಂದ ಪುಂಡರೀಕಾಕ್ಷಪಾರವೆಂಬ ಸ್ತೋತ್ರವನ್ನು ಜಪಿಸುತ್ತಾ ಆ ರಾಜೋತ್ತಮನು ಸ್ತೋತ್ರವನ್ನು ಹೇಳಿ ಮುಗಿಸುವಾಗ ಆ ಪುಂಡರೀಕಾಕ್ಷನಲ್ಲಿ ಐಕ್ಯನಾದನು.

॥ ಧರಣ್ಯುವಾಚ ॥

ಪುಂಡರೀಕಾಕ್ಷಪಾರಂತು ಸ್ತೋತ್ರಂ ದೇವ ಕಥಂ ಸ್ಮೃತಂ ।
ಕೀದೃಶಂ ತನ್ಮಮಾಚಕ್ಷ್ವ ಪರಮೇಶ್ವರ ತತ್ವತಃ ॥ ೯ ॥

॥ ವರಾಹ ಉವಾಚ ॥

ನಮಸ್ತೇ *ಪುಂಡರೀಕಾಕ್ಷ ನಮಸ್ತೇ ÷ಮಧುಸೂದನ ।
ನಮಸ್ತೇ ಸರ್ವಲೋಕೇಶ ನಮಸ್ತೇ ತಿಗ್ಮಚಕ್ರಿಣೇ ॥ ೧೦ ॥

ವಿಶ್ವಮೂರ್ತಿಂ ಮಹಾಬಾಹುಂ ವರದಂ ಸರ್ವತೇಜಸಂ ।
ನಮಾಮಿ ಪುಂಡರೀಕಾಕ್ಷಂ ವಿದ್ಯಾವಿದ್ಯಾತ್ಮಕಂ ವಿಭುಂ ॥ ೧೧ ॥

ಆದಿದೇವಂ ಮಹಾದೇವಂ ವೇದವೇದಾಂಗ ಪಾರಗಂ ।
ಗಂಭೀರಂ ಸರ್ವದೇವಾನಾಂ ನಮಸ್ಯೇ ವಾರಿಜೇಕ್ಷಣಂ ॥ ೧೨ ॥

ಸಹಸ್ರಶೀರ್ಷಿಣಂ ದೇವಂ ಸಹಸ್ರಾಕ್ಷಂ ಮಹಾಭುಜಂ ।
ಜಗತ್ ಸಂವ್ಯಾಪ್ಯ ತಿಷ್ಠಂತಂ ನಮಸ್ಯೇ ಪರಮೇಶ್ವರಂ ॥ ೧೩ ॥

---

೯. ಧರಣೀದೇವಿ :—ದೇವ, ಪರಮೇಶ್ವರ, ಪುಂಡರೀಕಾಕ್ಷಪಾರವೆಂಬ ಸ್ತೋತ್ರವು ಯಾವುದು ? ಹೇಗೆ ಹೇಳಬೇಕು. ಅದನ್ನು ಸರಿಯಾಗಿ ಹೇಳು.

೧೦. ಪುಂಡರೀಕಾಕ್ಷನೇ ನಿನಗೆ ನಮಿಸುವೆನು. ಮಧುಸೂದನ ನಿನಗೆ ನಮಿಸುವೆನು. ಸರ್ವಲೋಕೇಶ, ನಮಿಸುವೆನು. ತೀಕ್ಷ್ಣಚಕ್ರವನ್ನು ಧರಿಸಿರುವನೇ, ನಮಿಸುವೆನು.

೧೧–೧೨. ವಿಶ್ವಮೂರ್ತೀ, ಮಹಾಬಾಹೊ, ವರದಾ, ಸರ್ವತೇಜನೇ. ಪುಂಡರೀಕಾಕ್ಷನೇ, ದೇವ, ವಿದ್ಯಾವಿದ್ಯಾತ್ಮಕಾ, ವಿಭೂ, ಆದಿದೇವ, ಮಹಾದೇವ, ವೇದವೇದಾಂಗಪಾರಗ, ದೇವಗಂಭೀರನೇ, ಪದ್ಮನೇತ್ರನೇ, ನಿನ್ನನ್ನು ವಂದಿಸುವೆನು.

೧೩. ಸಹಸ್ರಶಿರನೇ, ದೇವ, ಸಹಸ್ರಾಕ್ಷ, ಮಹಾಭುಜ, ವಿಶ್ವವ್ಯಾಪಕನೇ, ನಿನ್ನಂ ನಮಿಪೆಂ ಪರಮೇಶ್ವರ.

---

* ಪುಂಡರೀಕಾಕ್ಷ= ಬಿಳಿಯತಾವರೆಯಂತೆ ಕಣ್ಣುಳ್ಳವನು.

÷ ಮಧುಸೂದನ= ಮಧುವೆಂಬ ರಾಕ್ಷಸನನ್ನು ಕೊಂದವನು.

ಶರಣ್ಯಂ ಶರಣಂ ದೇವಂ ವಿಷ್ಣುಂ ಜಿಷ್ಣುಂ ಸನಾತನಂ ।
ನೀಲಮೇಘಪ್ರತೀಕಾಶಂ ನಮಸ್ಯೇ ಚಕ್ರಪಾಣಿನಂ ॥ ೧೪ ॥

ಶುದ್ಧಂ ಸರ್ವಗತಂ ನಿತ್ಯಂ ವ್ಯೋಮರೂಪಂ ಸನಾತನಂ ।
ಭಾವಾಭಾವವಿನಿರ್ಮುಕ್ತಂ ನಮಸ್ಯೇ ಸರ್ವಗಂ ಹರಿಂ ॥ ೧೫ ॥

ನಾನ್ಯತ್ಕಿಂಚಿತ್ಪ್ರಪಶ್ಯಾಮಿ ವ್ಯತಿರಿಕ್ತಂ ತ್ವಯಾಚ್ಯುತ ।
ತ್ವನ್ಮಯಂಚ ಪ್ರಪಶ್ಯಾಮಿ ಸರ್ವಮೇತಚ್ಚರಾಚರಂ ॥ ೧೬ ॥

ಏವಂತುವದತಸ್ತಸ್ಯ ಮೂರ್ತಿಮಾನ್ ಪುರುಷಃ ಕಿಲ ।
ನಿರ್ಗತ್ಯ ದೇಹಾನ್ನೀಲಾಭೋ ಘನಚಂಡೋ ಭಯಂಕರಃ ॥ ೧೭ ॥

ರಕ್ತಾಕ್ಷೋ ಹ್ರಸ್ವಕಾಯಸ್ತು ದಗ್ಧಸ್ಥೂಣಾಸಮಪ್ರಭಃ ।
ಉವಾಚ ಪ್ರಾಂಜಲಿರ್ಭೂತ್ವಾ ಕಿಂ ಕರೋಮಿ ನರಾಧಿಪ ॥ ೧೮ ॥

---

೧೪. ಶರಣ್ಯಾ, ಶರಣ್ಯಾ, ದೇವ, ವಿಷ್ಣೂ, ಜಿಷ್ಣೂ, ಸನಾತನ, ನೀಲಮೇಘ ಶ್ಯಾಮದೇಹಾ, ಚಕ್ರಪಾಣಿಯೆ, ವಂದಿಪೆಂ.

೧೫. ಶುದ್ಧನೂ, ಸರ್ವಗತನೂ, ನಿತ್ಯನೂ, ಆಕಾಶರೂಪನೂ, ಸನಾತನನೂ, ಭಾವಾಭಾವವಿನಿರ್ಮುಕ್ತನೂ, ಸರ್ವವ್ಯಾಪಕನೂ ಆದ ಹರಿಯನ್ನು ನಮಸ್ಕರಿಸುತ್ತೇನೆ.

೧೬. ಅಚ್ಯುತನೆ, ನಿನ್ನನ್ನು ಹೊರತು ಬೇರಾವುದನ್ನೂ ನಾನು ಕಾಣೆನು. ಈ ಚರಾಚರವೆಲ್ಲವನ್ನೂ ನಿನ್ನಿಂದ ವ್ಯಾಪ್ತವಾದುದೆಂದೇ ಅರಿಯುವೆನು.

೧೭-೧೮. ಹೀಗೆಂದು ಹೇಳುತ್ತಿರುವ ಅವನ ದೇಹದಿಂದ ಕಪ್ಪಾದ ಮೈ ಬಣ್ಣವುಳ್ಳವನೂ, ಬಹು ಕ್ರೂರಿಯೂ, ಭಯಂಕರನೂ, ಕೆಂಗಣ್ಣನೂ, ಕುಳ್ಳನೂ, ಸುಟ್ಟಕಂಬ ಅಥವಾ ಪ್ರತಿಮೆಯಂತಿರುವವನೂ ಆದ ಮನುಷ್ಯನೊಬ್ಬನು ಹೊರಹೊರಟು, ಕೈಮುಗಿದುಕೊಂಡವನಾಗಿ "ದೊರೆಯೇ, ಏನು ಮಾಡಲಿ ?" ಎಂದನು.

॥ ರಾಜೋವಾಚ ॥

ಕೋಸಿ ಕಿಂ ಕಾರ್ಯ ಮಿಹತೇ ಕಸ್ಮಾ ದಾಗತವಾನಸಿ ।
ಏತನ್ಮೇ ಕಥಯ ವ್ಯಾಧ ಏತ ದಿಚ್ಛಾಮಿ ವೇದಿತುಂ ॥ ೧೯ ॥

॥ ವ್ಯಾಧ ಉವಾಚ ॥

ಪೂರ್ವಂ ಕಲಿಯುಗೇ ರಾಜಂಸ್ತ್ವಂ ರಾಜಾ ದಕ್ಷಿಣಾಪಥೇ ।
ಪೂರ್ಣಧರ್ಮೋದ್ಭವಃ ಶ್ರೀಮಾನ್ ಜನಸ್ಥಾನೇ ವಿಚಕ್ಷಣಃ ॥ ೨೦ ॥

ಸಕದಾಚಿದ್ಭವಾನ್ವೀರ ತುರಗೈಃ ಪರಿವಾರಿತಃ ।
ಅರಣ್ಯ ಮಾಗತೋ ಹಂತುಂ ಶ್ವಾಪದಾನಿ ವಿಶೇಷತಃ ॥ ೨೧ ॥

ತತ್ರ ತ್ವಯಾ ತ್ವಕಾಮೇನ ಮೃಗ ವೇಷಧರೋಮುನಿಃ ।
ಪಂಡ ಯುಗ್ಮೇನ ದೂರೇತು ಪಾತಿತೋ ಧರಣೀತಲೇ ॥ ೨೨ ॥

---

೧೯. ದೊರೆಯು—ಎಲೈ ಬೇಡನೇ, ನೀನು ಯಾರು, ? ಎಲ್ಲಿಂದ ಬಂದಿದ್ದೀಯೆ ? ಇಲ್ಲಿ ನಿನಗೇನು ಕೆಲಸ ? ಇದನ್ನೆಲ್ಲಾ ತಿಳಿಯಲು ಬಯಸುತ್ತೇನೆ. ಹೇಳು.

೨೦. ಬೇಡನು :—ದೊರೆಯೇ, ನೀನು ಹಿಂದೆ ಕಲಿಯುಗದಲ್ಲಿ ದಕ್ಷಿಣ ದೇಶದ ಜನಸ್ಥಾನದಲ್ಲಿ ಪೂರ್ಣಧರ್ಮೋದ್ಭವನೂ, ಶ್ರೀಮಂತನೂ, ವಿದ್ವಾಂಸನೂ ಆದ ರಾಜನಾಗಿದ್ದೆ.

೨೧. ವೀರನೇ ನೀನು ಒಂದು ಸಾರಿ ದುಷ್ಟ ಮೃಗಗಳನ್ನು ಹೆಚ್ಚಾಗಿ ಕೊಲ್ಲುವುದಕ್ಕಾಗಿ ಕುದುರೆಯ ಸೇನೆಗಳಿಂದ ಕೂಡಿ ಕಾಡಿಗೆ ಬಂದೆ.

೨೨. ಅಲ್ಲಿ ನೀನು, ಜಿಂಕೆಯ ವೇಷವನ್ನು ಧರಿಸಿ ದೂರದಲ್ಲಿದ್ದ ಋಷಿಯೊಬ್ಬನನ್ನು ತಿಳಿಯದೆ ಉದಾಸೀನದಿಂದ ಎರಡು ದೊಣ್ಣೆಗಳಿಂದ ಹೊಡೆದು ನೆಲಕ್ಕೆ ಕೆಡವಿದೆ.

ಸದ್ಯೋ ಮೃತಶ್ಚ ವಿಪ್ರೇಂದ್ರಃ ತ್ವಂಚ ರಾಜನ್ಮುದಾ ಯುತಃ ।
ಹರಿಣೋಯಂ ಹತ ಇತಿ ಯಾವತ್ಪಶ್ಯಸಿ ಪಾರ್ಥಿವ ।
ತಾವನ್ಮೃಗವಪುರ್ವಿಪ್ರಃ ಮೃತಃ ಪ್ರಸ್ರವಣೇ ಗಿರೌ ॥ ೨೩ ॥

ತಂ ದೃಷ್ಟ್ವಾತ್ವಂ ಮಹರಾಜ ಕ್ಷುಭಿತೇಂದ್ರಿಯ ಮಾನಸಃ ।
ಗೃಹಾಗತಸ್ತತೋಽನ್ಯಸ್ಯ ಕಸ್ಯಚಿತ್ ಕಥಿತಂ ತ್ವಯಾ ॥ ೨೪ ॥

ತತಃ ಕತಿಪಯಾಹಸ್ಯ ತ್ವಯಾ ರಾತ್ರೌ ನರೇಶ್ವರ ।
ಬ್ರಹ್ಮಹತ್ಯಾಭಯಾದ್ಭೀತಚಿತ್ತೇನೈತದ್ವಿಚಿಂತಿತಂ ।
ಕೃತ್ಯಂ ಕರೋಮಿ ಶಾಂತ್ಯರ್ಥಂ ಮುಚ್ಯೇಯಂ ಯೇನ ಪಾತಕಾತ್॥ ೨೫ ॥

ತತಸ್ತ್ವಯಾ ಮಹರಾಜ ಸಕೃನ್ನಾರಾಯಣಂ ಪ್ರಭುಂ ।
ಸಂಚಿಂತ್ಯ ದ್ವಾದಶೀ ಶುದ್ಧಾ ತ್ವಯಾ ರಾಜನ್ನುಪೋಷಿತಾ ॥ ೨೬ ॥

---

೨೩. ಒಡನೆಯೇ ಋಷಿಯಾದ ಆ ಬ್ರಾಹ್ಮಣೋತ್ತಮನು ಮಡಿದನು. ರಾಜನೇ, ನೀನಾದರೋ ಈ ಜಿಂಕೆಯನ್ನು ಕೊಂದೆನೆಂದು ಸಂತಸಗೊಂಡು ಹತ್ತಿರ ಹೋಗಿ ನೋಡಿದಾಗ ಬೆಟ್ಟದ ಜೌಗಿನೆಡೆಯಲ್ಲಿ ಜಿಂಕೆಯ ಮೆಯ್ಯಿನ ಬ್ರಾಹ್ಮಣನು ಸತ್ತಿದ್ದನು.

೨೪. ಮಹಾರಾಜನೇ, ನೀನು ಅದನ್ನು ನೋಡಿ, ಕದಡಿದ ಇಂದ್ರಿಯವೂ ಮನಸ್ಸೂ ಉಳ್ಳವನಾಗಿ ಮನೆಗೆ ಬಂದು, ಬಳಿಕ ಅದನ್ನು ಬೇರೆ ಯಾರೋ ಒಬ್ಬನಿಗೆ ಹೇಳಿದೆ.

೨೫. ರಾಜನೇ, ಕೆಲವು ದಿನಗಳಾದಮೇಲೆ, ಒಂದು ದಿನ ರಾತ್ರಿಯಲ್ಲಿ ಬ್ರಹ್ಮಹತ್ಯದ ಭಯದಿಂದ ಹೆದರಿದ ನೀನು 'ಯಾವುದನ್ನು ಮಾಡಿದರೆ ಈ ಪಾಪದಿಂದ ಬಿಡುಗಡೆಯನ್ನು ಹೊಂದುವೆನೋ ಅಂತಹ ಸತ್ಕರ್ಮವನ್ನು ಶಾಂತಿಗಾಗಿ ಮಾಡುತ್ತೇನೆ' ಎಂದು ಯೋಚಿಸಿದೆ.

೨೬. ಮಹಾರಾಜ, ಬಳಿಕ ನೀನು ಒಂದು ಸಾರಿ ಪ್ರಭುವಾದ ನಾರಾಯಣನನ್ನು ಚೆನ್ನಾಗಿ ಸ್ಮರಿಸುತ್ತಾ, ಶುದ್ಧ ದ್ವಾದಶಿಯ ದಿನ ಉಪವಾಸ ಮಾಡಿದೆ.

ನಾರಾಯಣೋ ಮೇ ಸುಪ್ರೀತ ಇತಿ ಪ್ರೋಕ್ತ್ವಾ ಶುಭೇಽಹನಿ ।
ಗೌರ್ದತ್ತಾ ವಿಧಿನಾ ಸದ್ಯೋ ಮೃತೋಽಸ್ಮ್ಯುದರ ಶೂಲತಃ ॥ ೨೭ ॥

ಅಮುಕ್ತೋ ದ್ವಾದಶೀ ಧರ್ಮೋ ಯತ್ತತ್ರಾಪಿ ಚ ಕಾರಣಂ ।
ಕಥಯಾಮಿ ಭವತ್ಪತ್ನೀ ನಾಮ್ನಾ ನಾರಾಯಣೀ ಶುಭಾ ॥ ೨೮ ॥

ಸಾ ಕಂಠಗೇನ ಪ್ರಾಣೇನ ವ್ಯಾಹೃತಾ ತೇನತೇಗತಿಃ ॥ ೨೯ ॥
ಕಲ್ಪಮೇಕಂ ಮಹರಾಜ *ಜಾತಾ ವಿಷ್ಣುಪುರೇ ತವ ।
ಅಹಂ ಚ ತವ ದೇಹಸ್ಥಃ ಸರ್ವಂ ಜಾನಾಮಿ ಚಾಕ್ಷಯಂ ॥ ೩೦ ॥

ಬ್ರಹ್ಮಗ್ರಹೋ ಮಹಾಘೋರಃ ಪೀಡಯಾಮಿ ಮೇ ಮತಿಃ ।
ತಾವದ್ವಿಷ್ಣೋಽಸ್ತು ಪುರುಷೈಃ ಕಿಂಕರೈರ್ಮುಸಲೈರಹಂ ॥ ೩೧ ॥

---

೨೭. ನಾರಾಯಣನು ನನಗೆ ಸುಪ್ರಸನ್ನನಾಗಲೆಂದು ಹೇಳಿ, ಆ ಶುಭ ದಿನದಲ್ಲಿ ಶಾಸ್ತ್ರೋಕ್ತವಾಗಿ ಗೋವನ್ನು ದಾನ ಮಾಡಿದೆ. ಒಡನೆಯೇ ಹೊಟ್ಟೆಯ ನೋವಿನಿಂದ ಮೃತನಾದೆ.

೨೮-೩೦. ಆದರೂ ದ್ವಾದಶೀ ಧರ್ಮವನ್ನು ನೀನು ಬಿಟ್ಟಂತಾಗಲಿಲ್ಲ. ಅದಕ್ಕೆ ಕಾರಣವನ್ನು ಹೇಳುತ್ತೇನೆ. ನಿನ್ನ ಪತ್ನಿಯಾದ ನಾರಾಯಿಣಿ ಎಂಬ ಹೆಸರಿನ ಆ ಮಂಗಳೆಯನ್ನು, ಕಂಠಗತ ಪ್ರಾಣನಾದ ನೀನು 'ನಾರಾಯಿಣಿ' ಎಂದು ಕೂಗಿದೆ. ಮಹಾರಾಜ, ಅದರಿಂದ ನಿನಗೆ ಒಂದು ಕಲ್ಪಕಾಲ ವೈಕುಂಠ ವಾಸವುಂಟಾಯಿತು. ನಾನು ನಿನ್ನ ದೇಹದಲ್ಲಿಯೇ ಇದ್ದು ಕೊಂಡು ಎಲ್ಲವನ್ನು ಅಕ್ಷಯವಾಗಿ ತಿಳಿದಿದ್ದೇನೆ.

೩೧-೩೨. ಅತಿ ಘೋರವಾದ ಬ್ರಹ್ಮಪಿಶಾಚಿಯಾದ ನಾನು ನಿನ್ನನ್ನು ಪೀಡಿಸಬೇಕೆಂದುಕೊಂಡೆನು. ಅಷ್ಟರಲ್ಲಿ ವಿಷ್ಣು ದೂತರು ನನ್ನನ್ನು ಒನಕೆ

---

* ಜಾತಃ

ಪ್ರಹತಃ ಸಂಕ್ಷಯಂ ಯಾತಶ್ಚ್ಯ ತಸ್ತೇ ರೋಮಕೂಪತಃ ।
ಸ್ವರ್ಗಸ್ಥಸ್ಯಾಪಿ ರಾಜೇಂದ್ರ ಸ್ಥಿತೋಽಹಂ ಸ್ವೇನತೇಜಸಾ ॥ ೩೨ ॥

ತತೋಽಹಃ ಕಲ್ಪೇ ನಿರ್ವೃತ್ತೇ ರಾತ್ರಿ ಕಲ್ಪೇನ ಸತ್ತಮ ।
ಇದಾನೀಮಾದಿ ಸೃಷ್ಟ್ವಾತು ಕೃತೇ ನೃಪತಿಸತ್ತಮ ॥ ೩೩ ॥

ಸಂಭೂತಸ್ತ್ವಂ ಮಹರಾಜ ರಾಜ್ಞಃ ಸುಮನ ಸೋಗೃಹೇ ।
ಕಾಶ್ಮೀರ ದೇಶಾಧಿಪತೇರಹಂ ಚಾಂಗರುಹ್ಯೈಸ್ತ್ವವ ॥ ೩೪ ॥

ಯಜ್ಞೈರಿಷ್ಟಂ ತ್ವಯಾನೇಕೈರ್ಬಹುಭಿಶ್ಚಾಪ್ತದಕ್ಷಿಣೈಃ ।
ನ ಚಾಹಂ ತೈರಪಹತೋ ವಿಷ್ಣುಸ್ಮರಣ ವರ್ಜಿತೈಃ ॥ ೩೫ ॥

ಇದಾನೀಂ ಯತ್ತ್ವಯಾ ಸ್ತೋತ್ರಂ ಪುಂಡರೀಕಾಕ್ಷಪಾರಗಂ ।
ಪಠಿತಂ ತತ್ಪ್ರಭಾವೇಣ ವಿಹಾಯಾಂಗರುಹಾಣ್ಯಹಮಂ ।
ಏಕೀ ಭೂತಃ ಪುನರ್ಜಾತೋ ವ್ಯಾಧರೂಪೀ ನೃಪೋತ್ತಮ ॥ ೩೬ ॥

ಗಳಿಂದ ಹೊಡೆದರು. ಆದರಿಂದ ಸತ್ತು, ಸ್ವತೇಜದಿಂದ, ನೀನು ಸ್ವರ್ಗ ಲೋಕದಲ್ಲಿದ್ದರೂ ನಿನ್ನ ರೋಮಕೂಪದಲ್ಲಿದ್ದುಕೊಂಡಿದ್ದೆನು.

೩೩-೩೪. ಬಳಿಕ ರಾತ್ರಿಕಲ್ಪದೊಡನೆ ಅಹಃಕಲ್ಪವೂ (ಬ್ರಹ್ಮನ ಹಗಲು) ಕಳೆಯಲು ಈಗ ಆದಿ ಸೃಷ್ಟಿಯಾದ ಕೃತ ಯುಗದಲ್ಲಿ ನೀನು ರಾಜ ಸುಮನಸನಾಡ ಕಾಶ್ಮೀರ ಧೇಶಾಧಿ ಪತಿಯ ಮನೆಯಲ್ಲಿ ಹುಟ್ಟಿದೆ. ನಾನು ನಿನ್ನ ರೋಮಗಳಿಂದ ಹುಟ್ಟಿದೆನು.

೩೫. ನೀನು ಹೆಚ್ಚಾದ ದಕ್ಷಿಣೆಗಳುಳ್ಳ ಹಲವು ಯಜ್ಞಗಳನ್ನೇನೋ ಮಾಡಿದೆ. ಆದರೂ ವಿಷ್ಣು ಸ್ಮರಣೆಯಿಲ್ಲದ ಅವುಗಳಿಂದಲೂ ನಾನು ಹೋಗಲಿಲ್ಲ.

೩೬. ನೃಪೋತ್ತಮನೇ, ಈಗ ನೀನು ಪುಂಡರೀಕಾಕ್ಷ ಪಾರ ಸ್ತೋತ್ರವನ್ನು ಹೇಳಿದೆ. ಅದರ ಮಹಿಮೆ ಯಿಂದ ನಾನು ನಿನ್ನರೋಮಗಳನ್ನು ಬಿಟ್ಟು ಒಂದಾಗಿ ಮತ್ತೆ ಬೇಡನ ರೂಪದಿಂದ ಹುಟ್ಟಿದೆನು.

ಅಹಂ ಭಗವತಃ ಸ್ತೋತ್ರಂ ಶ್ರುತ್ವಾ ಪ್ರಾಕ್ಪಾಪ ಮೂರ್ತಿನಾ ।
ಮುಕ್ತೋಽಸ್ಮಿ ಧರ್ಮ ಬುದ್ಧಿರ್ಮೇ ವರ್ತತೇ ಸಾಂಪ್ರತಂ ವಿಭೋ ॥ ೩೭ ॥

ಏತಚ್ಛ್ರುತ್ವಾ ವಚೋ ರಾಜಾ ಪರಂ ವಿಸ್ಮಯಮಾಗತಃ ।
ವರೇಣ ಛಂದಯಾಮಾಸ ತಂ ವ್ಯಾಧಂ ರಾಜಸತ್ತಮಃ ॥ ೩೮ ॥

॥ ರಾಜೋವಾಚ ॥

ಸ್ಮಾರಿತೋಽಸ್ಮಿ ಯಥಾ ವ್ಯಾಧ ತ್ವಯಾ ಜನ್ಮಾಂತರಂ ಗತಂ ।
ತಥಾತ್ವಂ ಮತ್ಪ್ರಭಾವೇಣ ಧರ್ಮ ವ್ಯಾಧೋ ಭವಿಷ್ಯಸಿ ॥ ೩೯ ॥

ಯಶ್ಚೈತತ್ಪುಂಡರೀಕಾಕ್ಷಪಾರಗಂ ಶೃಣುಯಾತ್ಪರಂ ।
ತಸ್ಯ ಪುಷ್ಕರಯಾತ್ರಾಯಾಂ ವಿಧಿಸ್ನಾನಫಲಂ ಭವೇತ್ ॥ ೪೦ ॥

---

೩೭. ನಾನು ಭಗವಂತನ ಸ್ತೋತ್ರವನ್ನು ಕೇಳಿ, ಹಿಂದಿನ ಪಾಪ ಸ್ವಭಾವ ದಿಂದ ಬಿಡುಗಡೆಯನ್ನು ಪಡೆದಿದ್ದೇನೆ. ವಿಭುವೆ, ಈಗ ನನಗೆ ಧರ್ಮ ಬುದ್ಧಿ ಯುಂಟಾಗಿದೆ.' ಎಂದನು.

೩೮. ರಾಜನು ಈ ಮಾತನ್ನು ಕೇಳಿ, ಅತ್ಯಾಶ್ಚರ್ಯಗೊಂಡು, ಆ ಬೇಡನನ್ನು ವರದಿಂದ ಸಂತೋಷಪಡಿಸಿದನು.

೩೯. ರಾಜನು—ಬೇಡನೇ, ನೀನು ನನ್ನ ಜನ್ಮಾಂತರ ವಿಚಾರವನ್ನು ನನಗೆ ಜ್ಞಾಪಿಸಿದೆ. ಆದುದರಿಂದ ನೀನು ನನ್ನ ಪ್ರಭಾವದಿಂದ ಧರ್ಮ ವ್ಯಾಧ ನೆಂಬ ಹೆಸರನ್ನು ಪಡೆಯುವೆ.

೪೦. ಯಾರು ಈ ಪುಂಡರೀಕಾಕ್ಷಪಾರಸ್ತೋತ್ರವನ್ನು ಕೇಳುವರೋ ಅವರಿಗೆ ಪುಷ್ಕರ ಯಾತ್ರೆಯಲ್ಲಿ ವಿಧಿಪೂರ್ವಕವಾಗಿ ಸ್ನಾನ ಮಾಡಿದ ಫಲ ವುಂಟಾಗಲಿ

|| ವರಾಹ ಉವಾಚ ||

ಏವಮುಕ್ತ್ವಾ ತತೋ ರಾಜಾ ವಿಮಾನವರಮಾಸ್ಥಿತಃ ।
ಪರೇಣ ತೇಜಸಾ ಯೋಗಮವಾಪಾಶೇಷಧಾರಿಣಿ || ೪೧ ||

ಇತಿ ವರಾಹಪುರಾಣೇ ಆದಿಕೃತವೃತ್ತಾಂತೇ ವಸುಚರಿತೇವಸೋಃ
ಪುಂಡರೀಕಾಕ್ಷಪಾರಸ್ತೋತ್ರೇಣ ಮೋಕ್ಷಪ್ರಾಪ್ತಿರ್ನಾಮ
ಷಷ್ಠೋಽಧ್ಯಾಯಃ

ವಸುಚರಿತ್ರಂ ಸಮಾಪ್ತಂ

---

೪೧. ವರಾಹ—ಸರ್ವಧಾರಿಣಿ, ವಸುರಾಜನು ಹೀಗೆ ಹೇಳಿ, ಉತ್ತಮವಾದ ವಿಮಾನವನ್ನೇರಿ, ಪರಮತೇಜದೊಡನೆ ಸೇರಿದನು.

ಅಧ್ಯಾಯದ ಸಾರಾಂಶ :—

ಶ್ರೀವರಾಹದೇವನು ಭೂದೇವಿಗೆ—ರಾಜರ್ಷಿಯಾದ ವಸುವು ಬೃಹಸ್ಪತಿಯಿಂದ ತನ್ನ ಸಂದೇಹವನ್ನು ಪರಿಹರಿಸಿಕೊಂಡ ಬಳಿಕ ಹಲವು ಯಜ್ಞಗಳನ್ನು ಮಾಡಿ, ದೇವರನ್ನು ಧ್ಯಾನಿಸುತ್ತಿದ್ದು, ವಯಸ್ಸಾದ ಬಳಿಕ ತಪೋವನಕ್ಕೆ ಹೋಗಿ ಪುಷ್ಕರತೀರ್ಥದಲ್ಲಿ ತಪಸ್ಸನ್ನು ಮಾಡುತ್ತಾ ಪುಂಡರೀಕಾಕ್ಷಪಾರವೆಂಬ ಸ್ತೋತ್ರದಿಂದ ವಿಷ್ಣುವನ್ನು ಸ್ತುತಿಸಿ ಆ ಪುಂಡರೀಕಾಕ್ಷನಲ್ಲಿ ಐಕ್ಯನಾದುದನ್ನೂ, ಆ ಸ್ತೋತ್ರವನ್ನು ಹೇಳುತ್ತಿರುವಾಗ ವಸುವಿನ ದೇಹದಿಂದ ಉದಿಸಿದ ಬೇಡನೊಬ್ಬನು ಹೇಳಿದ ವಸುವಿನ ಮತ್ತು ಬೇಡನ ಜನ್ಮಾಂತರದ ಕಥೆಯನ್ನೂ, ಸ್ತೋತ್ರಮಹಿಮೆಯಿಂದ ಬೇಡನಿಗೆ ಧರ್ಮಬುದ್ಧಿಯುಂಟಾಗಿ ವಸುವಿನಿಂದ ಧರ್ಮವ್ಯಾಧನೆಂಬ ಹೆಸರನ್ನು ಪಡೆದುದನ್ನೂ, ಸ್ತೋತ್ರಮಹಿಮೆಯನ್ನೂ ಹೇಳುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಆರನೆಯ ಅಧ್ಯಾಯ, ವಸು ಚರಿತ್ರೆಯು ಮುಗಿದುದು.

॥ ಶ್ರೀಃ ॥

-x-

ಸಪ್ತಮೋಽಧ್ಯಾಯಃ

ಅಥ ತಪೋಗದಾಧರಸ್ತೋತ್ರಾಭ್ಯಾಮುತ್ತಮಲೋಕಪ್ರಾಪ್ತಿಃ

॥ ಧರಣ್ಯುವಾಚ ॥

ರೈಭ್ಯೋಽಸೌ ಮುನಿಶಾರ್ದೂಲಃ ಶ್ರುತ್ವಾ ಸಿದ್ಧಂ ವಸುಂ ತದಾ ।
ಸ್ವಯಂ ಕಿಮಕರೋದ್ದೇವ ಸಂಶಯೋ ಮೇ ಮಹಾನಯಂ ॥ ೧ ॥

॥ ವರಾಹ ಉವಾಚ ॥

ಸ ರೈಭ್ಯೋ ಮುನಿಶಾರ್ದೂಲಃ ಶ್ರುತ್ವಾ ಸಿದ್ಧಂ ವಸುಂ ತದಾ ।
ಆಜಗಾಮ ಗಯಾಂ ಪುಣ್ಯಾಂ ಪಿತೃತೀರ್ಥೇ ತಪೋಧನಃ ॥ ೨ ॥

ತತ್ರ ಗತ್ವಾ ಪಿತೄನ್ ಭಕ್ತ್ಯಾ ಪಿಂಡದಾನೇನ ತರ್ಪಯನ್ ।
ತತಾಪ ಸುಮಹತ್ತೀವ್ರಂ ತಪಃ ಪರಮದುಶ್ಚರಂ ॥ ೩ ॥

ಏಳನೆಯ ಅಧ್ಯಾಯ

ತಪಸ್ಸು ಮತ್ತು ಗದಾಧರ ಸ್ತೋತ್ರಗಳಿಂದ ಉತ್ತಮಲೋಕಪ್ರಾಪ್ತಿ

೧. ಭೂದೇವಿ—ದೇವನೇ ಮುನಿವರ್ಯನಾದ ರೈಭ್ಯನು, ವಸುರಾಜನು, ಸಿದ್ಧಿಯನ್ನು ಪಡೆದುದನ್ನು ಕೇಳಿ, ತಾನೇನು ಮಾಡಿದನೋ ಎಂದು ನನಗೆ ಬಹು ಸಂದೇಹವುಂಟಾಗಿದೆ.

೨-೩. ವರಾಹ—ಮುನಿವರ್ಯನಾದ ಆರೈಭ್ಯನು, ವಸುವು ಸಿದ್ಧಿ ಪಡೆದುದನ್ನು ಕೇಳಿ, ಪವಿತ್ರವಾದ ಗಯೆಗೆ ಬಂದನು. ತಪೋಧನನಾದ ಅವನು ಅಲ್ಲಿ ಪಿತೃ ತೀರ್ಥಕ್ಕೆ ಹೋಗಿ ಭಕ್ತಿ ಪೂರ್ವಕವಾಗಿ ಪಿಂಡ ದಾನಗಳಿಂದ ಪಿತೃಗಳನ್ನು ತೃಪ್ತಿಪಡಿಸುತ್ತಾ, ಅತಿದುಷ್ಕರವಾದ ಉಗ್ರತಪಸ್ಸನ್ನು ಮಾಡಿದನು.

ಚರತಸ್ತಸ್ಯ ತತ್ತೀವ್ರಂ ತಪೋ ರೈಭ್ಯಸ್ಯ ಧೀಮತಃ ।
ಆಜಗಾಮ ಮಹಾಯೋಗೀ ವಿಮಾನಸ್ಥೋ ದೀಪ್ತಿಮಾನ್ ॥ ೪ ॥

ತ್ರಸರೇಣುಸಮೋ ಶುದ್ಧೋ ವಿಮಾನೇ ಸೂರ್ಯಸನ್ನಿಭೇ ।
ಪರಮಾಣುಪ್ರಮಾಣೇನ ಪುರುಷಸ್ತತ್ರ ದೀಪ್ತಿಮಾನ್ ॥ ೫ ॥

ಸೋಽಬ್ರವೀದ್ರೈಭ್ಯ ಕಿಂಕಾರ್ಯಂ ತಪಶ್ಚರಸಿ ಸುವ್ರತ ।
ಏವಮುಕ್ತ್ವಾ ದಿವೋ ಭೂಮೇರಂತರಾ ಸ ಜ ವೈ ಪುಮಾನ್ ॥ ೬ ॥

ತತ್ರಾಪಿ ರೋದಸೀವ್ಯಾಪ್ತಂ ವಿಮಾನಂ ಸೂರ್ಯಸನ್ನಿಭಂ ।
ಯುಗಪದ್ವಿಷ್ಣುಭವನಂ ವ್ಯಾಪ್ನುವಂತಂ ದದರ್ಶ ಸಃ ॥ ೭ ॥

ತತಃ ಸ ವಿಸ್ಮಯಾವಿಷ್ಟೋ ರೈಭ್ಯಃ ಪ್ರಣತಿಪೂರ್ವಕಂ ।
ಪಪ್ರಚ್ಛ ತಂ ಮಹಾಯೋಗಿನ್ ಕೋ ಭವಾನ್ ಪ್ರಬ್ರವೀತು ಮೇ ॥ ೮ ॥

॥ ಪುರುಷ ಉವಾಚ ॥

ಅಹಂ ರುದ್ರಾದವರಜೋ ಬ್ರಹ್ಮಣೋ ಮಾನಸಃ ಸುತಃ ।
ನಾಮ್ನಾ ಸನತ್ಕುಮಾರೇತಿ ಜನಲೋಕೇವಸಾಮ್ಯಹಂ ॥ ೯ ॥

೪–೫. ಅಂತಹ ತೀವ್ರತಪಸ್ಸನ್ನು ಮಾಡುತ್ತಿದ್ದ ಜ್ಞಾನಿಯಾದ ಅವನೆಡೆಗೆ ಚರಿಸುವ ಅಣುವಿನಂತಿದ್ದು ಸೂರ್ಯನಂತೆ ಹೊಳೆಯುವ ಶುದ್ಧವಾದ ವಿಮಾನದಲ್ಲಿ ಅತಿಕಾಂತಿಯುಳ್ಳವನೂ, ಪರಮಾಣುವಿನಷ್ಟು ಗಾತ್ರವುಳ್ಳವನೂ ಆದ ಮಹಾಯೋಗಿಯೊಬ್ಬನು ಬಂದನು.

೬. ಅವನು, "ಸುವ್ರತಿಯಾದ ರೈಭ್ಯನೇ, ಏಕೆ ತಪಸ್ಸು ಮಾಡುತ್ತೀಯೆ ?" ಎಂದು ಕೇಳಿ, (ಮೊದಲು ಪರಮಾಣು ರೂಪನಾಗಿದ್ದವನು) ಭೂಮ್ಯಾಕಾಶಗಳ ಬಿಡುವನ್ನೆಲ್ಲಾ ಆಕ್ರಮಿಸಿದನು.

೭–೮. ಸೂರ್ಯನಂತಿರುವ ಆ ವಿಮಾನವು ಆಗಲೇ ಬೆಳೆದು ವಿಷ್ಣು ಲೋಕವನ್ನೂ ವ್ಯಾಪಿಸಿತು. ಅದನ್ನು ನೋಡಿ, ಆಶ್ಚರ್ಯಗೊಂಡ ರೈಭ್ಯನು ಪ್ರಣಾಮ ಪೂರ್ವಕವಾಗಿ, "ಮಹಾಯೋಗಿಯೇ, ನೀನಾರು ? ನನಗೆ ಹೇಳು" ಎಂದನು.

೯. ಪುರುಷ—ನಾನು ಬ್ರಹ್ಮನ ಮಾನಸ ಪುತ್ರ ರುದ್ರನ ತಮ್ಮ. ಸನತ್ಕುಮಾರನೆಂದು ನನ್ನ ಹೆಸರು. ನಾನು ಜನಲೋಕದಲ್ಲಿ ವಾಸಮಾಡುತ್ತೇನೆ.

ಭವತಃ ಪಾರ್ಶ್ವಮಾಯಾತಃ ಪ್ರಣಯೇನ ತಪೋಧನ ।
ಧನ್ಯೋಽಸಿ ಸರ್ವದಾ ವತ್ಸ ಬ್ರಹ್ಮಣಃ ಕುಲವರ್ಧನಃ ॥ ೧೦ ॥

॥ ರೈಭ್ಯ ಉವಾಚ ॥

ನಮೋಽಸ್ತು ತೇ ಯೋಗಿವರ ಪ್ರಸೀದ
ದಯಾಂ ಮಹ್ಯಂ ಕುರುಷೇ ವಿಶ್ವರೂಪ ।
ಕಿಮತ್ರ ಕೃತ್ಯಂ ವದ ಯೋಗಿಸಿಂಹ
ಧನ್ಯೋಽಹಮುಕ್ತೋ ಹಿ ಕಥಂ ತ್ವಯಾದ್ಯ ॥ ೧೧ ॥

॥ ಸನತ್ಕುಮಾರ ಉವಾಚ ॥

ಧನ್ಯಸ್ತ್ವಮೇವ ದ್ವಿಜವರ್ಯಮುಖ್ಯ
ಯದ್ವೇದವಾದಾಭಿರತಃ ಪಿತೄಂಶ್ಚ ।
ಪ್ರೀಣಾಸಿ ಮಂತ್ರವ್ರತಜಪ್ಯಹೋಮೈಃ
ಗಯಾಂ ಸಮಾಸಾದ್ಯ ಚ ಸರ್ವಪಿಂಡೈಃ ॥ ೧೨ ॥

ಶೃಣುಷ್ವ ಚಾನ್ಯೋ ನೃಪತಿರ್ಬಭೂವ
ವಿಶಾಲನಾಮಾ ಸ ಪುರಂ ವಿಶಾಲಂ ।
ಉವಾಸ ಧನ್ಯೋ ಧೃತಿಮಾನ್ಸಪುತ್ರಃ ।
ಸ್ವಯಂ ವಿಶಾಲಾಧಿಪತಿರ್ದ್ವಿಜಾಗ್ರ್ಯಾನ್ ॥ ೧೩ ॥

---

೧೦. ತಪೋಧನನೇ, ಪ್ರೀತಿಯಿಂದ ನಿನ್ನ ಬಳಿಗೆ ಬಂದಿದ್ದೇನೆ. ವತ್ಸ, ಬ್ರಹ್ಮನ ವಂಶವರ್ಧಕನಾದ ನೀನು ಸುಕೃತಿಯು (ಧನ್ಯ).

೧೧. ರೈಭ್ಯ—ವಿಶ್ವ ರೂಪನಾದ ಯೋಗಿವರನೇ, ನಿನಗೆ ನಮಸ್ಕಾರ. ನನ್ನಲ್ಲಿ ದಯೆ ತೋರಿಸುತ್ತೀಯೇ. ನಾನು ಮಾಡಬೇಕಾದುದೇನು ? ಕೃಪೆಯಿಟ್ಟು ಹೇಳು. ನನ್ನನ್ನು ಧನ್ಯನೆಂದು ಹೇಗೆ ಹೇಳಿದೆ ?

೧೨. ಸನತ್ಕುಮಾರ:—"ಬ್ರಾಹ್ಮಣೋತ್ತಮನೆ, ವೇದಾಧ್ಯಯನಾಸಕ್ತನಾಗಿ ಗಯೆಗೆ ಬಂದು, ಪಿತೃಗಳನ್ನು ಮಂತ್ರ ವ್ರತ ಹೋಮಗಳಿಂದಲೂ, ಸರ್ವ ಪಿಂಡಗಳಿಂದಲೂ, ತೃಪ್ತಿಪಡಿಸುತ್ತಿರುವುದರಿಂದ ನೀನೇ ಧನ್ಯನು.

೧೩. ಕೇಳು, ವಿಶಾಲನೆಂಬ ಬೇರೊಬ್ಬ ರಾಜನಿದ್ದನು ಸುಕೃತಿಯೂ ಧೀರನೂ, ವಿಶಾಲಾಧಿಪನೂ ಆದ ಆತನು ಸಪುತ್ರನಾಗಿ ವಿಶಾಲ ಪುರದಲ್ಲಿ ವಾಸಮಾಡುತ್ತಿದ್ದನು.

ಪಪ್ರಚ್ಛ ಪುತ್ರಾರ್ಥಮಮಿತ್ರಹಾ ಸ ।
ತೇ ಬ್ರಾಹ್ಮಣಾಃ ಪ್ರೋಚುರದೀನಸತ್ವಾಃ ।
ರಾಜನ್ ಪಿತೄಂಸ್ತರ್ಪಯ ಪುತ್ರಹೇತೋಃ
ಗತ್ವಾ ಗಯಾಮನ್ನದಾನೈರನೇಕೈಃ ॥ ೧೪ ॥

ಧ್ರುವಂ ಸುತಸ್ತೇ ಭವಿತಾ ನೃಪೇಶ
ಸುಸಂಪ್ರದಾತಾ ಸಕಲಕ್ಷಿತೀಶಃ । ॥ ೧೫ ॥

ಇತೀರಿತೇಬ್ರಾಹ್ಮಣೈಃ ಸ ಪ್ರಹೃಷ್ಟೋ
ರಾಜಾವಿಶಾಲಾಧಿಪತಿಃ ಪ್ರಯತ್ನಾತ್ ।
ಆಗತ್ಯ ತೇನ ಪ್ರವರೇಣ ತೀರ್ಥೇ
ಮಘಾಸು ಭಕ್ತ್ಯಾಥ ಕೃತಂ ಪಿತೄಣಾಂ ॥ ೧೬ ॥

ಪಿಂಡಪ್ರದಾನಂ ವಿಧಿನಾ ಪ್ರಯತ್ನಾತ್
ತಾವದ್ವಿಯತ್ಯುತ್ತಮಮೂರ್ತಿಕಾಂಸ್ತ್ರೀನ್ ।
ಪಶ್ಯನ್ಸ ಪುಂಸಃ ಸಿತಪೀತ ಕೃಷ್ಣಾನ್
ಉವಾಚ ರಾಜಾ ಕಿಮಿದಂ ಭವದ್ಭಿಃ
ಉಪೇಕ್ಷ್ಯತೇ ಶಂಸತ ಸರ್ವಮೇವ
ಕೌತೂಹಲಂ ಮೇ ಮನಸಿ ಪ್ರವೃತ್ತಂ ॥ ೧೭ ॥

---

೧೪. ಶತ್ರು ಸಂಹಾರಕನಾದ ಅವನು ಮಕ್ಕಳಾಗುವುದಕ್ಕೆ ಮೊದಲು, ಬ್ರಾಹ್ಮಣೋತ್ತಮರನ್ನು ಪುತ್ರ ಲಾಭಕ್ಕಾಗಿ ಏನು ಮಾಡಬೇಕೆಂದು ಕೇಳಿದನು. ಮಹಾ ಸತ್ವರಾದ ಅವರು "ರಾಜನೇ, ಪುತ್ರ ಪ್ರಾಪ್ತಿಗಾಗಿ ನೀನು ಗಯೆಗೆ ಹೋಗಿ ಹಲವು ಬಗೆಯ ಅನ್ನ ದಾನಗಳಿಂದ ಪಿತೃಗಳನ್ನು ತೃಪ್ತಿ ಪಡಿಸು.

೧೫. "ರಾಜೇಂದ್ರನೇ, ನಿನಗೆ ನಿಜವಾಗಿಯೂ ಅತಿದಾತೃವೂ, ಭೂಮಿಗೆಲ್ಲಾ ಒಡೆಯನೂ ಆದ ಮಗನು ಹುಟ್ಟುವನು" ಎಂದರು.

೧೬-೧೭. ಬ್ರಾಹ್ಮಣರು ಹೀಗೆನಲು, ಹೆಚ್ಚು ಸಂತಸಗೊಂಡ ಉತ್ತಮನಾದ ವಿಶಾಲರಾಜನು ಪ್ರಯತ್ನ ಪೂರ್ವಕವಾಗಿ ಗಯೆಗೆ ಬಂದು, ಪಿತೃ ತೀರ್ಥದಲ್ಲಿ ಮಘಾನಕ್ಷತ್ರದಲ್ಲಿ ಭಕ್ತಿಯಿಂದ ವಿಧ್ಯುಕ್ತವಾಗಿ ಪಿತೃಗಳಿಗೆ ಪಿಂಡ ಪ್ರದಾನವನ್ನು ಮಾಡಿದನು. ಆಗ ದೊರೆಗೆ ಬೆಳ್ಳಗೊಬ್ಬನೂ, ಹೊಂಬಣ್ಣದವನೊಬ್ಬನೂ, ಕಪ್ಪಾದವನೊಬ್ಬನೂ, ಹೀಗೆ ಮೂವರು ಉತ್ತಮಾಕಾರರು

|| ಸಿತ ಉವಾಚ ||

ಅಹಂ ಸಿತಸ್ತೇ ಜನಕೋಽಸ್ಮಿತಾತ
ನಾಮ್ನಾ ಚ ವೃತ್ತೇನ ಕುಲೇನ ಕರ್ಮಣಾ ।
ಅಯಂ ಚ ಮೇ ಜನಕೋ ರಕ್ತವರ್ಣೋ
ನೃಶಂಸಕೃದ್ಬ್ರಹ್ಮಹಾ ಪಾಪಕಾರೀ || ೧೮ ||

ಅಧೀಶ್ವರೋ ನಾಮ ಪರಃ ಪಿತಾಸ್ಯ ।
ಕೃಷ್ಣೋ ವೃತ್ತ್ಯಾ ಕರ್ಮಣಾ ಚಾಪಿ ಕೃಷ್ಣಃ ।
ಏತೇನ ಕೃಷ್ಣೇನ ಹತಾಃ ಪುರಾ ವೈ
ಜನ್ಮನ್ಯನೇಕೇ ಋಷಯಃ ಪುರಾಣಾಃ || ೧೯ ||

ಏತೌ ಮೃತೌ ದ್ವಾವಪಿ ಪುತ್ರ ರೌದ್ರಂ
ಅವೀಚಿಸಂಜ್ಞಂ ನರಕಂ ಪ್ರಪನ್ನೌ ।
ಅಧೀಶ್ವರೋ ಮೇ ಜನಕಃ ಪರೋಽಸ್ಯ
ಕೃಷ್ಣಃ ಪಿತಾ ದ್ವಾವಪಿ ದೀರ್ಘಕಾಲಂ || ೨೦ ||

ಆಕಾಶದಲ್ಲಿ ಕಾಣಿಸಿಕೊಂಡರು. ದೊರೆಯು ಅವರನ್ನು ನೋಡುತ್ತಾ "ನನ್ನ ಮನಸ್ಸಿಗೆ ಬಹಳ ಕುತೂಹಲವಾಗಿದೆ. ನೀವು ಏನನ್ನು ನೋಡುತ್ತಿದ್ದೀರಿ? ಎಲ್ಲವನ್ನೂ ಹೇಳಿ" ಎಂದನು.

೧೮-೧೯. ಬಿಳಿಯನು—"ಅಪ್ಪಾ, ಬಿಳಿಯನಾದ ನಾನು ನಿನ್ನ ತಂದೆ. ಹೆಸರಿನಲ್ಲಿಯೂ, ನಡೆಯಲ್ಲಿಯೂ, ಕುಲದಲ್ಲಿಯೂ, ಕರ್ಮದಲ್ಲಿಯೂ(ನಿನ್ನಂತಿದ್ದು) ನಿನಗೆ ತಂದೆಯಾಗಿದ್ದೇನೆ. ಈ ಕೆಂಚನಾದರೋ ನನ್ನ ತಂದೆ. ಕ್ರೂರ ಕೃತ್ಯವನ್ನೂ, ಬ್ರಹ್ಮ ಹತ್ಯವನ್ನೂ, ಇತರ ಪಾಪವನ್ನೂ ಮಾಡಿದವನು. ಅಧೀಶ್ವರನೆಂಬ ಹೆಸರಿನವನು. ಕರಿಯನಾದ ಇನ್ನೊಬ್ಬನು ಇವನ ತಂದೆ (ನನ್ನ ಅಜ್ಜ). ನಡತೆಯಲ್ಲಿಯೂ, ಕರ್ಮದಲ್ಲಿಯೂ, ಕರಿಯನೇ. ಈ ಕರಿಯನಿಂದ ಪೂರ್ವ ಜನ್ಮದಲ್ಲಿ, ಪ್ರಾಚೀನರಾದ ಅನೇಕ ಋಷಿಗಳು ಹತರಾದರು.

೨೦. ಮಗನೇ, ಅಧೀಶ್ವರ ನೆಂಬನನ್ನ ತಂದೆಯೂ, ಕರಿಯನಾದ ಅಜ್ಜನೂ, ಇವರಿಬ್ಬರೂ ಸತ್ತು ಬಹುಕಾಲ ಅವೀಚಿಯೆಂಬ ಹೆಸರಿನ ಕ್ರೂರವಾದ ನರಕದಲ್ಲಿ ಬಿದ್ದಿದ್ದರು.

ಅಹಂ ಚ ಶುದ್ಧೇನ ನಿಜೇನ ಕರ್ಮಣಾ
ಶಕ್ರಾಸನಂ ಪ್ರಾಪಿತೋ ದುರ್ಲಭಂ ತತ್ ।
ತ್ವಯಾ ಪುನರ್ಮಂತ್ರವಿದಾ ಗಯಾಯಾಂ
ಪಿಂಡಪ್ರದಾನೇನ ಬಲಾದಿಮೌ ಚ ॥
ಸಂಯೋಜಿತೌ ತೀರ್ಥಪಿಂಡಪ್ರದಾನ
ಪ್ರಭಾವತೋ ಯೌ ನರಕಶ್ರಿತಾವಪಿ ॥ ೨೧ ॥

ಪಿತೄನ್ ಪಿತಾಮಹಾಂಸ್ತತ್ರ ತಥೈವ ಪ್ರಪಿತಾಮಹಾನ್ ।
ಪ್ರೀಣಯಾಮೀತಿ ತತ್ತೋಯಂ ತ್ವಯಾ ದತ್ತಮರಿಂದಮ ॥ ೨೨ ॥

ತೇನಾಸ್ಮದ್ಯುಗಪದ್ಯೋಗೋ ಜಾತೋ ವಾಕ್ಯೇನ ಸತ್ತಮ ।
ತೀರ್ಥಪ್ರಭಾವಾದ್ಗಚ್ಛಾಮಿ ಪಿತೃಲೋಕಂ ನ ಸಂಶಯಃ ॥ ೨೩ ॥

ಅತ್ರ ಪಿಂಡಪ್ರದಾನೇನ ಏತೌ ತವ ಪಿತಾಮಹೌ ।
ದುರ್ಗತಾವಪಿ ಸಂಸಿದ್ಧೌ ಪಾಪಕೃದ್ವಿಕೃತಿಂಗತೌ ॥ ೨೪ ॥

---

೨೧. ನಾನು ನನ್ನ ಸತ್ಕರ್ಮ ದಿಂದ, ದುರ್ಲಭವಾದ ಆ ಇಂದ್ರ ಪೀಠ ವನ್ನು ಪಡೆದೆನು. ಮಂತ್ರಜ್ಞನಾದ ನೀನು ಗಯೆಯಲ್ಲಿ ಪಿಂಡ ಪ್ರದಾನ ಮಾಡಿದುದರಿಂದ ಆ ತೀರ್ಥ ಪಿಂಡ ಪ್ರಭಾವವು ನರಕದಲ್ಲಿದ್ದ ಇವರಿಬ್ಬರನ್ನು ಬಲದಿಂದ ನನ್ನೊಡನೆ ಸೇರಿಸಿತು.

೨೨. ಪಿತೃಗಳನ್ನೂ, ಪಿತಾಮಹರನ್ನೂ, ಪ್ರಪಿತಾಮಹರನ್ನೂ ತೃಪ್ತಿ ಪಡಿಸುತ್ತೇನೆಂದು ನೀನು ನೀರನ್ನು ಕೊಟ್ಟೆ.

೨೩. ಆ ವಾಕ್ಯದಿಂದ ನಮ್ಮ ಸಮಾಗಮವು ಒಟ್ಟಿಗೇ ಆಯಿತು. ಈ ತೀರ್ಥ ಪ್ರಭಾವದಿಂದ ನಾನು ಪಿತೃ ಲೋಕಕ್ಕೆ ಹೋಗುವುದರಲ್ಲಿ ಸಂಶಯವಿಲ್ಲ.

೨೪. ಈ ನಿನ್ನ ಅಜ್ಜ ಮುತ್ತಜ್ಜಂದಿರೂ, ಪಾಪ ಮಾಡಿದವರಾಗಿ ದುರ್ಗತಿ ಯನ್ನು ಪಡೆದಿದ್ದರೂ, ಇಲ್ಲಿ ನೀನು ಪಿಂಡ ಪ್ರದಾನಮಾಡಿದುದರಿಂದ ಸಂಸ್ಕೃತ ರಾಗಿ ಬೇರೆಯ ರೂಪವನ್ನು ಪಡೆದರು.

ತೀರ್ಥಪ್ರಭಾವ ಏಷೋಽಸ್ಮಿನ್ಬ್ರಹ್ಮಘ್ನಸ್ಯಾಪಿ ತತ್ಸುತಃ ।
ಪಿತುಃ ಪಿಂಡಪ್ರದಾನೇನ ಕುರ್ಯಾದುದ್ಧರಣಂ ಪುನಃ ॥ ೨೫ ॥

ಏತಸ್ಮಾತ್ಕಾರಣಾತ್ಪುತ್ರ ಅಹಮೇತಾವಿಗೃಹ್ಯ ವೈ ।
ಆಗತೋಽಸ್ಮಿ ಭವಂತಂ ವೈದ್ರಷ್ಟುಂ ಯಾಸ್ಯಾಮಿ ಸಾಂಪ್ರತಂ ॥ ೨೬ ॥

ಏತಸ್ಮಾತ್ಕಾರಣಾದ್ರೈಭ್ಯ ಭವಾನ್ ಧನ್ಯೋ ಮಯೋಚ್ಯತೇ ।
ಸಕೃದ್ಗಯಾಭಿಗಮನಂ ಸಕೃತ್ಪಿಂಡಪ್ರದಾಪನಂ ॥ ೨೭ ॥

ದುರ್ಲಭಂ ತ್ವಂ ಪುನರ್ನಿತ್ಯಮಸ್ಮಿನ್ನೇವ ವ್ಯವಸ್ಥಿತಃ ।
ಕಿಮನು ಪ್ರೋಚ್ಯತೇ ರೈಭ್ಯ ತವ ಪುಣ್ಯಮಿದಂ ಪ್ರಭೋ ॥ ೨೮ ॥

ಯೇನ ಸಾಕ್ಷಾದ್ಗದಾಪಾಣಿರ್ದೃಷ್ಟೋ ನಾರಾಯಣಃ ಸ್ವಯಂ ।
ತತೋ ಗದಾಧರಃ ಸಾಕ್ಷಾದಸ್ಮಿನ್ ಕ್ಷೇತ್ರೇ ವ್ಯವಸ್ಥಿತಃ ।
ಅತೋಽತಿವಿಖ್ಯಾತತಮಂ ತೀರ್ಥಮೇತದ್ದ್ವಿಜೋತ್ತಮ ॥ ೨೯ ॥

---

೨೫. ಇದು ಈ ತೀರ್ಥದಮಹಿಮೆ. ತಂದೆಯು ಬ್ರಹ್ಮಹತ್ಯೆ ಮಾಡಿದ್ದರೂ ಅವನ ಮಗನು ಈ ತೀರ್ಥದಲ್ಲಿ ತಂದೆಗೆ ಪಿಂಡ ಪ್ರದಾನ ಮಾಡುವುದರಿಂದ ಅವನನ್ನು ಮತ್ತೆ ಆ ಪಾಪ ಕೂಪದಿಂದ ಉದ್ಧಾರ ಮಾಡುವನು.

೨೬. ಮಗನೇ, "ಈ ಕಾರಣದಿಂದ ನಾನು ಇವರೊಡನೆ ನಿನ್ನನ್ನು ನೋಡಲು ಬಂದಿದ್ದೇನೆ. ಈಗ ಹೊರಡುತ್ತೇನೆ." ಎಂದು ಹೊರಟು ಹೋದನು.

೨೭-೨೮. ರೈಭ್ಯನೇ, ಆದುದರಿಂದ ನೀನು ಧನ್ಯನೆಂದು ನಾನು ಹೇಳುತ್ತೇನೆ. ಒಂದು ಸಾರಿ ಗಯೆಗೆ ಬರುವುದೂ ಇಲ್ಲಿ ಪಿಂಡ ಪ್ರದಾನ ಮಾಡುವುದೂ ದುರ್ಲಭವಾಗಿರುವಲ್ಲಿ ನೀನು ನಿತ್ಯವೂ ಇಲ್ಲಿಯೇ ಇರುವೆ. ಪ್ರಭುವೇ ಈ ನಿನ್ನ ಪುಣ್ಯವನ್ನು ಹೇಳುವುದೇನು !

೨೯. ಕೈಯಲ್ಲಿ ಗದೆಯನ್ನು ಹಿಡಿದಿರುವ ಸಾಕ್ಷಾನ್ನಾರಾಯಣನು ತಾನಾಗಿ ಇಲ್ಲಿ ಕಾಣಿಸಿಕೊಂಡನು. ಆದುದರಿಂದ ಅವನು ಈ ಕ್ಷೇತ್ರದಲ್ಲಿ ನೆಲಸಿರುವನು. ಬ್ರಾಹ್ಮಣೋತ್ತಮನೇ, ಆದುದರಿಂದ ಇದು ಅತಿ ಪ್ರಸಿದ್ಧವಾದ ತೀರ್ಥ" ಎಂದನು.

|| ವರಾಹ ಉವಾಚ ||

ಏವಮುಕ್ತ್ವಾ ಮಹಾಯೋಗೀ ತತ್ರೈವಾಂತರಧೀಯತ |
ರೈಭ್ಯೋಽಪಿ ಚ ಗದಾಪಾಣೇಃ ಹರೇಃ ಸ್ತೋತ್ರಮಥಾಕರೋತ್ || ೩೦ ||

|| ರೈಭ್ಯ ಉವಾಚ ||

ಗದಾಧರಂ ವಿಬುಧಜನೈರಭಿಷ್ಟುತಂ
ಧೃತಕ್ಷಮಂ ಕ್ಷುಧಿತಜನಾರ್ತಿನಾಶನಂ |
ಶಿವಂ ವಿಶಾಲಾಸುರ ಸೈನ್ಯಮರ್ದನಂ |
ನಮಾಮ್ಯಹಂ ಹೃತಸಕಲಾಶುಭಂ ಸ್ಮೃತೌ || ೩೧ ||

ಪುರಾಣಪೂರ್ವಂ ಪುರುಷಂ ಪುರುಷ್ಟುತಂ
ಪುರಾತನಂ ವಿಮಲಮಲಂ ನೃಣಾಂ ಗತಿಂ |
ತ್ರಿವಿಕ್ರಮಂ ಹೃತಧರಣಿಂ ಬಲೋರ್ಜಿತಂ
ಗದಾಧರಂ ರಹಸಿ ನಮಾಮಿ ಕೇಶವಂ || ೩೨ ||

---

೩೦. ವರಾಹ:—ಮಹಾಯೋಗಿಯು ಹೀಗೆ ಹೇಳಿ ಅಲ್ಲಿಯೇ ಕಣ್ಮರೆಯಾದನು. ರೈಭ್ಯನು ಬಳಿಕ ಗದಾಪಾಣಿಯಾದ ಹರಿಯ ಸ್ತೋತ್ರವನ್ನು (ಮಾಡಿದನು.) ಹೇಳಿದನು.

೩೧. ವಿಬುಧಜನರಿಂದ ಸ್ತೋತ್ರಮಾಡಿಸಿಕೊಳ್ಳುವವನೂ, ಭೂಧಾರಿಯೂ, ಹಸಿದ ಜನರ ತೊಂದರೆಯನ್ನು ಪರಿಹರಿಸುವವನೂ, ವಿಸ್ತಾರವಾದ ರಾಕ್ಷಸ ಸೈನ್ಯವನ್ನು ಮರ್ದನ ಮಾಡುವವನೂ, ಮಂಗಳಕರನೂ, ಸ್ಮರಿಸಿದಮಾತ್ರಕ್ಕೆ ಎಲ್ಲಾ ಅಮಂಗಳವನ್ನೂ ಪರಿಹರಿಸುವವನೂ, ಆದ ಗದಾಧರನನ್ನು ನಾನು ನಮಸ್ಕರಿಸುತ್ತೇನೆ.

೩೨. ಅತಿಪುರಾತನಪುರುಷನೂ, ಪುರುವೆಂಬುವನಿಂದ ಸ್ತುತನೂ, ಅತಿ ನಿರ್ಮಲನೂ, ನರರಿಗೆ ದಿಕ್ಕೂ, ತ್ರಿವಿಕ್ರಮನೂ, ಭೂಮಿಯನ್ನುದ್ಧರಿಸಿದವನೂ, ಅತಿ ಬಲನೂ ಆದ ಗದಾಧರ ಕೇಶವನನ್ನು ನಾನು ಗುಟ್ಟಾಗಿ ನಮಸ್ಕರಿಸುತ್ತೇನೆ.

ವಿಶುದ್ಧಭಾವಂ ವಿಭವೈರುಪಾವೃತಂ
ಶ್ರಿಯಾವೃತಂ ವಿಗತಮಲಂ ವಿಚಕ್ಷಣಂ ।
ಕ್ಷಿತೀಶ್ವರೈರಪಗತಕಿಲ್ಬಿಷೈಃ ಸ್ತುತಂ
ಗದಾಧರಂ ಪ್ರಣಮತಿ ಯಃ ಸುಖಂ ವಸೇತ್ ॥ ೩೩ ॥

ಸುರಾಸುರೈರರ್ಚಿತಪಾದಪಂಕಜಂ
ಕೇಯೂರಹಾರಾಂಗದಮೌಲಧಾರಿಣಂ ।
ಅಬ್ಧೌ ಶಯಾನಂ ಚ ರಥಾಂಗಪಾಣಿನಂ
ಗದಾಧರಂ ಪ್ರಣಮತಿ ಯಃ ಸುಖಂ ವಸೇತ್ ॥ ೩೪ ॥

ಸಿತಂ ಕೃತೇ ತ್ರೈತಯುಗೇರುಣಂ ವಿಭುಂ
ತಥಾ ತೃತೀಯೇ ನೀಲಸುವರ್ಣಮಚ್ಯುತಂ ।
ಕಲೌ ಯುಗೇಲಿಪ್ರತಿಮಂ ಮಹೇಶ್ವರಂ
ಗದಾಧರಂ ಪ್ರಣಮತಿ ಯಃ ಸುಖಂವಸೇತ್ ॥ ೩೫ ॥

ಬೀಜೋದ್ಭವೋ ಯಃ ಸೃಜತೇ ಚತುರ್ಮುಖಂ
ತಥೈವ ನಾರಾಯಣರೂಪತೋ ಜಗತ್ ।

---

೩೩. ಪರಿಶುದ್ಧ ಭಾವವುಳ್ಳವನೂ, ವೈಭವವುಳ್ಳವನೂ, ಶ್ರೀಯುತನೂ, ವಿಮಲನೂ, ವಿದ್ವಾಂಸನೂ (ವಿಚಕ್ಷಣನೂ), ಪಾಪರಹಿತರಾದ ರಾಜರಿಂದ ಸ್ತುತನೂ ಆದ ಗದಾಧರನನ್ನು ನಮಿಸುವವರು ಸುಖವಾಗಿರುವರು.

೩೪. ಸುರಾಸುರರು ಪೂಜಿಸಿದ ಪಾದಕಮಲವುಳ್ಳವನೂ, ಕೇಯೂರ ಹಾರಭುಜಕಿರೀಟಮುಕುಟಧಾರಿಯೂ, ಕ್ಷೀರಸಾಗರಶಾಯಿಯೂ, ಚಕ್ರಪಾಣಿಯೂ ಆದ ಗದಾಧರನಿಗೆ ಪ್ರಣಾಮ ಮಾಡುವವರು ಸುಖವಾಗಿರುವರು.

೩೫. ಕೃತಯುಗದಲ್ಲಿ ಬೆಳ್ಳಗಿರುವವನೂ, ತ್ರೇತಾಯುಗದಲ್ಲಿ ಎಳಗೆಂಪಿನವನೂ, ದ್ವಾಪರದಲ್ಲಿ ಇಂದ್ರನೀಲ ಸುವರ್ಣನೂ, ಕಲಿಯುಗದಲ್ಲಿ ದುಂಬಿಯ ಬಣ್ಣವುಳ್ಳವನೂ, ನಾಶರಹಿತನೂ, ಮಹೇಶ್ವರನೂ ಆದ ಗದಾಧರನನ್ನು ವಂದಿಸುವವರು ಸುಖದಿಂದ ವಾಸಿಸುವರು.

೩೬. ಮೂಲಕಾರಣನಾದ ಯಾರು ಚತುರ್ಮುಖಬ್ರಹ್ಮನನ್ನು ಸೃಷ್ಟಿಸು

ಸ್ರಪಾಲಯೋದ್ರುದ್ರವಪುಸ್ತಥಾಂತಕೃತ್
ಗದಾಧರೋ ಜಯತು ಷಡರ್ಧಮೂರ್ತಿಮಾನ್ ॥ ೩೬ ॥

ಸತ್ವಂ ರಜಶ್ಚೈವ ತಮೋ ಗುಣಾಸ್ತ್ರಯಃ
ತ್ವೇತೇಷು ವಿಶ್ವಸ್ಯ ಸಮುದ್ಭವಃ ಕಿಲ ।
ಸಚೈಕ ಏವ ತ್ರಿವಿಧೋ ಗದಾಧರೋ
ದದಾತು ಧೈರ್ಯಂ ಮಮ ಧರ್ಮ ಮೋಕ್ಷಯೋಃ ॥ ೩೭ ॥

ಸಂಸಾರತೋಯಾರ್ಣವದುಃಖತಂತುಭಿಃ
ವಿಯೋಗನಕ್ರಕ್ರಮಣೈಃ ಸುಭೀಷಣೈಃ
ಮಜ್ಜಂತಮುಚ್ಚೈಃ ಸುತರಾಂ ಮಹಾಪ್ಲವೋ
ಗದಾಧರೋ ಮಾಮುದಧೌ ತು ಯೋತರತ್ ॥ ೩೮ ॥

ಸ್ವಯಂ ತ್ರಿಮೂರ್ತಿಃ ಖಮಿವಾತ್ಮನಾತ್ಮನಿ
ಸ್ವಶಕ್ತಿತಶ್ಚಾಂಡಮಿದಂ ಸಸರ್ಜ ಹ ।
ತಸ್ಮಿನ್ ಜಲೋತ್ಥಾಸನದೂಪ ತೈಜಸಂ
ಸಸರ್ಜ ಯಸ್ತಂ ಪ್ರಣತೋಸ್ಮಿ ಭೂಧರಂ ॥ ೩೯ ॥

ವನೋ, ಅಲ್ಲದೆ ವಿಷ್ಣುರೂಪದಿಂದ ಜಗತ್ತನ್ನು ಪರಿರಕ್ಷಿಸುವನೋ, ರುದ್ರ ರೂಪಿಯಾಗಿ ಕೊನೆಗಾಣಿಸುವನೋ ಆ ತ್ರಿಮೂರ್ತಿಗೆ ಜಯವಾಗಲಿ.

೩೭. ಸತ್ವರಜಸ್ತಮಗಳೆಂಬ ಮೂರು ಗುಣಗಳು, ಇವುಗಳಲ್ಲಿಯೇ ವಿಶ್ವದ ಸೃಷ್ಟಿಯಲ್ಲವೆ! ಒಬ್ಬನೇ ಆದರೂ ಮೂರು ಬಗೆಯಾದ ಆ ಗದಾಧರನು ನನಗೆ ಧರ್ಮ ಮೋಕ್ಷಗಳಲ್ಲಿ ಧೈರ್ಯವನ್ನುಂಟು ಮಾಡಲಿ.

೩೮. ವಿಯೋಗವೆಂಬ ಮೊಸಳೆಗಳ ಸಂಚಾರದಿಂದ ಅತಿ ಭಯಂಕರವಾದ ಸಂಸಾರವೆಂಬ ಮಹಾಸಾಗರದಲ್ಲಿ ದುಃಖವೆಂಬ ಹಗ್ಗಗಳಿಂದ ಬಂಧಿತನಾಗಿ ಮುಳುಗಿ ಹೋಗುತ್ತಿರುವ ನನ್ನನ್ನು ಉದ್ಧರಿಸಿ, ದಾಟಿಸಿದ ವಿಶಾಲವೂ, ಉನ್ನತವೂ ಆದ ಹಡಗಾದ ಗದಾಧರ ದೇವನನ್ನು ವಂದಿಸುತ್ತೇನೆ.

೩೯. ತ್ರಿಮೂರ್ತಿಯಾದ ತಾನು ಸ್ವಶಕ್ತಿಯಿಂದ ತನ್ನಲ್ಲಿ ತಾನೇ ಈ ಬ್ರಹ್ಮಾಂಡವನ್ನು ಸೃಜಿಸಿದನು. ಅದರಲ್ಲಿ ಆಕಾಶದಂತೆಯೇ ಭೂಮಿ, ಜಲ, ವಾಯು, ತೇಜಸ್ಸು ಇವುಗಳನ್ನೂ ಸೃಜಿಸಿದ ಭೂಧರ (ವರಾಹ) ನಾದ ಆ ಪರಮಾತ್ಮನಿಗೆ ಪ್ರಣಾಮ ಮಾಡುತ್ತೇನೆ.

ಮತ್ಸ್ಯಾದಿನಾಮಾನಿ ಜಗತ್ಸು ಚಾಶ್ನುತೇ
ಸುರಾದಿಸಂರಕ್ಷಣತೋ ವೃಷಾಕಪಿಃ ।
ಮಖಸ್ವರೂಪೇಣ ಸ ಸಂತತೋ ವಿಭುಃ
ಗದಾಧರೋ ಮೇ ವಿದಧಾತು ಸದ್ಗತಿಂ ॥ ೪೦ ॥

॥ ವರಾಹ ಉವಾಚ ॥

ಏವಂ ಸ್ತುತಸ್ತದಾ ವಿಷ್ಣುಃ ಭಕ್ತ್ಯಾ ರೈಭ್ಯೇಣ ಧೀಮತಾ ।
ಪ್ರಾದುರ್ಬಭೂವ ಸಹಸಾ ಪೀತವಾಸಾ ಜನಾರ್ದನಃ ॥ ೪೧ ॥

ಶಂಖಚಕ್ರಗದಾಪಾಣಿಃ ಗರುಡಸ್ಥೋ ವಿಯದ್ಗತಃ ।
ಉವಾಚ ಮೇಘಗಂಭೀರಧೀರವಾಕ್ಪುರುಷೋತ್ತಮಃ ॥ ೪೨ ॥

ತುಷ್ಟೋಽಸ್ಮಿ ರೈಭ್ಯ ಭಕ್ತ್ಯಾ ತೇ ಸ್ತುತ್ಯಾ ಚಾಪಿ ದ್ವಿಜೋತ್ತಮ ।
ತೀರ್ಥಸ್ನಾನೇನ ಚ ವಿಭೋ ಬ್ರೂಹಿ ಯತ್ತೇಽಭಿವಾಂಛಿತಂ ॥ ೪೩ ॥

---

೪೦. ದೇವತೆಗಳೇ ಮೊದಲಾದವರ ಸಂರಕ್ಷಣೆಗಾಗಿ ವಿಷ್ಣುವಾದ ತಾನೇ ಲೋಕದಲ್ಲಿ ಮತ್ಸ್ಯ ಕೂರ್ಮಾದಿ ರೂಪ ನಾಮಗಳನ್ನು ಪಡೆಯುತ್ತಾ, ಯಜ್ಞ ಸ್ವರೂಪದಿಂದ ಸಂತತ ವಾಗಿರುವ ವಿಭುವಾದ ಆ ಗದಾಧರನು ನನಗೆ ಸದ್ಗತಿ ಯನ್ನು ದಯಪಾಲಿಸಲಿ.

೪೧. ವರಾಹ—ವಿದ್ವಾಂಸನಾದ ರೈಭ್ಯನು ಭಕ್ತಿಯಿಂದ ಹೀಗೆ ಸ್ತುತಿಸಲು ಪೀತಾಂಬರಧಾರಿಯೂ, ಜನಾರ್ದನನೂ ಆದ ವಿಷ್ಣುವು ಆಗ ಒಡನೆ ಪ್ರತ್ಯಕ್ಷ ನಾದನು.

೪೨-೪೩. ಶಂಖ ಚಕ್ರಗಳನ್ನು ಕೈಯಲ್ಲಿ ಹಿಡಿದು ಕೊಂಡು, ಗರುಡನನ್ನೇರಿ ಕೊಂಡು, ಆಕಾಶದಲ್ಲಿ ನಿಂತ ಆ ಪುರುಷೋತ್ತಮನು ಗುಡುಗಿನಂತಹ ಧೀರ ಗಂಭೀರಧ್ವನಿಯಿಂದ "ಬ್ರಾಹ್ಮಣೋತ್ತಮನಾದ ರೈಭ್ಯನೇ, ನಿನ್ನ ಭಕ್ತಿಯಿಂ ದಲೂ, ಸ್ತೋತ್ರದಿಂದಲೂ, ತೀರ್ಥಸ್ನಾನದಿಂದಲೂ ತೃಪ್ತನಾಗಿದ್ದೇನೆ. ನಿನ್ನ ಬಯಕೆಯೇನು ? ಹೇಳು" ಎಂದನು.

|| ರೈಭ್ಯ ಉವಾಚ ||

ಗತಿಂ ಮೇ ದೇಹಿ ದೇವೇಶ ಯತ್ರ ತೇ ಸನಕಾದಯಃ ।
ವಸೇಯಂ ತತ್ರ ಯೇನಾಹಂ ತ್ವತ್ಪ್ರಸಾದಾಜ್ಜನಾರ್ದನ || ೪೪ ||

|| ದೇವ ಉವಾಚ ||

ಏವಮುಸ್ತ್ವಿತಿ ತೇ ಬ್ರಹ್ಮನ್ನಿತ್ಯುಕ್ತ್ವಾಂತರಧೀಯತ ।
ಭಗವಾನಪಿ ರೈಭ್ಯಸ್ತು ದಿವ್ಯಜ್ಞಾನಸಮನ್ವಿತಃ || ೪೫ ||

ಕ್ಷಣಾದ್ಬಭೂವ ದೇವೇನ ಪರಿತುಷ್ಟೇನ ಚಕ್ರಿಣಾ ।
ಜಗಾಮ ಯತ್ರ ತೇ ಸಿದ್ಧಾಃ ಸನಕಾದ್ಯಾ ಮಹರ್ಷಯಃ || ೪೬ ||

ಏತಚ್ಚ ರೈಭ್ಯನಿರ್ದಿಷ್ಟಂ ಸ್ತೋತ್ರಂ ವಿಷ್ಣೋರ್ಗದಾಭೃತಃ ।
ಯಃ ಪಠೇತ್ಸಗಯಾಂ ಗತ್ವಾ ಪಿಂಡದಾನಾದ್ವಿಶಿಷ್ಯತೇ || ೪೭ ||

---

೪೪. ರೈಭ್ಯ—ದೇವೇಶನೇ, ಜನಾರ್ದನ, ಆ ಸನಕಾದಿಗಳೆಲ್ಲಿರುವರೋ ಅಲ್ಲಿ ನಿನ್ನ ಅನುಗ್ರಹದಿಂದ ನಾನು ಇರುವೆನು. ಆಯೆಡೆಗೆ ನನಗೆ ದಾರಿಯನ್ನು ತೋರಿಸಿಕೊಡು.

೪೫-೪೬. ದೇವನು—"ಬ್ರಾಹ್ಮಣನೇ, ಹಾಗೆಯೇ ಆಗಲಿ" ಎಂದು ಕಣ್ಮರೆಯಾದನು. ರೈಭ್ಯನಾದರೋ ಸಂತುಷ್ಟನಾದ ವಿಷ್ಣುದೇವನಿಂದ ಕ್ಷಣಮಾತ್ರದಲ್ಲಿ ದಿವ್ಯಜ್ಞಾನಯುತನಾಗಿ, ಸಿದ್ಧರಾದ ಆ ಸನಕಾದಿಮಹರ್ಷಿಗಳಿರುವಲ್ಲಿಗೆ (ಹೊರಟು) ಹೋದನು.

೪೭. ರೈಭ್ಯನು ಹೇಳಿ ತೋರಿಸಿರುವ ಗದಾಧರನಾದ ವಿಷ್ಣುವಿನ ಈ ಸ್ತೋತ್ರವನ್ನು ಯಾರು ಹೇಳುವರೋ ಅವರು ಗಯೆಗೆ ಹೋಗಿ ಪಿಂಡದಾನ ಮಾಡಿದ ಸುಕೃತದಿಂದೊಡಗೂಡುವರು.

ಇತಿ ವರಾಹಪುರಾಣೇ ಆದಿಕೃತವೃತ್ತಾಂತೇ ರೈಭ್ಯಸ್ಯ ತಪಸಾ ಗದಾಧರ ಸ್ತೋತ್ರೇಣ ಚೋತ್ತಮಲೋಕ ಪ್ರಾಪ್ತಿರ್ನಾಮ ಸಪ್ತಮೋಽಧ್ಯಾಯಃ
ಇತಿ ರೈಭ್ಯ ಚರಿತಂ ಸಮಾಪ್ತಂ

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ—ತಪಸ್ಸು ಮತ್ತು ಗದಾಧರಸ್ತೋತ್ರಗಳಿಂದ ರೈಭ್ಯಮುನಿಯು ಉತ್ತಮಲೋಕವನ್ನು ಪಡೆದ ವಿಚಾರವನ್ನು ಹೇಳುವನು—ರೈಭ್ಯನು ಗಯೆಗೆ ಹೋಗಿ ತಪಸ್ಸನ್ನು ಮಾಡುತ್ತಿರಲು ಅವನ ಬಳಿಗೆ ಸನತ್ಕುಮಾರಮುನಿಯು ಬಂದುದು, ಅವನು ರೈಭ್ಯನೊಡನೆ ಧರ್ಮಕರ್ಮ ವಿಚಾರವನ್ನು ಮಾತನಾಡುತ್ತ, ಉಜ್ಜಯಿನಿಯ ವಿಶಾಲನೆಂಬ ರಾಜನು ಪುತ್ರ ಪ್ರಾಪ್ತಿಗಾಗಿ ಗಯೆಯಲ್ಲಿ ಪಿತೃತೀರ್ಥದಲ್ಲಿ ಪಿತೃಗಳನ್ನು ಪಿಂಡಪ್ರದಾನಾದಿಗಳಿಂದ ತೃಪ್ತಿಪಡಿಸಿ, ಅವರಿಗೆ ಉತ್ತಮ ಗತಿಯನ್ನುಂಟುಮಾಡಿದುದನ್ನೂ ಹೇಳಿ ಗಯೆಯ ಮಹಿಮೆಯನ್ನು ತಿಳಿಸುವುದು, ರೈಭ್ಯನು ಗಯಾಕ್ಷೇತ್ರದಲ್ಲಿ ನೆಲಸಿರುವ ಗದಾಧರದೇವನನ್ನು ಕುರಿತು ಮಾಡಿದ ಸ್ತೋತ್ರ, ಅದರಿಂದ ಸಂತುಷ್ಟನಾದ ವಿಷ್ಣುವು ಪ್ರತ್ಯಕ್ಷನಾಗಿ ರೈಭ್ಯನಿಗೆ ಸನಕಾದಿಗಳಿರುವ ಉತ್ತಮಲೋಕವನ್ನು ದಯೆ ಪಾಲಿಸಿದುದು, ಗದಾಧರಸ್ತೋತ್ರಮಹಿಮೆ ಇವುಗಳನ್ನು ವಿವರವಾಗಿ ತಿಳಿಸುವನು. ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಏಳನೆಯ ಅಧ್ಯಾಯ

|| ಶ್ರೀಃ ||

-X-

ಅಷ್ಟಮೋಽಧ್ಯಾಯಃ

ಅಥ ಧರ್ಮವ್ಯಾಧಚರಿತಂ

|| ವರಾಹ ಉವಾಚ ||

ಯೋಽಸೌವಸೋಃ ಶರೀರೇತು ವ್ಯಾಧೋ ಭೂತ್ವಾ ನೃಪಸ್ಯಹ ।
ಸ ಸ್ವವೃತ್ತ್ಯಾ ಸ್ಥಿತಃ ಕಾಲಂ ಚತುರ್ವರ್ಷ ಸಹಸ್ರಕಂ || ೧ ||

ಏಕೈಕಂ ಸ್ವಕುಟುಂಬಾರ್ಥೇ ಹತ್ವಾ ವನಚರಂ ಮೃಗಂ ।
ಭೃತ್ಯಾತಿಥಿಹುತಾಶಾನಾಂ ಪ್ರೀಣನಂ ಕುರುತೇ ಸದಾ || ೨ ||

ಮಿಥಿಲಾಯಾಂ ವರಾರೋಹೇ ಸದಾ ಪರ್ವಣಿ*ಪರ್ವಣಿ ।
ಪಿತ್ರ್ಯಾಣಾಂ ಕುರುತೇ ಶ್ರಾದ್ಧಂ ಸ್ವಾಚಾರೇಣ ವಿಚಕ್ಷಣಃ || ೩ ||

ಎಂಟನೆಯ ಅಧ್ಯಾಯ

ಧಾರ್ಮಿಕನಾದ ಬೇಡನ ಚರಿತ್ರೆ

೧. ವರಾಹ—ವಸುರಾಜನ ದೇಹದಿಂದ ಹೊರಟ ಆ ಬೇಡನು ನಾಲ್ಕು ಸಾವಿರ ವರ್ಷಕಾಲ ತನ್ನ ಜಾತಿಯ ಕೆಲಸದಲ್ಲಿದ್ದುಕೊಂಡಿದ್ದನು.

೨. ಅವನು ಪ್ರತಿದಿನವೂ ತನ್ನ ಕುಟುಂಬಕ್ಕಾಗಿ ಒಂದೊಂದು ಕಾಡು ಮೃಗವನ್ನು ಮಾತ್ರ ಕೊಂದು, ಸೇವಕರನ್ನೂ, ಅತಿಥಿಗಳನ್ನೂ, ಅಗ್ನಿಯನ್ನೂ ತೃಪ್ತಿಪಡಿಸುತ್ತಿದ್ದನು.

೩. ವರಾರೋಹೇ, ವಿದ್ವಾಂಸನಾದ ಅವನು ಪ್ರತಿಯೊಂದು ಪರ್ವದಲ್ಲೂ ತನ್ನ ಆಚಾರದಂತೆ ಪಿತೃಗಳಿಗೆ ಶ್ರಾದ್ಧವನ್ನು ಮಾಡುವನು.

---

* ಪರ್ವ= ಅಮಾವಾಸ್ಯೆ, ಸಂಕ್ರಮಣ.

ಅಗ್ನಿಂ ಪರಿಚರನ್ನಿತ್ಯಂ ವದನ್ಸತ್ಯಂ ಸುಭಾಷಿತಂ ।
ಪ್ರಾಣ ಯಾತ್ರಾನುಷಕ್ತಸ್ತು ಯೋಽಸೌ ಜೀವಂ ನಪಾತಯೇತ್ ॥ ೪ ॥

ಏವಂತು ವಸತಸ್ತಸ್ಯ ಧರ್ಮಬುದ್ಧಿರ್ಮಹಾತಪಾಃ ।
ಪುತ್ರಸ್ತ್ವರ್ಜುನಕೋನಾಮ ಬಭೂವ ಮುನಿವದ್ವಶೀ ॥ ೫ ॥

ತಸ್ಯಕಾಲೇನ ಮಹತಾ ಚಾರಿತ್ರೇಣ ಚ ಧೀಮತಃ ।
ಬಭೂವಾರ್ಜುನಕಾ* ನಾಮ ಕನ್ಯಾಚ ವರವರ್ಣಿನೀ ॥ ೬ ॥

ತಸ್ಯಾ ಯೌವನ ಕಾಲೇತು ಚಿಂತಯಾಮಾಸ ಧರ್ಮವಿತ್ ।
ಕಸ್ಯೇಯಂ ದೀಯತೇ ಕನ್ಯಾ ಕೋ ವಾ ಯೋಗ್ಯಶ್ಚ ವೈ ಪುಮಾನ್ ॥ ೭ ॥

ಇತಿ ಚಿಂತಯತಸ್ತಸ್ಯ ಮತಂಗಸ್ಯ ಸುತಂ ಪ್ರತಿ ।
ಧರ್ಮವ್ಯಾಧಸ್ಯ ಸುವ್ಯಕ್ತಂ ಪ್ರಸನ್ನಾಖ್ಯಂ ಪ್ರತಿಬ್ರುವನ್
ಏವಂ ಸಂಚಿಂತ್ಯ ಮಾತಂಗಃ ಪ್ರಸನ್ನಂ ಪ್ರತಿಸೋದ್ಯತಃ । ॥ ೮ ॥

---

೪. ನಿತ್ಯವೂ ಅಗ್ನಿಯನ್ನು ಸೇವಿಸುತ್ತ ಸತ್ಯವೂ ಹಿತವೂ ಆದ ಒಳ್ಳೆಯ ಮಾತುಗಳನ್ನಾಡುವನು. ಹೊಟ್ಟೆಯನ್ನು ಹೊರೆದು ಜೀವಿಸುವುದಕ್ಕಾಗಿ ಎಂದಿಗೂ ಪ್ರಾಣಿಯನ್ನು ಕೊಲ್ಲನು.

೫. ಹೀಗೆ ಜೀವಿಸುತ್ತಿದ್ದ ಆ ಬೇಡನಿಗೆ ಧರ್ಮಬುದ್ಧಿಯುಳ್ಳವನೂ ಮಹಾತಪಸ್ವಿಯೂ, ಋಷಿಗಳಂತೆ ಜಿತೇಂದ್ರಿಯನೂ ಆದ ಅರ್ಜುನಕನೆಂಬ ಮಗನು ಹುಟ್ಟಿದನು.

೬. ಅಲ್ಲದೆ ಬುದ್ಧಿವಂತನಾದ ಅವನಿಗೆ ಬಹುಕಾಲದ ಮೇಲೆ, ಒಳ್ಳೆಯ ನಡತೆಯಿಂದಲೂ ಹೆಸರಿನಿಂದಲೂ ಅರ್ಜುನಕೆಯೆನಿಸಿಕೊಂಡ ಉತ್ತಮಳಾದ ಮಗಳೂ ಜನಿಸಿದಳು.

೭. ಆ ಮಗಳಿಗೆ ಯೌವನಕಾಲವಾಗಲು ಧರ್ಮವನ್ನರಿತ ಅವನು ಇವಳನ್ನು ಯಾರಿಗೆ ಕೊಡುವುದು ? ಯೋಗ್ಯನಾದ ವರನಾರು ? ಎಂದು ಚಿಂತಿಸುತ್ತಿದ್ದನು.

೮. ಹೀಗೆ ಚಿಂತಿಸುತ್ತಿದ್ದ ಆ ಧರ್ಮವ್ಯಾಧನಿಗೆ ಮತಂಗಋಷಿಯ ಮಗನು ಸರಿಯಾದವನೆಂದು ತೋರಲು, ಪ್ರಸನ್ನನೆಂಬ ಹೆಸರಿನ ಅವನ ವಿಚಾರವಾಗಿ ಮಾತನಾಡಿಕೊಳ್ಳುತ್ತಲೂ, ಯೋಚಿಸುತ್ತಲೂ, ಅವನ ವಿಷಯದಲ್ಲಿ ಉದ್ಯುಕ್ತನಾದನು.

---

* ಅರ್ಜುನಕಾ= ಶುದ್ಧಳು.

ಉವಾಚ ತಸ್ಯ ಪಿತರಂ ಪ್ರಸನ್ನಾಯಾರ್ಜುನೀಂ ಭವಾನ್ ||
ಗೃಹಾಣ ತಪತಾಂ ಶ್ರೇಷ್ಠ ಸ್ವಯಂ ದತ್ತಾಂ ಮಹಾತ್ಮನೇ ||| ೯ ||

|| ಮತಂಗ ಉವಾಚ ||

ಪ್ರಸನ್ನೋಽಯಂ ಮಮಸುತಃ ಸರ್ವಶಾಸ್ತ್ರವಿಶಾರದಃ |
ಗೃಹ್ಣಾಮ್ಯರ್ಜುನಕಾಂ ಕನ್ಯಾಂ ತ್ವತ್ಸುತಾಂ ವ್ಯಾಧಸತ್ತಮ ||| ೧೦ ||

ಏವಮುಕ್ತೋ ತದಾ ಕನ್ಯಾಂ ಧರ್ಮವ್ಯಾಧೋ ಮಹಾತಪಾಃ |
ಮತಂಗಪುತ್ರಾಯ ದದೌ ಪ್ರಸನ್ನಾಯ ಚ ಧೀಮತೇ || ೧೧ ||

ಧರ್ಮವ್ಯಾಧಸ್ತದಾ ಕನ್ಯಾಂ ದತ್ವಾ ಸ್ವಗೃಹಮಾಯಿವಾನ್ |
ಸಾಪಿ ಶ್ವಶುರಯೋರ್ಭರ್ತುಃ ಶುಶ್ರೂಷಣಪರಾಭವತ್ || ೧೨ ||

---

೯. ಮತಂಗನನ್ನು ಕುರಿತು, “ತಪಸ್ವಿಗಳಲ್ಲಿ ಮೇಲಾದವನೇ, ಮಹಾತ್ಮನಾದ ಪ್ರಸನ್ನನಿಗೆ ನಾನಾಗಿ ಕೊಟ್ಟ ಅರ್ಜುನಕೆಯನ್ನು ನೀನು ತಂದುಕೋ” ಎಂದು ಹೇಳಿದನು.

೧೦. ಮತಂಗ ಋಷಿ—ವ್ಯಾಧಸತ್ತಮನೇ, ನನ್ನ ಮಗನಾದ ಈ ಪ್ರಸನ್ನನು ಸರ್ವಶಾಸ್ತ್ರವಿಶಾರದನಾಗಿದ್ದಾನೆ. ಇವನಿಗೆ ನಿನ್ನ ಮಗಳಾದ ಅರ್ಜುನಕೆಯನ್ನು ತಂದುಕೊಳ್ಳುತ್ತೇನೆ.

೧೧. ಹೀಗೆ ಹೇಳಿಸಿಕೊಂಡ ಮಹಾತಪಸ್ವಿಯಾದ ಆ ಧರ್ಮವ್ಯಾಧನು, ವಿದ್ವಾಂಸನೂ ಮತಂಗಸುತನೂ ಆದ ಪ್ರಸನ್ನನಿಗೆ ತನ್ನ ಮಗಳನ್ನು ಮದುವೆ ಮಾಡಿ ಕೊಟ್ಟನು.

೧೨, ಬಳಿಕ ಆ ಧರ್ಮವ್ಯಾಧನು ತನ್ನ ಮನೆಗೆ ಬಂದನು. ಅರ್ಜುನಕೆಯು ಅತ್ತೆ ಮಾವಂದಿರ ಮತ್ತು ಪತಿಯ ಸೇವೆಯಲ್ಲಿ ನಿರತಳಾಗಿ ಇದ್ದಳು.

ಅಥಕಾಲೇನ ಮಹತಾ ಸಾ ಕನ್ಯಾರ್ಜುನಕಾ ಶುಭಾ ।
ಉಕ್ತಾ ಶ್ವಶ್ರ್ವಾ ಸ್ನುಷಾ ಪುತ್ರೀ ಜೀವಹಂತುಸ್ತ್ವಮೀದೃಶೀ ॥
ನಜಾನಾಸಿ ತಪಃ ಕರ್ತುಂ ಭರ್ತುರಾರಾಧನಂ ತಥಾ ॥ ೧೩ ॥

ಸಾಪಿ ಸ್ವಲ್ಪಾಪರಾಧೇನ ಭರ್ತ್ಸಿತಾ ತನು ಮಧ್ಯಮಾ ।
ಪಿತುರ್ವೇಶ್ಮಾಗತಾ ಬಾಲಾ ರೋದಮಾನಾ ಮುಹುರ್ಮುಹುಃ ॥ ೧೪ ॥

ಪಿತ್ರಾಪೃಷ್ಟಾ ಕಿಮೇತತ್ತೇ ಪುತ್ರಿರೋದನಕಾರಣಂ ।
ಏವಮುಕ್ತಾ ತದಾ ಸಾತು ಕಥಯಾಮಾಸ ಭಾಮಿನೀ ॥ ೧೫ ॥

ಶ್ವಶ್ರ್ವಾಹಮುಕ್ತಾ ತೀವ್ರೇಣ ಕೋಪೇನ ಮಹತಾ ಪಿತಃ ।
ಜೀವಹಂತುಃ ಸುತೇತ್ಯುಚ್ಚೈರಸಕೃದ್ವ್ಯಾಧ ಜೇತಿ ಚ ॥ ೧೬ ॥

ಏತಚ್ಛ್ರುತ್ವಾ ಸಧರ್ಮಾತ್ಮಾ ಧರ್ಮವ್ಯಾಧೋ ರುಷಾನ್ವಿತಃ ।
ಮತಂಗಸ್ಯ ಗೃಹಂ ಸೋಽಥ ಗತ್ವಾ ಜನಪದೈರ್ವೃತಂ ॥ ೧೭ ॥

---

೧೩. ಬಹುಕಾಲದಮೇಲೆ ಯಾವುದೋ ಸಣ್ಣ ತಪ್ಪು ಮಾಡಿದುದಕ್ಕಾಗಿ ಸೊಸೆಯಾದ ಅರ್ಜುನಕೆಯನ್ನು ಅವಳ ಅತ್ತೆಯು "ಅಮಂಗಳೇ ! ನೀನು ಪ್ರಾಣಿಗಳನ್ನು ಕೊಲ್ಲುವವನ ಮಗಳು. ಇಂತಹವಳಿಗೆ ತಪಸ್ಸನ್ನು ಮಾಡುವುದಕ್ಕೂ ಪತಿಸೇವೆ ಮಾಡುವುದಕ್ಕೂ ಹೇಗೆ ತಿಳಿದೀತು ?" ಎಂದು ಬೈದಳು.

೧೪-೧೬. ಸಣ್ಣತಪ್ಪಿಗಾಗಿ ನಿಂದೆಗೆ ಪಾತ್ರಳಾದ (ಸಣ್ಣನಡುವಿನ) ಆ ಬಾಲೆಯು ತಂದೆಯ ಮನೆಗೆ ಬಂದು ಮತ್ತೆ ಮತ್ತೆ ಅಳುತ್ತಾ, "ಅಪ್ಪಾ, ಅತ್ತೆಯು ಹೆಚ್ಚು ಸಿಟ್ಟಿನಿಂದ ನನ್ನನ್ನು 'ಪ್ರಾಣಿಗಳನ್ನು ಕೊಲ್ಲುವವನ ಮಗಳು. ಬೇಡನ ಮಗಳು' ಎಂದು ಗಟ್ಟಿಯಾಗಿ ಹಲವು ಸಾರಿ ಬಯ್ದಳು." ಎಂದು ಹೇಳಿದಳು.

೧೭-೧೯. ಇದನ್ನು ಕೇಳಿದ ಧರ್ಮಾತ್ಮನಾದ ಆ ಬೇಡನು ಸಿಟ್ಟುಗೊಂಡು, ಜನರಿಂದ ಕೂಡಿದ ಆ ಮತಂಗ ಋಷಿಯ ಮನೆಗೆ ಹೋದನು. ಜಯಶೀಲರಲ್ಲಿ

ತಸ್ಯಾಗತಸ್ಯ ಸಂಬಂಧೀ ಮತಂಗೋ ಜಯತಾಂ ವರಃ ।
ಆಸನಾದ್ಯೈರ್ಘ್ಯಪಾದ್ಯೇನ ಪೂಜಯಿತ್ವೇದಮಬ್ರವೀತ್ ॥ ೧೮ ॥

ಕಿಮಾಗಮನಕೃತ್ಯಂತೇ ಕಿಂಕರೋಮ್ಯಾಗತಕ್ರಿಯಾಂ ॥ ೧೯ ॥

॥ ವ್ಯಾಧ ಉವಾಚ ॥

ಭೋಜನಂ ಕಿಂಚಿದಿಚ್ಛಾಮಿ ಭೋಕ್ತುಂ ಚೈತನ್ಯವರ್ಜಿತಂ ।
ಕೌತೂಹಲೇನ ಯೇನಾಹಮಾಗತೋ ಭವತೋ ಗೃಹೇ ॥ ೨೦ ॥

॥ ಮತಂಗ ಉವಾಚ ॥

ಗೋಧೂಮಾ ವ್ರೀಹಯಶ್ಚೈವ ಸಂಸ್ಕೃತಾ ಮಮ ವೇಶ್ಮನಿ ।
ಭುಜ್ಯತಾಂ ಧರ್ಮವಿಚ್ಛ್ರೇಷ್ಠ ಯಥಾಕಾಮಂ ತಪೋಧನ ॥ ೨೧ ॥

॥ ವ್ಯಾಧ ಉವಾಚ ॥

ಪಶ್ಯಾಮಿ ಕೀದೃಶಾಸ್ತೇಹಿ ಗೋಧೂಮಾ ವ್ರೀಹಯೋಯವಾಃ ।
ಸ್ವರೂಪೇಣಚ ಸಂತ್ಯೇತೇ ಯೇನ ವೋ ವೇದ್ಮಿಸತ್ತಮ ॥ ೨೨ ॥

ಮೇಲಾದ ಆ ಮತಂಗ ಮುನಿಯು ಮನೆಗೆ ಬಂದ ಬೇಗನನ್ನು ಪೀಠಕೊಡುವುದೇ ಮೊದಲಾದುವುಗಳಿಂದ ಪೂಜಿಸಿ, 'ನೀನು ಬಂದ ಕೆಲಸವೇನು ? ನೀನು ಬಂದುದಕ್ಕೆ ನಾನು ಮಾಡಬೇಕಾದುದೇನು ?' ಎಂದು ಕೇಳಿದನು.

೨೦. ಬೇಡನು—ಪ್ರಾಣಿಸಂಬಧವಲ್ಲದ ಯಾವುದಾದರೂ ಆಹಾರವನ್ನು ತಿನ್ನಲು ಬಯಸುತ್ತೇನೆ. ಅದಕ್ಕಾಗಿ ಕುತೂಹಲದಿಂದ ನಿನ್ನ ಮನೆಗೆ ಬಂದಿದ್ದೇನೆ.

೨೧. ಮತಂಗ:—ಧರ್ಮಜ್ಞರಲ್ಲಿ ಮೇಲಾದವನೇ, ತಪೋಧನನೇ, ನಮ್ಮ ಮನೆಯಲ್ಲಿ ಗೋದುವೆಯೂ ಬತ್ತವೂ ಶುದ್ಧವಾದುದಾಗಿದೆ. ಬೇಕಾದಹಾಗೆ ಊಟ ಮಾಡು.

೨೨. ಧರ್ಮವ್ಯಾಧ (ಬೇಡನು):—" ಸಜ್ಜನೋತ್ತಮನೇ, ಎಲ್ಲಿ ! ನಿಮ್ಮ ಗೋದುವೆಯೂ, ಜವೆಯೂ, ಎಂತಹವು ? ಆಕಾರದಲ್ಲಿ ಹೇಗಿವೆ ಎಂಬುದನ್ನು ನೋಡಿ ತಿಳಿದು ಕೊಳ್ಳುವೆನು."

॥ ವರಾಹ ಉವಾಚ ॥

ಏವಮುಕ್ತೇ ಮತಂಗೇನ ಶೂರ್ಪಗೋಧೂಮ ಪೂರಿತಂ ।
ಅಪರಂ ತತ್ರವ್ರೀಹೀಣಾಂ ಧರ್ಮವ್ಯಾಧಾಯ ದರ್ಶಿತಂ ॥ ೨೩ ॥

ದೃಷ್ಟ್ವಾ ವ್ರೀಹೀನ್ಸಗೋಧೂಮಾನ್ ಧರ್ಮವ್ಯಾಧೋ ವರಾಸನಾತ್ ।
ಉತ್ಥಾಯ ಗಂತುಮಾರೇಭೇ ಮತಂಗೇನ ನಿವಾರಿತಃ ॥ ೨೪ ॥

ಕಿಮರ್ಥಂ ಗಂತುಮಾರಬ್ಧಂ ತ್ವಯಾವದ ಮಹಾಮತೇ ।
ಅಭುಕ್ತೇ ನೈವ ಸಂಸಿದ್ಧಂ ಮದ್ಗೃಹೇ ಚಾನ್ನಮುತ್ತಮಂ ॥
ಪಾಚಯಿತ್ವಾ ಸ್ವಯಂಚೈವ ಕಸ್ಮಾತ್ತ್ವಂನ್ನಾದ್ಯಭುಂಜಸೇ ॥ ೨೫ ॥

॥ ವ್ಯಾಧ ಉವಾಚ ॥

ಸಹಸ್ರಶಃ ಕೋಟಿಶಶ್ಚ ಜೀವಾನ್ ಹಂಸಿ ದಿನೇ ದಿನೇ ।
ಅಥೇದೃಶಸ್ಯ ಪಾಪಸ್ಯ ಕೋನ್ನಂ ಭುಂಜತಿ ಸತ್ಪುಮಾನ್ ॥ ೨೬ ॥

---

೨೩. ವರಾಹ:—ಬೇಡನು ಹೀಗೆ ಹೇಳಲು ಮತಂಗನು ಗೋಧುವೆಯಿಂದ ತುಂಬಿದ ಒಂದು ಮೊರವನ್ನೂ ಬತ್ತವಿರುವ ಮತ್ತೊಂದು ಮೊರವನ್ನೂ ಅವನಿಗೆ ತೋರಿಸಿದನು.

೨೪. ಆ ಧರ್ಮವ್ಯಾಧನು ಬತ್ತವನ್ನೂ ಗೋಧುವೆಯನ್ನೂ ನೋಡಿ, ಉತ್ತಮವಾದ ಪೀಠದಿಂದ ಎದ್ದು ಹೊರಡಲಾರಂಭಿಸಿದನು.

೨೫. ಆಗ ಮತಂಗ ಮುನಿಯು ಅವನನ್ನು ತಡೆದು “ ಮಹಾಮತಿಯೇ, ನಮ್ಮ ಮನೆಯಲ್ಲಿ ಸಿದ್ಧವಾಗಿರುವ ಉತ್ತಮಾನ್ನವನ್ನು ಊಟಮಾಡದೆಯೇ ಏಕೆ ನೀನು ಹೊರಟೆ ? ಹೇಳು. ನೀನೆ ಅಡಿಗೆ ಮಾಡಿಸಿ ಈಗೇಕೆ ಊಟಮಾಡು ವುದಿಲ್ಲ ? ” ಎಂದನು.

೨೬. ಬೇಡನು:—ನೀನು ದಿನದಿನವೂ ಸಾವಿರಗಟ್ಟಲೆಯೂ, ಕೋಟಿ ಗಟ್ಟಲೆಯೂ ಪ್ರಾಣಿಗಳನ್ನು ಕೊಲ್ಲುತ್ತೀಯೆ. ಹೀಗಿರುವಾಗ ಇಂತಹ ಪಾಪಿಯ ಅನ್ನವನ್ನು ಸತ್ಪುರುಷನಾವನು ತಾನೆ ಊಟಮಾಡುವನು ?

ಅಚ್ಚೈತನ್ನಂ ಯದಿಗ್ರುಹೇ ವಿದ್ಯತೇಽನ್ನಂ ಸುಸಂಸ್ಕೃತಂ ।
ತದಾನೀಮಸ್ಮಿ ಸಂಭೋಕ್ತಾ ಮತ್ವಾತು ಸ್ವಜನಂ ತವ ॥ ೨೭ ॥

ಅಹಮೇಕಂ ಕುಟುಂಬಾರ್ಥೇ ಹನ್ಮ್ಯರಣ್ಯೇ ಪಶುಂ ದಿನೇ ।
ತಂಚೇತ್ಪಿತೃಭ್ಯಃ ಸತ್ಕೃತ್ಯ ದತ್ವಾ ಭುಂಜಾಮಿ ಸಾನುಗಃ ॥ ೨೮ ॥

ತ್ವಂತು ಜೀವಾನ್ ಬಹೂನ್ ಹತ್ವಾ ಸ್ವಕುಟುಂಬೇನ ಸಾನುಗಃ ।
ಭುಂಜಸೇ ತೇನ ಸತತಮಭೋಜ್ಯಂ ತನ್ಮತಂ ಮಮ ॥ ೨೯ ॥

ಬ್ರಹ್ಮಣಾತು ಪುರಾಸೃಷ್ಟಾ ಓಷಧ್ಯಃ* ಸರ್ವವೀರುಧಃ ।
ಯಜ್ಞಾರ್ಥಂ ತತ್ತು ಭೂತಾನಾಂ ಭಕ್ಷಮಿತ್ಯೇವ ವೈಶ್ರುತಿಃ ॥ ೩೦ ॥

ದಿವ್ಯೋ ಭೌಮಸ್ತಥಾ ಪೈತ್ರೋ ಮಾನುಷೋ ಬ್ರಾಹ್ಮ ಏವ ಚ ।
ಏತೇಪಂಚ ಮಹಾಯಜ್ಞಾ ಬ್ರಹ್ಮಣಾನಿರ್ಮಿತಾ ಪುರಾ ॥ ೩೧ ॥

೨೭-೨೮. ನಿನ್ನ ಮನೆಯಲ್ಲಿ ಪ್ರಾಣಿಗಳದಲ್ಲದ ಶುದ್ಧವಾದ ಅನ್ನವಿದ್ದರೆ ನಿನ್ನನ್ನು ಸ್ವಜನವೆಂದು ತಿಳಿದು, ಊಟಮಾಡುವೆನು. ನಾನು ಕುಟುಂಬಕ್ಕಾಗಿ ದಿನಕ್ಕೆ ಒಂದು ಕಾಡುಮೃಗವನ್ನು ಮಾತ್ರ ಕೊಲ್ಲುವೆನು. ಅದನ್ನೂ ಪಿತೃಗಳಿಗೆ ಸತ್ಕಾರ ಪೂರ್ವಕವಾಗಿ ಕೊಟ್ಟು, ಉಳಿದುದನ್ನು ಇಷ್ಟರೊಡನೆ ಊಟ ಮಾಡುವೆನು.

೨೯. ನೀನಾದರೆ ಬಹು ಪ್ರಾಣಿಗಳನ್ನು ಕೊಂದು ಕುಟುಂಬದೊಡನೆ (ಕೂಡಿಕೊಂಡು) ಊಟಮಾಡುತ್ತೀಯೆ. ಆದುದರಿಂದ ಅದು ಯಾವಾಗಲೂ ಊಟಮಾಡತಕ್ಕದ್ದಲ್ಲವೆಂದು ನನ್ನ ಅಭಿಪ್ರಾಯ.

೩೦. ಪೂರ್ವದಲ್ಲಿ ಬ್ರಹ್ಮನು *ಓಷಧಿಗಳನ್ನೂ ಎಲ್ಲಾ ಬಗೆಯ ಬಳ್ಳಿಪೊದೆಗಳನ್ನೂ ಯಜ್ಞಕ್ಕಾಗಿ ಸೃಷ್ಟಿಸಿದನು. ಯಜ್ಞಾನಂತರ ಅದು ಪ್ರಾಣಿಗಳ ತಿಂಡಿಯೆಂದು ಶ್ರುತಿಯಲ್ಲಿದೆ.

೩೧. ದೇವಯಜ್ಞ, ಭೂತಯಜ್ಞ, ಪಿತೃಯಜ್ಞ, ಮನಷ್ಯಯಜ್ಞ, ಬ್ರಹ್ಮಯಜ್ಞ ಎಂಬ ಈ ಐದು ಮಹಾಯಜ್ಞಗಳನ್ನೂ ಬ್ರಹ್ಮನು ಪೂರ್ವದಲ್ಲಿ ಏರ್ಪಡಿಸಿದನು,

---

* ಓಷಧಿ= ಫಲವು ಪಕ್ವವಾದ ಬಳಿಕ ಒಣಗಿಹೋಗುವ ಬೆಳೆ (ರಾಗಿ, ಬತ್ತ, ಗೋದಿ ಮೊದಲಾದುವು.)

ಬ್ರಾಹ್ಮಣಾನಾಂ ಹಿತಾರ್ಥಾಯ ಇತರೇಷಾಂ ಚ ತನ್ಮಖಾಃ ।
ಇತರೇಷಾಂತು ವರ್ಣಾನಾಂ ಬ್ರಾಹ್ಮಣೈಃ ಕಾರಿತಾಃ ಶುಭಾಃ ॥ ೩೨ ॥

ಏವಂ ಕೃತ್ವಾ ನರೋ ಭುಕ್ತ್ವಾ ತಸ್ಮಾದ್ವಾನ್ನಂ ವಿಶುಧ್ಯತಿ ।
ಅನ್ಯಥಾ ವ್ರೀಹಯೋ ಹ್ಯೇತೇ ಏಕೈಕಂ ಮೃಗಪಕ್ಷಿಣಃ ॥
ಮಂತವ್ಯಾ ದಾತೃಭೋಕ್ತ್ರ್ಯಾಣಾಂ ಮಹಾಮಾಂಸಂತು ತತ್ಸ್ಮೃತಂ॥ ೩೩ ॥

ಮಯಾತೇ ದುಹಿತಾ ದತ್ತಾ ಪುತ್ರಾರ್ಥೇ ವರ ವರ್ಣಿನೀ ।
ಸಾಚ ತ್ವದ್ಭಾರ್ಯಯಾ ಪ್ರೋಕ್ತಾ ದುಹಿತಾ ಜಂತು ಘಾತಿನಃ ॥
ಅತೋರ್ಥಮಾಗತೋಽಹಂ ತೇ ಗೃಹಂ ಪ್ರತಿ ಸಮೀಕ್ಷಿತುಂ ॥ ೩೪ ॥

ಆಚಾರಂ ದೇವಪೂಜಾಂಚ ಅತಿಥೀನಾಂ ಚ ತರ್ಪಣಂ ।
ಏತೇಷಾಮೇಕಮಪ್ಯತ್ರ ಕುರ್ವನ್ನಪಿ ನ ದೃಶ್ಯಸೇ ॥ ೩೫ ॥

---

೩೨. ಬ್ರಾಹ್ಮಣರ ಮತ್ತು ಇತರರ ಹಿತಕ್ಕಾಗಿ ಆ ಯಜ್ಞಗಳು. ಇತರ ವರ್ಣದವರಿಗಾದರೋ ಬ್ರಾಹ್ಮಣರೇ ಶುಭಗಳನ್ನು ಮಾಡಿಸುವರು.

೩೩. ಹೀಗೆ ಯಜ್ಞಮಾಡಿದರೆ ಅನ್ನವು ಪರಿಶುದ್ಧವಾಗುತ್ತದೆ. ಅದನ್ನು ಮನುಷ್ಯರು ತಿನ್ನಬಹುದು. ಹಾಗೆ ಮಾಡದಿದ್ದರೆ ಈ ಬತ್ತವೂ ಗೋದುವೆಯೂ ಒಂದೊಂದುಕಾಳೂ ಮೃಗಪಕ್ಷಿಗಳೇ ಎಂದು ತಿಳಿಯಬೇಕು. ಅದು ಊಟ ಮಾಡುವವರಿಗೂ ಊಟವನ್ನು ಮಾಡಿಸುವವರಿಗೂ ಮಹಾಮಾಂಸ ವೆನ್ನಿಸುವುದು.

೩೪. ನಾನು ನಿನ್ನ ಮಗನಿಗೆ ಒಳ್ಳೆಯವಳಾದ ಮಗಳನ್ನು ಕೊಟ್ಟೆನು. ಅವಳನ್ನು ನಿನ್ನ ಹೆಂಡತಿಯು, ಪ್ರಾಣಿಗಳನ್ನು ಕೊಲ್ಲುವವನ ಮಗಳೆಂದು ಹೇಳಿದಳು. ಆದುದರಿಂದ ನಾನು ನಿನ್ನ ಮನೆಯನ್ನು ನೋಡಲು ಬಂದೆ.

೩೫. ಆಚಾರ, ದೇವಪೂಜೆ, ಅತಿಥಿಗಳ ಸತ್ಕಾರ, ಇವುಗಳಲ್ಲಿ ಒಂದನ್ನು ನೀನು ಮಾಡುವಂತೆ ಕಾಣಲಿಲ್ಲ.

ತದಹಂ ಗಂತುಮಿಚ್ಛಾಮಿ ಪಿತ್ರೂಣಾಂ ಶ್ರಾದ್ಧಕಾಮ್ಯಯಾ ।
ಸ್ವಗೃಹೇ ನೈವ ಭುಂಜಾಮಿ ಪಿತ್ರೂಣಾಂ ಕಾರ್ಯಮಿತ್ಯುತ ॥ ೩೬ ॥

ಅಹಂ ವ್ಯಾಧೋ ಜೀವ ಘಾತೀ ನತು ತ್ವಂ ಲೋಕಹಿಂಸಕಃ ।
ಮತ್ಸುತಾ ಜೀವಘಾತಸ್ಯ ಯದೂಢಾ ತ್ವತ್ಸುತೇನ ಚ ॥ ೩೭ ॥

ತನ್ಮಹತ್ವಂ ಚ ಸಂಪ್ರಾಪ್ತಂ ಪ್ರಾಯಶ್ಚಿತ್ತಂ ತಪೋಧನ ।
ಏವಮುಕ್ತ್ವಾ ಸಚೋತ್ಥಾಯ ಶಪ್ತ್ವಾನಾರೀಂ ತದಾಂಬರೇ ॥ ೩೮ ॥

ಮಾ ಸ್ನುಷಾಭಿಃ ಸಮಂ ಶ್ವಶ್ರ್ವಾ ವಿಶ್ವಾಸೋ ಭವತು ಕ್ವಚಿತ್ ।
ಮಾ ಚ ಸ್ನುಷಾ ಕದಾಚಿತ್ಸ್ವ್ಯಾದ್ವಾ ಶ್ವಶ್ರೂಂ ಜೀವತೀಮಿಷೇತ್
ಏವಮುಕ್ತ್ವಾ ಗತೋ ವ್ಯಾಧಃ ಸ್ವಗೃಹಂ ಪ್ರತಿ ಭಾಮಿನಿ । ॥ ೩೯ ॥

ತತೋ ದೇವಾನ್ ಪಿತ್ರೂನ್ ಭಕ್ತ್ಯಾ ಪೂಜಯಿತ್ವಾ ವಿಚಕ್ಷಣಃ ॥ ೪೦ ॥

---

೩೬. ಆದುದರಿಂದ ಪಿತೃಗಳಿಗೆ ಶ್ರಾದ್ಧಮಾಡಲು ಹೋಗಬೇಕೆಂದು ಇಚ್ಛೆಸುತ್ತೇನೆ. ನನ್ನ ಮನೆಯಲ್ಲೂ ಪಿತೃಗಳ ಕಾರ್ಯವಿಲ್ಲದೇ ಊಟ ಮಾಡುವುದಿಲ್ಲ.

೩೭. ತಪೋಧನನನೇ, ನಾನು ಪ್ರಾಣಿಗಳನ್ನು ಕೊಲ್ಲುವವನು, ಬೇಡನು. ನೀನಾದರೋ ಲೋಕಹಿಂಸಕನಲ್ಲ. ಪ್ರಾಣಿಗಳ ಕೊಲೆಗಾರನಾದ ನನ್ನ ಮಗಳನ್ನು ನಿನ್ನಮಗನು ಮದುವೆ ಮಾಡಿಕೊಂಡುದರಿಂದ ನನಗೆ ಮಹಿಮೆಯೂ ನನ್ನ ಪಾಪಕ್ಕೆ ಪ್ರಾಯಶ್ಚಿತ್ತವೂ ಆಯಿತು.

೩೮-೩೯. ಎಂದು ಹೇಳಿ ಎದ್ದು ಬೇಡನು ಆಕಾಶದಲ್ಲಿ ನಿಂತು, 'ಎಲ್ಲೂ ಸೊಸೆಯರೊಡನೆ ಅತ್ತೆಗೆ ವಿಶ್ವಾಸವುಂಟಾಗದಿರಲಿ. ಎಂದಿಗೂ ಸೊಸೆಯು ತನ್ನ ಅತ್ತೆ ಜೀವಿಸಿರಲೆಂದು ಬಯಸದಿರಲಿ.' ಎಂದು ಹೇಳಿ ಹೆಂಗಸನ್ನು ಶಪಿಸಿ, ತನ್ನ ಮನೆಗೆ ಹೊರಟುಹೋದನು.

೪೦-೪೨. ಭಾಮಿನಿಯೇ, ವಿದ್ವಾಂಸನೂ ತಪೋಧನನೂ ಆದ ಆ ಧರ್ಮ ವ್ಯಾಧನು ಬಳಿಕ ಭಕ್ತಿಯಿಂದ ದೇವತೆಗಳನ್ನೂ ಪಿತೃಗಳನ್ನೂ ಪೂಜಿಸಿ, ತನ್ನ

ಪುತ್ರಂ ಚಾರ್ಜುನಕಂ ಸ್ಥಾಪ್ಯ ಸ್ವಸಂತಾನಂ ಮಹಾತಪಾಃ ।
ಧರ್ಮವ್ಯಾಧೋ ಜಗಾಮಾಶು ತೀರ್ಥಂ ತ್ರೈಲೋಕ್ಯವಿಶ್ರುತಂ ॥ ೪೧ ॥

ಪುರುಷೋತ್ತಮಾಖ್ಯಂ ಚ ಪರಂ ತತ್ರ ಗತ್ವಾ ಸಮಾಹಿತಃ ।
ತಪಶ್ಚಚಾರ ನಿಯಮಾತ್ಪಠನ್ ಸ್ತೋತ್ರಮಿದಂ ಧರೇ ॥ ೪೨ ॥

ನಮಾಮಿ ವಿಷ್ಣುಂ ತ್ರಿದಶಾರಿ ನಾಶನಂ
ವಿಶಾಲವಕ್ಷಸ್ಥಲಸಂಶ್ರಿತಶ್ರಿಯಂ ।
ಸುಶಾಸನಂ ನೀತಿಮತಾಂ ಪರಾಂಗತಿಂ
ತ್ರಿವಿಕ್ರಮಂ ಮಂದರಧಾರಿಣಂ ಸದಾ ॥ ೪೩ ॥

ದಾಮೋದರಂ ನಿರ್ಜಿತಭೂತಲಂ ಧಿಯಾ
ಯಶೋಂಶುಶುಭ್ರಂ ಭ್ರಮರಾಂಗಸಪ್ರಭಂ ।
ಭವೇಭವೇ ದೈತ್ಯರಿಪುಂ ಪುರುಷ್ಟುತಂ
ನಮಾಮಿ ವಿಷ್ಣುಂ ಶರಣಂ ಜನಾರ್ದನಂ ॥ ೪೪ ॥

ಕುಟುಂಬಭಾರವನ್ನು ಮಗನಾದ ಅರ್ಜುನಕನಿಗೆ ವಹಿಸಿ, ಮೂರುಲೋಕಗಳಲ್ಲೂ ಪ್ರಸಿದ್ಧಿಗೊಂಡ ಪುರುಷೋತ್ತಮವೆಂಬ ಪರಮತೀರ್ಥಕ್ಕೆ ಹೊರಟುಹೋಗಿ ಶಾಂತನಾಗಿ ನೇಮದಿಂದ ಈ(ಮುಂದಿರುವ)ಸ್ತೋತ್ರವನ್ನು ಹೇಳುತ್ತ ತಪಸ್ಸನ್ನು ಮಾಡಿದನು.

೪೩. ದೇವತೆಗಳಿಗೆ ಹಗೆಗಳಾದ ರಾಕ್ಷಸರನ್ನು ಹಾಳುಮಾಡಿದವನೂ, ತನ್ನ ಅಗಲವಾದ ಎದೆಯಲ್ಲಿ ಲಕ್ಷ್ಮಿಯನ್ನು ಧರಿಸಿರುವವನೂ, ಉತ್ತಮವಾದ * ಶಾಸನವುಳ್ಳವನೂ, ನೀತಿವಂತರಿಗೆ ಉತ್ತಮವಾದ ಗತಿಯೂ, ತ್ರಿವಿಕ್ರಮನೂ, ಮಂದರಪರ್ವತಧಾರಿಯೂ ಆದ ವಿಷ್ಣುವನ್ನು ನಮಸ್ಕರಿಸುತ್ತೇನೆ.

೪೪. ದಾಮೋದರನೂ, ಭೂಮಿಯನ್ನೆಲ್ಲ ಬುದ್ಧಿಯಿಂದ ಜಯಿಸಿದವನೂ, ಯಶಃಕಾಂತಿಯಿಂದ ಶುಭ್ರನೂ, ದುಂಬಿಯ ಮೈಬಣ್ಣವುಳ್ಳವನೂ, ಪ್ರತಿಯೊಂದು ಅವತಾರದಲ್ಲೂ ಅಸುರಾರಿಯೂ, ಪುರುವಿನಿಂದ ಸ್ತುತನೂ, ರಕ್ಷಕನೂ ಆದ ಜನಾರ್ದನನನ್ನು ನಮಸ್ಕರಿಸುತ್ತೇನೆ.

---

* ಶಾಸನ= ಕಾಂತಿ, ಅಪ್ಪಣೆ, ವಾಕ್ಯ, ನಿಗ್ರಹ.

ತ್ರಿಧಾಸ್ಥಿತಂ ತಿಗ್ಮರಥಾಂಗ ಪಾಣಿನಂ
ನಯಸ್ಥಿತಂ ಯುಕ್ತಮನುತ್ತಮೈರ್ಗುಣೈಃ ।
ನಿಶ್ರೇಯಸಾಖ್ಯಂ ಕ್ಷಯಿತೇತರಂ ಗುರುಂ
ನಮಾಮಿ ವಿಷ್ಣುಂ ಪುರುಷೋತ್ತಮಂ ತ್ವಹಂ ॥ ೪೫ ॥

ಮಹಾವರಾಹೋ ಹವಿಷಾಂ ಭುಜೋ ಜನೋ
ಜನಾರ್ದನೋ ಮೇ ಹಿತಕೃಚ್ಚತುರ್ಮುಖಃ ।
ಮಹೀಧರೋ ಮಾಮುದಧಿಪ್ಲವೇ ಮಹಾನ್
ಸ ಪಾತುವಿಷ್ಣುಃ ಶರಣಾರ್ಥಿನಂ ತು ಮಾಂ ॥ ೪೬ ॥

ಮಾಯಾತತಂ ಯೇನ ಜಗತ್ರಯಂ ಕೃತಂ
ಯಥಾಗ್ನಿನೈಕೇನ ತತಂ ಚರಾಚರಂ ।
ಚರಾಚರಸ್ಯ ಸ್ವಯಮೇವ ಸರ್ವತಃ
ಸಮೋಽಸ್ತು ವಿಷ್ಣುಃ ಶರಣಂ ಜಗತ್ಪತಿಃ ॥ ೪೭ ॥

---

೪೫. ತ್ರಿಮೂರ್ತಿಯಾಗಿರುವ, ತೀಕ್ಷ್ಣಚಕ್ರವನ್ನು ಹಿಡಿದಿರುವ, ನೀತಿವಂತನಾದ, ಅತ್ಯುತ್ತಮ ಗುಣನಾದ, ನಿಶ್ರೇಯಸ್ಸೆಂಬ ಹೆಸರುಳ್ಳ, ನೀಚರನ್ನು ನಾಶಗೊಳಿಸುವ, ಗುರುವೂ ಪುರುಷೋತ್ತಮನೂ ಆದ ವಿಷ್ಣುವನ್ನು ನಮಿಸುತ್ತೇನೆ.

೪೬. ಮಹಾವರಾಹನೂ, ದೇವನೂ, ಜನಾರ್ದನನೂ, ನನಗೆ ಹಿತಕಾರಿಯೂ, ಚತುರ್ಮುಖನೂ, ಸಾಗರ ಪ್ರವಾಹದಲ್ಲಿ ಭೂಮಿಯನ್ನು ಧರಿಸಿದವನೂ, ಮಹಾತ್ಮನೂ ಆದ ವಿಷ್ಣುವು ಶರಣಾರ್ಥಿಯಾದ ನನ್ನನ್ನು ಕಾಪಾಡಲಿ.

೪೭. ಚರಾಚರವೆಲ್ಲವೂ ಅಗ್ನಿಯಿಂದ ವ್ಯಾಪ್ತವಾಗಿರುವಂತೆ ಯಾರು ಮೂರುಲೋಕವನ್ನೂ ಮಾಯೆಯಿಂದ ವ್ಯಾಪ್ತವಾದುದನ್ನಾಗಿ ಮಾಡಿದವನೋ ಯಾರು ಚರಾಚರಗಳಿಗೆಲ್ಲಾ ಅಂತರ್ಯಾಮಿಯೋ (ರಕ್ಷಕನೋ) ಆ ಜಗತ್ಪತಿಯಾದ ವಿಷ್ಣುವು ನನಗೆ ರಕ್ಷಕನಾಗಲಿ.

ಭವೇ ಭವೇ ಯಶ್ಚ ಸಸರ್ಜ ಕಂ ತತೋ
ಜಗತ್ಪ್ರಸೂತಂ ಸಚರಾಚರಂ ತ್ವಿದಂ ।
ತತಶ್ಚ ರುದ್ರಾತ್ಮವತಿ ಪ್ರಲೀಯತೇ
ತತೋ ಹರಿರ್ವಿಷ್ಣುರಚಿಂತ್ಯರೂಪ ಧೃಕ್ ॥ ೪೮ ॥

ರವೀಂದುಪೃಥ್ವೀಪವನಾದಿಭಾಸ್ಕರಾಃ
ಜಲಂಚ ಯಸ್ಯ ಪ್ರಭವಂತಿ ಮೂರ್ತಯಃ ।
ಸ ಸರ್ವದಾ ಮೇ ಭಗವಾನ್ ಸನಾತನೋ
ದದಾತು ಶಂ ವಿಷ್ಣುರಚಿಂತ್ಯರೂಪಧೃಕ್ ॥ ೪೯ ॥

ಇತೀರಿತೇ ತಸ್ಯ ಸನಾತನಃ ಸ್ವಯಂ
ಪುರೋ ಬಭೂವಾದ್ಭುತರೂಪದರ್ಶನಃ ।
ವರಂ ವೃಣೀ ಷ್ವೇತಿ ಸನಾತನೋಽಬ್ರವೀತ್
ಅನಂತ ಪಾದೋದರ ಬಾಹುವಕ್ತ್ರಃ ॥ ೫೦ ॥

೪೮-೪೯. ಪ್ರತಿ ಸೃಷ್ಟಿಯಲ್ಲೂ ಯಾರು ನೀರನ್ನು ಸೃಷ್ಟಿಸಿದನೋ, ಬಳಿಕ ಅದರಿಂದ, ಚರಾಚರದಿಂದ ಕೂಡಿದ ಈ ಜಗತ್ತು ಹುಟ್ಟಿತೋ, ರುದ್ರಸ್ವರೂಪನಾದ ಯಾರಲ್ಲಿ ಅದು ಲಯವಾಗುವುದೋ, ಸೂರ್ಯಚಂದ್ರಪೃಥ್ವೀವಾಯುಜಲಾದಿಗಳು ಯಾರ ಮೂರ್ತಿಗಳೋ ಆ ಅಚಿಂತ್ಯ ರೂಪಧಾರಿಯೂ ಸನಾತನನೂ ಆದ ಹರಿಯು ಆ ವಿಷ್ಣುವು ನನಗೆ ಸುಖವನ್ನು ಕೊಡಲಿ.

೫೦. ಹೀಗೆ ಅವನು ಸ್ತುತಿಸಲು, ಅನಂತಪಾದೋದರಬಾಹುಮುಖಗಳುಳ್ಳವನೂ ಅದ್ಭುತವಾದ ರೂಪದರ್ಶನಗಳುಳ್ಳವನೂ ಆದ ಸನಾತನ ದೇವನು ತಾನೇ ಪ್ರತ್ಯಕ್ಷನಾಗಿ "ವರವನ್ನು ಬೇಡು" ಎಂದನು.

ಇತೀರಿತೋ ವ್ಯಾಧವರೋ ಜಗಾದ
ಪ್ರದೀಯತಾಮೇಷ ವರಃ ಸುತೇಷ್ವಪಿ ।
ಕ್ರಿಯಾ ಕಲಾಪೇನ ತಥಾತ್ಮವಿದ್ಯಯಾ
ಕುಲಪ್ರಸೂತಾವಪಿ ತೇನುಗಾಮಿನಃ ॥ ೫೧ ॥

ಜ್ಞಾನೋದಯಸ್ತ್ವಸ್ಯ ಕುಲಸ್ಯ ಸರ್ವದಾ
ಲಯಸ್ತಥಾ ಬ್ರಹ್ಮಣಿ ಮೇ ಸನಾತನ ॥ ೫೨ ॥

ಇತೀರಿತೇ ತಂ ಭಗವಾನುವಾಚ ಹ ।
ಪ್ರಸನ್ನ ಬುದ್ಧಿರ್ಭವತೇ ಮಯಾತ್ವಯಂ ।
ವರೋ ವಿಸೃಷ್ಟಶ್ಚ ಕುಲಸ್ಯ ತೇ ಮಯಾ
ಲಯಸ್ತಥಾ ಬ್ರಹ್ಮಣಿ ಶಾಶ್ವತೇ ತವ ॥ ೫೩ ॥

ಇತೀರಿತೇ ದೇವವರೇಣ ಸ ಕ್ಷಣಾತ್
ಸ್ವದೇಹತಸ್ತೇಜ ಉದೀರ್ಣಮೈಕ್ಷತ ।
ವಿಸರ್ಜಯಾಮಾಸ ಕವಿಂ ಸನಾತನಂ
ಲಯಂ ಚ ತತ್ರ ಪ್ರತಿಪೇದಿವಾನಸೌ ॥ ೫೪ ॥

೫೧-೫೨. ಪರಮಾತ್ಮನು ಹೀಗೆನಲು, ಆ ವ್ಯಾಧೋತ್ತಮನು "ಸನಾತನನೇ ನನ್ನ ಮಕ್ಕಳೂ ಕುಲೋತ್ಪನ್ನರೂ ಕರ್ಮ ಕಲಾಪಗಳಿಂದಲೂ ಆತ್ಮವಿದ್ಯೆಯಿಂದಲೂ ನಿನ್ನನ್ನು ಸೇವಿಸುವವರಾಗಲಿ. ನನ್ನ ಕುಲಕ್ಕೆ ಯಾವಾಗಲೂ ಜ್ಞಾನೋದಯವೂ ಬ್ರಹ್ಮನಲ್ಲಿ ಲಯವೂ ಆಗಲಿ. ಈ ವರವನ್ನು ದಯಪಾಲಿಸು" ಎಂದು ಹೇಳಿದನು.

೫೩. ಬೇಡನು ಹೀಗೆನಲು ಪ್ರಸನ್ನನಾದ ಭಗವಂತನು "ನಿನಗೂ ನಿನ್ನ ಕುಲಕ್ಕೂ ನಾನು ಈ ವರವನ್ನು ಕೊಟ್ಟಿದ್ದೇನೆ. ನಿನಗೆ ಶಾಶ್ವತ ಬ್ರಹ್ಮನಲ್ಲಿ ಐಕ್ಯವುಂಟಾಗಲಿ. ಎಂದು ಹೇಳಿದನು.

೫೪. ದೇವೋತ್ತಮನು ಹೀಗೆ ಹೇಳಲು, ಆ ಬೇಡನು ಕ್ಷಣಮಾತ್ರದಲ್ಲಿಯೇ ತನ್ನ ದೇಹದಿಂದ ಹೊರಟ ತೇಜಸ್ಸನ್ನು ಕಂಡು, ತನ್ನ ದೇಹವನ್ನು ತ್ಯಜಿಸಿ, ಸ್ಥಿರವಾಗಿ ಆ ಪರಮಾತ್ಮನಲ್ಲಿ ಐಕ್ಯನಾದನು.

ಇತೀರಿತಂ ಸ್ತೋತ್ರವರಂ ಧರೇ ನರಃ ।
ಪಠಿಷ್ಯತೇ ಯಶ್ಚ ಶೃಣೋತಿ ಮಾನವಃ || ೫೫ ||

ಹರಿಂ ಸಮಭ್ಯರ್ಚ್ಯ ಸದಾ ಹ್ಯುಪೋಷಿತೋ
ವಿಶೇಷತೋ ವಿಷ್ಣುದಿನೇ ಚ ಮಾನವಃ ।
ಸಯಾತಿ ಯತ್ರ ಸ್ವಯಮೇವ ಕೇಶವೋ
ವಸೇತ ಮನ್ವಂತರಸಪ್ತತಿಂ ಸುಖಂ || ೫೬ ||

ಇತಿ ವರಾಹಪುರಾಣೇ ಆದಿಕೃತವೃತ್ತಾಂತೇ ವಸುಚರಿತೇ ವಸೋಃ ಪುಂಡರೀಕಾಕ್ಷಪಾರಸ್ತೋತ್ರೇಣ ಮೋಕ್ಷಪ್ರಾಪ್ತಿರ್ನಾಮ ಅಷ್ಟಮೋಧ್ಯಾಯಃ

೫೫-೫೬. ಭೂದೇವಿ, ಹೀಗೆ ಆ ಧರ್ಮವ್ಯಾಧನು ಹೇಳಿದ ಸ್ತೋತ್ರವನ್ನು ಯಾರು ಹೇಳುವರೋ ಮತ್ತು ಯಾರು ಕೇಳುವರೋ ಅವರು ವಿಷ್ಣುದಿನ (ಹರಿವಾಸರ) ಗಳಲ್ಲಿ ವಿಶೇಷವಾಗಿ ಹರಿಯನ್ನು ಪೂಜಿಸಿ ಸದಾ ಉಪವಾಸಮಾಡಿದ ಪುಣ್ಯಕ್ಕೆ ಭಾಗಿಗಳಾಗಿ, ಆ ಕೇಶವನು ತಾನೇ ಎಲ್ಲಿರುವನೋ ಅಲ್ಲಿಗೇ ಹೋಗಿ ಎಪ್ಪತ್ತು ಮನ್ವಂತರಕಾಲ ಸುಖದಿಂದ ಇರುವರು.

ಅಧ್ಯಾಯದ ಸಾರಾಂಶ :—

ಶ್ರೀವರಾಹದೇವನು ಭೂದೇವಿಗೆ ಹಿಂದೆ ಹೇಳಿದ ವಸುವಿನ ದೇಹದಿಂದ ಉದಿಸಿದ ಧರ್ಮವ್ಯಾಧನ ಚರಿತ್ರೆಯನ್ನು ಹೇಳುವನು-ಧರ್ಮವ್ಯಾಧನ ಧರ್ಮಕರ್ಮಾಸಕ್ತಿ, ಆತನ ಮಗಳಾದ ಅರ್ಜುನಕೆಯನ್ನು ಮತಂಗ ಋಷಿಯ ಮಗನಾದ ಪ್ರಸನ್ನನೆಂಬುವನಿಗೆ ವಿವಾಹಮಾಡಿಕೊಟ್ಟುದು, ಮತಂಗ ಋಷಿಯ ಪತ್ನಿಯು ಧರ್ಮವ್ಯಾಧನನ್ನು ಪ್ರಾಣಿಹಿಂಸಕನೆಂದು ನಿಂದಿಸಿದುದಕ್ಕಾಗಿ, ಧರ್ಮವ್ಯಾಧನು ಬೀಗರ ಮನೆಗೆ ಬಂದು, ಅವರು ತಿನ್ನುವ ಬತ್ತ, ಗೋದುವೆ, ಜವೆ ಮೊದಲಾದ ಧಾನ್ಯಗಳೂ ಸಜೀವಗಳೆಂದೂ ಪಂಚಮಹಾಯಜ್ಞಶೇಷಾನ್ನವು ಮಾತ್ರವೇ ಪರಿಶುದ್ಧವಾದುದರಿಂದ ಅದು ತಿನ್ನಲು ಅರ್ಹವಾದುದು, ಉಳಿದುದು ಧಾನ್ಯಾಹಾರವಾದರೂ ಮಹಾಮಾಂಸ ಎಂದೂ ಹೇಳಿದುದು, ಬಳಿಕ ಅವನು ಪುರುಷೋತ್ತಮವೆಂಬ ತೀರ್ಥಕ್ಕೆ ಹೋಗಿ ವಿಷ್ಣುಸ್ತುತಿಯನ್ನೂ ತಪಸ್ಸನ್ನೂ ಮಾಡಿ ಭಗವಂತನನ್ನು ಪ್ರತ್ಯಕ್ಷನನ್ನಾಗಿ ಮಾಡಿಕೊಂಡುದು, ವರವನ್ನು ಪಡೆದು, ಧರ್ಮವ್ಯಾಧನು ಬ್ರಹ್ಮತೇಜಸ್ಸಿನಲ್ಲಿ ಐಕ್ಯವಾದುದು, ಧರ್ಮವ್ಯಾಧನು ಮಾಡಿದ ಸ್ತೋತ್ರಪಠನದಿಂದಾಗುವ ಫಲ, ಇವುಗಳನ್ನು ತಿಳಿಸುವನು. ಇಲ್ಲಿಗೆ ವರಾಹಪುರಾಣದಲ್ಲಿ ಎಂಟನೆಯ ಅಧ್ಯಾಯ

॥ ಶ್ರೀಃ ॥

-X-

ನವಮೋಽಧ್ಯಾಯಃ

ಅಥ ಮತ್ಸ್ಯಾವತಾರಃ

॥ ಧರಣ್ಯುವಾಚ ॥

ಆದೌ ಕೃತಯುಗೇ ನಾಥ ಕಿಂ ಕೃತಂ ವಿಶ್ವಮೂರ್ತಿನಾ ।
ನಾರಾಯಣೇನ ತತ್ಸರ್ವಂ ಶ್ರೋತುಮಿಚ್ಛಾಮಿ ತತ್ತ್ವತಃ ॥ ೧ ॥

॥ ವರಾಹ ಉವಾಚ ॥

ಪೂರ್ವಂ ನಾರಾಯಣಸ್ತ್ವೇಕೋ ನಾಸೀತ್ಕಿಂಚಿದ್ಧರೇ ಪರಂ ।
ನೈಕಏವ ರತಿಂ ಲೇಭೇ ನೈವ ಸ್ವಚ್ಛಂದ ಕರ್ಮಕೃತ್ ॥ ೨ ॥

ತಸ್ಯದ್ವಿತೀಯ ಮಿಚ್ಛಂತಶ್ಚಿಂತಾ ಬುದ್ಧ್ಯಾತ್ಮಿಕಾ ಬಭೌ ।
ಅಭಾವೇತ್ಯೇವ ಸಂಜ್ಞಾಯಾ ಕ್ಷಣಂ ಭಾಸ್ಕರ ಸನ್ನಿಭಾ ॥ ೩ ॥

ಒಂಭತ್ತನೆಯ ಅಧ್ಯಾಯ

ಮತ್ಸ್ಯಾವತಾರ

೧. ಧರಣೀದೇವಿ–ನಾಥ, ಮೊದಲು ಕೃತಯುಗದಲ್ಲಿ ವಿಶ್ವಮೂರ್ತಿಯಾದ ನಾರಾಯಣನು ಏನುಮಾಡಿದನೋ ಅದೆಲ್ಲವನ್ನೂ ಸರಿಯಾಗಿ ಕೇಳಲು ಬಯಸುತ್ತೇನೆ.

೨. ವರಾಹ—ಧರೇ, ಮೊದಲು ನಾರಾಯಣನೊಬ್ಬನೇ ಇದ್ದನು. ಬೇರಾವುದೂ ಇರಲಿಲ್ಲ. ತನ್ನ ಇಷ್ಟದಂತೆ ಮಾಡುವವನಾದರೂ ಏಕಾಂಗಿಯಾದ ಅವನಿಗೆ ಸಂತೋಷವುಂಟಾಗಲೇ ಇಲ್ಲ.

೩. ಎರಡನೆಯವರನ್ನು ಬಯಸಿದ ಅವನಿಗೆ ಬುದ್ಧಿರೂಪವಾದ ಅಭಾವವೆಂಬ ಹೆಸರಿನ ಚಿಂತೆಯು ಸೂರ್ಯನಂತೆ ಕ್ಷಣಕಾಲ ಹೊಳೆಯಿತು.

ತಸ್ವಾಪಿ ದ್ವಿವಿಧಾ ಭೂತಾ ಚಿಂತಾ ಭೂದ್ಬ್ರಹ್ಮ ವಾದಿನಃ ।
ಉಮೇತಿ ಸಂಜ್ಞಯಾ ಯತ್ತತ್ಸದಾ ಮರ್ತ್ಯೇ ವ್ಯವಸ್ಥಿತಾ ॥ ೪ ॥

*ಓಮಿತ್ಯೇಕಾಕ್ಷರೀ ಭೂತಾ ಸಸರ್ಜೇ ಮಾಂ ಮಹೀಂತದಾ ।
ಭೂಃ ಸಸರ್ಜ ಭುವಂ ಸೋಽಪಿ ಸಸರ್ಜ ಚ ತತೋ ಮಹಃ ॥ ೫ ॥

ತತಶ್ಚ ಜನ ಇತ್ಯೇವ ತತಶ್ಚಾತ್ಮಾ ಪ್ರಲೀಯತೇ ।
ಏತದೋತಂ ತಥಾಪ್ರೋತಂ ಸೂತ್ರೇಮಣಿಗಣಾ ಇವ ॥ ೬ ॥

ಜಗತ್ಪ್ರಣವತೋ ಭೂತಂ ಶೂನ್ಯಮೇತತ್‌ಸ್ಥಿತಂ ತದಾ ।
ಯೋಽಯಂ ಮೂರ್ತಿರ್ಭಗವತಃ ಶಂಕರಃ ಸಸ್ವಯಂ ಹರಿಃ ॥ ೭ ॥

ಶೂನ್ಯಾನ್ ಲೋಕಾನಿಮಾನ್ ಸೃಷ್ಟ್ವಾ ಸಿಸೃಕ್ಷುರ್ಮೂರ್ತಿಮುತ್ತಮಾಂ ।
ಕ್ಷೋಭಯಿತ್ವಾ ಮನೋಧಾಮ ತತ್ರಾಕಾರಃ ಸ್ವಮಾತ್ರತಃ ।
ಸ್ಥಿತಸ್ತಸ್ಮಿನ್ ಯದಾ ಕ್ಷುಬ್ಧೇ ಬ್ರಹ್ಮಾಂಡಮಭವತ್ತದಾ ॥ ೮ ॥

---

೪. ಬ್ರಹ್ಮವಾದಿಯಾದ ಅವನ ಆ ಚಿಂತೆಯು ಉ, ಮಾ, ಎಂದು ಎರಡು ಬಗೆಯಾಗಿ ಇದೇ ಮನುಷ್ಯಲೋಕದಲ್ಲಿ ಉಮಾ ಎಂಬ ಹೆಸರಿನಿಂದ ಕರೆಯಿಸಿಕೊಂಡಿತು.

೫. ಅದೇ * ಓಂ ಎಂಬ ಒಂದೇ ಅಕ್ಷರವುಳ್ಳದ್ದಾಗಿ ಈ ಭೂಮಿಯನ್ನು (ನಿನ್ನನ್ನು) ಸೃಷ್ಟಿಸಿತು. ಭೂಮಿಯಾದ ನೀನು ಭುವವನ್ನು ಸೃಜಿಸಿದೆ. ಭುವವು ಸ್ವರ್ಲೋಕವನ್ನು ಸೃಜಿಸಿತು. ಸ್ವರ್ಲೋಕದಿಂದ ಮಹರ್ಲೋಕವೂ ಬಳಿಕ (ಅದರಿಂದ) ಜನಲೋಕವೂ ಉದಿಸಿತು.

೬. ಬಳಿಕ ಆತ್ಮವು ಅವುಗಳಲ್ಲಿ ಅಡಗಿದ್ದಿತು. ಇದು ನೂಲಿನಲ್ಲಿ ಮಣಿಗಳ ಗುಂಪಿನಂತೆ ಹಾಸುಹೊಕ್ಕಾಗಿದ್ದಿತು.

೭. ಓಂಕಾರದಿಂದುದಿಸಿದ ಈ ಜಗತ್ತು ಆಗ ಬರಿದಾಗಿ ಇದ್ದಿತು. ಭಗವಂತನ ಶಂಕರಾತ್ಮಕವಾದ ಈ ಮೂರ್ತಿಯೂ ಸಾಕ್ಷಾತ್ ಹರಿಯೇ.

೮. ಬರಿಯವಾದ ಈ ಲೋಕಗಳನ್ನು ಸೃಷ್ಟಿಸಿ, ಉತ್ತಮವಾದ ಶರೀರವನ್ನು ಸೃಷ್ಟಿಸಲಿಷ್ಟವುಳ್ಳವನಾಗಿ ಮನಸ್ಸನ್ನು ಹರಿಯ ಬಿಟ್ಟು, ಅದರಲ್ಲಿ ತನ್ನಿಂದ ತಾನೇ ಆಕಾರವಾಗಲಾಗಿ ಕ್ಷುಬ್ಧನಾದ ಅವನಲ್ಲಿ ಆಗ ಬ್ರಹ್ಮಾಂಡವು ಉದಿಸಿತು.

---

* ಉಮೇತಿ (ಕ.)

ತಸ್ಮಿಂಸ್ತು ಶಕಲೀ ಭೂತೇ ಭೂಲೋಕಶ್ಚ ವ್ಯವಸ್ಥಿತಃ ।
ಅಪರಂ ಭುವನಂ ಪ್ರಾಯಾನ್ಮಧ್ಯೇ ಭಾಸ್ಕರ ಸನ್ನಿಭಂ ॥ ೯ ॥

ಪುರಾ ನವ್ಯಕ ಸಂಸ್ಥೋಯಃ ಪದ್ಮಕೋಶೋವ್ಯವಸ್ಥಿತಃ ।
ಸಹಿ ನಾರಾಯಣೋ ದೇವಃ ಪ್ರಾಜಾಪತ್ಯೇನ ತೇಜಸಾ ॥ ೧೦ ॥

ಅಕಾರಾದ್ಯಂ ಸ್ವರಂ ತಾಭ್ಯಾಂ ಹಲಂಚ ವಿಸಸರ್ಜಹ ।
ಅಮೂರ್ತ ಸೃಷ್ಟ್ವಾ ಶಾಸ್ತ್ರಾಣಿ ಉದಗಾಯತ್ತದಾ ಹಿ ಸಃ ॥ ೧೧ ॥

ಸೃಷ್ಟ್ವಾ ಪುನರಮೇಯಾತ್ಮಾ ಚಿಂತಯಾಮಾಸ ಧಾರಣಂ ।
ತಸ್ಯ ಚಿಂತಯತೋ ನೇತ್ರಾತ್ತೇಜಃ ಸಮಭವನ್ಮಹತ್ ॥ ೧೨ ॥

ದಕ್ಷಿಣಂ ವಹ್ನಿ ಸಂಕಾಶಂ ವಾಮಂ ತುಹಿನಸನ್ನಿಭಂ ।
ತದ್ದೃಷ್ಟ್ವಾ ಚಂದ್ರಸೂರ್ಯೌತು ಕಲ್ಪಿತೌ ಪರಮೇಷ್ಠಿನಾ ॥ ೧೩ ॥

---

೯. ಆ ಬ್ರಹ್ಮಾಂಡವು ಭಿನ್ನವಾಗಲಾಗಿ ಭೂಲೋಕವೆಂಬುದನ್ನೂ ಮಧ್ಯದಲ್ಲಿ ಸೂರ್ಯನಂತಿರುವ ಬೇರೆ ಲೋಕವನ್ನೂ ಪಡೆದನು.

೧೦–೧೧. ಪೂರ್ವದಿಂದಲೂ ಇರುತ್ತಿರುವವನೂ, ಕಮಲಕೋಶನಾಭನೂ ಆದ ಆ ನಾರಾಯಣದೇವನು ಆ ಎರಡು ಲೋಕಗಳಿಗೂ ಅಕಾರಾದಿ ಸ್ವರಗಳನ್ನೂ ಕಕಾರಾದಿ ವ್ಯಂಜನಗಳನ್ನೂ ಬ್ರಹ್ಮತೇಜಸ್ಸಿನಿಂದ ಸೃಷ್ಟಿಸಿ, ಅನುಗ್ರಹಿಸಿದನು. ಆಗಲೇ ಆತನು ತನ್ನ ಅಮೂರ್ತಸೃಷ್ಟಿಯು ವೇದಾದಿಶಾಸ್ತ್ರಗಳನ್ನೂ ಹೇಳಿದನು.

೧೨. ಅಳತೆಗೆ ಮೀರಿದ ಆ ಪರಮಾತ್ಮನು ಹೀಗೆ ಲೋಕವನ್ನು ಸೃಷ್ಟಿಸಿ, ಮತ್ತೆ ಅದರ ಧಾರಣವನ್ನು ಚಿಂತಿಸುತ್ತಿರುವಾಗ ಅವನ ಕಣ್ಣಿನಿಂದ ಅತಿಯಾದ ತೇಜಸ್ಸು ಹೊರಟಿತು.

೧೩. ಬಲಗಡೆಯ ತೇಜಸ್ಸು ಅಗ್ನಿಯಂತೆಯೂ ಎಡಗಡೆಯದು ಹಿಮದಂತೆಯೂ ಇದ್ದಿತು. ಅದನ್ನು ನೋಡಿ ಬ್ರಹ್ಮನು ಅದರಿಂದ ಸೂರ್ಯಚಂದ್ರರನ್ನು ಕಲ್ಪಿಸಿದನು.

ತತಃ ಪ್ರಾಣಃ ಸಮುತ್ಪನ್ನೋ ವಾಯುಶ್ಚ ಪರಮೇಷ್ಠಿನಃ ।
ಸ ಏವ ವಾಯುರ್ಭಗವಾನ್ ಯೋಽದ್ಯಾಪಿ ಹೃದಿನೋ ವಿಭುಃ ॥ ೧೪ ॥

ತಸ್ಮಾದ್ವಹ್ನಿಃ ಸಮುತ್ಪನ್ನೋ ತಸ್ಮಾದಗ್ನೇರ್ಜಲಂ ಮಹತ್ ।
ಯ ಏವಾಗ್ನಿಃ ಸ ವೈ ತೇಜೋ ಬ್ರಾಹ್ಮಂ ಪರಮಕಾರಣಂ ॥ ೧೫ ॥

ಬಾಹುಭ್ಯಾಮಸ್ಯಸೌ ತೇಜಃ ಕ್ಷಾತ್ರಂ ತೇಜಃ ಸಸರ್ಜ ಹ ।
ಊರುಭ್ಯಾಮಪಿ ವೈಶ್ಯಾಂಶ್ಚ ಪದ್ಭ್ಯಾಂ ಶೂದ್ರಾಂಸ್ತಥಾ ವಿಭುಃ ॥ ೧೬ ॥

ತತಸ್ತು ಸಸೃಜೇ ಯಕ್ಷಾನ್ರಾಕ್ಷಸಾಂಶ್ಚ ತಥಾ ವಿಭುಃ ।
ಚತುರ್ವಿಧೈಸ್ತು ಭೂರ್ಲೋಕಂ ಭುವೋ ಲೋಕಂ ವಿಯಚ್ಚರೈಃ ।
ಭೂತೈಃ ಸ್ವರ್ಗಗೈರನ್ಯೈಃ ಸ್ವರ್ಲೋಕಂ ಸಮಪೂರಯತ್ ॥ ೧೭ ॥

---

೧೪. ಬಳಿಕ ಪರಬ್ರಹ್ಮನ ಪ್ರಾಣವು ವಾಯುವಾಗಿ ನಿಂತಿತು (ಪರಿಣಮಿಸಿತು). ವಿಭುವೂ ಭಗವಂತನೂ ಆದ ಅದೇ ವಾಯುವೇ ಈಗಲೂ ನಮ್ಮ ಹೃದಯದಲ್ಲಿರುವುದು.

೧೫. ಆ ವಾಯುವಿನಿಂದ ಅಗ್ನಿಯುದಿಸಿತು. ಆ ಆಗ್ನಿಯಿಂದ ಮಹಾಜಲವುಂಟಾಯಿತು. ಅಗ್ನಿಯೇ ಪರಮಕಾರಣವಾದ ಬ್ರಹ್ಮ (ಸಂಬಂಧವಾದ) ತೇಜಸ್ಸು.

೧೬. ಪರಬ್ರಹ್ಮನು ತನ್ನ ತೋಳುಗಳಿಂದ ಕ್ಷತ್ರಿಯ ತೇಜಸ್ಸನ್ನು ಸೃಜಿಸಿದನು. ಆ ವಿಭುವು ತೊಡೆಗಳಿಂದ ವೈಶ್ಯರನ್ನೂ ಪಾದಗಳಿಂದ ಶೂದ್ರರನ್ನೂ ಸೃಜಿಸಿದನು.

೧೭. ಬಳಿಕ ಯಕ್ಷರಾಕ್ಷಸರನ್ನೂ ಆ ವಿಭುವೇ ಸೃಷ್ಟಿಸಿದನು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ಬಗೆಯವರಿಂದ ಭೂಲೋಕವನ್ನೂ ಆಕಾಶಗಾಮಿಗಳಿಂದ ಭುವರ್ಲೋಕವನ್ನೂ, ಸ್ವರ್ಗದಲ್ಲಿ ಸಂಚರಿಸುವ ಬೇರೆ ಪ್ರಾಣಿಗಳಿಂದ ಸ್ವರ್ಲೋಕವನ್ನೂ ತುಂಬಿಸಿದನು.

೧೮ ಮಹರ್ಲೋಕವನ್ನು ಸನಕಾದಿಗಳಾದ ಆಯಾ ಚೇತನರಿಂದಲೂ ಜನಲೋಕವನ್ನೂ ಹಾಗೆಯೇ ವೈರಾಜರೆಂಬ ತೇಜೋವಂತರಿಂದಲೂ ತುಂಬಿದನು.

ಮಹರ್ಲೋಕಂ ತಥಾ ತೈಸ್ತೈಃ ಭೂತೈಶ್ಚ ಸನಕಾದಿಭಿಃ ।
ಜನೋಲೋಕಂ ತತಶ್ಚೈವ ವೈರಾಜ್ಯೈಃ ಸಮಪೂರಯತ್ ॥ ೧೮ ॥

ತಪೋ ಲೋಕಂ ತತೋ ದೇವೈಃ ತಪೋನಿಷ್ಠೈರಪೂರಯತ್ ।
ಅಪುನರ್ಮಾರಕೈರ್ದೇವೈಃ ಸತ್ಯಲೋಕಮಪೂರಯತ್ ॥ ೧೯ ॥

ಸೃಷ್ಟಿಂ ಸೃಷ್ಟ್ವಾ ತಥೋ ದೇವೋ ಭಗವಾನ್ ಭೂತಭಾವನಃ ।
ಕಲ್ಪಸಂಜ್ಞಾಂ ತದಾಮೋಘಾಂ ಜಗಂತಿ ಪರಮೇಶ್ವರಃ ॥ ೨೦ ॥

ತಸ್ಮಿನ್ಜಾಗ್ರತಿ ಭೂರ್ಲೋಕೋ ಭುವೋಲೋಕಶ್ಚ ಜಾಯತೇ ।
ಸ್ವರ್ಲೋಕಶ್ಚ ತ್ರಯೋಪ್ಯೇತೇ ಜಾಯಂತೇ ನಾತ್ರ ಸಂಶಯಃ ॥ ೨೧ ॥

ಸುಪ್ತೇತು ದೇವೇ ಕಲ್ಪಾಂತೇ ತಾವತೀರಾತ್ರಿರಿಷ್ಯತೇ ।
ತ್ರೈಲೋಕ್ಯ ಮೇತತ್ಸುಪ್ತಂ ಸ್ಯಾತ್ ತಥೋಪಪ್ಲವತಾಂ ಗತಂ ॥ ೨೨ ॥

ತತೋರಾತ್ರ್ಯಾಂ ವ್ಯತೀತಾಯಾಂ ಉತ್ಥಿತಃ ಕಮಲೇಕ್ಷಣಃ ।
ಚಿಂತಯಾಮಾಸ ತಾನ್ ವೇದಾನ್ ಮಾತರಂಚ ಚತುರ್ಷ್ವಪಿ ॥ ೨೩ ॥

೧೯-೨೦. ತಪೋಲೋಕವನ್ನು ತಪೋನಿಷ್ಠರಾದ ದೇವತೆಗಳಿಂದ ತುಂಬಿದನು. ತಿರುಗಿ ಮರಣವಿಲ್ಲದ ದೇವತೆಗಳಿಂದ ಸತ್ಯಲೋಕವನ್ನು ತುಂಬಿದನು. ಭಗವಂತನೂ, ಭೂತಭಾವನನೂ ಆದ ಪರಮೇಶ್ವರನು ಆಗ ಹೀಗೆ ಕಲ್ಪವೆಂಬ ಹೆಸರುಳ್ಳ ಅಮೋಘವಾದ ಜಗತ್ಸೃಷ್ಟಿಯನ್ನು ಮಾಡಿದನು.

೨೧. ಆತನು ಎಚ್ಚರಗೊಳ್ಳಲು ಭೂಲೋಕ, ಭುವೋಲೋಕ, ಸ್ವರ್ಲೋಕಗಳೆಂಬ ಮೂರೂ ಉದಿಸುವುದರಲ್ಲಿ ಸಂದೇಹವಿಲ್ಲ.

೨೨. ಕಲ್ಪಾಂತದಲ್ಲಿ ಆ ದೇವನು ಮಲಗಿದ ಆ ಕಾಲವು ರಾತ್ರಿಯೆನಿಸುವುದು. ಆಗ ಈ ಮೂರುಲೋಕವೂ ಉತ್ಪಾತಕ್ಕೊಳಗಾಗಿ ಮಲಗುವುದು.

೨೩. ರಾತ್ರಿಯು ಕಳೆದಬಳಿಕ ಆ ಕಮಲೇಕ್ಷಣನು ಎದ್ದು, ಆ ವೇದಗಳನ್ನೂ ಅವು ನಾಲ್ಕರ ಜನನಿಯರನ್ನೂ ಜ್ಞಾಪಿಸಿಕೊಂಡು ನೋಡಿದನು.

ಚಿಂತಯಾನಃ ಸ ದೇವೇಶಸ್ತ್ವಾನವೇದಾನಾಧ್ಯಗಚ್ಛತ ।
ಲೋಕಮಾರ್ಗಸ್ಥಿತಿಂ ಕರ್ತುಂ ನಿದ್ರಾಜ್ಞಾನೇನ ಮೋಹಿತಃ ॥ ೨೪ ॥

ತತಃ ಸ್ವಮೂರ್ತೌ ತೋಯಾಖ್ಯೇ ಲೀನಾನ್ ದೃಷ್ಟ್ವಾ ಮಹೇಶ್ವರಃ ।
ಜಿಘೃಕ್ಷುಶ್ಚಿಂತಯಾಮಾಸ ಮತ್ಸ್ಯೋ ಭೂತ್ವಾವಿಶಜ್ಜಲಂ ॥ ೨೫ ॥

ಏವಂ ಧ್ಯಾತ್ವಾ ಮಹಾಮತ್ಸ್ಯಸ್ತತ್ಕ್ಷಣಾತ್ಸಮಜಾಯತ ।
ವಿವೇಶ ಚ ಜಲಂ ದೇವಃ ಸಮಂತಾತ್ಕ್ಷೋಭಯನ್ನಿವ ॥ ೨೬ ॥

ತಸ್ಮಿನ್ಪ್ರವಿಷ್ಟೇ ಸಹಸಾ ಜಲಂತು ।
ಮಹಾಮಹೀಧ್ರಗ್ರವು ಷಿ ಪ್ರಕಾಶಂ
ಮಾತ್ಸ್ಯಂಗತೇ ದೇವವರೇ ಮಹೋದಧಿಂ
ಹರಿಂಸ್ತವೈಃ ತುಷ್ಟುವುರುದ್ಧೃತಕ್ಷಿತಿಂ ॥ ೨೭ ॥

---

೨೪. ನಿದ್ರಾಜ್ಞಾನ ಮೋಹಿತನಾದ ಆ ದೇವೇಶನು ಲೋಕಮಾರ್ಗಸ್ಥಿತಿಯನ್ನು ಮಾಡಲು ಆಲೋಚಿಸುತ್ತಾ ನೋಡಲು ಆ ವೇದಗಳು ಅವನಿಗೆ ಕಾಣಿಸಲಿಲ್ಲ. ಆಗ ಆ ದೇವೇಶನು ವೇದಗಳು ಇಲ್ಲಿಲ್ಲವೆಂದು ನಿರ್ಧರಿಸಿದನು.

೨೫. ಬಳಿಕ ಆ ಮಹೇಶ್ವರನು ಜಲರೂಪವಾದ ತನ್ನ ಮೂರ್ತಿಯಲ್ಲಿ ಎಂದರೆ ಸಾಗರದಲ್ಲಿ ಆ ವೇದಗಳು ಮುಳುಗಿ ಇರುವುದನ್ನು ನೋಡಿ, ಮತ್ಸ್ಯರೂಪವನ್ನು ಧರಿಸಿ, ಅವುಗಳನ್ನು ತೆಗೆದುಕೊಂಡು ಬರಬೇಕೆಂದು ಆಲೋಚಿಸಿದನು.

೨೬. ಹೀಗೆ ಆಲೋಚಿಸಿ, ಒಡನೆಯೇ ಮಹಾಮತ್ಸ್ಯವಾಗಿ ಪರಿಣಮಿಸಿ, ಸುತ್ತಲೂ ಸಾಗರವು ಅಲ್ಲೋಲಕಲ್ಲೋಲವಾಗುವಂತೆ (ಸಾಗರವನ್ನು) ನೀರನ್ನು ಪ್ರವೇಶಿಸಿದನು.

೨೭. ಮಹಾ ಪರ್ವತಾಕಾರವಾದ ಮತ್ಸ್ಯರೂಪವನ್ನು ಧರಿಸಿ, ಆ ದೇವೋತ್ತಮನು ತಟ್ಟನೆ ಮಹಾಸಾಗರವನ್ನು ಪ್ರವೇಶಿಸಲಾಗಿ ಸಾಗರದ ನೀರು ಹೊಳೆಯಿತು. ದೇವಾದಿಗಳು ಭೂಮಿಯನ್ನುದ್ಧರಿಸಿದ ಆ ಹರಿಯನ್ನು ಸ್ತುತಿಗಳಿಂದ ನುತಿಸಿದರು.

ನಮೋಽಸ್ತು ವೇದಾಂತರಗಾಪ್ರತರ್ಕ್ಯ
ನಮೋಽಸ್ತು ನಾರಾಯಣ ಮತ್ಸ್ಯರೂಪ ।
ನಮೋಽಸ್ತು ತೇ ಸುಸ್ವರ ವಿಶ್ವಮೂರ್ತೇ
ನಮೋಽಸ್ತು ವಿದ್ಯಾದ್ವಯ ರೂಪಧಾರಿನ್ ॥ ೨೮ ॥

ನಮೋಽಸ್ತು ಚಂದ್ರಾರ್ಕ ಅನೇಕರೂಪ
ಜಲಾಂತ ವಿಶ್ವಸ್ಥಿತ ಚಾರುನೇತ್ರ ।
ನಮೋಽಸ್ತು ವಿಷ್ಣೋ ಶರಣಂ ಪ್ರಜಾಮಃ
ಪ್ರಸಾಹಿನೋ ಮತ್ಸ್ಯತನುಂ ವಿಹಾಯ ॥ ೨೯ ॥

ತ್ವಯಾ ತತಂ ವಿಶ್ವಮನಂತಮೂರ್ತೇ
ಪೃಥಙ್ನತೇ ಕಿಂಚಿದಿಹಾಸ್ತಿದೇವ ।
ಭವಾನ್ನಚಾಸ್ಯ ವ್ಯತಿರಿಕ್ತಮೂರ್ತಿ
ಸ್ತ್ವತೋ ವಯಂತೇ ಶರಣಂ ಪ್ರಪನ್ನಾಃ ॥ ೩೦ ॥

---

೨೮. ವೇದ ಮಧ್ಯಸ್ಥನೇ, ಊಹೆಗೆ ಅಸದಳನೇ ನಿನಗೆ ನಮಿಸುವೆವು. ನಾರಾಯಣನೇ, ಮತ್ಸ್ಯರೂಪನೇ ನಿನಗೆ ನಮಸ್ಕರಿಸುವೆವು. ಸುಸ್ವರನೆ, ವಿಶ್ವಮೂರ್ತಿಯೆ ನಿನಗೆ ನಮಿಸುವೆವು. ವಿದ್ಯಾದ್ವಯರೂಪಧಾರಿಯೇ, ನಿನಗೆ ನಮಿಸುವೆವು.

೨೯. ಚಂದ್ರಸೂರ್ಯರೇ ಮೊದಲಾದ ಹಲವು ರೂಪಗಳುಳ್ಳವನೇ, ನಿನಗೆ ನಮಸ್ಕಾರ. ಜಲಾಂತವಾದ ವಿಶ್ವದಲ್ಲೂ ಇರುವವನೇ, ಮನೋಹರವಾದ ಕಣ್ಣುಗಳುಳ್ಳವನೇ, ನಿನಗೆ ನಮಸ್ಕಾರ. ವಿಷ್ಣುವೇ ನಿನ್ನನ್ನು ಮರೆಹೊಗುವೆವು. ಮತ್ಸ್ಯದೇಹವನ್ನು ಬಿಟ್ಟು, ನಮ್ಮನ್ನು ರಕ್ಷಿಸು.

೩೦. ಅನಂತಮೂರ್ತಿಯೇ, ಸಮಸ್ತವೂ ನಿನ್ನಿಂದ ವ್ಯಾಪ್ತವಾಗಿದೆ. ದೇವ, ನಿನಗೆ ಬೇರೆಯಾದುದಾವುದೂ ಇಲ್ಲಿಲ್ಲ. ನೀನು ಈ ವಿಶ್ವಕ್ಕೆ ಬೇರೆಯಾದ ರೂಪವುಳ್ಳವನಲ್ಲ. ಆದುದರಿಂದ ನಾವು ನಿನ್ನನ್ನು ಮರೆಹೊಕ್ಕಿದ್ದೇವೆ.

ಖಾತ್ಮೇಂದು ವಹ್ನಿಶ್ಚ ಮನಶ್ಚರೂಪಂ
ಪುರಾಣ ಮೂರ್ತೇಸ್ತ್ವಚಾಬ್ಜನೇತ್ರ ।
ಕ್ಷಮಸ್ವ ಶಂಭೋಯದಿ ಭಕ್ತಿಹೀನಂ
ತ್ವಯಾ ಜಗದ್ಭಾಸತಿ ದೇವದೇವ ॥ ೩೧ ॥

ವಿರುದ್ಧಮೇತತ್ತ್ವ ದೇವರೂಪಂ
ಸುಭಾಷಣಂ ಸುಸ್ವನಮದ್ರಿತುಲ್ಯಂ ।
ಪುರಾಣ ದೇವೇಶ ಜಗನ್ನಿವಾಸ
ಶಮಂ ಪ್ರಯಾಹ್ಯಚ್ಯುತ ತೀವ್ರಭಾನೋ ॥ ೩೨ ॥

ನಮಾಮ ಸರ್ವೇ ಶರಣಂ ಪ್ರಪನ್ನಾ
ಭಯಾಚ್ಚತೇ ರೂಪಮಿದಂ ಚ ದೃಷ್ಟ್ವಾ ।
ಲೋಕೇ ಸಮಸ್ತಂ ಭವತಾ ವಿನಾದ್ಯ
ನ ವಿದ್ಯತೇ ದೇಹಗತಂ ಪುರಾಣಂ ॥ ೩೩ ॥

ಏವಂ ಸ್ತುತಸ್ತದಾ ದೇವೋ ಜಲಸ್ಥಾನ್ ಜಗೃಹೇ ಚ ಸಃ ।
ವೇದಾನ್ಸೋಪನಿಷಚ್ಛಾಸ್ತ್ರಾಣ್ಯಾತಃ ಸ್ವಂ ರೂಪಮಾಸ್ಥಿತಃ ॥ ೩೪ ॥

---

೩೧. ತಾವರೆಗಣ್ಣನೇ ಆಕಾಶಚಂದ್ರಾಗ್ನಿಗಳು ಪುರಾಣಮೂರ್ತಿಯಾದ ನಿನ್ನ ಮನೋ ರೂಪಗಳು. ದೇವದೇವನೇ. ನಿನ್ನಿಂದ ಜಗತ್ತು ಪ್ರಕಾಶಿಸುತ್ತದೆ. ಶಂಭುವೇ, ಭಕ್ತಿಯು ಕಡಿಮೆಯಾಗಿದ್ದರೆ ಕ್ಷಮಿಸು.

೩೨. ಪುರಾತನನೇ, ದೇವೇಶನೇ, ಪರ್ವತಾಕಾರವಾದ ಈ ರೂಪವು ನಿನಗೆ ವಿರುದ್ಧವಾದುದು. ಜಗನ್ನಿವಾಸ, ಅಚ್ಯುತ, ತೀವ್ರವಾದ ಕಾಂತಿಯುಳ್ಳವನೇ, ಶಾಂತನಾಗು.

೩೩. ಲೋಕದಲ್ಲಿ ನಿನ್ನಿಂದ ಹೊರತಾಗಿ ದೇಹವನ್ನು ಪಡೆದಿರುವುದೂ ಪುರಾತನವಾದುದೂ ಯಾವುದೂ ಇಲ್ಲ. ಎಲ್ಲರೂ ನಿನ್ನ ಈ ಮತ್ಸ್ಯರೂಪವನ್ನು ನೋಡಿ, ಭಯದಿಂದಲೂ ನಮಿಸಿ ಮರೆಹೊಕ್ಕಿರುವೆವು.

೩೪. ಹೀಗೆ ಸ್ತೋತ್ರಮಾಡಿಸಿಕೊಂಡ ಆ ಮತ್ಸ್ಯದೇವನು ನೀರಿನಲ್ಲಿ ಇದ್ದ ಉಪನಿಷಚ್ಛಾಸ್ತ್ರಗಳೊಡಗೂಡಿದ ವೇದಗಳನ್ನು ತೆಗೆದುಕೊಂಡು ಬಳಿಕ ನಿಜರೂಪವನ್ನು ಧರಿಸಿದನು.

ಯಾವತ್ಸ್ವಮೂರ್ತಿರ್ಭಗವಾನ್ ತಾವದೇವ ಜಗತ್ವಿದಂ ।
ಕೂಟಸ್ಥೇ ತಲ್ಲಯಂ ಯಾತಿ ವಿಕೃತಸ್ಥೇ ವಿವರ್ಧತೇ ॥ ೩೫ ॥

ಇತಿ ವರಾಹಪುರಾಣೇ ಆದಿಕೃತವೃತ್ತಾಂತೇ ಸೃಷ್ಟಿವರ್ಣನೇ ಮತ್ಸ್ಯಾವತಾರತತ್ತ್ವ ನಿರೂಪಣಂ ನಾಮ ನವಮೋಽಧ್ಯಾಯಃ

---

೩೫. ಭಗವಂತನು ಎಲ್ಲಿಯವರೆಗೆ ತನ್ನ ವ್ಯಕ್ತಸ್ವರೂಪವುಳ್ಳವನಾಗಿರುವನೋ ಎಂದರೆ ಕಾರ್ಯಾವಸ್ಥೆಯಲ್ಲಿರುವನೋ ಅಲ್ಲಿಯವರೆಗೆ ಮಾತ್ರವೇ ಈ ಜಗತ್ತು ಇರುವುದು. ಅವನು ಅವ್ಯಕ್ತಸ್ವರೂಪವುಳ್ಳವನಾಗಿ ಸೂಕ್ಷ್ಮೈಕರೂಪನಾಗಲು ಎಂದರೆ ಕಾರಣಾವಸ್ಥೆಯನ್ನು ಹೊಂದಲು ಈ ಜಗತ್ತು ಅವನಲ್ಲಿ ಲಯವಾಗುವುದು. ಸವಿಕಾರನಾದರೆ (ಕಾರ್ಯಾವಸ್ಥೆಯನ್ನೈದಿದರೆ) ಮತ್ತೆ (ಜಗತ್ತು) ಬೆಳೆಯುವುದು.

ಅಧ್ಯಾಯದ ಸಾರಾಂಶ :—

ಆದಿಕೃತಯುಗದ ಆರಂಭದಲ್ಲಿ ವಿಶ್ವಮೂರ್ತಿಯಾದ ನಾರಾಯಣನು ಏನುಮಾಡಿದನೆಂದು ಪ್ರಶ್ನಿಸಿದ ಭೂದೇವಿಗೆ ಶ್ರೀ ವರಾಹದೇವನು "ಏಕಾಂಗಿಯಾಗಿದ್ದ ದೇವನಿಗೆ ಸಂತೋಷವಿಲ್ಲದಿರಲು ಭೂರಾದಿಸಪ್ತಲೋಕಗಳೂ ಅವನ ಸಂಕಲ್ಪಮಾತ್ರದಿಂದ ಅನುಕ್ರಮವಾಗಿ ಉದಿಸಿದುವು. ಬಳಿಕ ವೇದಾದಿ ಅಕ್ಷರಗಳನ್ನೂ ಶಾಸ್ತ್ರಗಳನ್ನೂ ಸೃಷ್ಟಿಸಿದನು. ಆತನ ಕಣ್ಣಿನ ತೇಜಸ್ಸಿನಿಂದ ಸೂರ್ಯಚಂದ್ರರು ಜನಿಸಿದರು. ಪ್ರಾಣದಿಂದ ವಾಯುವುದಿಸಿತು. ವಾಯುವಿನಿಂದ ಅಗ್ನಿಯೂ ಅಗ್ನಿಯಿಂದ ಮಹಾಜಲವೂ ಉಂಟಾಯಿತು. ಬಳಿಕ ಬ್ರಾಹ್ಮಣಾದಿ ಚತುರ್ವರ್ಣಗಳನ್ನು ಸೃಷ್ಟಿಸಿ ಅವರನ್ನು ಭೂಲೋಕದಲ್ಲೂ, ಆಕಾಶಗಾಮಿಗಳಾದ ದೇವತೆಗಳೇ ಮೊದಲಾದವರನ್ನು ಇತರಲೋಕಗಳಲ್ಲೂ ನಿಲ್ಲಿಸಿದನು. ಕಲ್ಪಾಂತದಲ್ಲಿ ಆ ದೇವನು ಮಲಗಿದಾಗ ಭೂರಾದಿ ಮೂರುಲೋಕಗಳೂ ಉತ್ಪಾತಕ್ಕೊಳಗಾದುವು. ಮತ್ತೆ ಎಚ್ಚರಗೊಂಡ ದೇವನು ತಾನು ಸೃಷ್ಟಿಸಿದ್ದ ವೇದಗಳು ಸಾಗರದಲ್ಲಿ ಮುಳುಗಿಹೋಗಿರುವುದನ್ನರಿತು, ಮತ್ಸ್ಯಾವತಾರವನ್ನು ಧರಿಸಿ, ಅವುಗಳನ್ನು ಉದ್ಧರಿಸಿದನು. ಆಗ ಸಮುದ್ರರಾಜನೂ ದೇವಾದಿಗಳೂ ಆತನನ್ನು ಸ್ತುತಿಸಿದರು." ಎಂದು ಹೇಳಿ, ಸ್ತುತಿಯನ್ನು ತಿಳಿಸುವನು. ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಒಂಭತ್ತನೆಯ ಅಧ್ಯಾಯ

॥ ಶ್ರೀಃ ॥

-X-

ದಶಮೋಽಧ್ಯಾಯಃ

ಅಥ ಸೃಷ್ಟಿವರ್ಣನಂ, ದುರ್ಜಯಚರಿತಂ

॥ ವರಾಹ ಉವಾಚ ॥

ಏವಂ ಸೃಷ್ಟ್ವಾ ಜಗತ್ಸರ್ವಂ ಭಗವಾನ್ ಭೂತಭಾವನಃ ।
ವಿರರಾಮ ತತಃ ಸೃಷ್ಟಿಃ ವ್ಯವರ್ಧತ ಧರೇ ತದಾ ॥ ೧ ॥

ವೃದ್ಧಾಯಾಮಥ ಸೃಷ್ಟೌತು ಸರ್ವೇ ದೇವಾಃ ಪುರಾತನಂ ।
ನಾರಾಯಣಾಖ್ಯಂ ಪುರುಷಂ ಯಜಂತೋ ವಿವಿಧೈರ್ಮಖೈಃ ॥ ೨ ॥

ದ್ವೀಪೇಷು ಚೈವ ಸರ್ವೇಷು ವರ್ಷೇಷು ಚ ಮಖೈರ್ಹರಿಮ್ ।
ದೇವಾಃ ಸತ್ರೈರ್ಮಹದ್ಭಿಸ್ತೇ ಯಜಂತಃ ಶ್ರದ್ಧಯಾನ್ವಿತಾಃ ।
ತೋಷಯಾಮಾಸುರತ್ಯರ್ಥಂ ಸ್ವಂ ಪೂಜ್ಯಂ ಕರ್ತುಮೀಪ್ಸವಃ ॥ ೩ ॥

ಹತ್ತನೆಯ ಅಧ್ಯಾಯ

ಸೃಷ್ಟಿವರ್ಣನೆ, ದುರ್ಜಯ ಚರಿತೆ

೧. ವರಾಹ—ಧರೇ ! ಭೂತರಕ್ಷಕನಾದ ಭಗವಂತನು ಹೀಗೆ ಜಗತ್ತನ್ನೆಲ್ಲಾ ಸೃಷ್ಟಿಸಿ, ವಿಶ್ರಾಂತನಾದನು. ಬಳಿಕ ಆ ಸೃಷ್ಟಿಯು (ಜಗತ್ತು) ಬೆಳೆಯಿತು.

೨-೩. ಸೃಷ್ಟಿಯು ಬೆಳೆಯಲು ದೇವತೆಗಳೆಲ್ಲರೂ ಪುರಾಣ ಪುರುಷನೂ, ನಾರಾಯಣನೂ ಆದ ಹರಿಯನ್ನು ಎಲ್ಲಾ ದ್ವೀಪಗಳಲ್ಲೂ ವರ್ಷ (ದೇಶಭಾಗ) ಗಳಲ್ಲೂ ಬಗೆ ಬಗೆಯಾದ ಮಹಾಯಜ್ಞಗಳಿಂದ ಆಸಕ್ತಿಯಿಂದ ಪೂಜಿಸುತ್ತ ಬಹಳವಾಗಿ ಸಂತೋಷಪಡಿಸಿದರು.

ಏವಂ ತೋಷಯತಾಂ ತೇಷಾಂ ಬಹುವರ್ಷಸಹಸ್ರಕೈಃ ।
ಕಾಲೋದೇವಸ್ತದಾತುಷ್ಟಃ ಪ್ರತ್ಯಕ್ಷತ್ವಂ ಜಗಾಮಹ ॥ ೪ ॥

ಅನೇಕ ಬಾಹೂದರ ವಕ್ತ್ರ ನೇತ್ರೋ ।
ಮಹಾಗಿರೇಃ ಶೃಂಗಮಿವೋಲ್ಲಿಖಂಸ್ತದಾ ।
ಉವಾಚ ಕಿಂಕಾರ್ಯಮಥೋ ಸುರೇಶಃ ।
ಪ್ರಬ್ರೂತ ತಂ ದೇವವರಾ ವರಂ ವಃ ॥ ೫ ॥

॥ ದೇವಾ ಊಚುಃ ॥

ಜಯಸ್ವ ಗೋವಿಂದ ಮಹಾನುಭಾವ ।
ತ್ವಯಾ ವರಂ ನಾಥ ವರೇಣ ದೇವಾಃ ।
ಮನುಷ್ಯಲೋಕೇಪಿ ಭವಂತಮಾದ್ಯಂ ।
ವಿಹಾಯ ನಾಸ್ಮಾನ್ಭವತೇಹ ಕಶ್ಚಿತ್ ॥ ೬ ॥

ಚಂದ್ರಾದಿತ್ಯೌ ವಸವೋ ಯೇಚ ಸಾಧ್ಯಾ ।
ವಿಶ್ವೇಶ್ವಿನೌ ಮರುತಶ್ಚೋಶ್ಮಪಾಶ್ಚ ।
ಸರ್ವೇ ಭವಂತಂ ಶರಣಾಗತಾಃಸ್ಮ ।
ಕುರುಷ್ವ ಪೂಜ್ಯಾನಿಹ ವಿಶ್ವಮೂರ್ತೇ ॥ ೭ ॥

---

೪. ತಾವು ಪೂಜ್ಯರಾಗಲು ಬಯಸಿ, ಬಹುಕಾಲ ತನ್ನನ್ನು ಸಂತೋಷಪಡಿಸುತ್ತಿದ್ದ ಅವರಿಗೆ ತೃಪ್ತನಾಗಿ ಒಲಿದ ಆ ದೇವನು ಪ್ರತ್ಯಕ್ಷನಾದನು.

೫. ಅನೇಕಬಾಹೂದರಮುಖ ನೇತ್ರಗಳುಳ್ಳವನೂ ಮಹಾಗಿರಿಯ ಶಿಖರವನ್ನು ಮುಟ್ಟುವವನಂತೆ ಉನ್ನತನೂ ಆದ ಆ ದೇವೇಶನು "ದೇವವರರೇ, ನಾನು ಮಾಡಬೇಕಾದುದೇನು ? ನಿಮ್ಮ ವರವನ್ನು ಹೇಳಿ" ಎಂದನು.

೬. ದೇವತೆಗಳು—ಮಹಾನುಭಾವನೇ, ಗೋವಿಂದನೇ, ಜಯಶೀಲನಾಗು. ನಾಥೋತ್ತಮನಾದ ನಿನ್ನಿಂದ ನಾವು ಬೇಡುವ ವರವಿದು. (ಇಲ್ಲೂ) ಮನುಷ್ಯ ಲೋಕದಲ್ಲೂ ನಿನ್ನನ್ನು ಹೊರತು ನಮ್ಮನ್ನು ಯಾರೊಬ್ಬರೂ ಭಾವಿಸುವುದಿಲ್ಲ.

೭. ಚಂದ್ರಸೂರ್ಯವಸುಗಳೂ ಸಾಧ್ಯವಿಶ್ವೇದೇವಾಶ್ವಿನೀದೇವಮರುತ್ತುಗಳೂ ಎಲ್ಲರೂ ಶರಣಾಗತರಾಗಿದ್ದೇವೆ. ವಿಶ್ವಮೂರ್ತಿಯೇ, ನಮ್ಮನ್ನು ಪೂಜ್ಯರನ್ನಾಗಿ ಮಾಡು

ಏವಮುಕ್ತಸ್ತದಾ ತೈಸ್ತು ಮಹಾಯೋಗೀಶ್ವರೋ ಹರಿಃ ।
ಕರೋಮಿ ಸರ್ವಾನ್ವಃ ಪೂಜ್ಯಾನಿತ್ಯುಕ್ತ್ವಾಂತರ ಧೀಯತ ॥ ೮ ॥

ದೇವಾ ಅಪಿ ನಿಜಾಲೋಕಾಂಸಿ ಗತವಂತಃ ಸನಾತನಾಃ ।
ಸ್ತುವಂತಃ ಪರಮೇಶೋಽಪಿ ತ್ರಿವಿಧಂ ಭಾವಮಾಸ್ಥಿತಃ ॥ ೯ ॥

ಏವಂ ತ್ರಿಧಾ ಜಗಾದ್ಧಾತಾ ಭೂತ್ವಾ ದೇವಾನ್ಮಹೇಶ್ವರಃ ।
ಆರಾಧ್ಯ ಸಾತ್ವಿಕಂ ರಾಜಸ್ತಾಮಸಂಚ ತ್ರಿಧಾ ಸ್ಥಿತಂ ॥ ೧೦ ॥

ಸಾತ್ವಿಕೇನ ಪಠೇದ್ವೇದಾನ್ ಯಜನ್ ಯಜ್ಞೇನ ದೇವತಾಃ ।
ಆತ್ಮನೋಽವಯವೋ ಭೂತ್ವಾ ರಾಜಾಸ್ಯೇನಾಪಿ ಕೇಶವಃ ॥ ೧೧ ॥

ಸ ಕಾಲರೂಪಿಣಂ ರೌದ್ರಂ ಪ್ರಕೃತ್ಯಾ ಶೂಲಪಾಣಿನಂ ।
ಆತ್ಮನೋ ರಾಜಸೀಂ ಮೂರ್ತಿಂ ಪೂಜಯಾಮಾಸಭಕ್ತಿತಃ ॥ ೧೨ ॥

ತಾಮಸೇನಾಪಿ ಭಾವೇನ ಅಸುರೇಷು ವ್ಯವಸ್ಥಿತಃ ॥ ೧೩ ॥

---

೮. ಆಗ ಅವರಿಂದ ಹೀಗೆ ಪ್ರಾರ್ಥಿತನಾದ ಮಹಾಯೋಗೀಶ್ವರನಾದ ಆ ಹರಿಯು– " ನಿಮ್ಮೆಲ್ಲರನ್ನೂ ಪೂಜ್ಯರನ್ನಾಗಿ ಮಾಡುತ್ತೇನೆ " ಎಂದು ಹೇಳಿ ಕಣ್ಮರೆಯಾದನು.

೯-೧೦. ಸನಾತನರಾದ ದೇವತೆಗಳು ಹರಿಯನ್ನು ಸ್ತೋತ್ರಮಾಡುತ್ತ ತಮ್ಮ ತಮ್ಮ ಮನೆಗೆ ಹೊರಟು ಹೋದರು. ಜಗತ್ಪಾಲಕನಾದ ಆ ದೇವನು ಸಾತ್ವಿಕ, ರಾಜಸ, ತಾಮಸಗಳೆಂಬ ಮೂರು ಬಗೆಯ ಭಾವ (ರೂಪ) ಗಳನ್ನು ಪಡೆದು ದೇವತೆಗಳನ್ನು ಪೂಜಿಸಿದನು.

೧೧-೧೩. ಸಾತ್ವಿಕರೂಪದಿಂದ ವೇದಗಳನ್ನು ಹೇಳುತ್ತ ಯಜ್ಞದಿಂದ ದೇವತೆಗಳನ್ನು ಪೂಜಿಸುತ್ತ ಆ ಕೇಶವನು ರಾಜಸರೂಪದಿಂದ ತನಗೆ ತಾನೇ ಅಂಗವಾಗಿ ತಾಮಸಭಾವದಿಂದ ರಾಕ್ಷಸರಲ್ಲಿ ಇದ್ದುಕೊಂಡು, ಕಾಲರೂಪನೂ ಸಹಜವಾಗಿ ಶೂಲಹಸ್ತನೂ ಆದ ರುದ್ರನೆಂಬ ತನ್ನ ರಾಜಸ ಮೂರ್ತಿಯನ್ನು ಭಕ್ತಿಯಿಂದ ಪೂಜಿಸಿದನು.

ಏವಂತ್ರಿಧಾ ಜಗದ್ಧಾತಾ ಭೂತ್ವಾ ದೇವಾನ್ಮಹೇಶ್ವರಃ ।
ಆರಾಧಯಾಮಾಸ ತತೋ ಲೋಕೋಽಪಿ ವಿವಿಧೋಽಭವತ್ ॥ ೧೪ ॥

ಏವಂ ವಿಷ್ಣುರ್ಮಹೇಶಾನಾಂ ನಾಮ ಗೃಹ್ಣನ್ ವ್ಯವಸ್ಥಿತಃ ।
ಸಚ ನಾರಾಯಣೋದೇವಃ ಕೃತೇ ಯುಗವರೇ ಪ್ರಭುಃ ॥ ೧೫ ॥

ತ್ರೇತಾಯಾಂ ರುದ್ರರೂಪಸ್ತು ದ್ವಾಪರೇ ಯಜ್ಞಮೂರ್ತಿಮಾನ್ ।
ಕಲೌನಾರಾಯಣೋ ದೇವೋ ಬಹುರೂಪೋ ವ್ಯಜಾಯತ ॥ ೧೬ ॥

ತಸ್ಯಾದಿ ಕರ್ತುರ್ವಿಷ್ಣೋಶ್ಚರಿತಂ ಭೂರಿ ತೇಜಸಃ ।
ಶೃಣುಷ್ವ ಸರ್ವಂ ಸುಶ್ರೋಣಿ ಗದತೋ ಮಮ ಭಾಮಿನಿ ॥ ೧೭ ॥

ಆಸೀತ್ಕೃತಯುಗೇ ರಾಜಾ ಸುಪ್ರತೀಕೋ ಮಹಾಬಲಃ ।
ತಸ್ಯ ಭಾರ್ಯಾದ್ವಯಂ ಚಾಸೀದವಿಶಿಷ್ಟಂ ಮನೋರಮಂ ॥ ೧೮ ॥

---

೧೪. ಜಗತ್ಪಾಲಕನಾದ ಆ ಪರಮಾತ್ಮನು ಹೀಗೆ ಮೂರು ಬಗೆಯುಳ್ಳವನಾಗಿ ದೇವತೆಗಳನ್ನು ಪೂಜಿಸಿ ಸಂತೋಷಪಡಿಸಿದನು. ಬಳಿಕ ಲೋಕವೂ ಬಗೆ ಬಗೆಯಾಯಿತು.

೧೫-೧೬. ಹೀಗೆ ವಿಷ್ಣುವು ಮಹೇಶ್ವರರ ಹೆಸರುಗಳನ್ನು ಪರಿಗ್ರಹಿಸಿದನು. ಆ ಪ್ರಭುವು ಉತ್ತಮವಾದ ಕೃತಯುಗದಲ್ಲಿ ನಾರಾಯಣ ದೇವನಾಗಿಯೂ, ತ್ರೇತಾಯುಗದಲ್ಲಿ ರುದ್ರರೂಪನಾಗಿಯೂ, ದ್ವಾಪರಯುಗದಲ್ಲಿ ಯಜ್ಞಮೂರ್ತಿಯಾಗಿಯೂ, ಕಲಿಯುಗದಲ್ಲಿ ಬಹುರೂಪನಾಗಿಯೂ ಅವತರಿಸಿದನು.

೧೭. ಸುಶ್ರೋಣಿಯಾದಭೂದೇವೀ, ಆದಿಕರ್ತೃವಾದ ಆ ವಿಷ್ಣುವಿನ ಚರಿತ್ರೆಯೆಲ್ಲವನ್ನೂ ಹೇಳುತ್ತೇನೆ. ಕೇಳು.

೧೮. ಕೃತಯುಗದಲ್ಲಿ ಬಹು ಬಲಶಾಲಿಯಾದ ಸುಪ್ರತೀಕನೆಂಬ ದೊರೆಯಿದ್ದನು. ಆತನಿಗೆ ಅನುರೂಪರೂ ಮನೋಹರರೂ ಆದ ಇಬ್ಬರು ಹೆಂಡತಿಯರು ಇದ್ದರು.

ವಿದ್ಯುತ್ಪ್ರಭಾ ಕಾಂತಿಮತೀತಯೋರೇತೇತು ನಾಮನೀ ।
ತಯೋಃ ಪುತ್ರಂ ಸಮಂ ರಾಜಾ ನಲೇಭೇ ಬಲವಾನಪಿ ॥ ೧೯ ॥

ಯದಾತದಾ ಮುನಿಶ್ರೇಷ್ಠಮಾತ್ರೇಯಂ ವೀತ ಕಲ್ಮಷಂ ।
ತೋಷಯಾಮಾಸ ವಿಧಿನಾ ಚಿತ್ರಕೂಟೇ ನಗೋತ್ತಮೇ ॥ ೨೦ ॥

ಸ ತುಷ್ಟಸ್ತೋಷಿತಸ್ತೇನ ದೀರ್ಘಕಾಲಂ ವರಾರ್ಥಿನಾ ।
ವರಾನ್ದಿತ್ಸುತಯಾ ಯಾವದಬ್ರವೀದತ್ರಿಜೋ ಮುನಿಃ ॥ ೨೧ ॥

ತಾವದಿಂದ್ರೋಽಪಿ ಕರಿಣಾಗತಃ ಪಾರ್ಶ್ವೇನ ತಸ್ಯಹ ।
ದೇವಸೈನ್ಯೈಃ ಪರಿವೃತಸ್ತೂಷ್ಣೀಮೇವ ಮಹಾಬಲಃ ॥ ೨೨ ॥

ತಂ ದೃಷ್ಟ್ವಾ ತದ್ಗತ ಪ್ರೀತಿರಪ್ರೀತಿಂ ಪ್ರೀತವಾನ್ಮುನಿಃ ।
ಚುಕೋಪ ದೇವರಾಜಾಯ ಶಾಪಮುಗ್ರಂ ಸಸರ್ಜಹ ॥ ೨೩ ॥

---

೧೯. ಅವರಲ್ಲಿ ಒಬ್ಬಳಿಗೆ ವಿದ್ಯುತ್ಪ್ರಭೆಯೆಂದೂ ಮತ್ತೊಬ್ಬಳಿಗೆ ಕಾಂತಿಮತಿಯೆಂದೂ ಹೆಸರು. ರಾಜನು ಬಲಶಾಲಿಯಾದರೂ ಬಹುಕಾಲ ಅವರಲ್ಲಿ ಪುತ್ರನನ್ನು ಪಡೆಯಲಿಲ್ಲ.

೨೦. ಆಗ ಆತನು ಚಿತ್ರಕೂಟವೆಂಬ ಉತ್ತಮವಾದ ಪರ್ವತದಲ್ಲಿ ಪಾಪರಹಿತನೂ ಮುನಿಶ್ರೇಷ್ಠನೂ ಆದ ಆತ್ರೇಯನನ್ನು ವಿಧಿಪೂರ್ವಕವಾಗಿ ಸಂತೋಷಪಡಿಸಿದನು.

೨೧-೨೨. ಬಹುಕಾಲ, ವರವನ್ನು ಬಯಸುವ ಆ ಸುಪ್ರತೀಕನಿಂದ ಸಂತೋಷವನ್ನು ಪಡೆದ ಆತ್ರೇಯಮುನಿಯು ಆ ರಾಜನಿಗೆ ವರವನ್ನು ಕೊಡಲು ಇಷ್ಟದಿಂದ ಅವನೊಡನೆ ಮಾತನಾಡುವಷ್ಟರಲ್ಲಿಯೇ ಇಂದ್ರನೂ ದೇವಸೈನ್ಯದಿಂದ ಪರಿವೃತನಾಗಿ ತನ್ನ ಐರಾವತವನ್ನೇರಿಕೊಂಡು ಬಂದು ಸುಮ್ಮನೆಯೇ ಅವನ ಪಕ್ಕದಲ್ಲಿ ನಿಂತನು.

೨೩. ಅವನನ್ನು ನೋಡಿ ಪ್ರೀತಿಸಿದ ಆ ಆತ್ರೇಯಮುನಿಯು ಪ್ರೀತಿ (ಭಕ್ತಿ) ಯಿಲ್ಲದ ಆದೇವ ರಾಜನಮೇಲೆ ಕೋಪಿಸಿಕೊಂಡು ಅವನನ್ನು ಶಪಿಸಿದನು

ಯಸ್ಮಾತ್ತ್ವಯಾ ಮಮಾವಜ್ಞಾ ಕೃತಾ ಮೂಢ ದಿವಸ್ಪತೇ ।
ತತಸ್ತ್ವಂ ಚಾಲಿತೋ ರಾಜ್ಯಾದನ್ಯಲೋಕೇ ವಸಿಷ್ಯಸಿ ॥ ೨೪ ॥

ಏವಮುಕ್ತ್ವಾ ಋಷಿಕೋಪೇನ ಸುಪ್ರತೀಕಂ ಚ ಭೂಪತಿಂ ।
ಉವಾಚ ರಾಜಸ್ತ್ವತ್ಪುತ್ರಸ್ತೇ ಭವಿತಾ ದೃಢವಿಕ್ರಮಃ ॥ ೨೫ ॥

ಇಂದ್ರರೂಪೋಪಮಃ ಶ್ರೀಮಾನುದ್ಯಚ್ಛಸ್ತ್ರಃ ಪ್ರತಾಪವಾನ್ ।
ವಿದ್ಯಾಪ್ರಭಾವತತ್ತ್ವಜ್ಞಃ ಕ್ರೂರಕರ್ಮಾ ಭವಿಷ್ಯತಿ ॥ ೨೬ ॥

ದುರ್ಜಯೋಽತಿ ಬಲೀ ರಾಜಾ ಏವಮುಕ್ತ್ವಾ ಗತೋ ಮುನಿಃ ॥ ೨೭ ॥

ಸೋಽಪಿ ರಾಜಾ ಸುಪ್ರತೀಕೋ ಭಾರ್ಯಾಯಾಂ ಗರ್ಭಮಾವಹನ್ ।
ವಿದ್ಯುತ್ಪ್ರಭಾಯಾಂ ಧರ್ಮಜ್ಞಃ ಸಾಽಪಿ ಕಾಲೇ ತ್ವಸೂಯತ ।
ತಸ್ಯಾಃ ಪುತ್ರಃ ಸಮುಭವದ್ದುರ್ಜಯಾಖ್ಯೋ ಮಹಾಬಲಃ ॥ ೨೮ ॥

ಜಾತಕರ್ಮಾದಿಸಂಸ್ಕಾರಂ ತಸ್ಯ ಚಕ್ರೇ ಮುನಿಃ ಸ್ವಯಂ ।
ತಸ್ಯ ಚೇಷ್ಟೇರ್ಬಲೇನಾಸೌ ಮುನೇಃ ಸೌಮ್ಯೋ ಬಭೂವ ಹ ॥ ೨೯ ॥

---

೨೪. "ಎಲೈ, ಇಂದ್ರನೇ, ಮೂಢ, ನೀನು ನನ್ನನ್ನು ತಿರಸ್ಕರಿಸಿದುದರಿಂದ ನಿನ್ನ ರಾಜ್ಯದಿಂದ ಚ್ಯುತನಾಗಿ ಬೇರೆ ಲೋಕದಲ್ಲಿ ವಾಸಮಾಡುವೆ."

೨೫-೨೭. ಆತ್ರೇಯನು ಕೋಪದಿಂದ ಇಂದ್ರನಿಗೆ ಹೀಗೆ ಹೇಳಿದಮೇಲೆ ಸುಪ್ರತೀಕ ರಾಜನಿಗೆ—"ಇಂದ್ರನಂತೆ ರೂಪವಂತನೂ, ಶ್ರೀಮಂತನೂ, ಪ್ರಕಾಶಮಾನವಾದ ಆಯುಧವುಳ್ಳವನೂ, ಪ್ರತಾಪಶಾಲಿಯೂ, ವಿದ್ಯಾಪ್ರಭಾವತತ್ತ್ವವನ್ನರಿತವನೂ, ಕ್ರೂರಕರ್ಮನೂ, ಅತಿ ಬಲಶಾಲಿಯೂ, ರಾಜನೂ, ಆದ ದುರ್ಜಯನೆಂಬ ಮಗನು ನಿನಗೆ ಆಗುವನು" ಎಂದು ಹೇಳಿ ಹೊರಟುಹೋದನು.

೨೮. ಧರ್ಮವನ್ನರಿತ ಆ ಸುಪ್ರತೀಕರಾಜನಿಂದ ಗರ್ಭವನ್ನು ಧರಿಸಿ ಪತ್ನಿಯಾದ ಆ ವಿದ್ಯುತ್ಪ್ರಭೆಯು ಸಕಾಲದಲ್ಲಿ ಮಗನನ್ನು ಪಡೆದಳು. ಮಹಾಬಲಶಾಲಿಯಾದ ಆ ಮಗನು ದುರ್ಜಯನೆಂಬ ಹೆಸರುಳ್ಳವನಾದನು.

೨೯-೩೦. ಆ ಮಗನಿಗೆ ಆತ್ರೇಯಮುನಿಯು ತಾನೇ ಜಾತಕರ್ಮವೇ ಮೊದಲಾದ ಸಂಸ್ಕಾರಗಳನ್ನು ಮಾಡಿದನು. ಆ ಮಗನು ಋಷಿಯ ಯಜ್ಞವ

ವೇದಶಾಸ್ತ್ರಾರ್ಥವಿದ್ಯಾಯಾಂ ಪಾರಗೋ ಧರ್ಮವಾನ್ ಶುಚಿಃ ॥ ೩೦ ॥

ಯಾ ದ್ವಿತೀಯಾ ಭವತ್ಪತ್ನೀ ತಸ್ಯ ರಾಜ್ಞೋ ಮಹಾತ್ಮನಃ ।
ನಾಮ್ನಾ ಕಾಂತಿಮತೀ ಧನ್ಯಾ ತಸ್ಯಾಃ ಪುತ್ರೋ ಬಭೂವಹ ।
ನಾಮ್ನಾ ಸುದ್ಯುಮ್ನ ಇತ್ಯೇವಂ ವೇದವೇದಾಂಗಪಾರಗಃ ॥ ೩೧ ॥

ಅಥ ಕಾಲೇನಮಹತಾ ಸರಾಜಾ ರಾಜಸತ್ತಮಃ ।
ಸುಪ್ರತೀಕಃ ಸುತಂ ದೃಷ್ಟ್ವಾ ದುರ್ಜಯಂ ಯೋಗ್ಯಮಂತಿಕೇ ॥ ೩೨ ॥

ಆತ್ಮನೋ ವೃದ್ಧಭಾವಂಚ ವಾರಾಣಸ್ಯಧಿಪೋ ಬಲೀ ।
ಚಿಂತಯಾಮಾಸ ರಾಜ್ಯಾರ್ಥಂ ದುರ್ಜಯಂ ಪ್ರತಿಭಾಮಿನಿ ॥ ೩೩ ॥

ಏವಂ ಸಂಚಿಂತ್ಯ ಧರ್ಮಾತ್ಮಾ ತಸ್ಯರಾಜ್ಯಂ ದದೌ ನೃಪಃ ।
ಸ್ವಯಂ ಚ ಚಿತ್ರಕೂಟಾಖ್ಯಂ ಪರ್ವತಂ ಸ ಜಗಾಮಹ ॥ ೩೪ ॥

ಮಹಿಮೆಯಿಂದ ಶುಚಿಯೂ, ವೇದಶಾಸ್ತ್ರಾರ್ಥ ವಿದ್ಯೆಯಲ್ಲಿ ಪಾರಂಗತನೂ, ಧರ್ಮಿಷ್ಠನೂ ಆದನು.

೩೧. ಮಹಾತ್ಮನಾದ ಆ ರಾಜನ ಎರಡನೆಯ ಹೆಂಡತಿಯಾದ ಧನ್ಯೆಯಾದ ಕಾಂತಿಮತಿಯೆಂಬುವಳಲ್ಲಿ ಸುದ್ಯುಮ್ನನೆಂಬ ಹೆಸರಿನ ವೇದ ವೇದಾಂಗ ಪಾರಂಗತನಾದ ಮಗನಾದನು.

೩೨-೩೩. ಭಾಮಿನೀ, ಬಹುಕಾಲದಮೇಲೆ, ಕಾಶಿಯ ಒಡೆಯನೂ, ಬಲಿಷ್ಠನೂ ಆದ ಆ ಸುಪ್ರತೀಕನು ಸಮೀಪದಲ್ಲಿದ್ದ ಮಗನಾದ ದುರ್ಜಯನು ರಾಜ್ಯಕ್ಕೆ ಯೋಗ್ಯನೆಂಬುದನ್ನೂ ತನ್ನ ಮುಪ್ಪನ್ನೂ ನೋಡಿ ದುರ್ಜಯನಲ್ಲಿ ರಾಜ್ಯಭಾರವನ್ನಿಡಲು ಯೋಚಿಸಿದನು.

೩೪. ಧರ್ಮಾತ್ಮನಾದ ರಾಜನು ಹೀಗೆ ಆಲೋಚಿಸಿ ಅವನಿಗೆ ರಾಜ್ಯವನ್ನು ಕೊಟ್ಟು ತಾನು ಚಿತ್ರಕೂಟವೆಂಬ ಪರ್ವತಕ್ಕೆ ಹೊರಟು ಹೋದನು.

ದುರ್ಜಯೋಽಪಿ ಮಹದ್ರಾಜ್ಯಂ ಹಸ್ತ್ಯಶ್ವರಥವಾಜಿಭಿಃ ।
ಸಂಯೋಜ್ಯ ಚಿಂತಯಾಮಾಸ ರಾಜ್ಯವೃದ್ಧಿಂ ಪ್ರತಿ ಪ್ರಭುಃ ॥ ೩೫ ॥

ಏವಂ ಸಂಚಿಂತ್ಯ ಮೇಧಾವೀ ಹಸ್ತ್ಯಶ್ವರಥಪತ್ತಿಭಿಃ ।
ಸಮೇತಾಂ ವಾಹಿನೀಂ ಕೃತ್ವಾ ಉತ್ತರಾಂ ದಿಶಮಾಶ್ರಿತಃ ॥ ೩೬ ॥

ತಸ್ಯಚೋತ್ತರತೋ ದೇಶಾಃ ಸರ್ವೇ ಸಿದ್ಧಾ ಮಹಾತ್ಮನಃ ।
ಭಾರತಾಖ್ಯಮಿದಂ ವರ್ಷಂ ಸಾಧಯಿತ್ವಾ ಸುದುರ್ಜಯಃ ॥ ೩೭ ॥

ತತಃ ಕಿಂಪುರುಷಂ ನಾಮ ವರ್ಷಂ ತೇನಾಪಿ ಸಾಧಿತಂ ।
ತತಃ ಪರತರಂ ಚಾನ್ಯದ್ಧರಿವರ್ಷಂ ಜಿಗಾಯಸಃ ॥ ೩೮ ॥

ರಮ್ಯಂ ರೋಮಾವತಂ ವಾಪಿ ಕುರುಂ ಭದ್ರಾಶ್ವಮೇವಚ ।
ಇಲಾವೃತಮ್ ಮೇರುಮಧ್ಯಮೇತತ್ಸರ್ವಂ ಜಿಗಾಯಸಃ ॥ ೩೯ ॥

---

೩೫. ದುರ್ಜಯ ಪ್ರಭುವು ದೊಡ್ಡದಾದ ಆ ರಾಜ್ಯವನ್ನು ಆನೆ, ಕುದುರೆ, ಬಂಡಿ, ಕಾಲಾಳುಗಳೆಂಬ (ಚತುರಂಗ) ಸೈನ್ಯದಿಂದ ಕೂಡಿದುದನ್ನಾಗಿ ಮಾಡಿ ಬಳಿಕ ರಾಜ್ಯವನ್ನು ವಿಸ್ತರಿಸಲು ಆಲೋಚಿಸಿದನು.

೩೬. ಬುದ್ಧಿವಂತನಾದ ಆತನು ಹೀಗೆ ಆಲೋಚಿಸಿ ಆನೆ, ಕುದುರೆ, ಬಂಡಿ ಮತ್ತು ಕಾಲಾಳುಗಳಿಂದ ಕೂಡಿದ ಸೇನೆಯನ್ನು ಸಿದ್ಧಗೊಳಿಸಿ ಉತ್ತರದಿಕ್ಕನ್ನು ಆಶ್ರಯಿಸಿ ದಿಗ್ವಿಜಯವನ್ನು ಪಡೆಯುವುದಕ್ಕಾಗಿ ಹೊರಟನು.

೩೭. ಮಹಾತ್ಮನಾದ ಅವನಿಗೆ ಉತ್ತರದಿಕ್ಕಿನ ದೇಶಗಳೆಲ್ಲವೂ ಸ್ವಾಧೀನವಾದುವು. ಸುತರಾಂ ದುರ್ಜಯನಾದ ಅವನು ಭಾರತವರ್ಷವೆಂಬ ಹೆಸರುಳ್ಳ ಈ ದೇಶವನ್ನು (ವರ್ಷ) ವಶಪಡಿಸಿಕೊಂಡನು.

೩೮. ಬಳಿಕ ಕಿಂಪುರುಷವರ್ಷವನ್ನೂ ವಶಪಡಿಸಿಕೊಂಡನು. ಅನಂತರ ಬೇರೆಯದಾದ ಹರಿವರ್ಷವನ್ನೂ ಜಯಿಸಿದನು.

೩೯. ರಮ್ಯವಾದ ರೋಮಾವತವನ್ನೂ, ಕುರುಭದ್ರಾಶ್ವವನ್ನೂ, ಇಲಾವೃತವನ್ನೂ, ಮೇರುಮಧ್ಯವನ್ನೂ (ಎಲ್ಲವನ್ನೂ) ಅವನು ಜಯಿಸಿದನು.

ಜಿತ್ವಾ ಜಂಬ್ವಾಖ್ಯಮೇತದ್ಧಿ ದ್ವೀಪಂ ಯಾವದಸೌನ್ನೃಪಃ |
ಜಗಾಮ ದೇವರಾಜಾನಂ ಜೇತುಂ ಸರ್ವಸುರಾನ್ವಿತಂ ॥ ೪೦ ॥

ಮೇರುಪರ್ವತಮಾರುಹ್ಯ ದೇವಗಂಧರ್ವದಾನವಾನ್ |
ಗುಹ್ಯಕಾನ್ ಕಿನ್ನರಾನ್ ದೈತ್ಯಾಂಸ್ತತೋ ಬ್ರಹ್ಮಸುತೋಮುನಿಃ ।
ನಾರದೋ ದುರ್ಜಯಜಯಂ ದೇವರಾಜಾಯ ಶಂಸತೇ ॥ ೪೧ ॥

ತತ ಇಂದ್ರಸ್ತ್ವರಾಯುಕ್ತೋ ಲೋಕಪಾಲೈಃ ಸಮನ್ವಿತಃ ॥ ೪೨ ॥

ಜಗಾಮ ದುರ್ಜಯಂ ಹಂತುಂ ಸೋಽಚಿರೇಣಾಸ್ತ್ರನಿರ್ಜಿತಂ ।
ವಿಹಾಯ ಪರ್ವತಂಮೇರುಂ ಮರ್ತ್ಯಲೋಕಮಿಹಾಗತಃ ॥ ೪೩ ॥

ಪೂರ್ವದೇಶೇ ಚ ದೇವೇಂದ್ರೋ ಲೋಕಪಾಲೈಃ ಸಮಂಪ್ರಭುಃ |
ಸ್ಥಿತವಾಂಸ್ತಸ್ಯ ಸುಮಹಚ್ಚರಿತಂ ಸಂಭವಿಷ್ಯತಿ ॥ ೪೪ ॥

೪೦–೪೧. ಆ ರಾಜನು ಜಂಬೂದ್ವೀಪವೆಂದು ಹೆಸರುಳ್ಳ ಇದನ್ನು ಜಯಿಸಿ ದೇವರಾಜನಾದ ಇಂದ್ರನನ್ನೂ ದೇವಗಂಧರ್ವದಾನವರನ್ನೂ ಗುಹ್ಯಕರನ್ನೂ, ಕಿನ್ನರರನ್ನೂ ದೈತ್ಯರನ್ನೂ, ಹೆಚ್ಚಿನಿಂದೇನು? ದೇವತೆಗಳಿಂದ ಕೂಡಿದುದೆಲ್ಲವನ್ನೂ ಜಯಿಸಲು ಮೇರುಪರ್ವತವನ್ನೇರಿ ಹೊರಟಾಗ ಬ್ರಹ್ಮಪುತ್ರನಾದ ನಾರದಮುನಿಯು ಇಂದ್ರನಿಗೆ ದುರ್ಜಯನ ಜಯವನ್ನು ಹೇಳಿದನು.

೪೨-೪೩. ಬಳಿಕ ಇಂದ್ರನು ತ್ವರೆಯಿಂದ ಲೋಕಪಾಲಕರೊಡಗೂಡಿ ದುರ್ಜಯನನ್ನು ಕೊಲ್ಲಲು ಹೋದನು. ಆದರೆ ಬೇಗನೆ ದುರ್ಜಯಾಸ್ತ್ರಗಳಿಂದ ಸೋತು ಮೇರುಪರ್ವತವನ್ನು ಬಿಟ್ಟು ಪ್ರಭುವಾದ ಆ ದೇವೇಂದ್ರನು ಮರ್ತ್ಯಲೋಕಕ್ಕೆ ಬಂದನು.

೪೪. ಪ್ರಭುವಾದ ದೇವೇಂದ್ರನು ಲೋಕಪಾಲಕರೊಡನೆ ಪೂರ್ವದೇಶದಲ್ಲಿ ನಿಂತನು. ಅವನ ಚರಿತ್ರೆಯು ಬಹಳವಾಗುವುದು.

ದುರ್ಜಯುಶ್ಚ ಸುರಾನ್ ಜಿತ್ವಾ ಯಾವತ್ಪ್ರತಿ ನಿವರ್ತತೇ ।
ಗಂಧಮಾದನಸ್ಪೃಷ್ಠೇತು ಸ್ಕಂಧಾವಾರನಿವೇಶನಂ ।
ಕೃತ್ವಾವಸ್ಥಿತಸಂಭಾರಮಾಗತೌ ತಾಪಸೌತು ತಂ || ೪೫ ||

ತಾವಾಗತೌ ತಥಾಽಬ್ರೂತಾಂ ರಾಜನ್ ದುರ್ಜಯ ಲೋಕಪಾಃ ।
ನಿವಾರಿತಾಸ್ತ್ವಯಾ ಸರ್ವೇ ಲೋಕಪಾಲೈರ್ವಿನಾ ಜಗತ್ ।
ನಪ್ರವರ್ತೇತ್ತತೋ ದೇಹಿ ತತ್ಪದಂ ಸುಖಮುತ್ತಮಂ || ೪೬ ||

ಏವಮುಕ್ತೇ ತತಸ್ತೌತು ದುರ್ಜಯಃ ಪ್ರಾಹಧರ್ಮವಿತ್ || ೪೭ ||

ಕೌಭವಂತಾವಿತಿ ತತಸ್ತಾವೂಚತುರರಿಂದಮೌ ।
ವಿದ್ಯುತ್ಸುವಿದ್ಯುನ್ನಾಮಾನಾವಸುರಾವಿತಿ ನಾಮತಃ || ೪೮ ||

ತ್ವಯಾ ಸಂಪ್ರತಿ ಚೇಚ್ಛಾವೋ ಧರ್ಮಂ ಸತ್ಸು ಸುಸಂಸ್ಕೃತಂ ।
ಲೋಕಪಾನಾಂ ಸರ್ವಮಾವಾಂ ಕರ್ಮಕುರ್ವಃ ಸುದುರ್ಜಯ || ೪೯ ||

---

೪೫. ದುರ್ಜಯನಾದರೋ ದೇವತೆಗಳನ್ನು ಜಯಿಸಿ ಹಿಂದಿರುಗಿ ಗಂಧಮಾದನ ಪರ್ವತದ ತಪ್ಪಲಿನಲ್ಲಿ ಬೀಡು ಬಿಟ್ಟು ಸರ್ವಸಂಭಾರವುಳ್ಳವನಾಗಿದ್ದಾಗ ಇಬ್ಬರು ಮುನಿಗಳು ಅವನಲ್ಲಿಗೆ ಬಂದರು.

೪೬. ಬಂದ ಅವರು, "ರಾಜನೇ, ದುರ್ಜಯ, ನೀನು ಲೋಕಪಾಲರನ್ನೆಲ್ಲಾ ಅವರ ಅಧಿಕಾರದಿಂದ ತಪ್ಪಿಸಿದೆ. ಲೋಕಪಾಲರಿಲ್ಲದೆ ಪ್ರಪಂಚವು ಸರಿಯಾಗಿ ಪ್ರವರ್ತಿಸುವುದಿಲ್ಲ. ಆದುದರಿಂದ ಶುಭಕರವೂ ಉತ್ತಮವೂ ಆದ ಆ ಪದವಿಯನ್ನು ನಮಗೆ ಕೊಡು" ಎಂದರು.

೪೭–೪೮. ಅವರು ಹೀಗೆಂಬುದಾಗಿ ಹೇಳಲು ಧರ್ಮವನ್ನರಿತ ದುರ್ಜಯನು "ನೀವು ಯಾರು?" ಎಂಬುದಾಗಿ ಕೇಳಿದನು. ಬಳಿಕ ಶತ್ರುನಾಶಕರಾದ ಅವರು ಸುದುರ್ಜಯನೇ, ನಾವು ವಿದ್ಯುತ್‌ಸುವಿದ್ಯುತ್ತುಗಳೆಂಬ ಹೆಸರಿನ ಅಸುರರು.

೪೯. ಈಗ ನಾವು ನಿನ್ನಿಂದ, ಸತ್ಪುರುಷರಿಂದ ಸುಸಂಸ್ಕೃತವಾದ ಧರ್ಮವನ್ನು ಕಲಿಯಲಿಚ್ಛಿಸಿದ್ದೇವೆ. ಲೋಕಪಾಲರ ಕರ್ಮಗಳೆಲ್ಲವನ್ನೂ ನಾವು ಮಾಡುತ್ತೇವೆ.

ಏವಮುಕ್ತೇ ದುರ್ಜಯೇನ ತೌಸ್ವರ್ಗೇ ಸನ್ನಿವೇಶಿತೌ ।
ಲೋಕಪಾಲೌ ಕೃತೌ ಸದ್ಯಸ್ತತೋಂತರ್ಧಾನ ಮಾಪತುಃ ।
ತಯೋರಪಿ ಮಹತ್ಕರ್ಮ ಚರಿತಂ ಚ ಧರಾಧರೇ || ೫೦ ||

ಭವಿಷ್ಯತಿ ಮಹಾರಾಜೋ ದುರ್ಜಯೋ ಮಂದರೋಪರಿ || ೫೧ ||

ಧನದಸ್ಯ ವನಂದಿವ್ಯಂ ದೃಷ್ಟ್ವಾ ನಂದನಸನ್ನಿಭಂ ।
ಮುದಾಬಭ್ರಾಮ ರಮ್ಯೇಽಸ್ಮಿನ್ಸ ಯಾವದ್ರಾಜಸತ್ತಮಃ || ೫೨ ||

ತಾವತ್ಸುವರ್ಣವೃಕ್ಷಾಧಃ ಕನ್ಯಾದ್ವಯಮಪಶ್ಯತ ।
ಅತೀವರೂಪಸಂಪನ್ನಮತೀವಾದ್ಭುತದರ್ಶನಂ || ೫೩ ||

ದೃಷ್ಟ್ವಾತು ವಿಸ್ಮಯಾವಿಷ್ಟಃ ಕ ಇಮೇ ಶುಭಲೋಚನೇ ।
ಏವಂ ಸಂಚಿಂತ್ಯ ಯಾವತ್ಸ ಕ್ಷಣಮೇಕಂ ವ್ಯವಸ್ಥಿತಃ || ೫೪ ||

ತಸ್ಮಿನ್ವನೇ ತಾವದುಭೌ ತಾಪಸೌ ಸೋಽವಲೋಕಯತ್ || ೫೫ ||

---

೫೦. ಹೀಗೆನಲು ದುರ್ಜಯನು ಅವರನ್ನು ಸ್ವರ್ಗದಲ್ಲಿಟ್ಟು ಲೋಕಪಾಲರನ್ನಾಗಿ ಮಾಡಿದನು. ಒಡನೆಯೇ ಅವರು ಅಂತರ್ಧಾನವನ್ನು ಪಡೆದರು. ಭೂದೇವಿ, ಅವರಿಬ್ಬರ ಕರ್ಮವೂ ಚರಿತ್ರೆಯೂ ದೊಡ್ಡದಾಗಿದೆ.

೫೧-೫೨ ಮಹಾರಾಜನಾದ ದುರ್ಜಯನು ಬಳಿಕ ಮಂದರಪರ್ವತದ ಮೇಲೆ ಕುಬೇರನ ನಂದನವನದಂತೆ ಇರುವ ದಿವ್ಯವನವನ್ನು ನೋಡಿ ಸಂತೋಷದಿಂದ ರಮ್ಯವಾದ ಅದರಲ್ಲಿ ಸಂಚರಿಸುತ್ತಿದ್ದನು.

೫೩-೫೪. ಆಗ ಸುವರ್ಣವೃಕ್ಷವೊಂದರ ಕೆಳಗೆ ಇಬ್ಬರು ಕನ್ನಿಕೆಯರನ್ನು ಕಂಡನು. ಅತಿರೂಪವತಿಯರಾದ ಅವರನ್ನು ಅತ್ಯಾಶ್ಚರ್ಯದಿಂದ ನೋಡಿ ಈ ಶುಭನೇತ್ರೆಯರು ಯಾರೆಂದು ಯೋಚಿಸುತ್ತ ಕ್ಷಣಕಾಲ ನಿಂತನು. .

೫೫. ಅಷ್ಟರಲ್ಲಿ ಆ ವನದಲ್ಲಿ ಇಬ್ಬರು ಋಷಿಗಳನ್ನು ಅವನು ನೋಡಿದನು.

ತೌದೃಷ್ಟ್ವಾ ಸಹಸಾ ರಾಜಾ ಯಯೌ ಪ್ರೀತ್ಯಾ ಪರಾಂಮುದಂ ।
ಅವತೀರ್ಯ ದ್ವಿಪಾತ್ತೂರ್ಣಂ ನಮಶ್ಚಕ್ರೇ ತಯೋಃ ಸ್ವಯಂ ॥ ೫೬ ॥

ಉಪವಿಷ್ಟಃ ಸ ತಾಭ್ಯಾಂತು ಕೌಶ್ಯೇದತ್ತೇ ವರಾಸನೇ ।
ಪೃಷ್ಟಃ ಕಸ್ತ್ವಂ ಕುತಶ್ಚಾಸಿ ಕಸ್ಯವಾ ಕಿಮಿಹಸ್ಥಿತಃ ॥ ೫೭ ॥

ತೌಪ್ರಹಸ್ಯಾಬ್ರವೀದ್ರಾಜಾ ಸುಪ್ರತೀಕೇತಿ ವಿಶ್ರುತಃ ।
ತಸ್ಯಪುತ್ರಃ ಸಮುತ್ಪನ್ನೋ ದುರ್ಜಯೋ ನಾಮನಾಮತಃ ।
ಪೃಥಿವ್ಯಾಂ ಸರ್ವರಾಜಾನೋ ಜಿಗೀಷನ್ನಿಹ ಸತ್ತಮೌ ॥ ೫೮ ॥

ಆಗತೋಸ್ಮಿ ಧ್ರುವಂ ಚೈವ ಸ್ಮರ್ತವ್ಯೋಹಂ ತಪೋಧನೌ ।
ಭವಂತೌ ಕೌಸಮಾಖ್ಯಾತಂ ಮಮಾನುಗ್ರಹ ಕಾಂಕ್ಷಯಾ ॥ ೫೯ ॥

॥ ತಾಪಸಾವೂಚತುಃ ॥

ಆವಾಂ ಹೇತೃಪ್ರಹೇತ್ರಾಖ್ಯೌ ಮನೋಃ ಸ್ವಾಯಂಭುವಃ ಸುತೌ ।
ಆವಾಂ ದೇವವಿನಾಶಾಯ ಗತೌ ಸ್ವೋಮೇರುಪರ್ವತಂ ॥ ೬೦ ॥

---

೫೬. ಅವರನ್ನು ನೋಡಿ, ಆ ರಾಜನು ಹೆಚ್ಚಾಗಿ ಸಂತೋಷಪಟ್ಟು ತಟ್ಟನೆ ಆನೆಯಿಂದ ಇಳಿದು ಅವರಿಗೆ ನಮಸ್ಕರಿಸಿದನು.

೫೭. ಅವರು ಕೊಟ್ಟ ದರ್ಭೆಯ ಉತ್ತಮಾಸನದಲ್ಲಿ ಕುಳಿತುಕೊಂಡ ಆ ರಾಜನನ್ನು ಅವರು "ನೀನು ಯಾರು? ಎಲ್ಲಿಂದ ಬಂದಿದ್ದೀಯೆ? ಇಲ್ಲೇಕಿದ್ದೀಯೆ?" ಎಂದು ಕೇಳಿದರು.

೫೮-೫೯. ದುರ್ಜಯನು ನಕ್ಕು ಅವರಿಗೆ "ಸುಪ್ರತೀಕನೆಂದು ಪ್ರಸಿದ್ಧನಾದ ರಾಜನುಂಟಷ್ಟೆ. ನಾನು ಅವನ ಮಗನು. ದುರ್ಜಯನೆಂದು ನನ್ನ ಹೆಸರು. ಸಜ್ಜನೋತ್ತಮರೇ, ಪೃಥ್ವಿಯಲ್ಲಿರುವ ಸರ್ವರಾಜರನ್ನೂ ಜಯಿಸಲಪೇಕ್ಷೆಯಿಂದ ಇಲ್ಲಿಗೆ ಬಂದಿದ್ದೇನೆ. ತಪೋಧನರೇ, ನಿಮಗೆ ನನ್ನ ಜ್ಞಾಪಕವು ಸ್ಥಿರವಾಗಿರಲಿ. ನನ್ನನ್ನು ಅನುಗ್ರಹಿಸುವುದಕ್ಕಾಗಿ ತಾವು ಯಾರೆಂಬುದನ್ನು ಹೇಳಿ" ಎಂದನು.

೬೦. ತಾಪಸರು—ನಾವು ಹೇತೃಪ್ರಹೇತೃಗಳೆಂಬ ಹೆಸರುಳ್ಳವರು. ಸ್ವಾಯಂಭುವ ಮನುವಿನ ಮಕ್ಕಳು. ನಾವು ದೇವವಿನಾಶಕ್ಕಾಗಿ ಮೇರು ಪರ್ವತಕ್ಕೆ ಹೋಗಿದ್ದೆವು.

ತತ್ರಾವಯೋರ್ಮಹಾಸೈನ್ಯಂ ಗಜಾಶ್ವರಥಸಂಕುಲಂ ।
ಜಿಗಾಯ ಸರ್ವದೇವಾನಾಂ ಶತಶೋಥ ಸಹಸ್ರಶಃ ॥ ೬೧ ॥

ತೇಚ ದೇವಾ ಮಹತ್ಸೈನ್ಯಂ ದೃಷ್ಟ್ವಾ ಸೈನ್ಯಂ ನಿಪಾತಿತಂ ।
ಅಸುರೈರುಜ್ಝಿತಪ್ರಾಣಂ ತತಸ್ತೇ ಶರಣಂ ಗತಾಃ ॥ ೬೨ ॥

ಕ್ಷೀರಾಬ್ಧೌ ಯತ್ರದೇವೇಶೋ ಹರಿಶ್ಶೇತೆ ಸ್ವಯಂ ಪ್ರಭುಃ ।
ತತ್ರವಿಜ್ಞಾಪಯಾಮಾಸುಃ ಸರ್ವೇ ಪ್ರಣತಿಪೂರ್ವಕಂ ॥ ೬೩ ॥

ದೇವದೇವ ಹರೇ ಸರ್ವಂ ಸೈನ್ಯಂತ್ವಸುರಸತ್ತಮೈಃ
ಪರಾಜಿತಂ ಪರಿತ್ರಾಹಿ ಭೀತಂ ವಿಹ್ವಲಲೋಚನಂ ॥ ೬೪ ॥

ತ್ವಯಾ ದೇವಾಸುರೇ ಯುದ್ಧೇ ಪೂರ್ವಂ ತ್ರಾತಾಃ ಸ್ಮಕೇಶವ ।
ಸಹಸ್ರ ಬಾಹೋಃ ಕ್ರೂರಸ್ಯ ಸಮರೇ ಕಾಲನೇಮಿನಃ ॥ ೬೫ ॥

---

೬೧. ಅಲ್ಲಿ ಆನೆ ಕುದುರೆ ಬಂಡಿಗಳಿಂದ ನಿಬಿಡವಾದ ನಮ್ಮ ದೊಡ ಸೈನ್ಯವು, ನಮ್ಮದಕ್ಕಿಂತಲೂ ನೂರು ಅಥವಾ ಸಾವಿರದಷ್ಟು ಹೆಚ್ಚಾದ ದೇವತೆಗಳೆಲ್ಲರ ಸೈನ್ಯವನ್ನು ಜಯಿಸಿತು.

೬೨-೬೩. ಈ ದೇವತೆಗಳು ಬಿದ್ದುಹೋದ ತಮ್ಮ ಸೇನೆಯನ್ನು ನೋಡಿ ಅಸುರರಿಂದ ಪ್ರಾಣವನ್ನುಳಿಸಿಕೊಂಡವರಾಗಿ ಪ್ರಭುವಾದ ಹರಿಯು, ಸಾಕ್ಷಾತ್ತಾಗಿ ಮಲಗಿರುವ, ಕ್ಷೀರಸಾಗರಕ್ಕೆ ಹೋಗಿ ಅವನನ್ನು ಮರೆಹೊಕ್ಕು ಪ್ರಣಾಮ ಪೂರ್ವಕವಾಗಿ ಎಲ್ಲರೂ ವಿಜ್ಞಾಪಿಸಿದರು.

೬೪. ದೇವ ದೇವನೇ, ಹರಿಯೇ, ರಾಕ್ಷಸೋತ್ತಮರು ನಮ್ಮ ಸೈನ್ಯವೆಲ್ಲ ವನ್ನೂ ಸೋಲಿಸಿದರು. ಹೆದರಿ ಕಣ್ಣು ಕಣ್ಣು ಬಿಡುತ್ತಿರುವ ಸೈನ್ಯವನ್ನು ಕಾಪಾಡು.

೬೫. ಕೇಶವಾ, ಹಿಂದೆ ದೇವಾಸುರಯುದ್ಧದಲ್ಲಿ ಸಾವಿರತೋಳುಳ್ಳ ಕಾಲನೇಮಿಯೆಂಬ ಕ್ರೂರಿಯ ಕದನದಲ್ಲಿ ನಮ್ಮನ್ನು ರಕ್ಷಿಸಿದ್ದೀಯೆ.

ಇದಾನೀಮಪಿ ದೇವೇಶ ಅಸುರೌ ದೇವಕಂಟಕೌ ।
ಹೇತೃಪ್ರಹೇತೃನಾಮಾನೌ ಬಹುಸೈನ್ಯಪರಿಚ್ಛದೌ ।
ತೌಹತ್ವಾ ತ್ರಾಹಿ ನಃಸರ್ವಾನ್ ದೇವದೇವ ಜಗತ್ಪತೇ ॥ ೬೬ ॥

ಏವಮುಕ್ತಸ್ತತೋ ದೇವೋ ವಿಷ್ಣುರ್ನಾರಾಯಣಃ ಪ್ರಭುಃ ।
ಅಹಂ ಯಾಸ್ಯಾಮಿ ತೌ ಹಂತುಂ ಇತ್ಯುವಾಚ ಜಗತ್ಪತಿಃ ॥ ೬೭ ॥

ಏಮುಕ್ತಾಸ್ತತೋ ದೇವಾ ಮೇರು ಪರ್ವತಸನ್ನಿಧೌ ।
ಪ್ರತಸ್ಥುಸ್ತೇಥಮನಸಾ ಚಿಂತಯಂತೋ ಜನಾರ್ದನಂ ॥ ೬೮ ॥

ತೈಃ ಸಂಚಿಂತಿತಮಾತ್ರಸ್ತು ದೇವಶ್ಚಕ್ರಗದಾಧರಃ ॥ ೬೯ ॥

ಆವಯೋಸ್ಸೈನ್ಯಮಾವಿಶ್ಯ ಏಕಏವ ಮಹಾಬಲಃ ।
ಏಕಧಾ ದಶಧಾತ್ಮಾನಂ ಶತಧಾ ಚಸಹಸ್ರಧಾ ।
ಲಕ್ಷಧಾ ಕೋಟಿಧಾ ಕೃತ್ವಾ ಸ್ವಭೂತ್ಯಾಚಜಗತ್ಪತಿಃ ॥ ೭೦ ॥

ಏವಂಸ್ಥಿತೇ ದೇವವರೇಽಸ್ಮತ್ಸೈನ್ಯೇ ಮಹಾಬಲಃ ॥ ೭೧ ॥

---

೬೬. ದೇವ ದೇವನೇ, ಜಗತ್ಪತೀ, ಈಗಲೂ ದೇವತೆಗಳಿಗೆ ಕಂಟಕರಾದ ಬಹು ಸೇನೆಯಿಂದೊಡಗೂಡಿದ ಹೇತೃಪ್ರಹೇತೃಗಳೆಂಬ ಆ ರಕ್ಕಸರನ್ನು ಕೊಂದು ನಮ್ಮೆಲ್ಲರನ್ನೂ ಕಾಪಾಡು.

೬೭. ಅವರು ಹೀಗೆ ವಿಜ್ಞಾಪಿಸಲು ಸಮರ್ಥನೂ ಜಗತ್ಪತಿಯೂ ಆದ ಆ ವಿಷ್ಣುವು (ನಾರಾಯಣನು) ನಾನು ಅವರಿಬ್ಬರನ್ನೂ ಕೊಲ್ಲಲು ಹೋಗುವೆನು ಎಂಬುದಾಗಿ ಹೇಳಿದನು.

೬೮. ಹೀಗೆ ಹೇಳಿಸಿಕೊಂಡು ಆ ದೇವತೆಗಳು ಮನಸ್ಸಿನಲ್ಲಿ ಹರಿಯನ್ನು ಸ್ಮರಿಸುತ್ತ ಮೇರುಪರ್ವತದ ಹತ್ತಿರಕ್ಕೆ ಹೊರಟರು.

೬೯-೭೦. ಅವರು ಸ್ಮರಿಸಿದ ಮಾತ್ರಕ್ಕೇ ಚಕ್ರಗದಾಧಾರಿಯೂ, ಅತಿಬಲವುಳ್ಳವನೂ ಜಗತ್ಪತಿಯೂ ಆದ ಆ ದೇವನು ತನ್ನ ಅಣಿಮಾದಿ ಶಕ್ತಿಯಿಂದ ತಾನೊಬ್ಬನೇ ಹತ್ತು, ನೂರು, ಸಾವಿರ, ಲಕ್ಷ, ಕೋಟಿ ರೂಪಧಾರಿಯಾಗಿ ನಮ್ಮ ಸೈನ್ಯವನ್ನು ಹೊಕ್ಕನು.

೭೧-೭೨. ರಾಜನೇ, ದೇವತೋತ್ತಮನಿಂದ ನಮ್ಮ ಸೇನೆಯಲ್ಲಿ ಬಲಿಷ್ಠ

ಯಃ ಕಶ್ಚಿದಸುರೋ ರಾಜನ್ ಆವಯೋರ್ಬಲಮಾಶ್ರಿತಃ ।
ಸ ಹತಃ ಪತಿತೋ ಭೂಮೌ ದೃಶ್ಯತೇ ಗತಚೇತನಃ ॥ ೭೨ ॥

ಏವಂ ತತ್ಸಹಸಾ ಸೈನ್ಯಂ ಮಾಯಯಾ ವಿಶ್ವಮೂರ್ತಿನಾ ।
ನಿಹತ್ಯ ಮಾಂಸಲಕಲಂಪತ್ತಿಧ್ವಜ ಸಮಾಕುಲಂ ॥ ೭೩ ॥

ಚತುರಂಗಂ ಬಲಂ ಸರ್ವಂ ಹತ್ವಾ ದೇವೋ ರಥಾಂಗಧೃಕ್ ।
ಆವಾಂ ಶೇಷಾವಥೋ ದೃಷ್ಟ್ವಾ ಗತೋಂತರ್ಧಾನಮೀಶ್ವರಃ ॥ ೭೪ ॥

ಆವಯೋರೀದೃಶಂ ಕರ್ಮ ದೃಷ್ಟ್ವಂ ದೇವಸ್ಯ ಶಾರ್ಙ್ಗಿಣಃ ।
ತತಸ್ತಮೇವ ಶರಣಂ ಗತಾವಾರಾಧನಾಯ ವೈ ॥ ೭೫ ॥

ತ್ವಂಚಾಸ್ಮನ್ಮಿತ್ರತನಯಃ ಸುಪ್ರತೀಕಾತ್ಮಜೋ ನೃಪಃ ।
ಇಮೇಚ ಆವಯೋಃ ಕನ್ಯೇ ಗೃಹಾಣ ಮನುಜೇಶ್ವರ ॥ ೭೬ ॥

ನಾಗಿದ್ದುಕೊಂಡಿದ್ದ ಪ್ರತಿಯೊಬ್ಬ ಅಸುರನೂ ಹತನಾಗಿ ಪ್ರಾಣವನ್ನು ಬಿಟ್ಟು ಭೂಮಿಯಮೇಲೆ ಬಿದ್ದನು.

೭೩–೭೪. ಹೀಗೆ ಚಕ್ರಧರನಾದ ವಿಶ್ವಮೂರ್ತಿಯು ಮಾಯೆಯಿಂದ ತಟ್ಟನೆ, ಬಲಿಷ್ಠರಾದ ಹರ್ಷಧ್ವನಿಮಾಡುವ ಕಾಲಾಳುಗಳಿಂದಲೂ ಬಾವುಟಗಳಿಂದಲೂ ಕೂಡಿದ ನಮ್ಮ ಚತುರಂಗ ಸೈನ್ಯವನ್ನು ಪೂರ್ತಿಯಾಗಿ ಕೊಂದು ನಾವಿಬ್ಬರು ಮಾತ್ರವೇ ಉಳಿದಿರುವುದನ್ನು ನೋಡಿ (ಆ ಈಶ್ವರನು) ಅಂತರ್ಧಾನನಾದನು.

೭೫. ಶಾರ್ಙ್ಗಧಾರಿಯಾದ ಆ ದೇವನ ಇಂತಹ ಕಾರ್ಯವನ್ನು ನೋಡಿದ ನಾವು ಬಳಿಕ ಅವನನ್ನೇ ಆರಾಧಿಸಲು ಮರೆಹೊಕ್ಕೆವು.

೭೬. ದೊರೆಯೇ, ನೀನು ನಮ್ಮ ಮಿತ್ರನಾದ ಸುಪ್ರತೀಕ ರಾಜನ ಮಗನು. ರಾಜನೇ, ನಮ್ಮ ಪುತ್ರಿಯರಾದ ಇವರಿಬ್ಬರನ್ನೂ ನೀನು ಪರಿಗ್ರಹಿಸು.

ಹೇತೃಕನ್ಯಾ ಸುಕೇಶೀ ತು ಮಿಶ್ರಕೇಶೀ ಪ್ರಹೇತೃಜಾ ।
ದುರ್ಜಯಸ್ತ್ವೇವಮುಕ್ತಸ್ತು ತಾಭ್ಯಾಮೇತೇ ಉಭೇಶುಭೇ ।
ಕನ್ಯೇ ಜಗ್ರಾಹ ಧರ್ಮೇಣ ಭಾರ್ಯಾರ್ಥಂ ಮನುಜೇಶ್ವರಃ ॥ ೭೭ ॥

ತೇಲಬ್ಧ್ವಾ ಸಹಸಾ ರಾಜಾ ಮುದಾ ಪರಮಯಾಯುತಃ ।
ಆಜಗಾಮ ಸ್ವಕಂ ರಾಷ್ಟ್ರಂ ನಿಜಸೈನ್ಯಸಮಾವೃತಃ ॥ ೭೮ ॥

ತತಃ ಕಾಲೇನ ಮಹತಾ ತಸ್ಯ ಪುತ್ರದ್ವಯಂ ಬಭೌ ।
ಸುಕೇಶ್ಯಾಃ ಪ್ರಭವಃ ಪುತ್ರೋ ಮಿಶ್ರಕೇಶ್ಯಾಃ ಸುದರ್ಶನಃ ॥ ೭೯ ॥

ಸ ರಾಜಾದುರ್ಜಯಃ ಶ್ರೀಮಾನ್ ಲಬ್ಧ್ವಾ ಪುತ್ರದ್ವಯಂ ಶುಭಂ ।
ಸ್ವಯಂ ಕಾಲಾಂತರೇ ಶ್ರೀಮಾನ್ ಜಗಾಮಾರಣ್ಯಮಂತಿಕೇ ॥ ೮೦ ॥

---

೭೭. "ಸುಕೇಶಿಯೆಂಬುವಳು ಹೇತೃವೆಂಬ ನನ್ನ ಮಗಳು. ಮಿಶ್ರಕೇಶಿಯೆಂಬ ಹೆಸರಿನ ಇವಳು ಪ್ರಹೇತೃವೆಂಬ ಹೆಸರುಳ್ಳ ನನ್ನ ಮಗಳು" ಎಂದರು. ಅವರು ಹೀಗೆನಲು ನರಾಧಿಪನಾದ ದುರ್ಜಯನು ಮಂಗಳೆಯರಾದ ಆ ಇಬ್ಬರು ಕನ್ಯೆಯರನ್ನೂ ಧರ್ಮದಿಂದ ಪತ್ನಿಯರನ್ನಾಗಿ ಪರಿಗ್ರಹಿಸಿದನು.

೭೮. ದುರ್ಜಯರಾಜನು ಅಕಸ್ಮಾತ್ತಾಗಿ ಅವರನ್ನು ಪತ್ನಿಯರನ್ನಾಗಿ ಪಡೆದು ಪರಮಸಂತೋಷವುಳ್ಳವನಾಗಿ ತನ್ನ ಸೇನೆಯೊಡನೆ ತನ್ನ ದೇಶಕ್ಕೆ ಬಂದನು.

೭೯. ಬಹುಕಾಲದಮೇಲೆ ಆ ರಾಜನಿಗೆ ಸುಕೇಶಿಯಲ್ಲಿ ಪ್ರಭವನೆಂಬ ಪುತ್ರನೂ, ಮಿಶ್ರಕೇಶಿಯಲ್ಲಿ ಸುದರ್ಶನನೆಂಬ ಪುತ್ರನೂ ಉದಿಸಿದರು.

೮೦. ಶ್ರೀಮಂತನಾದ ಆ ದುರ್ಜಯರಾಜನು ಮಂಗಳಕರರಾದ ಪುತ್ರರಿರ್ವರನ್ನು ಪಡೆದು, ಕೆಲವುದಿನಗಳನಂತರ ಹತ್ತಿರದಲ್ಲಿದ್ದ ಕಾಡಿಗೆ ಹೋದನು.

ತತ್ರಸ್ಥೋ ವನಜಾ‍ರ್ಜ ಜಂತೂನ್ಬಂಧಯನ್ವೈ ಭಯಂಕರಾನ್ ।
ದದರ್ಶಾರಣ್ಯಮಾಶ್ರಿತ್ಯ ಮುನಿಂ ಸ್ಥಿತಮಕಲ್ಮಷಂ ॥ ೮೧ ॥

ತಪಸ್ಯಂತಂ ಮಹಾಭಾಗಂ ನಾಮ್ನಾ ಗೌರಮುಖಂ ಶುಭಂ ।
ಋಷಿವೃಂದಸ್ಯ ಗೋಪ್ತಾರಂ ತ್ರಾತಾರಂ ಪಾಪಿನಾಂ ಸ್ವಯಮ್ ॥ ೮೨ ॥

ತಸ್ಯಾಶ್ರಮೋ ವಿಮಲಜಲಾವಿಲೋ ಮರುತ್ ।
ಸುಗಂಧಿ ವೃಕ್ಷಪ್ರವರೋದ್ವಿಜನ್ಮನಃ ।
ರರಾಜ ಜೀಮೂತ ಇವಾಂಬರಾನ್ಮಹೀಂ ।
ಮುಪಾಗತಃ ಪ್ರವರವಿಮಾನವದ್ಗ್ರಹಃ ॥ ೮೩ ॥

ಜ್ವಲನ್ಮಖಾಗ್ನಿ ಪ್ರತಿ ಭಾಸಿತಾಂಬರಃ ।
ಸುಶುದ್ಧ ಸಂವಾಸಿತವೇಶ ಕುಟ್ಟಿಕಃ ।

೮೧-೮೨. ಭಯಂಕರವಾದ ಕಾಡುಮೃಗಗಳನ್ನು ಬಂಧಿಸುತ್ತಿದ್ದ ಆ ದುರ್ಜಯನು ಕಾಡಿನಲ್ಲಿ ತಪಸ್ಸನ್ನು ಮಾಡುತ್ತಿದ್ದ ಪಾಪರಹಿತನೂ, ಪೂಜ್ಯನೂ, ಋಷಿಸಮೂಹಕ್ಕೆ ರಕ್ಷಕನೂ, ಪಾಪಿಗಳನ್ನು ತಾನಾಗಿ ಉದ್ಧರಿಸುವವನೂ ಆದ ಗೌರಮುಖನೆಂಬ ಹೆಸರುಳ್ಳ ಮುನಿಯೊಬ್ಬನನ್ನು ಕಂಡನು.

೮೩. ಬ್ರಾಹ್ಮಣನಾದ ಆತನ ಆಶ್ರಮವು ನಿರ್ಮಲವಾದ ನೀರಿನಿಂದ ಕೂಡಿದುದಾಗಿಯೂ ದಿವ್ಯವಾದ ಸುಗಂಧವುಳ್ಳ ಉತ್ತಮವೃಕ್ಷಗಳಿಂದೊಪ್ಪುವುದಾಗಿಯೂ ಪ್ರಬಲವಾದ ವಿಮಾನಗಳಿಂದ ಕೂಡಿದ ಗ್ರಹಗಳುಳ್ಳುದಾಗಿ ಆಕಾಶದಿಂದ ಭೂಮಿಗೆ ಇಳಿದುಬಂದ ಮೋಡದಂತೆ ಹೊಳೆಯುತ್ತಿದ್ದಿತು.

೮೪. ಉತ್ತಮವಾದ ಆಶ್ರಮದಲ್ಲಿದ್ದ ಆ ಋಷಿಯ ಗೃಹವು ಜ್ವಲಿಸುತ್ತಿರುವ ಯಜ್ಞಾಗ್ನಿಯಿಂದ ಆಕಾಶವನ್ನು ಹೊಳೆಯುವಂತೆ ಮಾಡಿದುದೂ

ಶಿಷ್ಯೈಃ ಸಮುಚ್ಚಾರಿತಸಾಮನಾದಕಃ ।
ಸುರೂಪಯೋಷಿನ್ಮುನಿ ಕನ್ಯಕಾಯುತಃ ।
ಇತೀದೃಶೋಽಸ್ಯಾವಸಥೋ ವರಾಶ್ರಮೋ ।
ಸುಪುಷ್ಪಿತಾಶೇಷತರುಪ್ರಸೂನಕಃ ॥ ೮೪ ॥

ಇತಿ ಶ್ರೀ ವರಾಹಪುರಾಣೇ ಆದಿಕೃತವೃತ್ತಾಂತೇ ಸೃಷ್ಟಿವರ್ಣನೇ ದುರ್ಜಯಚರಿತೇ ದಶಮೋಽಧ್ಯಾಯಃ

ಅತಿಶುದ್ಧವಾದ ಚೆನ್ನಾಗಿ ಸುವಾಸನೆಗೊಳಿಸಿದ ಅಂಗಳವುಳ್ಳುದೂ ಶಿಷ್ಯರಿಂದ ಹೇಳಲ್ಪಡುವ ಸಾಮನಾದವುಳ್ಳುದೂ ರೂಪವತಿಯರಾದ ವನಿತೆಯರಿಂದಲೂ ಮುನಿಕನ್ನಿಕೆಯರಿಂದಲೂ ಕೂಡಿದುದೂ ಚೆನ್ನಾಗಿ ಹೂಕಾಯಿ ಹಣ್ಣುಗಳನ್ನು ಬಿಟ್ಟಿರುವ ಎಲ್ಲಾ ಮರಗಳಿಂದ ಕೂಡಿದುದೂ ಆಗಿದ್ದಿತು.

ಅಧ್ಯಾಯದ ಸಾರಾಂಶ :—

ಶ್ರೀವರಾಹ ದೇವನು ಭೂದೇವಿಗೆ—ನಾರಾಯಣನು ಯಜ್ಞಾದಿಗಳಿಂದ ತನ್ನನ್ನು ಸಂತೋಷಡಿಸಿದ ದೇವತೆಗಳನ್ನು, ಅವರ ಕೋರಿಕೆಯಂತೆ ಮೂರ್ತಿತ್ರಯವನ್ನು ಧರಿಸಿ, ಯಜ್ಞದಿಂದ ಪೂಜಿಸಿ, ಅವರನ್ನು ಗೌರವಿಸಿದುದು, ಕೃತಯುಗದಲ್ಲಿ ಸುಪ್ರತೀಕನೆಂಬ ರಾಜನಿಗೆ ಆತ್ರೇಯಮುನಿಯು ವರದಿಂದ ದುರ್ಜಯನೆಂಬ ಮಹಾವೀರನಾದ ಪುತ್ರನು ಜನಿಸಿದುದು, ದುರ್ಜಯನು ದೊರೆಯಾದ ಬಳಿಕ, ಭಾರತಾದಿವರ್ಷಗಳೆಲ್ಲವನ್ನೂ ಜಯಿಸಿ, ಇಂದ್ರನನ್ನು ಜಯಿಸಲು ಬಯಸಿದುದು, ಅದನ್ನು ನಾರದನಿಂದ ಅರಿತ ಇಂದ್ರನು ಲೋಕ ಪಾಲಕರೊಡನೆ ಅವನನ್ನು ಎದುರಿಸಿ (ಆತ್ರೇಯಮುನಿಯ ಶಾಪದಂತೆ) ಸೋತು, ಭೂಲೋಕದಲ್ಲಿ ಪೂರ್ವದೇಶಕ್ಕೆ ಬಂದು ನಿಂತುದು, ಸ್ವರ್ಗದಿಂದ ಹಿಂತಿರುಗಿದ ದುರ್ಜಯನು ಗಂಧಮಾದನ ಪರ್ವತದಲ್ಲಿ ಬೀಡು ಬಿಟ್ಟಿರುವಾಗ, ಹೇತೃ ಪ್ರಹೇತೃಗಳ ಪುತ್ರಿಯರಾದ ಸುಕೇಶಿ ಮಿಶ್ರಕೇಶಿಯರೆಂಬುವರಿಗೂ ಆತನಿಗೂ ವಿವಾಹವಾದುದು, ಬಳಿಕ ಅವನು ತನ್ನ ರಾಜಧಾನಿಗೆ ಬಂದು ಪುತ್ರರನ್ನು ಪಡೆದುದು, ಬೇಟೆಗಾಗಿ ವನಕ್ಕೆ ಹೋದ ದುರ್ಜಯನು ಗೌರಮುಖನೆಂಬ ಮಹರ್ಷಿಯ ಆಶ್ರಮವನ್ನು ಸಂದರ್ಶಿಸುವುದು, ಋಷ್ಯಾಶ್ರಮವರ್ಣನೆ, ಇವುಗಳನ್ನು ವಿವರಿಸಿ ಹೇಳುವನು. ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಹತ್ತನೆಯ ಅಧ್ಯಾಯ.

|| ಶ್ರೀಃ ||

–x–

ಏಕಾದಶೋಽಧ್ಯಾಯಃ

ಪುನರ್ದುರ್ಜಯಚರಿತಂ

|| ವರಾಹ ಉವಾಚ ||

ತತಸ್ತಮೀದೃಶಂ ದೃಷ್ಟ್ವಾ ತದಾ ಗೌರಮುಖಾಶ್ರಮಂ ।
ದುರ್ಜಯಶ್ಚಿಂತಯಾಮಾಸ ರಮ್ಯಮಾಶ್ರಮಮಂಡಲಂ || ೧ ||

ಪ್ರವಿಶಾಮ್ಯತ್ರ ಪಶ್ಯಾಮಿ ಋಷೀನ್ಪರಮಧಾರ್ಮಿಕಾನ್ ।
ಚಿಂತಯಿತ್ವಾ ತದಾರಾಜಾ ಪ್ರವಿವೇಶ ತಮಾಶ್ರಮಂ || ೨ ||

ತಸ್ಯ ಪ್ರವಿಷ್ಟಸ್ಯ ತತೋ ರಾಜ್ಞಃ ಪರಮಹರ್ಷಿತಃ ।
ಚಕಾರ ಪೂಜಾಂ ಧರ್ಮಾತ್ಮಾ ತದಾ ಗೌರಮುಖೋ ಮುನಿಃ || ೩ ||

ಹನ್ನೊಂದನೆಯ ಅಧ್ಯಾಯ

ಮತ್ತೆ ದುರ್ಜಯನ ಚರಿತ್ರೆ

೧–೨. ವರಾಹ—ದುರ್ಜಯನು, ಬಳಿಕ ಇಂತಹ ಗೌರಮುಖಾಶ್ರಮವನ್ನು ನೋಡಿ, " ರಮ್ಯವಾದ ಈ ಆಶ್ರಮಕ್ಕೆ ಹೋಗಿ, ಪರಮ ಧಾರ್ಮಿಕರಾದ ಋಷಿಗಳನ್ನು ನೋಡುತ್ತೇನೆ ". ಎಂದು ಯೋಚಿಸಿ ಆ ಆಶ್ರಮವನ್ನು ಪ್ರವೇಶಿಸಿದನು.

೩. ಆಗ ಧರ್ಮಾತ್ಮನಾದ ಗೌರಮುಖಮುನಿಯು ತನ್ನ ಆಶ್ರಮಕ್ಕೆ ಬಂದ ರಾಜನಿಗೆ ಪರಮಸಂತೋಷದಿಂದ ಪೂಜೆಯನ್ನು ಮಾಡಿದನು.

ಸ್ವಾಗತಾದಿಕ್ರಿಯಾಃ ಕೃತ್ವಾ ಕಥಾಂತೇ ತಂ ಮಹಾಮುನಿಃ ।
ಸ್ವಶಕ್ತ್ಯಾಹಂ ನೃಪಶ್ರೇಷ್ಠ ಸಾನುಗಸ್ಯತು ಭೋಜನಂ ॥
ಕರಿಷ್ಯಾಮಿ ಪ್ರಮುಚ್ಯಂತಾಂ ಸಾಧುವಾಹಾ ಇತಿ ದ್ವಿಜಃ ॥ ೪ ॥

ಏವಮುಕ್ತ್ವಾ ಸ್ಥಿತಸ್ತೂಷ್ಣೀಂ ಸಮುನಿಃ ಶಂಸಿತವ್ರತಃ ।
ರಾಜಾಪಿ ತಸ್ಥೌ ತದ್ಭಕ್ತ್ಯಾ ಸ್ವಸಹಾಯೈಃ ಸಮನ್ವಿತಃ ॥ ೫ ॥

ಅಕ್ಷೌಹಿಣ್ಯೋ ಬಲಸ್ಯಾಸ್ಯ ಪಂಚಮಾತ್ರಂ ತದಾಸ್ಥಿತಾಃ ।
ಅಯಂ ಚ ತಾಪಸಃ ಕಿಂ ಮೇ ದಾಸ್ಯತೇ ಭೋಜನಂ ತ್ವಿಹ ॥ ೬ ॥

ನಿಮಂತ್ರ್ಯ ದುರ್ಜಯಂ ವಿಪ್ರಸ್ತದಾ ಗೌರಮುಖೋನೃಪಂ ।
ಚಿಂತಯಾಮಾಸ ಕಿಂಚಾಸ್ಯ ಮಯಾ ದೇಯಂತು ಭೋಜನಂ ॥ ೭ ॥

ಏವಂ ಚಿಂತಯತಸ್ತಸ್ಯ ಮಹರ್ಷೇರ್ಭಾವಿತಾತ್ಮನಃ ।
ಸ್ಥಿತೋ ಮನಸಿ ದೇವೇಶೋ ಹರಿರ್ನಾರಾಯಣಃ ಪ್ರಭುಃ ॥ ೮ ॥

---

೪. ಸುಖಾಗಮನವನ್ನು ಕೇಳುವುದೇ ಮೊದಲಾದ ಸತ್ಕಾರಗಳನ್ನು ಮಾಡಿ, ಕಡೆಗೆ ಬ್ರಾಹ್ಮಣನಾದ ಆ ಮುನಿಯು ದುರ್ಜಯನನ್ನು ಕುರಿತು "ರಾಜೋತ್ತಮಾ, ನನ್ನ ಶಕ್ತಿಯಿರುವಷ್ಟುಮಟ್ಟಿಗೆ ಪರಿವಾರಸಹಿತನಾದ ನಿನಗೆ ಊಟವನ್ನು ಮಾಡಿಸುವೆನು. ವಾಹನಗಳು ಸರಿಯಾಗಿ ಇಳಿಯಲಿ." ಎಂದನು.

೫. ಹೀಗೆ ಹೇಳಿ, ಶ್ಲಾಘ್ಯವ್ರತಿಯಾದ ಆ ಮುನಿಯು ಸುಮ್ಮನಾದನು. ದೊರೆಯು ಅವನಲ್ಲಿ ಭಕ್ತಿಯಿಂದ ತನ್ನ ಸಹಾಯಕರೊಡನೆ ಅಲ್ಲಿ ನಿಂತನು.

೬. ಆವನ ಸೈನ್ಯವು ಆಗ ಐದು ಅಕ್ಷೋಹಿಣಿಯಿದ್ದಿತು. "ಇವನಾದರೋ ತಪಸ್ವಿ. ಇಲ್ಲಿ ನಮಗೆ ಏನು ಊಟಮಾಡಿಸಿಯಾನು!" ಎಂದು ದುರ್ಜಯನು ಯೋಚಿಸುತ್ತಿದ್ದನು.

೭. ಬ್ರಾಹ್ಮಣನಾದ ಗೌರಮುಖನು ದುರ್ಜಯ ರಾಜನಿಗೆ ಊಟಕ್ಕೆ ಹೇಳಿ, ಆಗ "ಇವನಿಗೆ ನಾನೇನು ಊಟಮಾಡಿಸಲಿ!" ಎಂದು ಯೋಚಿಸಿದನು.

೮-೯. ಹಾಗೆಯೇ ಯೋಚಿಸುತ್ತಿದ್ದ ಪವಿತ್ರಾತ್ಮನಾದ ಆ ಮಹರ್ಷಿಗೆ ಪ್ರಭುವೂ, ದೇವೇಶನೂ ಆದ ಹರಿನಾರಾಯಣನು ಮನಸ್ಸಿಗೆ ಬಂದನು. ಮುನಿ

ತತಃ ಸಂಸ್ಮೃತ್ಯ ಮನಸಾ ದೇವಂ ನಾರಾಯಣಂ ತದಾ ।
ತೋಷಯಾಮಾಸ ಗಂಗಾಯಾಂ ಪ್ರವಿಶ್ಯ ಮುನಿಸತ್ತಮಃ ॥ ೯ ॥

॥ ಧರಣ್ಯುವಾಚ ॥

ಕಥಂ ಗೌರಮುಖೋ ವಿಷ್ಣುಂ ತೋಷಯಾಮಾಸ ಭೂಧರ ।
ಏತನ್ಮೇ ಕೌತುಕಂ ಶ್ರೋತುಂ ಸಮ್ಯಗಿಚ್ಛಾ ಪ್ರವರ್ತತೇ ॥ ೧೦ ॥

॥ ವರಾಹ ಉವಾಚ ॥

ನಮೋಽಸ್ತು ವಿಷ್ಣವೇ ನಿತ್ಯಂ ನಮಸ್ತೇ ಪೀತವಾಸಸೇ ।
ನಮಸ್ತೇ ಚಾದ್ಯ ರೂಪಾಯ ನಮಸ್ತೇ ಜಲರೂಪಿಣೇ ॥ ೧೧ ॥

ನಮಸ್ತೇ ಸರ್ವಸಂಸ್ಥಾಯ ನಮಸ್ತೇ ಜಲಶಾಯಿನೇ ।
ನಮಸ್ತೇ ಕ್ಷಿತಿರೂಪಾಯ ನಮಸ್ತೇ ತೈಜಸಾತ್ಮನೇ ॥ ೧೨ ॥

ನಮಸ್ತೇ ವಾಯುರೂಪಾಯ ನಮಸ್ತೇ ವ್ಯೋಮರೂಪಿಣೇ ।
ತ್ವಂ ದೇವಸ್ಸರ್ವಭೂತಾನಾಂ ಪ್ರಭುಸ್ತ್ವಮಸಿ ಹೃಚ್ಛಯಃ ॥ ೧೩ ॥

ಶ್ರೇಷ್ಠನು ಗಂಗೆಯಲ್ಲಿ ಸ್ನಾನ ಮಾಡಿ, ದೇವನಾದ ನಾರಾಯಣನನ್ನು ಮನಸ್ಸಿನಲ್ಲಿ ಸ್ಮರಿಸಿ, ಸಂತೋಷಪಡಿಸಿದನು.

೧೦. ಭೂದೇವಿ—ಭೂಧರನೇ, ಗೌರಮುಖನು ವಿಷ್ಣುವನ್ನು ಹೇಗೆ ಸಂತೋಷಪಡಿಸಿದನೋ ಅದನ್ನು ಕೇಳಲು ನನಗೆ ಬಹಳ ಆಸೆಯೂ ಕುತೂಹಲವೂ ಆಗುತ್ತದೆ.

೧೧. ವರಾಹ—ವಿಷ್ಣುವಿಗೆ ನಮಸ್ಕಾರ. ಪೀತಾಂಬರಧಾರಿಯಾದ ನಿನಗೆ ನಿತ್ಯವೂ ನಮಸ್ಕರಿಸುವೆನು. ಆದಿಮೂರ್ತಿಯೂ ಜಲಮತ್ಸ್ಯರೂಪಿಯೂ ಆದ ನಿನಗೆ ನಮಸ್ಕಾರ.

೧೨. ಸರ್ವವ್ಯಾಪಕನೂ ಜಲಶಯನನೂ ಆದ ನಿನಗೆ ನಮಸ್ಕಾರ. ಭೂರೂಪನೂ ತೇಜೋರೂಪನೂ ಆದ ನಿನಗೆ ವಂದಿಸುತ್ತೇನೆ.

೧೩. ವಾಯುರೂಪನಾದ ನಿನಗೆ ನಮಸ್ಕಾರ. ಆಕಾಶ ರೂಪನಾದ ನಿನಗೆ ನಮಸ್ಕಾರ. ಸರ್ವಭೂತಗಳಿಗೂ ನೀನೇ ದೇವನೂ ಹೃದಯದಲ್ಲೇ ಮಲಗಿರುವ ಪ್ರಭುವೂ ಆಗಿರುವೆ.

ತ್ವಮೋಂಕಾರೋ ವಷಟ್ಕಾರಃ ಸರ್ವತ್ರೈವ ಚ ಸಂಸ್ಥಿತಃ ।
ತ್ವಮಾದಿಃ ಸರ್ವದೇವಾನಾಂ ತವ ಚಾದಿರ್ನವಿದ್ಯತೇ ॥ ೧೪ ॥

ತ್ವಂಭೂಸ್ತ್ವಂ ಚ ಭುವಃ ಸ್ವಸ್ತ್ವಂ ಜನಸ್ತ್ವಂ ಚ ಮಹಸ್ಮೃತಃ ।
ತ್ವಂ ತಪಸ್ತ್ವಂ ಚ ಸತ್ಯಂ ಚ ತ್ವಯಿ ದೇವ ಚರಾಚರಂ ॥ ೧೫ ॥

ತ್ವತ್ತೋ ಭೂತಮಿದಂ ಸರ್ವಂ ವಿಶ್ವಂ ತ್ವತ್ತೋ ಋಗಾದಯಃ ।
ತ್ವತ್ತಃ ಶಾಸ್ತ್ರಾಣಿ ಜಾತಾನಿ ತ್ವತ್ತೋ ಯಜ್ಞಾಃ ಪ್ರತಿಷ್ಠಿತಾಃ ॥ ೧೬ ॥

ತ್ವತ್ತೋ ವೃಕ್ಷಾ ವೀರುಧಶ್ಚ ತ್ವತ್ತಃ ಸರ್ವಾವನೌಷಧೀ ।
ಪಶವಃ ಪಕ್ಷಿಣಃ ಸರ್ಪಾಸ್ತ್ವತ್ತ ಏವ ಜನಾರ್ದನ ॥ ೧೭ ॥

ಮಮಾಪಿ ದೇವದೇವೇಶ ರಾಜಾ ದುರ್ಜಯ ಸಂಜ್ಞಿತಃ ।
ಆಗತೋಽಭ್ಯಾಗತಸ್ತಸ್ಯ ಚಾತಿಥ್ಯಂ ಕರ್ತುಮುತ್ಸಹೇ ॥ ೧೮ ॥

---

೧೪. ಓಂಕಾರವೂ ನೀನೆ. ವಷಟ್ಕಾರವೂ ನೀನೆ. ಎಲ್ಲಿಡೆಯಲ್ಲೂ ಎಲ್ಲರಲ್ಲೂ ಇರುವವನೂ ನೀನೆ. ದೇವತೆಗಳೆಲ್ಲರಿಗೂ ನೀನು ಆದಿ(ಮೂಲನು). ಆದರೆ ನಿನಗೆ ಆದಿಯಿಲ್ಲ.

೧೫. ಭೂ, ಭುವ, ಸುವ, ಮಹ, ಜನ, ತಪ, ಸತ್ಯ ಎಂಬ ಲೋಕವೆಲ್ಲವೂ ನೀನೆ. ದೇವನೇ, ಚರಾಚರವೆಲ್ಲವೂ ನಿನ್ನಲ್ಲಿದೆ.

೧೬. ದೇವನೇ, ಈ ಸರ್ವಭೂತವೂ ವಿಶ್ವವೂ ನಿನ್ನಿಂದ ಉದಿಸಿದೆ. ಋಗಾದಿವೇದಗಳೂ ಸರ್ವಶಾಸ್ತ್ರಗಳೂ ನಿನ್ನಿಂದಲೇ ಉದಿಸಿವೆ. ಯಜ್ಞಗಳೂ ನಿನ್ನಿಂದಲೇ ನಿಂತಿವೆ.

೧೭. ಜನಾರ್ದನಾ, ಮರಗಳೂ ಪೊದೆಗಳೂ ಎಲ್ಲಾ ವನೌಷಧಿಗಳೂ ಪಶುಗಳೂ ಪಕ್ಷಿಗಳೂ ಸರ್ಪಗಳೂ ನಿನ್ನಿಂದಲೇ ಆಗಿವೆ.

೧೮. ದೇವದೇವೇಶನೇ, ದುರ್ಜಯನೆಂಬ ರಾಜನು ನನಗೆ ಅತಿಥಿಯಾಗಿ ಬಂದಿರುವನು. ಅವನಿಗೆ ಆತಿಥ್ಯವನ್ನು ಮಾಡಲು ಕುತೂಹಲವುಳ್ಳವನಾಗಿದ್ದೇನೆ.

ತಸ್ಯ ಮೇ ನಿರ್ಧನಸ್ಯಾದ್ಯ ದೇವದೇವ ಜಗತ್ಪತೇ ।
ಭಕ್ತಿನಮ್ರಸ್ಯ ದೇವೇಶ ಕುರುಷ್ವಾನ್ನಾದ್ಯಸಂಚಯಂ ॥ ೧೯ ॥

ಯಂ ಯಂ ಸ್ಪೃಶಾಮಿ ಹಸ್ತೇನ ಯಂ ಚ ಪಶ್ಯಾಮಿ ಚಕ್ಷುಷಾ ।
ಕಾಷ್ಠಂ ವಾ ತೃಣಕಂದಂ ವಾ ತತ್ತದನ್ನಂ ಚತುರ್ವಿಧಂ ॥ ೨೦ ॥

ತಥಾ ತ್ವನ್ಯತಮಂ ವಾಪಿ ಯದ್ಧ್ಯಾತಂ ಮನಸಾ ಮಯಾ ।
ತತ್ಸರ್ವಂ ಸಿದ್ಧ್ಯತಾಂ ಮಹ್ಯಂ ನಮಸ್ತೇ ಪರಮೇಶ್ವರ ॥ ೨೧ ॥

॥ ವರಾಹ ಉವಾಚ ॥

ಇತಿ ಸ್ತುತ್ವಾತು ದೇವೇಶಃ ತುತೋಷ ಜಗತಾಂ ಪತಿಃ ।
ಮುನೇಸ್ತಸ್ಯ ಸ್ವಕಂ ರೂಪಂ ದರ್ಶಯಾಮಾಸ ಕೇಶವಃ ॥ ೨೨ ॥

ಉವಾಚ ಸುಪ್ರಸನ್ನಾತ್ಮಾ ಬ್ರೂಹಿ ವಿಪ್ರವರಂ ಪರಂ ॥ ೨೩ ॥

---

೧೯. ದೇವದೇವಾ, ಜಗತ್ಪತೀ, ದರಿದ್ರನೂ ಅತಿಥಿಸತ್ಕಾರದಲ್ಲಿ ಆಸಕ್ತನೂ ನಿನ್ನಭಕ್ತಿ ಭರದಿಂದ ಬಾಗಿರುವವನೂ ಆದ ನನಗೆ ಅನ್ನಪಾನಾದಿಗಳೆಲ್ಲವನ್ನೂ ದಯಪಾಲಿಸು.

೨೦. ನಾನು, ಕಡ್ಡಿಯನ್ನಾಗಲಿ, ಹುಲ್ಲನ್ನಾಗಲಿ, ಗೆಡ್ಡೆಯನ್ನಾಗಲಿ, ಯಾವಯಾವುದನ್ನು ಕೈಯಿಂದಮುಟ್ಟುವೆನೋ ಕಣ್ಣಿಂದ ನೋಡುವೆನೋ, ಅದೆಲ್ಲವೂ ಭಕ್ಷ್ಯಭೋಜ್ಯಾದಿಯಾದ ನಾಲ್ಕು ಬಗೆಯ ಆಹಾರ ಪದಾರ್ಥವಾಗಲಿ.

೨೧. ಅಲ್ಲದೆ ನಾನು ಮನಸ್ಸಿನಿಂದ ಬೇರಾವುದನ್ನೂ ಸ್ಮರಿಸಿದರೂ ಅದೆಲ್ಲವೂ ನನಗೆ ಸಿದ್ಧಿಸಲಿ. ಪರಮೇಶ್ವರನೇ ನಿನಗೆ ನಮಸ್ಕಾರ.

೨೨. ವರಾಹ:—ಹೀಗೆಮಾಡಿದ ಸ್ತುತಿಯಿಂದ ಜಗದೊಡೆಯನೂ ದೇವೇಶನೂ ಆದ ಕೇಶವನು ಸಂತೋಷಗೊಂಡು, ಆ ಮುನಿಗೆ ತನ್ನ ರೂಪವನ್ನು ತೋರಿಸಿದನು.

೨೩. ಅಲ್ಲದೆ ಸುಪ್ರಸನ್ನಾತ್ಮನಾದ ಅವನು " ಬ್ರಾಹ್ಮಣನೇ, ಬೇರೆಯಾದ ವರವನ್ನು ಬೇಡು ". ಎಂದನು.

ಏವಂ ಶ್ರುತ್ವಾಕ್ಷಿಣೀ ಯಾವದುನ್ಮೀಲಯತಿ ವೈಮುನಿಃ ।
ತದಾ ಶಂಖಗದಾಪಾಣಿಃ ಪೀತವಾಸಾ ಜನಾರ್ದನಃ ॥
ಗರುಡಸ್ಥೋಽಪಿ ತೇಜಸ್ವೀ ದ್ವಾದಶಾದಿತ್ಯಸುಪ್ರಭಃ ॥ ೨೪ ॥

ದಿವಿಸೂರ್ಯಸಹಸ್ರಸ್ಯ ಭವೇದ್ಯುಗಪದುತ್ಥಿತಿಃ ।
ಯದಿ ಭಾ ಸದೃಶೀ ಸಾಸ್ಯಾದ್ಭಾಸಸ್ತಸ್ಯ ಮಹಾತ್ಮನಃ ॥ ೨೫ ॥

ತತ್ರೈಕಸ್ಥಂ ಜಗತ್ಕೃತ್ಸ್ನಂ ಪ್ರವಿಭಕ್ತಮನೇಕಧಾ ।
ದದರ್ಶ ಸಮುನಿರ್ದೇವಿ ವಿಸ್ಮಯೋತ್ಫುಲ್ಲಲೋಚನಃ ॥ ೨೬ ॥

ನನಾಮ ಶಿರಸಾ ದೇವಂ ಕೃತಾಂಜಲಿರಥಾಬ್ರವೀತ್ ।
ಯದಿ ಮೇ ವರದೋದೇವೋ ಭೂಯಾದ್ಭಕ್ತಸ್ಯ ಕೇಶವಃ ॥ ೨೭ ॥

ಇದಾನೀಮೇಷ ನೃಪತಿರ್ಯಥಾ ಸಬಲವಾಹನಃ ।
ಮಮಾಶ್ರಮೇ ಕೃತಾಹಾರಃ ಶ್ವಃ ಪ್ರಯಾತಾ ಸ್ವಕಂ ಗೃಹಂ ॥ ೨೮ ॥

೨೪-೨೬. ಅದನ್ನು ಕೇಳಿ ಆ ಮುನಿಯು ಕಣ್ಣುಗಳನ್ನು ಬಿಟ್ಟುನೋಡಿದಾಗ ಶಂಖಚಕ್ರಗದೆಗಳನ್ನು ಕೈಯಲ್ಲಿ ಧರಿಸಿರುವವನೂ, ಪೀತಾಂಬರಧಾರಿಯೂ, ಗರುಡವನ್ನೇರಿದವನೂ, ತೇಜಸ್ವಿಯೂ, ದ್ವಾದಶಾದಿತ್ಯರಂತೆ ಕಾಂತಿಯುಳ್ಳವನೂ, ಆಕಾಶದಲ್ಲಿ ಸಹಸ್ರ ಸೂರ್ಯರು ಏಕಕಾಲದಲ್ಲಿ ಉದಿಸಿದರೆ ಹೇಗೋ ಹಾಗೆ ಹೊಳೆಯುವವನೂ, ಹಲವುಬಗೆಯಾಗಿ ವಿಭಾಗವಾಗಿದ್ದರೂ ಅಲ್ಲಿ ಒಂದೆಡೆಯಲ್ಲಿ ಸೇರಿರುವ ಸಮಸ್ತಜಗದ್ರೂಪನೂ ಆದ ಜನಾರ್ದನನನ್ನು ಆಶ್ಚರ್ಯದಿಂದ ಅರಳಿದ ಕಣ್ಣುಳ್ಳವನಾಗಿ ಸಂದರ್ಶಿಸಿದನು

೨೭-೨೮. ಮುನಿಯು ದೇವನಿಗೆ ತಲೆಬಾಗಿ ವಂದಿಸಿ, ಕೈಮುಗಿದುಕೊಂಡು ಹೇಳಿದನು.—"ಕೇಶವನೂ ದೇವನೂ ಆದ ನೀನು ಭಕ್ತನಾದ ನನಗೆ ವರವನ್ನು ಕೊಡುವವನಾಗಿದ್ದರೆ, ನಾಳೆ ತನ್ನಮನೆಗೆ ಹೋಗುವ (ದುರ್ಜಯ) ರಾಜನು ಸಬಲವಾಹನನಾಗಿ ನನ್ನ ಆಶ್ರಮದಲ್ಲಿ ಈಗಲೇ ಊಟಮಾಡುವಂತಾಗಲು ಅನುಗ್ರಹಿಸು".

ಇತ್ಯುಕ್ತೆಸ್ತಸ್ಯ ದೇವೇಶೋ ವದತಃ ಸಂಬಭೂವಹ |
ಚಿತ್ರಸಿದ್ಧಿಂ ದದೌತಸ್ಮೈ ಮಣಿಂ ಚ ಸುಮಹಾಪ್ರಭಂ || ೨೯ ||

ತಂ ದತ್ವಾಂತರ್ದಧೇ ದೇವಃ ಸಚ ಗೌರಮುಖೋ ಮುನಿಃ ।
ಜಗಾಮ ಚಾಶ್ರಮಂ ಪುಣ್ಯಂ ನಾನಾಋಷಿನಿಷೇವಿತಂ || ೩೦ ||

ತತ್ರ ಗತ್ವಾ ಸ ವಿಪ್ರೇಂದ್ರಶ್ಚಿಂತಯಾಮಾಸ ವೈ ಮುನಿಃ ।
ಹಿಮವಚ್ಛಿಖರಾಕಾರಂ ಮಹಾಭ್ರಮಿವ ಚೋನ್ನತಂ ||
ಶಶಾಂಕರಶ್ಮಿಸಂಕಾಶಂ ಗೃಹಂ ನೈಕಿಕಭೂಮಿಕಂ || ೩೧ ||

ತಾದೃಶಾನಾಂ ಸಹಸ್ರಾಣಿ ಲಕ್ಷಕೋಟ್ಯಶ್ಚ ಸರ್ವಶಃ ।
ಗೃಹಾಣಿ ನಿರ್ಮಮೇ ವಿಪ್ರೋ ವಿಷ್ಣೋರ್ಲಬ್ಧವರಸ್ತದಾ || ೩೨ ||

ಪ್ರಾಕಾರಾಣಿ ತಥೋಪಾಂತೇ ತಲ್ಲಗ್ನೋದ್ಯಾನಕಾನಿ ಚ ।
ಕೋಕಿಲಾಕುಲ ಘುಷ್ಟಾನಿ ನಾನಾದ್ವಿಜ ವರಾಣಿಚ || ೩೩ ||

---

೨೯. ಹೀಗೆ ಪ್ರಾರ್ಥಿತನಾದ ಆ ದೇವನು ಮಾತನಾಡುತ್ತಿದ್ದ ಆ ಮುನಿಗೆ ಒಲಿದು, ಚಿತ್ರಸಿದ್ಧಿಯನ್ನೂ ಉತ್ತಮವಾದ ಮಹಾಪ್ರಭೆಯುಳ್ಳ ಮಣಿಯೊಂದನ್ನೂ ಕೊಟ್ಟನು.

೩೦. ಅದನ್ನು ಕೊಟ್ಟು, ದೇವನು ಕಣ್ಮರೆಯಾದನು. ಆ ಗೌರಮುಖ ಮುನಿಯು ನಾನಾಋಷಿಗಳಿಂದ ಕೂಡಿದ ಪವಿತ್ರವಾದ ತನ್ನಆಶ್ರಮಕ್ಕೆ ಹೋದನು.

೩೧-೩೨. ವಿಷ್ಣುವಿನಿಂದ ವರವನ್ನು ಪಡೆದು ಬ್ರಾಹ್ಮಣೋತ್ತಮನಾದ ಆ ಮುನಿಯು ಅಲ್ಲಿಗೆ ಹೋಗಿ, ಚಿಂತಿಸಿ, ಹಿಮವತ್ಪರ್ವತ ಶಿಖರಾಕಾರವೂ ದೊಡ್ಡ ಮೋಡದಂತೆ ಉನ್ನತವೂ ಚಂದ್ರಕಾಂತಿಗೆ ಸಮಾನವಾದ ಕಾಂತಿಯುಳ್ಳದೂ, ನೂರು ಅಂತಸ್ತುಗಳುಳ್ಳದೂ ಆದ ಕೋಟಿ ಸಂಖ್ಯೆಯ ಮನೆಗಳನ್ನು ಎಲ್ಲೆಲ್ಲೂ ನಿರ್ಮಿಸಿದನು.

೩೩-೩೪. ಆ ಮನೆಗಳಿಗೆ ಪ್ರಾಕಾರಗಳೂ, ಸಮೀಪದಲ್ಲೇ ಅವಕ್ಕೆ ಸಂಬಂಧಿಸಿದಂತೆ ಗುಂಪುಕೂಡಿದ ಕೋಗಿಲೆಗಳ ದನಿಯುಳ್ಳವೂ, ಬಗೆ ಬಗೆಯ

ಚಂಪಕಾಶೋಕ ಪುನ್ನಾಗ ನಾಗಕೇಸರ ವಂತಿ ಚ ।
ನಾನಾಜಾತ್ಯಸ್ತಥಾ ವೃಕ್ಷಾ ಗೃಹೋದ್ಯಾನೇಷು ಸರ್ವಶಃ ॥ ೩೪ ॥

ಹಸ್ತಿನಾಂ ಹಸ್ತಿಶಾಲಾಶ್ಚ ತುರಗಾಣಾಂ ಚ ಮಂದುರಾಃ ।
ಚಕಾರ ಸಂಚಯಾನ್ವಿಪ್ರೋ ನಾನಾಭಕ್ಷ್ಯಸ್ಯ ಸರ್ವಶಃ ॥ ೩೫ ॥

ಭಕ್ಷ್ಯಂ ಭೋಜ್ಯಂ ತಥಾ ಲೇಹ್ಯಂ ಚೋಷ್ಯಂ ಬಹುವಿಧಂ ತಥಾ ।
ಚಕಾರಾನ್ನಾದ್ಯ ವಿಷಯಂ ಹೇಮಪಾತ್ರಾಣಿ ಸರ್ವತಃ ॥ ೩೬ ॥

ಏವಮುಕ್ತ್ವಾ ಸವಿಪ್ರಸ್ತು ರಾಜಾನಂ ಭೂರಿತೇಜಸಂ ।
ಉವಾಚ ಸರ್ವಸೈನ್ಯಾನಿ ಪ್ರವಿಶಂತು ಗೃಹಾನಿತಿ ॥ ೩೭ ॥

ಏವಮುಕ್ತಸ್ತತೋ ರಾಜಾ ತದ್ಗೃಹಂ ಪರ್ವತೋಪಮಂ ।
ಪ್ರವಿವೇಶಾಂತರೇಷ್ವನ್ಯೇ ಭೃತ್ಯಾ ವಿವಿಶುರಾಶು ವೈ ॥ ೩೮ ॥

ಒಳ್ಳೆಯ ಹಕ್ಕಿಗಳುಳ್ಳವೂ, ಸಂಪಗೆ, ಅಶೋಕ, ಪುನ್ನಾಗ, ನಾಗಕೇಸರಾದಿ ವೃಕ್ಷಗಳುಳ್ಳವೂ ಆದ ಉದ್ಯಾನವನಗಳೂ ಇದ್ದುವು.

೩೫. ಆನೆಗಳಿಗೆ (ಗಜ) ಶಾಲೆಗಳೂ ಕುದುರೆಗಳಿಗೆ ಲಾಯಗಳೂ ಇದ್ದುವು. ಆ ಬ್ರಾಹ್ಮಣನು ಎಲ್ಲೆಲ್ಲೂ ಬಗೆ ಬಗೆಯ ಭಕ್ಷ್ಯಗಳ ರಾಶಿಯನ್ನು ಸಿದ್ಧಪಡಿಸಿದನು.

೩೬. ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯ, ಪಾನೀಯಗಳೆಂಬ ಬಹುವಿಧದ ಆಹಾರ ಪದಾರ್ಥಗಳನ್ನೂ ಅನ್ನವೇ ಮೊದಲಾದುವನ್ನಿರಿಸಲೂ ಬಡಿಸಲೂ ಬೇಕಾದ ಚಿನ್ನದ ಪಾತ್ರೆಗಳನ್ನೂ ಎಲ್ಲೆಲ್ಲೂ ಏರ್ಪಡಿಸಿದನು.

೩೭. ಹೀಗೆ ಸಿದ್ಧಪಡಿಸಿದ ಆ ಬ್ರಾಹ್ಮಣನು ಬಹು ತೇಜಸ್ವಿಯಾದ ರಾಜನನ್ನು ಕುರಿತು "ಸೈನ್ಯಗಳೆಲ್ಲವೂ ಮನೆಗಳೊಳಕ್ಕೆ ಹೋಗಲಿ" ಎಂದು ಹೇಳಿದನು.

೩೮. ಹೀಗೆ ಹೇಳಿಸಿಕೊಂಡ ದೊರೆಯು, ಪರ್ವತದಂತೆ ಉನ್ನತವಾದ ಉತ್ತಮ ಗೃಹವನ್ನು ಪ್ರವೇಶಿಸಿದನು. ಬೇರೆಯವುಗಳಲ್ಲಿ ಪರಿವಾರದವರು ಬೇಗನೆ ಹೋಗಿ ಸೇರಿದರು.

ತತಸ್ತೇಷು ಪ್ರವಿಷ್ಟೇಷು ತದಾ ಗೌರಮುಖೋ ಮುನಿಃ ।
ಪ್ರಗೃಹ್ಯ ತಂ ಮಣಿಂ ದಿವ್ಯಂ ರಾಜಾನಂ ಚೇದಮಬ್ರವೀತ್ ॥ ೩೯ ॥

ಮಜ್ಜನಾಭ್ಯವಹಾರಾರ್ಥಂ ಪಥಿಪ್ರಕ್ರಾಮತೇ ತಥಾ ।
ವಿಲಾಸಿನೀಸ್ತ್ರಥಾ ದಾಸಾನ್ಪ್ರೇಷಯಿಷ್ಯಾಮಿ ತೇ ನೃಪ ॥ ೪೦ ॥

ಏವಮುಕ್ತ್ವಾ ಸವಿಪ್ರೇಂದ್ರಸ್ತಂ ಮಣಿಂ ವೈಷ್ಣವಂ ತದಾ ।
ಏಕಾಂತೇ ಸ್ಥಾಪಯಾಮಾಸ ರಾಜ್ಞಸ್ತಸ್ಯ ಪ್ರಪಶ್ಯತಃ ॥ ೪೧ ॥

ತಸ್ಮಿನ್ಸ್ಥಾಪಿತಮಾತ್ರೇತು ಮಣೌ ಶುದ್ಧಸಮಪ್ರಭೇ ।
ನಿಶ್ಚೇರುಯೋಷಿತಸ್ತತ್ರ ದಿವ್ಯರೂಪಾಃ ಸಹಸ್ರಶಃ ॥ ೪೨ ॥

*ಸುಕುಮಾರಾಂಗರಾಗಾಢ್ಯಾಃ ಸುಕುಮಾರಾ ವರಾಂಗನಾಃ ।
ಸುಕಪೋಲಾಃ ಸುಚಾರ್ವಂಗ್ಯಃ ಸುಕೇಶಾಂತಾಃ ಸುಲೋಚನಾಃ ॥ ೪೩ ॥

---

೩೯. ಅವರೆಲ್ಲರೂ ಮನೆಯನ್ನು ಸೇರಿದ ಬಳಿಕ ಗೌರಮುಖಮುನಿಯು ಆ ದಿವ್ಯಮಣಿಯನ್ನು ತೆಗೆದುಕೊಂಡು ದೊರೆಯನ್ನು ಕುರಿತು ಹೇಳಿದನು.

೪೦. "ರಾಜನೇ, ಸ್ನಾನಭೋಜನಗಳಿಗೆ ಹೊರಡುವ ನಿನಗೆ ಉಪಚಾರಮಾಡಲು ವಿಲಾಸಿನಿಯರನ್ನೂ ಸೇವಕರನ್ನೂ ಕಳುಹಿಸುತ್ತೇನೆ".

೪೧. ಹೀಗೆ ಹೇಳಿ, ವಿಷ್ಣುವು ದಯೆಪಾಲಿಸಿದ ಆ ಮಣಿಯನ್ನು ರಾಜನು ನೋಡುತ್ತಿರುವ ಹಾಗೆಯೇ ಏಕಾಂತದಲ್ಲಿ ಇಟ್ಟನು.

೪೨. ಶುದ್ಧವಾದ ಸಮಕಾಂತಿಯುಳ್ಳ ಆ ಮಣಿಯನ್ನು ಇಟ್ಟೊಡನೆ ಅದರಿಂದ ದಿವ್ಯರೂಪವುಳ್ಳ ಸ್ತ್ರೀಯರು ಸಾವಿರಗಟ್ಟಲೆಯಾಗಿ ಹೊರಟರು.

೪೩–೪೪. ಕೋಮಲವಾದ *ಅಂಗರಾಗಗಳುಳ್ಳ ಕೋಮಲೆಯರಾದ ಉತ್ತಮಾಂಗನೆಯರೂ, ಸುಕಪೋಲಗಳುಳ್ಳವರೂ, ಅತಿಕಾಂತಿವಂತೆಯರೂ, ಮನೋಹರವಾದ ತಲೆಕೂದಲುಗಳುಳ್ಳವರೂ ಸುಲೋಚನೆಯರೂ ಆದ

---

* ಅಂಗರಾಗ=ಗಂಧ, ಕೆಂಪುಬಣ್ಣದ ಸುವಾಸನೆಯ ಪುಡಿ ಮೊದಲಾದುವು.

ಕಾಶ್ಚಿತ್ಸೌವರ್ಣಪಾತ್ರಾಣಿ ಗೃಹೀತ್ವಾ ಸಂಪ್ರತಸ್ಥಿರೇ ।
ಏವಂ ಯೋಷಿದ್ಗಣಾಸ್ತತ್ರ ನರಾಃ ಕರ್ಮಕರಾಸ್ತಥಾ ॥ ೪೪ ॥

ನಿರ್ಜಗ್ಮುಸ್ತಸ್ಯ ನೃಪತೇಃ ಸರ್ವೇ ಭೃತ್ಯಾ ನೃಪಸ್ಯಹ ।
ಕೇವಲಂ ಭೋಜನಂ ಪೂರ್ವಂ ಪರಿಧಾನಂ ಚ ಸರ್ವಶಃ ॥ ೪೫ ॥

ತಾಃ ಸ್ತ್ರಿಯಃ ಸರ್ವಭೃತ್ಯಾನಾಂ ರಾಜಮಾರ್ಗೇಣ ಮಜ್ಜನಂ ।
ದದೃಶುಸ್ತೇ ನರಾಸ್ತಾಸಾಂ ಹಸ್ತಿನಾಂ ಚಾರುಗಾಮಿನಾಂ ॥ ೪೬ ॥

ನಾನಾವಿಧಾನಿ ತೂರ್ಯಾಣಿ ತತ್ರ ನಾದ್ಯಂತ ಸರ್ವಶಃ ।
ಮಜ್ಜತೋ ನೃಪತೇಸ್ತಸ್ಯ ನನೃತುಶ್ಚಾನ್ಯಯೋಷಿತಃ ॥ ೪೭ ॥

ಅಪರಾಶ್ಚ ಜಗುಸ್ತತ್ರ ಶಕ್ರಸ್ಯೇವ ಪ್ರಮಜ್ಜತಃ ।
ಏವಂ ದಿವ್ಯೋಪಚಾರೇಣ ಸ್ನಾತ್ವಾ ರಾಜಾ ಮಹಾಮನಾಃ ॥ ೪೮ ॥

ಆ ವನಿತೆಯರಲ್ಲಿ ಕೆಲವರು ಚಿನ್ನದ ಪಾತ್ರೆಗಳನ್ನು ತೆಗೆದುಕೊಂಡು ರಾಜಸೇವೆಗಾಗಿ ಹೊರಟರು. ಆ ಸ್ತ್ರೀಯರ ಗುಂಪುಗಳಲ್ಲದೆ ಕೆಲಸಮಾಡುವ ಪುರುಷರೂ ಹಲವರಿದ್ದರು.

೪೫. ಆ ರಾಜನ ಸೇವಕರೆಲ್ಲರೂ ಸ್ನಾನಭೋಜನಗಳಿಗೆ ಹೊರಟರು. ಮೊದಲು ಊಟದ ಪದಾರ್ಥಗಳೂ ಬಳಿಕ ಎಲ್ಲೆಲ್ಲಾ ಉಡಿಗೆಗಳೂ ಸಿದ್ಧವಾಗಿದ್ದುವು.

೪೬. ಬಳಿಕ ಆ ಹೆಂಗಸರು ರಾಜಸೇವಕರಿಗೆಲ್ಲರಿಗೂ ರಾಜಮಾರ್ಗದಿಂದ ಸ್ನಾನಮಾಡಿಸಿದರು. ಅಂದವಾದ ನಡೆಯುಳ್ಳ ಆನೆಗಳ ಉಪಚಾರವನ್ನು ಗಂಡಾಳುಗಳು ನೋಡಿಕೊಂಡರು.

೪೭. ಬಗೆ ಬಗೆಯ ವಾದ್ಯಗಳು ಅಲ್ಲಿ ಎಲ್ಲೆಲ್ಲಿಯೂ ದನಿಗೈದುವು ರಾಜನು ಸ್ನಾನಮಾಡುತ್ತಿರಲು ಕೆಲವರು ವನಿತೆಯರು ನರ್ತನಮಾಡಿದರು.

೪೮-೪೯. ಮತ್ತೆ ಕೆಲವರು ಇಂದ್ರನ ಸ್ನಾನಕಾಲದಲ್ಲಿ ಹಾಡುವಂತೆ ಹಾಡಿದರು. ಉದಾರಮನನಾದ ಆ ರಾಜನು ಹೀಗೆ ದಿವ್ಯೋಪಚಾರದಿಂದ

ಚಿಂತಯಾಮಾಸ ರಾಜೇಂದ್ರೋ ವಿಸ್ಮಯಾವಿಷ್ಟಚೇತನಃ ।
ಕಿಮಿದಂ ಮುನಿಸಾಮರ್ಥ್ಯಾತ್ತಪಸೋಽಥ ವಾ ಮಣೇಃ ॥ ೪೯ ॥

ಏವಂ ಸ್ನಾತ್ವೋತ್ತಮೇ ವಸ್ತ್ರೇ ಪರಿಧಾಯ ನೃಪಸ್ತಥಾ ।
ವಿವಿಧಾನ್ನಂತು ವಿಧಿನಾ ಬುಭುಜೇ ಸ ನೃಪೋತ್ತಮಃ ॥ ೫೦ ॥

ಯಥಾ ಚ ನೃಪತೇಃ ಪೂಜಾ ಕೃತಾ ತೇನ ಮಹರ್ಷಿಣಾ ।
ತದ್ವದ್ಭೃತ್ಯಜನಸ್ಯಾಪಿ ಚಕಾರ ಮುನಿಸತ್ತಮಃ ॥ ೫೧ ॥

ಯಾವತ್ಸರಾಜಾ ಬುಭುಜೇ ಸಭೃತ್ಯಬಲವಾಹನಃ ।
ತಾವದಸ್ತಗಿರಿಂ ಭಾನುಃ ಜಗಾಮಾರುಣಸಪ್ರಭಃ ॥ ೫೨ ॥

ತತಸ್ತು ರಾತ್ರಿಃ ಸಮುಪದ್ಯತಾಧುನಾ
ಶರಚ್ಛಶಾಂಕೋಜ್ವಲಲಕ್ಷ್ಮಮಂಡಿತಾ ।
ಕರೋತಿ ರಾಗಂ ಸಚ ರೋಹಿಣೀಧವಃ
ಸುಸಂಗತಂ ಸೌಮ್ಯಗುಣೈರ್ಯುತೋಽಪಿಚ ॥ ೫೩ ॥

ಮಿಂದು, ಅಚ್ಚರಿಗೊಂಡ ಮನವುಳ್ಳವನಾಗಿ, "ಇದೇನು ಮುನಿಯ ಶಕ್ತಿಯೋ, ತಪಶ್ಶಕ್ತಿಯೋ ಅದಿಲ್ಲದಿದ್ದರೆ ಮಣಿಯಶಕ್ತಿಯೋ!" ಎಂದು ಆಲೋಚಿಸಿದನು.

೫೦. ಆ ರಾಜೋತ್ತಮನು ಹೀಗೆ ಆಲೋಚಿಸುತ್ತ ಮಿಂದು, ಮೇಲಾದ ಬಟ್ಟೆಗಳನ್ನುಟ್ಟು ಹೊದೆದು, ಬಗೆ ಬಗೆಯ ಅನ್ನವನ್ನು ಕ್ರಮವರಿತು ಊಟಮಾಡಿದನು.

೫೧. ಆ ಮಹರ್ಷಿಯು ರಾಜನಿಗೆ ಸತ್ಕಾರಮಾಡಿದಂತೆಯೇ ಅವನ ಸೇವಕರಿಗೂ ಮಾಡಿದನು.

೫೨. ಸೇವಕಸೈನ್ಯವಾಹನಸಮೇತನಾದ ಆ ದೊರೆಯು ಊಟಮಾಡುತ್ತಲೂ, ಸೂರ್ಯನು ಕೆಂಪಗೆ ಹೊಳೆಯುತ್ತ ಅಸ್ತಗಿರಿಯನ್ನೈದಿದನು.

೫೩. ಆಮೇಲೆ ಶರತ್ಕಾಲದ ಚಂದ್ರನ ಹೊಳೆಯುವ ಲಾಂಛನದಿಂದೊಪ್ಪುವ ರಾತ್ರಿಯು ಒದಗಿತು. ರೋಹಿಣೀರಮಣನಾದ ಆ ಚಂದ್ರನು ಸೌಮ್ಯಗುಣ ಯುತನಾಗಿದ್ದೂ ಹೃದಯಂಗಮವಾದ (ಅನು) ರಾಗವನ್ನುಂಟು ಮಾಡುತ್ತಿದ್ದನು.

ಭೃಗೂದ್ವಹಃ ÷ಕೃಷ್ಣತರಾಂಕ ಭಾನುನಾ ।
ಸಹೋದ್ಯತೋ ದೈತ್ಯಗುರುಃ +ಸುರಾಧಿಕಃ ।
ಅಥಾನ್ಯಥಾಪಕ್ಷಗತೋ ನ ರಾಜತೇ
ಸ್ವಭಾವ ಯೋಗೇನ ಗತಿ(ಮತಿ)ಸ್ತು ದೇಹಿನಾಂ ॥ ೫೪ ॥

ಸುರಕ್ತತಾಂ ಭೂಮಿಸುತೋ ನ ಮುಂಚತೇ
*ಸಹೋಷಿತಶ್ಚಂದ್ರಮಸೋಂಶುಭಿಃ ಸಿತೈಃ ।
(ರಾಹುಃ ಸಿತಂ ಚಂದ್ರಮಸೋಂಶವಃ ಸಿತಾಃ ॥)
*ಯುಕ್ತಸ್ವಭಾವಾ ಭುವನೇಸುರಾಸುರಾ
(ಯುಕ್ತಿಃ ಸ್ವಭಾವೋ ಜಗತಃ ಸುರಾ ಸುರೈಃ)
*ನರಸ್ವಭಾವೋ ಬಲವಾನಕೃತ್ರಿಮಃ
(ನನುಸ್ವಭಾವೋ ಬಲವೀರ್ಯಕೃನ್ನೃಪಃ) ॥ ೫೫ ॥

---

೫೪. ದೇವತೆಗಳಲ್ಲಿ ಶ್ರೇಷ್ಠನಾದ ಶುಕ್ರನು ನಿಷ್ಕಳಂಕನಾಗಿದ್ದರೂ ದೈತ್ಯ ಗುರುವಾಗಿ ಬೇರೆಯ ಪಕ್ಷಕ್ಕೆ ಸೇರಿದುದರಿಂದ ಬಹಳ ಕಪ್ಪಾದ ಮಚ್ಚೆಯಿಂದ ಕೂಡಿ, ಕಳಂಕಿತನಾದ ಚಂದ್ರನೊಡನೆ ಉದಿಸಿಯೂ ಆ ಚಂದ್ರನಷ್ಟು ಪ್ರಕಾಶಿಸುತ್ತಿರಲಿಲ್ಲ. ಲೋಕದಲ್ಲಿ ದೇಹಿಗಳಿಗೆ ಸಹವಾಸದಂತೆ(ಗತಿ)ಮತಿ ಯುಂಟಾಗುವುದು.

೫೫. ಭೂಪುತ್ರನಾದ ಕುಜ(ಮಂಗಳ)ನು, ಬೆಳ್ಳಗಿರುವ ಚಂದ್ರಕಿರಣಗಳ ಜತೆಯಲ್ಲೇ ಇರುತ್ತಿದ್ದರೂ ತನ್ನ ಸುರಕ್ತತೆ (ಹೆಚ್ಚುಕೆಂಪಾಗಿರುವಿಕೆ) ಯನ್ನು ಬಿಡಲಿಲ್ಲ. ಲೋಕದಲ್ಲಿ ಸುರರೂ ಅಸುರರೂ ನರರೂ ನಿಯತವಾದ ಸ್ವಭಾವವುಳ್ಳವರು. ಅಕೃತ್ರಿಮವಾದ ಸ್ವಭಾವವು ಬಲವುಳ್ಳುದಲ್ಲವೆ !

÷ ಕೃಷ್ಣತರಾಂಶು. + ಸುರಾಧಿಪಃ.

* ಈ ಅಧ್ಯಾಯದ ೫೪ ರಿಂದ ೬೩ ರ ವರೆಗಿನ ಶ್ಲೋಕಗಳು ಅಶುದ್ಧಗಳೂ ಅನನ್ವಿತಗಳೂ ಆಗಿ (ಬೊಂ. ಕ.) ಮುದ್ರಿತ ಪುಸ್ತಕಗಳಲ್ಲಿವೆ. ಮೈಸೂರು ಓರಿಯಂಟಲ್ ಲೈಬ್ರೆರಿಯಲ್ಲಿ ದೊರೆತ ತಾಳಪ್ರತಿಯನ್ನು ನೋಡಿಯೂ, ಸ್ವತಂತ್ರವಾಗಿಯೂ ತಿದ್ದಿ ಅನುವಾದವನ್ನು ಬರೆದಿದೆ.
* ಈ ಚಿಹ್ನೆಯಿಂದ ಅಂಕಿತವಾದುದು ತಿದ್ದಿ ಆವರಣ ಚಿಹ್ನೆಯೊಳಗಿನ ಭಾಗಕ್ಕೆ ಬದಲಾಗಿ ಬರೆದಿರುವುದಾಗಿದೆ.

ರಾತ್ರೀಶ್ವರಾಖ್ಯಾಪಿತರಶ್ಮಿಮಂಡಲೇ
ಸೂರ್ಯಾಗ್ರಸಿದ್ಧಾಂತಕಥೇವ ನಿರ್ಮಲೇ ।
ಕರೋತಿ ರಾಹುರ್ನಪರೋ ಮಹತ್ತಮಃ
ಸದಾಕುಶೀಲೇಷು ಗತಿಶ್ಚ ನಿರ್ಮಲಾ ॥ ೫೬ ॥

ಬುಧೋವಬೋಧಂ ಜಗತೋ ವಿಭಾವಯ
ನ್ರಾಜ ರಾಜ್ಞಸ್ತನಯಃ ಸ್ವರಶ್ಮಿಭಿಃ ।
ಭೃತೀಚ್ಛುಕಃ ಕಕ್ಷವಿವಾಹಿತಶ್ಚಿರಾ
ದ್ಭವೇದಯಂ ಸಾಧುಷು ಸನ್ಮತೇರ್ಧ್ರುವಂ ॥ ೫೭ ॥

ಕರೋತಿ ಕೇತುಃ ಕಪಿಲಂ ವಿಯಚ್ಚಿರಂ ।
ರಾಜ್ಞಃ ಸುರಾಣಾಂ ಪಥಿಸಂಸ್ಥಿತೋ ಭೃಶಂ ।
ನದುರ್ಜನಃ ಸಜ್ಜನಸಂಸದಿ ಕ್ವಚಿತ್ ।
ಕರೋತಿ ಶುದ್ಧಂ ನಿಜಕರ್ಮಕೌಶಲಂ ॥ ೫೮ ॥

---

೫೬. ಸೂರ್ಯಾಗ್ರಸಿದ್ಧಾಂತ ಕಥೆಯಂತೆ ನಿರ್ಮಲವೂ ಪ್ರಸಿದ್ಧವೂ ಆದ ಚಂದ್ರಕಿರಣಗಳ ಸಮೂಹದಲ್ಲೇ ಇದ್ದರೂ ವೈರಿಯಾದ ರಾಹುವು ತನ್ನ ಮಹಾತಮಸ್ಸ್ವಭಾವವನ್ನು ತೋರಿಸುತ್ತಲೇ ಇದ್ದನು. ದುಶ್ಶೀಲರಗತಿಯು (ನಡೆಯು) ಎಂದೂ ನಿರ್ಮಲವಾದುದಲ್ಲ.

೫೭. ಚಂದ್ರಸುತನಾದ ಬುಧನು ತನ್ನ ಕಿರಣಗಳಿಂದ ಲೋಕಕ್ಕೆ ಜ್ಞಾನವನ್ನುಂಟುಮಾಡುತ್ತ ಹೊಳೆಯುತ್ತಿದ್ದನು. ಒಳ್ಳೆಯ ಬುದ್ಧಿಯುಳ್ಳವನು ಸಾಧುಗಳೊಡನೆ ಸೇರಿದರೆ ಹೀಗಾಗುವುದು ಸ್ವಭಾವವಾಗಿದೆ.

೫೮. ಕೇತುವು ತಾನು ದೇವತೆಗಳ ರಾಜನ ಮಾರ್ಗದಲ್ಲಿ ಬಹುಕಾಲವಿದ್ದರೂ ತನ್ನ ಮುಸುಕಾದಕಾಂತಿಯಿಂದ ಆಕಾಶವನ್ನು ಹೆಚ್ಚಾಗಿ ಕಪಿಲವರ್ಣವುಳ್ಳದನ್ನಾಗಿ ಮಾಡುತ್ತಿದ್ದನು. ಲೋಕದಲ್ಲಿ ದುಷ್ಟನು, ಸಜ್ಜನರ ಗುಂಪಿನಲ್ಲಿ ಸೇರಿದರೂ ತನ್ನ ಕಾರ್ಯಕುಶಲತೆಯನ್ನು ಪರಿಶುದ್ಧವಾದುದನ್ನಾಗಿ ಮಾಡಿಕೊಳ್ಳುವುದಿಲ್ಲ.

ಶಶಾಂಕರಶ್ಮಿಪ್ರತಿಭಾಸಿತಾ ಅಪಿ ।
ಪ್ರಕಾಶಮೀಯುರ್ನಿತರಾಂ ಪದೇಪದೇ ।
ಸತ್ಸಂಗತಾಃ ಸಪ್ತ ಸ ಧರ್ಮಪತ್ನ್ಯೋ ।
ಮಹತ್ಪ್ರಯೋಗಾನ್ಮಹತಃ ಸಮುನ್ನತಿಃ ॥ ೫೯ ॥

ತ್ರಿದೋಷ ಸಂಕ್ರಾಂತಿ ಕೃತೋಸ್ಯ ಸರ್ವಶಃ ।
ಸುತೇನ ರಾಜ್ಞೋ ವರುಣಸ್ಯ ಸೂರ್ಯಜಾಃ । ?
ಚಿರಂಜಿತಾ ಕೌಶಿಕ ಸನ್ನಿವೇಶಿತಾ ।
ನ ವೇದಕರ್ಮಕ್ವಚಿದನ್ಯಥಾ ಭವೇತ್ ॥ ೬೦ ॥

*ಸುಧೀಃ ಸ್ವಮಾತ್ರಾನುಮತಃ ಶಿಶುಃ ಪುರಾ ।
(ದ್ವಂದ್ವಾಃ ಸಮೇತಾ ಮುನಯಃ ಶಿಶುಃ ಪುರಾ ।)
ಹರಿಂ ಯ ಆರಾಧಿತವಾನ್ನೃಪಾಸನಂ ।
ಲಭಾಮಿ ಬುದ್ಧ್ಯಾ ಸಚಿರಂ ಪ್ರಕಾಶತೇ
ಧ್ರುವೋ ಹಿ ವಿಷ್ಣುಸ್ಮರಣೇ ನ ದುರ್ಲಭಂ ॥ ೬೧ ॥

೫೯-೬೦. ಚಂದ್ರನಕಾಂತಿಯು ತಮಗಿಂತ ಅಧಿಕವಾಗಿ ಹೊಳೆಯು ತ್ತಿದ್ದರೂ ಸತ್ಸಹವಾಸವುಳ್ಳ ಸಪ್ತರ್ಷಿಗಳು ತಮ್ಮ ಧರ್ಮಪತ್ನಿಯರೊಡನೆ (ಆಕಾಶ ದಲ್ಲಿ) ಅಡಿಗಡಿಗೆ ಹೆಚ್ಚಾಗಿ ಪ್ರಕಾಶಿಸುತ್ತಲೇ ಇದ್ದರು. ಅದು ಯುಕ್ತವಾದುದೇ ಸರಿ. ಮಹಾತ್ಮರ ಜತೆಯಲ್ಲಿ ಸೇರುವುದರಿಂದ ಮಹಾತ್ಮರಿಗೆ ಮತ್ತಷ್ಟು ಮೇಲ್ಮೆಯೇ ಉಂಟಾಗುವುದಲ್ಲವೆ ! ವೇದಕರ್ಮವು ಎಂದಿಗೂ ಕೆಟ್ಟಿದಲ್ಲ. ವಿರೋಧವಾಗು ವುದಿಲ್ಲ.

೬೧. ಸುಬುದ್ಧಿಯುಳ್ಳವನೂ ತಾಯ ಅನುಮತಿಯನ್ನು ಪಡೆದವನೂ ಆದ ಯಾವಶಿಶುವು (ಧ್ರುವನು), ತನ್ನತಂದೆಯ ಸಿಂಹಾಸನವನ್ನು ಪಡೆಯ ಬೇಕೆಂದು ಹರಿಯನ್ನು ಪೂಜಿಸಿದನೋ ಆ ಧ್ರುವನು (ಆಕಾಶದಲ್ಲಿ) ಶಾಶ್ವತನಾಗಿ ಹೊಳೆಯುತ್ತಿರುವನು. ವಿಷ್ಣು ಸ್ಮರಣೆಯಿಂದ ದುರ್ಲಭವಾದುದು ಯಾವುದು ತಾನೆ ಇರುವುದು !

---

* ಈ ಚಿಹ್ನೆಯಿಂದ ಅಂಕಿತವಾದುದು ಆವರಣ ಚಿಹ್ನೆಯೊಳಗಿನ ಭಾಗಕ್ಕೆ ಬದಲಾಗಿ ಬರೆದಿರುವುದಾಗಿದೆ.

ಇತೀವ ಸಾ ರಾತ್ರಿರಭೂನ್ಮುನೇಃ ಶುಭೇ
ವರಾಶ್ರಮೇ ದುರ್ಜಯಭೂಪತೇಃ ಶುಭಾ ।
ಸುಭೃತ್ಯವರ್ಗಃ ಸ ಗಜಾಶ್ವವಂದಿನಾಂ
ಸುಭಕ್ತವಸ್ತ್ರಾಭರಣಾದಿಪೂಜಯಾ ॥ ೬೨ ॥

ಇತೀದೃಶೋ ಯೇ ವರರತ್ನಚಿತ್ರಿತಾಃ
ಸುಪಟ್ಟಸಂವೀತವರಾನ್ವಿತಾಃ ಸದಾ ।
ಗೃಹೇಷು ಪರ್ಯಂಕವರಾಃ ಸಮಾಸ್ಥಿತಾಃ
ಸುರೂಪಯೋಷಿದ್ಗಣಸಂಗಭಾಸುರಾಃ ॥ ೬೩ ॥

ಸ ತತ್ರ ರಾಜಾ ವಿಸಸರ್ಜ ಭೂಭೃತಃ
ಸ್ವಯಂ ಸುಭೃತ್ಯಾನಪಿ ಸರ್ವತೋ ಗೃಹಂ ।
ಗತೇಷು ಸುಷ್ವಾಪ ವರಸ್ತ್ರಿಯಾವೃತಃ
ಸುರೇಶವತ್ಸ್ವರ್ಗ ಇವ ಪ್ರತಾಪವಾನ್ ॥ ೬೪ ॥

---

೬೨. ಹೀಗೆ ಆಗೌರಮುಖಮುನಿಯ ಶುಭಕರವಾದ ಆಶ್ರಮದಲ್ಲಿ ಒಳ್ಳೆಯ ಸೇವಕವರ್ಗದಿಂದಲೂ ಆನೆ ಕುದುರೆ ಮೊದಲಾದುವುಗಳಿಂದಲೂ ಸಹಿತನಾದ ಆ ದುರ್ಜಯರಾಜನಿಗೆ ಮೃಷ್ಟಾನ್ನವಸ್ತ್ರಾಭರಣಾದಿಗಳಿಂದ ಆಋಷಿಯು ಮಾಡಿದ ಪೂಜೆಯಿಂದ ಆ ರಾತ್ರಿಯು ಶುಭವಾಗಿದ್ದಿತು.

೬೩. ಸಪರಿವಾರನಾದ ಆದುರ್ಜಯರಾಜನಿಗೆ ಮುನಿಯು ಏರ್ಪಡಿಸಿದ ಮನೆಗಳಲ್ಲಿ ದಿವ್ಯವಾದ ಮಂಚಗಳು ಉತ್ತಮವಾದ ರತ್ನಗಳಿಂದ ಅಲಂಕೃತಗಳಾಗಿಯೂ ಒಳ್ಳೆಯಪಟ್ಟೆಯವಸ್ತ್ರದ ತೆರೆಮರೆಗಳಿಂದ ಕೂಡಿದವುಗಳಾಗಿಯೂ ರೂಪವತಿಯರಾದ ಯುವತಿಯರಿಂದ ಮನೋಹರವಾದುವುಗಳಾಗಿಯೂ ಇದ್ದವು.

೬೪. ಆ ರಾಜನು (ಸಾಮಂತ) ರಾಜರನ್ನೂ ಸೇವಕರನ್ನೂ ತಾನೇ ಎಲ್ಲಾ ಮನೆಗಳಿಗೂ ಮಲಗಲು ಕಳುಹಿಸಿದನು. ಅವರೆಲ್ಲರೂ ಹೋಗಲಾಗಿ ತಾನು ಸ್ವರ್ಗದಲ್ಲಿರುವ ದೇವೇಂದ್ರನಂತೆ ಉತ್ತಮ ವನಿತೆಯರಿಂದ ಕೂಡಿದವನಾಗಿ ನಿದ್ದೆಗೈದನು.

ಏವಂ ಸುಮನಸಸ್ತಸ್ಯ ಸುಭೃತ್ಯಾಶ್ಚ ಮಹಾತ್ಮನಃ ।
ಋಷೇಸ್ತಸ್ಯ ಪ್ರಭಾವೇಣ ಹೃಷ್ಟಾಃ ಪ್ರಸುಷುಪುಸ್ತದಾ ॥ ೬೫ ॥

ತತೋ ರಾತ್ರ್ಯಾಂ ವ್ಯತೀತಾಯಾಂ ಸ ರಾಜಾ ತಾಃ ಪುನಃಸ್ತ್ರಿಯಃ ।
ಅಂತರ್ಧಾನಂ ಗತಾಸ್ತತ್ರ ದೃಷ್ಟ್ವಾ ತಾನಿ ಗೃಹಾಣಿ ವಾ ॥ ೬೬ ॥

ಅದೃಶ್ಯಾನಿ ಮಹಾಹರ್ಾಣಿ ವರಾಸನಗತಾನಿ ಚ ।
ಸ ರಾಜಾ ವಿಸ್ಮಯಾವಿಷ್ಟಃ ಚಿಂತಯಾಮಾಸ ದುಃಖಿತಃ ॥
ಕಥಮೇವಂ ಮಣಿರ್ಮಹ್ಯಂ ಭವತೀತಿ ಪುನಃ ಪುನಃ ॥ ೬೭ ॥

ಚಿಂತಯನ್ನಧಿಗಮ್ಯಾಥ ಸ ರಾಜಾ ದುರ್ಜಯಸ್ತದಾ ॥ ೬೮ ॥

ಚಿಂತಾಮಣಿಮಿಮಂಚಾಸ್ಯ ಹರಾಮೀತಿ ವಿಚಿಂತ್ಯ ಚ ।
ಪ್ರಯಾಣಂ ಚೋದಯಾಮಾಸ ಸರಾಜಾಶ್ರಮಬಾಹ್ಯತಃ ॥ ೬೯ ॥

---

೬೫. ಒಳ್ಳೆಯ ಮನಸ್ಸುಳ್ಳವನೂ ಮಹಾತ್ಮನೂ ಆದ ಆಋಷಿಯ ಮಹಿಮೆಯಿಂದ ಆರಾಜನ ಉತ್ತಮಸೇವಕರೂ ಆಗ ಸಂತೋಷಗೊಂಡು ಸುಖವಾಗಿ ನಿದ್ದೆಮಾಡಿದರು.

೬೬–೬೭. ಬಳಿಕ ರಾತ್ರಿಯು ಕಳೆಯಲು ಆದುರ್ಜಯರಾಜನು ಆಸ್ತ್ರೀಯರೂ, ಉತ್ತಮಾಸಗಳಿಂದ ಕೂಡಿದ ದಿವ್ಯಗೃಹಗಳೂ ಅದೃಶ್ಯವಾಗಿರುವುದನ್ನು ನೋಡಿ, ಆಶ್ಚರ್ಯದಿಂದಲೂ, ದುಃಖದಿಂದಲೂ ಕೂಡಿದವನಾಗಿ 'ಈ(ಬಗೆಯ) ಮಣಿಯು ಹೇಗೆ ನನಗೆ ದೊರಕೀತು" ಎಂಬುದಾಗಿ ಮತ್ತೆ ಮತ್ತೆ ಚಿಂತಿಸಿದನು.

೬೮–೬೯. ಹೀಗೆ ಮತ್ತೆ ಮತ್ತೆ ಚಿಂತಿಸಿ, ತಿಳಿದ ಆ ದುರ್ಜಯ ರಾಜನು (ಆಗ) "ಈ ಋಷಿಯ ಈ ಚಿಂತಾಮಣಿಯನ್ನು ಅಪಹರಿಸುತ್ತೇನೆ" ಎಂದು ಆಲೋಚಿಸಿ, ತನ್ನವರೆಲ್ಲರೂ ಆಶ್ರಮದ ಹೊರಕ್ಕೆ ಹೊರಡಬೇಕೆಂದು ಅಪ್ಪಣೆಮಾಡಿದನು.

ಆಶ್ರಮಸ್ಯ ಬಹಿರ್ಗತ್ವಾ ನಾತಿದೂರೇ ಸವಾಹನಃ ।
ತತೋ ವಿರೋಚನಾಖ್ಯಂ ಸ್ವೈ ಪ್ರೇಷಯಾಮಾಸ ಮಂತ್ರಿಣಂ ॥ ೭೦ ॥

ಋಷೇರ್ಗೌರಮುಖಸ್ಯಾಪಿ ಮಣೇರ್ಯಾಚನಕರ್ಮಣಿ ॥ ೭೧ ॥

ಋಷಿಂತಂ ಚ ಸಮಾಗತ್ಯ ಮಣಿಂ ಯಾಚಿತುಮುದ್ಯತಃ ।
ರತ್ನಾನಾಂ ಭಾಜನಂ ರಾಜಾ ಮಣಿಃ ತಸ್ಮೈ ಪ್ರದೀಯತಾಂ ॥
ಅಮಾತ್ಯೇನೈವಮುಕ್ತಸ್ತು ಕ್ರುದ್ಧೋ ಗೌರಮುಖೋಬ್ರವೀತ್ ॥ ೭೨ ॥

ಪ್ರತಿಗೃಹೀತಿ ವಿಪ್ರಸ್ತು ರಾಜಾ ಚೈವ ದದಾತಿ ಚ ।
ತ್ವಂಚ ರಾಜಾ ಪುನರ್ಭೂತ್ವಾ ಯಾಚಸೇ ದೀನವತ್ಕಥಂ ॥ ೭೩ ॥

ಏವಂ ಬ್ರೂಹಿ ದುರಾಚಾರಂ ರಾಜಾನಂ ದುರ್ಜಯಂ ಸ್ವಯಂ ।
ಗಚ್ಛ ದ್ರುತಂ ದುರಾಚಾರಂ ಮಾತ್ವಾಂ ಲೋಕೋತ್ಯಗಾದಿತಿ ॥ ೭೪ ॥

೭೦–೭೧. ವಾಹನಗಳೊಡನೆ ಆಶ್ರಮದ ಹೊರಗೆ ಸ್ವಲ್ಪದೂರ ಹೋಗಿ, ಬಳಿಕ (ಅಲ್ಲಿಂದ)ವಿರೋಚನನೆಂಬ ಹೆಸರುಳ್ಳ ತನ್ನ ಮಂತ್ರಿಯನ್ನು ಋಷಿಯಾದ ಆಗೌರಮುಖನ ಬಳಿಗೆ ಮಣಿಯನ್ನು ಬೇಡಲು ಕಳುಹಿಸಿದನು.

೭೨. ಅವನು ಋಷಿಯ ಬಳಿಗೆ ಬಂದು, ಮಣಿಯನ್ನು ಬೇಡಲು ಉದ್ಯುಕ್ತನಾಗಿ “ರತ್ನಗಳಿಗೆ ರಾಜನು ಅರ್ಹನು. ಆದುದರಿಂದ ಈ ಮಣಿಯನ್ನು ಅವನಿಗೆ ಕೊಡು” ಎಂದು ಹೇಳಿದನು. ಮಂತ್ರಿಯು ಹೀಗೆ ಹೇಳಲು ಕೋಪಗೊಂಡ ಆಗೌರಮುಖ ಮುನಿಯು ಮುಂದಿನಮಾತನ್ನು ಹೇಳಿದನು.

೭೩. “ಬ್ರಾಹ್ಮಣನು ತೆಗೆದುಕೊಳ್ಳತಕ್ಕವನು. ರಾಜನು ಕೊಡತಕ್ಕವನು. ನೀನು ರಾಜನಾಗಿದ್ದೂ ಬಡವನಂತೆ ಹೇಗೆ ಬೇಡುವೆ ?”

೭೪. ಎಂದು ಹೀಗೆ ದುರಾಚಾರನಾದ ಆ ದುರ್ಜಯ ರಾಜನಿಗೆ ನೀನೇ ಹೋಗಿ ಹೇಳು. ದುರ್ನಡತೆಯುಳ್ಳ ಅವನೆಡೆಗೆ ಬೇಗನೆ ಹೋಗು, ಲೋಕವು ನಿನ್ನನ್ನು ಮೀರದಿರಲಿ”

ಏವಮುಕ್ತಸ್ತದಾ ದೂತೋ ಜಗಾಮ ಚ ನೃಪಾಂತಿಕಂ |
ಕಥಯಾಮಾಸ ತತ್ಸರ್ವಂ ಯದುಕ್ತಂ ಬ್ರಾಹ್ಮಣೇನ ಚ || ೭೫ ||

ತತಃ ಕ್ರೋಧಪರೀತಾತ್ಮಾ ಶ್ರುತ್ವಾ ಬ್ರಾಹ್ಮಣಭಾಷಿತಂ |
ದುರ್ಜಯಃ ಪ್ರಾಹ ನೀಲಾಖ್ಯಂ ಸಾಮಂತಂ ಗಚ್ಛ ಮಾಚಿರಂ || ೭೬ ||

ಬ್ರಾಹ್ಮಣಸ್ಯ ಮಣಿಂ ಗೃಹ್ಯ ತೂರ್ಣಮೇಹಿ ಯದೃಚ್ಛಯಾ || ೭೭ ||

ಏವಮುಕ್ತಸ್ತದಾ ನೀಲೋ ಬಹುಸೇನಾ ಪರಿಚ್ಛದಃ |
ಜಗಾಮ ಸಚ ವಿಪ್ರಸ್ಯ ವನ್ಯಮಾಶ್ರಮಮಂಡಲಂ || ೭೮ ||

ತತ್ರಾಗ್ನಿಹೋತ್ರಶಾಲಾಯಾಂ ದೃಷ್ಟ್ವಾ ತಂ ಮಣಿಮಾಹಿತಂ |
ಉತ್ತೀರ್ಯ ಸ್ಯಂದನಾನ್ನೀಲಃ ಸೋವಾರೋಹತ ಭೂತಲೇ || ೭೯ ||

ಅವತೀರ್ಣೇ ತತಸ್ತಸ್ಮಿನ್ನೀಲೇ ಪರಮದಾರುಣೇ |
ಕ್ರೂರಬುದ್ಧ್ಯಾ ಮಣೇಸ್ತಸ್ಮಾನ್ನಿರ್ಜಗ್ಮುಃ ಶಸ್ತ್ರಪಾಣಯಃ || ೮೦ ||

---

೭೫. ಹೀಗೆ ಹೇಳಿಸಿಕೊಂಡ ಆ ದೂತನು ರಾಜನಬಳಿಗೆಹೋಗಿ, ಬ್ರಾಹ್ಮಣನು ಹೇಳಿದುದೆಲ್ಲವನ್ನೂ ಅವನಿಗೆ ತಿಳಿಸಿದನು.

೭೬-೭೭. ಬಳಿಕ ಬ್ರಾಹ್ಮಣನ ಮಾತನ್ನು ಕೇಳಿ, ಸಿಟ್ಟುಗೊಂಡ ದುರ್ಜಯನು ನೀಲನೆಂಬ ಹೆಸರುಳ್ಳ ಸಾಮಂತರಾಜನನ್ನು ಕುರಿತು ಹೇಳಿದನು "ಹೋಗು ತಡಮಾಡಬೇಡ, ನೀನು ಸ್ವೇಚ್ಛೆಯಿಂದ ಬ್ರಾಹ್ಮಣನ ಮಣಿಯನ್ನು ತೆಗೆದುಕೊಂಡು ಬೇಗನೆ ಬಾ".

೭೮. ಹೀಗೆ ಹೇಳಿಸಿಕೊಂಡ ಆ ನೀಲನು ಆಗ ಹೆಚ್ಚು ದಂಡಿನಿಂದ ಕೂಡಿದವನಾಗಿ ಕಾಡಿನಲ್ಲಿದ್ದ ಆ ಬ್ರಾಹ್ಮಣನ ಆಶ್ರಮದೆಡೆಗೆ ಹೋದನು.

೭೯. ಅಲ್ಲಿ ಅಗ್ನಿಹೋತ್ರ ಶಾಲೆಯಲ್ಲಿಟ್ಟಿದ್ದ ಆ ಮಣಿಯನ್ನು ನೋಡಿ, ನೀಲನು ರಥದಿಂದ ಭೂಮಿಗೆ ಇಳಿದನು.

೮೦. ಅತಿಭಯಂಕರನಾದ ಆ ನೀಲನು ಕ್ರೂರ ಬುದ್ಧಿಯಿಂದ ಅಲ್ಲಿಳಿಯಲು ಆ ಮಣಿಯಿಂದ ಆಯುಧಪಾಣಿಗಳು ಹೊರ ಹೊರಟರು.

ಸರಥಾಃ ಸಧ್ವಜಾಃ ಸಾಶ್ವಾಃ ಸವರ್ಣಾಃ ಸಾಸಿಚರ್ಮಿಣಃ ।
ಸಧನುಷ್ಕಾಃ ಸತೂಣೀರಾ ಯೋಧಾಃ ಪರಮದುರ್ಜಯಾಃ ॥ ೮೧ ॥

ನಿಶ್ಚೇರುಸ್ತಂ ಮಣಿಂ ಭಿತ್ವಾ ತ್ವಸಂಖ್ಯೇಯಾ ಮಹಾಬಲಾಃ ।
ತತ್ರಸಜ್ಞಾಮಹಾಶೂರಾ ದಶಪಂಚ ಚ ಸಂಖ್ಯಯಾ ॥ ೮೨ ॥

ನಾಮಭಿಸ್ತಾನ್ಮಹಾಭಾಗೇ ಕಥಯಾಮಿ ಶೃಣುಷ್ವ ತತ್ ।
ಸುಪ್ರಭೋ ದೀಪ್ತತೇಜಾಶ್ಚ ಸುರಶ್ಮಿಶ್ಶುಭದರ್ಶನಃ ॥ ೮೩ ॥

ಸುಕಾಂತಿಃ ಸುಂದರಃ ಸುಂದಃ ಪ್ರದ್ಯುಮ್ನಃ ಸುಮನಾಃ ಶುಭಃ ।
ಸುಶೀಲಃ ಸುಖದಃ ಶಂಭುಃ ಸುದಾಂತಃ ಸೋಮಏವಚ ॥
ಏತೇ ಪಂಚದಶ ಪ್ರೋಕ್ತಾ ನಾಯಕಾ ಉತ್ಥಿತಾ ಮಣೇಃ ॥ ೮೪ ॥

ತತೋ ವಿರೋಚನಂ ದೃಷ್ಟ್ವಾ ಬಹುಸೈನ್ಯ ಪರಿಷ್ಕೃತಂ ।
ಯೋಧಯಾಮಾಸುರವ್ಯಗ್ರಾ ವಿವಿಧಾಯುಧಪಾಣಯಃ ॥ ೮೫ ॥

೮೧-೮೨. ತೇರು, ಬಾವುಟ, ಕುದುರೆ, ಗುರಾಣಿ, ಕತ್ತಿ, ಬಿಲ್ಲು, ಬತ್ತಳಿಕೆಗಳಿಂದ ಕೂಡಿದ ಅತಿಬಲರೂ, ಪರಮದುರ್ಜಯರೂ ಆದ ಲೆಕ್ಕವಿಲ್ಲದಷ್ಟು ಜನ ಯೋಧರು ಆ ಮಣಿಯನ್ನು ಭೇದಿಸಿಕೊಂಡು ಹೊರಹೊರಟರು. ಅವರಲ್ಲಿ ಹದಿನೈದು ಮಂದಿ ಮಹಾಶೂರರಾದ ನಾಯಕರು ಸಿದ್ಧರಾಗಿದ್ದರು.

೮೩-೮೪. ಮಹಾಭಾಗೇ, ಅವರ ಹೆಸರನ್ನು ಹೇಳುತ್ತೇನೆ ಕೇಳು. ಸುಪ್ರಭ, ದೀಪ್ತತೇಜ, ಸುರಶ್ಮಿ, ಶುಭದರ್ಶನ, ಸುಕಾಂತಿ ಸುಂದರ, ಸುಂದ, ಸುದ್ಯುಮ್ನ, ಸುಮನ, ಶುಭ, ಸುಶೀಲ, ಸುಖದ, ಶಂಭು, ಸುದಾಂತ, ಸೋಮ ಎಂಬ ಈ ಹದಿನೈದು ಜನರೂ ಮಣಿಯಿಂದುದಿಸಿದ ನಾಯಕರೆನ್ನಿಸಿಕೊಳ್ಳುವರು.

೮೫. ಅವರು ಹೆಚ್ಚುದಂಡಿನಿಂದ ಕೂಡಿದ್ದ ವಿರೋಚನನನ್ನು ನೋಡಿ, ಆಯುಧಗಳನ್ನು ಹಿಡಿದು, ಉಲ್ಲಾಸವುಳ್ಳವರಾಗಿ, ಯುದ್ಧವನ್ನು ಮಾಡಿದರು.

ಧನೂಂಷಿ ತೇಷಾಂ ಕನಕಪ್ರಭಾಣಿ
ಶರಾನ್ಸುಜಾಂಬೂನದಪುಂಖನದ್ಧಾನ್ ।
ಪತಂತಿ ಖಡ್ಗಾನಿ ವಿಭೀಷಣಾನಿ
ಭುಶುಂಡಿಶೂಲಾಃ ಪರಮುಪ್ರಧಾನಾಃ || ೮೬ ||

ರಥೋರಥಂ ಸಂಪರಿವಾರ್ಯತಸ್ಥೌ
ಗಜೋಗಜಸ್ಯಾಪಿ ಹಯೋ ಹಯಸ್ಯ ।
ಪದಾತಿರತ್ಯುಗ್ರಪರಾಕ್ರಮಶ್ಚ
ಪದಾತಿನೇವ ಪ್ರಸಸಾರ ಚಾಗ್ರ್ಯಂ || ೮೭ ||

ದ್ವಂದ್ವಾನ್ಯನೇಕಾನಿ ತಥೈವ ಯುದ್ಧೇ
ದ್ರವಂತಿ ಶೂರಾಃ ಪರಿಭರ್ತ್ಸಯಂತಃ ।
ವಿಭೀಷಣಂ ನಿರ್ಗತಸಾಧುಮಾರ್ಗಂ
ಬಭೂವ ರಕ್ತಪ್ರಭವಂ ಸುಘೋರಂ । || ೮೮ ||

---

೮೬. ಚಿನ್ನದಂತೆ ಹೊಳೆಯುವ ಅವರ ಬಿಲ್ಲುಗಳು ಒಳ್ಳೆಯ ಚಿನ್ನದ ಗರಿಗಳಿಂದೊಪ್ಪುವ ಬಾಣಗಳನ್ನು ಸುರಿಸುತ್ತ ಇದ್ದುವು. ಭಯಂಕರವಾದ ಕತ್ತಿಗಳೂ, ಅತ್ಯುತ್ತಮವಾದ ಭುಶುಂಡಿ ಶೂಲಗಳೂ ವೇಗದಿಂದ (ಮೇಲೆ) ಬೀಳುತ್ತಿದ್ದುವು.

೮೭. ತೇರು ಪ್ರತಿಪಕ್ಷದ ತೇರನ್ನೂ, ಆನೆಯು ಆನೆಯನ್ನೂ, ಕುದುರೆಯು ಕುದುರೆಯನ್ನೂ, ಅತಿಪರಾಕ್ರಮಿಯಾದ ಕಾಲಾಳು ಮೇಲಾದ ಕಾಲಾಳನ್ನೂ, ಎದುರಿಸಿ, ನಿಂತು, ಯುದ್ಧಮಾಡಿತು.

೮೮. ಹಾಗೆಯೇ ಆ ಯುದ್ಧದಲ್ಲಿ ಕೆಲವು ಕದನಗಳು ನಡೆದವು. ಶೂರರು, ಎದುರುಗಡೆಯುವರನ್ನು ಬೆದರಿಸುತ್ತ, ಮುಂದುವರಿಯುತ್ತಿದ್ದರು. ಸಾಧುಮಾರ್ಗವನ್ನು ತ್ಯಜಿಸಿ, ರಕ್ತಪ್ರವಾಹಕ್ಕೆ ಕಾರಣವಾದ ಭಯಂಕರವಾದ ಘೋರಯುದ್ಧವಾಯಿತು.

ತಥಾ ಪ್ರವೃತ್ತೇ ತುಮುಲೇ ಚ ಯುದ್ಧೇ
ಹತಃ ಸರಾಜ್ಞಃ ಸಚಿವೋ ವಿಸಂಜ್ಞಃ ।
ಸಹಾನುಗಃ ಸರ್ವಬಲೈರುಪೇತೋ
ಜಗಾಮ ವೈವಸ್ವತಮಂದಿರಾಯ ॥ ೮೯ ॥

ತಸ್ಮಿನ್ ಹತೇ ದುರ್ಜಯರಾಜಮಂತ್ರಿಣಿ
ಉಪಾಯಯೌ ಸ್ವೇನ ಬಲೇನ ರಾಜಾ ।
ಸ ದುರ್ಜಯಃ ಸಾಶ್ವರಥೋತಿತೀವ್ರಃ
ಪ್ರತಾಪವಾಂಸ್ತೈರ್ಮಣಿಜೈರ್ಯಯೋಧ ॥ ೯೦ ॥

ತತಸ್ತಸ್ಮಿನ್ ಮಹಾರಾಜ್ಞೋ ಮಹತ್ಕದನಮಾಬಭೌ ।
ತತೋ ಹೇತೃಪ್ರಹೇತಾರೌ ಶ್ರುತ್ವಾ ಜಾಮಾತರಂ ರಣೇ ॥
ಯುದ್ಧ್ಯಮಾನಂ ಮಹಾಬಾಹುಂ ತತಶ್ಚಾನಿನ್ಯತುಶ್ಚಮೂಂ ॥ ೯೧ ॥

ತಸ್ಮಿನ್ಬಲೇ ಯೇ ದೈತೇಯಾಸ್ತಾಂಛೃಣುಷ್ವ ಧರೇರಿತಾನ್ ॥ ೯೨ ॥

---

೮೯. ಹಾಗೆ ಆದ ಆ ತುಮುಲಯುದ್ಧದಲ್ಲಿ ಆ ದುರ್ಜಯರಾಜನ ಮಂತ್ರಿಯು ಏಟುತಿಂದು, ಮೂರ್ಛೆಗೊಂಡು, ಎಲ್ಲಾ ಅನುಚರಸೈನಿಕರೊಡನೆ ಕಾಲನ ಮನೆಯನ್ನು ಸೇರಿದನು.

೯೦. ಮಂತ್ರಿಯು ಸಾಯಲು, ದುರ್ಜಯರಾಜನೇ ತನ್ನ ಸೇನೆಯೊಡನೆ ಕುದುರೆಯನ್ನು ಹೂಡಿ ಸಿದ್ಧವಾದ ರಥದಲ್ಲಿ ಅಲ್ಲಿಗೆ ಬಂದನು. ಪ್ರತಾಪಶಾಲಿಯಾದ ಅವನು ಬಹು ಕಠಿಣವಾಗಿ ಮಣಿಯಿಂದ ಉದಿಸಿದ ಆ ನಾಯಕರೊಡನೆ ಯುದ್ಧಮಾಡಿದನು.

೯೧. ಆಗ ಅಲ್ಲಿ ಆ ರಾಜನ ಮಹಾಯುದ್ಧವು ಪ್ರಕಾಶವಾಯಿತು. ಬಳಿಕ ಹೇತೃಪ್ರಹೇತೃಗಳು ಶೂರನಾದ ತಮ್ಮ ಅಳಿಯನು ಯುದ್ಧದಲ್ಲಿ ಹೋರಾಡುತ್ತಿರುವುದನ್ನು ಕೇಳಿ, ತಮ್ಮ ಸೈನ್ಯವನ್ನು (ಅಲ್ಲಿಗೆ) ತಂದರು.

೯೨. ಧರೆ, ಆ ಸೈನ್ಯದಲ್ಲಿ ಇದ್ದ ರಾಕ್ಷಸ ವೀರರನ್ನು ಹೇಳುತ್ತೇನೆ. ಕೇಳು.

ಪ್ರಘಸೋ ವಿಘಸಶ್ಚೈವ ಸಂಘಸೋಽಶನಿಸ ಪ್ರಭಃ ।
ವಿದ್ಯುತ್ಪ್ರಭಃ ಸುಘೋಷಶ್ಚ ಉನ್ಮತ್ತಾಕ್ಷೋ ಭಯಂಕರಃ || ೯೩ ||

ಅಗ್ನಿದತ್ತೋಽಗ್ನಿತೇಜಾಶ್ಚ ಬಾಹುಃ ಶಕ್ರಃ ಪ್ರತರ್ದನಃ ।
ವಿರೋಧೋ ಭೀಮಕರ್ಮಾಚ ವಿಪ್ರಚಿತ್ತಿಸ್ತಥೈವ ಚ || ೯೪ ||

ಏತೇ ಪಂಚದಶ ಶ್ರೇಷ್ಠಾಃ ಅಸುರಾಃ ಪರಮಾಯುಧಾಃ ।
ಅಕ್ಷೌಹಿಣೀಪರೀವಾರ ಏಕೈಕೋತ್ರ ಪೃಥಕ್ಪೃಥಕ್ || ೯೫ ||

ಮಹಾಮಾತ್ಯಾಸ್ತು ಸಮರೇ ದುರ್ಜಯಸ್ಯ ದುರಾತ್ಮನಃ ।
ಯುಯುಧುರ್ಮಣಿಜೈಃ ಸಾರ್ಧಂ ಮಹಾಸೈನ್ಯ ಪರಿಚ್ಛದಾಃ || ೯೬ ||

ತಂ ಸತೇಜಾಸ್ತ್ರಿಭಿರ್ಬಾಣೈಃ ವಿಘಸಂ ಸಂಪ್ರವಿಧ್ಯಚ ।
ಸಂಘಂ ಸ ದಶಭಿರ್ಬಾಣೈಃ ಸುರಶ್ಮಿಃ ಪ್ರತ್ಯವಿಧ್ಯತ || ೯೭ ||

ಅಶನಿಪ್ರಭಂ ರಣೇವಿಧ್ಯತ್ಪಂಚಭಿಃ ಶುಭದರ್ಶನಃ ।
ವಿದ್ಯುತ್ಪ್ರಭಂ ಸುಕಾಂತಿಸ್ತು ಸುಘೋಷಂ ಸುಂದರಸ್ತಥಾ || ೯೮ ||

೯೩-೯೪. ಪ್ರಘಸ, ವಿಘಸ, ಸಂಘಸ, ಅಶನಿಪ್ರಭ, ವಿದ್ಯುತ್ಪ್ರಭ, ಸುಘೋಷ, ಭಯಂಕರನಾದ ಉನ್ಮತ್ತಾಕ್ಷ, ಅಗ್ನಿದತ್ತ, (ವಾಯು) ಬಾಹು, ಶಕ್ರ, ಪ್ರತರ್ದನ, ವಿರೋಧ, ಭೀಮಕರ್ಮ, ವಿಪ್ರಚಿತ್ತಿ,

೯೫. ಈ ಹದಿನೈದು ಜನ ಶ್ರೇಷ್ಠರಾದ ರಾಕ್ಷಸರಲ್ಲಿ ಒಬ್ಬೊಬ್ಬನೂ ಬೇರೆ ಬೇರೆ ಉತ್ತಮವಾದ ಆಯುಧವುಳ್ಳವನೂ ಅಕ್ಷೌಹಿಣೀಸಂಖ್ಯೆಯ ಸೇನೆಯಿಂದ ಕೂಡಿದವನೂ ಆಗಿದ್ದನು.

೯೬. ದುರಾತ್ಮನಾದ ದುರ್ಜಯನ ಆ ಪ್ರಧಾನಿಗಳು ತಮ್ಮ ಮಹಾಸೈನ್ಯದಿಂದ ಕೂಡಿದವರಾಗಿ ಮಣಿಜನಾಯಕರೊಡನೆ ಯುದ್ಧಮಾಡಿದರು.

೯೭. ದೀಪ್ತತೇಜನು ಮೂರು ಬಾಣಗಳಿಂದ ಆ ವಿಘಸನನ್ನು ಹೊಡೆದನು. ಆ ಸುರಶ್ಮಿಯು ಹತ್ತು ಅಂಬುಗಳಿಂದ ಸಂಘನನ್ನು ಹೊಡೆದನು.

೯೮. ಶುಭದರ್ಶನನು, ಅಶನಿಪ್ರಭನನ್ನು ಐದು ಬಾಣಗಳಿಂದ ಹೊಡೆದನು. ವಿದ್ಯುತ್ಪ್ರಭನನ್ನು ಸುಕಾಂತಿಯೂ, ಸುಘೋಷನನ್ನು ಸುಂದರನೂ ಹೊಡೆದರು.

ಉನ್ಮತ್ತಾಕ್ಷಂ ತಥಾವಿಧ್ಯತ್ಸುಂದಃ ಪಂಚಭಿರಾಶುಗೈಃ ।
ಚಕರ್ತ ಚ ಧನುಸ್ತಸ್ಯ ಶಿತೇನ ನತಪರ್ವಣಾ ॥ ೯೯ ॥

ಸುಮನಾ ಅಗ್ನಿದಂಷ್ಟ್ರಂತು ಸುವೇದಶ್ಚಾಗ್ನಿತೇಜಸಂ ।
ಸುನಲೋ ವಾಯುಶಕ್ರಾತು ಸುಖದಸ್ತು ಪ್ರತರ್ದನಂ ॥ ೧೦೦ ॥

ಪರಸ್ಪರಂ ಸುಯುದ್ಧೇನ ಯೋಧಯಿತ್ವಾಸ್ತ್ರಲಾಘವಾತ್ ।
ಯಥಾಸಂಖ್ಯೇನ ತೇ ದೈತ್ಯಾಃ ಪುನರ್ಮಣಿಭಿರ್ಹತಾಃ ॥ ೧೦೧ ॥

ಯಾವತ್ಸ ಸಂಗರೋ ಘೋರೋ ಮಹಾಂಸ್ತೇಷಾಂ ವ್ಯವರ್ಧತ ।
ತಾವತ್ಸಮಿತ್ಕುಶಾದೀನಿ ಕೃತ್ವಾ ಗೌರಮುಖೋ ಮುನಿಃ ॥ ೧೦೨ ॥

ಆಗತೋ ಮಹದಾಶ್ಚರ್ಯಸಂಗ್ರಾಮಂ ಭಯದರ್ಶನಂ ।
ಬಹುಸೈನ್ಯಪರೀವಾರಂ ಸ್ಥಿತಂ ತಂಚಾಪಿ ದುರ್ಜಯಂ ॥ ೧೦೩ ॥

---

೯೯. ಸುಂದನು ಉನ್ಮತ್ತಾಕ್ಷನನ್ನು ಐದು ಬಾಣಗಳಿಂದ ಹೊಡೆದುದಲ್ಲದೆ ಅವನ ಬಿಲ್ಲನ್ನೂ ಹರಿತವಾದ ಬಾಣದಿಂದ ಕತ್ತರಿಸಿದನು.

೧೦೦. ಸುಮನನು ಅಗ್ನಿದಂಷ್ಟ್ರನನ್ನೂ, ಸುವೇದನು ಅಗ್ನಿತೇಜನನ್ನೂ, ಸುನಲನು ಬಾಹು (ವಾಯು) ಶಕ್ರರನ್ನೂ, ಸುಖದನು ಪ್ರತರ್ದನನನ್ನೂ ಹೊಡೆದರು.

೧೦೧. ಹೀಗೆ ಪರಸ್ಪರ ಅಸ್ತ್ರಕುಶಲತೆಯಿಂದ ಚೆನ್ನಾಗಿ ಯುದ್ಧಮಾಡಿ, ಮಣಿಯಿಂದುದಿಸಿದವರು ಅನುಕ್ರಮವಾಗಿ ಆ ರಾಕ್ಷಸರನ್ನು ಕೊಂದರು.

೧೦೨. ಅವರ ಆ ಯುದ್ಧವು ಅತಿ ಘೋರವಾಗಿ ಹೆಚ್ಚುತ್ತಿರುವಾಗ ದರ್ಭೆ, ಸಮಿತ್ತು, ಮುಂತಾದುವನ್ನು ತೆಗೆದುಕೊಂಡು, ಗೌರಮುಖನು ಅಲ್ಲಿಗೆ ಬಂದನು.

೧೦೩-೧೦೪. ಅತ್ಯಾಶ್ಚರ್ಯಕರವೂ ಭಯಂಕರವೂ ಆದ ಆ ಯುದ್ಧವನ್ನೂ, ಹೆಚ್ಚಾದ ದಂಡಿನಿಂದೊಡಗೂಡಿರುವ ಆ ದುರ್ಜಯನನ್ನೂ ನೋಡಿ, ಚಿಂತೆಯಿಂದ

ತದ್ದೃಷ್ಟ್ವಾ ಸ ಮುನಿರ್ದ್ವಾರಿ ಚಿಂತಾಸಂಲಗ್ನ ಚೇತನಃ ।
ಉಪವಿಶ್ಯಾಧಿಗಮ್ಯಾಥ ಮಣೇಃ ಕಾರಣಮೇವ ಹ ॥
ಏವಂ ಕೃತ್ವಾ ಮಣಿಕೃತಂ ರೌದ್ರಂ ಗಾಢಂಚ ಸಂಯುಗಂ ॥
ಚಿಂತಯಾಮಾಸ ದೇವೇಶಂ ಹರಿಂ ಗೌರಮುಖೋ ಮುನಿಃ ॥ ೧೦೪ ॥

ಸ ದೇವಃ ಪುರತಸ್ತಸ್ಯ ಪೀತವಾಸಾಃ ಖಗಾಸನಃ ।
ಕಿಮತ್ರ ತೇ ಮಯಾ ಕಾರ್ಯಮಿತಿ ವಾಣೀಮುದೀರಯನ್ ॥ ೧೦೫ ॥

ಸ ಋಷಿಃ ಪ್ರಾಂಜಲಿರ್ಭೂತ್ವಾ ಪ್ರೋವಾಚ ಪುರುಷೋತ್ತಮಂ ।
ಜಹೀಮಂ ದುರ್ಜಯಂ ಪಾಪಂ ಸೈನ್ಯೇನ ಪರಿವಾರಿತಂ ॥ ೧೦೬ ॥

ಏವಂ ಮುಕ್ತಂ ತದಾ ತೇನ ಚಕ್ರಂ ಜ್ವಲನಸನ್ನಿಭಂ ।
ತೇನ ಚಕ್ರೇಣ ಸತ್ಸೈನ್ಯಮಸುರೈಃ ದುರ್ಜಯಂ ಬಲಾತ್ ॥ ೧೦೭ ॥

ಕೂಡಿದ ಮನವುಳ್ಳವನಾದ ಆ ಮುನಿಯು ಬಾಗಿಲಲ್ಲೇ ಕುಳಿತು ಆಲೋಚಿಸಿ, ಅದು ಮಣಿಗೋಸ್ಕರವಾದುದೆಂದು ತಿಳಿದು, ದೇವೇಶನಾದ ಹರಿಯನ್ನು ಸ್ಮರಿಸಿದನು.

೧೦೫. ಪೀತಾಂಬರಧಾರಿಯೂ ಗರುಡವಾಹನನೂ ಆದ ಆ ದೇವನು ತಾನೇ ಎದುರಿಗೆ ಬಂದು, "ಇಲ್ಲಿ ನಿನಗೆ ನಾನು ಮಾಡಬೇಕಾದುದೇನು ?" ಎಂದನು.

೧೦೬. ಆ ಋಷಿಯು ಕೈಮುಗಿದುಕೊಂಡು, ಆ ಪುರುಷೋತ್ತಮನನ್ನು ಕರಿತು, "ಸೈನ್ಯದಿಂದೊಡಗೂಡಿದ ಪಾಪಿಯಾದ ಈದುರ್ಜಯನನ್ನು ಕೊಲ್ಲು" ಎಂದು ಬಿನ್ನವಿಸಿದನು.

೧೦೭–೧೦೮. ಹೀಗೆ ಆ ಹರಿಯು ಅಗ್ನಿಯಂತಿರುವ ಚಕ್ರವನ್ನು ಆಗ ಅವನಮೇಲೆ ಬಿಟ್ಟನು. ಅದು ರಾಕ್ಷಸರೊಡನೆ ದುರ್ಜಯನನ್ನೂ ಅವನ

ನಿಮೇಷಾಂತರಮಾತ್ರೇಣ ಸಮಗ್ರಂ ಭಸ್ಮಸಾತ್ಕೃತಂ ॥ ೧೦೮ ॥

ಏವಂ ಕೃತ್ವಾ ತತೋ ದೇವೋ ಮುನಿಂ ಗೌರಮುಖಂತದಾ ।
ಉವಾಚ ನಿಮಿಷೇಣೇದಂ ನಿಹತಂ ದಾನವಂ ಕುಲಂ ॥ ೧೦೯ ॥

ಅರಣ್ಯೇಽಸ್ಮಿಂಸ್ತತಸ್ತ್ವೇವಂ ನೈಮಿಷಾರಣ್ಯಸಂಜ್ಞಿತಂ ।
ಭವಿಷ್ಯತಿ ಯಥಾರ್ಥಂ ವೈ ಬ್ರಾಹ್ಮಣಾನಾಂ ನಿವೇಶನಂ ।
ಅಹಂಚ ಯಜ್ಞಪುರುಷ ಏತಸ್ಮಿನ್ವನಗೋಚರೇ ॥ ೧೧೦ ॥

ನಾಮ್ನಾ *ಯಾಜ್ಯೋ ಸದಾ ಚೇಮೇ ದಶಪಂಚ ಚ ನಾಯಕಾಃ ।
ಕೃತೇ ಯುಗೇ ಭವಿಷ್ಯಂತಿ ರಾಜಾನೋ ಮಣಿಜಾಇಮೇ ॥ ೧೧೧ ॥

ಸೈನ್ಯವನ್ನೂ ತನ್ನ ಶಕ್ತಿಯಿಂದ ನಿಮಿಷಮಾತ್ರದಲ್ಲಿ ಪೂರ್ತಿಯಾಗಿ ಸುಟ್ಟು ಬೂದಿಮಾಡಿತು.

೧೦೯ ಆ ದೇವನು ಹಾಗೆ ಮಾಡಿ, ಬಳಿಕ ಗೌರಮುಖನನ್ನು ಕುರಿತು, ಹೇಳಿದನು.—ಈ ಅರಣ್ಯದಲ್ಲಿ ರಾಕ್ಷಸರ ಪಡೆಯು ನಿಮಿಷಮಾತ್ರದಲ್ಲಿ ಕೊಲೆಗೊಂಡಿತು.

೧೧೦-೧೧೧. ಆದುದರಿಂದ ಇದು ನೈಮಿಷಾರಣ್ಯವೆಂದು ಹೆಸರುಳ್ಳದ್ದಾಗಿ ಬ್ರಾಹ್ಮಣರಿಗೆ ವಸತಿಯಾಗುವುದು. ಈ ಅರಣ್ಯದಲ್ಲಿ ಯಜ್ಞಪುರುಷನೆಂಬ ಹೆಸರಿನಿಂದ ನನ್ನನ್ನು ಯಾವಾಗಲೂ ಪೂಜಿಸಬೇಕು. ಮಣಿಯಿಂದುದಿಸಿದ ಈ ಹದಿನೈದು ಜನನಾಯಕರೂ ಕೃತಯುಗದಲ್ಲಿ ರಾಜರಾಗುವರು."

---

* ಯಾಜ್ಯಾಃ (ಕ)

ಏವಮುಕ್ತ್ವಾ ತತೋ ದೇವೋ ಗತೋಽಂತರ್ಧಾನಮೀಶ್ವರಃ ।
ದ್ವಿಜೋಽಪಿ ಸ್ವಾಶ್ರಮೇ ತಸ್ಥೌ ಮುದಾ ಪರಮಯಾ ಯುತಃ ॥ ೧೧೨ ॥

ಇತಿ ಶ್ರೀವರಾಹಪುರಾಣೇ ಆದಿಕೃತವೃತ್ತಾಂತೇ ಸೃಷ್ಟಿವರ್ಣನೇ ದುರ್ಜಯ ಚರಿತಂ ನಾಮ ಏಕಾದಶೋಽಧ್ಯಾಯಃ

---

೧೧೨. ಹೀಗೆ ಹೇಳಿ, ಬಳಿಕ ದೇವೇಶ್ವರನು ಮಾಯವಾದನು. ಬ್ರಾಹ್ಮಣನೂ ಪರಮ ಸಂತೋಷದಿಂದ ಕೂಡಿದವನಾಗಿ, ತನ್ನ ಆಶ್ರಮದಲ್ಲಿ ನಿಂತನು.

ಅಧ್ಯಾಯದ ಸಾರಾಂಶ :—

ದುರ್ಜಯನ ಚರಿತ್ರೆಯೇ ಈ ಅಧ್ಯಾಯದಲ್ಲೂ ಮುಂದುವರಿದಿದೆ.

ದುರ್ಜಯನು ಗೌರಮುಖಮುನಿಯನ್ನು ಸಂದರ್ಶಿಸಿ, ಆತನಿಂದ ಪೂಜಿತನಾಗುವನು. ಅಕ್ಷೌಹಿಣೀ ಸೇನಾಸಮೇತನಾದ ದುರ್ಜಯ ರಾಜನಿಗೆ ಆತಿಥ್ಯವನ್ನು ಮಾಡುವುದಾಗಿ ಹೇಳಿ ಗೌರಮುಖನು ಗಂಗೆಯಲ್ಲಿ ಸ್ನಾನಮಾಡಿ, ನಾರಾಯಣನನ್ನು ಸ್ತೋತ್ರದಿಂದ ಸ್ತುತಿಸಿ, ಪ್ರತ್ಯಕ್ಷನಾದ ಆತನಿಂದ ಚಿತ್ತಸಿದ್ಧಿಯನ್ನೂ ಕೇಳಿದುದನ್ನುಕೊಡುವ ಮಣಿಯೊಂದನ್ನೂ ಪಡೆದು, ಅದರ ಮಹಿಮೆಯಿಂದ ರಾಜಯೋಗ್ಯವಾದ ದಿವ್ಯಸೌಧಾನ್ನಾದಿಗಳನ್ನೂ ದಿವ್ಯವನಿತೆಯರನ್ನೂ ಕ್ಷಣಮಾತ್ರದಲ್ಲಿ ಪಡೆದು, ರಾಜನನ್ನೂ ರಾಜನಸೇನೆಯನ್ನೂ ಸ್ನಾನ ವಸ್ತ್ರ ಭೋಜನ ತಾಂಬೂಲ ನೃತ್ಯ ಗೀತವಾದ್ಯಾದಿ ಸಕಲಉಪಚಾರಗಳಿಂದಲೂ ಅದ್ಭುತವಾದ ರೀತಿಯಲ್ಲಿ ಆದರಿಸುವನು. ಇದರಿಂದ ವಿಸ್ಮಯಗೊಂಡ ದುರ್ಜಯನು, ಆದಿನ ರಾತ್ರಿಯೂ ಆಶ್ರಮದಲ್ಲೇ ದಿವ್ಯಸೌಧದಲ್ಲಿ ಪರಿವಾರದೊಡನೆ ಸ್ವರ್ಗಸೌಖ್ಯದಿಂದ ವಿಶ್ರಾಂತನಾಗಿರುವನು. ಬೆಳಗಾಗುತ್ತಲೂ ಸೌಧಾದಿಗಳೆಲ್ಲವೂ ಅದೃಶ್ಯವಾಗಿ ಇದ್ದುದನ್ನು ಕಂಡು, ಎಲ್ಲವೂ ಆ ಮಣಿಯ ಪ್ರಭಾವವೆಂದು ತಿಳಿದು, ಅದನ್ನು ತಾನು ಋಷಿಯಿಂದ ಅಪಹರಿಸಲು ಅಪೇಕ್ಷಿಸಿ ಒಳ್ಳೆಯ ಮಾತಿನಿಂದ ದೊರೆಯದಿರಲು ಮುನಿಯಿಂದ ಬಲಾತ್ಕಾರವಾಗಿ ಅದನ್ನು ಅಪಹರಿಸಲು ಸೇನಾಪತಿಗೆ ನೇಮಿಸುವನು. ಮಣಿಯಿಂದ ಅಸಂಖ್ಯಾತರಾದ ಆಯುಧಪಾಣಿಗಳಾದ ಯೋಧರೂ ಸೇನಾಪತಿಗಳೂ ಉದಿಸುವರು. ಎರಡು ಕಡೆಯುವರಿಗೂ ಘೋರವಾದ ಯುದ್ಧವಾಗುವುದು. ದುರ್ಜಯನ ಸಹಾಯಕ್ಕೆ ಹೇತೃಪ್ರಹೇತೃಗಳು ಸೇನೆಯೊಡನೆ ಬರುವರು. ಗೌರಮುಖನು ದೇವರನ್ನು ಸ್ತುತಿಸುವನು. ಹರಿಯು ಪ್ರತ್ಯಕ್ಷನಾಗಿ ತನ್ನ ಚಕ್ರದಿಂದ ಸೇನಾಸಮೇತನಾದ ದುರ್ಜಯನನ್ನು ನಿಮಿಷಮಾತ್ರದಲ್ಲಿ ಸುಟ್ಟು ಬೂದಿಮಾಡಿ, "ಈ ಅರಣ್ಯದಲ್ಲಿ ನಿಮಿಷಮಾತ್ರದಲ್ಲಿ ರಾಕ್ಷಸರಸೇನೆಯು ನಾಶವಾದುದರಿಂದ ಈ ಅರಣ್ಯವು ನೈಮಿಷಾರಣ್ಯವೆಂಬ ಹೆಸರಿನಿಂದ ಮುನಿಗಳಿಗೆ ಉತ್ತಮವಾದ ಸ್ಥಾನವಾಗಲಿ" ಎಂದು ವರವನ್ನಿತ್ತನು. ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಹನ್ನೊಂದನೆಯ ಅಧ್ಯಾಯ.

|| ಶ್ರೀಃ ||

-x-

ದ್ವಾದಶೋಽಧ್ಯಾಯಃ

ಅಥ ದುರ್ಜಯಚರಿತೇ ನಾರಾಯಣೈಶ್ವರ್ಯಂ

|| ವರಾಹ ಉವಾಚ ||

ತತಸ್ತತ್ರ ರಥಾಂಗಾಗ್ನೌ ದಗ್ಧಾನ್ ಶ್ರುತ್ವಾ ನರೋತ್ತಮಾನ್ |
ಮಹಚ್ಛೋಕಪರೀತಾತ್ಮಾ ಚಿಂತಯಾಮಾಸ ಪಾರ್ಥಿವಃ || ೧ ||

ತಸ್ಯ ಚಿಂತಯತಸ್ತ್ವೇವಂ ತತ್ವಬುದ್ಧಿರಜಾಯತ |
ಚಿತ್ರಕೂಟೇ ಗಿರೌ ವಿಷ್ಣೂ ರಾಘವಶ್ಚ ಪ್ರಕೀರ್ತ್ಯತೇ || ೨ ||

ತತೋಽಹಂ ನಾಮಸಂಜ್ಞಾಭಿಃ ಹರಿಂಸ್ತೌಮಿ ಜಗತ್ಪತಿಂ |
ಇತಿ ಸಂಚಿಂತ್ಯ ನೃಪತಿರ್ಜಗಾಮ ಗಿರಿಮುತ್ತಮಂ || ೩ ||

ಹನ್ನೆರಡನೆಯ ಅಧ್ಯಾಯ

ದುರ್ಜಯ ಚರಿತ್ರೆಯಲ್ಲಿ ನಾರಾಯಣೈಶ್ವರ್ಯ

೧. ವರಾಹ:—ಬಳಿಕ ಆ ನೈಮಿಷಾರಣ್ಯದಲ್ಲಿ (ವಿಷ್ಣು) ಚಕ್ರಾಗ್ನಿಯಿಂದ ದುರ್ಜಯನೇ ಮೊದಲಾದ ನರೋತ್ತಮರು ಸುಟ್ಟುಹೋದುದನ್ನು ದುರ್ಜಯನ ತಂದೆಯಾದ ಸುಪ್ರತೀಕ ರಾಜನು ಕೇಳಿ, ಬಹುದುಃಖವುಳ್ಳವನಾಗಿ ಚಿಂತಿಸುತ್ತಿದ್ದನು.

೨. ಹಾಗೆ ಚಿಂತಿಸುತ್ತಿದ್ದ ಅವನಿಗೆ ತತ್ವಬುದ್ಧಿಯು ಉಂಟಾಯಿತು. "ಚಿತ್ರಕೂಟ ಪರ್ವತದಲ್ಲಿ ವಿಷ್ಣುವು ರಾಘವನೆಂದು ಹೊಗಳಿಸಿಕೊಳ್ಳುವನು.

೩-೪. ಆದುದರಿಂದ ನಾನು ರಾಮನಾಮಗಳಿಂದ ಜಗತ್ಪತಿಯಾದ ಆ ಹರಿಯನ್ನು ಸ್ತುತಿಸುತ್ತೇನೆ." ಎಂದು ಪರ್ಯಾಲೋಚಿಸಿ, ಉತ್ತಮವೂ ಅತಿ

ಚಿತ್ರಕೂಟಂ ಮಹಾಪುಣ್ಯಂ ನೃಪಃ ಸ್ತೋತ್ರಮುದೀರಯನ್ ॥ ೪ ॥

*** ॥ ಸುಪ್ರತೀಕ ಉವಾಚ ॥**

ನಮಾಮಿ ರಾಮಂ ನರನಾಥಮಚ್ಯುತಂ
ಕವಿಂ ಪುರಾಣಂ ತ್ರಿದಶಾರಿನಾಶನಂ ।
ಶಿವಸ್ವರೂಪಂ ಪ್ರಭವಂ ಮಹೇಶ್ವರಂ
ಸದಾ ಪ್ರಪನ್ನಾರ್ತಿಹರಂ ಧೃತಶ್ರಿಯಂ ॥ ೫ ॥

ಭವಾನ್ ಸದಾ ದೇವ ಸಮಸ್ತತೇಜಸಾಂ
ಕರೋಷಿ ತೇಜಾಂಸಿ ಸಮಸ್ತರೂಪಧೃಕ್ ।
ಕ್ಷಿತೌ ಭವಾನ್ ಪಂಚಗುಣಸ್ತಥಾ ಜಲೇ
ಚತುಃಪ್ರಕಾರಸ್ತ್ರಿವಿಧೋಥ ತೇಜಸಿ ॥ ೬ ॥

ಪವಿತ್ರವೂ ಆದ ಆ ಚಿತ್ರಕೂಟಗಿರಿಗೆ ಹೋಗಿ, ಈದೊರೆಯು (ಮುಂದಿನ) ಸ್ತೋತ್ರವನ್ನು ಹೇಳಿದನು.

೫. ಸುಪ್ರತೀಕ:—ನರರೊಡೆಯನೂ, ನಾಶರಹಿತನೂ, ಪ್ರಾಚೀನನೂ, ರಾಕ್ಷಸನಾಶಕನೂ, ಶಿವಸ್ವರೂಪನೂ, ಸರ್ವೋತ್ಪತ್ತಿಕಾರಣನೂ, ಮಹೇಶ್ವರನೂ, ಯಾವಾಗಲೂ ಮರೆಹೊಕ್ಕವರ ಪೀಡೆಯನ್ನು ಪರಿಹರಿಸುವವನೂ, ಶ್ರೀಧರನೂ ಆದ ರಾಮನನ್ನು ನಮಿಸುತ್ತೇನೆ.

೬. ದೇವನೇ, ನೀನು ಸರ್ವರೂಪಧರನಾಗಿ ಎಲ್ಲಾ ತೇಜಸ್ಸುಗಳಿಗೂ ಯಾವಾಗಲೂ ತೇಜಸ್ಸನ್ನು ಉಂಟುಮಾಡುತ್ತೀಯೆ. ನೀನು ಭೂರೂಪದಲ್ಲಿ ಪಂಚಭೂತಗಳ ಗುಣಗಳುಳ್ಳವನಾಗಿಯೂ, ಜಲರೂಪದಲ್ಲಿ ನಾಲ್ಕುಗುಣಗಳುಳ್ಳವನಾಗಿಯೂ, ತೇಜೋರೂಪದಲ್ಲಿ ಮೂರು ಗುಣಗಳುಳ್ಳವನಾಗಿಯೂ ಇರುವೆ.

---

* ದುರ್ಜಯ ಉವಾಚ ಎಂದು (ಬೊಂ. ಕ.) ಅಚ್ಚಾಗಿರುವ ಪುಸ್ತಕಗಳಲ್ಲಿದೆ. ದುರ್ಜಯನು ಸುಟ್ಟುಹೋದನೆಂದು ಹಿಂದೆ ಹೇಳಿದೆ. ಅಲ್ಲದೆ ಇದೇ ಅಧ್ಯಾಯದ ಹದಿನಾಲ್ಕನೆಯ ಶ್ಲೋಕದಲ್ಲಿ ದೇವವರಃ ಪ್ರಸನ್ನಃ ರಾಜ್ಞಃ ಸುಪ್ರತೀಕಾಯ ಮೂರ್ತಿಂ ಸಂದರ್ಶಯಾಮಾಸ (ದೇವೋತ್ತಮನು ರಾಜನಾದ ಸುಪ್ರತೀಕನಿಗೆ ತನ್ನರೂಪವನ್ನು ತೋರಿಸಿದನು) ಎಂದೂ ವರಂವೃಣೀಷ್ವ ಸುಪ್ರತೀಕ ಇತಿ ಅಭ್ಯುವಾಚ (ಸುಪ್ರತೀಕನೇ ವರವನ್ನು ಬೇಡು ಎಂದನು) ಎಂಬುದಾಗಿಯೂ ಇರುವುದರಿಂದ ಸುಪ್ರತೀಕ ಉವಾಚ ಎಂದಿರುವುದು ಉಚಿತವೆಂದು ತಿದ್ದಿದೆ.

ದ್ವಿಧಾಥ ವಾಯೌ ವಿಯತಿ ಪ್ರತಿಷ್ಠಿತೋ
ಭವಾನ್ ಹರಿಃ ಶಬ್ದಚರಃ ಪುಮಾನಸಿ ।
ಭವಾನ್ ಶಶೀ ಸೂರ್ಯಹುತಾಶನೋಽಸಿ
ತ್ವಯಿ ಪ್ರಲೀನಂ ಜಗದೇತದುಚ್ಯತೇ ॥ ೭ ॥

ಭವತ್ಪ್ರತಿಷ್ಠಂ ರಮತೇ ಜಗದ್ಯತಃ
ತತೋಽಸಿ ರಾಮೇತಿ ಜಗತ್ಪ್ರತಿಷ್ಠಿತಃ ।
ಭವಾರ್ಣವೇ ದುಃಖತರೋರ್ಮಿಸಂಕುಲೇ
ತಥಾಕ್ಷಮೀನಗ್ರಹನಕ್ರಭೀಷಣೇ ॥ ೮ ॥

ನ ಮಜ್ಜತಿ ತ್ವತ್ಸ್ಮರಣಪ್ಲವೋ ನರಃ
ಸ್ಮೃತೋಽಸಿ ರಾಮೇತಿ ತಥಾತಪೋವನೇ ।
ವೇದೇಷು ನಷ್ಟೇಷು ಭವಾಂಸ್ತಥಾ ಹರೇ
ಕರೋಷಿ ಮಾತ್ಸ್ಯಂ ವಪುರಾತ್ಮನಃ ಸದಾ ॥ ೯ ॥

---

೭. ವಾಯುರೂಪದಲ್ಲಿ ಎರಡು ಗುಣಗಳುಳ್ಳವನಾಗಿಯೂ ಆಕಾಶರೂಪದಲ್ಲಿ ಶಬ್ದವೆಂಬ ಒಂದು ಗುಣವುಳ್ಳವನಾಗಿಯೂ ಇದ್ದುಕೊಂಡಿರುವ ಹರಿಯೆಂಬ ಪುರುಷನಾಗಿ ಇದ್ದೀಯೆ. ನೀನೇ ಚಂದ್ರನೂ ಸೂರ್ಯನೂ ಅಗ್ನಿಯೂ ಆಗಿದ್ದೀಯೆ. ಈ ಪ್ರಪಂಚವು ನಿನ್ನಲ್ಲಿ ಅಡಗಿದೆ ಎನ್ನುವರು.

೮–೯. ಈ ಜಗತ್ತು ನಿನ್ನಲ್ಲಿದ್ದುಕೊಂಡು, ರಮಿಸುವುದರಿಂದ ನೀನು ರಾಮನೆಂದು ಲೋಕದಲ್ಲಿ ಪ್ರಸಿದ್ಧನಾಗಿದ್ದೀಯೆ. ದುಃಖಗಳೆಂಬ ಮೀನು ಮೊಸಳೆಗಳಿಂದ ಭಯಂಕರವಾದ ಸಂಸಾರಸಾಗರದಲ್ಲಿ ನಿನ್ನ ಸ್ಮರಣೆಯೆಂಬ ಹಡಗುಳ್ಳ ಮನುಷ್ಯರು ಎಂದಿಗೂ ಮುಳುಗುವುದಿಲ್ಲ. ಆದುದರಿಂದ ನೀನು ತಪೋವನದಲ್ಲಿ ರಾಮನೆಂದು ಸ್ಮರಿಸಲ್ಪಟ್ಟಿರುವೆ. ಹರಿಯೇ, ವೇದಗಳು ಕಳೆದು ಹೋಗಲಾಗಿ ನೀನು ಮತ್ಸ್ಯರೂಪವನ್ನು ಧರಿಸುತ್ತೀಯೆ.

ಯುಗಕ್ಷಯೇ ರಂಜಿತಸರ್ವದಿಙ್ಮುಖೇ
ಭವಾಂಸ್ತಥಾಗ್ನಿರ್ಬಹುರೂಪಧೃಗ್ವಿಭೋ |
ಕೌರ್ಮಂ ತಥಾ ಸ್ವಂ ವಪುರಾಸ್ಥಿತಃ ಸದಾ
ಯುಗೇ ಯುಗೇ ಮಾಧವ ಸಿಂಧುಮಂಥನೇ || ೧೦ ||

ನಚಾನ್ಯದಸ್ತೀತಿ ಭವತ್ಸಮಂ ಕ್ವಚಿತ್ |
ಜನಾರ್ದನಾದ್ಯತ್ರ ಬಭೂವ ಚೋತ್ತಮಂ |
ತ್ವಯಾ ತತಂ ವಿಶ್ವಮಿದಂ ಮಹಾತ್ಮನ್
ಲೋಕಾಖಿಲಾ ದೇವ ದಿಶಶ್ಚ ಸರ್ವಾಃ || ೧೧ ||

ಕಥಂ ತ್ವ ಮಾದ್ಯಂ ಪರಮಂತು ಧಾಮ
ವಿಹಾಯ ಚಾನ್ಯಂ ಶರಣಂ ವ್ರಜಾಮಿ |
ಭವಾನೇಕಃ ಪೂರ್ವಮಾಸೀತ್ತತಶ್ಚ
ಮಹಾನಹಂ ಸಲಿಲಂ ವಹ್ನಿರೂಪೈಃ ||
ವಾಯುಸ್ತಥಾ ಖಂಚ ಮನೋಽಪಿ ಬುದ್ಧಿಃ
ತ್ವತ್ತೋ ಗುಣಾಸ್ತ್ವತ್ರ ಭವಂಚ ಸರ್ವಂ || ೧೨ ||

---

೧೦. ವಿಭುವೇ, ಯುಗದ ಅಂತ್ಯದಲ್ಲಿ ದಿಕ್ಕುಗಳೆಲ್ಲವೂ ಕೆಂಪಾಗಿರುವಾಗ ಬಹುರೂಪಧರನಾದ ನೀನು ಅಗ್ನಿಯಾಗುತ್ತೀಯೆ. ಮಾಧವನೇ, ಯುಗ ಯುಗದಲ್ಲೂ ಕ್ಷೀರಸಾಗರವನ್ನು ಕಡೆಯುವಾಗ ಯಾವಾಗಲೂ ನೀನು ಕೂರ್ಮ ದೇಹವನ್ನು ಧರಿಸುತ್ತೀಯೆ.

೧೧. ಜನಾರ್ದನನಾದ ನಿನ್ನಿಂದ ಉತ್ತಮವಾದುದು ಯಾವುದುದಿಸಿತೋ ಅದಕ್ಕಿಂತಲೂ ಉತ್ತಮವಾದುದೂ ನಿನಗೆ ಸಮಾನವಾದುದೂ ಬೇರಾವುದೂ ಇಲ್ಲ. ಮಹಾತ್ಮ, ದೇವನೇ, ಎಲ್ಲಾದಿಕ್ಕುಗಳೂ, ಲೋಕಗಳೂ, ಈ ವಿಶ್ವವೂ ನಿನ್ನಿಂದ ವ್ಯಾಪ್ತವಾಗಿವೆ.

೧೨. ಆದ್ಯನೂ ಪರಮಧಾಮನೂ ಆದ ನಿನ್ನನ್ನು ಬಿಟ್ಟು, ಮತ್ತೊಬ್ಬ ನನ್ನು ಹೇಗೆ ಮರೆಹೊಗಲಿ! ಮೊತ್ತಮೊದಲು ನೀನೊಬ್ಬನೇ ಇದ್ದೆ. ಬಳಿಕ ಮಹದಹಂಕಾರ (ತತ್ವ)ಗಳೂ, ನೀರು, ಅಗ್ನಿಯೂ, ವಾಯುವೂ, ಆಕಾಶವೂ, ಮನೋಬುದ್ಧಿಗಳೂ ಗುಣಗಳೂ ಮತ್ತೆಲ್ಲವೂ ನಿನ್ನಿಂದುದಿಸಿದುವು.

ತ್ವಯಾತತಂ ವಿಶ್ವಮಿದಂ ಸಮಸ್ತಂ
ಸನಾತನಸ್ತ್ವಂ ಪುರುಷೋ ಮತೋ ಮೇ ।
ಸಮಸ್ತವಿಶ್ವೇಶ್ವರ ವಿಶ್ವಮೂರ್ತೇ
ಸಹಸ್ರ ಬಾಹೋ ಜಯ ದೇವದೇವ
ನಮೋಸ್ತು ರಾಮಾಯ ಮಹಾನುಭಾವ ॥ ೧೩ ॥

ಇತಿ ಸ್ತುತೋ ದೇವವರಃ ಪ್ರಸನ್ನಃ
ತದಾ ತು ರಾಜ್ಞಃ ಸುಪ್ರತೀಕಾಯ ಮೂರ್ತಿಂ ।
ಸಂದರ್ಶಯಾಮಾಸ ತತೋಭ್ಯುವಾಚ
ವರಂ ವೃಣೀಷ್ವೇತಿಹ ಸುಪ್ರತೀಕ ॥ ೧೪ ॥

ಏವಂ ಶ್ರುತ್ವಾ ವಚನಂ ತಸ್ಯ ರಾಜಾ
ಸಸಂಭ್ರಮಂ ದೇವವರಂ ಪ್ರಣಮ್ಯ ।
ಉವಾಚ ದೇವೇಶ್ವರ ಮೇ ಪ್ರಯಚ್ಛ
ಲಯಂ ಯದಾಸ್ತೇ ಪರಮಂ ವಪುಸ್ತೇ ॥ ೧೫ ॥

---

೧೩. ಈ ಪ್ರಪಂಚವೆಲ್ಲವೂ ನಿನ್ನಿಂದತುಂಬಿದೆ. ಶಾಶ್ವತಪುರುಷನಾದ ನೀನೇ ನನಗೆ ಇಷ್ಟನಾದವನು. ಸರ್ವಲೋಕೇಶ್ವರಾ, ವಿಶ್ವಮೂರ್ತಿ, ಸಹಸ್ರ ಬಾಹೂ, ದೇವದೇವ, ಮಹಾನುಭಾವ, ರಾಮಾ, ಜಯವಾಗಲಿ. ನಿನಗೆ ನಮಸ್ಕಾರ."

೧೪. ಹೀಗೆ ಸ್ತೋತ್ರಮಾಡಿಸಿಕೊಂಡ ದೇವೋತ್ತಮನು ಒಲಿದು, ಆಗ ರಾಜನಾದ ಸುಪ್ರತೀಕನಿಗೆ ತನ್ನ ರೂಪವನ್ನು ತೋರಿಸಿ, "ಸುಪ್ರತೀಕನೇ, ವರವನ್ನು ಬೇಡು" ಎಂದು ಹೇಳಿದನು.

೧೫. ದೊರೆಯು, ಅವನ ಈ ಮಾತನ್ನು ಕೇಳಿ, ಸಡಗರದಿಂದ ಆ ದೇವವರನಿಗೆ ಪ್ರಣಾಮಮಾಡಿ, "ದೇವೇಶ್ವರನೇ, ನನಗೆ ನಿನ್ನ ಪರಮದೇಹದಲ್ಲಿ ಐಕ್ಯವನ್ನು ದಯೆಪಾಲಿಸು" ಎಂದು ಹೇಳಿದನು.

ಇತೀರಿತೇ ರಾಜವರಃ ಕ್ಷಣೇನ
ಲಯಂ ತಥಾಗಾದಸುರಘ್ನ ಮೂರ್ತೌ ।
ಧ್ಯಾನೇನ ಯುಕ್ತಃ ಪುರುಷಂ ಗೃಣಂತಂ
ಸ್ಥಿತಸ್ತಸ್ಮಿನ್ನಾತ್ಮಭೂತೋ ವಿಮುಕ್ತಃ ॥
ಸ ಭೂಮಿಪಃ ಕರ್ಮಕಾಂಡೈರನೇಕೈಃ ॥ ೧೬ ॥

॥ ವರಾಹ ಉವಾಚ ॥

ಇತೀರಿತಂ ತೇ ತು ಮಯಾ ಪುರಾಣಂ
ಸ್ವಯಂಭುವೇ ಚಾದಿಕೃತೈಕದೇಶಂ ।
ಶಕ್ಯಂ ನ ಚಾಸ್ಯೈರ್ಬಹುಭಿಃ ಸಹಸ್ರೈಃ
ಅಪೀಹ ಕೇನಾಪಿ ಸುಖೇನ ವಕ್ತುಂ ॥ ೧೭ ॥

ಉದ್ದೇಶತಃ ಸಂಸ್ಕೃತಮಾತ್ರಮೇತತ್
ಮಯಾಪಿ ಭದ್ರೇ ಕಥಿತಂ ಪುರಾಣಂ ।
ಸಮುದ್ರತೋಯಾತ್ ಪರಿಮಾಣಮಲ್ಪಂ
ಕ್ವಚಿತ್ ಕ್ವಚಿದ್ದತ್ತಮಥೋಹ್ಯನರ್ಘಂ ॥ ೧೮ ॥

---

೧೬. ಹೀಗೆ ಹೇಳಿ, ಪರಮ ಪುರುಷನನ್ನು ಧ್ಯಾನಿಸುತ್ತಲೂ ಸ್ತೋತ್ರ ಮಾಡುತ್ತಲೂ ಹಲವು ಸತ್ಕರ್ಮಗಳಿಂದ ಆರಾಧಿಸುತ್ತಲೂ, ಇದ್ದ ಆ ರಾಜನು ವಿಮುಕ್ತನಾಗಿ ರಾಕ್ಷಸ ನಾಶಕನಾದ ಆಪರಮಾತ್ಮನಲ್ಲಿ ಐಕ್ಯನಾದನು.

೧೭. "ಆದಿಕೃತಯುಗದ ಒಂದು ಭಾಗದ ಈ ಪುರಾಣವನ್ನು ನಿನಗೆ ಹೇಳಿದೆನು. ಬ್ರಹ್ಮನಿಂದಲಾಗಲಿ ಬೇರೆ ಯಾರಿಂದಲಾಗಲಿ ಹಲವು ಸಾವಿರ ಬಾಯಿಗಳಿಂದಲೂ ಇದನ್ನು (ಪೂರ್ತಿಯಾಗಿ) ಸುಲಭವಾಗಿ ಹೇಳಲು ಸಾಧ್ಯವಿಲ್ಲ.

೧೮. ಭದ್ರೇ, ಉದ್ದೇಶ ಪೂರ್ವಕವಾಗಿ ಈ ಪುರಾಣವನ್ನು ಜ್ಞಾಪಕಕ್ಕೆ ಬಂದಷ್ಟನ್ನು ಮಾತ್ರ ಹೇಳಿದ್ದೇನೆ. ಸಮುದ್ರದ ನೀರಿನಲ್ಲಿ ಸ್ವಲ್ಪದಂತೆ ಅಲ್ಲಲ್ಲೇ ಉತ್ತಮವಾದ ಸ್ವಲ್ಪ ಭಾಗವನ್ನು ಕೊಟ್ಟಿದ್ದೇನೆ.

ಸ್ವಯಂಭುವಾ ಕಥಿತಂ ಬ್ರಹ್ಮಣಾಪಿ
ನಾರಾಯಣೇನಾಪ್ಯಕುತೋ ಭಯೇನ ।
ಅಶಕ್ಯಮಸ್ಮಾಭಿರಿತೀರಿತಂ ತೇ
ನ ಮೂರ್ತಮಸ್ಯ ಸ್ಮರಣೇಯಮಾದ್ಯಂ ॥ ೧೯ ॥

ಸಮುದ್ರೇ ವಾಲುಕಾಸಂಖ್ಯಾ ವಿದ್ಯತೇ ರಜಸಃ ಕ್ಷಿತೌ ।
ನ ತು ಚಾಸ್ಯ ಪುನಃ ಸಂಖ್ಯಾ ಕ್ರೀಡತಃ ಪರಮೇಷ್ಠಿನಃ ॥ ೨೦ ॥

ಏಷ ನಾರಾಯಣಸ್ಯಾಂಶೋ ಮಯಾ ಪ್ರೋಕ್ತಃ ಶುಚಿಸ್ಮಿತೇ ।
ಕೃತವೃತ್ತಾಂತ ಏಷಶ್ಚ ಕಿಮನ್ಯಚ್ಛ್ರೋತುಮಿಚ್ಛಸಿ ॥ ೨೧ ॥

ಇತಿ ಶ್ರೀವರಾಹಪುರಾಣೇ ಆದಿಕೃತವೃತ್ತಾಂತೇ ದುರ್ಜಯಚರಿತೇ
ನಾರಾಯಣೈಶ್ವರ್ಯೇ ದ್ವಾದಶೋಧ್ಯಾಯಃ

---

೧೯. ಸ್ವಯಂಭುವಾದ ಬ್ರಹ್ಮನೂ, ಎಲ್ಲೂ ಯಾವುದರಿಂದಲೂ ಭಯವಿಲ್ಲದವನಾದ ನಾರಾಯಣನೂ ತಮ್ಮಿಂದ ಪೂರ್ಣವಾಗಿ ಹೇಳಲು ಸಾಧ್ಯವಿಲ್ಲವೆಂದು ಹೇಳಿರುವರು. ಆದುದರಿಂದ ಈಪುರಾಣದ ಅಥವಾ ಪುರಾಣ ಪುರುಷನ ಆದಿಸ್ವರೂಪವನ್ನು ನಿನ್ನಿಂದ ಸ್ಮರಿಸಲೂ ಸಾಧ್ಯವಿಲ್ಲ.

೨೦-೨೧. ಮುಗುಳು ನಗೆಯವಳೆ, ಸಮುದ್ರದ ಮರಳಿಗೂ ಭೂಮಿಯ ಧೂಳಿಗೂ ಲೆಕ್ಕವುಂಟು. (ಕ್ರೀಡಿಸುವ ಈ ಬ್ರಹ್ಮನಿಗಾದರೋ) ಪರಮಾತ್ಮನ ಲೀಲೆಗಾದರೋ ಲೆಕ್ಕವೇ ಇಲ್ಲ. ಕೃತಯುಗದ ವೃತ್ತಾಂತವಾದ ನಾರಾಯಣನ ಈ ವಿಚಾರವನ್ನು ನಾನು ಹೇಳಿದೆನು. ಮತ್ತೇನನ್ನು ಕೇಳ ಬಯಸುವೆ ?

ಅಧ್ಯಾಯದ ಸಾರಾಂಶ :—

ಶ್ರೀವರಾಹದೇವನು ಭೂದೇವಿಗೆ—ನೈಮಿಷಾರಣ್ಯದಲ್ಲಿ ತನ್ನ ಮಗನಾದ ದುರ್ಜಯನು ವಿಷ್ಣುಚಕ್ರಾಗ್ನಿಯಿಂದ ಸುಟ್ಟುಹೋದುದನ್ನು ಕೇಳಿ, ಸುಪ್ರತೀಕ ರಾಜನು, ದುಃಖಿಸಿ, ಬಳಿಕ ತತ್ವಬುದ್ಧಿಯುಳ್ಳವನಾಗಿ ಚಿತ್ರಕೂಟಗಿರಿಗೆ ಹೋಗಿ, ಅಲ್ಲಿ ಶ್ರೀ ರಾಮನನ್ನು ಕುರಿತು ಮಾಡಿದ ತಪಸ್ಸಿನಿಂದ ಆ ದೇವನು ಪ್ರತ್ಯಕ್ಷನಾಗಿ ಅವನ ಇಷ್ಟದಂತೆ ತನ್ನ ದೇಹದಲ್ಲಿ ಅವನಿಗೆ ಐಕ್ಯವನ್ನು ದಯೆಪಾಲಿಸಿದ ವಿಚಾರವನ್ನು ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ಹನ್ನೆರಡನೆಯ ಅಧ್ಯಾಯ.

|| ಶ್ರೀಃ ||

–X–

ತ್ರಯೋದಶೋಽಧ್ಯಾಯಃ

ಅಥ ಶ್ರಾದ್ಧಕಲ್ಪಃ

॥ ಧರಣ್ಯುವಾಚ ॥

ಏತನ್ಮೇ ಮಹದಾಶ್ಚರ್ಯಂ ದೃಷ್ಟ್ವಾ ಗೌರಮುಖೋಮುನಿಃ ।
ತೇ ಚಾಪಿ ಮಣಿಜಾಃ ಪ್ರಾಪ್ತಾಃ ಕಿಂ ಫಲಂತು ವರಂ ಗುರೋ || ೧ ||

ಕೋಽಸೌ ಗೌರಮುಖಃ ಶ್ರೀಮಾನ್ ಮುನಿಃ ಪರಮಧಾರ್ಮಿಕಃ ।
ಕಿಂ ಚಕಾರ ಹರೇಃ ಕರ್ಮ ದೃಷ್ಟ್ವಾಸೌ ಮುನಿಪುಂಗವಃ || ೨ ||

|| ವರಾಹ ಉವಾಚ ||

ನಿಮಿಷೇಣ ಕೃತಂ ಕರ್ಮ ದೃಷ್ಟ್ವಾ ಭಗವತಾ ಮುನಿಃ ।
ಆರಿರಾಧಯಿಷುರ್ದೇವಂ ತಮೇವ ಪ್ರಯಯೌ ವನಂ ||
ಪ್ರಭಾಸಂ ನಾಮ ಸೋಮಸ್ಯ ತೀರ್ಥಂ ಪರಮದುರ್ಲಭಂ || ೩ ||

ಹದಿಮೂರನೆಯ ಅಧ್ಯಾಯ

ಶ್ರಾದ್ಧಕಲ್ಪ

೧-೨. ಭೂದೇವಿ— ಗುರುವೇ, ಆ ಅತ್ಯಾಶ್ಚರ್ಯವನ್ನು ನೋಡಿದ ಗೌರಮುಖಮುನಿಯೂ, ಮಣಿಜರಾದ ಆ ಸೇನಾನಾಯಕರೂ ಯಾವ ಫಲವನ್ನೂ ವರವನ್ನೂ ಪಡೆದರೆಂಬುದನ್ನೂ ಶ್ರೀಮಂತನೂ, ಪರಮಧಾರ್ಮಿಕನೂ, ಋಷಿವರ್ಯನೂ ಆದ ಗೌರಮುಖಮುನಿಯು, ಹರಿಯ ಕಾರ್ಯವನ್ನು ನೋಡಿ, ಏನು ಮಾಡಿದನೆಂಬುದನ್ನೂ ನನಗೆ ಹೇಳು.

೩. ವರಾಹ— ಗೌರಮುಖನು, ನಿಮಿಷಮಾತ್ರದಲ್ಲಿ ಭಗವಂತನು ಮಾಡಿದ ಕಾರ್ಯವನ್ನು ನೋಡಿ, ಆ ದೇವನನ್ನು ಆರಾಧಿಸಲು ಬಯಸಿ, ಆದೇ ವನದಲ್ಲಿ ಅತಿ ದುರ್ಲಭವಾದ ಪ್ರಭಾಸವೆಂಬ ಹೆಸರುಳ್ಳ ಸೋಮತೀರ್ಥಕ್ಕೆ ಹೋದನು.

ತತ್ರ ದೈತ್ಯಾಂತಕೃದ್ದೇವಃ ಪ್ರೋಚ್ಯತೇ ತೀರ್ಥಚಿಂತಕೈಃ ।
ಆರಾಧಯಾಮಾಸ ಹರಿಂ ದೈತ್ಯಸೂದನಸಂಜ್ಞಿತಂ ॥ ೪ ॥

ತಸ್ಯಾರಾಧಯತೋ ದೇವಂ ಹರಿಂ ನಾರಾಯಣಂ ಪ್ರಭುಂ ।
ಆಜಗಾಮ ಮಹಾಯೋಗೀ ಮಾರ್ಕಂಡೇಯೋ ಮಹಾಮುನಿಃ ॥ ೫ ॥

ಸ ದೃಷ್ಟ್ವಾಽಭ್ಯಾಗತಂ ದೂರಾತ್ ಅರ್ಘ್ಯಪಾದ್ಯೇನ ತಂ ಮುನಿಃ ।
ಅರ್ಚಯಾಮಾಸ ವೈ ಭಕ್ತ್ಯಾ ಮುದಾ ಪರಮಯಾ ಯುತಃ ॥ ೬ ॥

ಕೌಶ್ಯಾಂ ಬೃಸ್ಯಾಂ ತದಾಸೀನಂ ಪಪ್ರಚ್ಛೇದಂ ಮುನಿಸ್ತದಾ ।
ಶಾಧಿ ಮಾಂ ಮುನಿಶಾರ್ದೂಲ ಕಿಂ ಕರೋಮಿ ಮಹಾವ್ರತ ॥ ೭ ॥

ಏವಮುಕ್ತಃ ಸ ವಿಪ್ರೇಂದ್ರೋ ಮಾರ್ಕಂಡೇಯೋ ಮಹಾತಪಾಃ ।
ಉವಾಚ ಶ್ಲಕ್ಷ್ಣಯಾ ವಾಚಾ ಮುನಿಂ ಗೌರಮುಖಂ ತದಾ ॥ ೮ ॥

---

೪. ಅಲ್ಲಿ ತೀರ್ಥಧ್ಯಾನ ಮಾಡುವವರು ದೇವನನ್ನು ದೈತ್ಯಾಂತಕೃತ್ತೆಂದು ಹೇಳುತ್ತಾರೆ. ದೈತ್ಯಸೂದನನೆಂದೂ ಹೆಸರುಳ್ಳ ಆ ಹರಿಯನ್ನು ಗೌರಮುಖನು ಪೂಜಿಸಿದನು.

೫. ದೇವನೂ ಪ್ರಭುವೂ ಆದ ಹರಿನಾರಾಯಣನನ್ನು ಸಂತೋಷ ಪಡಿಸುತ್ತಿದ್ದ ಆ ಗೌರಮುಖನ ಹತ್ತಿರಕ್ಕೆ ಮಹಾಯೋಗಿಯಾದ ಮಾರ್ಕಂಡೇಯ ಮುನಿಯು ಬಂದನು.

೬. ಅಭ್ಯಾಗತನಾದ ಅವನನ್ನು ದೂರದಿಂದಲೇ ನೋಡಿ, ಗೌರಮುಖನು ಅತಿಸಂತೋಷದಿಂದಲೂ ಭಕ್ತಿಯಿಂದಲೂ ಕೂಡಿದವನಾಗಿ ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿದನು.

೭. ದರ್ಭೆಯ ಆಸನದಲ್ಲಿ ಕುಳಿತ ಮಾರ್ಕಂಡೇಯನನ್ನು ಕುರಿತು, ಋಷಿಯು ಮುನಿವರ್ಯನೇ, ಮಹಾವ್ರತಿಯೇ, ನಾನೇನುಮಾಡಬೇಕೆಂಬುದನು ನನಗೆ ನಿಯಮಿಸು ಎಂದನು.

೮. ಹೀಗೆ ಹೇಳಿಸಿಕೊಂಡ ಮಹಾತಪಸ್ವಿಯೂ, ಬ್ರಾಹ್ಮಣೋತ್ತಮನೂ ಆದ ಮಾರ್ಕಂಡೇಯನು ಆಗ ಗೌರಮುಖನಿಗೆ ನಯವಾದ ನುಡಿಯಿಂದ ಮುಂದಿನಂತೆ ಹೇಳಿದನು.

|| ಮಾರ್ಕಂಡೇಯ ಉವಾಚ ||

ಸರ್ವೇಷಾಮೇವ ದೇವಾನಾಮಾದ್ಯೋ ನಾರಾಯಣೋ ಗುರುಃ |
ತಸ್ಮಾದ್ಬ್ರಹ್ಮಾ ಸಮುತ್ಪನ್ನಃ ಸೋಽಪಿ ಸಪ್ತಾಸೃಜನ್ಮುನೀನ್ || ೯ ||

ಮಾಂ ಯಜಸ್ವೇತಿ ತೇನೋಕ್ತಾಸ್ತದಾ ತೇ ಪರಮೇಷ್ಠಿನಾ |
ಆತ್ಮನಾತ್ಮಾನಮೇವಾಗ್ರೇ ಅಯಜಂತ ಇತಿ ಶ್ರುತಿಃ || ೧೦ ||

ತೇಷಾಂ ವೈ ಬ್ರಹ್ಮಜಾತಾನಾಂ ಮಹಾವೈಕಾರಿಕರ್ಮಣಾಂ |
ಅಶಪದ್ವ್ಯಭಿಚಾರೋಽಹಿ ಮಹಾನೇಷ ಕೃತೋ ಯತಃ ||
ಪ್ರಭ್ರಷ್ಟಜ್ಞಾನಿನಃ ಸರ್ವೇ ಭವಿಷ್ಯಂತಿ ನ ಸಂಶಯಃ || ೧೧ ||

ಏವಂ ಶಪ್ತಾಸ್ತತಸ್ತೇ ವೈ ಬ್ರಹ್ಮಣಾತ್ಮಸಮುದ್ಭವಾಃ |
ಸದ್ಯೋ ವಂಶಕರಾನ್ ಪುತ್ರಾನುತ್ಪಾದ್ಯ ತ್ರಿದಿವಂ ಯಯುಃ || ೧೨ ||

ತತಸ್ತೇಷು ಪ್ರಯಾತೇಷು ತ್ರಿದಿವಂ ಬ್ರಹ್ಮವಾದಿಷು |
ತತ್ಪುತ್ರಾಃ ಶ್ರಾದ್ಧದಾನೇನ ತರ್ಪಯಾಮಾಸುರಂಜಸಾ || ೧೩ ||

೯-೧೦. ಮಾರ್ಕಂಡೇಯ—ಸರ್ವದೇವತೆಗಳಿಗೂ, ಗುರುವಾದ ನಾರಾಯಣನೇ ಮೂಲನು. ಅವನಿಂದ ಬ್ರಹ್ಮನುದಿಸಿದನು. ಆ ಬ್ರಹ್ಮನು ಏಳು ಜನ ಋಷಿಗಳನ್ನು ಸೃಷ್ಟಿಸಿ "ನನ್ನನ್ನು ಪೂಜಿಸಿರಿ" ಎಂದು ಅವರಿಗೆ ಹೇಳಿದನು. (ಆದರೆ) ಅವರು ಮೊದಲು ತಮ್ಮನ್ನು ತಾವೇ ಪೂಜಿಸಿಕೊಂಡರೆಂದು ಶ್ರುತಿಯಿದೆ.

೧೧. ಮಹಾವಿಕಾರವಾದ ಕರ್ಮವನ್ನು ಮಾಡಿದ ಆ (ಬ್ರಹ್ಮ) ಪುತ್ರರನು ಈ 'ಅತ್ಯಾಚಾರವನ್ನು ಮಾಡಿದುದರಿಂದ ನೀವು ಎಲ್ಲರೂ ನಿಜವಾಗಿಯೂ ಜ್ಞಾನ ಹೀನರಾಗಿ ಆಗುವಿರಿ' ಎಂದು ಆತನು ಶಪಿಸಿದನು.

೧೨. ಹೀಗೆ ಬ್ರಹ್ಮನಿಂದ ಶಾಪವನ್ನು ಪಡೆದ ಅವರು, ಒಡನೆಯೇ ವಂಶೋದ್ಧಾರಕರಾದ ಪುತ್ರರನ್ನು ಪಡೆದು, ಸ್ವರ್ಗಸ್ಥರಾದರು.

೧೩. ಬ್ರಹ್ಮವಾದಿಗಳಾದ ಅವರು ಸ್ವರ್ಗಸ್ಥರಾದ ಬಳಿಕ ಅವರ ಮಕ್ಕಳು ಬೇಗನೆ ಶ್ರಾದ್ಧಮಾಡಿ, ಅವರನ್ನು ತೃಪ್ತಿಪಡಿಸಿದರು.

ತೇ ಚ ವೈಮಾನಿಕಾಃ ಸರ್ವೇ ಬ್ರಹ್ಮಣಃ ಸಪ್ತ ಮಾನಸಾಃ ।
ತತ್ಪಿಂಡದಾನಂ ಮಂತ್ರೋಕ್ತಂ ಪ್ರಪಶ್ಯಂತೋ ವ್ಯವಸ್ಥಿತಾಃ ॥ ೧೪ ॥

॥ ಗೌರಮುಖ ಉವಾಚ ॥

ಯೇ ಚ ತೇ ಪಿತರೋ ಬ್ರಹ್ಮನ್ಯಂಚ ಕಾಲಂ ಸಮಾಸತೇ ।
ಕಿಯಂತೋ ವೈ ಪಿತೃಗಣಾಸ್ತಸ್ಮಿನ್ ಲೋಕೇ ವ್ಯವಸ್ಥಿತಾಃ ॥ ೧೫ ॥

॥ ಮಾರ್ಕಂಡೇಯ ಉವಾಚ ॥

ಪ್ರವರ್ತಂತೇ ವರಾಃ ಕೇಚಿದ್ದೇವಾನಾಂ ಸೋಮವರ್ಧನಾಃ ।
ತೇ ಮರೀಚ್ಯಾದಯಃ ಸಪ್ತ ಸ್ವರ್ಗೇ ತೇ ಪಿತರಃ ಸ್ಮೃತಾಃ ॥ ೧೬ ॥

ಚತ್ವಾರೋ ಮೂರ್ತಿಮಂತೋ ವೈ ತ್ರಯಸ್ತ್ವನ್ಯೇ ಹ್ಯಮೂರ್ತಯಃ ।
ತೇಷಾಂ ಲೋಕನಿಸರ್ಗಂಚ ಕೀರ್ತಯಿಷ್ಯಾಮಿ ತಚ್ಛೃಣು ॥ ೧೭ ॥

ಲೋಕಾಃ ಸಂತಾನಕಾ ನಾಮ ಯತ್ರ ತಿಷ್ಠಂತಿ ಭಾಸ್ವರಾಃ ।
ದೇವಾನಾಂ ಪಿತರಸ್ತೇಹಿ ತಾನ್ಯಜಂತೀಹ ದೇವತಾಃ ॥ ೧೮ ॥

---

೧೪. ಬ್ರಹ್ಮನ ಮಾನಸಪುತ್ರರಾದ ಅವರೇಳುಮಂದಿಯೂ ವೈಮಾನಿಕರಾಗಿ ಮಂತ್ರೋಕ್ತವಾದ ಆ ಪಿಂಡಪ್ರದಾನವನ್ನು ನೋಡುತ್ತಿದ್ದರು.

೧೫. ಗೌರಮುಖ—ಬ್ರಾಹ್ಮಣನೇ 'ಆ ಪಿತೃಗಳಾರು? ಪಿತೃಗಣಗಳು ಎಷ್ಟು? ಅವರು ಆ ಲೋಕದಲ್ಲಿ ಎಷ್ಟು ಕಾಲವಿರುವರು?'

೧೬. ಮಾರ್ಕಂಡೇಯಮುನಿ—ಶ್ರೇಷ್ಠರಾದ ಕೆಲವರು ದೇವತೆಗಳಿಗೆ ಸೋಮವರ್ಧನರಾಗಿ ಪ್ರವರ್ತಿಸುತ್ತಾರೆ. ಮರೀಚ್ಯಾದಿಗಳಾದ ಆ ಏಳು ಜನರು ಸ್ವರ್ಗದಲ್ಲಿ ಪಿತೃಗಳೆನಿಸುವರು.

೧೭. ಅವರಲ್ಲಿ ನಾಲ್ವರು ಸಾಕಾರರು. ಉಳಿದವರು ನಿರಾಕಾರರು. ಅವರ ಲೋಕಸ್ವಭಾವವನ್ನು ಹೇಳುವೆನು ಕೇಳು.

೧೮–೧೯. ತೇಜಸ್ವಿಗಳಾದ ದೇವತೆಗಳ ಪಿತೃಗಳಿರುವ ಆ ಪ್ರದೇಶಗಳಿಗೆ ಸಂತಾನಕ ಲೋಕಗಳೆಂದು ಹೆಸರು. ಅವರನ್ನು ದೇವತೆಗಳು ಪೂಜಿಸುವರು.

ಏತೇ ವೈ ಲೋಕವಿಭ್ರಷ್ಟಾ ಲೋಕಾನ್ ಪ್ರಾಪ್ಯ ಸನಾತನಾನ್ ।
ಪುನರ್ಯುಗಶತಾಂತೇಷು ಜಾಯಂತೇ ಬ್ರಹ್ಮವಾದಿನಃ ॥ ೧೯ ॥

ತೇ ಪ್ರಾಪ್ಯ ತಾಂ ಸ್ಮೃತಿಂ ಭೂಯಃ ಸಾಧ್ಯಯೋಗಮನುತ್ತಮಂ ।
ಚಿಂತ್ಯ ಯೋಗಗತಿಂ ಶುದ್ಧಾಂ ಪುನರಾವೃತ್ತಿದುರ್ಲಭಾಂ ॥ ೨೦ ॥

ಏತೇ ಸ್ಮ ಪಿತರಃ ಶ್ರಾದ್ಧೇ ಯೋಗಿನಾಂ ಯೋಗವರ್ಧನಾಃ ।
ಆಪ್ಯಾಯಿತಾಸ್ತು ತೇ ಸರ್ವೇ ಯೋಗಿಯೋಗಬಲೇನ ಚ ॥ ೨೧ ॥

ತಸ್ಮಾಚ್ಛ್ರಾದ್ಧಾನಿ ದೇಯಾನಿ ಯೋಗಿನಾಂ ಯೋಗಿಸತ್ತಮ ।
ಏಷ ವೈ ಪ್ರಥಮಃ ಸರ್ಗಃ ಸೋಮಪಾನಾಮನುತ್ತಮಃ ॥ ೨೨ ॥

ಏತೇ ತ ಏಕತನವೋ ವರ್ತಂತೇ ದ್ವಿಜಸತ್ತಮಾಃ ।
ಭೂರ್ಲೋಕವಾಸಿನಾಂ ಯಾಜ್ಯಾಃ ಸ್ವರ್ಗಲೋಕನಿವಾಸಿನಃ ॥ ೨೩ ॥

ಬ್ರಹ್ಮಪುತ್ರಾ ಮರೀಚ್ಯಾದ್ಯಾಸ್ತೇಷಾಂ ಯಾಜ್ಯಾ ಮರುದ್ಗಣಾಃ ॥ ೨೪ ॥

ಸಂತಾನಕಲೋಕಗಳನ್ನು ಪಡೆದೂ ನೂರು ಯುಗಗಳ ಕಡೆಯಲ್ಲಿ ಅವರು ಆ ಲೋಕಗಳನ್ನು ಕಳೆದುಕೊಂಡು ಪುನಃ ಬ್ರಹ್ಮವಾದಿಗಳಾಗಿ ಹುಟ್ಟುವರು.

೨೦. ಅವರು ಮತ್ತೆ ಹಿಂದಿನ ಸ್ಮರಣೆಯನ್ನು ಪಡೆದು, ಅತ್ಯುತ್ತಮವಾದ ಸಾಧ್ಯಯೋಗವನ್ನೂ, ಪುನರ್ಜನ್ಮವನ್ನು ದುರ್ಲಭವಾಗಿ ಮಾಡುವ ಪವಿತ್ರವಾದ ಯೋಗಮಾರ್ಗವನ್ನೂ ಅನುಸರಿಸುವರು.

೨೧. ಈ ಪಿತೃಗಳೇ ಶ್ರಾದ್ಧದಲ್ಲಿ ಯೋಗಿಗಳ ಯೋಗವನ್ನು ಬೆಳೆಸುವರು. ಮತ್ತು ಯೋಗಬಲದಿಂದ ಆನಂದಿತರಾಗುವರು.

೨೨. ಯೋಗಿವರ್ಯಾಗ್ರಗಣ್ಯನೇ, ಆದುದರಿಂದ ಯೋಗಿಗಳಿಗೆ ಶ್ರಾದ್ಧವನ್ನು ಮಾಡಬೇಕು. ಸೋಮಪಾನಮಾಡುವವರ ಉತ್ತಮವಾದ ಈ ಸೃಷ್ಟಿಯು ಮೊದಲನೆಯ ಸೃಷ್ಟಿಯೆನಿಸುವುದು.

೨೩-೨೪. ಬ್ರಾಹ್ಮಣೋತ್ತಮರಾದ ಇವರು ಏಕಾಂಗಿಗಳಾಗಿರುತ್ತಾರೆ. ಭೂಲೋಕನಿವಾಸಿಗಳಾದವರಿಗೆ ಸ್ವರ್ಗಲೋಕನಿವಾಸಿಗಳೂ, ಬ್ರಹ್ಮಪುತ್ರರೂ ಆದ ಮರೀಚ್ಯಾದಿಗಳು ಪೂಜ್ಯರು. ಅವರಿಗೆ ಮರುದ್ಗಣವವರು ಪೂಜ್ಯರು.

ಕಲ್ಪವಾಸಿಕ ಸಂಜ್ಞಾನಾಂ ತೇಷಾಮಪಿ ಜನ್ಯೈರ್ವೃತಾಃ ।
ಸನಕಾದ್ಯಾಸ್ತತಸ್ತೇಷಾಂ ವೈರಾಜಾಸ್ತಪಸಿ ಸ್ಥಿತಾಃ ॥
ತೇಷಾಂ ಸಪ್ತ ಗಣಾಃ ಪ್ರೋಕ್ತಾ ಇತ್ಯೇಷಾ ಪಿತೃಸಂತತಿಃ ॥ ೨೫ ॥

ತೇಽಪಿ ಯಾಜ್ಯಾಃಪೃಥಗ್ವರ್ಣೈರ್ವರ್ಶೂದ್ರೇಭ್ಯಃ ಪೃಥಕ್ಕೃತಾಃ ।
ವರ್ಣತ್ರಯಾಭ್ಯನುಜ್ಞಾತಃ ಶೂದ್ರಃ ಸರ್ವಾನ್ ಪಿತೄನ್
ಯಜೇತ್ ॥ ೨೬ ॥

ತೇ ತು ತಸ್ಯ ಪೃಥಕ್ ಸಂತಿ ಪಿತರಃ ಶೂದ್ರಜಾತಯಃ ।
ಮುಕ್ತಾಶ್ಚೇತನಕಾ ಬ್ರಹ್ಮನ್ ನದೃಶ್ಯಂತೇ ಪಿತೃಷ್ವಪಿ ॥ ೨೭ ॥

ವಿಶೇಷಶಾಸ್ತ್ರದೃಷ್ಟ್ಯಾ ತು ಪುರಾಣಾನಾಂಚ ದರ್ಶನಾತ್ ।
ಏವಂ ಋಷಿಸ್ತುತೈಃ ಶಾಸ್ತ್ರೈಃ ಜ್ಞಾತ್ವಾ ಯಾಜ್ಯಾನ್
ಸ್ವಸಂಭವಾನ್ ॥ ೨೮ ॥

---

೨೫. ಕಲ್ಪವಾಸಿಗಳೆಂಬ ಹೆಸರುಳ್ಳ ಅವರಿಗೆ ಜನಲೋಕನಿವಾಸಿಗಳಾದ ಸನಕಾದಿಗಳೂ, ಅವರಿಗೆ ವೈರಾಜರೂ ತಪಸ್ವಿಗಳೂ ಆದ ಸಪ್ತರ್ಷಿಗಣದವರೂ ಪೂಜ್ಯರು. ಹೀಗೆ ಈಪಿತೃಸಂತತಿಯನ್ನು ಹೇಳಿದುದಾಯಿತು.

೨೬. ಅವರನ್ನು ಬೇರೆ ಬೇರೆಯಾಗಿ ಶೂದ್ರರಲ್ಲದ ಬೇರೆ ವರ್ಣಗಳವರು ಪೂಜಿಸಬೇಕು. ಶೂದ್ರರು ಪೂಜಿಸಬಾರದು. ಬ್ರಾಹ್ಮಣಾದಿಯಾದ ಮೂರು ವರ್ಣಗಳವರಿಂದ ಅನುಮತಿಯನ್ನು ಪಡೆದು, ಶೂದ್ರನು ಸರ್ವಪಿತೃಗಳನ್ನೂ ಆರಾಧಿಸಬಹುದು.

೨೭. ಶೂದ್ರನಿಗಾದರೋ ಬೇರೆಯಾಗಿ ಶೂದ್ರಜಾತಿ ಪಿತೃಗಳಿರುವರು. ಬ್ರಾಹ್ಮಣನೇ, ಪಿತೃಗಳಲ್ಲೂ ಮುಕ್ತಚೇತನರು ಕಾಣುವುದಿಲ್ಲ.

೨೮. ಋಷಿಗಳು ಹೇಳಿರುವ (ಸ್ಮೃತಿ) ಶಾಸ್ತ್ರಗಳಿಂದಲೂ ಪುರಾಣಗಳನ್ನು ನೋಡುವುದರಿಂದಲೂ, ವಿಶೇಷ ಶಾಸ್ತ್ರದೃಷ್ಟಿಯಿಂದಲೂ ತಮ್ಮವಂಶದ ಪೂಜ್ಯ ಪಿತೃಗಳನ್ನರಿತು ವರ್ತಿಸಬೇಕು.

ಸ್ವಯಂ ಸೃಷ್ಟ್ವಾಂ ಸ್ಮೃತಿರ್ಲಬ್ಧಾ ಪುತ್ರಾಣಾಂ ಬ್ರಹ್ಮಣಾ ತತಃ ।
ಪರಂ ನಿರ್ವಾಣಮಾಪನ್ನಾಸ್ತೇಪಿ ಜ್ಞಾನೇನ ಚೈವಹಿ ॥ ೨೯ ॥

ವಸ್ವಾದೀನಾಂ ಕಶ್ಯಪಾದ್ಯಾ ವರ್ಣಾನಾಂ ವಾಸವಾದಯಃ ।
ಅವಿಶೇಷೇಣ ವಿಜ್ಞೇಯಾ ಗಂಧರ್ವಾದ್ಯಾ ಅಪಿ ಧ್ರುವಂ ॥ ೩೦ ॥

ಏಷ ತೇ ಪೈತೃಕಃ ಸರ್ಗ ಉದ್ದೇಶೇನ ಮಹಾಮುನೇ ।
ಕಥಿತೋ ನಾಂತ ಏವಾಸ್ಯ ವರ್ಷಕೋಟ್ಯಾ ಹಿ ದೃಶ್ಯತೇ ॥ ೩೧ ॥

॥ ಅಥ ಶ್ರಾದ್ಧಕಾಲಾಃ ॥

ಶ್ರಾದ್ಧಸ್ಯ ಕಾಲಾನ್ವಕ್ಷ್ಯಾಮಿ ತಚ್ಛೃಣುಷ್ವ ದ್ವಿಜೋತ್ತಮ ॥
ಶ್ರಾದ್ಧಾರ್ಹಮಾಗತಂ ದ್ರವ್ಯಂ ವಿಶಿಷ್ಟಮಥವಾ ದ್ವಿಜಂ ॥ ೩೨ ॥

ಶ್ರಾದ್ಧಂ ಕುರ್ವೀತ ವಿಜ್ಞಾಯ ವ್ಯತೀಪಾತೇಯನೇ ತಥಾ ।
*ವಿಷುವೇ ಚೈವ ಸಂಪ್ರಾಪ್ತೇ ಗ್ರಹಣೇ ಶಶಿಸೂರ್ಯಯೋಃ ॥ ೩೩ ॥

---

೨೯. ಬ್ರಹ್ಮನ ಶಾಪಕ್ಕೀಡಾದ ಮರೀಚ್ಯಾದಿಗಳ ಪುತ್ರರು ಮರೀಚ್ಯಾದಿ ಪಿತೃಗಳಿಗೆ ಸರಿಯಾಗಿ ಶ್ರಾದ್ಧಮಾಡಿದುದರಿಂದ ಅವರು ಮತ್ತೆ ಜ್ಞಾನವನ್ನು ಪಡೆದು, ಪರನಿರ್ವಾಣವನ್ನು ಪಡೆದರು. ತನ್ನ ಪುತ್ರರಾದ ಮರಿಚ್ಯಾದಿಗಳನ್ನು ಬ್ರಹ್ಮನೂ ಬಳಿಕ ಸೃಷ್ಟಿಯುಲ್ಲಿ ತಾನಾಗಿಯೇ ಜ್ಞಾಪಿಸಿಕೊಂಡನು.

೩೦–೩೧. ವಸ್ವಾದಿಗಳಿಗೆ ಕಶ್ಯಪಾದಿಗಳೂ, ವರ್ಣಗಳಿಗೆ ವಸ್ವಾದಿಗಳೂ, ಸಾಮಾನ್ಯವಾಗಿ ಗಂಧರ್ವಾದಿಗಳೂ ಪಿತೃಗಳೆಂದು ತಿಳಿಯಬೇಕು. ಮಹಾಮುನಿಯೇ, ಈ ಪಿತೃಸರ್ಗವು ನಿನಗೆ ಸಂಗ್ರಹವಾಗಿಹೇಳಲ್ಪಟ್ಟಿತು. ಕೋಟಿವರ್ಷಗಳು ಹೇಳಿದರೂ ಇದು ಮುಗಿಯುವುದಿಲ್ಲ.

೩೨. ಇನ್ನು ಶ್ರಾದ್ಧಕಾಲಗಳ ವಿಚಾರ—ಬ್ರಾಹ್ಮಣೋತ್ತಮನೇ, ಶ್ರಾದ್ಧಕ್ಕೆ ಕಾಲಗಳನ್ನು ಹೇಳುವೆನು, ಕೇಳು. ಶ್ರಾದ್ಧಾರ್ಹವಾದ ವಿಶಿಷ್ಟ ದ್ರವ್ಯವನ್ನೂ ಬ್ರಾಹ್ಮಣನನ್ನೂ ತಿಳಿದು, ಶ್ರಾದ್ಧಮಾಡಬೇಕು.

೩೩. ವ್ಯತೀಪಾತ, ಉತ್ತರಾಯಣ, ದಕ್ಷಿಣಾಯನ *ವಿಷುವ ಚಂದ್ರಸೂರ್ಯಗ್ರಹಣ ಈ ಕಾಲಗಳಲ್ಲಿ ಶ್ರಾದ್ಧವನ್ನು ಮಾಡಬೇಕು.

---

* ವಿಷುವ= ಮೇಷ ತುಲಾ ಸಂಕ್ರಮಣಗಳು

ಸಮಸ್ತೇಷ್ವೇವ ವಿಪ್ರೇಂದ್ರ ರಾಶಿಷ್ವರ್ಕೇತಿ ಗಚ್ಛತಿ || ೩೪ ||

ನಕ್ಷತ್ರಗ್ರಹಪೀಡಾಸು ದುಷ್ಟಸ್ವಪ್ನಾವಲೋಕನೇ |
ಇಚ್ಛಾಶ್ರಾದ್ಧಾನಿ ಕುರ್ವೀತ ನವಸಸ್ಯಾಗಮೇ ತಥಾ || ೩೫ ||

ಅಮಾವಸ್ಯಾ ಯದಾ ಆರ್ದ್ರಾವಿಶಾಖಾಸ್ವಾತಿಯೋಗಿನೀ |
ಶ್ರಾದ್ಧೈಃ ಪಿತೃಗಣಸ್ತೃಪ್ತಿಂ ತದಾಪ್ನೋತ್ಯಷ್ಟ ವಾರ್ಷಿಕೀಂ || ೩೬ ||

ಅಮಾವಸ್ಯಾ ಯದಾ ಪುಷ್ಯೇ ರೌದ್ರರ್ಕ್ಷೇ ಚ ಪುನರ್ವಸೌ |
ದ್ವಾದಶಾಬ್ದಂ ತಥಾ ತೃಪ್ತಿಂ ಪ್ರಯಾಂತಿ ಪಿತರೋರ್ಚಿತಾಃ || ೩೭ ||

ವಾಸವಾಜೈಕಪಾದರ್ಕ್ಷೇ ಪಿತೄಣಾಂ ತೃಪ್ತಿಮಿಚ್ಛತಾಂ |
ವಾರುಣೇ ಚಾಪ್ಯಮಾವಸ್ಯಾ ದೇವಾನಾಮಪಿ ದುರ್ಲಭಾ || ೩೮ ||

೩೪-೩೫. ಸೂರ್ಯನು ಎಲ್ಲಾ ರಾಶಿಗಳಿಗೆ ಹೋಗುವಾಗಲೂ ಎಂದರೆ ಅಯನ ವಿಷುವಗಳಲ್ಲದ ಉಳಿದ ಸಂಕ್ರಮಣಗಳಲ್ಲೂ, ತನ್ನ ನಕ್ಷತ್ರಕ್ಕೆ ಗ್ರಹಪೀಡೆಯಿರುವಾಗಲೂ, ಕೆಟ್ಟಕನಸನ್ನು ಕಂಡಾಗಲೂ ಹೊಸದಾಗಿ ಧಾನ್ಯವು ಬಂದಾಗಲೂ ಐಚ್ಛಿಕವಾಗಿ ಶಾದ್ಧವನ್ನು ಮಾಡಬೇಕು.

೩೬. ಆರ್ದ್ರಾ, ವಿಶಾಖಾ, ಸ್ವಾತಿ ನಕ್ಷತ್ರಗಳಲ್ಲಾವುದಾವರೂ ಒಂದರಿಂದ ಯುಕ್ತವಾದ ಅಮಾವಾಸ್ಯೆಯ ದಿನ ಶ್ರಾದ್ಧಮಾಡುವುದರಿಂದ ಪಿತೃಗಣಕ್ಕೆ ಎಂಟುವರ್ಷಕಾಲ ತೃಪ್ತಿಯುಂಟಾಗುವುದು.

೩೭. ಪುನರ್ವಸು, ಪುಷ್ಯ, ಆರ್ದ್ರಾನಕ್ಷತ್ರಗಳಲ್ಲಿ ಯಾವುದಾದರೊಂದರಿಂದ ಕೂಡಿದ ಅಮಾವಾಸ್ಯೆಯ ದಿನ ಮಾಡುವ ಶ್ರಾದ್ಧಾರ್ಚನೆಯಿಂದ ಪಿತೃಗಳಿಗೆ ಹನ್ನೆರಡು ವರ್ಷಕಾಲ ತೃಪ್ತಿಯುಂಟಾಗುವುದು.

೩೮. ಪಿತೃಗಳಿಗೆ ತೃಪ್ತಿಯನ್ನುಂಟುಮಾಡಲು ಇಚ್ಛಿಸುವ ದೇವತೆಗಳಿಗೆ ಕೂಡ, ಧನಿಷ್ಠೆ, ಶತಭಿಷೆ, ಪೂರ್ವಭಾದ್ರಪದ ನಕ್ಷತ್ರಗಳಿಂದ ಕೂಡಿದ ಅಮಾವಾಸ್ಯೆಯು ದುರ್ಲಭವಾದುದು.

ನವಸ್ವೃಕ್ಷೇಷ್ವಮಾವಾಸ್ಯಾ ಯದಾ ತೇಷು ದ್ವಿಜೋತ್ತಮ |
ತದಾ ಶ್ರಾದ್ಧಾನಿ ದೇಯಾನಿ ಅಕ್ಷಯ್ಯಫಲಮಿಚ್ಛತಾಂ ||
ಅಪಿ ಕೋಟಿಸಹಸ್ರೇಣ ಪುಣ್ಯಸ್ಯಾಂತೋ ನ ವಿದ್ಯತೇ || ೩೯ ||

ಅಥಾಪರಂ ಪಿತರಃ ಶ್ರಾದ್ಧಕಾಲಂ
ರಹಸ್ಯಮಸ್ಮಾತ್ಪ್ರವದಂತಿ ಪುಣ್ಯಂ |
ವೈಶಾಖಮಾಸಸ್ಯ ತು ಯಾ ತೃತೀಯಾ
ನವಮ್ಯಸೌ ಕಾರ್ತಿಕ ಶುಕ್ಲಪಕ್ಷೇ || ೪೦ ||

ನಭಸ್ಯ ಮಾಸಸ್ಯ ತಮಿಸ್ರಪಕ್ಷೇ
ತ್ರಯೋದಶೀ ಪಂಚದಶೀ ಚ ಮಾಘೇ |
ಉಪಪ್ಲವೇ ಚಂದ್ರಮಸೋ ರವೇಶ್ಚ
*ಚತಸೃಷ್ವಪ್ಯಷ್ಟಕಾಸ್ವಯನದ್ವಯೇ ಚ || ೪೧ ||

---

೩೯. ದ್ವಿಜೋತ್ತಮಾ, ಶಾಶ್ವತವಾದ ಫಲವನ್ನು ಬಯಸುವವರು ಮೇಲೆಹೇಳಿದ ಒಂಭತ್ತು ನಕ್ಷತ್ರಗಳಲ್ಲಿ ಅಮಾವಾಸ್ಯೆಯಾದಾಗ ಶ್ರಾದ್ಧಗಳನ್ನು ಮಾಡಬೇಕು. ಇದರಿಂದ ಆಗುವ ಪುಣ್ಯವು ಕೋಟಿಸಾವಿರ ವರ್ಷಗಳಲ್ಲೂ ಮುಗಿಯುವುದಿಲ್ಲ

೪೦-೪೨. ಪಿತೃಗಳು, ರಹಸ್ಯವೂ, ಇದಕ್ಕಿಂತ ಅಧಿಕ ಪುಣ್ಯಪ್ರದವೂ ಆದ ಬೇರೆಯ ಶಾದ್ಧಕಾಲವನ್ನು ಹೇಳುತ್ತಾರೆ. ವೈಶಾಖಮಾಸದ ಶುಕ್ಲ (ಅಕ್ಷಯತೃತೀಯೆ) ತದಿಗೆ, ಕಾರ್ತೀಕಶುಕ್ಲನವಮಿ, ಶ್ರಾವಣಬಹುಳ ತ್ರಯೋದಶಿ, ಮಾಘಬಹುಳ ಅಮಾವಾಸ್ಯೆ, ಚಂದ್ರಸೂರ್ಯಗ್ರಹಣ, ನಾಲ್ಕು *ತಿಸ್ರೋಷ್ಟಕಗಳು, (ಕರ್ಕಾಟಕ ಮಕರಸಂಕ್ರಮಣ) ಉತ್ತರಾಯಣ

---

* ಮಾರ್ಗಶಿರ, ಪುಷ್ಯ, ಮಾಘ, ಫಾಲ್ಗುನ ಮಾಸಗಳ ಕೃಷ್ಣಪಕ್ಷದ ಸಪ್ತಮಿ ಅಷ್ಟಮಿ ಮತ್ತು ನವಮಿಗಳು ತಿಸ್ರೋಷ್ಟಕಗಳೆನಿಸುವುವು.

ಪಾನೀಯಮಪ್ಯತ್ರ ತಿಲೈರ್ವಿಮಿಶ್ರಂ
ದದ್ಯಾತ್ಪಿತೃಭ್ಯಃ ಪ್ರಯತೋ ಮನುಷ್ಯಃ ।
ಶ್ರಾದ್ಧಂ ಕೃತಂ ತೇನ ಸಮಾಸಹಸ್ರಂ
ರಹಸ್ಯಮೇತತ್ಪಿತರೋ ವದಂತಿ ॥ ೪೨ ॥

ಮಾಘಾಸಿತೇ ಪಂಚದಶೀ ಕದಾಚಿತ್
ಉಪೈತಿ ಯೋಗಂ ಯದಿ ವಾರುಣೇನ ।
ಋಕ್ಷೇಣ ಕಾಲಃ ಪರಮಃ ಪಿತೄಣಾಂ
ನತ್ವಲ್ಪಪುಣ್ಯೈರ್ದ್ವಿಜ ಲಭ್ಯತೇಸೌ ॥ ೪೩ ॥

ಕಾಲೇ ಧನಿಷ್ಠಾ ಯದಿ ನಾಮ ತಸ್ಮಿನ್
ಲಭ್ಯೇತ ವಿಪ್ರೇಂದ್ರ ಯದಾ ಪಿತೃಭ್ಯಃ ।
ದತ್ತಂ ಜಲಾನ್ನಂ ಪ್ರದದಾತಿ ತೃಪ್ತಿಂ
ವರ್ಷಾಯುತಂ ತತ್ಕುಲಜೈರ್ಮನುಷ್ಯೈಃ ॥ ೪೪ ॥

ದಕ್ಷಿಣಾಯನ ಪುಣ್ಯಕಾಲ, ಇವುಗಳಲ್ಲಿ ಮನುಷ್ಯನು ಪಿತೃಗಳಿಗೆ ಎಳ್ಳು ನೀರನ್ನಾದರೂ ಅರ್ಪಿಸಬೇಕು. ಅದರಿಂದ ಸಾವಿರವರ್ಷಗಳು ಶ್ರಾದ್ಧ ಮಾಡಿದಂತಾಗುವುದೆಂಬ ಈ ಗುಟ್ಟನ್ನು ಪಿತೃಗಳು ಹೇಳುತ್ತಾರೆ.

೪೩. ಮಾಘಬಹುಳ ಅಮಾವಾಸ್ಯೆಯು, ಯಾವಾಗಲಾದರೂ ಶತಭಿಷಾನಕ್ಷತ್ರದಿಂದ ಕೂಡಿದರೆ ಅದು ಪಿತೃಗಳಿಗೆ ಅತ್ಯುತ್ಕೃಷ್ಟವಾದ (ಪುಣ್ಯ)ಕಾಲ. ಬ್ರಾಹ್ಮಣನೇ, ಇದು ಅಲ್ಪಪುಣ್ಯಶಾಲಿಗಳಿಗೆ ಲಭಿಸುವುದಿಲ್ಲ.

೪೪. ಬ್ರಾಹ್ಮಣೋತ್ತಮನೇ, ಮಾಘಕೃಷ್ಣಾಮಾವಾಸ್ಯೆಯ ದಿನ ಧನಿಷ್ಠಾನಕ್ಷತ್ರವು ಲಭಿಸಿದುದೇ ಆದರೆ ಆಗ ವಂಶೀಯರು ಪಿತೃಗಳಿಗೆ ಅರ್ಪಿಸುವ ಜಲಾನ್ನವು (ಎಳ್ಳುನೀರು) ಹತ್ತುಸಾವಿರ ವರ್ಷಕಾಲ ತೃಪ್ತಿಯನ್ನುಂಟು ಮಾಡುವುದು.

ತತ್ರೈವ ಚೇದ್ಭಾದ್ರಪದಾ ತು ಪೂರ್ವಾ
ಕಾಲೇ ತದಾ ಯೈಃ ಕ್ರಿಯತೇ ಪಿತೃಭ್ಯಃ ।
ಶ್ರಾದ್ಧಂ ಪರಾಂ ತೃಪ್ತಿಮುಪೈತ್ಯನೇನ
ಯುಗಂ ಸಮಗ್ರಂ ಪಿತರಃ ಸ್ವಪಂತಿ ॥ ೪೫ ॥

ಗಂಗಾಂ ಶತದ್ರೂಂ ಅಥವಾ ವಿಪಾಶಾಂ
ಸರಸ್ವತೀಂ ನೈಮಿಷಗೋಮತೀಂ ವಾ ।
*ಗತೋ ಗವಾದ್ಯರ್ಚನಮಾದರೇಣ
ಕೃತ್ವಾ ಪಿತೄಣಾಮಹಿತಾನಿ ಹಂತಿ ॥ ೪೬ ॥

ಗಾಯಂತಿ ಚೈತತ್ಪಿತರಃ ಕದಾತು ।
ತ್ರಯೋದಶೀಯುಕ್ತಮಘಾಸು ಭೂಯಃ
ವರ್ಷಾಸಿತಾಂತೇ ಶುಭತೀರ್ಥತೋಯೈಃ
ಯಾಸ್ಯಾಮ ತೃಪ್ತಿಂ ತನಯಾದಿದತ್ತೈಃ ॥ ೪೭ ॥

---

೪೫. ಅದೇ ಅಮಾವಾಸ್ಯೆಯಲ್ಲಿ ಪೂರ್ವಾಭಾದ್ರಪದಾ ನಕ್ಷತ್ರವು ಇದ್ದರೆ ಆಗ ಪಿತೃಗಳಿಗೆ ಯಾರಾದರೂ ಶ್ರಾದ್ಧಮಾಡಿದಲ್ಲಿ ಅದರಿಂದ ಅತ್ಯಧಿಕವಾದ ತೃಪ್ತಿಯನ್ನು ಪಡೆದು ಪಿತೃಗಳು ಯುಗಕಾಲ ಪೂರ್ತಿಯಾಗಿ ಸುಖದಿಂದ ಮಲಗಿ ನಿದ್ರಿಸುವರು.

೪೬. ಗಂಗೆ, ಶತದ್ರು, ವಿಪಾಶೆ, ಸರಸ್ವತಿ, ನೈಮಿಷಾರಣ್ಯದಲ್ಲಿರುವ ಗೋಮತಿ ಎಂಬ ಈ ನದಿಗಳಲ್ಲಿ ಯಾವುದಾದರೂ ಒಂದುನದಿಗೆ ಹೋಗಿ, ಗೋವು ಮೊದಲಾದವರ ಪೂಜೆಯನ್ನು ಆದರದಿಂದ ಮಾಡಿದರೆ ಪಿತೃಗಳ ತೊಂದರೆಗಳು ಪರಿಹಾರವಾಗುವುವು.

೪೭. ಪಿತೃಗಳು "ಭಾದ್ರಪದ ಕೃಷ್ಣತ್ರಯೋದಶಿಯಿಂದ ಕೂಡಿದ ಮಘಾನಕ್ಷತ್ರದಲ್ಲಿ ಮಕ್ಕಳೇ ಮೊದಲಾದವರು ಕೊಡುವ ಪವಿತ್ರ ತೀರ್ಥೋದಕಗಳಿಂದ ಹೆಚ್ಚಾಗಿ (ಅಥವಾತಿರುಗಿ) ಯಾವಾಗ ತೃಪ್ತಿಯನ್ನು ಪಡೆಯುವೆವೋ" ಎಂಬ ಇದನ್ನು ಹಾಡುವರು.

---

* ತತೋ

ಚಿತ್ತಂಚ ವಿತ್ತಂಚ ನೃಣಾಂ ವಿಶುದ್ಧಂ
ಶಸ್ತಶ್ಚ ಕಾಲಃ ಕಥಿತೋ ವಿಧಿಶ್ಚ ।
ಪಾತ್ರಂ ಯಥೋಕ್ತಂ ಪರಮಾ ಚ ಭಕ್ತಿಃ
ನೃಣಾಂ ಪ್ರಯಚ್ಛಂತ್ಯಭಿವಾಂಛಿತಾನಿ ॥ ೪೮ ॥

॥ ಅಥ ಪಿತೃಣಾಂ ಗೀತಂ ॥

ಪಿತೃಗೀತಾಂಸ್ತಥೈವಾತ್ರ ಶ್ಲೋಕಾಂಸ್ತಾನ್ ಶೃಣುಸತ್ತಮ ।
ಶ್ರುತ್ವಾ ತಥೈವ ಭವಿತಾ ಭಾವ್ಯಂತತ್ರ ಸದಾತ್ಮನಾ ॥ ೪೯ ॥

ಅಪಿ ಧನ್ಯಃ ಕುಲೇ ಜಾಯಾದಸ್ಮಾಕಂ ಮತಿಮಾನ್ನರಃ ।
ಅಕುರ್ವನ್ವಿತ್ತಶಾಠ್ಯಂ ಯಃ ಪಿಂಡಾನ್ನೋ ನಿರ್ವಪಿಷ್ಯತಿ ॥ ೫೦ ॥

ರತ್ನ ವಸ್ತ್ರಮಹಾಯಾನಂ ಸರ್ವಂ ತೋಯಾಧಿಕಂ ವಸು ।
ವಿಭವೇ ಸತಿ ವಿಪ್ರೇಭ್ಯಃ ಅಸ್ಮಾನುದ್ದಿಶ್ಯ ದಾಸ್ಯತಿ ॥ ೫೧ ॥

---

೪೮. ಶ್ರಾದ್ಧದಲ್ಲಿ, ಮಾಡುವವರಿಗೆ ಪರಿಶುದ್ಧವಾದ ಮನಸ್ಸೂ ಧರ್ಮದಿಂದ ಸಂಪಾದಿಸಿದ ದ್ರವ್ಯವೂ ಪ್ರಶಸ್ತವಾದ ಕಾಲವೂ, ಶಾಸ್ತ್ರದಲ್ಲಿ ಹೇಳಿರುವ ನಿಯಮವೂ (ಕ್ರಮ), ಯೋಗ್ಯಪಾತ್ರವೂ (ಬ್ರಾಹ್ಮಣರೂ) ಇದ್ದರೆ ಅದು ಪಿತೃಗಳಿಗೆ ಮಾತ್ರವಲ್ಲದೇ ಶಾದ್ಧಮಾಡುವವನರಿಗೂ ಇಷ್ಟಾರ್ಥವನ್ನು ಕೊಡುವುದು.

೪೯. ಇನ್ನು ಪಿತೃಗಳ ಗೀತ—ಸಜ್ಜನೋತ್ತಮನೇ, ಪಿತೃಗಳು ಹಾಡಿರುವ ಆ ಶ್ಲೋಕಗಳನ್ನೂ ಹಾಗೆಯೇ ಕೇಳು. ಉತ್ತಮಾತ್ಮನು ಅದನ್ನು ಕೇಳಿ, ಅದರಂತೆಯೇ ಆಗುವವನು (ನಡೆಯುವವನು) ಆಗಬೇಕು.

೫೦–೫೧. ದ್ರವ್ಯದಲ್ಲಿ ಕಪಟವಿಲ್ಲದೆ ನಮಗೆ ಪಿಂಡಪ್ರದಾನ ಮಾಡುವವನೂ, ರತ್ನ ವಸ್ತ್ರ ಮಹಾವಾಹನಜಲಾದಿಗಳೆಲ್ಲವನ್ನೂ, ಐಶ್ವರ್ಯ ವಿದ್ದಲ್ಲಿ ಧನವನ್ನೂ ನಮಗೋಸ್ಕರ ಬ್ರಾಹ್ಮಣರಿಗೆ ಕೊಡುವಂತಹ ಧನ್ಯನೂ, ಬುದ್ಧಿವಂತನೂ ಆದ ಮನುಷ್ಯನು ನಮ್ಮ ವಂಶದಲ್ಲಿ ಹುಟ್ಟಿಯಾನೇ ?

ಅನ್ನೇನ ವಾ ಯಥಾಶಕ್ತ್ಯಾ ಕಾಲೇಽಸ್ಮಿನ್ ಭಕ್ತಿನಮ್ರಧೀಃ ।
ಭೋಜಯಿಷ್ಯತಿ ವಿಪ್ರಾಗ್ರ್ಯಾಂಸ್ತನ್ಮಾತ್ರವಿಭವೋ ನರಃ ॥ ೫೨ ॥

ಅಸಮರ್ಥೋಽನ್ನದಾನಸ್ಯ ವನ್ಯಶಾಕಂ ಸ್ವಶಕ್ತಿತಃ ।
ಪ್ರದಾಸ್ಯತಿ ದ್ವಿಜಾಗ್ರ್ಯೇಭ್ಯಃ ಸ್ವಲ್ಪಾಂ ಯೋವಾಪಿ ದಕ್ಷಿಣಾಂ ॥ ೫೩ ॥

ತತ್ರಾಪ್ಯಸಾಮರ್ಥ್ಯಯುತಃ ಕರೈರ್ಗೃಹ್ಯಾಸಿತಾಂಸ್ತಿಲಾನ್ ।
ಪ್ರಣಮ್ಯ ದ್ವಿಜಮುಖ್ಯಾಯ ಕಸ್ಮೈಚಿದಪಿ ದಾಸ್ಯತಿ ॥ ೫೪ ॥

ತಿಲೈಃ ಸಪ್ತಾಷ್ಟಭಿರ್ವಾಪಿ ಸಮವೇತಂ ಜಲಾಂಜಲಿಂ ।
ಭಕ್ತಿನಮ್ರಃ ಸಮುದ್ದಿಶ್ಯ ಯೋಽಸ್ಮಾಕಂ ಸಂಪ್ರದಾಸ್ಯತಿ ॥ ೫೫ ॥

ಯತಃ ಕುತಶ್ಚಿತ್ಸಂಪ್ರಾಪ್ಯ ಗೋಭ್ಯೋ ವಾಪಿ ಗವಾಹ್ನಿಕಂ ।
ಅಭಾವೇ ಪ್ರೀಣಯೇತ್ತಸ್ಮಾದ್ಭಕ್ತ್ಯಾ ಯುಕ್ತಃ ಪ್ರದಾಸ್ಯತಿ ॥ ೫೬ ॥

---

೫೨. ಹೆಚ್ಚಾದ ಅನುಕೂಲವುಳ್ಳವನಾಗಿ (ಐಶ್ವರ್ಯವುಳ್ಳವನಾಗಿ) ಇರದಿದ್ದರೆ ತನ್ನ ಶಕ್ತಿಗನು ಗುಣವಾಗಿ ಭಕ್ತಿಯಿಂದ ನಮ್ರಬುದ್ಧಿಯುಳ್ಳವನಾಗಿ ಉಚಿತವಾದ ಕಾಲದಲ್ಲಿ ಬ್ರಾಹ್ಮಣೋತ್ತಮರಿಗೆ ಅನ್ನ ಭೋಜನವನು ಮಾಡಿಸುವಂತಹ ಧನ್ಯನೂ, ಬುದ್ಧಿವಂತನೂ, ನಮ್ಮ ವಂಶದಲ್ಲಿ ಹುಟ್ಟಿಯಾನೇ !

೫೩. ಅನ್ನದಾನಮಾಡುವುದಕ್ಕೂ ಶಕ್ತಿಯಿಲ್ಲದವನಾಗಿದ್ದರೆ ತನ್ನ ಶಕ್ತಿಯಿದ್ದಷ್ಟು ಕಾಡಿನ ಕಾಯಿಪಲ್ಯಗಳನ್ನೂ ಅಲ್ಪವಾದ ದಕ್ಷಿಣೆಯನ್ನೂ ಬ್ರಾಹ್ಮಣೋತ್ತಮರಿಗೆ ಕೊಡುವ ಧನ್ಯನೂ ಬುದ್ಧಿವಂತನೂ ನಮ್ಮವಂಶದಲ್ಲಿ ಹುಟ್ಟಿಯಾನೇ !

೫೪–೫೫. ಅಷ್ಟೂ ಶಕ್ತಿಯಿಲ್ಲದಿದ್ದರೆ ಕರಿಯಎಳ್ಳನ್ನು ಕೈಗಳಿಂದ ತೆಗೆದುಕೊಂಡು ಯಾವನಾದರೊಬ್ಬ ಬ್ರಾಹ್ಮಣೋತ್ತಮನಿಗೆ ಕೊಟ್ಟು ನಮಸ್ಕರಿಸುವ, ಅದೂ ಇಲ್ಲವಾದರೆ ಏಳೆಂಟು ಕಾಳು ಎಳ್ಳಿನಿಂದ ಕೂಡಿದ ಬೊಗಸೆ ನೀರನ್ನಾದರೂ ಭಕ್ತಿಯಿಂದ ಬಾಗಿ ಮನಃ ಪೂರ್ವಕವಾಗಿ ನಮಗೆ ಕೊಡುವಂತಹ ಧನ್ಯನೂ ಬುದ್ಧಿವಂತನೂ, ನಮ್ಮ ವಂಶದಲ್ಲಿ ಹುಟಿಯಾನೇ ?

೫೬. ಏಳೆಂಟುಕಾಳು ಎಳ್ಳೂ ಇಲ್ಲವಾದರೆ ಎಲ್ಲಿಂದಲಾದರೂ, ಒಂದು ದಿನಕ್ಕೆ ಸಾಕಾಗುವಷ್ಟು ಹುಲ್ಲು ಹೊಟ್ಟು ಮೊದಲಾದುವನ್ನು ತಂದು, ಒಂದು ಹಸುವಿಗೆ ಭಕ್ತಿಯಿಂದ ಕೊಟ್ಟು ತೃಪ್ತಿಪಡಿಸುವ, ಧನ್ಯನು ಹುಟ್ಟಿಯಾನೇ ?

ಸರ್ವಾಭಾವೇ ವನಂ ಗತ್ವಾ ಕಕ್ಷಮೂಲಪ್ರದರ್ಶಕಃ ।
ಸೂರ್ಯಾದಿಲೋಕಪಾಲಾನಾಮಿದಮುಚ್ಚೈಃ ಪಠಿಷ್ಯತಿ ॥ ೫೭ ॥

ನ ಮೇಽಸ್ತಿ ವಿತ್ತಂ ನ ಧನಂ ನ ಚಾನ್ಯತ್ ।
ಶ್ರಾದ್ಧಸ್ಯ ಯೋಗ್ಯಂ ಸ್ವಪಿತೄನ್ನತೋಽಸ್ಮಿ ।
ತೃಪ್ಯಂತು ಭಕ್ತ್ಯಾ ಪಿತರೋ ಮಯೈತೌ
ಭುಜೌ ತತೌ ವರ್ತ್ಮನಿ ಮಾರುತಸ್ಯ ॥ ೫೮ ॥

ಇತ್ಯೇವಂ ಪಿತೃಭಿರ್ಗೀತಂ ಭಾವಾಭಾವಪ್ರಯೋಜನಂ ।
ಕೃತಂತೇನ ಭವೇಚ್ಛ್ರಾದ್ಧಂ ಯ ಏವಂ ಕುರುತೇ ದ್ವಿಜಃ ॥ ೫೯ ॥

ಇತಿ ವರಾಹಪುರಾಣೇ ಆದಿಕೃತವೃತ್ತಾಂತೇ ಶ್ರಾದ್ಧಕಲ್ಪೋನಾಮ
ತ್ರಯೋದಶೋಽಧ್ಯಾಯಃ

೫೭–೫೮. ಅದೂ ಇಲ್ಲವಾದರೆ ಕಾಡಿಗೆ ಹೋಗಿ ತೋಳುಗಳನ್ನು ಮೇಲಕ್ಕೆತ್ತಿ ಸೂರ್ಯನೇ ಮೊದಲಾದ ಲೋಕಪಾಲಕರಿಗೆ "ನನ್ನಲ್ಲಿ ದುಡ್ಡಾಗಲಿ, ಪದಾರ್ಥವಾಗಲಿ ಶ್ರಾದ್ಧಕ್ಕೆ ಬೇಕಾದ ಮತ್ತಾವುದೇ ಆಗಲಿ ಇಲ್ಲ. ನನ್ನ ಪಿತೃಗಳಿಗೆ ವಂದಿಸುತ್ತೇನೆ. ನನ್ನ ತೋಳುಗಳನ್ನು ಆಕಾಶಕ್ಕೆತ್ತಿದ್ದೇನೆ. ನನ್ನ ಭಕ್ತಿಯಿಂದಲೇ ಪಿತೃಗಳು ತೃಪ್ತರಾಗಲಿ" ಎಂದು ಗಟ್ಟಿಯಾಗಿ ಹೇಳುವ ಸುಕೃತಿಯು ನಮ್ಮ ಕುಲದಲ್ಲಿ ಹುಟ್ಟಿಯಾನೆ!

೫೯. ಎಂದು ಹೀಗೆ ಅನುಕೂಲತೆಗೂ ಬಡತನಕ್ಕೂ ಉಪಯುಕ್ತವಾಗಿ ಪಿತೃಗಳು ಹೇಳಿರುವರು. ಯಾವ ದ್ವಿಜನು ಹೀಗೆ ಮಾಡುವನೋ ಅವನು ಸರಿಯಾಗಿ ಶ್ರಾದ್ಧಮಾಡಿದಂತಾಗುವುದು.

ಅಧ್ಯಾಯದ ಸಾರಾಂಶ :—

ಶ್ರೀವರಾಹದೇವನು ಭೂದೇವಿಗೆ—ಗೌರಮುಖಮುನಿಯು ಭಗವಂತನಿಂದ ತಾನುಪಡೆದ ಸಹಾಯದಿಂದ ಆಶ್ಚರ್ಯಗೊಂಡು, ಅವನನ್ನು ಇನ್ನೂ ಚೆನ್ನಾಗಿ ಆರಾಧಿಸಲು ಪ್ರಭಾಸವೆಂಬ ಸೋಮತೀರ್ಥಕ್ಕೆ ಒಂದುದು, ಅಲ್ಲಿಗೆ ಬಂದ ಮಾರ್ಕಂಡೇಯ ಮುನಿಯು ಪ್ರಶ್ನಿಸಿದ ಗೌರಮುಖನಿಗೆ ಪಿತೃಸೃಷ್ಟಿ, ಶ್ರಾದ್ಧಕಾಲ, ಸ್ಥಳ, ಕ್ರಮ, ಶ್ರಾದ್ಧಾರ್ಹಪದಾರ್ಥಗಳು, ನಾನಾ ತೀರ್ಥಗಳಲ್ಲಿ ಶ್ರಾದ್ಧವಿಧಾನ, ಫಲ ಮೊದಲಾದುದೆಲ್ಲವನ್ನೂ ಎಂದರೆ ಶ್ರಾದ್ಧಕಲ್ಪವನ್ನು ಹೇಳಿದುದು, ಪಿತೃಗೀತೆ ಇವುಗಳನ್ನು ತಿಳಿಸುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಹದಿಮೂರನೆಯ ಅಧ್ಯಾಯ

॥ ಶ್ರೀಃ ॥

-X-

ಚತುರ್ದಶೋಽಧ್ಯಾಯಃ

ಶ್ರಾದ್ಧೇ ಕೇತನಯೋಗ್ಯಾಯೋಗ್ಯಬ್ರಾಹ್ಮಣಾದಿ ನಿರೂಪಣಂ

॥ ಮಾರ್ಕಂಡೇಯ ಉವಾಚ ॥

ಏತನ್ಮೇ ಕಥಿತಂ ಪೂರ್ವಂ ಬ್ರಹ್ಮಪುತ್ರೇಣ ಧೀಮತಾ ।
ಸನಕಾನುಜೇನ ವಿಪ್ರರ್ಷೇ ಬ್ರಹ್ಮಣಾ ಶೃಣು ಸಾಂಪ್ರತಂ ॥ ೧ ॥

*ತ್ರಿಣಾಚಿಕೇತಸ್ತ್ರಿಮಧುಸ್ತ್ರಿಷುಪರ್ಣಃ ಷಡಂಗವಿತ್ ।
ಋತ್ವಿಜಂ ಭಾಗಿನೇಯಂಚ ದೌಹಿತ್ರಂ ಶ್ವಶುರಂ ತಥಾ ॥ ೨ ॥

ಹದಿನಾಲ್ಕನೆಯ ಅಧ್ಯಾಯ

ಶ್ರಾದ್ಧದಲ್ಲಿ ನಿಮಂತ್ರಣ ಯೋಗ್ಯಾಯೋಗ್ಯಬ್ರಾಹ್ಮಣಾದಿವಿಚಾರ

೧. ಮಾರ್ಕಂಡೇಯ—ಬ್ರಹ್ಮರ್ಷಿಯೇ, ಪೂರ್ವದಲ್ಲಿ ಬ್ರಹ್ಮಪುತ್ರನೂ ಬುದ್ಧಿವಂತನೂ ಆದ ಸನಕಮುನಿಯ ತಮ್ಮನು ಇದನ್ನು ನನಗೆ ಹೇಳಿದ್ದನು. ಈಗ ನಿನಗೆ ಹೇಳುತ್ತೇನೆ ಕೇಳು.

೨-೩. ವೇದಾಧ್ಯಯನ ಸಂಪನ್ನನೂ ಶಿಕ್ಷಾವ್ಯಾಕರಣಾದಿಷಡಂಗಗಳನ್ನರಿತವನೂ ಆದ ದ್ವಿಜನು, ಶ್ರಾದ್ಧದಲ್ಲಿ—ಯಾಜಕ, ಸೋದರಳಿಯ, ಮಗಳಮಗ,

---

* ತ್ರಿಣಾಚಿಕೇತ= ಯಜುರ್ವೇದದಲ್ಲಿ ಒಂದುಭಾಗ, ಅದನ್ನು ಅಧ್ಯಯನ ಮಾಡಿದವನು.

* ತ್ರಿಷುಪರ್ಣ= ಯಜುರ್ವೇದದಲ್ಲಿ ಒಂದುಭಾಗ, ಅದನ್ನು ಅಧ್ಯಯನ ಮಾಡಿದವನು.

* ತ್ರಿಮಧು= ಋಗ್ವೇದಭಾಗವಾದ ಮಧುವಾತಾಋತಾಯತೇ ಎಂಬ ಮೂರು ಋಕ್ಕುಗಳನ್ನು ತಿಳಿದವನು.

ಜಾಮಾತರಂ ಮಾತುಲಂಚ ತಪೋನಿಷ್ಠಂ ಚ ಬ್ರಾಹ್ಮಣಂ ।
ಪಂಚಾಗ್ನ್ಯಭಿರತಂ ಚೈವ ಶಿಷ್ಯಂ ಸಂಬಂಧಿನಸ್ತಥಾ ॥
ಮಾತಾಪಿತ್ರರತಂಚೈವ ಏತಾನ್ ಶ್ರಾದ್ಧೇ ನಿಯೋಜಯೇತ್ ॥ ೩ ॥

ಮಿತ್ರಧ್ರುಕ್ಕುನಖೀ ಚೈವ ಶ್ಯಾವದಂತಸ್ತಥಾ ದ್ವಿಜಃ ॥ ೪ ॥

ಕನ್ಯಾದೂಷಯಿತಾ ಚೈವ ವಹ್ನಿದಃ ಸೋಮವಿಕ್ರಯೀ ।
ಅಭಿಶಸ್ತಸ್ತಥಾ ಸ್ತೇನಃ ಪಿಶುನೋ ಗ್ರಾಮಯಾಜಕಃ ॥ ೫ ॥

ಭೃತಕಾಧ್ಯಾಪಕಶ್ಚೈವ ಸೂತಕಾಧ್ಯಾಪಕಶ್ಚಯಃ ।
ಪರಪೂರ್ವಾಪತಿಶ್ಚೈವ ಮಾತಾಪಿತ್ರೋಸ್ತ್ವರಕ್ಷಕಃ ॥ ೬ ॥

ವೃಷಲೀಸೂತಿಪೋಷ್ಯಶ್ಚ ವೃಷಲೀ ಪತಿರೇವಚ ।
ತಥಾ ದೇವಲಕಶ್ಚೈವ ಶ್ರಾದ್ಧೇ ನಾರ್ಹಂತಿ ಕೇತನಂ ॥ ೭ ॥

ಮಾವ, ಅಳಿಯ, ಸೋದರಮಾವ, ತಪೋನಿರತನಾದವನು, ಆಹಿತಾಗ್ನಿ, ಶಿಷ್ಯ, ಬಂಧು, ತಂದೆತಾಯಿಗಳ ಸೇವೆಯಲ್ಲಿ ನಿರತನಾದವನು ಇವರುಗಳನ್ನು ನಿಮಂತ್ರಿಸಬೇಕು.

೪–೫. ಮಿತ್ರದ್ರೋಹಿಯೂ, ಉಗರು ಕೆಟ್ಟಿರುವನೂ, ಧೂಮ್ರವರ್ಣದ ಹಲ್ಲಿನವನೂ, ಕನ್ಯಾವಿಕ್ರಯ ಮಾಡುವವನೂ, ಮನೆಮೊದಲಾದುವುಗಳಿಗೆ ಬೆಂಕಿಯಿಡುವನೂ, ಸೋಮವಿಕ್ರಯಮಾಡುವನೂ, ಇತರರಮೇಲೆ ಇಲ್ಲದ ದೋಷಾರೋಪಣೆಮಾಡುವನೂ, ಅಥವಾ ಶಾಪಗ್ರಸ್ತನಾದವನೂ, ಕಳ್ಳನೂ, ಚಾಡಿಹೇಳುವನೂ, ಕ್ರೂರಿಯೂ, ಗ್ರಾಮಪುರೋಹಿತನೂ ಶ್ರಾದ್ಧದಲ್ಲಿ ನಿಮಂತ್ರಣಕ್ಕೆ ಅನರ್ಹರು.

೬–೭. ಅಲ್ಲದೆ ವೇದವಿಕ್ರಯಿಯೂ, ಆ ಶೌಚದಲ್ಲೂ ವೇದವನ್ನು ಹೇಳುವನೂ, ವಿಧವೆಯನ್ನು ವಿವಾಹಮಾಡಿಕೊಂಡವನೂ, ತಾಯಿತಂದೆಗಳನ್ನು ಕಾಪಾಡದಿರುವನೂ, ಶೂದ್ರಸ್ತ್ರೀಯಲ್ಲಿ ಬ್ರಾಹ್ಮಣನಿಂದ ಜನಿಸಿದವನೂ, ಶೂದ್ರಸ್ತ್ರೀಯಿಂದ ಪೋಷಿತನೂ, ಶೂದ್ರಸ್ತ್ರೀಯನ್ನು ಅಥವಾ ಋತುಮತಿಯನ್ನು ವಿವಾಹಮಾಡಿಕೊಂಡವನೂ, ಕೂಲಿಗೆ ದೇವರಪೂಜೆಯನ್ನು ಮಾಡುವನೂ ನಿಮಂತ್ರಣಕ್ಕೆ ಅನರ್ಹರು.

|| ನಿಮಂತ್ರಣಾದಿಕಂ ||

ಪ್ರಥಮೇಹ್ನಿ ಬುಧಃ ಕುರ್ಯಾದ್ವಿಪ್ರಾಗ್ರ್ಯಾಣಾಂ ನಿಮಂತ್ರಣಂ ।
ಅನಿಮಂತ್ರ್ಯ ದ್ವಿಜಾನ್ಗೃಹ್ಯಾದಾಗತಾನ್ ಭೋಜಯೇದ್ಯತೀನ್ || ೮ ||

ಪಾದಶೌಚಾದಿನಾ ಗೇಹಮಾಗತಾನ್ ಭೋಜಯೇದ್ವಿಜಾನ್ ।
ಪವಿತ್ರಪಾಣಿರಾಚಾಂತಾನಾಸನೇ ಷೂಪವೇಶಯೇತ್ || ೯ ||

॥ ಬ್ರಾಹ್ಮಣ ಸಂಖ್ಯಾದಿಃ ॥

ಪಿತೃಣಾಮಯುಜೋಯುಗ್ಮಂ ದೇವಾನಾಮಪಿ ಯೋಜಯೇತ್ ।
ದೇವಾನಾಮೇಕಮಪಿವಾ ಪಿತೃಣಾಂಚ ನಿವೇದಯೇತ್ || ೧೦ ||

ತಥಾ ಮಾತಾಮಹಶ್ರಾದ್ಧಂ ವೈಶ್ವದೇವಸಮನ್ವಿತಂ ।
ಕುರ್ವೀತ ಭಕ್ತಿಸಂಪನ್ನಸ್ತಂತ್ರಂವಾ ವೈಶ್ವದೇವಿಕಂ || ೧೧ ||

---

೮. ನಿಮಂತ್ರಣ ಮೊದಲಾದುವು—ವಿದ್ವಾಂಸನಾದವನು ಶ್ರಾದ್ಧಕ್ಕೆ ಹಿಂದಿನ ದಿನವೇ ಬ್ರಾಹ್ಮಣೋತ್ತಮರನ್ನು ನಿಮಂತ್ರಣಕ್ಕೆ ಹೇಳಬೇಕು. ಹೇಳಿದ ಬ್ರಾಹ್ಮಣರಿಗೂ ಶ್ರಾದ್ಧಕಾಲಕ್ಕೆ ಬಂದ ಯತಿಗಳಿಗೂ ಭೋಜನಮಾಡಿಸಬೇಕು.

೯. ಮನೆಗೆ ಬಂದ ಬ್ರಾಹ್ಮಣರು ಕಾಲುತೊಳೆದುಕೊಂಡು ಆಚಮನ ಮಾಡಿದ ಬಳಿಕ, ಪವಿತ್ರವನ್ನು ಧರಿಸಿಕೊಂಡು ಅವರನ್ನು ಪೀಠಗಳಲ್ಲಿ ಕುಳ್ಳಿರಿಸಿ ಭೋಜನಮಾಡಿಸಬೇಕು.

೧೦. ಬ್ರಾಹ್ಮಣರಸಂಖ್ಯೆ ಮೊದಲಾದುದು—ಪಿತೃಗಳಿಗಾಗಿ ಒಬ್ಬ ಬ್ರಾಹ್ಮಣನನ್ನೂ, ದೇವತೆಗಳಿಗಾಗಿ ಇಬ್ಬರನ್ನೂ ನಿಮಂತ್ರಿಸಬೇಕು ಅವಕಾಶ ವಿಲ್ಲದಿದ್ದರೆ ದೇವತೆಗಳಿಗಾಗಿ ಒಬ್ಬರನ್ನೂ ಹೇಳಬಹುದು.

೧೧. ಮಾತಾಮಹಶ್ರಾದ್ಧವನ್ನೂ ಭಕ್ತಿಯುಳ್ಳವನು ವೈಶ್ವದೇವ ಸಹಿತವಾಗಿಮಾಡಬೇಕು. ವೈಶ್ವದೇವಿಕವು ತಾಂತ್ರಿಕವಾಗಿಯಾದರೂ ಇರ ಬಹುದು.

ಪ್ರಾಙ್ಮುಖಂ ಭೋಜಯೇದ್ವಿಪ್ರಂ ದೇವಾನಾಮುಭಯಾತ್ಮಕಂ ।
ಪಿತೃಪೈತಾಮಹಾನಾಂಚ ಭೋಜಯೇಚ್ಚಾಪ್ಯುದಙ್ಮುಖಾನ್ ॥ ೧೨ ॥

ಪೃಥಕ್ತಯೋಃ ಕೇಚಿದಾಹುಃ ಶ್ರಾದ್ಧಸ್ಯ ಕರಣಂ ದ್ವಿಜಾಃ ।
ಏಕತ್ರೈಕೇನ ಪಾತ್ರೇಣ ವದಂತ್ಯನ್ಯೇ ಮಹರ್ಷಯಃ ॥ ೧೩ ॥

॥ ಶ್ರಾದ್ಧಪ್ರಕಾರಃ ॥

ವಿಷ್ಟರಾರ್ಥಂ ಕುಶಾನ್ ದತ್ವಾ ಸಂಪೂಜ್ಯಾರ್ಘ್ಯವಿಧಾನತಃ ।
ಕುರ್ಯಾದಾವಾಹನಂ ಪ್ರಾಜ್ಞೋ ದೇವಾನಾಂತದನುಜ್ಞಯಾ ॥ ೧೪ ॥

ಯವಾಂಬುನಾಚ ದೇವಾನಾಂ ದದ್ಯಾದರ್ಘ್ಯಂ ವಿಧಾನವಿತ್ ।
ಸುಗಂಧ ಧೂಪ ದೀಪಾಂಶ್ಚ ದತ್ವಾ ತೇಭ್ಯೋ ಯಥಾವಿಧಿ ॥ ೧೫ ॥

ಪಿತೄಣಾ*ಮಪಸವ್ಯೇನ ಸರ್ವಮೇವೋಪ ಕಲ್ಪಯೇತ್ ॥ ೧೬ ॥

---

೧೨. ವಿಶ್ವೇದೇವತೆಗಳ ಸ್ಥಾನದಲ್ಲೂ, ವಿಷ್ಣುಸ್ಥಾನದಲ್ಲೂ ಇರುವ ಬ್ರಾಹ್ಮಣರನ್ನು ಭೋಜನಕ್ಕೆ ಪೂರ್ವಾಭಿಮುಖರಾಗಿಯೂ, ಪಿತ್ರಾದಿಗಳ ಸ್ಥಾನದವರನ್ನು ಉತ್ತರಾಭಿಮುಖರಾಗಿಯೂ ಕೂರಿಸಬೇಕು.

೧೩. ಪಿತೃಪಿತಾಮಪ್ರಪಿತಾಮಹರಿಗೆ ಬೇರೆ ಬೇರೆಯಾಗಿ ಶ್ರಾದ್ಧಮಾಡಬೇಕೆಂದು ಕೆಲವರು ಬ್ರಾಹ್ಮಣರು ಹೇಳುವರು. ಒಂದೆಡೆಯಲ್ಲೇ ಒಂದೇ ಭೋಜನಪಾತ್ರೆಯಲ್ಲೇ ಮಾಡಬಹುದೆಂದು ಇತರ ಮಹರ್ಷಿಗಳು ಹೇಳುವರು.

೧೪. ವಿಧಿಯನ್ನರಿತ ಪ್ರಾಜ್ಞನು, ಬ್ರಾಹ್ಮಣರಿಗೆ ಪೀಠಕ್ಕಾಗಿ ದರ್ಭೆಯನ್ನು ಕೊಟ್ಟು (ಪೂಜಾ) ನಿಯಮಾನುಸಾರವಾಗಿ ಪೂಜಿಸಿ, ಅವರ ಅನುಜ್ಞೆಯಿಂದ (ದೇವತೆಗಳನ್ನು) ವಿಶ್ವೇದೇವವಿಷ್ಣುಗಳನ್ನು ಆವಾಹನಮಾಡಬೇಕು.

೧೫–೧೬. ಅವರಿಗೆ ಯವೋದಕದಿಂದ ಅರ್ಘ್ಯಪಾದ್ಯಗಳನ್ನು ಕೊಡಬೇಕು. ಅವರಿಗೆ ಸುಗಂಧ ಧೂಪದೀಪಾದಿಗಳನ್ನು ಕ್ರಮವಾಗಿ ಅರ್ಪಿಸಿ, (ಬಳಿಕ) ಪಿತೃಗಳಿಗೆ ಎಲ್ಲವನ್ನೂ *ಅಪಸವ್ಯವಾಗಿ ಮಾಡಬೇಕು.

---

* ಅಪಸವ್ಯ= ಯಜ್ಞೋಪವೀತವನ್ನು ಪ್ರಾಚೀನಾವೀತವಾಗಿ ಹಾಕಿಕೊಳ್ಳುವುದು, ಅಪ್ರದಕ್ಷಿಣವಾಗಿ ಪರಿಷೇಚನಾದಿಗಳನ್ನು ಮಾಡುವುದು.

ಅನುಜ್ಞಾಂಚ ತತಃ ಪ್ರಾಪ್ಯ ದತ್ವಾ ದರ್ಭಾನ್‌ದ್ವಿಧಾಕೃತಾನ್ ।
ಮಂತ್ರಪೂರ್ವಂ ಪಿತೄಣಾಂತು ಕುರ್ಯಾದಾವಾಹನಂ ಬುಧಃ ॥
ತಿಲಾಂಬುನಾಽಚಾಪಸವ್ಯಂ ದದ್ಯಾದರ್ಘ್ಯಾದಿಕಂ ಬುಧಃ ॥ ೧೭ ॥

॥ ತತ್ರಾತಿಥ್ಯಾಗಮೇ ॥

ಕಾಲೇ ತತ್ರಾತಿಥಿಂ ಪ್ರಾಪ್ತಮನ್ನಕಾಮಂ ದ್ವಿಜಾಧ್ವಗಂ ।
ಬ್ರಾಹ್ಮಣೈರಭ್ಯನುಜ್ಞಾತಃ ಕಾಮಂ ತಮಪಿ ಪೂಜಯೇತ್ ॥ ೧೮ ॥

ಯೋಗಿನೋ ವಿವಿಧೈ ರೂಪೈರ್ನರಾಣಾಂ ಉಪಕಾರಿಣಃ ।
ಭ್ರಮಂತಿ ಪೃಥಿವೀಮೇತಾಮವಿಜ್ಞಾತ್ಸ್ವರೂಪಿಣಃ ॥ ೧೯ ॥

ತಸ್ಮಾದಭ್ಯರ್ಚಯೇತ್ಪ್ರಾಪ್ತಂ ಶ್ರಾದ್ಧಕಾಲೇತಿಥಿಂ ಬುಧಃ ।
ಶ್ರಾದ್ಧಕ್ರಿಯಾ ಫಲಂ ಹಂತಿ ದ್ವಿಜೇಂದ್ರಾಪೂಜಿತೋತಿಥಿಃ ॥ ೨೦ ॥

---

೧೭. ಬ್ರಾಹ್ಮಣಾನುಜ್ಞೆಯನ್ನು ಪಡೆದು, ಎರಡುತುಂಡಾಗಿ ಮಾಡಿದ ದರ್ಭೆಗಳನ್ನು ಕೊಟ್ಟು ಮಂತ್ರಪೂರ್ವಕವಾಗಿ ಪಿತೃಗಳನ್ನು ಆವಾಹನೆಮಾಡಬೇಕು. ತಿಲೋದಕದಿಂದ ಅಪಸವ್ಯವಾಗಿ ಅವರಿಗೆ ಅರ್ಘ್ಯಾದಿಗಳನ್ನು ಕೊಡಬೇಕು.

೧೮. ಆ ಸಂದರ್ಭದಲ್ಲಿ ಅತಿಥಿಗಳು ಬಂದರೆ — ಮಾರ್ಗಸ್ಥನಾದ ಅತಿಥಿಯು ಅನ್ನಾರ್ಥಿಯಾಗಿ ಶ್ರಾದ್ಧಕಾಲದಲ್ಲಿ ಅಲ್ಲಿಬಂದರೆ ಬ್ರಾಹ್ಮಣರಿಂದ ಅನುಜ್ಞೆಯನ್ನು ಪಡೆದು, ಅವನನ್ನು ಬೇಕಾದಹಾಗೆ ಪೂಜಿಸಬೇಕು.

೧೯. ಯೋಗಿಗಳು ಬಗೆ ಬಗೆಯಲ್ಲಿ ಮನುಷ್ಯರಿಗೆ ಉಪಕಾರಿಗಳಾಗಿ ತಮ್ಮ ಸ್ವರೂಪವನ್ನು ತಿಳಿಸಿಕೊಳ್ಳದೇ ಭೂಮಿಯಲ್ಲಿ ಸಂಚರಿಸುವರು.

೨೦. ಆದುದರಿಂದ ತಿಳಿದವನು ಶ್ರಾದ್ಧಕಾಲದಲ್ಲಿ ಬಂದ ಅತಿಥಿಯನ್ನು ಪೂಜಿಸಬೇಕು. ದ್ವಿಜೋತ್ತಮನೇ, ಸತ್ಕಾರವನ್ನು ಪಡೆಯದ ಅತಿಥಿಯಿಂದ ಶ್ರಾದ್ಧಕರ್ಮದ ಫಲವೇ ನಾಶವಾಗುವುದು.

|| ತತ್ರ ಹೋಮವಿಧಿಃ ||

ಜುಹುಯಾದ್ವ್ಯಂಜನಕ್ಷಾರೈರ್ವರ್ಜಮನ್ನಂ ತತೋಽನಲೇ |
ಅನುಜ್ಞಾತೋ ದ್ವಿಜೈಸ್ತ್ರೈಸ್ತು ತ್ರಿಃಕೃತ್ವಾ ಪುರುಷರ್ಷಭಃ || ೨೧ ||

ಅಗ್ನಯೇಽಕವ್ಯವಾಹನಾಯ ಸ್ವಾಹೇತಿ ಪ್ರಥಮಾಹುತಿಃ |
ಸೋಮಾಯ ವೈ ಪಿತೃಮತೇ ದಾತವ್ಯಾತದನಂತರಂ || ೨೨ ||

ವೈವಸ್ವತಾಯಚೈವಾನ್ಯಾ ತೃತೀಯಾ ದೀಯತೇ ತುಸಾ |
ಹುತಾವಶಿಷ್ಟಮಲ್ಪಾಲ್ಪಂ ವಿಪ್ರಪಾತ್ರೇಷು ನಿರ್ವಪೇತ್ || ೨೩ ||

|| ತತೋಽಭೋಜನಂ ||

ತತೋಽನ್ನಂ ಮೃಷ್ಟಮತ್ಯರ್ಥಂ ಅಭೀಷ್ಟಮಭಿಸಂಸ್ಕೃತಂ |
ದತ್ವಾ ಜುಷಧ್ವಮಿಚ್ಛಾತೋ ವಾಚ್ಯಮೇತದನಿಷ್ಠುರಂ || ೨೪ ||

---

೨೧. ಶ್ರಾದ್ಧದಲ್ಲಿ ಹೋಮದವಿಧಿ—ನಿಮಂತ್ರಿತಬ್ರಾಹ್ಮಣರಿಂದ ಅನುಮತಿಯನ್ನು ಪಡೆದು ಅನಂತರ ವ್ಯಂಜನವೂ ಕಾರವೂ ಇಲ್ಲದ ಅನ್ನವನ್ನು ಮೂರಾವರ್ತಿ ಅಗ್ನಿಯಲ್ಲಿ ಹೋಮಮಾಡಬೇಕು.

೨೨. ಅಗ್ನಯೇಕವ್ಯವಾಹನಾಯ ಸ್ವಾಹಾ ಎಂದು ಮೊದಲನೆಯ ಆಹುತಿ. ಅನಂತರ ಸೋಮನಿಗೆ ಪಿತೃಗಳ ಇಷ್ಟದಂತೆ ಎರಡನೆಯ ಆಹುತಿಯನ್ನು ಕೊಡಬೇಕು.

೨೩. ವೈವಸ್ವತ (ಯಮ)ನಿಗೆ ಮೂರನೆಯ ಆಹುತಿಯನ್ನು ಕೊಡಬೇಕು. ಹೋಮಶೇಷಾನ್ನವನ್ನು ಸ್ವಲ್ಪ ಸ್ವಲ್ಪ ಬ್ರಾಹ್ಮಣರ ಎಲೆಯಲ್ಲಿ ಬಡಿಸಬೇಕು.

೨೪. ಇನ್ನು ಭೋಜನಕ್ರಮ—ಬಳಿಕ ಉತ್ತಮವಾಗಿ ಸಿದ್ಧಮಾಡಿದ ಬೇಕಾದ ಮೃಷ್ಟಾನ್ನವನ್ನು ಹೆಚ್ಚಾಗಿ ಬಡಿಸಿ" ಇಷ್ಟಾನುಸಾರವಾಗಿ ಊಟ ಮಾಡಿರಿ" ಎಂದು ಮೃದುವಾಗಿ ವಿನಯದಿಂದ ಹೇಳಬೇಕು.

ಭೋಕ್ತವ್ಯಂತೈಶ್ಚ ತದ್ವಿಜ್ಞೈರ್ಮೌನಿಭಿಃ ಸುಸುಖೈಃ ಸ್ಥಿರಂ ।
ಅಕ್ರುಧ್ಯತಾಪ್ಯನ್ನವತಾ ದೇಯಂ ತೇನಾಪಿ ಭಕ್ತಿತಃ ॥ ೨೫ ॥

॥ ಅಭಿಶ್ರವಣಂ ॥

ರಕ್ಷೋಘ್ನಮಂತ್ರ ಪಠನಂ ಭೂಮೇರಾಸ್ತರಣಂ ತಿಲೈಃ ।
ಕೃತ್ವಾಜ್ಯಪಾಶ್ಚ ಪಿತರಸ್ತ್ವಏವ ದ್ವಿಜಸತ್ತಮಾಃ ॥ ೨೬ ॥

ಪಿತಾ ಪಿತಾಮಹಶ್ಚೈವ ತಥೈವಪ್ರಪಿತಾಮಹಃ ।
ಮಮ ತೃಪ್ತಿಂ ಪ್ರಯಾಂತ್ವದ್ಯ ಹೋಮಾಧ್ಯಾಸಿತಮೂರ್ತಯಃ ॥ ೨೭ ॥

ಪಿತಾಪಿತಾಮಹಶ್ಚೈವ ತಥೈವ ಪ್ರಪಿತಾಮಹಃ ।
ಮಮತೃಪ್ತಿಂ ಪ್ರಯಾಂತ್ವದ್ಯ ವಿಪ್ರದೇಹೇಷು ಸಂಸ್ಥಿತಾಃ ॥ ೨೮ ॥

ಪಿತಾಪಿತಾಮಹಶ್ಚೈವ ತಥೈವ ಪ್ರಪಿತಾಮಹಃ ।
ತೃಪ್ತಿಂ ಪ್ರಯಾಂತು ಪಿಂಡೇಷು ಮಯಾದತ್ತೇಷು ಭೂತಲೇ ॥ ೨೯ ॥

---

೨೫. ಬ್ರಾಹ್ಮಣರೂ ಮೌನದಿಂದ ಸುಖವಾಗಿ ನಿದಾನವಾಗಿ ಊಟ ಮಾಡಬೇಕು. ಶ್ರಾದ್ಧಮಾಡುವವನೂ ಕೋಪವಿಲ್ಲದವನಾಗಿ ಭಕ್ತಿಯಿಂದ ಬಡಿಸಬೇಕು.

೨೬–೨೭. ಅಭಿಶ್ರವಣ— ರಕ್ಷೋಘ್ನಮಂತ್ರವನ್ನು ಹೇಳಿ ಭೂಮಿಯ ಮೇಲೆ ಎಳ್ಳನ್ನು ಹರಡಿ, ಘೃತವನ್ನು ಪಾನಮಾಡಿದ ದ್ವಿಜೋತ್ತಮರೂ ಈಗ ಹೋಮದಲ್ಲಿದ್ದ ಮೂರ್ತಿಗಳೂ ಆದ, ನನ್ನತಂದೆಯೂ ಅಜ್ಜನೂ ಮುತ್ತಜ್ಜನೂ ತೃಪ್ತಿಯನ್ನು ಪಡೆಯಲಿ.

೨೮. ಈಗ ಬ್ರಾಹ್ಮಣದೇಹಗಳಲ್ಲಿ ಬಂದು ನಿಂತಿರುವ ನನ್ನತಂದೆ ಅಜ್ಜಮುತ್ತಂಜ್ಜಂದಿರು ತೃಪ್ತರಾಗಲಿ.

೨೯–೩೦. ಪಿತೃವೂ, ಪಿತಾಮಹನೂ, ಪ್ರಪಿತಾಮಹನೂ ನಾನು ಭೂಮಿಯಲ್ಲಿ ಇಟ್ಟುಕೊಟ್ಟ ಪಿಂಡಗಳಲ್ಲಿ ತೃಪ್ತರಾಗಲಿ. ನಾನು ಹೀಗೆ

ಪಿತಾಪಿತಾಮಹಶ್ಚೈವ ತಥೈವ ಪ್ರಪಿತಾಮಹಃ ।
ತೃಪ್ತಿಂ ಪ್ರಯಾಂತು ಮೇ ಭಕ್ತ್ಯಾ ಯನ್ಮಯೈತದುದಾಹೃತಂ ॥ ೩೦ ॥

ಮಾತಾಮಹಸ್ತೃಪ್ತಿ ಮುಪೈತುತಸ್ಯ
ತಥಾ ಪಿತಾ ತೃಪ್ತಿಮುಪೈತುಯೋನ್ಯಃ ।
ವಿಶ್ವೇಥ ದೇವಾಃ ಪರಮಾಂ ಪ್ರಯಾಂತು
ತೃಪ್ತಿಂ ಪ್ರಣಶ್ಯಂತು ಚ ಯಾತುಧಾನಾಃ ॥ ೩೧ ॥

ಯಜ್ಞೇಶ್ವರೋ ಯಜ್ಞಸಮಸ್ತನೇತಾ
ಭೋಕ್ತಾವ್ಯಯಾತ್ಮಾ ಹರಿರೀಶ್ವರೋತ್ರ ।
ತತ್ಸನ್ನಿಧಾನಾದಪಯಾಂತು ಸದ್ಯಃ
ರಕ್ಷಾಂಸ್ಯಶೇಷಾಣ್ಯಸುರಾಶ್ಚ ಸರ್ವೇ ॥ ೩೨ ॥

॥ ವಿಕಿರಾನ್ನದಾನಾದಿ ॥

ತೃಪ್ತೇಷ್ವೇತೇಷು ವಿಪ್ರೇಷು ಕಿರೇದನ್ನಂ ಮಹೀತಲೇ ।
ದದ್ಯಾದಾಚಮನಾರ್ಥಾಯ ತೇಭ್ಯೋ ವಾರಿ ಸಕೃತ್ ಸಕೃತ್ ॥ ೩೩ ॥

ಪ್ರಾರ್ಥಿಸುತ್ತೇನಾದ್ದರಿಂದ ಅವರು ನನ್ನ ಭಕ್ತಿಯಿಂದ ತೃಪ್ತಿಯನ್ನು ಪಡೆಯಲಿ.

೩೧. ನನ್ನ ತಾಯಿಯ ತಂದೆಯು (ಮಾತಾಮಹ) ತೃಪ್ತನಾಗಲಿ. ಅವರ ತಂದೆಯು (ತಾಯ ಅಜ್ಜನು) ತೃಪ್ತಿಯನ್ನು ಪಡೆಯಲಿ. ತಾಯಿಯ ಮುತ್ತಜ್ಜನೂ ತೃಪ್ತನಾಗಲಿ. ವಿಶ್ವೇದೇವತೆಗಳೂ ಪರಮ ತೃಪ್ತಿಯನ್ನು ಪಡೆಯಲಿ. ಅಸುರರು ಅತೃಪ್ತರಾಗಲಿ.

೩೨. ಯಜ್ಞದ ಆಹುತಿಯನ್ನೆಲ್ಲಾ ಒಯ್ಯುವ, ಸರ್ವಯಜ್ಞಗಳಿಗೂ ಒಡೆಯನಾದ ಅಗ್ನಿಸ್ವರೂಪನಾದ ಹರಿಯು ಆ ಈಶ್ವರನು ಇಲ್ಲಿದ್ದಾನೆ ಅವನ ಸನ್ನಿಧಿಯಿಂದ ಸಮಸ್ತರಾಕ್ಷಸರೂ ಎಲ್ಲಾ ಅಸುರರೂ ಒಡನೆಯೇ ಹೊರಟು ಹೋಗಲಿ.

೩೩. ವಿಕಿರಾನ್ನದಾನ ಮೊದಲಾದುವು— ಆ ಬ್ರಾಹ್ಮಣರು ತೃಪ್ತರಾದ ಬಳಿಕ(ಎಲೆಯಮುಂದುಗಡೆ) ನೆಲದಮೇಲೆ ಸ್ವಲ್ಪ ಸ್ವಲ್ಪ ಅನ್ನವನ್ನು ಹಾಕಬೇಕು. ಆಚಮನಕ್ಕಾಗಿ ವಿಕಿರಾನ್ನವನ್ನು ಪಡೆದವರಿಗೆ ಒಂದೊಂದು ಸಾರಿ ಸ್ವಲ್ಪನೀರನ್ನು ಕೊಡಬೇಕು.

|| ಅಥ ಪಿಂಡದಾನಾದಿ ||

ಸುತೃಪ್ತೈಸ್ತೈರನುಜ್ಞಾತಃ ಸರ್ವೇಣಾನ್ನೇನ ಭೂತಲೇ ।
ಸಲಿಲೇನ ತತಃ ಪಿಂಡಾನ್ ಸಮ್ಯಗ್ಗೃಹ್ಯ ಸಮಾಸತಃ || ೩೪ ||

ಪಿತೃತೀರ್ಥೇನ ಸಲಿಲಂ ತಥೈವ ಸಲಿಲಾಂಜಲಿಂ ।
ಮಾತಾಮಹೇಭ್ಯಸ್ತೇನೈವ ಪಿಂಡಾಂಸ್ತೀರ್ಥೇಷು ನಿರ್ವಪೇತ್ || ೩೫ ||

ದಕ್ಷಿಣಾಗ್ರೇಷು ದರ್ಭೇಷು ಪುಷ್ಪಧೂಪಾದಿಪೂಜಿತಂ ।
ಸ್ವಪಿತ್ರೇ ಪ್ರಥಮಂ ಪಿಂಡಂ ದದ್ಯಾದುಚ್ಛಿಷ್ಟಸನ್ನಿಧೌ || ೩೬ ||

ಪಿತಾಮಹಾಯ ಚೈವಾನ್ಯಂ ತತ್ಪಿತ್ರೇ ಚ ತಥಾಪರಂ ।
ದರ್ಭಮೂಲೇ ಲೇಪಭುಜಾಂ ಲೇಪಯೇಲ್ಲೇಪ ಘರ್ಷಣಾತ್ || ೩೭ ||

ಪಿಂಡೈರ್ಮಾತಾ ಮಹಾಂಸ್ತದ್ವದ್ಗಂಧಮಾಲ್ಯಾದಿ ಸಂಯುತೈಃ ।
ಪೂಜಯಿತ್ವಾ ದ್ವಿಜಾಗ್ರ್ಯಾಣಾಂ ದದ್ಯಾದಾಚಮನಂ ಬುಧಃ || ೩೮ ||

೩೪-೩೫. ಬಳಿಕ ಪಿಂಡದಾನ ಮೊದಲಾದುವು—ತೃಪ್ತರಾದ ಅವರಿಂದ ಅನುಮತಿಯನ್ನು ಪಡೆದು, ಕರ್ತೃವು ಭಕ್ಷ್ಯಭೋಜ್ಯಾದಿಗಳೆಲ್ಲವನ್ನೂ ಸೇರಿಸಿ, ಉಂಡೆಯಾಗಿ ಮಾಡಿ, ಸರಿಯಾಗಿ ಹಿಡಿದುಕೊಂಡು ನೆಲದಮೇಲೆ ದರ್ಭೆಯಲ್ಲಿ ಪಿತೃತೀರ್ಥದಿಂದ ನೀರನ್ನು ಹಾಕಿ, ಬಳಿಕ ಆ ಪಿಂಡವನ್ನು ಇಟ್ಟು, ಪಿತೃ ತೀರ್ಥ ದಿಂದಲೇ ತಿಲಜಲಾಂಜಲಿಯನ್ನು ಕೊಡಬೇಕು. ಮಾತಾಮಹರಿಗೆ ಅದೇ ಪಿತೃ ತೀರ್ಥದಿಂದಲೇ ಪಿಂಡಗಳನ್ನು ಕೊಡಬೇಕು. ಬಳಿಕ ಆ ಪಿಂಡಗಳನ್ನು ತೀರ್ಥ ಗಳಲ್ಲಿ ಹಾಕಬೇಕು.

೩೬. ಬಳಿಕ ಉಚ್ಛಿಷ್ಟ ಸಮೀಪದಲ್ಲಿ ದಕ್ಷಿಣಾಗ್ರವಾದ ದರ್ಭೆಗಳ ಮೇಲೆ ಪುಷ್ಪಧೂಪಾದ್ಯರ್ಚನೆಯೊಡನೆ ತನ್ನ ತಂದೆಗೆ ಮೊದಲು ಪಿಂಡವನ್ನು ಕೊಡಬೇಕು.

೩೭-೩೮. ಅಜ್ಜನಿಗೆ ಆಮೇಲೂ ಮುತ್ತಜ್ಜನಿಗೆ ಅನಂತರವೂ ಪಿಂಡ ವನ್ನು ಕೊಡಬೇಕು. ಆ ದರ್ಭೆಗಳ ಮೂಲದಲ್ಲಿ ಲೇಪಭುಜರಿಗಾಗಿ ಲೇಪಕಾರ್ಯ ವನ್ನು ಮಾಡಬೇಕು ಗಂಧಮಾಲ್ಯಾದಿಗಳಿಂದ ಸಹಿತವಾಗಿ ಪಿಂಡಗಳಿಂದ ಮಾತಾಮಹರುಗಳನ್ನು ಪೂಜಿಸಿ, ಬ್ರಾಹ್ಮಣೋತ್ತಮರಿಗೆ ಆಚಮನ (ಉತ್ತರಾ ಪೋಶನ)ವನ್ನು ಕೊಡಬೇಕು.

ಏತಾನ್ಧರ್ಮಾಂಸ್ತು ವಿಜ್ಞಾಯ ಬ್ರಾಹ್ಮಣೋ ಯಸ್ತಪಸ್ಯತಿ ।
ತಸ್ಯ ಮುಕ್ತಿರ್ಭವೇನ್ನೂನಂ ವೇದವಾದರತಸ್ಯ ಚ ॥ ೧೨ ॥

॥ ಸತ್ಯತಪಾ ಉವಾಚ ॥

ಯತ್ತದೇತತ್ಪರಂ ಬ್ರಹ್ಮ ತ್ವಯಾಪ್ರೋಕ್ತಂ ಮಹಾಮುನೇ ।
ತಸ್ಯ ರೂಪಂ ನ ಜಾನಂತಿ ಯೋಗಿನೋಽಪಿ ಮಹಾತ್ಮನಃ ॥ ೧೩ ॥

ಅನಾಮಗೋತ್ರರಹಿತಮಮೂರ್ತಂ ಮೂರ್ತಿವರ್ಜಿತಂ ।
ಕಥಂ ತದ್ ಜ್ಞಾಯತೇ ಬ್ರಹ್ಮ ಸಂಜ್ಞನಾಮವಿವರ್ಜಿತಂ ॥
ತತ್ತಸ್ಯ ಸಂಜ್ಞಾಂ ಕಥಯ ಯೇನ ಜಾನಾಮ್ಯಹಂ ಗುರೋ ॥ ೧೪ ॥

॥ ದುರ್ವಾಸಾ ಉವಾಚ ॥

ಯದೇತತ್ಪರಮಂ ಬ್ರಹ್ಮ ವೇದೇ ಶಾಸ್ತ್ರೇಷು ಪಠ್ಯತೇ ।
ಸವೇದಃ ಪುಂಡರೀಕಾಕ್ಷಃ ಸ್ವಯಂ ನಾರಾಯಣೋ ಹರಿಃ ॥ ೧೫ ॥

---

೧೨. ಈ ಧರ್ಮಗಳನ್ನರಿತು ತಪಸ್ಸನ್ನು ಮಾಡುವ ಮತ್ತು ವೇದವಾದಾಸಕ್ತನಾದ ಬ್ರಾಹ್ಮಣನಿಗೆ ನಿಜವಾಗಿಯೂ ಮುಕ್ತಿಯಾಗುವುದು.

೧೩. ಸತ್ಯತಪ—ಮಹಾಮುನಿಯೇ, ಮಹಾತ್ಮನಾದ ಪರಬ್ರಹ್ಮನ ರೂಪವನ್ನು ಯೋಗಿಗಳೂ ಅರಿಯರೆಂದು ನೀನು ಹೇಳಿದೆಯಷ್ಟೆ.

೧೪. ಹೆಸರೂ, ಕುಲವೂ ಇಲ್ಲದವನೂ, ದೇಹಾಕಾರಗಳಿಲ್ಲದವನೂ, ಆದ ಆ ಬ್ರಹ್ಮನನ್ನು ಹೆಸರೂ ಗುರುತೂ ಇಲ್ಲದ ಮೇಲೆ ತಿಳಿಯುವುದು ಹೇಗೆ? ಗುರುವೇ, ನಾನು ತಿಳಿಯುವುದಕ್ಕೆ ಆಗುವಂತೆ ಅವನ ಗುರುತನ್ನು ಹೇಳು.

೧೫. ದುರ್ವಾಸಮುನಿ—ವೇದದಲ್ಲೂ, ಶಾಸ್ತ್ರಗಳಲ್ಲೂ ಪರಬ್ರಹ್ಮನೆಂದು ಹೇಳಿದೆ. ಕಮಲನೇತ್ರನೂ, ಹರಿಯೂ ಆದ ಸಾಕ್ಷಾನ್ನಾರಾಯಣನೇ ಆ ವೇದ.

ನಿವರ್ತೇತಾಭ್ಯನುಜ್ಞಾತ ಆದ್ವಾರಾಂತಮನುವ್ರಜೇತ್ ।

॥ ಶ್ರಾದ್ಧಾಂತೇ ವೈಶ್ವದೇವಾದಿ ॥

ತತಸ್ತು ವೈಶ್ವದೇವಾಖ್ಯಾಂ ಕುರ್ಯಾನ್ನಿತ್ಯಕ್ರಿಯಾಂತತಃ ॥ ೪೪ ॥

ಭುಂಜೀಯೂಚ್ಚ ಸಮಂ ಪೂಜ್ಯ ಭೃತ್ಯಬಂಧುಭಿರಾತ್ಮನಃ ।
ಏವಂ ಶ್ರಾದ್ಧಂ ಬುಧಃ ಕುರ್ಯಾತ್ಪಿತ್ರ್ಯಂ ಮಾತಾಮಹಂತಥಾ ।
ಶ್ರಾದ್ಧೈರಾಪ್ಯಾಯಿತಾ ದದ್ಯುಃ ಸರ್ವಾನ್ ಕಾಮಾನ್ಪಿತಾಮಹಾಃ ॥ ೪೫ ॥

ತ್ರೀಣಿಶ್ರಾದ್ಧೇ ಪವಿತ್ರಾಣಿ ದೌಹಿತ್ರಃ ಕುತುಪಸ್ತಿಲಾಃ ।
ರಜತಸ್ಯ ತಥಾ ದಾನಂ ತಥಾ ಸಂದರ್ಶನಾದಿಕಂ ॥ ೪೬ ॥

ವರ್ಜ್ಯಂತು ಕುರ್ವತಾ ಶ್ರಾದ್ಧಂ ಕ್ರೋಧೋಧ್ವಗಮನಂತ್ವರಾ ।
ಭೋಕ್ತುಂ ರಜ್ಯತಿ ವಿಪ್ರೇಂದ್ರೇ ತ್ರಯಮೇತನ್ನಸಂಶಯಃ ॥ ೪೭ ॥

ಅಭ್ಯರ್ಥಿಗಳಾದವರನ್ನು ಸನ್ಮಾನಿಸಿ ಬಾಗಿಲವರೆಗೂ ಅವರನ್ನು ಕಳುಹಿಸಿ, ಅವರ ಅನುಜ್ಞೆಯನ್ನು ಪಡೆದು (ಒಳಕ್ಕೆ) ಹಿಂತಿರುಗಬೇಕು.

೪೫. ಶ್ರಾದ್ಧವಾದ ಬಳಿಕ ವೈಶ್ವದೇವ ಮೊದಲಾದುವು—ಶ್ರಾದ್ಧವಾದ ಬಳಿಕ ವೈಶ್ವದೇವವೆಂಬ ನಿತ್ಯಕರ್ಮವನ್ನು ಮಾಡಬೇಕು. ಬಳಿಕ ತನ್ನಪೂಜ್ಯ ಬಂಧು ಭೃತ್ಯರೊಡನೆ ಕರ್ತೃವು ಭೋಜನಮಾಡಬೇಕು. ಪಂಡಿತನಾದವನು ಪಿತೃಗಳ ಮತ್ತು ಮಾತಾಮಹರ ಶ್ರಾದ್ಧವನ್ನು ಮಾಡಬೇಕು. ಶ್ರಾದ್ಧಗಳಿಂದ ಸಂತೋಷಗೊಂಡು ಪಿತಾಮಹರು ಸರ್ವೇಷ್ಟಾರ್ಥಗಳನ್ನು ಕೊಡುವರು.

೪೬. ಶ್ರಾದ್ಧದಲ್ಲಿ ಮಗಳಮಗನ ನಿಮಂತ್ರಣ, ಕುತುಪಕಾಲ, ಎಳ್ಳು ಈ ಮೂರೂ ಪವಿತ್ರವಾದುವು. ಅಲ್ಲದೆ ಬೆಳ್ಳಿಯದಾನವೂ ಸಂದರ್ಶನಾದಿಗಳೂ ಪವಿತ್ರವಾದುವು.

೪೭. ಶ್ರಾದ್ಧಮಾಡುವವನು, ಬ್ರಾಹ್ಮಣರು ಊಟಮಾಡುವುದರಲ್ಲಿ ಆಸಕ್ತರಾಗಿರುವಾಗ, ಕೋಪ, ದಾಟಿಕೊಂಡುನಡೆಯುವುದು, ತ್ವರೆ ಈ ಮೂರನ್ನು ಖಂಡಿತವಾಗಿಯೂ ಬಿಟ್ಟು ಬಿಡಬೇಕು.

ವಿಶ್ವೇದೇವಾಃ ಸಪಿತರಸ್ತಥಾ ಮಾತಾಮಹಾ ದ್ವಿಜ ।
ಕುಲಂಚಾಪ್ಯಾಯಿತಂ ಪುಂಸಾ ಸರ್ವಶ್ರಾದ್ಧಂ ಪ್ರಕುರ್ವತಾ ॥ ೪೮ ॥

ಸೋಮಾಧಾರಃ ಪಿತೃಗಣೋ ಯೋಗಾಧಾರಸ್ತು ಚಂದ್ರಮಾಃ ।
ಶ್ರಾದ್ಧಂ ಯೋಗನಿಯುಕ್ತಂತು ತಸ್ಮಾದ್ವಿಪ್ರೇಂದ್ರಶಸ್ಯತೇ ॥ ೪೯ ॥

ಸಹಸ್ರಸ್ಯಾಪಿ ವಿಪ್ರಾಣಾಂ ಯೋಗೀ ಚೇತ್ಪುರತಃ ಸ್ಥಿತಃ ।
ಸರ್ವಾನ್ ಭೋಕ್ತೄಂಸ್ತಾರಯತಿ ಯಜಮಾನಂ ತಥಾ ದ್ವಿಜ ॥ ೫೦ ॥

ಇಯಂ ಸರ್ವ ಪುರಾಣೇಷು ಸಾಮಾನ್ಯಾಪೈತೃಕೀ ಕ್ರಿಯಾ ।
ಏತತ್ಕ್ರಮಾತ್ಕರ್ಮಕಾಂಡಂ ಜ್ಞಾತ್ವಾ ಮುಚ್ಯೇತ ಬಂಧನಾತ್ ॥ ೫೧ ॥

ಏತದಾಶ್ರಿತ್ಯ ನಿರ್ವಾಣಮೃಷಯಃ ಶಂಸಿತವ್ರತಾಃ ।
ಪ್ರಾಪ್ತಾಗುರುಮುಖಾದಾಶು ತ್ವಮಪ್ಯೇತತ್ಪರೋಭವ ॥ ೫೨ ॥

---

೪೮. ಪಿತೃಗಳೊಡಗೂಡಿದ ವಿಶ್ವೇದೇವತೆಗಳನ್ನೂ ಮಾತಾಮಹರನ್ನೂ ತನ್ನ ಕುಲವನ್ನೂ, ಸರ್ವಶ್ರಾದ್ಧವನ್ನು ಮಾಡುವ ಮನುಷ್ಯನು ಆನಂದ ಗೊಳಿಸುವನು.

೪೯. ಪಿತೃಗಣವು ಚಂದ್ರನನ್ನು ಆಶ್ರಯಿಸಿರುವುದು. ಚಂದ್ರನು ಯೋಗಾಧಾರನಾಗಿರುವನು. ಬ್ರಾಹ್ಮಣೋತ್ತಮನೇ, ಆದುದರಿಂದ ಯೋಗದಿಂದ ಕೂಡಿದ ಶ್ರಾದ್ಧವು ಪ್ರಶಸ್ತವಾದುದು.

೫೦. ಬ್ರಾಹ್ಮಣನೇ, ಸಾವಿರಜನ ಬ್ರಾಹ್ಮಣರಮುಂದೆ ಯೋಗಿಯೊಬ್ಬ ನಿದ್ದನಾದರೆ ಅವನು ಭೋಜನಮಾಡುವವರೆಲ್ಲರನ್ನೂ ಯಜಮಾನನನ್ನೂ ಉತ್ತಾರಣಮಾಡುವನು.

೫೧. ಈ ಪಿತೃಕರ್ಮವು ಎಲ್ಲಾ ಪುರಾಣಗಳಲ್ಲೂ ಸಾಧಾರಣವಾದುದಾಗಿದೆ. ಈ ಕ್ರಮದಲ್ಲಿ ಕರ್ಮಕಾಂಡವನ್ನು ತಿಳಿದು ಮನುಷ್ಯನು ಸಂಸಾರ ಬಂಧನದಿಂದ ಮುಕ್ತನಾಗುವನು.

೫೨–೫೩. ಬ್ರಾಹ್ಮಣೋತ್ತಮನೇ, ಶ್ಲಾಘ್ಯವಾದ ವ್ರತಗಳನ್ನಾಚರಿಸುವ ಋಷಿಗಳು ಗುರುಮುಖದಿಂದ ಇದನ್ನಾಶ್ರಯಿಸಿ, ಮುಕ್ತಿಯನ್ನು ಪಡೆದರು.

ಇತಿ ತೇ ಕಥಿತಂ ಭಕ್ತ್ಯಾ ಪೃಚ್ಛತೋ ದ್ವಿಜಸತ್ತಮ ।
ಪಿತೄನ್ಯಷ್ಟ್ವಾ ಹರಿಂ ಧ್ಯಾಯೇದ್ಯಸ್ತಸ್ಯ ಕಿಮತಃ ಪರಂ ॥
ನತಸ್ಮಾತ್ಪರತಃ ಪಿತ್ರ್ಯಂ ತಂತ್ರಮಸ್ತೀತಿ ನಿಶ್ಚಯಃ ॥ ೫೩ ॥

ಇತಿ ಶ್ರೀವರಾಹಪುರಾಣೇ ಆದಿಕೃತವೃತ್ತಾಂತೇ ಶ್ರಾದ್ಧಕಲ್ಪನಿರೂಪಣಂ ನಾಮ ಚತುರ್ದಶೋಧ್ಯಾಯಃ

ನೀನೂ ಇದರಲ್ಲಿ ಆಸಕ್ತನಾಗು. ಭಕ್ತಿಯಿಂದ ಕೇಳಿದ ನಿನಗೆ ಇದನ್ನು ಹೇಳಿದ್ದೇನೆ. ಯಾರು ಪಿತೃಗಳನ್ನು ಪೂಜಿಸಿ ಹರಿಯನ್ನು ಧ್ಯಾನಿಸುವನೋ ಅವನು ಮಾಡಬೇಕಾದುದು ಬೇರಾವುದಿದೆ! ಅದಕ್ಕಿಂತ ಉತ್ತಮವಾದ ಪಿತೃತಂತ್ರವು ಇಲ್ಲವೆಂಬುದು ನಿಶ್ಚಯ.

ಅಧ್ಯಾಯದ ಸಾರಾಂಶ :—

ಮಾರ್ಕಂಡೇಯಮುನಿಯು, ಗೌರಮುಖನಿಗೆ ಶ್ರಾದ್ಧವಿಚಾರವನ್ನೇ ಮುಂದುವರಿಸಿ ಹೇಳಿರುವನು. ಶ್ರಾದ್ಧದಲ್ಲಿ ನಿಮಂತ್ರಣಕ್ಕೆ ಅರ್ಹರಾದ ಬ್ರಾಹ್ಮಣರು, ಬ್ರಾಹ್ಮಣರಸಂಖ್ಯೆ, ಭೋಜನಕ್ಕೆ ಕೂರಿಸುವಕ್ರಮ, ಶ್ರಾದ್ಧಕ್ರಮ ಶ್ರಾದ್ಧಕಾಲದಲ್ಲಿ ಅಭ್ಯಾಗತನಾದ ಅತಿಥಿಗೆ ಪೂಜೆಯನ್ನು ಮಾಡುವಕ್ರಮ, ಶ್ರಾದ್ಧ ಹೋಮವಿಧಿ, ಭೋಜನಕ್ರಮ, ಅಭಿಶ್ರವಣ, ವಿಕಿರಾನ್ನಪಿಂಡದಾನಾದಿಕ್ರಮ, ಶ್ರಾದ್ಧಾನಂತರ ವೈಶ್ವದೇವ ಭೋಜನಾದಿಕ್ರಮ, ಇವುಗಳನ್ನು ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ಹದಿನಾಲ್ಕನೆಯ ಅಧ್ಯಾಯ

|| ಶ್ರೀಃ ||

-x-

ಪಂಚದಶೋಽಧ್ಯಾಯಃ

ಅಥ ಗೌರಮುಖಸ್ಯ ದಶಾವತಾರ ಸ್ತೋತ್ರೇಣ ಮೋಕ್ಷಃ

|| ಧರಣ್ಯುವಾಚ ||

ಏವಂ ಶ್ರಾದ್ಧವಿಧಿಂ ಶ್ರುತ್ವಾ ಮಾರ್ಕಂಡೇಯಾನ್ಮಹಾಮುನಿಃ ।
ತದಾ ಗೌರಮುಖೋ ದೇವ ಕಿಮೂರ್ಧ್ವಂ ಕೃತವಾನಸೌ || ೧ ||

|| ಶ್ರೀ ವರಾಹ ಉವಾಚ ||

ಏತಚ್ಛ್ರುತ್ವಾ ತದಾ ಧಾತ್ರಿ ಪಿತೃತಂತ್ರಂ ಮಹಾಮುನಿಃ ।
ತೇನಾಸ್ಮರಿತೋ ಜನ್ಮಶತಂ ಮಾರ್ಕಂಡೇಯೇನ ಧೀಮತಾ || ೨ ||

|| ಧರಣ್ಯುವಾಚ ||

ಭವನ್ ಗೌರಮುಖಃ ಕೋಽಸಾವನ್ಯಜನ್ಮನಿ ಕಃ ಸ್ಮೃತಃ ।
ಕಥಂ ಚ ಸ್ಮೃತವಾನ್ ಸ್ಮೃತ್ವಾ ಕಿಂ ಚಕಾರ ಚ ಸತ್ತಮಃ || ೩ ||

ಹದಿನೈದನೆಯ ಅಧ್ಯಾಯ

ಗೌರಮುಖನಿಗೆ ದಶಾವತಾರಸ್ತೋತ್ರದಿಂದ ಮೋಕ್ಷ.

೧. ಭೂದೇವಿ—ದೇವಾ, ಆ ಗೌರಮುಖಮಹಾಮುನಿಯು ಮಾರ್ಕಂಡೇಯನಿಂದ ಹೀಗೆ ಶ್ರಾದ್ಧವಿಧಿಯನ್ನು ಕೇಳಿ, ಮುಂದೇನು ಮಾಡಿದನು ?

೨. ವರಾಹ—ಧಾತ್ರಿ, ಆ ಮಹಾಮುನಿಯು, ಬುದ್ಧಿವಂತನಾದ ಮಾರ್ಕಂಡೇಯನಿಂದ ಈ ಪಿತೃಸಿದ್ಧಾಂತವನ್ನು ಕೇಳಿ, ಅದರಿಂದ ತನ್ನ ಹಿಂದಿನ ನೂರುಜನ್ಮಗಳ ಸ್ಮರಣೆಯುಳ್ಳವನಾದನು.

೩. ಭೂದೇವಿ—ಪೂಜ್ಯನೇ, ಆ ಗೌರಮುಖನು ಹಿಂದಿನ ಜನ್ಮದಲ್ಲಿ ಯಾರಾಗಿದ್ದನು ? ಹೇಗೆ ಹಿಂದಿನ ಜನ್ಮವನ್ನು ಜ್ಞಾಪಿಸಿಕೊಂಡನು ? ಆ ಸಜ್ಜನೋತ್ತಮನು ಹಾಗೆ ಜ್ಞಾಪಿಸಿಕೊಂಡು ಮಾಡಿದುದೇನು ?

॥ ಶ್ರೀ ವರಾಹ ಉವಾಚ ॥

ಭೃಗುರಾಸೀತ್ಸ್ವಯಂ ಸಾಕ್ಷಾದನ್ಯಸ್ಮಿನ್ ಬ್ರಹ್ಮಜನ್ಮನಿ ।
ತದನ್ವಯಾತ್ಮಜಸ್ತ್ವೇಷಃ ಮಾರ್ಕಂಡೇಯೋ ಮಹಾಮುನಿಃ ॥ ೪ ॥

ಪುತ್ರೈಸ್ತು ಬೋಧಿತಾ ಯೂಯಂ ಸುಗತಿಂ ಪ್ರಾಪ್ಸ್ಯಥೇತಿ ಯತ್ ।
ಪ್ರಾಗುಕ್ತಂ ಬ್ರಹ್ಮಣಾ ತೇನ ಮಾರ್ಕಂಡೇಯೇನ ಬೋಧಿತಃ ॥ ೫ ॥

ಸಸ್ಮಾರ ಸರ್ವಜನ್ಮಾನಿ ಸ್ಮೃತ್ವಾ ಚೈವತು ಯತ್ಕೃತಂ ।
ತಚ್ಛೃಣುಷ್ವ ವರಾರೋಹೇ ಕಥಯಾಮಿ ಸಮಾಸತಃ ॥ ೬ ॥

ಏವಂ ಶ್ರಾದ್ಧವಿಧಾನೇನ ದ್ವಾದಶಾಬ್ದಂ ತತಃ ಪಿತೄನ್ ।
ಇಷ್ಟ್ವಾ ಪಶ್ಚಾದ್ಧರೇ ಸ್ತೋತ್ರಂ ಸ ಮುನಿಸ್ತೂಪಚಕ್ರಮೇ ॥ ೭ ॥

ಪ್ರಭಾಸಂ ನಾಮ ಯತ್ತೀರ್ಥಂ ತ್ರಿಷು ಲೋಕೇಷು ವಿಶ್ರುತಂ ।
ತತ್ರ ದೈತ್ಯಾಂತಕಂ ದೇವಂ ಸ್ತೋತುಂ ಗೌರಮುಖಃ ಸ್ಥಿತಃ ॥ ೮ ॥

---

೪. ಶ್ರೀವರಾಹ—ಹಿಂದಿನ ಬ್ರಾಹ್ಮಣಜನ್ಮದಲ್ಲಿ ಆವನು ಸಾಕ್ಷಾತ್ ಭೃಗುವಾಗಿದ್ದನು. ಈ ಮಾರ್ಕಂಡೇಯ ಮಹರ್ಷಿಯು ಆ ಭೃಗುವಂಶದಲ್ಲಿ ಒಬ್ಬ ಪುತ್ರನಾಗಿ ಜನಿಸಿದ್ದನು.

೫. ಹಿಂದೆ ಬ್ರಹ್ಮನು ನೀವು ಮಕ್ಕಳಿಂದ ಬೋಧಿತರಾಗಿ ಒಳ್ಳೆಯ ಗತಿಯನ್ನು ಪಡೆಯುವಿರಿ ಎಂದು ಹೇಳಿದುದನ್ನು ಮಾರ್ಕಂಡೇಯನು ಅವನಿಗೆ ಈಗ ತಿಳಿಸಿದನು.

೬. ವರಾರೋಹೇ, ಅದರಿಂದ ಅವನು ಸರ್ವಜನ್ಮಗಳನ್ನೂ ಜ್ಞಾಪಿಸಿಕೊಂಡು, ಏನುಮಾಡಿದನೆಂಬುದನ್ನು ಸಂಕ್ಷೇಪವಾಗಿ ಹೇಳುತ್ತೇನೆ, ಕೇಳು.

೭. ಬಳಿಕ ಆ ಗೌರಮುಖಮುನಿಯು ಹನ್ನೆರಡುವರ್ಷಕಾಲ ಹೀಗೆ ಶ್ರಾದ್ಧಕರ್ಮದಿಂದ ಪಿತೃಗಳನ್ನು ಪೂಜಿಸಿ, ಆಮೇಲೆ ಹರಿಯ ಸ್ತೋತ್ರವನ್ನು ಮೊದಲುಮಾಡಿದನು.

೮. ಮೂರುಲೋಕಗಳಲ್ಲೂ ಹೆಸರುಗೊಂಡಿರುವ ಪ್ರಭಾಸವೆಂಬ ತೀರ್ಥಕ್ಕೆ ಹೋಗಿ ಅಲ್ಲಿ ರಾಕ್ಷಸನಾಶಕನಾದ ದೇವನನ್ನು ಸ್ತೋತ್ರಮಾಡಲು ನಿಂತನು.

॥ ಗೌರಮುಖ ಉವಾಚ ॥

ದಶಾವತಾರಸ್ತೋತ್ರಂ :—

ಸ್ತೋಷ್ಯೇ ಮಹೇಂದ್ರಂ ರಿಪುದರ್ಪಹಂ ಶಿವಂ
ನಾರಾಯಣಂ ಬ್ರಹ್ಮವಿದಾಂ ವರಿಷ್ಠಂ ।
ಆದಿತ್ಯಚಂದ್ರಾಶ್ವಿಯುಗಸ್ಥಮಾದ್ಯಂ
ಪುರಾತನಂ ದೈತ್ಯಹರಂ ಸದಾ ಹರಿಂ ॥ ೯ ॥

ಚಕಾರ ಮಾತ್ಸ್ಯಂ ವಪುರಾತ್ಮನೋ ಯಃ
ಪುರಾತನಂ ವೇದವಿನಾಶಕಾಲೇ ।
ಮಹಾಮಹೀಭೃದ್ವಪುರಗ್ರಪುಚ್ಛ
ಚ್ಛಟಾಹವಾರ್ಚಿಃ ಸುರಶತ್ರುಹಾದ್ಯಃ ॥ ೧೦ ॥

ತಥಾಬ್ಧಿಮಂಥಾನಕೃತೇ ಗಿರೀಂದ್ರಂ
ದಧಾರ ಯಃ ಕೌರ್ಮ್ಯವಪುಃ ಪುರಾಣಂ ।
ಹಿತೇಚ್ಛಯಾಪ್ತಃ ಪುರುಷಃ ಪುರಾಣಃ
ಪ್ರಪಾತು ಮಾಂ ದೈತ್ಯಹರಃ ಸುರೇಶಃ ॥ ೧೧ ॥

---

೯. ಗೌರಮುಖನು ಹೇಳಿದ ದಶಾವತಾರಸ್ತೋತ್ರ—ಮಹೇಂದ್ರನೂ, ಶತ್ರುದರ್ಪವನ್ನು ಮುರಿಯುವವನೂ, ಶಿವನೂ, ಬ್ರಹ್ಮಜ್ಞಾನಿಗಳೊಡೆಯನೂ, ಸೂರ್ಯ ಚಂದ್ರಾಶ್ವಿನೀದೇವತೆಗಳಲ್ಲಿರುವವನೂ, ಆದಿಭೂತನೂ, ಪುರಾತನನೂ ರಾಕ್ಷಸನಾಶಕನೂ ಆದ ಹರಿನಾರಾಯಣನನ್ನು ಯಾವಾಗಲೂ ಸ್ತುತಿಸುತ್ತೇನೆ.

೧೦–೧೧. ಪ್ರಪಂಚಕ್ಕೆ ಮೂಲನೂ, ಅಸುರಸಂಹಾರಕನೂ ಆದ ಯಾರು, ವೇದಗಳು ಕಳೆದುಹೋದಾಗ ಮಹಾಪರ್ವತಾಕಾರವೂ, ಬಾಲದ ತುದಿಯ ಹೊಡೆತದಿಂದ ಯುದ್ಧಾಗ್ನಿಯ ಜ್ವಾಲೆಯನ್ನುಂಟುಮಾಡುವುದೂ ಆದ ಆದಿಮತ್ಸ್ಯರೂಪವನ್ನು ಧರಿಸಿದನೋ, ಅಲ್ಲದೆ ಕ್ಷೀರಸಮುದ್ರವನ್ನು ಕಡೆಯುವಾಗ ಸುರರಿಗೆ ಹಿತಮಾಡುವುದಕ್ಕಾಗಿ ಯಾರು ಆದಿ ಕೂರ್ಮರೂಪವುಳ್ಳವನಾಗಿ ಮಂದರಗಿರಿಯನ್ನು ಧರಿಸಿದನೋ, ಆ ಪುರಾಣಪುರುಷನೂ, ಲೋಕಹಿತನೂ, ಅಸುರಹರನೂ ಆದ ಆ ಸುರೇಶನು ನನ್ನನ್ನು ಸಂರಕ್ಷಿಸಲಿ.

ಮಹಾವರಾಹಃ ಸತತಂ ಪೃಥಿವ್ಯಾಃ
ತಲಾತ್ತಲಂ ಪ್ರಾವಿಶದ್ಯೋ ಮಹಾತ್ಮಾ ।
ಯಜ್ಞಾಂಗಸಂಜ್ಞಃ ಸುರಸಿದ್ಧಸಂಘೈಃ
ಸ ಪಾತು ಮಾಂ ದೈತ್ಯಹರಃ ಪುರಾಣಃ ॥ ೧೨ ॥

ನೃಸಿಂಹರೂಪೀ ಚ ಬಭೂವ ಯೋಽಸೌ
ಯುಗೇ ಯುಗೇ ಯೋಗಿವರೋಽಥ ಭೀಮಃ ।
ಕರಾಲವಕ್ತ್ರಃ ಕನಕಾಗ್ರವರ್ಚಾ
ವರಾಶಯೋಽಸ್ಮಾನಸುರಾಂತಕೋಽವ್ಯಾತ್ ॥ ೧೩ ॥

ಬಲೇರ್ಮಖಧ್ವಂಸಕೃದಪ್ರಮೇಯೋ
ಯೋಗಾತ್ಮಕೋ ಯೋಗವಪುಃ ಸ್ವರೂಪಃ ।
ಸ ದಂಡಕಾಷ್ಠಾಜಿನಲಕ್ಷಣಃ ಕ್ಷಿತಿಂ
ಯೋಽಸೌ ಮಹಾನ್ಯಾಕ್ರಂತವಾನ್ ನಃ ಪುನಾತು ॥ ೧೪ ॥

---

೧೨. ಯಾವ ಮಹಾತ್ಮನು ಮಹಾವರಾಹರೂಪನಾಗಿ ಭೂದೇವಿಗಾಗಿ ಪಾತಾಳವನ್ನು ಹೊಕ್ಕನೋ, ಯಾರನ್ನು ಸುರಸಿದ್ಧಸಂಘಗಳು ಯಜ್ಞಾಂಗನೆಂದು ಕರೆಯುವುವೋ ಆ ಹಿರಣ್ಯಾಕ್ಷರಾಕ್ಷಸಾಂತಕನಾದ ಪುರಾಣಪುರುಷನು ನನ್ನನ್ನು ಪಾಲಿಸಲಿ.

೧೩. ಯೋಗಿಗಳೊಡೆಯನಾದ ಯಾರು ಒಂದೊಂದು (ಕೃತ) ಯುಗದಲ್ಲೂ ಅತಿಭಯಂಕರವೂ ಕರಾಳವಾದ ಮುಖವುಳ್ಳದ್ದೂ, ಸುವರ್ಣ ಚ್ಛಾಯೆಯುಳ್ಳದ್ದೂ ಆದ ನರಸಿಂಹರೂಪವನ್ನು ಧರಿಸಿ, ಹಿರಣ್ಯಕಶಿಪುರಾಕ್ಷಸ ಸಂಹಾರಕನಾಗಿರುವನೋ ಆ ಸ್ವಾಮಿಯು ಸುಪ್ರಸನ್ನನಾಗಿ ನಮ್ಮನ್ನು ಕಾಪಾಡಲಿ.

೧೪. ಯೋಗಾತ್ಮಕನಾದ ಯಾವ ಮಹಾತ್ಮನು ಅಜಿನದಂಡಧಾರಿಯಾದ ಬ್ರಹ್ಮಚಾರಿಯಾಗಿ ವಾಮನರೂಪವನ್ನು ಧರಿಸಿ, ಬಲಿಯಜ್ಞವನ್ನು ನಾಶಮಾಡಿ, ಅಪ್ರಮೇಯನಾಗಿ ತ್ರಿವಿಕ್ರಮಾವತಾರದಿಂದ ಭೂಮಿಯನ್ನಾಕ್ರಮಿಸಿದನೋ ಅವನು ನಮ್ಮನ್ನು ಪವಿತ್ರರನ್ನಾಗಿ ಮಾಡಲಿ.

ತ್ರಿಃ ಸಪ್ತಕೃತ್ವೋ ಜಗತೀಂ ಜಿಗಾಯ
ಕೃತ್ವಾ ದದೌ ಕಶ್ಯಪಾಯ ಪ್ರಚಂಡಃ ।
ಸ ಜಾಮದಗ್ನ್ಯೋಽಭಿಜನಸ್ಯ ಗೋಪ್ತಾ
ಹಿರಣ್ಯಗರ್ಭೋಽಸುರುಹಾ ಪ್ರಪಾತು ॥ ೧೫ ॥

ಚತುಷ್ಪ್ರಕಾರಂ ಚ ವಪುರ್ಯ ಆದ್ಯಂ
ಹೈರಣ್ಯಗರ್ಭಪ್ರತಿಮಾನಲಕ್ಷ್ಯಂ ।
ರಾಮಾದಿರೂಪೈರ್ಬಹುರೂಪಭೇದಂ
ಚಕಾರ ಸೋಽಸ್ಮಾನಸುರಾಂತಕೋಽವ್ಯಾತ್ ॥ ೧೬ ॥

ಚಾಣೂರಕಂಸಾಸುರದರ್ಪಭೀತೇ
ರ್ಭೀತಾಮರಾಣಾಮಭಯಾಯ ದೇವಃ ।
ಯುಗೇ ಯುಗೇ ವಾಸುದೇವೋ ಬಭೂವ
ಕಲ್ಪೇ ಭವತ್ಯದ್ಭುತರೂಪಕಾರೀ ॥ ೧೭ ॥

---

೧೫. ಹಿರಣ್ಯಗರ್ಭನಾದ ಯಾರು ಜಮದಗ್ನಿಪುತ್ರನಾಗಿ ಪರಶುರಾಮನೆಂಬ ಹೆಸರಿನಿಂದುದಿಸಿ ಪ್ರಚಂಡನಾಗಿ ಇಪ್ಪತ್ತೊಂದಾವೃತ್ತಿ ಭೂಮಿಯನ್ನೆಲ್ಲಾ ಸುತ್ತಿ, ಜಯಿಸಿ, ಕಶ್ಯಪಋಷಿಗೆ ಕೊಟ್ಟನೋ, ಆ ಕಾರ್ತವೀರ್ಯಾರ್ಜುನಾದಿ ಅಸುರನಾಶಕನೂ, ಸಜ್ಜನರಕ್ಷಕನೂ ಆದ ನಾರಾಯಣನು ನಮ್ಮನ್ನು ರಕ್ಷಿಸಲಿ.

೧೬. ಹಿರಣ್ಯಗರ್ಭನೆಂಬ ಹೆಸರಿನ ತನ್ನ ಆದಿರೂಪವನ್ನು ರಾಮಲಕ್ಷ್ಮಣ ಭರತಶತ್ರುಘ್ನರೆಂಬ ನಾಲ್ಕು ರೂಪಗಳನ್ನಾಗಿ ಮಾಡಿಕೊಂಡು, ರಾವಣಕುಂಭಕರ್ಣಾದಿರಾಕ್ಷಸರನ್ನು ಸಂಹರಿಸಿದವನು ನಮ್ಮನ್ನು ಕಾಪಾಡಲಿ.

೧೭. ಚಾಣೂರಕಂಸಾಸುರರ ದರ್ಪದಿಂದ ಹೆದರಿದ ದೇವತೆಗಳಿಗೆ ಅಭಯವನ್ನುಂಟುಮಾಡಲು ಯಾವ ದೇವನು ಪ್ರತಿ (ದ್ವಾಪರ)ಯುಗದಲ್ಲೂ ವಸುದೇವ ಪುತ್ರರಾಗಿ ಬಲರಾಮಕೃಷ್ಣರೆಂಬ ಹೆಸರಿನಿಂದ ಉದಿಸುವನೋ, ಕಲ್ಪಾಂತದಲ್ಲಿ ಅದ್ಭುತವಾದ ರೂಪವನ್ನುಂಟುಮಾಡುವ ಆ ಸ್ವಾಮಿಯು ಪಾಲಿಸಲಿ.

ಯುಗೇ ಯುಗೇ ಕಲ್ಕಿನಾಮ್ನಾ ಮಹಾತ್ಮಾ
ವರ್ಣಸ್ಥಿತಿಂ ಕರ್ತುಮನೇಕರೂಪಃ ।
ಸನಾತನೋ ಬ್ರಹ್ಮಮಯಃ ಪುರಾತನೋ
ನ ಯಸ್ಯ ರೂಪಂ ಸುರಸಿದ್ಧದೈತ್ಯಾಃ ॥ ೧೮ ॥

ಪಶ್ಯಂತಿ ವಿಜ್ಞಾನಗತಿಂ ವಿಹಾಯ
ಅತೋಽಯಮೇನಾಪಿ ಸಮರ್ಚಯಂತಿ ।
ಮತ್ಸ್ಯಾದಿರೂಪಾಣಿ ಚರಾಣಿ ಸೋಽವ್ಯಾತ್ ॥ ೧೯ ॥

ನಮೋ ನಮಸ್ತೇ ಪುರುಷೋತ್ತಮಾಯ
ಪುನಶ್ಚ ಭೂಯೋಽಪಿ ನಮೋ ನಮಸ್ತೇ ।
ನಮೋ ನಮಃ ಕಾರಣಕಾರಣಾಯ
ನಯಸ್ವ ಮಾಂ ಮುಕ್ತಿಪದಂ ನಮಸ್ತೇ ॥ ೨೦ ॥

ಏವಂ ನಮಸ್ಯತಸ್ತಸ್ಯ ಮಹರ್ಷೇರ್ಭಾವಿತಾತ್ಮನಃ ।
ಪ್ರತ್ಯಕ್ಷತಾಂ ಗತೋ ದೇವಃ ಸ್ವಯಂ ಚಕ್ರಗದಾಧರಃ ॥ ೨೧ ॥

೧೮–೧೯. ಸನಾತನಬ್ರಹ್ಮನೂ, ಪುರಾಣಪುರುಷನೂ, ಅನೇಕರೂಪನೂ ಆದ ಯಾರು ಒಂದೊಂದು ಕಲಿಯುಗದಲ್ಲಿಯೂ ವರ್ಣಗಳನ್ನು ನೆಲೆಗೊಳಿಸಲು ಕಲ್ಕಿಯೆಂಬ ಹೆಸರಿನಿಂದವತರಿಸುವನೋ, ಯಾರ ಮೂಲರೂಪವನ್ನು ಸುರರಾಗಲಿ, ಸಿದ್ಧರಾಗಲಿ, ದೈತ್ಯರಾಗಲಿ ವಿಜ್ಞಾನ ಗತಿಯನ್ನು ಬಿಟ್ಟು ನೋಡಲಾರದೆ ಚರವಾದ ಅವನ ಮತ್ಸ್ಯಾದಿರೂಪಗಳನ್ನು ಯೋಗದಿಂದ ಅರ್ಚಿಸುವರೋ ಆ ಸ್ವಾಮಿಯು ನನ್ನನ್ನು ಕಾಪಾಡಲಿ.

೨೦. ಪುರುಷೋತ್ತಮನಾದ ನಿನಗೆ ನಮಸ್ಕಾರ. ಕಾರಣಕ್ಕೆ (ಮೂಲ)ಕಾರಣನಿಗೆ ನಮಸ್ಕಾರ. ನನ್ನನ್ನು ಮುಕ್ತಿಪದಕ್ಕೇರಿಸು. ನಿನಗೆ ನಮಸ್ಕಾರ.

೨೧. ಹೀಗೆ ನಮಿಸುತ್ತಿದ್ದ ಪವಿತ್ರಾತ್ಮನಾದ ಆ ಗೌರಮುಖಮಹರ್ಷಿಗೆ ಶಂಖಚಕ್ರಗದಾಧಾರಿಯಾದ ದೇವನು (ತಾನು) ಪ್ರತ್ಯಕ್ಷನಾದನು.

ತಂ ದೃಷ್ಟ್ವಾ ತಸ್ಯ ವಿಜ್ಞಾನಂ ನಿಸ್ತರಂಗಂ ಸ್ವದೇಹತಃ ।
ಉತ್ತಸ್ಥೌ ಸೋಽಪಿ ತಂ ಲಬ್ಧ್ವಾ ತಸ್ಮಿನ್ಬ್ರಹ್ಮಣಿ ಶಾಶ್ವತೇ ॥
ಲಯಂ ಜಗಾಮ ದೇವಾತ್ಮನ್ಯಪುನರ್ಭವಸಂಜ್ಞಿತೇ ॥ ೨೨ ॥

ಇತಿ ಶ್ರೀವರಾಹಪುರಾಣೇ ಆದಿಕೃತವೃತ್ತಾಂತೇ ಗೌರಮುಖಸ್ಯ ಮೋಕ್ಷನಿರೂಪಣಂ ನಾಮ ಪಂಚದಶೋಽಧ್ಯಾಯಃ

---

೨೨. ಆ ಪರಮಾತ್ಮಸಂದರ್ಶನದಿಂದ ಆ ಗೌರಮುಖನಿಗೆ ಸ್ವದೇಹದಲ್ಲಿಯೇ, ತರಂಗವಿಲ್ಲದ ದಿವ್ಯಜ್ಞಾನವುಂಟಾಯಿತು. ಅದನ್ನು ಪಡೆದು ಅವನು ದೇವನಾದ ಆ ಶಾಶ್ವತಪರಬ್ರಹ್ಮನಲ್ಲಿ ಐಕ್ಯನಾದನು.

ಅಧ್ಯಾಯದ ಸಾರಾಂಶ :—

ಶ್ರೀವರಾಹದೇವನು ಭೂದೇವಿಗೆ, ಗೌರಮುಖಮುನಿಯು ಮಾರ್ಕಂಡೇಯನಿಂದ ಶ್ರಾದ್ಧಕಲ್ಪವನ್ನೂ, ಪೂರ್ವಜನ್ಮದಲ್ಲಿ ತಾನು ಭೃಗುವಾಗಿದ್ದುದನ್ನೂ ಕೇಳಿ, ಹನ್ನೆರಡುವರ್ಷಗಳಕಾಲ ಶ್ರಾದ್ಧಕರ್ಮದಿಂದ ಪಿತೃಗಳನ್ನು ತೃಪ್ತಿಪಡಿಸಿ, ಬಳಿಕ, ಹರಿಯನ್ನು ದಶಾವತಾರಸ್ತೋತ್ರದಿಂದ ಸ್ತುತಿಸಿ, ಅವನ ಸಂದರ್ಶನದಿಂದ ದಿವ್ಯಜ್ಞಾನಿಯಾಗಿ, ಆ ಪರಬ್ರಹ್ಮನಲ್ಲಿಯೇ ಐಕ್ಯನಾದನು ಎಂಬುದನ್ನು ಆ ಸ್ತೋತ್ರದೊಡನೆ ತಿಳಿಸುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಹದಿನೈದನೆಯ ಅಧ್ಯಾಯ.

|| ಶ್ರೀಃ ||

–X–

ಷೋಡಶೋಧ್ಯಾಯಃ

ಅಥ ಸರಮೋಪಾಖ್ಯಾನಮ್

|| ಧರಣ್ಯುವಾಚ ||

ತದಾ *ದುರ್ವಾಸಸಾ ಶಪ್ತೋ ದೇವರಾಜಃ ಶತಕ್ರತುಃ |
ವಸಿಷ್ಯಸಿ ತ್ವಂ ಮರ್ತ್ಯೇಷು ಸುಪ್ರತೀಕ ಸುತೇನ ತು || ೧ ||

ಉತ್ಪಾದಿತೋ ದಿವೋ ಮೂಢೇತ್ಯೇವಮುಕ್ತಸ್ತು ಭೂಧರಃ |
ಇಂದ್ರೋ ಮರ್ತ್ಯಮುಪಾಗಮ್ಯ ಸರ್ವದೇವಸಮನ್ವಿತಃ || ೨ ||

ಕಿಂಚಕಾರ ಚ ತಸ್ಮಿಂಸ್ತು ದುರ್ಜಯೋ ಚ ನಿಪಾತಿತೇ |
ಪರಮೇಷ್ಠಿನಾ ಭಗವತಾ ತೇನ ಯೋಗವಿದುತ್ತಮೌ || ೩ ||

ಹದಿನಾರನೆಯ ಅಧ್ಯಾಯ

ಸರಮೆಯ ಕಥೆ

೧–೪. ಭೂದೇವಿ—ದೇವ, ಹಿಂದೆ*ದುರ್ವಾಸಋಷಿಯಿಂದ, "ಮೂಢನೇ, ನೀನು ಸುಪ್ರತೀಕನ ಮಗ (ದುರ್ಜಯು) ನಿಂದ ಸ್ವರ್ಗದಿಂದ ತಳ್ಳಿಸಿಕೊಂಡು, ಭೂಲೋಕದಲ್ಲಿ ವಾಸಮಾಡುವೆ." ಎಂದು ಶಾಪವನ್ನು ಪಡೆದ ದೇವರಾಜನೂ, ಶತಕ್ರತುವೂ ಆದ ಇಂದ್ರನು ಮನುಷ್ಯಲೋಕಕ್ಕೆ ದೇವತೆಗಳೆಲ್ಲರೊಡನೆ ಬಂದು, ಭಗವಂತನಾದ ಆ ಪರಮಾತ್ಮನಿಂದ ಆ ದುರ್ಜಯನು ಹತನಾದ ಬಳಿಕ ಏನು ಮಾಡಿದನು ? ಯೋಗ್ಯಜ್ಞರಲ್ಲಿ ಮೇಲಾದ ಆ ವಿದ್ಯುತ್ಸುವಿದ್ಯುತ್ತುಗಳು ಆಗ

---

* ಅತ್ರೇಯನ ಶಾಪವೆಂದು ಹಿಂದೆ ೧೦ ನೆಯ ಅಧ್ಯಾಯದ ೩೩–೩೪ ನೆಯ ಶ್ಲೋಕಗಳಲ್ಲಿದೆ.

ಸ್ವರ್ಗೇ ವಿದ್ಯುತ್ಸುವಿದ್ಯುಚ್ಚ ತೌ ಚ ಕಿಂ ಚಕ್ರತುಸ್ತದಾ ।
ಏತನ್ಮೇ ಸಂಶಯಂ ದೇವ ಕಥಯಸ್ವ ಪ್ರಸಾದತಃ ॥ ೪ ॥

॥ ವರಾಹ ಉವಾಚ ॥

ದುರ್ಜಯೇನ ಜಿತೋ ಧಾತ್ರಿ ದೇವರಾಜಃ ಶತಕ್ರತುಃ ।
ಭಾರತೇಹಿ ತದಾವರ್ಷೇ ವಾರಾಣಸ್ಯಾಂತು ಪೂರ್ವತಃ ॥
ಆಶ್ರಿತ್ಯ ಸಂಸ್ಥಿತೋ ದೇವೈಃ ಸಹ ಯಕ್ಷಮಹೋರಗೈಃ ॥ ೫ ॥

ವಿದ್ಯುತ್ಸುವಿದ್ಯುಚ್ಚ ತದಾ ಯೋಗಮಾಸ್ಥಾಯ ಶೋಭನೇ ॥ ೬ ॥

ದೀರ್ಘತಾಪಜ್ವರಂ ವಾಯುಕರ್ಮಯೋಗೇನ ಸಂಶ್ರಿತೌ ।
ಲೋಕಪಾಲಾಯ ತಂ ಕೃತ್ಸ್ನಂ ಚಕ್ರತುರ್ಯೋಗಮಾಯಯಾ ॥ ೭ ॥

ತಂ ದುರ್ಜಯಂ ಮೃತಂ ಶ್ರುತ್ವಾ ಸಮುದ್ರಾಂತಃ ಸ್ಥಿತಂ ಸದಾ ।
ಆನೀಯ ಚತುರಂಗಂ ತು ದೇವಾನ್ಪ್ರತಿ ವಿಜಗ್ಮತುಃ ॥ ೮ ॥

ಸ್ವರ್ಗದಲ್ಲಿ ಏನು ಮಾಡಿದರು ? ಎಂಬ ಈ ನನ್ನ ಸಂದೇಹವನ್ನು ದಯೆಯಿಂದ (ಹೇಳಿ) ಪರಿಹರಿಸು.

೫. ವರಾಹ—ಭೂದೇವಿ, ದುರ್ಜಯನಿಂದ ಸೋತ ಶತಕ್ರತುವೂ, ದೇವತೆಗಳೊಡೆಯನೂ ಆದ ಇಂದ್ರನು ಆಗ ದೇವಯಕ್ಷಮಹೋರಗರೊಡನೆ ಭಾರತವರ್ಷದಲ್ಲಿ ಕಾಶಿಯಲ್ಲಿ ಬಂದು ಸೇರಿ ಮೊದಲಿನಿಂದಲೂ ನೆಲೆನಿಂತನು.

೬-೭. ಮಂಗಳೇ, ವಿದ್ಯುತ್ಸುವಿದ್ಯುತ್ತುಗಳು ಆಗ ಯೋಗವನ್ನಾಶ್ರಯಿಸಿ, ವಾಯುಕರ್ಮಯೋಗದಿಂದ ಅಧಿಕವಾದ ತಾಪಜ್ವರವನ್ನು ಪಡೆದು ಲೋಕಪಾಲಕರು ಮಾಡುತ್ತಿದ್ದ ಸಮಸ್ತ ಕಾರ್ಯವನ್ನೂ ತಮ್ಮ ಯೋಗಮಾಯೆಯಿಂದ ಮಾಡುತ್ತಿದ್ದರು.

೮. ಆ ದುರ್ಜಯನು ಸತ್ತುದನ್ನು ಕೇಳಿ, ಅವರು ಆದುವರೆಗೆ ಸಮುದ್ರದೊಳಗಡೆಯಲ್ಲಿದ್ದ ತಮ್ಮ ಚತುರಂಗಸೇನೆಯನ್ನು ತೆಗೆದುಕೊಂಡು ಆಗ ದೇವತೆಗಳಮೇಲೆ ಯುದ್ಧಕ್ಕೆ ಹೊರಟರು.

ಆಗತ್ಯ ತೌ ತದಾ ದೈತ್ಯೌ ಮಹಾಸೈನ್ಯೇನ ಪರ್ವತಂ ।
ಹಿಮವಂತಂ ಸಮಾಶ್ರಿತ್ಯ ಸಂಸ್ಥಿತೌ ತು ಬಭೂವತುಃ ॥ ೯ ॥

ದೇವಾ ಅಪಿ ಮಹತ್ಸೈನ್ಯಂ ಸಂಹತ್ಯ ಕೃತದಂಶಿತಾಃ ।
ಮಂತ್ರಯಾಂಚಕ್ರುರವ್ಯಗ್ರಾ ಐಂದ್ರಂ ಪದಮಭೀಪ್ಸವಃ ॥ ೧೦ ॥

ಅಬ್ರವೀತ್ತತ್ರ ದೇವಾನಾಂ ಗುರುರಾಂಗಿರಸೋ ಮುನಿಃ ।
ಗೋಮೇಧೇನ ಯಜಧ್ವಂ ವೈ ಪ್ರಥಮಂ ತದನಂತರಂ ॥ ೧೧ ॥

ಯಷ್ಟವ್ಯಂ ಕ್ರತುಭಿಃ ಸರ್ವೈರೇಷಾ ಸ್ಥಿತಿರಥಾಮರಾಃ ।
ಉಪದೇಶೋ ಮಯಾ ದತ್ತಃ ಕ್ರಿಯತಾಂ ಶೀಘ್ರಮೇವ ವೈ ॥ ೧೨ ॥

ಏವಮುಕ್ತಾಸ್ತದಾ ದೇವಾ ಗಾಃ ಪಶೂಂಶ್ಚಾನುಕಲ್ಪ್ಯ ತೇ ।
ಮುಮುಚುಶ್ಚಾರಣಾರ್ಥಾಯ ರಕ್ಷಾರ್ಥಂ ಸರಮಾಂದದುಃ ॥ ೧೩ ॥

---

೯. ಆ ರಾಕ್ಷಸರು ದೊಡ್ಡದಾದ ಸೈನ್ಯದೊಡನೆ ಬಂದು, ಹಿಮವತ್ಪರ್ವತವನ್ನು ಆಶ್ರಯಿಸಿ ನಿಂತರು.

೧೦. ದೇವತೆಗಳೂ ದೊಡ್ಡ ದಂಡನ್ನು ಸೇರಿಸಿ, ಅವ್ಯಾಕುಲರಾಗಿ ಇಂದ್ರಪದವಿಯನ್ನು ಮತ್ತೆ ಪಡೆಯಲು ಬಯಸಿ, ಮಂತ್ರಾಲೋಚನೆ ಮಾಡಿದರು.

೧೧–೧೨. ಅವರಲ್ಲಿ ಗುರುವಾದ ಬೃಹಸ್ಪತಿಮುನಿಯು "ಮೊದಲು ಗೋಮೇಧಯಜ್ಞವನ್ನು ಮಾಡಿರಿ. ಆಮೇಲೆ ಸರ್ವಯಜ್ಞಗಳನ್ನೂ ಮಾಡಬೇಕು. ದೇವತೆಗಳೇ ಇದು ನಿಮ್ಮ ರಕ್ಷಣೆ. ನಾನು ಉಪದೇಶ ಮಾಡಿದ್ದೇನೆ. ಇದನ್ನು ಬೇಗನೆ ಮಾಡಿರಿ." ಎಂದನು.

೧೩. ಹೀಗೆ ಹೇಳಿಸಿಕೊಂಡು ದೇವತೆಗಳು ಗೋವುಗಳನ್ನು ಯಜ್ಞಪಶುಗಳಾಗಿ ನಿಷ್ಕರ್ಷಿಸಿ, ಅವುಗಳನ್ನು ಸಂಚಾರಕ್ಕಾಗಿ ಬಿಟ್ಟರು. ಅವುಗಳ ರಕ್ಷಣೆಗಾಗಿ ಸರಮೆಯನ್ನು ಕಳುಹಿದರು.

ತಾಶ್ಚ ಗಾವೋ ದೇವಶುನ್ಯಾ ರಕ್ಷಮಾಣಾ ಧರಾಧರೇ ।
ತತ್ರ ಜಗ್ಮುಸ್ತದಾಗಾವಶ್ಚರಂತ್ಯೋ ಯತ್ರ ತೇಽಸುರಾಃ ॥ ೧೪ ॥

ತೇಚ ಗಾವಸ್ತು ತಾ ದೃಷ್ಟ್ವಾ ಶುಕ್ರಮೂಚುಃ ಪುರೋಹಿತಂ ।
ಪಶ್ಯ ತ್ವಂ ದೇವ ಗಾ ಬ್ರಹ್ಮಂಶ್ಚಾರ್ಯಂತೇ ರಕ್ಷಮಾಣಯಾ ॥
ದೇವಶುನ್ಯಾ ಸರಮಯಾ ವದ ಕಿಂ ಕ್ರಿಯತೇಧುನಾ ॥ ೧೫ ॥

ಏವಮುಕ್ತಸ್ತದಾ ಶುಕ್ರಃ ಪ್ರತ್ಯುವಾಚಾಸುರಾಂಸ್ತದಾ ।
ಏತಾ ಗಾ ಹ್ರಿಯತಾಂ ಶೀಘ್ರಮಸುರಾ ಮಾ ವಿಲಂಬಥ ॥ ೧೬ ॥

ಏವಮುಕ್ತಾಸ್ತದಾ ದೈತ್ಯಾಃ ಜಹುಸ್ತಾ ಗಾ ಯದೃಚ್ಛಯಾ ।
ಹೃತಾಸು ತಾಸು ಸರಮಾ ಮಾರ್ಗಾನ್ವೇಷಣತತ್ಪರಾ ॥ ೧೭ ॥

ಅಪಶ್ಯತ್ತಾಃ ದಿತೇಃ ಪುತ್ರೈರ್ನೀತಾ ಗಾವೋ ಧರಾಧರೇ ।
ದೈತ್ಯೈರಪಿ ಶುನೀ ದೃಷ್ಟಾ ದೃಷ್ಟಮಾರ್ಗಾ ವಿಶೇಷತಃ ॥ ೧೮ ॥

---

೧೪. ಧರಾಧರೇ, ಆ ಹಸುಗಳು ದೇವತೆಗಳ ನಾಯಿಯಾದ ಆ ಸರಮೆಯ ಕಾವಲುಳ್ಳವಾಗಿ ಸಂಚರಿಸುತ್ತಾ ಆ ವಿದ್ಯುತ್ಸುವಿದ್ಯು ದ್ರಾಕ್ಷಸರಿದ್ದೆಡೆಗೆ ಹೋದವು.

೧೫. ಅವರು ಆ ಹಸುಗಳನ್ನು ನೋಡಿ, ಪುರೋಹಿತನಾದ ಶುಕ್ರಾಚಾರ್ಯನನ್ನು ಕುರಿತು" ಬ್ರಹ್ಮನೇ, ದೇವತೆಗಳ ನಾಯಿಯಾದ ಸರಮೆಯ ಕಾವಲಿನಲ್ಲಿ ದೇವತೆಗಳ ಹಸುಗಳು ಸಂಚರಿಸುತ್ತಿವೆ. ನೋಡು. ಈಗ ಏನು ಮಾಡಬೇಕೆಂಬುದನ್ನು ಹೇಳು" ಎಂದರು.

೧೬ ಹೀಗೆ ಹೇಳಲು ಶುಕ್ರಾಚಾರ್ಯನು ಅಸುರರಿಗೆ "ಈ ಹಸುಗಳನ್ನು ಬೇಗನೆ ಅಪಹರಿಸಿರಿ. ಅಸುರರೇ, ತಡಮಾಡಬೇಡಿ." ಎಂದು ಹೇಳಿದನು.

೧೭–೧೮. ಹೀಗೆ ಹೇಳಿಸಿಕೊಂಡ ಆ ರಾಕ್ಷಸರು ಆಗ ಆ ಹಸುಗಳನ್ನು ಅಪಹರಿಸಿದರು. ಆಕಸ್ಮಾತ್ತಾಗಿ ಹಸುಗಳು ಕಳವಾಗಲು ದಾರಿಯನ್ನು ಹುಡುಕುತ್ತಾ ಹೋದ ಆ ಸರಮೆಯು, (ದಿತಿಯಮಕ್ಕಳಾದ) ರಾಕ್ಷಸರು ಕದ್ದ ಆ ಹಸುಗಳನ್ನು ಕಂಡಿತು. ದಾರಿಯನ್ನು ಚೆನ್ನಾಗಿ ಕಂಡ ಆ ನಾಯನ್ನು ರಾಕ್ಷಸರೂ ನೋಡಿದರು.

ದೃಷ್ಟ್ವಾ ತೇ ತಾಂ ಚ ಸರಮಾಂ ಸಾಮಪೂರ್ವಮಿದಂ ವಚಃ ।
ಆಸಾಂ ಗವಾಂ ತು ದುಗ್ಧ್ವೈವಂ ಕ್ಷೀರಂ ತ್ವಂ ಸರಮೇ ಶುಭೇ ॥
ಪಿಬ ಸ್ವೈರಮಿತಿ ಪ್ರೋಕ್ತ್ವಾ ತಸ್ಯೈ ತದ್ದದುರಂಜಸಾ ॥ ೧೯ ॥

ದತ್ವಾ ತು ಕ್ಷೀರಪಾನಂ ತು ತಸ್ಯೈ ತೇ ದೈತ್ಯನಾಯಕಾಃ ॥ ೨೦ ॥

ಮಾ ಭದ್ರೇ ದೇವರಾಜಾಯ ಗಾಸ್ತ್ವಿಮಾ ವಿನಿವೇದಯ ।
ಏವಮುಕ್ತ್ವಾ ತತೋ ದೈತ್ಯಾ ಮುಮುಚುಸ್ತಾಂ ಶುನೀಂ ವನೇ ॥ ೨೧ ॥

ತೈರ್ಮುಕ್ತಾ ಸಾ ಸುರಾಂಸ್ತೂರ್ಣಂ ಜಗಾಮ ಖಲು ವೇಪತೀ ।
ನಮಶ್ಚಕ್ರೇ ಚ ದೇವೇದ್ರಂ ಸರಮಾ ಸುರಸತ್ತಮಂ ॥ ೨೨ ॥

ತಸ್ಯಾಶ್ಚ ಮರುತೋ ದೇವಾ ದೇವೇಂದ್ರೇಣ ನಿರೂಪಿತಾಃ ।
ಗೂಢಂ ಗಚ್ಛತ ರಕ್ಷಾರ್ಥಂ ದೇವಶುನ್ಯಾ ಮಹಾಬಲಾಃ ॥ ೨೩ ॥

ಇತ್ಯುಕ್ತಾಸ್ತೇನ ಸೂಕ್ಷ್ಮೇಣ ವಪುಷಾ ಜಗ್ಮುರಂಜಸಾ ।
ತೇಪ್ಯಾಗಮ್ಯ ಸುರೇಂದ್ರಾಯ ನಮಶ್ಚಕ್ರುರ್ಧರಾಧರೇ ॥ ೨೪ ॥

---

೧೯. ಆ ಸರಮೆಯನ್ನು ನೋಡಿದ ಅವರು ಸಮಾಧಾನದಿಂದ, "ಶುಭೇ, ಸರಮೇ, ಈ ಹಸುಗಳ ಹಾಲನ್ನು ಕರೆದು, ನೀನು ಬೇಕಾದ ಹಾಗೆ ಕುಡಿ." ಎಂದು ಹೇಳಿ ಬೇಗನೆ ಅದನ್ನು ಅದಕ್ಕೆ ಕೊಟ್ಟರು.

೨೦-೨೧. ಆ ರಾಕ್ಷಸನಾಯಕರು ಹಾಲನ್ನು ಕುಡಿಯಲು ಕೊಟ್ಟು, "ಭದ್ರೇ ಇಂದ್ರನಿಗೆ ಈ ಹಸುಗಳು ಇಲ್ಲಿರುವುದನ್ನು ತಿಳಿಸಬೇಡ" ಎಂದು ಹೇಳಿ, ಆ ನಾಯನ್ನು ಕಾಡಿನಲ್ಲಿ ಬಿಟ್ಟರು.

೨೨. ಅವರು ಬಿಟ್ಟ ಆ ಸರಮೆಯು ಬೇಗ ದೇವತೆಗಳ ಹತ್ತಿರ ಹೋಗಿ ನಡುಗುತ್ತಾ ಸುರೋತ್ತಮನಾದ ದೇವೇಂದ್ರನಿಗೆ ನಮಸ್ಕರಿಸಿತು.

೨೩-೨೪. "ಆ ನಾಯಿಯ ರಕ್ಷಣೆಗಾಗಿ ನೀವು ಯಾರಿಗೂ ತಿಳಿಯದಂತೆ ಜತೆಯಲ್ಲಿ ಹೋಗಿ" ಎಂದು ಇಂದ್ರನಿಂದ ಆಜ್ಞಪ್ತರಾದ ಮಹಾಬಲಶಾಲಿಗಳಾದ ಮರುದ್ದೇವತೆಗಳು ಸೂಕ್ಷ್ಮದೇಹದಿಂದ ಹೋಗಿದ್ದರು. ದೇವೀ, ಅವರೂ ಬೇಗನೆಬಂದು ದೇವೇಂದ್ರನಿಗೆ ನಮಸ್ಕರಿಸಿದರು.

ತಾಂದೇವರಾಜಃ ಪಪ್ರಚ್ಛ ಗಾವಃ ಕಿಂ ಸರಮೇಽಭವನ್ ।
ಏವಮುಕ್ತಾ ತು ಸರಮಾ ನಜಾನಾಮೀತಿ ಚಾಬ್ರವೀತ್ ॥ ೨೫ ॥

ತತ ಇಂದ್ರೋ ರುಷಾ ಯುಕ್ತೋ ಯಜ್ಞಾರ್ಥಮುಪಕಲ್ಪಿತಾಃ ।
ಗಾವಃ ಕ್ವ ಚೇತಿ ಮರುತಃ ಪ್ರೋವಾಚೇದಂ ಶುನೀ ಕಥಂ ॥ ೨೬ ॥

ಏವಮುಕ್ತಾಸ್ತು ಮರುತೋ ದೇವೇಂದ್ರೇಣ ಧರಾಧರೇ ।
ಕಥಯಾಮಾಸುರವ್ಯಗ್ರಾಃ ಕರ್ಮ ತತ್ಸರಮಾಕೃತಂ ॥ ೨೭ ॥

ತತ ಇಂದ್ರಃ ಸಮುತ್ಥಾಯ ಪದಾ ಸಂತಾಡಯಚ್ಛುನೀಂ ।
ಕ್ರೋಧೇನಮಹತಾವಿಷ್ಟೋ ದೇವೇಂದ್ರಃ ಪಾಕಶಾಸನಃ ॥ ೨೮ ॥

ಕ್ಷೀರಂ ಪೀತಂ ತ್ವಯಾ ಮೂಢೇ ಗಾವಸ್ತಾಶ್ಚಾಸುರೈರ್ಹೃತಾಃ ।
ಏವಮುಕ್ತ್ವಾ ಪದಾ ತೇನ ತಾಡಿತಾ ಸರಮಾ ಧರೇ ॥ ೨೯ ॥

---

೨೫. ದೇವರಾಜನು ಆ ನಾಯನ್ನು "ಸರಮೇ, ಹಸುಗಳೇನಾದವು ? ಎಂದು ಕೇಳಿದನು. ಹೀಗೆ ಕೇಳಿಸಿಕೊಂಡ ಆ ಸರಮೆಯು ನಾನು ಕಾಣೆ" ಎಂದಿತು.

೨೬. ಬಳಿಕ ಇಂದ್ರನು ಸಿಟ್ಟುಗೊಂಡು, "ಯಜ್ಞಕ್ಕಾಗಿ ಕ್ಲಪ್ತವಾಗಿದ್ದ ಹಸುಗಳು ಎಲ್ಲಿ? ಈ ನಾಯಿಯು ಹೇಗೆ ಇಲ್ಲಿಗೆ ಬಂದಿತು?" ಎಂದು ಮರುತ್ತುಗಳನ್ನು ಕೇಳಿದನು.

೨೭. ಹಾಗೆ ಕೇಳಲು ಮರುತ್ತುಗಳು ವ್ಯಾಕುಲವಿಲ್ಲದವರಾಗಿ ಸರಮೆಯು ಮಾಡಿದ ಕಾರ್ಯವನ್ನು ಹೇಳಿಬಿಟ್ಟರು.

೨೮. ಬಳಿಕ ಪಾಕಶಾಸನನಾದ ದೇವೇಂದ್ರನು ಬಹಳ ಸಿಟ್ಟಿನಿಂದ ಎದ್ದು, ನಾಯಿಯನ್ನು ಒದೆದನು.

೨೯. ಧರೇ, "ಮೂಢಳೇ ನೀನು ಹಾಲನ್ನು ಕುಡಿದೆ. ಆ ಹಸುಗಳನ್ನು ರಾಕ್ಷಸರು ಅಪಹರಿಸಿದರು." ಎಂದು ಹೇಳಿ ಅವನು ಸರಮೆಯನ್ನು ಒದ್ದನು.

ತಸ್ಯೇಂದ್ರಪಾದಘಾತೇನ ಕ್ಷೀರಂ ವಕ್ತ್ರಾತ್ ಪ್ರಸುಸ್ರುವೇ ।
ಸ್ರವತಾ ತೇನ ಪಯಸಾ ಸಾಶುನೀ ಯತ್ರಗಾಭವತ್ ॥ ೩೦ ॥

ಜಗಾಮ ತತ್ರ ದೇವೇಂದ್ರಃ ಸಹಸೈನ್ಯಸ್ತದಾಧರೇ ।
ಅಪಶ್ಯತ್ತತ್ರ ದೇವೇಂದ್ರಸ್ತಾಗಾ ದೈತ್ಯೈರುಪಾಹೃತಾಃ ॥ ೩೧ ॥

ಚಕ್ರುರ್ಯೇ ಪಾಲನಂ ದೈತ್ಯಾಃ ತೇ ದೈತ್ಯಾ ಬಲಿನೋಭೃಶಂ ।
ತೈಃ ಸೈನ್ಯೈರ್ನಿಹತಾಃ ಸದ್ಯಸ್ತತ್ಯಜುರ್ಗಾಃ ಸ್ವಮೂರ್ತಿಭಿಃ ॥ ೩೨ ॥

ಸಾಮಂತೈಶ್ಚ ಸುರೇಂದ್ರೋಥ ವೃತಃ ಪರಮಹರ್ಷಿತೈಃ ।
ತಾಶ್ಚ ಲಬ್ಧ್ವಾ ಮಹೇಂದ್ರಸ್ತು ಮುದಾ ಪರಮಯಾ ಯುತಃ ॥ ೩೩ ॥

ಚಕಾರ ಯಜ್ಞಾನ್ವಿವಿಧಾನ್ ಸಹಸ್ರಾನಪಿ ಸ ಪ್ರಭುಃ ।
ಕ್ರಿಯಮಾಣೈಸ್ತತೋ ಯಜ್ಞೈರ್ವವೃಧೇಂದ್ರಸ್ಯ ತದ್ಬಲಂ ॥ ೩೪ ॥

---

೩೦. ಇಂದ್ರನ ಆ ಒದೆಯಿಂದ ನಾಯಿ ಕುಡಿದಿದ್ದ ಹಾಲನ್ನು ಕಕ್ಕಿತು. ಆ ಹಾಲನ್ನು ಬಾಯಿಂದ ಸುರಿಸುತ್ತಲೇ ಆ ನಾಯಿಯು ಯಜ್ಞದ ಆ ಹಸುಗಳಿದ್ದೆಡೆಗೆ ಹೋಯಿತು.

೩೧. ಭೂದೇವೀ, ಆಗ ದೇವೇಂದ್ರನು ಸೈನ್ಯದೊಡನೆ ಅಲ್ಲಿಗೆ ಹೋಗಿ ರಾಕ್ಷಸರು ಕದ್ದಿದ್ದ ಆ ಹಸುಗಳನ್ನು ಕಂಡನು.

೩೨. ಹಸುಗಳನ್ನು ರಕ್ಷಿಸುತ್ತಿದ್ದ ಅತಿ ಬಲಶಾಲಿಗಳಾದ ರಾಕ್ಷಸರು ಇಂದ್ರಸೈನ್ಯದಿಂದ ಹತರಾಗಿ ಹಸುಗಳನ್ನು ತಮ್ಮ ಬಂಧನದಿಂದ ಬಿಟ್ಟರು.

೩೩–೩೪. ಪ್ರಭುವಾದ ದೇವೇಂದ್ರನು ಬಳಿಕ ಪರಮ ಸಂತುಷ್ಟರಾದ ಸಾಮಂತರೊಡನೆ ಆ ಹಸುಗಳನ್ನು ಪಡೆದು, ಹೆಚ್ಚಾದ ಸಂತೋಷದಿಂದ ಬಗೆ ಬಗೆಯಾದ ಸಾವಿರಾರು ಯಜ್ಞಗಳನ್ನು ಮಾಡಿದನು ಮಾಡುವ ಯಜ್ಞಗಳಿಂದ ಇಂದ್ರನ ಶಕ್ತಿಯೂ, ಸೈನ್ಯವೂ ಹೆಚ್ಚಾಗಿ ಬೆಳೆಯಿತು.

ವರ್ಧಿತೇನ ಬಲೇನೇಂದ್ರೋ ದೇವಸೈನ್ಯಮುವಾಚ ಹ |
ಸನ್ನಹ್ಯತಾಂ ಸುರಾಃ ಶೀಘ್ರಂ ದೈತ್ಯಾನಾಂ ವಧಕರ್ಮಣಿ || ೩೫ ||

ಏವಮುಕ್ತಾಸ್ತದಾ ದೇವಾಃ ಸನ್ನದ್ಧಾಸ್ತತ್ ಕ್ಷಣೇಭವನ್ |
ಅಸುರಾಣಾಮಭಾವಾಯ ಜಗ್ಮುರ್ದೇವಾಃ ಸವಾಸವಾಃ || ೩೬ ||

ಗತ್ವಾ ತು ಯುಯುಧುಸ್ತೂರ್ಣಂ ವಿಜಿಗ್ಯುಸ್ತ್ವಾಸುರೀಂಚಮೂವಮ್ |
ಜಿತಾಶ್ಚ ದೇವೈರಸುರಾ ಹತಶೇಷಾ ಧರಾಧರೇ || ೩೭ ||

ಮಮಜ್ಜುಃ ಸಾಗರಜಲೇ ಭಯತ್ರಸ್ತಾ ವಿಚೇತಸಃ || ೩೮ ||

ದೇವರಾಜೋಽಪಿ ತ್ರಿದಿವಂ ಲೋಕಪಾಲೈಃ ಸಮಂ ಧರೇ |
ಆರುಹ್ಯ ಬುಭುಜೇ ಸ್ವಾಗ್ರತ್ಸದೇವೋ ದೇವರಾಡ್ವಿಭುಃ || ೩೯ ||

ಯ ಏವ ಶೃಣುಯಾನ್ನಿತ್ಯಂ ಸರಮಾಖ್ಯಾನಮುತ್ತಮಂ |
ಸ ಗೋಮೇಧಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ || ೪೦ ||

---

೩೫. ಇಂದ್ರನು ಹೆಚ್ಚಿದ ಬಲದಿಂದ ದೇವಸೇನೆಗೆ "ದೇವತೆಗಳು ಬೇಗನೆ ರಾಕ್ಷಸರ ಕೊಲೆಗೆಲಸಕ್ಕೆ ಸಿದ್ಧರಾಗಲಿ" ಎಂದು ಹೇಳಿದನು.

೩೬. ಹೀಗೆ ಹೇಳಲು ದೇವತೆಗಳು ಒಡನೆಯೇ ಯುದ್ಧಸನ್ನದ್ಧರಾದರು. ರಾಕ್ಷಸರು ಇಲ್ಲದಂತೆ ಮಾಡಲು ಇಂದ್ರಸಹಿತರಾಗಿ ದೇವತೆಗಳು ಹೊರಟರು.

೩೭-೩೮. ಹೋಗಿ ಯುದ್ಧಮಾಡಿ ರಾಕ್ಷಸಸೈನ್ಯವನ್ನು ಬೇಗನೆಜಯಿಸಿದರು. ಧರೇ, ದೇವತೆಗಳಿಂದ ಜಿತರಾಗಿ ಹತರಾಗದೆ ಉಳಿದ ಅಸುರರು ಭಯದಿಂದ ನಡುಗುತ್ತಾ ಬುದ್ಧಿಗೆಟ್ಟು, ಸಾಗರಜಲದಲ್ಲಿ ಮುಳುಗಿದರು.

೩೯. ಧರೇ, ವಿಭುವೂ, ದೇವತೆಗಳ ಒಡೆಯನೂ ಆದ ಇಂದ್ರನು ಲೋಕಪಾಲರೊಡನೆ ಸ್ವರ್ಗವನ್ನು ಏರಿ, ಹಿಂದಿನಂತೆ ಪಾಲಿಸಿ ಭೋಗಿಸಿದನು.

೪೦. ಯಾರು ಉತ್ತಮವಾದ ಈ ಸರಮೋಪಾಖ್ಯಾನವನ್ನು ದಿನವೂ ಕೇಳುವರೋ ಅವರು ಗೋಮೇಧಯಜ್ಞಫಲವನ್ನು ಪಡೆಯುವರು.

ಭ್ರಷ್ಟರಾಜ್ಯಶ್ಚ ಯೋ ರಾಜಾ ಶೃಣೋತೀದಂ ಸಮಾಹಿತಃ |
ಸ ದೇವೇಂದ್ರ ಇವ ಸ್ವರ್ಗಂ ರಾಜ್ಯಂ ಸ್ವಂ ಲಭತೇ ನರಃ || ೪೧ ||

ಇತಿ ವರಾಹಪುರಾಣೇ ಆದಿಕೃತವೃತ್ತಾಂತೇ ಸರಮೋಪಾಖ್ಯಾನಂ ನಾಮ ಷೋಡಶೋಽಧ್ಯಾಯಃ

---

೪೧. ರಾಜ್ಯವನ್ನು ಕಳೆದುಕೊಂಡಿರುವ ರಾಜನು ಇದನ್ನು ಮನಸ್ಸಿಟ್ಟು ಕೇಳಿದನಾದರೆ ದೇವೇಂದ್ರನು ಸ್ವರ್ಗವನ್ನು ಪಡೆದಂತೆ ತನ್ನ ರಾಜ್ಯವನ್ನು ಮತ್ತೆ ಪಡೆಯುವನು.

ಅಧ್ಯಾಯದ ಸಾರಾಂಶ :—

"ಹಿಂದೆ ದುರ್ಜಯರಾಜನಿಂದ ಪರಾಜಿತನಾಗಿ ಭೂಲೋಕದಲ್ಲಿ ವಾಸಮಾಡುತ್ತಿದ್ದ ಇಂದ್ರನು, ದುರ್ಜಯನ ಮರಣಾನಂತರ ವಿದ್ಯುತ್, ಸುವಿದ್ಯುತ್ ಎಂಬ ಯೋಗಮಾಯಾವಿಶಾರದರಾದ ರಾಕ್ಷಸರೊಡನೆ ಯುದ್ಧ ಮಾಡಬೇಕಾಯಿತು. ಅವರನ್ನು ಜಯಿಸುವ ಶಕ್ತಿಯನ್ನು ಪಡೆಯಲು ಗುರುವು ಹೇಳಿದಂತೆ ಗೋಮೇಧಯಜ್ಞವನ್ನು ಮಾಡಬೇಕೆಂದು ಯಜ್ಞಪಶುಗಳಾದ ಗೋವುಗಳನ್ನು ಸಂಚಾರಕ್ಕೆ ಬಿಟ್ಟು ಅವುಗಳ ರಕ್ಷಣೆಗಾಗಿ ಸರಮೆಯೆಂಬ ತನ್ನ ನಾಯನ್ನೂ ಕಳುಹಿಸಿದ್ದನು. ಶುಕ್ರಾಚಾರ್ಯದಿಂದ ಪ್ರೇರಿತರಾದ ಆ ರಾಕ್ಷಸರು ತಮ್ಮೆಡೆಗೆ ಬಂದ ಯಜ್ಞದ ಹಸುಗಳನ್ನು ಅಪಹರಿಸಿ, ಸರಮೆಗೆ ಕುಡಿಯಲು ಹಾಲನ್ನು ಕೊಟ್ಟು, ಇಂದ್ರನಿಗೆ ಗೋವುಗಳ ವಿಚಾರವನ್ನು ತಿಳಿಸದಂತೆ ಮಾಡಿದರು. ಇಂದ್ರನೆಡೆಗೆ ಬಂದ ನಾಯಿ ಹಸುಗಳೇನಾದುವೋ, ನನಗೆ ತಿಳಿಯದು, ಎಂದು ಸುಳ್ಳುಹೇಳಿತು. ಸೂಕ್ಷ್ಮರೂಪದಿಂದ ಸರಮೆಯ ಜತೆಯಲ್ಲಿ ಹೋಗಿದ್ದ ಮರುತ್ತುಗಳು ನಿಜಾಂಶವನ್ನು ಹೇಳಿಬಿಟ್ಟರು. ಇಂದ್ರನು ಒದೆಯಲು, ನಾಯಿಯು ಕುಡಿದಿದ್ದ ಹಾಲನ್ನು ಕಕ್ಕಿ ಹಸುಗಳಿದ್ದೆಡೆಗೆ ಹೊರಟಿತು. ದೇವೇಂದ್ರನೂ ಸೇನೆಯೊಡನೆ ಹೋಗಿ ಹಸುಗಳನ್ನು ಕಂಡು, ರಕ್ಷಿಸುತ್ತಿದ್ದ ರಾಕ್ಷಸರನ್ನು ಸಂಹರಿಸಿ, ಹಸುಗಳನ್ನು ತಂದು, ಸಾವಿರಾರು ಯಜ್ಞಗಳನ್ನು ಮಾಡಿ, ಶಕ್ತಿಯನ್ನು ಪಡೆದು ರಾಕ್ಷಸರನ್ನು ಜಯಿಸಿ ಮತ್ತೆ ಸ್ವರ್ಗಾಧಿಪತ್ಯವನ್ನು ಪಡೆದು, ಸುಖದಿಂದಿದ್ದನು. ಸರಮೋಪಾಖ್ಯಾನವನ್ನು ಕೇಳಿದವರಿಗೆ ಸುಖವು ಲಭಿಸುವುದು." ಎಂದು ಶ್ರೀವರಾಹನು ಭೂದೇವಿಗೆ ಹೇಳುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಹದಿನಾರನೆಯ ಅಧ್ಯಾಯ.

॥ಶ್ರೀಃ ॥

-X-

ಸಪ್ತದಶೋಽಧ್ಯಾಯಃ

ಅಥ ಮಹಾತಪಉಪಾಖ್ಯಾನಮ್

॥ ಧರಣ್ಯುವಾಚ ॥

ಯೇ ತೇ ಮಣೌ ತದಾ ದೇವ ಉತ್ಪನ್ನಾ ನರಪುಂಗವಾಃ ।
ತೇಷಾಂ ವರೋ ಭಗವತಾ ದತ್ತಸ್ತ್ರೇತಾಯುಗೇ ಕಿಲ ॥ ೧ ॥

ರಾಜಾನೋ ಭವಿತಾರೋ ವೈ ಕಥಂ ತೇಷಾಂ ಸಮುದ್ಭವಃ ।
ಕಿಂ ಚಕ್ರುರ್ವೈ ಹಿ ತೇ ಕರ್ಮ ಪೃಥಗ್ ನಾಮಾನಿ ಶಂಸ ಮೇ ॥ ೨ ॥

॥ ವರಾಹ ಉವಾಚ ॥

ಸುಪ್ರಭೋ ಮಣಿಜೋ ಯಸ್ತು ರಾಜಾನಾಮ ಮಹಾಮನಾಃ ।
ತಸ್ಯೋತ್ಪತ್ತಿಂ ವರಾರೋಹೇ ಶೃಣು ತ್ವಂ ಭೂತಧಾರಿಣಿ ॥ ೩ ॥

ಹದಿನೇಳನೆಯ ಅಧ್ಯಾಯ

ಮಹಾತಪ ಚರಿತೆ

೧-೨. ಭೂದೇವಿ—ದೇವ, ಆಗ ಮಣಿಯಿಂದುದಿಸಿದ ನರೋತ್ತಮರಿಗೆ ಭಗವಂತನು ತ್ರೇತಾಯುಗದಲ್ಲಿ ನೀವು ರಾಜರಾಗುವಿರೆಂದು ವರವನ್ನು ಕೊಟ್ಟನಷ್ಟೆ. ಅವರು ಹೇಗೆಜನಿಸಿದರು? ಯಾವಕಾರ್ಯಮಾಡಿದರು? ಬೇರೆ ಬೇರೆಯಾಗಿ ಅವರ ಹೆಸರುಗಳನ್ನು ನನಗೆಹೇಳು.

೩. ವರಾಹ—ಭೂತಧಾರಿಣಿ, ಮಣಿಯುಂದಿಸಿದ ಮಹಾಮನನಾದ ಸುಪ್ರಭನೆಂಬುವನು ರಾಜನಾಗಿ ಹುಟ್ಟಿದುದನ್ನು ಕೇಳು.

ಆಸೀದ್ರಾಜಾ ಮಹಾಬಾಹುರಾದೌ ಕೃತಯುಗೇ ಪುರಾ ।
ಶ್ರುತಕೀರ್ತಿರಿತಿ ಖ್ಯಾತಸ್ತ್ರೈಲೋಕ್ಯೇ ಬಲವತ್ತರಃ ॥ ೪ ॥

ತಸ್ಯ ಪುತ್ರತ್ವಮಾಪೇದೇಸುಪ್ರಭೋ ಮಣಿಜೋ ಧರೇ ।
ಪ್ರಜಾಪಾಲೇತಿ ವೈ ನಾಮ್ನಾ ಶ್ರುತಕೀರ್ತಿರ್ಮಹಾಬಲಃ ॥ ೫ ॥

ಸ ಏಕಸ್ಮಿನ್ ದಿನೇ ಪ್ರಾಯಾದ್ಗಹನಂ ಶ್ವಾಪದಾಕುಲಂ ।
ತತ್ರಾಪಶ್ಯದೃಷೇರ್ಧನ್ಯಂ ಮಹದಾಶ್ರಮಮಂಡಲಂ ॥ ೬ ॥

ತಸ್ಮಿನ್ಮಹಾತಪಾನಾಮ ಋಷಿಃ ಪರಮಧಾರ್ಮಿಕಃ ।
ತಪಸ್ತೇಪೇ ನಿರಾಹಾರೋ ಜಪನ್ಬ್ರಹ್ಮ ಸನಾತನಂ ॥ ೭ ॥

ತತ್ರಾಸೌ ಪಾರ್ಥಿವಃ ಶ್ರೀಮಾನ್ ಪ್ರವೇಶಾಯ ಮತಿಂ ತದಾ ।
ಚಕಾರ ಚಾವಿಶದ್ರಾಜಾ ಪ್ರಜಾಪಾಲೋ ಮಹಾತಪಾಃ ॥ ೮ ॥

---

೪. ಪೂರ್ವದಲ್ಲಿ ಕೃತಯುಗದ ಆದಿಯಲ್ಲಿ ಮೂರು ಲೋಕದಲ್ಲಿಯೂ ಬಲಿಷ್ಠನೂ, ಮಹಾಬಾಹುವೂ ಆದ ಶ್ರುತಕೀರ್ತಿಯೆಂಬ ರಾಜನಿದ್ದನು.

೫. ಮಣಿಜನಾಗಿದ್ದ ಸುಪ್ರಭನು ಪ್ರಜಾಪಾಲನೆಂಬ ಹೆಸರಿನಿಂದ ಶ್ರುತಕೀರ್ತಿಗೆ ಮಗನಾಗಿ ಹುಟ್ಟಿದನು.

೬. ಅವನು ಒಂದುದಿನ ಕ್ರೂರಮೃಗಗಳಿಂದ ಕೂಡಿದ ಕಾಡಿಗೆ ಹೋಗಿ, ಅಲ್ಲಿ ಪವಿತ್ರವೂ, ಉತ್ತಮವೂ ಆದ ಋಷ್ಯಾಶ್ರಮವನ್ನು ಕಂಡನು.

೭. ಅಲ್ಲಿ ಪರಮಧಾರ್ಮಿಕನಾದ ಮಹಾತಪನೆಂಬ ಋಷಿಯು ನಿರಾಹಾರನಾಗಿ ಸನಾತನ ಬ್ರಹ್ಮನನ್ನು ಸ್ಮರಿಸುತ್ತಾ ತಪಸ್ಸನ್ನು ಮಾಡುತ್ತಿದ್ದನು.

೮. ಶ್ರೀಮಂತನೂ, ಮಹಾತಪಸ್ವಿಯೂ ಆದ ಆ ಪ್ರಜಾಪಾಲರಾಜನು ಆಶ್ರಮಕ್ಕೆ ಹೋಗಬೇಕೆಂದು ಮನಸ್ಸುಮಾಡಿ ಕೂಡಲೇ ಅಲ್ಲಿ ಪ್ರವೇಶಿಸಿದನು.

ತಸ್ಮಿನ್ವರಾಶ್ರಮಪದೇ ವನವೃಕ್ಷಜಾತಾಃ*
ಧರಾಪ್ರಸೂತೋರ್ಜಿತಮಾರ್ಗಜುಷ್ಟಾಃ ।
ಲತಾಗೃಹಾ ಇಂದುಸಮಪ್ರಕಾಶಿನೋ
ನಾಯಾಸಜ್ಞಾ ಯತ್ರ ಯಾತಾ ಹಿ ಭೃಂಗಾಃ ॥ ೯ ॥

ಸುರಕ್ತಪದ್ಮೋದರ ಕೋಮಲಾಗ್ರ
ನಖಾಂಗುಲೀಭಿಃ ಪ್ರಸೃತೈಃ ಸುರಾಗಾಂ ।
ವರಾಂಗನಾಭಿಃ ಪದಪಂಙ್ತಿಮುಚ್ಚೈಃ
ವಿಹಾಯ ಭೂಮಿಂ ತ್ರಿಪಿವೃತ್ರಶತ್ರೋಃ ॥ ೧೦ ॥

ಕ್ವಚಿತ್ಸಮೀಪೇ ತಮತೀವ ಹೃಷ್ಟೈಃ
ನಾನಾದ್ವಿಜೈಃ ಷಟ್ಚರಣೈಶ್ಚ ಮತ್ತೈಃ ।
+ವಾಶ್ಯದ್ಭಿರುಚ್ಚೈರ್ವಿವಿಧಪ್ರಮಾಣಾಃ
ಶಾಖಾಸ್ಸುಪುಷ್ಪಾಃ ಸಮಯೋಗಯುಕ್ತಾಃ ॥ ೧೧ ॥

೯-೧೦. ಆ ಉತ್ತಮವಾದ ಆಶ್ರಮ ಪ್ರದೇಶದಲ್ಲಿ ಭೂಮಿಯಲ್ಲಿ ಬೆಳೆದಿರುವ ಮರಗಳೆಲ್ಲವೂ, ಆಕಾಶದಲ್ಲಿ ಹರಡಿಕೊಂಡು, ಬಹಳ ಎತ್ತರಕ್ಕೆ ಬೆಳೆದಿರುವುವು. ಉತ್ತಮವಾದ ಇಂದ್ರಲೋಕವನ್ನು ಕೂಡಾ ಬಿಟ್ಟು, ಅಲ್ಲಿಗೆ ಬಂದಿರುವ ದೇವಾಂಗನೆಯರ ಬಹಳ ಕೆಂಪಾಗಿ ಕಮಲದೊಳಗಡೆಯಂತೆ ಸುಕುಮಾರವಾದ ಉಗುರುಗಳ ತುದಿಯುಳ್ಳ ಬೆರಳುಗಳಿಂದ ಹರಡಿದ ಬಹಳ ಕೆಂಪಾದ ಅರಗಿನ ಬಣ್ಣವುಳ್ಳ ಹೆಜ್ಜೆಯ ಗುರುತುಗಳನ್ನು ಪಡೆದ (ಚಂದ್ರಕಾಂತಶಿಲೆಗಳುಳ್ಳ) ಅಲ್ಲಿನ ಲತಾಗೃಹಗಳು ಚಂದ್ರನಂತೆ ಹೊಳೆಯುವುವು. ಅಲ್ಲಿಗೆ ಬಂದ ದುಂಬಿಗಳಿಗೆ ಆಯಾಸವೆಂಬುದೇ ತಿಳಿಯದು.

೧೧. ಆ ಒಳ್ಳೆಯಮನೆಗಳಿಗೆ ಹತ್ತಿರದಲ್ಲಿಯೇ, ಆ ವನದಲ್ಲಿದ್ದು, ಅತಿ ಸಂತೋಷಗೊಂಡು ಗಟ್ಟಿಯಾಗಿ ಕೂಗುತ್ತಿರುವ ಹಲವುಬಗೆಯ ಹಕ್ಕಿಗಳಿಂದಲೂ, ಮದಿಸಿದ ದುಂಬಿಗಳಿಂದಲೂ ಕೂಡಿದ ಬೇರೆ ಬೇರೆ ಪ್ರಮಾಣದ ಮರಗಳೂ ಇದ್ದುವು. ಅವುಗಳ ಕೊಂಬೆಗಳೆಲ್ಲವೂ ಒಳ್ಳೆಯ ಹೂಗಳಿಂದ ಕೂಡಿದವುಗಳಾಗಿ ಪರಸ್ಪರ ಹೊಂದಿಕೆಯುಳ್ಳವಾಗಿದ್ದುವು.

---

* ಜಾತ್ಯಾ   + ವಾಶದ್ಭಿಃ (ಬೊ.) ವಾನದ್ಭಿಃ (ಕ.)

*ರಸಾಲನೀಪಾರ್ಜುನ ತಾಲಕೋಲ
ಭೃತಾ+ವಿಹಂಗೈರ್ಮಧುರಸ್ವರೇಣ ।
ಜುಷ್ಟಾವಿಹಂಗೈಃ ಸುಜನಪ್ರಯೋಗಾ
ನಿರಾಕುಲಾ ಕಾರ್ಯಧೃತಿರ್ಯಥಾಸ್ಥೈಃ ॥ ೧೨ ॥

ಮುಖಾಗ್ನಿಧೂಮ್ರೈರುದಿತಾಗ್ನಿಹೋಮೈಃ
ತತಃ ಸಮಂತಾದ್ಗೃಹಮೇಧಿಭಿರ್ದ್ವಿಜೈಃ ।
ಸಿಂಹೈರಿವಾಧರ್ಮಕರೀ ವಿದಾರಿತಃ
ಸುತೀಕ್ಷ್ಣದಂಷ್ಟ್ರೈರ್ವರಮತ್ತಕೇಸರೈಃ ॥ ೧೩ ॥

ಏವಂ ಸ ರಾಜಾ ವಿವಿಧಾನುಪಾಯಾನ್
ವರಾಶ್ರಮೇ ಪ್ರೇಕ್ಷಮಾಣೋ ವಿವೇಶ ।
ತಸ್ಮಿನ್ ಪ್ರವಿಷ್ಟೇ ತು ಸ ತೀವ್ರತೇಜಾ
ಮಹಾತಪಾಃ ಪುಣ್ಯಕೃತಾಂ ಪ್ರಧಾನಃ ॥ ೧೪ ॥

೧೨-೧೩. ಆ ಪ್ರದೇಶಗಳು ಮಾವು, ಕಡಹ, ಮತ್ತಿ, ಓಲೆ, ಎಲಚಿಮರಗಳಲ್ಲಿ ಗೂಡುಗಳಲ್ಲಿರುವ ಹಕ್ಕಿಗಳ ಇಂಪಾದ ದನಿಯಿಂದ ಕೂಡಿದವು. ಅಲ್ಲಿ ಎಂದಿನಂತೆ ಹರಡುತ್ತಿರುವ ಯಜ್ಞಾಗ್ನಿಯ ಮತ್ತು ಸಾಮಾನ್ಯಾಗ್ನಿಯ ಹೋಮ ಧೂಮಗಳಿಂದ ಸುಜನರು ಆಚರಿಸುವ ಕರ್ಮಾನುಷ್ಠಾನವು ನಿರಾಕುಲವಾದುದೆಂದು ಅರಿಯಬಹುದು. ಆದುದರಿಂದ ಬಹಳ ಹರಿತವಾದ ಕೋರೆಹಲ್ಲುಗಳೂ, ಹರಡಿದ ಕೇಸರವೂ ಉಳ್ಳ ಸಿಂಹಗಳು ಕರಿ(ಆನೆ)ಯನ್ನು ಸೀಳುವಂತೆ ಸುತ್ತಲೂ ಗೃಹಸ್ಥರಾದ ದ್ವಿಜರು ಅಧರ್ಮವೆಂಬ ಕರಿ (ಆನೆ)ಯನ್ನು ಧ್ವಂಸಮಾಡಿದ್ದರು.

೧೪-೧೫. ಆ ಪ್ರಜಾಪಾಲರಾಜನು ಉತ್ತಮವಾದ ಆ ಆಶ್ರಮದಲ್ಲಿ ಬಗೆಬಗೆಯಾದುದನ್ನು ನೋಡುತ್ತಾ ಋಷಿಯ ಸಮೀಪಕ್ಕೆ ಹೋಗಿ ಮಹಾತೇಜಸ್ವಿಯೂ ಬ್ರಹ್ಮಜ್ಞರಲ್ಲಿಯೂ, ಪುಣ್ಯಶಾಲಿಗಳಲ್ಲಿಯೂ ಅಗ್ರಗಣ್ಯನೂ ಆದ ಮಹಾತಪ

---

* ಕದಂಬನೀಪಾರ್ಜುನ ಶೀಲಶಾಲ

+ ಗೃಹಸ್ಥೈಃ

ದೃಷ್ಟ್ವೋ ಯಥಾಭಾನುರನಂತಭಾನುಃ
ಕೌಶಾಸನೇ ಬ್ರಹ್ಮವಿದಾಂ ಪ್ರಧಾನಃ ।
ದೃಷ್ಟ್ವಾ ಸ ರಾಜಾ ವಿಜಯೇ ಮೃಗಾಣಾಂ
ಮತಿಂ ವಿಸಸ್ಮಾರ ಮುನೇಃ ಪ್ರಸಂಗಾತ್ ॥ ೧೫ ॥

ಚಕಾರಧರ್ಮಂಪ್ರತಿಮಾನಸಂ ಸೋ
ಹ್ಯನುತ್ತಮಂ ಚಾಪ್ರತಿಮಂ ಮುನಿಃ ಸಃ ।
ಸಮುನಿಸ್ತಂ ನೃಪಂ ದೃಷ್ಟ್ವಾ ಪ್ರಜಾಪಾಲಮಕಲ್ಮಷಂ ॥
ಅಭ್ಯಾಗತಕ್ರಿಯಾಂ ಚಕ್ರೇ ಆಸನಸ್ವಾಗತಾದಿಭಿಃ ॥ ೧೬ ॥

ತತಃ ಕೃತಾಸನೋ ರಾಜಾ ಪ್ರಣಮ್ಯ ಋಷಿಪುಂಗವಂ ।
ಪಪ್ರಚ್ಛ ವಸುಧೇ ಪ್ರಶ್ನಮಿಮಂ ಪರಮದುರ್ಲಭಂ ॥ ೧೭ ॥

ಭಗವನ್ ದುಃಖಸಂಸಾರಮಗ್ನೈಃ ಪುಂಭಿರ್ಜಿಗೀಷುಭಿಃ ।
ಯತ್ಕಾರ್ಯಂ ತನ್ಮಮಾಚಕ್ಷ್ವ ಪ್ರಣತೇ ಶಂಸಿತವ್ರತ ॥ ೧೮ ॥

ಋಷಿಯನ್ನು ದರ್ಭಾಸನದಲ್ಲಿ ಅನಂತ ಕಿರಣನಾದ ಸೂರ್ಯನಂತೆ ಕಂಡನು. ಕಂಡ ಆ ರಾಜನು ಋಷಿಯ ಪ್ರಸಂಗದಿಂದ ಮೃಗಗಳ ಬೇಟೆಯ ಬುದ್ಧಿಯನ್ನೇ ಮರೆತುಬಿಟ್ಟನು.

೧೬. ಆ ಮುನಿಯು (ರಾಜನಿಗೆ) ಅತ್ಯುತ್ತಮವೂ ಅನುಪಮವೂ ಆದ ಧರ್ಮಬುದ್ಧಿಯನ್ನುಂಟುಮಾಡಿದನು. ಆ ಮುನಿಯು ಕಲ್ಮಷವಿಲ್ಲದ ಪ್ರಜಾಪಾಲ ರಾಜನನ್ನು ಕಂಡು, ಕುಶಲಪ್ರಶ್ನೆಪೀಠಗಳಿಂದ ಅತಿಥಿಸತ್ಕಾರವನ್ನು ಮಾಡಿದನು.

೧೭–೧೮. ಭೂದೇವೀ, ಬಳಿಕ ಋಷಿವರ್ಯನಿಗೆ ಪ್ರಣಾಮಮಾಡಿ, ಪೀಠದಲ್ಲಿ ಕುಳಿತ ರಾಜನು ಶ್ಲಾಘ್ಯವ್ರತಿಯಾದ ಪೂಜ್ಯನೇ, ಸಂಸಾರಮಗ್ನರಾಗಿ ಅದನ್ನು ಜಯಿಸಲಿಚ್ಛಿಸುವವರು ಏನು ಮಾಡಬೇಕೋ, ಅದನ್ನು ಪ್ರಣತನಾದ ನನಗೆ ಹೇಳು. ಎಂದು ಪರಮದುರ್ಲಭವಾದ ಈ ಪ್ರಶ್ನೆಯನ್ನು ಕೇಳಿದನು.

॥ ಮಹಾತಪಾ ಉವಾಚ ॥

ಸಂಸಾರಾರ್ಣವಮಜ್ಜಮಾನಮನುಜೈಃ ಪೋತಃ ಸ್ಥಿರೋಽತಿಧ್ರುವಂ ।
ಕಾರ್ಯಃ ಪೂಜನಹೋಮದಾನವಿಧಿಭಿರ್ಯಜ್ಞೈಃ ಸಮಂಧ್ಯಾನಕೈಃ ॥
ಕೀಲೈಃ ಕೀಲಿತಮೋಕ್ಷಕೈಃ ಸುರಭಟೈರೂರ್ಧ್ವಂ ಮಹಾರಜ್ಜುಭಿಃ
ಪ್ರಾಣಾದ್ಯೈರಧುನಾ ಕುರುಷ್ವ ನೃಪತೇ ಪೋತಂ ತ್ರಿಲೋಕೇಶ್ವರಂ ॥ ೧೯ ॥

ನಾರಾಯಣಂ ನರಕಹರಂ ಸುರೇಶಂ
ಭಕ್ತ್ಯಾ ನಮಸ್ಕುರ್ವತಿ ಯೋ ನೃಪೇಶ ।
ಸ ವೀತಶೋಕಃ ಪರಮಂ ವಿಶೋಕಂ
ಪ್ರಾಪ್ನೋತಿ ವಿಷ್ಣೋಃ ಪದಮವ್ಯಯಂ ಯತ್ ॥ ೨೦ ॥

॥ ನೃಪ ಉವಾಚ ॥

ಭಗವನ್ಸರ್ವಧರ್ಮಜ್ಞ ಕಥಂ ವಿಷ್ಣುಃ ಸನಾತನಃ ।
ಪೂಜ್ಯತೇ ಮೋಕ್ಷಮಿಚ್ಛದ್ಭಿಃ ಪುರುಷೈರ್ವದ ತತ್ತ್ವತಃ ॥ ೨೧ ॥

---

೧೯. ಮಹಾತಪ—ಸಂಸಾರಸಾಗರದಲ್ಲಿ ಮುಳುಗುತ್ತಿರುವ ಮನುಷ್ಯರು ದೃಢವೂ, ಶಾಶ್ವತವೂ ಆದ ಹಡಗನ್ನು ಪಡೆಯಬೇಕು. ದೊರೆಯೇ, ಧ್ಯಾನಗಳಿಂದೊಡಗೂಡಿದ ಪೂಜೆ ಹೋಮ ದಾನ ಯಜ್ಞ ಮೊದಲಾದುವುಗಳಿಂದ ಮೋಕ್ಷವನ್ನು ಸ್ವಾಧೀನಪಡಿಸಿಕೊಂಡಿರುವ ಸುರಭಟರೆಂಬ ಕೀಲುಗಳಿಂದ ಕೂಡಿ, ಮೇಲೆ ಪ್ರಾಣಾಪಾನಾದಿ ಮಹಾರಜ್ಜುಗಳಿಂದ (ಹಗ್ಗಗಳಿಂದ) ಬಂಧಿತವಾದ ತ್ರಿಲೋಕೇಶ್ವರನೆಂಬ ಹಡಗನ್ನು ನೀನು ಈಗ ಪಡೆ.

೨೦. ರಾಜೇಂದ್ರಾ, ನರಕಾಂತಕನೂ, ಸುರೇಶನೂ ಆದ ನಾರಾಯಣನನ್ನು ಭಕ್ತಿಯಿಂದ ನಮಸ್ಕರಿಸುವವರು ದುಃಖವನ್ನು ಕಳೆದುಕೊಂಡು, ಶೋಕವಿಲ್ಲದುದೂ, ನಾಶರಹಿತವೂ ಆದ ವಿಷ್ಣುಪದ (ಮೋಕ್ಷ)ವನ್ನು ಪಡೆಯುವರು.

೨೧. ದೊರೆ—ಸರ್ವಧರ್ಮಜ್ಞನಾದ ಮಹಾತ್ಮನೇ, ಸನಾತನನಾದ ವಿಷ್ಣುವನ್ನು ಮುಕ್ತಿಯನ್ನು ಬಯಸುವವರು ಹೇಗೆ ಪೂಜಿಸಬೇಕೆಂಬುದನ್ನು ಹೇಳು.

|| ಮಹಾತಪಾ ಉವಾಚ ||

ಶೃಣು ರಾಜನ್ ಮಹಾಪ್ರಾಜ್ಞ ಯಥಾ ವಿಷ್ಣುಃ ಪ್ರಸೀದತಿ |
ಪುರುಷಾಣಾಂ ತಥಾ ಸ್ತ್ರೀಣಾಂ ಸರ್ವಯೋಗೀಶ್ವರೋ ಹರಿಃ || ೨೨ ||

ಸರ್ವೇ ದೇವಾಃ ಸಪಿತರೋ ಬ್ರಹ್ಮಾದ್ಯಾಶ್ಚಾಂಡಮಧ್ಯಗಾಃ |
ವಿಷ್ಣೋಃ ಸಕಾಶಾದುತ್ಪನ್ನಾ ಇತೀಯಂ ವೈದಿಕೀ ಶ್ರುತಿಃ || ೨೩ ||

ಅಗ್ನಿಸ್ತಥಾಶ್ವಿನೌ ಗೌರೀಗಜವಕ್ತ್ರಭುಜಂಗಮಾಃ |
ಕಾರ್ತಿಕೇಯಸ್ತಥಾದಿತ್ಯಾ ಮಾತರೋ ದುರ್ಗಯಾಸಹ || ೨೪ ||

ದಿಶೋ ಧನಪತಿರ್ವಿಷ್ಣುಃ ಯಮೋ ರುದ್ರಃ ಶಶೀ ತಥಾ |
ಪಿತರಶ್ಚೇತಿ ಸಂಭೂತಾಃ ಪ್ರಾಧಾನ್ಯೇನ ಜಗತ್ಪತೇಃ || ೨೫ ||

ಹಿರಣ್ಯಗರ್ಭಸ್ಯ ತನೌ ಸರ್ವ ಏವ ಸಮುದ್ಭವಾಃ || ೨೬ ||

---

೨೨. ಮಹಾತಪ—ಮಹಾಪ್ರಾಜ್ಞನಾದ ರಾಜನೇ, ಪುರುಷರಿಗೂ, ಸ್ತ್ರೀಯರಿಗೂ, ಸರ್ವಯೋಗೀಶ್ವರನೂ, ಪಾಪನಾಶಕನೂ ಆದ ವಿಷ್ಣುವು ಹೇಗೆ ಒಲಿಯುವನೆಂಬುದನ್ನು ಕೇಳು.

೨೩. ಪಿತೃಗಳೊಡಗೂಡಿದ ಎಲ್ಲಾ ದೇವತೆಗಳೂ, ಅಂಡಮಧ್ಯದಲ್ಲಿರುವ ಬ್ರಹ್ಮಾದಿಗಳೂ ವಿಷ್ಣುವಿನಿಂದಲೇ ಹುಟ್ಟಿದವರೆಂದು ವೇದಶ್ರುತಿಯಿದೆ.

೨೪–೨೬. ಅಗ್ನಿ, ಅಶ್ವಿನೀದೇವತೆಗಳು, ಗೌರಿ, ಗಣಪತಿ, ನಾಗರು, ಷಣ್ಮುಖ, ಆದಿತ್ಯರು, ದುರ್ಗಿಸಹಿತರಾದ ಸಪ್ತಮಾತೃಗಳು, ದಿಕ್ಕುಗಳು, ಕುಬೇರ, ವಿಷ್ಣು, ಯಮ, ರುದ್ರ, ಚಂದ್ರ, ಪಿತೃಗಳು ಇವರೆಲ್ಲರೂ (ಮುಖ್ಯವಾಗಿ) ಜಗತ್ಪತಿಯಾದ ಹಿರಣ್ಯಗರ್ಭನ ದೇಹದಲ್ಲಿ ಹುಟ್ಟಿದವರು.

ಪೃಥಕ್ ಪೃಥಕ್ ತತೋ ಗರ್ವಂ ವಹಮಾನಾಃ ಸಮಂತತಃ ।
ಅಹಂ ಯೋಗ್ಯಸ್ತ್ವಹಂ ಯಾಜ್ಯ ಇತಿ ತೇಷಾಂ ಸ್ವನೋ ಮಹಾನ್ ।
ಶ್ರೂಯತೇ ದೇವಸಮಿತೌ ಕ್ಷುಬ್ಧಸಾಗರಸನ್ನಿಭಃ ॥ ೨೭ ॥

ತೇಷಾಂ ವಿವದಮಾನಾನಾಂ ವಹ್ನಿರುತ್ಥಾಯ ಪಾರ್ಥಿವ ।
ಉವಾ ಚಮಾಂ ಯಜಸ್ವೇತಿ ಧ್ಯಾಯಧ್ವಂ ಮಾಮಿತಿ ಬ್ರುವನ್ ॥ ೨೮ ॥

ಪ್ರಾಜಾಪತ್ಯಮಿದಂ ನೂನಂ ಶರೀರಂ ಮದ್ವಿನಾ ಕೃತಮ್ ।
ವಿನಾಶಮುಪಪದ್ಯೇತ ಯತೋ ನಾಯಂ ಮಹಾನಹಂ ॥ ೨೯ ॥

ಏವಮುಕ್ತ್ವಾ ಶರೀರಂತು ತ್ಯಕ್ತ್ವಾ ವಹ್ನಿರ್ವಿನಿರ್ಯಯೌ ।
ನಿರ್ಗತೇಽಪಿ ತತಸ್ತಸ್ಮಿಂಸ್ತಚ್ಛರೀರಂ ನ ಶೀರ್ಯತೇ ॥ ೩೦ ॥

ತತೋಽಶ್ವಿನೌ ಮೂರ್ತಿಮಂತೌ ಪ್ರಾಣಾಪಾನಶರೀರಗೌ ।
ಆವಾಂ ಪ್ರಧಾನಾವಿತ್ಯೇವಮೂಚತುರ್ಯಾಜ್ಯಮುತ್ತಮೌ ॥ ೩೧ ॥

---

೨೭. ಹುಟ್ಟಿದ ಅವರು ಬೇರೆಬೇರೆಯಾಗಿ ಗರ್ವವನ್ನು ಪಡೆದರು. 'ನಾನುಯೋಗ್ಯ, ನಾನೇಪೂಜ್ಯ,' ಎಂದು ದೇವತೆಗಳ ಸಭೆಯಲ್ಲಿ ಅಲ್ಲೋಲ ಕಲ್ಲೋಲವಾದ ಸಾಗರದಂತೆ ಎಲ್ಲಾ ಕಡೆಯಿಂದಲೂ ಅವರ ಮಹಾಧ್ವನಿಯು ಕೇಳಿಸಿತು.

೨೮-೨೯. ದೊರೆಯೇ, ವಿವಾದ ಮಾಡುತ್ತಿರುವ ಅವರ ಮಧ್ಯದಿಂದ ಅಗ್ನಿಯು ಎದ್ದುನಿಂತು "ನನ್ನನ್ನು ಪೂಜಿಸಿರಿ. ನನ್ನನ್ನು ಧ್ಯಾನಿಸಿರಿ." ಎಂದು ಹೇಳುತ್ತಾ "ಬ್ರಹ್ಮನ ಈ ದೇಹವು ನಿಜವಾಗಿ ನಾನಿಲ್ಲದೇ ಆಗಿಲ್ಲ. ಮಹಾತ್ಮನಾದ ನಾನಿಲ್ಲದಿದ್ದರೆ ಇದಕ್ಕೆ ವಿನಾಶವುಂಟಾಗುವುದು."

೩೦. ಹೀಗೆಂದು ಹೇಳಿ ಬ್ರಹ್ಮನ ದೇಹವನ್ನು ಬಿಟ್ಟು (ಅಗ್ನಿಯು) ಹೊರಹೊರಟನು. ಅವನು ಹೊರಟು ಹೋದರೂ ಆ ದೇಹವು ಕ್ಷೀಣವಾಗುವುದಿಲ್ಲ.

೩೧. ಬಳಿಕ ಪ್ರಾಣಾಪಾನ ಶರೀರಿಗಳಾಗಿ ಮೂರ್ತಿಭವಿಸಿರುವ ಅಶ್ವಿನೀದೇವತೆಗಳು "ನಾವು ಮುಖ್ಯರು. ಪೂಜೆಗೆ ಉತ್ತಮರು." ಎಂದು ಹೇಳಿದರು.

ಏವಮುಕ್ತ್ವಾ ಶರೀರಂ ತು ವಿಹಾಯ ಕ್ವಚಿದಾಸ್ಥಿತೌ ।
ತಯೋರಪಿ ಕ್ಷಯಂ ಕೃತ್ವಾ ಽಕ್ಷೀಣಂ ತತ್ಪುರಮಾಸ್ಥಿತಂ ॥ ೩೨ ॥

ತತೋ ವಾಗಬ್ರವೀದ್ಗೌರೀ ಪ್ರಾಧಾನ್ಯಂ ಮಯಿ ಸಂಸ್ಥಿತಂ ।
ಸಾಪ್ಯೇವಮುಕ್ತ್ವಾ ಕ್ಷೇತ್ರಾತ್ತು ನಿಶ್ಚಕ್ರಾಮ ಬಹಿಃ ಶುಭಾ ॥ ೩೩ ॥

ತಯಾ ವಿನಾಪಿ ತತ್ಕ್ಷೇತ್ರಂ ವಾಗೂನಂ ವ್ಯವತಿಷ್ಠತ ॥ ೩೪ ॥

ತತೋ ಗಣಪತಿರ್ವಾಕ್ಯಮಾಕಾಶಾಖ್ಯೋಽಬ್ರವೀತ್ತದಾ ।
ನ ಮಯಾ ರಹಿತಂ ಕಿಂಚಿಚ್ಛರೀರಂ ಸ್ಥಾಯಿ ದೂರತಃ ॥
ಕಾಲಾಂತರೇತ್ಯೇವಮುಕ್ತ್ವಾ ಸೋಽಪಿ ನಿಷ್ಕ್ರಮ್ಯ ದೇಹತಃ ॥ ೩೫ ॥

ಪೃಥಗ್ಭೂತಸ್ತಥಾಪ್ಯೇತಚ್ಛರೀರಂ ನಾಪ್ಯನೀನಶತ್ ।
ವಿನಾಶಾಖ್ಯಂಚ ತತ್ತೇನ ತಥಾಪಿ ನ ವಿಶೀರ್ಯತೇ ॥ ೩೬ ॥

---

೩೨. ಹೀಗೆ ಹೇಳಿ, ದೇಹವನ್ನು ಬಿಟ್ಟು ಒಂದು ಕಡೆಯಲ್ಲಿದ್ದರು. ಅವರು ಹೊರಟು ಹೋದರೂ ಕ್ಷೀಣವಾಗದೆ ಆ ದೇಹವು ಇದ್ದೇ ಇದ್ದಿತು.

೩೩–೩೪. ಬಳಿಕ ಬ್ರಹ್ಮನ ವಾಕ್ಕಾದ ಗೌರಿಯು "ಮುಖ್ಯತೆಯು ನನ್ನಲ್ಲಿದೆ" ಎಂದು ಹೇಳಿ ಶುಭೆಯಾದ ತಾನೂ ಆ (ಬ್ರಹ್ಮ) ದೇಹದಿಂದ ಹೊರಟಳು. ಅವಳಿಲ್ಲದಿದ್ದರೂ ಮೂಕಾದ ಆ ದೇಹವು ಇದ್ದೇ ಇದ್ದಿತು.

೩೫–೩೬. ಬಳಿಕ ಆಕಾಶವೆಂಬ ಹೆಸರಿನ ಗಣಪತಿಯು "ನಾನಿಲ್ಲದ ಮೇಲೆ ಯಾವ ದೇಹವೂ ಹಿಂದೆ ಇರಲಿಲ್ಲ. ಮುಂದೆಯೂ ಇರಲಾರದು." ಎಂದು ನುಡಿದು, ತಾನೂ ದೇಹದಿಂದ ಹೊರಟು ಬೇರೆಯಾದನು. ಆದರೂ ಆ ದೇಹವು ನಾಶವಾಗಲೇ ಇಲ್ಲ. ಆಕಾಶಕ್ಕೆ ವಿನಾಶವೆಂಬ ಹೆಸರುಂಟು. ಆದರೂ ಅದರಿಂದ ಬ್ರಹ್ಮದೇಹವು ನಾಶವಾಗಲಿಲ್ಲ.

ಸುಷಿರೈಸ್ತು ವಿಹೀನಂ ತು ದೃಷ್ಟ್ವಾ ಕ್ಷೇತ್ರಂ ವ್ಯವಸ್ಥಿತಂ |
ಶರೀರ*ಧಾತವಃ ಸರ್ವೇ ತೇ ಬ್ರೂಯುರ್ವಾಕ್ಯಮೇವ ಹಿ ॥ ೩೭ ॥

ಅಸ್ಮಾಭಿರ್ವ್ಯತಿರಿಕ್ತಸ್ಯ ನ ಶರೀರಸ್ಯ ಧಾರಣಂ |
ಭವತೀತ್ಯೇವಮುಕ್ತ್ವಾ ತೇ ಜಹುಃ ಸರ್ವೇ ಶರೀರಿಣಃ ॥ ೩೮ ॥

ತೈರ್ವ್ಯಪೇತಮಪಿ ಕ್ಷೇತ್ರಂ +ಪುರುಷೇಣ ಪ್ರಪಾಲ್ಯತೇ |
ತಂ ದೃಷ್ಟ್ವಾ ತ್ವಬ್ರವೀತ್ ಸ್ಕಂದಃ ಸೋಹಂಕಾರಃ ಪ್ರಕೀರ್ತಿತಃ ॥ ೩೯ ॥

ಮಯಾ ವಿನಾ ಶರೀರಸ್ಯ ಸಂಭೂತಿರಪಿ ನೇಷ್ಯತೇ |
ಏವಮುಕ್ತ್ವಾ ಶರೀರಾತ್ತು ಸ ವ್ಯಪೇತಃ ಪೃಥಕ್ ಸ್ಥಿತಃ ॥ ೪೦ ॥

ತೇನಾಕ್ಷತೇನ ತತ್ ಕ್ಷೇತ್ರಂ ವಿನಾ ಮುಕ್ತವದಾಸ್ಥಿತಂ |
ತಂ ದೃಷ್ಟ್ವಾ ಕುಪಿತೋ ಭಾನುಃ ಸ ಆದಿತ್ಯಃ ಪ್ರಕೀರ್ತಿತಃ ॥ ೪೧ ॥

೩೭–೩೮. ರಂಧ್ರ(ಆಕಾಶ)ಗಳಿಲ್ಲದೆಯೇ ಇದ್ದುಕೊಂಡಿರುವ ಬ್ರಹ್ಮ ದೇಹವನ್ನು ನೋಡಿ, ಶರೀರ *ಧಾತುಗಳೆಲ್ಲವೂ "ನಾವು ಇಲ್ಲದ ಬಳಿಕ ದೇಹಧಾರಣೆಯಾಗುವುದೇ ಇಲ್ಲ" ಎಂದು ಹೇಳಿ ತಾವೆಲ್ಲವೂ ಬಿಟ್ಟು ಹೋದುವು.

೩೯–೪೦. ಅವು ಬಿಟ್ಟು ಹೋದರೂ +ಪುರುಷನು ದೇಹವನ್ನು ಪಾಲಿಸಿಕೊಂಡನು. ಅದನ್ನು ನೋಡಿ ಅಹಂಕಾರವೆಂದೆನಿಸಿಕೊಳ್ಳುವ ಸ್ಕಂದನು "ನಾನಿಲ್ಲದೆ ಶರೀರೋತ್ಪತ್ತಿಯು ಕೂಡ ಆಗುವುದಿಲ್ಲ. ಎಂದು ಹೇಳಿ," ಶರೀರದಿಂದ ಹೊರಟು ಬೇರೆಯಾಗಿದ್ದನು.

೪೧–೪೨. ಅಕ್ಷತನಾದ ಅವನು ಬಿಟ್ಟುಹೋದ ಆ(ಬ್ರಹ್ಮ)ದೇಹವು ಮುಕ್ತವಾದುದರಂತಿದ್ದಿತು. ಅದನ್ನು ನೋಡಿ ಸಿಟ್ಟುಗೊಂಡ ಆದಿತ್ಯನೆಂಬ

---

* ಧಾತು=ವಸಾಸೃಗ್ಮಾಂಸಮೇದೋಸ್ಥಿಮಜ್ಜಾಶುಕ್ಲಗಳು, ಪೃಥಿವ್ಯಪ್ತೇಜೋವಾಯ್ವಾಕಾಶಗಳೆಂಬ ಭೂತಗಳು, ಇಂದ್ರಿಯಗಳು, ಶ್ಲೇಷ್ಮವಾತಪಿತ್ತಗಳು.

\+ ಪುರುಷ=ಪರಬ್ರಹ್ಮವು ಅವ್ಯಕ್ತ, ಪುರುಷ, ವ್ಯಕ್ತ, ಕಾಲ ಎಂಬ ನಾಲ್ಕು ಪ್ರಕಾರವಾಗಿ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾಗಿರುವುದು.

ಮಯಾ ವಿನಾ ಕಥಂ ಕ್ಷೇತ್ರಮಿಮಂ ಕ್ಷಣಮಪೀಕ್ಷ್ಯತೇ ।
ಏವಮುಕ್ತ್ವಾಥ ಯಾತಃ ಸ ತಚ್ಛರೀರಂ ನ ಶೀರ್ಯತೇ ॥ ೪೨ ॥

ತತಃ ಕಾಮಾದಿರುತ್ಥಾಯ ಗಣೋ ಮಾತೃವಿಸಂಜ್ಞಿತಃ ।
ನ ಮಯಾ ವ್ಯತಿರಿಕ್ತಸ್ಯ ಶರೀರಸ್ಯ ವ್ಯವಸ್ಥಿತಿಃ ॥
ಏವಮುಕ್ತ್ವಾ ಸ ಯಾತಸ್ತು ಶರೀರಂ ತನ್ನ ಶೀರ್ಯತೇ ॥ ೪೩ ॥

ತತೋ ಮಾಯಾಬ್ರವೀತ್ಕೋಪಾತ್ಸಾ ಚ ದುರ್ಗಾಪ್ರಕೀರ್ತಿತಾ ।
ನ ಮಯಾಸ್ಯ ವಿನಾ *ಭೂತಿರಿತ್ಯುಕ್ತ್ವಾಂತರ್ದಧೇ ಪುನಃ ॥ ೪೪ ॥

ತತೋ ದಿಶಃ ಸಮುತ್ತಸ್ಥುರೂಚುಶ್ಚೇದಂ ವಚೋಮಹತ್ ॥ ೪೫ ॥

ನಾಸ್ಮಾಭೀ ರಹಿತಂ ಕಾರ್ಯಂ ಭವತೀತಿ ನ ಸಂಶಯಃ ।
ಚತಸ್ರ ಆಗತಾಃ ಕಾಷ್ಠಾಸ್ತಾಃ ಪ್ರಯಾತಾಃ ಕ್ಷಣಾತ್ತದಾ ॥ ೪೬ ॥

ಹೆಸರಿನ ಭಾನುವು "ನಾನಿಲ್ಲದೆ ಈ ದೇಹವು ಒಂದು ಕ್ಷಣಕಾಲ ತಾನೇ ಹೇಗಿದ್ದೀತು !" ಎಂದು ಹೇಳಿ ಹೊರಟನು. ಬ್ರಹ್ಮದೇಹವು ಕುಂದಲಿಲ್ಲ.

೪೩. ಬಳಿಕ ಮಾತೃಗಣವೆಂಬ ಹೆಸರಿನ ಕಾಮಾದಿಗಣವು ಎದ್ದು "ನನ್ನಿಂದ ಬೇರೆಯಾದ ಶರೀರಕ್ಕೆ ಇರವಿಲ್ಲ" ಎಂದು ಹೇಳಿ, ಬಿಟ್ಟು ಹೋದರೂ ಆ ದೇಹವು ಕುಂದುವುದೇ ಇಲ್ಲ.

೪೪. ಬಳಿಕ ದುರ್ಗಿಯೆಂದು ಹೆಸರುಗೊಂಡ ಮಾಯೆಯು ಸಿಟ್ಟಿನಿಂದ "ನನ್ನಿಂದ ಹೊರತಾಗಿ ಇದಕ್ಕೆ *ಭೂತಿಯಿಲ್ಲ" ಎಂದು ಹೇಳಿ ಕಣ್ಮರೆಯಾದಳು.

೪೫-೪೬. ಆಮೇಲೆ ದಿಕ್ಕುಗಳು ಎದ್ದು ಈ ದೊಡ್ಡಮಾತನ್ನಾಡಿದುವು. "ನಮ್ಮಿಂದಲ್ಲದೆ ಯಾವ ಕಾರ್ಯವೂ ಆಗುವುದಿಲ್ಲವೆಂಬುದರಲ್ಲಿ ಸಂದೇಹವಿಲ್ಲ" ಎಂದು ಬಂದ ನಾಲ್ಕುದಿಕ್ಕುಗಳೂ ಆಗ ತಟ್ಟನೆ ಹೊರಟು ಹೋದುವು.

---

* ಭೂತಿ=ಇರುವಿಕೆ, ಐಶ್ವರ್ಯ.

ತತೋ ಧನಪತಿರ್ವಾಯುರ್ಮಧ್ಯತಸ್ತ್ಯಕ್ತ್ವಸಂಭವಃ ।
ಶರೀರಸ್ಯೇತಿಸೋಽಪ್ಯೇವಮುಕ್ತ್ವಾ ಮೂರ್ಧನಿ ಸೋಽಭವತ್ ॥ ೪೭ ॥

ತತೋ ವಿಷ್ಣೋರ್ಮನೋ ಬ್ರೂಯಾನ್ನಾಯಂ ದೇಹೋ ಮಯಾವಿನಾ ।
ಕ್ಷಣಮುಪ್ಯುತ್ಸಹೇತ್‌ಸ್ಥಾತುಮಿತ್ಯುಕ್ತ್ವಾಂತರ್ದಧೇ ಪುನಃ ॥ ೪೮ ॥

ತತೋ ಧರ್ಮೋಽಬ್ರವೀತ್ಸರ್ವಮಿದಂ ಪಾಲಿತವಾನಹಂ ।
ಇದಾನೀಮ್ಮಯ್ಯಪಗತೇ ಕಥಮೇತದ್ಭವಿಷ್ಯತಿ ॥
ಏವಮುಕ್ತ್ವಾ ಗತೋ ಧರ್ಮಸ್ತಚ್ಛರೀರಂ ನ ಶೀರ್ಯತೇ ॥ ೪೯ ॥

ತತೋಽಬ್ರವೀನ್ಮಹಾದೇವಃ ಅವ್ಯಕ್ತೋ ಭೂತಭಾವನಃ ॥ ೫೦ ॥

ಮಹಾಸಂಜ್ಞೋ ಮಯಾಹೀನಂ ಶರೀರಂ ನೋಽಭವೇದ್ಯಥಾ ।
ಏವಮುಕ್ತ್ವಾ ಗತಃ ಶಂಭುಸ್ತಚ್ಛರೀರಂ ನ ಶೀರ್ಯತೇ ॥ ೫೧ ॥

---

೪೭. ಅನಂತರ ಧನಪತಿಯಾದ ವಾಯುವೂ ಹಾಗೆಯೇ ಹೇಳಿ ಶರೀರ ಮಧ್ಯವನ್ನು ಬಿಟ್ಟು ತಲೆಯಲ್ಲಿ ನಿಂತನು.

೪೮. ಆಮೇಲೆ ವಿಷ್ಣುವಿನ ಮನವು "ಈ ದೇಹವು ನಾನಿಲ್ಲದೇ ಕ್ಷಣಕಾಲವೂ ಇರಲು ಉತ್ಸಾಹಗೊಳ್ಳುವುದಿಲ್ಲ." ಎಂದು ಹೇಳಿ ಮಾಯವಾಯಿತು.

೪೯. ಬಳಿಕ ಧರ್ಮವು "ಇದೆಲ್ಲವನ್ನೂ ನಾನು ಪಾಲಿಸುತ್ತಿದ್ದೇನೆ. ಈಗ ನಾನು ಹೊರಟು ಹೋದರೆ ಇದು ಹೇಗಾಗುವುದು ?" ಎಂದು ನುಡಿದು ಹೊರಟೇ ಹೋಯಿತು. ಆ ಶರೀರವು ಕುಂದುವುದೇ ಇಲ್ಲ.

೫೦-೫೧ ಇದಾದಮೇಲೆ ಅವ್ಯಕ್ತ, ಭೂತಭಾವನ, ಮಹತ್ ಎಂಬ ಹೆಸರುಳ್ಳ ಮಹಾದೇವನು "ನಾನಿಲ್ಲದೆ ನಮ್ಮ ದೇಹವು ಹೇಗಾದೀತು ಅಥವಾ ಇದ್ದೀತು ?" ಎಂದು ಹೇಳಿ ಶಂಭುವಾದ ತಾನು ಹೊರಟನು. ಆ (ಬ್ರಹ್ಮ) ದೇಹವು ನಶಿಸುವುದಿಲ್ಲ.

ತದ್ದೃಷ್ಟ್ವಾ ಪಿತರಶ್ಚೋಚುಸ್ತನ್ಮಾತ್ರಂ ಯಾವದಸ್ಮಭಿಃ ।
ಪ್ರಾಣಾಂತರೇಭಿರೇತಚ್ಚ ಶರೀರಂ ಶೀರ್ಯತೇ ಧ್ರುವಂ ॥
ಏವಮುಕ್ತ್ವಾ ತು ತದ್ದೇಹಂ ತ್ಯಕ್ತ್ವಾಂತರ್ಧಾನಮಾಗತಾಃ ॥ ೫೨ ॥

ಅಗ್ನಿಃ ಪ್ರಾಣ ಅಪಾನಶ್ಚ ಆಕಾಶಂಚೈವ ಧಾತವಃ ॥ ೫೩ ॥

ಕ್ಷೇತ್ರಂ ತದ್ವದಹಂಕಾರೋ ಭಾನುಃ ಕಾಮಾದಯೋ ಮಯಾ ।
ಕಾಷ್ಠಾ ವಾಯುರ್ವಿಷ್ಣುಧರ್ಮೌ ಶಂಭುಶ್ಚೈವೇಂದ್ರಿಯಾರ್ಥಕಾಃ ॥ ೫೪ ॥

ಏತೈರ್ಮುಕ್ತಂತು ತತ್ ಕ್ಷೇತ್ರಂ ಮುಕ್ತಾವಿವ ತು ಸಂಸ್ಥಿತಂ ।
ಸೋಮೇನ ಪಾಲ್ಯಮಾನಂ ತು ಪುರುಷೇಣೇಂದುರೂಪಿಣಾ ॥ ೫೫ ॥

ಏವಂ ವ್ಯವಸ್ಥಿತೇ ಸೋಮೇ ಷೋಡಶಾತ್ಮನ್ಯಥಾಕ್ಷರೇ ।
ಪ್ರಾಗ್ವತ್ತತ್ರ ಗುಣೋಪೇತಂ ಕ್ಷೇತ್ರಮುತ್ಥಾಯ ಬಭ್ರಮ ॥ ೫೬ ॥

---

೫೨. ಅದನ್ನು ಕಂಡು, ಪಿತೃಗಳೂ "ನಾವು ವ್ಯವಹಿತಪ್ರಾಣರಾದರೆ ಪಂಚತನ್ಮಾತ್ರೆಯ ಈ ದೇಹವು ನಿಜವಾಗಿಯೂ ನಶಿಸಿ ಹೋಗುವುದು." ಎಂದು ಹೇಳಿ ಆ (ಬ್ರಹ್ಮ) ದೇಹವನ್ನು ಬಿಟ್ಟು ಅಂತರ್ಧಾನರಾದರು.

೫೩–೫೫. ಅಗ್ನಿ, ಪ್ರಾಣಾಪಾನಗಳು, ಆಕಾಶ, ಧಾತುಗಳು, ಅಹಂಕಾರ, ಭಾನು, ಕಾಮಾದಿಗಳು, ಮಾಯೆ, ದಿಕ್ಕುಗಳು, ವಾಯು, ವಿಷ್ಣುಧರ್ಮಗಳು, ಶಂಭು, ಇಂದ್ರಿಯಗಳು ಇವುಗಳೆಲ್ಲವೂ ಬಿಟ್ಟುಹೋದರೂ ಆ ಬ್ರಹ್ಮದೇಹವು ಚಂದ್ರರೂಪಿಯಾದ ಸೋಮನೆಂಬ ಪುರುಷನಿಂದ ಪಾಲಿತವಾಗಿ ಮುಕ್ತಿಯಲ್ಲಿರುವಂತೆ ಇದ್ದಿತು.

೫೬. ಷೋಡಶಕಲಾತ್ಮಕನೂ, ನಾಶರಹಿತನೂ ಆದ ಸೋಮನು ಹೀಗೆ ಇದ್ದುಕೊಂಡಿರಲು ಹಿಂದಿನಂತೆ ಗುಣಯುತವಾದ ದೇಹವು ಎದ್ದು ತಿರುಗಾಡಿತು.

ಪ್ರಾಗವಸ್ಥಂ ಶರೀರಂ ತು ದೃಷ್ಟ್ವಾ ಸರ್ವಜ್ಞಪಾಲಿತಂ ।
ತಾಃ ಕ್ಷೇತ್ರದೇವತಾಃ ಸರ್ವಾ ವೈಲಕ್ಷಂ ಭಾವಮಾಸ್ಥಿತಾಃ ॥ ೫೭ ॥

ತಮೇವಂ ತುಷ್ಟುವುಃ ಸರ್ವಾಸ್ತಂ ದೇವಂ ಪರಮೇಶ್ವರಂ ।
ಸ್ವಸ್ಥಾನಂ ವಿವಿಶುಃ ಸರ್ವಾಸ್ತದಾ ನೃಪತಿಸತ್ತಮ ॥ ೫೮ ॥

ತ್ವಮಗ್ನಿಸ್ತ್ವಂ ತಥಾ ಪ್ರಾಣಸ್ತ್ವಮಪಾನಃ ಸರಸ್ವತೀ ।
ತ್ವಮಾಕಾಶಂಧನಾಧ್ಯಕ್ಷಸ್ತ್ವಂ ಶರೀರಸ್ಯ ಧಾತವಃ ॥ ೫೯ ॥

ಅಹಂಕಾರೋ ಭವಾನ್‌ದೇವ ತ್ವಮಾದಿತ್ಯೋಽಷ್ಟಕೋ ಗಣಃ ।
ತ್ವಂ ಮಾಯಾ ಪೃಥಿವೀ ದುರ್ಗಾ ತ್ವಂ ದಿಶಸ್ತ್ವಂ ಮರುತ್ಪತಿಃ ॥ ೬೦ ॥

ತ್ವಂ ವಿಷ್ಣುಸ್ತ್ವಂ ತಥಾ ಧರ್ಮಸ್ತ್ವಂ ಜಿಷ್ಣುಸ್ತ್ವಂ ಪರಾಜಿತಃ ।
ಅಕ್ಷರಾರ್ಥಸ್ವರೂಪೇಣ ಪರಮೇಶ್ವರಸಂಜ್ಞಿತಃ ॥ ೬೧ ॥

---

೫೭ ಸರ್ವಜ್ಞಪಾಲಿತವಾಗಿ ಹಿಂದಿನ ಸ್ಥಿತಿಯಲ್ಲಿಯೇ ಇರುವ ಆ ದೇಹವನ್ನು ನೋಡಿ, ಅಗ್ನಿ ಮೊದಲಾದ ಕ್ಷೇತ್ರ (ದೇಹ) ದೇವತೆಗಳೆಲ್ಲರೂ ವಿಸ್ಮಿತರಾದರು.

೫೮. ನೃಪೋತ್ತಮನೇ, ಆಗ ಸರ್ವದೇವತೆಗಳೂ ದೇವನಾದ ಆ ಪರಮೇಶ್ವರನನ್ನು ಮುಂದೆ ಇರುವಂತೆ ಸ್ತೋತ್ರಮಾಡಿ ಎಲ್ಲರೂ ತಮ್ಮ ಸ್ಥಾನವನ್ನು ಹೊಕ್ಕರು.

೫೯. "ದೇವ, ನೀನೇ ಅಗ್ನಿ, ನೀನೇ ಪ್ರಾಣಾಪಾನಗಳು. ಸರಸ್ವತಿಯೂ ನೀನೇ. ಆಕಾಶವೂ, ಕುಬೇರನೂ, ಶರೀರದಧಾತುಗಳೂ ನೀನೇ.

೬೦. ಅಹಂಕಾರವೂ, ಆದಿತ್ಯನೂ, ಅಷ್ಟಮೂರ್ತಿಯೂ, ನೀನೇ. ಮಾಯೆಯೂ, ಪೃಥಿವಿಯೂ, ದುರ್ಗೆಯೂ, ದಿಕ್ಕುಗಳೂ, ಮರುತ್ಪತಿಯೂ ನೀನೇ.

೬೧. ವಿಷ್ಣುವೂ, ಧರ್ಮವೂ, ದೇವೇಂದ್ರನೂ ಪರರಿಂದ ಅಜಿತನೂ, ನೀನೇ. ಅಕ್ಷರಾರ್ಥಸ್ವರೂಪದಿಂದ ಪರಮೇಶ್ವರನೆಂದೆನಿಸಿಕೊಳ್ಳುವವನೂ ನೀನೇ.

ಅಸ್ಮಾಭಿರಪಯಾತೈಸ್ತು ಕಥಮೇತದ್ಭವಿಷ್ಯತಿ ।
ಏವಮತ್ರ ಶರೀರಂತು ತ್ಯಕ್ತಮಸ್ಮಾಭಿರೇವ ಚ ॥
ನ ಪರಂ ಭವತೋ ದೇವ ತದತ್ರ ತ್ವಂಚ ಪಾಲಯೋಃ ॥ ೬೨ ॥

ಸ್ಥಾನಭಂಗೋ ನ ನಃ ಕಾರ್ಯಃ ಸ್ವಯಂ ಸೃಷ್ಟ್ವಾ ಪ್ರಜಾಪತೇ ।
ಏವಂ ಸ್ತುತಸ್ತತೋ ದೇವಸ್ತೇಷಾಂ ತೋಷಂ ಪರಂ ಯಯೌ ॥ ೬೩ ॥

ಉವಾಚ ಚೈತಾನ್ ಕ್ರೀಡಾರ್ಥಂ ಭವಂತೋತ್ಪಾದಿತಾ ಮಯಾ ।
ಕೃತಕೃತ್ಯಸ್ಯ *ನೈಕಂ ತು ಭವದ್ಭಿರ್ಮೇ ಪ್ರಯೋಜನಂ ॥ ೬೪ ॥

ತಥಾ ಚೇದಪ್ರಿಯಂ ರೂಪೇ ದ್ವೇ ದ್ವೇ ಪ್ರತ್ಯೇಕಶೋಧುನಾ ।
ಭೂತಕಾರ್ಯೇಷ್ವಮೂರ್ತೇನ ದೇವಲೋಕೇಷು ಮೂರ್ತಿನಾ ॥ ೬೫ ॥

---

೬೨. ‘ನಾವು ಹೊರಟುಹೋದರೆ ಇದು ಹೇಗೆಇರುವುದು? ನೋಡೋಣ’ ಎಂದು ನಾವು ಈ ಶರೀರವನ್ನು ಬಿಟ್ಟೆವು. ದೇವ, ನಿನಗಿಂತ ಅಧಿಕವಾದುದೂ, ಬೇರೆಯಾದುದೂ ಇಲ್ಲ. ಆದುದರಿಂದ ಇಲ್ಲಿ ನೀನೇ ಪಾಲಿಸಬೇಕು.

೬೩. ಪ್ರಜೆಗಳೊಡೆಯನೇ, ನೀನೇ ಸೃಷ್ಟಿಸಿ ನಮಗೆ ಸ್ಥಾನಭಂಗವನ್ನು ಮಾಡಬಾರದು.” ಹೀಗೆ ಸ್ತುತನಾದ ಬಳಿಕ ದೇವನು ಅವರ ವಿಚಾರದಲ್ಲಿ ಹೆಚ್ಚಾಗಿ ಸಂತೋಷಪಟ್ಟನು.

೬೪. ಅಲ್ಲದೆ ಅವರನ್ನು ಕುರಿತು ಹೇಳಿದನು. “ದೇವತೆಗಳೇ, ಆಟಕ್ಕಾಗಿ ನಿಮ್ಮನ್ನು ನಾನು ಸೃಷ್ಟಿಸಿದೆನು. ಕೃತಕೃತ್ಯನಾದ ನನಗೆ ನಿಮ್ಮಿಂದ ಯಾವ ಪ್ರಯೋಜನವೂ ಇಲ್ಲ.

೬೫-೬೬. ಹಾಗೆ ನಿಮಗೆ ರೂಪದಲ್ಲಿ ಪ್ರೀತಿಯಿಲ್ಲದಿದ್ದರೆ ಈಗ ಭೂತ ಕಾರ್ಯಗಳಲ್ಲಿ ಅಮೂರ್ತಿಗಳೂ (ನಿರಾಕಾರರೂ), ದೇವಲೋಕದಲ್ಲಿ ಮೂರ್ತಿಗಳೂ (ಸಾಕಾರರೂ) ಆಗಿ ಹೀಗೆ ಪ್ರತ್ಯೇಕವಾಗಿ ಎರಡೆರಡು ರೂಪಗಳಿಂದ ಇರಿ.

---

* ಚೈಕಂ

ಶಿಷ್ಯೈರ್ಧ್ವಮಪಿ ಕಾಲಾಂತೇ ಲಯಂ ತ್ವಾವಿಶತ ದ್ರುತಂ ।
ಶರೀರಾಣಿ ಪುನರ್ನೈವ ಕರ್ತವ್ಯೋಽಹಮಿತಿ ಕ್ವಚಿತ್ ॥ ೬೬ ॥

ಮೂರ್ತಿನಾಂಚ ತಥಾ ತುಭ್ಯಂ ದ್ವೇದ್ವೇ ನಾಮಾನಿ ವೋಽಧುನಾ ।
***ಅಗ್ನಿರ್ವೈಶ್ವಾನರೋ ನಾಮ ಪ್ರಾಣಾಪಾನೌ ತಥಾಶ್ವಿನೌ** ॥ ೬೭ ॥

ಭವಿಷ್ಯತಿ ತಥಾ ಗೌರೀ ಹಿಮಶೈಲಸುತಾ ತಥಾ ।
ಪೃಥಿವ್ಯಾದಿಗುಣಸ್ತ್ವೇಷ ಗಜವಕ್ತ್ರೋ ಭವಿಷ್ಯತಿ ॥ ೬೮ ॥

ಶರೀರಧಾತವಶ್ಚೇಮೇ ನಾನಾಭೂತಾನಿ ಚೈವ ತು ॥
ಅಹಂಕಾರಸ್ತಥಾಸ್ಕಂದಃ ಕಾರ್ತಿಕೇಯೋ ಭವಿಷ್ಯತಿ ॥ ೬೯ ॥

ಕಾಲಾಂತದಲ್ಲಿ ನಿಮಗೆ ಬೇಗನೆ ಲಯವುಂಟಾಗುವುದು. ಶರೀರಗಳೇ, 'ನಾನು' ಎಂದು ಎಲ್ಲೂ ಎಂದೂ ಅಭಿಪ್ರಾಯವನ್ನು ಮಾಡಬಾರದು.

೬೭. ಸಾಕಾರರೂ ಆದ ನಿಮಗೆ ಈಗ ಎರಡೆರಡು ಹೆಸರುಗಳುಂಟಾಗುವುವು. *ಅಗ್ನಿಯು ವೈಶ್ವಾನರನೆಂದೂ, ಪ್ರಾಣಾಪಾನಗಳು ಅಶ್ವಿನೀದೇವತೆಗಳೆಂದೂ ಎನಿಸುವರು.

೬೮. ಗೌರಿಯು ಹಿಮವತ್ಪುತ್ರಿಯೆನಿಸುವಳು. ಈ ಪೃಥಿವ್ಯಾದಿಗುಣವು ಗಣಪತಿಯಾಗುವುದು.

೬೯. ಈ ಶರೀರಧಾತುಗಳು ನಾನಾ ಭೂತ(ಪ್ರಾಣಿ)ಗಳಾಗುವುವು. ಅಹಂಕಾರವು ಸ್ಕಂದ ಮತ್ತು ಕಾರ್ತಿಕೇಯನೆನಿಸುವನು.

---

* ಅಗ್ನಿನಾಮಾನಿ (ಬೊಂ.ಕ.)

ಶರೀರಮಾಯಯಾ ದುರ್ಗೈಷಾ ಕಾರಣಾಂತೇ ಭವಿಷ್ಯತಿ ।
ದಶ ಕನ್ಯಾ ಭವಿಷ್ಯಂತಿ ಕಾಷ್ಠಾಸ್ತ್ವೇತಾಸ್ತು ವಾರುಣಾಃ ॥ ೭೦ ॥

ಅಯಂ ವಾಯುರ್ಧನೇಶಸ್ತು ಕಾರಣಾಂತೇ ಭವಿಷ್ಯತಿ ।
ಅಯಂ ಮನೋ ವಿಷ್ಣುನಾಮಾ ಭವಿಷ್ಯತಿ ನ ಸಂಶಯಃ ॥ ೭೧ ॥

ಧರ್ಮೋಽಪಿ ಯಮನಾಮಾ ಚ ಭವಿಷ್ಯತಿ ನ ಸಂಶಯಃ ।
ಮಹತ್ತತ್ತ್ವಂ ಚ ಭಗವಾನ್ಮಹಾದೇವೋ ಭವಿಷ್ಯತಿ ॥ ೭೨ ॥

ಇಂದ್ರಿಯಾರ್ಥಾಶ್ಚ ಪಿತರೋ ಭವಿಷ್ಯಂತಿ ನ ಸಂಶಯಃ ।
ಅಯಂ ಸೋಮಃ ಪುರಾ ಭೂತ್ವಾ ಜಾಮಿತ್ರಂ ಸರ್ವದಾಽಮರಾಃ ॥ ೭೩ ॥

ಏವಂ ವೇದಾಂತಪುರುಷಃ ಪ್ರೋಕ್ತೋ ನಾರಾಯಣಾತ್ಮಕಃ ।
ಸ್ವಸ್ಥಾನೇ ದೇವತಾಃ ಸರ್ವಾ ದೇವಸ್ತು ವಿರರಾಮ ಹ ॥ ೭೪ ॥

---

೭೦. ಈ ಶರೀರಮಾಯೆಯು ಕಾರಣಾಂತದಲ್ಲಿ ದುರ್ಗಿಯಾಗುವಳು. ಈ ದಿಕ್ಕುಗಳು ವರುಣನ ಹತ್ತುಜನ ಕನ್ನೆಯರಾಗುವರು.

೭೧. ಈ ವಾಯುವು ಕಾರಣಾಂತದಲ್ಲಿ ಕುಬೇರನಾಗುವನು. ಮನಸ್ಸು ವಿಷ್ಣುವೆಂಬ ಹೆಸರುಳ್ಳವನಾಗುವುದರಲ್ಲಿ ಸಂದೇಹವಿಲ್ಲ.

೭೨. ಧರ್ಮವು ಸಂದೇಹವಿಲ್ಲದೆ ಯಮನೆಂಬ ಹೆಸರುಳ್ಳದಾಗುವುದು. ಮಹತ್ತತ್ತ್ವವು ಭಗವಂತನಾದ ಈಶ್ವರನಾಗುವುದು.

೭೩. ಇಂದ್ರಿಯ ವಿಷಯಗಳು ನಿಜವಾಗಿ ಪಿತೃಗಳಾಗುವುವು. ಈ ಚಂದ್ರನು ಮುಂದುಗಡೆ ಯಾವಾಗಲೂ ಜಾಮಿತ್ರನಾಗಿರುವನು."

೭೪. ಹೀಗೆ ನಾರಾಯಣಸ್ವರೂಪನಾದ ವೇದಾಂತ ಪುರುಷನು ಹೇಳಿ ನಿಲ್ಲಿಸಿದನು. ದೇವತೆಗಳೆಲ್ಲರೂ ತಮ್ಮೆಡೆಯಲ್ಲಿ ನಿಂತರು.

ಏವಂ ಪ್ರಭಾವೋ ದೇವೋಽಸೌ ವೇದವೇದ್ಯೋ ಜನಾರ್ದನಃ ।
ಕಥಿತೋ ನೃಪತೇ ತುಭ್ಯಂ ಕಿಮನ್ಯ ಚ್ಛ್ರೋತುಮಿಚ್ಛಸಿ ॥ ೭೫ ॥

ಇತಿ ಶ್ರೀವರಾಹಪುರಾಣೇ ಆದಿಕೃತವೃತ್ತಾಂತೇ ಮಹಾತಪ ಉಪಾಖ್ಯಾನೇ ಸಪ್ತದಶೋಽಧ್ಯಾಯಃ

---

೭೫. ವೇದವೇದ್ಯನೂ, ಜನಾರ್ದನನೂ ಆದ ಆ ದೇವನು ಇಂತಹ ಪ್ರಭಾವವುಳ್ಳವನು. ಇದನ್ನು ನಿನಗೆ ಹೇಳಿದ್ದೇನೆ. ಬೇರಾವುದನ್ನು ಕೇಳಲಿಚ್ಛಿಸುವೆ ?

ಅಧ್ಯಾಯದ ಸಾರಾಂಶ:—

ಕೃತಯುಗದಲ್ಲಿ ದುರ್ಜಯನೊಡನೆ ಯುದ್ಧಕ್ಕಾಗಿ ಮಣಿಯಿಂದ ಜನಿಸಿದ್ದ ಸುಪ್ರಭನೆಂಬ ವೀರನು ತ್ರೇತಾಯುಗದಲ್ಲಿ ಪ್ರಜಾಪಾಲನೆಂಬ ರಾಜನಾಗಿ ಹುಟ್ಟಿದನು. ಆತನು ಬೇಟೆಗಾಗಿ ವನಕ್ಕೆ ಹೋಗಿ ಮಹಾತಪನೆಂಬ ಋಷಿಯ ಆಶ್ರಮವನ್ನು ಪ್ರವೇಶಿಸಿದನು. ಆಶ್ರಮದ ಸೌಂದರ್ಯವನ್ನೂ ಋಷಿಯ ತೇಜಸ್ಸನ್ನೂ ನೋಡಿ, ವಿಸ್ಮಿತನಾಗಿ ಬೇಟೆಯನ್ನು ಮರೆತು ಋಷಿಯ ಸನ್ನಿಧಿಯಲ್ಲಿಯೇ ನಿಂತು ಮೋಕ್ಷಸಂಬಂಧವಾದ ಪ್ರಶ್ನೆಗಳನ್ನು ಕೇಳಿದನು. ಮಹಾತಪಮುನಿಯು ಸಂಸಾರಸಾಗರವನ್ನು ದಾಟಿ ಮುಕ್ತಿಯನ್ನು ಪಡೆಯಲು ತ್ರಿಲೋಕೇಶನಾದ ಪರಮಾತ್ಮನೆಂಬ ಹಡಗನ್ನೇ ಆಶ್ರಯಿಸಬೇಕೆಂದೂ, ಸಮಸ್ತ ದೇವತೆಗಳೂ, ಸಮಸ್ತಪ್ರಪಂಚವೂ, ಆ ಪರಮಾತ್ಮನಿಂದಲೇ ಉದಿಸಿತೆಂದೂ, ಅಗ್ನ್ಯಾದಿದೇವತೆಗಳು ಗರ್ವಿತರಾಗಿ ತಾವು ತಾವೇ ಪೂಜ್ಯರೆಂದು ವಾದಿಸಿ ಬ್ರಹ್ಮದೇವನನ್ನು ಬಿಟ್ಟು ಹೊರಟುಹೋದರೂ ಬ್ರಹ್ಮನು ಹಿಂದಿನಂತೆಯೇ ಇದ್ದುದನ್ನು ನೋಡಿ ಎಲ್ಲರೂ ವಿಸ್ಮಿತರಾಗಿ ಸ್ತುತಿಸಿ ಅವನನ್ನೇ ಮರೆಹೊಕ್ಕರು. ದೇವನು ಆ ದೇವತೆಗಳಿಗೆ ಭೂಲೋಕದಲ್ಲಿ ಅಮೂರ್ತರಾಗಿಯೂ, ದೇವಲೋಕದಲ್ಲಿ ಮೂರ್ತಿಮಂತರಾಗಿಯೂ ಇರುವಂತೆ ವರವನ್ನು ದಯಪಾಲಿಸಿದನು ಎಂಬುದನ್ನು ವಿವರವಾಗಿ ಹೇಳುವನು. ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಹದಿನೇಳನೆಯ ಅಧ್ಯಾಯ.

॥ ಶ್ರೀಃ ॥

-x-

ಅಷ್ಟಾದಶೋಽಧ್ಯಾಯಃ

ಅಥಾಗ್ನ್ಯುತ್ಪತ್ತಿವರ್ಣನಂ

॥ ಪ್ರಜಾಪಾಲ ಉವಾಚ ॥

ಕಥಮಗ್ನೇಃ ಸಮುತ್ಪತ್ತಿರಶ್ವಿನೋರ್ವಾ ಮಹಾಮುನೇ ।
ಗೌರ್ಯಾ ಗಣಪತೇರ್ವಾಪಿ ನಾಗಾನಾಂ ವಾ ಗುಹಸ್ಯ ಚ ॥ ೧ ॥

ಆದಿತ್ಯಚಂದ್ರಮಾತೄಣಾಂ ದುರ್ಗಾಯಾ ವಾ ದಿಶಾಂ ತಥಾ ।
ಧನದಸ್ಯ ಚ ವಿಷ್ಣೋರ್ವಾ ಧರ್ಮಸ್ಯ ಪರಮೇಷ್ಠಿನಃ ॥ ೨ ॥

ಶಂಭೋರ್ವಾಪಿ ಪಿತೄಣಾಂ ಚ ತಥಾ ಚಂದ್ರಮಸೋ ಮುನೇ ।
ಶರೀರದೇವತಾಃ ಸರ್ವಾಃ ಕಥಂ ಮೂರ್ತಿತ್ವಮಾಗತಾಃ ॥ ೩ ॥

ಹದಿನೆಂಟನೆಯ ಅಧ್ಯಾಯ

ಅಗ್ನಿಯ ಉತ್ಪತ್ತಿ

೧-೪. ಪ್ರಜಾಪಾಲ—ಮಹಾಮುನಿಯೇ, ಅಗ್ನಿ, ಅಶ್ವಿನೀಸುತರು, ಗೌರಿ, ಗಣಪತಿ, ನಾಗರು, ಷಣ್ಮುಖ, ಸೂರ್ಯ, ಚಂದ್ರ, ಸಪ್ತಮಾತೃಗಳು, ದುರ್ಗೆ, ದಿಕ್ಕುಗಳು, ಕುಬೇರ, ವಿಷ್ಣು, ಧರ್ಮ, ಬ್ರಹ್ಮ, ಶಂಭು, ಪಿತೃಗಳು, ಇವರೆಲ್ಲರ ಉತ್ಪತ್ತಿಯು ಹೇಗೆ? ಶರೀರದೇವತೆಗಳೆಲ್ಲರೂ ಹೇಗೆ ರೂಪವನ್ನು

ಕಿಂಚ ತಾಸಾಂ ಮುನೇ ಭೋಜ್ಯಂ ಕಾವಾಸಂಜ್ಞಾತಿಥಿಶ್ಚ ಕಾ |
ಯಸ್ಯಾಂ ದೃಷ್ಟ್ವಾ ತ್ವಮೀ ಪುಂಸಾಂ ಫಲಂ ಯಚ್ಛಂತ್ಯನಾಮಯಂ ||
ಏತನ್ಮೇ ಸರಹಸ್ಯಂ ತು ಮುನೇ ತ್ವಂ ವಕ್ತುಮರ್ಹಸಿ || ೪ ||

|| ಮಹಾತಪಾ ಉವಾಚ ||

ಯೋಗಸಾಧ್ಯಸ್ವರೂಪೇಣ ಆತ್ಮಾ ನಾರಾಯಣಾತ್ಮಕಃ |
ಸರ್ವಜ್ಞಃ ಕ್ರೀಡತಸ್ತಸ್ಯ ಭೋಗೇಚ್ಛಾ ಚಾತ್ಮನಾತ್ಮನಿ || ೫ ||

ಕ್ಷೋಭಿತೇಽಸ್ಮಿನ್ಮಹಾಭೂತೇ ಏತತ್ಸದ್ವೈ ತದದ್ಭುತಂ |
ತಮದ್ಯ ಪ್ರೀತಿಮತ್ತ್ವೋಽಯಂ ವಿಕಾರಂ ಸಮರೋಚಯತ್ || ೬ ||

ವಿಕುರ್ವತಸ್ತಸ್ಯ ತದಾ ಮಹಾನಗ್ನಿಃ ಸಮುತ್ಥಿತಃ || ೭ ||

ಕೋಟಿಜ್ವಾಲಾಪರೀವಾರಃ ಶಬ್ದವಾನ್ದಹನಾತ್ಮಕಃ |
ಅಸಾವಪ್ಯತಿತೇಜಸ್ವೀ ವಿಕಾರಂ ಸಮರೋಚಯತ್ || ೮ ||

ಪಡೆದರು ? ಅವರ ಆಹಾರವಾವುದು ? ಹೆಸರೇನು ? ತಿಥಿಯಾವುದು ? ಯಾವ ತಿಥಿಯಲ್ಲಿ (ಪೂಜಿಸಿದರೆ ಅಥವಾ) ಸಂದರ್ಶಿಸಿದರೆ ಅವರು ಮನುಷ್ಯರಿಗೆ ಆರೋಗ್ಯಫಲಗಳನ್ನು ಕೊಡುವರು ? ರಹಸ್ಯವಾಗಿರುವ ಇದನ್ನು ನೀನೇ ನನಗೆ ಹೇಳಬೇಕು.

೫. ಮಹಾತಪ—ಒಂದಾನೊಂದು ಕಾಲದಲ್ಲಿ ಸರ್ವಜ್ಞನೂ, ಪರಮಾತ್ಮನೂ ಆದ ನಾರಾಯಣನು ಯೋಗಸಾಧ್ಯಸ್ವರೂಪದಿಂದ ಕ್ರೀಡಿಸುತ್ತಿರುವಾಗ ತನ್ನಷ್ಟಕ್ಕೆ ತಾನೇ ಅವನಿಗೆ ಭೋಗೇಚ್ಛೆಯಾಯಿತು.

೬. ಯೋಗಸಾಧ್ಯವಾದ ರೂಪವು ಕಾರ್ಯೋನ್ಮುಖವಾಗಿ ಚಲಿಸಲು ಮೂಲಪ್ರಕೃತಿರೂಪವಾದ, ಅತ್ಯಾಶ್ಚರ್ಯಕರವಾದ ಈ ಮುಂದೆ ಹೇಳುವ ವಸ್ತುವುಂಟಾಯಿತು. ಪ್ರೀತಿಯುಳ್ಳ ನಾರಾಯಣನು ಆ ಸದ್ರೂಪವಾದ ಮೂಲಪ್ರಕೃತಿಯನ್ನು ವಿಕಾರವುಳ್ಳುದನ್ನಾಗಿ ಸಂಕಲ್ಪಿಸಿದನು.

೭-೮. ವಿಕಾರವನ್ನು ಪಡೆದ ಅವನಿಂದ ಮಹಾಗ್ನಿಯುದಿಸಿತು. ಕೋಟಿಜ್ವಾಲೆಗಳಿಂದ ಕೂಡಿ ಶಬ್ದಮಾಡುವುದೂ, ಸುಡುವ ಸ್ವಭಾವವುಳ್ಳುದೂ, ಅತಿತೇಜಸ್ಸುಳ್ಳುದೂ ಆದ ಆ ಅಗ್ನಿಗೂ ವಿಕಾರೇಚ್ಛೆಯುಂಟಾಯಿತು.

ವಿಕುರ್ವತೋ ಬಭೌ ವಹ್ನೇರ್ವಾಯುಃ ಪರಮದಾರುಣಃ ।
*ತಸ್ಮಾದಪಿ ವಿಕಾರಸ್ಥಾದಾಕಾಶಂ ಸಮಪದ್ಯತ ॥ ೯ ॥

ತಚ್ಛಬ್ದಲಕ್ಷಣಂ ವ್ಯೋಮ ಸಚ ವಾಯುಃ ಪ್ರತಾಪವಾನ್ ।
ತಚ್ಚ ತೇಜೋಂಭಸಾ ಯುಕ್ತಂ ಶ್ಲಿಷ್ಟಮನ್ಯೋನ್ಯತಸ್ತಥಾ ॥ ೧೦ ॥

ತೇಜಸಾ ಶೋಷಿತಂ ತೋಯಂ ವಾಯುನಾ ಉಗ್ರಗಾಮಿನಾ ॥
ಬೋಧಿತೇನ ತಥಾ ವ್ಯೋಮ ಮಾರ್ಗೇ ದತ್ತೇ ತು ತತ್‌ಕ್ಷಣಾತ್ ॥ ೧೧ ॥

ಪಿಂಡೀಭೂತಂ ತಥಾ ಸರ್ವಂ ಕಾಠಿನ್ಯಂ ಸಮಪದ್ಯತ ।
ಸೇಯಂ ಪೃಥ್ವೀ ಮಹಾಭಾಗ ತೇಷಾಂ ವೃಕ್ಷೇ ತದಾಭವತ್ ॥ ೧೨ ॥

ಚತುರ್ಣಾಂ ಯೋಗಕಾಠಿನ್ಯಾದೇಕೈಕಗುಣವೃದ್ಧಿತಃ ।
ಪೃಥ್ವೀ ಪಂಚಗುಣಾ ಜ್ಞೇಯಾ ತೇಷ್ವೇತಸ್ಯಾಂ ವ್ಯವಸ್ಥಿತಾಃ ॥ ೧೩ ॥

---

೯. ವಿಕಾರವನ್ನು ಪಡೆದ *ಅಗ್ನಿಯಿಂದ ಅತಿದಾರುಣವಾದ ವಾಯು ಪ್ರಕಾಶಕ್ಕೆ ಬಂದಿತು. ವಿಕೃತವಾದ ಆ ವಾಯುವಿನಿಂದ ಆಕಾಶವುಂಟಾಯಿತು.

೧೦. ಆಕಾಶವು ಶಬ್ದಲಕ್ಷಣ (ಗುಣ)ವುಳ್ಳದು. ವಾಯುವು ಅತಿಶಕ್ತಿ ಪ್ರತಾಪವುಳ್ಳದು. ಆ ತೇಜಸ್ಸು ನೀರಿನಿಂದಲೂ ಕೂಡಿದುದಾಯಿತು.

೧೧-೧೨. ಅವೆರಡೂ ಪರಸ್ಪರ ಮಿಳಿತವಾಗಲು ಉಗ್ರವಾಗಿ ಚಲಿಸುವ ವಾಯುವಿನಿಂದ ಪ್ರೇರಿತವಾದ ತೇಜಸ್ಸಿನಿಂದ ಇಂಗಿದ ನೀರೆಲ್ಲ ಆಕಾಶದಲ್ಲಿ ಒಡನೆಯೇ ಉಂಡೆಯಾಗಿ ಹಾಗೆಯೇ ಕಾಠಿನ್ಯವನ್ನು ಪಡೆಯಿತು. ಮಹಾಭಾಗ್ಯಶಾಲಿಯೇ, ಅದೇ ಈ ಪೃಥ್ವಿಯಾಗಿದೆ.

೧೩. ಚತುರ್ಭೂತಗಳ ಸಂಬಂಧದ ಕಠಿನತೆಯಿಂದಲೂ, ಒಂದೊಂದು ಗುಣದ ಹೆಚ್ಚಿಕೆಯಿಂದಲೂ ಪೃಥ್ವಿಯು ಪಂಚಗುಣವುಳ್ಳದೆಂದು ತಿಳಿಯಬೇಕು. ಆ ಚತುರ್ಭೂತಗಳೂ ಪೃಥ್ವಿಯಲ್ಲಿವೆ.

---

* ಇಲ್ಲಿ ಹೇಳಿರುವ ಕ್ರಮವು 'ಆಕಾಶಾದ್ವಾಯುಃ ವಾಯೋರಗ್ನಿಃ' ಇತ್ಯಾದಿ ಶ್ರುತಿಗೆ ವಿರೋಧವಾಗಿದೆ.

ಸ ಚ ಕಾಠಿನ್ಯಕಂ ಕುರ್ವನ್ ಬ್ರಹ್ಮಾಂಡಂ ಸಮಪದ್ಯತ ।
ತಸ್ಮಿನ್ನಾರಾಯಣೋ ದೇವಶ್ಚತುರ್ಮೂರ್ತಿಶ್ಚತುರ್ಭುಜಃ ॥ ೧೪ ॥

ಪ್ರಾಜಾಪತ್ಯೇನ ರೂಪೇಣ ಸಿಸೃಕ್ಷುರ್ವಿವಿಧಾಃ ಪ್ರಜಾಃ ॥ ೧೫ ॥

ಚಿಂತಯನ್ನಾಧಿಗಚ್ಛೇತ್ತು ಸೃಷ್ಟಿಂ ಲೋಕಪಿತಾಮಹಃ ।
ತತೋಽಸ್ಯ ಸುಮಹಾನ್ಕೋಪೋ ಜಜ್ಞೇ ಪರಮದಾರುಣಃ ॥
ತಸ್ಮಾತ್ಕೋಪಾತ್ಸಹಸ್ರಾರ್ಚಿರುತ್ತಸ್ಥೌ ದಹನಾತ್ಮಕಃ ॥ ೧೬ ॥

ಸ ತಂ ದಿಧಕ್ಷುರ್ಬ್ರಹ್ಮಾಣಂ ಬ್ರಹ್ಮಣೋಕ್ತಸ್ತದಾ ನೃಪ ।
***ಹವ್ಯಂ +ಕವ್ಯಂ ವಹಸ್ವೇತಿ ತತೋಽಸೌ ಹವ್ಯವಾಹನಃ ॥ ೧೭ ॥**

ಬ್ರಹ್ಮಾಣಂ ÷ಕ್ಷುಧಿತಃ ಪ್ರಾಯಾತ್ಕಿಂ ಕರೋಮಿ ಪ್ರಶಾಧಿಮಾಂ ॥ ೧೮ ॥

೧೪–೧೫. ಅದು ಕಠಿನವಾಗುತ್ತಾ ಬ್ರಹ್ಮಾಂಡವಾಯಿತು. ಆ ಬ್ರಹ್ಮಾಂಡದಲ್ಲಿ ನಾರಾಯಣದೇವನು ಬಗೆ ಬಗೆಯಾದ ಪ್ರಜೆಗಳನ್ನು ಸೃಷ್ಟಿಸುವ ಇಚ್ಛೆಯಿಂದ ನಾಲ್ಕು ಮುಖಗಳೂ, ನಾಲ್ಕು ತೋಳುಗಳೂ ಉಳ್ಳ ಬ್ರಹ್ಮರೂಪದಿಂದ ನಿಂತನು.

೧೬. ಲೋಕಪಿತಾಮಹನಾದ (ಅಜ್ಜನಾದ) ಆತನು ಸೃಷ್ಟಿಯನ್ನು ಯೋಚಿಸುತ್ತಿದ್ದರೂ ಅದು ಒಡನೆಯೇ ಆಗದಿರಲು ಆತನಿಗೆ ಅತಿ ಭಯಂಕರವಾದ ಮಹಾಕೋಪವುಂಟಾಯಿತು. ಆ ಕೋಪದಿಂದ ಸುಡುವ ಸ್ವಭಾವವುಳ್ಳ ಅಗ್ನಿಯು ಎದ್ದುನಿಂತನು. ಎಂದರೆ ಆ ಕೋಪವೇ ಅಗ್ನಿಯಾಯಿತು.

೧೭–೧೮. ದೊರೆಯೇ, ಆ ಅಗ್ನಿಯು ಆ ಬ್ರಹ್ಮನನ್ನೇ ಸುಡಬಯಸಲು ಆಗ ಬ್ರಹ್ಮನು "*ಹವ್ಯ +ಕವ್ಯಗಳನ್ನು ವಹಿಸು" ಎಂದು ಹೇಳಿದನು. ಬಳಿಕ ಆ ಹವ್ಯವಾಹನನು (ಅಗ್ನಿ) ÷ಹಸಿದವನಾಗಿ ಬ್ರಹ್ಮನಹತ್ತಿರ ಹೋಗಿ, "ನಾನೇನು ಮಾಡಲಿ? ಆಜ್ಞಾಪಿಸು" ಎಂದನು.

---

* ಹವ್ಯ=ದೇವಯೋಗ್ಯವಾದ ಅನ್ನ. + ಕವ್ಯ=ಪಿತೃಯೋಗ್ಯವಾದ ಅನ್ನ.

÷ ಕ್ಷುಧಿತಂ.

ಸ ಬ್ರಹ್ಮ ಪ್ರತ್ಯುವಾಚೈನಂ ತ್ರಿಧಾ ತೃಪ್ತಿಮವಾಪ್ಸ್ಯಸಿ ।
ದತ್ತಾಸು ದಕ್ಷಿಣಾಸ್ವಾದೌ ತೃಪ್ತಿರ್ಭೂತ್ವಾ ಯತೋಽಮರಾನ್ ।
ನಯಸೇ ದಕ್ಷಿಣಾಭಾಗಂ ದಕ್ಷಿಣಾಗ್ನಿಸ್ತತೋಽಭವತ್ ॥ ೧೯ ॥

ಆಸಮಂತಾದ್ಧುತಂ ಕಿಂಚಿದ್ಯತ್ತ್ರಿಲೋಕೇ ವಿಭಾವಸೋ ।
ತದ್ವಹಸ್ವ ಸುರಾರ್ಥಾಯ ತತಸ್ತ್ವಂ ಹವ್ಯವಾಹನಃ ॥ ೨೦ ॥

ಗೃಹಂ ಶರೀರಮಿತ್ಯುಕ್ತಂ ತತ್ಪತಿಸ್ತ್ವಂ ಯತೋಽಧುನಾ ।
ಅತೋ ವೈ ಗಾರ್ಹಪತ್ಯಸ್ತ್ವಂ ಭವ ಸರ್ವಗತೋ ವಿಭೋ ॥ ೨೧ ॥

ವಿಶ್ವಾನ್ನರಾನ್ಹುತೋ ಯೇನ ನಯಸೇ ಸದ್ಗತಿಂ ಪ್ರಭೋ ।
ಅತೋ ವೈಶ್ವಾನರೋ ನಾಮ ತವ ಸತ್ಯಂ ಭವಿಷ್ಯತಿ ॥ ೨೨ ॥

---

೧೯. ಬ್ರಹ್ಮನು ಅವನಿಗೆ ಹೇಳಿದನು. "ಕಾಂತಿಧನನೇ, ನೀನು ಮೂರುಬಗೆಯಲ್ಲಿ ತೃಪ್ತಿಯನ್ನು ಪಡೆಯುತ್ತೀಯೆ. ಯಜ್ಞಾದಿಗಳಲ್ಲಿ ಮೊದಲು ನಿನಗೆ ಕೊಡುವ ದಕ್ಷಿಣೆ(ದಾನ)ಗಳಿಂದ ತೃಪ್ತನಾಗಿ ಬಳಿಕ ದೇವತೆಗಳ ದಕ್ಷಿಣೆಯ(ದಾನದ)ಭಾಗವನ್ನು ಅವರಿಗೆ ಒಯ್ಯುವುದರಿಂದ ನೀನು ದಕ್ಷಿಣಾಗ್ನಿಯೆನಿಸುವೆ.

೨೦. "ಮೂರುಲೋಕಗಳಲ್ಲಿ ಎಲ್ಲಾ ಕಡೆಯಿಂದಲೂ ಹೋಮಮಾಡುವ ಯಾವುದೊಂದನ್ನೂ ದೇವತೆಗಳಿಗಾಗಿ ವಹಿಸು. ಅದರಿಂದ ನೀನು ಹವ್ಯವಾಹನನೆನಿಸಿಕೊಳ್ಳುವೆ.

೨೧. "ವಿಭುವೇ, ಶರೀರವು ಗೃಹವೆಂದೆನಿಸುವುದು. ಈಗ ನೀನು ಆ ಗೃಹಕ್ಕೆ ಪತಿಯಾಗಿರುತ್ತೀಯೆ. ಆದುದರಿಂದ ಸರ್ವಗತನಾದ ನೀನು ಗಾರ್ಹಪತ್ಯನೆಂಬ ಹೆಸರುಳ್ಳವನಾಗು.

೨೨. "ಪ್ರಭುವೇ, ಹೋಮವನ್ನು ಪಡೆದನೀನು ವಿಶ್ವ (ಸಮಸ್ತ) ನರರನ್ನೂ ಸದ್ಗತಿಗೊಯ್ಯುವೆಯಾದುದರಿಂದ 'ವೈಶ್ವಾನರ' ನೆಂಬ ಹೆಸರು ನಿನಗೆ ನಿಜ (ಸತ್ಯ) ವಾದುದಾಗುವುದು.

ದ್ರವಿಣಂ ಬಲಮಿತ್ಯುಕ್ತಂ ಧನಂ ಚ ದ್ರವಿಣಂ ತತಃ ।
ದದಾತಿ ತದ್ಭವಾನೇವ ದ್ರವಿಣೋದಾಸ್ತತೋಽಭವತ್ ॥ ೨೩ ॥

ಪಾಪಸ್ತಿರೋಭವೇನ್ನಿತ್ಯಂ ನಿಃಶಬ್ದೋ ನಿಶ್ಚಯಾತ್ಮಕಃ ।
ಅತಸ್ತ್ವಂ *ಸರ್ವಗತ್ವಾಚ್ಚ ತೇಜೋಽಗ್ನಿಸ್ತೇ ಭವಿಷ್ಯತಿ ॥ ೨೪ ॥

ಧ್ಮಾಪ್ರಪೂರಣಶಬ್ದೋ ಯ ಇಧ್ಮಾನಾಮಪಿ ಕೀರ್ತ್ಯತೇ ।
ಪೂರಿತಸ್ಯ ಗತಿರ್ಯೇನ ತೇನೇಧ್ಮಸ್ತ್ವಂ ಭವಿಷ್ಯಸಿ ॥ ೨೫ ॥

---

೨೩. "ಬಲಕ್ಕೂ (ಶಕ್ತಿಗೂ), ಧನಕ್ಕೂ ದ್ರವಿಣವೆಂದು ಹೆಸರು. ಆ ದ್ರವಿಣವನ್ನು ನೀನೇ ಕೊಡುತ್ತೀಯೆ. ಆದುದರಿಂದ ನೀನು ದ್ರವಿಣೋದನಾದೆ.

೨೪. "ನಿನ್ನಿಂದ ಪಾಪವು ಶಬ್ದಮಾಡದೇ ಯಾವಾಗಲೂ ಮಾಯವಾಗುವುದು. ನೀನು ಸತ್ಯಾತ್ಮನು. ಆದುದರಿಂದಲೂ, ನಿನ್ನ ತೇಜಸ್ಸು(ಉರಿ)ಎಲ್ಲಾ ಕಡೆಗೂ ಹರಡುವುದರಿಂದಲೂ, ನೀನು ಸರ್ವವ್ಯಾಪಿಯಾಗಿರುವುದರಿಂದಲೂ, ನಿನಗೆ ಅಗ್ನಿಯೆಂದು ಹೆಸರು.

೨೫. "ಪ್ರಪೂರಣಾರ್ಥಕವಾದ 'ಧ್ಮಾ' ಶಬ್ದವು ಇಧ್ಮ (ಸಮಿತ್ತು) ಗಳನ್ನು ಹೇಳುತ್ತದೆ. ಇಧ್ಮಪೂರ್ಣನಾಗಿ ದೀಪ್ತನಾಗು(ಗಮಿಸು)ವುದರಿಂದ ನೀನು ಇಧ್ಮನೆನಿಸಿಕೊಳ್ಳುವೆ.

---

* ಸರ್ವಗತ್ವಾ ಚ [ಬೊಂ. ಕ.]

ಯಾಜ್ಯಾನ್ಯೇತಾನಿ ನಾಮಾನಿ ತವ ಪುತ್ರ ಮಹಾಸಖೇ |
ಯಜಂತಸ್ತ್ವಾಂ ನರಾಃ ಕಾಮ್ಯೈಸ್ತರ್ಪಯಿಷ್ಯಂತ್ಯಸಂಶಯಂ || ೨೬ ||

ಇತಿ ಶ್ರೀ ವರಾಹಪುರಾಣೇ ಆದಿಕೃತವೃತ್ತಾಂತೇ ಮಹಾತಪಉಪಾಖ್ಯಾನೇ ಅಗ್ನ್ಯುತ್ಪತ್ತಿರ್ನಾಮಾಷ್ಟಾದಶೋಧ್ಯಾಯಃ

---

೨೬. "ಪುತ್ರನೇ, ಮಹಾಯಜ್ಞಗಳಲ್ಲಿ ಈನಿನ್ನ ಹೆಸರುಗಳು ಪೂಜ್ಯವಾದುವು. ಮನುಷ್ಯರು ನಿಜವಾಗಿಯೂ ನಿನ್ನನ್ನು ಇಷ್ಟಗಳಿಂದ ಪೂಜಿಸುತ್ತಾ ತೃಪ್ತಿಪಡಿಸುವರು."

ಅಧ್ಯಾಯದ ಸಾರಾಂಶ:—

ಮಹಾತಪಮುನಿಯು ಪ್ರಜಾಪಾಲರಾಜನಿಗೆ "ನಾರಾಯಣನಿಗೆ ಭೋಗೇಚ್ಛೆಯುಂಟಾಗಲು ಮೂಲಪ್ರಕೃತಿಯೂ, ಅದರ ವಿಕಾರವನ್ನು ಅವನುಸಂಕಲ್ಪಿಸಲು ಮಹಾಗ್ನಿಯೂ, ಅದರ ವಿಕಾರದಿಂದ ವಾಯುವೂ, ವಾಯುವಿನಿಂದ ಆಕಾಶವೂ, ತೇಜಸ್ಸೂ, ಜಲವೂ ಮಿಳಿತವಾಗಲು, ಇಂಗಿದ ನೀರು ಉಂಡೆಯಾಗಲು ಭೂಮಿಯೂ ಉದಿಸಿತು. ಅದರಲ್ಲಿ ಪ್ರಜೆಗಳನ್ನು ಸೃಷ್ಟಿಸುವ ಇಚ್ಛೆಯಿಂದ ನಾರಾಯಣನು ಚತುರ್ಮುಖಬ್ರಹ್ಮನಾಗಿ ನಿಂತನು. ಯೋಚಿಸಿದೊಡನೆ ಸೃಷ್ಟಿಯಾಗದಿರಲು ಆತನಿಗೆ ಮಹಾಕೋಪವುಂಟಾಯಿತು. ಅದೇ ಅಗ್ನಿ. ಆ ಅಗ್ನಿಗೆ ಬ್ರಹ್ಮನು ಹವ್ಯಕವ್ಯಗಳನ್ನು ವಹಿಸುವ ವರವನ್ನೂ, ದಕ್ಷಿಣಾಗ್ನಿ ಎಂಬುದೇ ಮೊದಲಾದ ಹೆಸರುಗಳನ್ನೂ ಕೊಟ್ಟನು." ಎಂದು ಅಗ್ನಿಯ ವಿಚಾರವನ್ನು ತಿಳಿಸುವನು. ಇಲ್ಲಿಗೆ ಶ್ರೀ ವರಾಹ ಪುರಾಣದಲ್ಲಿ ಹದಿನೆಂಟನೆಯ ಅಧ್ಯಾಯ

|| ಶ್ರೀಃ ||

-X-

ಏಕೋನವಿಂಶೋಽಧ್ಯಾಯಃ

ಅಥಾಗ್ನಿಪ್ರಾಶಸ್ತ್ಯಮ್

|| ಮಹಾತಪಾ ಉವಾಚ ||

ವಿಷ್ಣೋರ್ವಿಭೂತಿಮಾಹಾತ್ಮ್ಯಂ ಕಥಿತಂ ತೇ ಪ್ರಸಂಗತಃ |
ತಿಥೀನಾಂ ಶೃಣು ಮಾಹಾತ್ಮ್ಯಂ ಕಥ್ಯಮಾನಂ ಮಯಾ ನೃಪ || ೧ ||

ಇತ್ಥಂಭೂತೋ ಮಹಾನಗ್ನಿರ್ಬ್ರಹ್ಮಕ್ರೋಧಸಮುದ್ಭವಃ |
ಉವಾಚದೇವಂ ಬ್ರಹ್ಮಾಣಂ ತಿಥಿರ್ಮೇ ದೀಯತಾಂ ವಿಭೋ ||
ಯಸ್ಯಾಮಹಂ ಸಮಸ್ತಸ್ಯ ಜಗತಃ ಖ್ಯಾತಿಮಾಪ್ನುಯಾಂ || ೨ ||

ಹತ್ತೊಂಭತ್ತನೆಯ ಅಧ್ಯಾಯ

ಅಗ್ನಿಪ್ರಾಶಸ್ತ್ಯ

೧. ಮಹಾತಪಋಷಿ—ಪ್ರಜಾಪಾಲಕನೇ, ಮಾತಿನ ಸಂದರ್ಭದಿಂದ ನಿನಗೆ ವಿಷ್ಣುವಿನ ಅಣಿಮಾದ್ಯೈಶ್ವರ್ಯಮಹಿಮೆಯನ್ನು ಹೇಳಿದುದಾಯಿತು. ತಿಥಿಗಳ(ಮಹಾತ್ಮ್ಯ) ಮಹಿಮೆಯನ್ನು ಹೇಳುವೆನು. ಕೇಳು.

೨. ಬ್ರಹ್ಮನ ಕೋಪದಿಂದುದಿಸಿ, ಅವನಿಂದ ಹಿಂದೆ ಹೇಳಿದಂತೆ ಆಜ್ಞಪ್ತನಾದ ಅಗ್ನಿಯು ದೇವನಾದ ಬ್ರಹ್ಮನನ್ನು "ವಿಭುವೇ, ಯಾವುದರಲ್ಲಿ (ಪೂಜಿತನಾಗಿ) ನಾನು ಸಮಸ್ತ ಜಗತ್ತಿನಲ್ಲಿಯೂ, ಪ್ರಸಿದ್ಧಿಯನ್ನು ಪಡೆಯಬಹುದೋ ಅಂತಹ ತಿಥಿಯೊಂದನ್ನು ನನಗೆ ನಿಷ್ಕರ್ಷಿಸಿಕೊಡು" ಎಂದು ಬೇಡಿದನು.

|| ಬ್ರಹ್ಮೋವಾಚ ||

ದೇವಾನಾಮಥ ಯಕ್ಷಾಣಾಂ ಗಂಧರ್ವಾಣಾಂಚ ಸತ್ತಮ ।
ಆದೌಪ್ರತಿಪದಾ* ಯೇನ ತ್ವಮುತ್ಪನ್ನೋಽಸಿ ಪಾವಕ || ೩ ||

ತ್ವತ್ಪದಾತ್ಪ್ರಾತಿಪದಿಕಂ ಸಂಭವಿಷ್ಯಂತಿ ದೇವತಾಃ ।
ಅತಸ್ತೇ ಪ್ರತಿಪನ್ನಾಮ ತಿಥಿರೇಷಾ ಭವಿಷ್ಯತಿ || ೪ ||

ತಸ್ಯಾಂ ತಿಥೌ ಹವಿಷ್ಯೇಣ ಪ್ರಾಜಾಪತ್ಯೇನ ಮೂರ್ತಿನಾ ।
ಹೋಷ್ಯಂತಿ ತೇಷಾಂ ಪ್ರೀತಾಃ ಸ್ಯುಃ ಪಿತರಃ ಸರ್ವದೇವತಾಃ || ೫ ||

ಚತುರ್ವಿಧಾನಿ +ಭೂತಾನಿ ಮನುಷ್ಯಾಃ ಪಶವೋಽಸುರಾಃ ।
ದೇವಾಃ ಸರ್ವೇ ಸಗಂಧರ್ವಾಃ ಪ್ರೀತಾಃ ಸ್ಯುಸ್ತರ್ಪಿತಾಸ್ತ್ವಯಿ || ೬ ||

---

೩. ಬ್ರಹ್ಮನು—"ಸದುತ್ತಮನೇ, ಪಾವಕಾ, ನೀನು ಗಂಧರ್ವಯಕ್ಷರಿಗೆ ಮೊದಲು ಪ್ರತಿಪತ್ (ಪಾಡ್ಯ) ತಿಥಿಯಲ್ಲಿ ಉದಿಸಿದ್ದೀಯೆ.

೪. "ನಿನ್ನ *ಪದದಿಂದ ದೇವತೆಗಳು ಪ್ರಾತಿಪದಿಕರಾಗುವರು. ಆದುದರಿಂದ ಪ್ರತಿಪತ್ (ಪಾಡ್ಯ) ಎಂಬ ಹೆಸರುಳ್ಳುದು ನಿನ್ನ ಜನ್ಮ ತಿಥಿ.

೫. "ಆ ತಿಥಿಯಲ್ಲಿ ಅಗ್ನಿಮುಖದಲ್ಲಿ ಹವಿಸ್ಸಿನಿಂದ ಹೋಮ ಮಾಡುವವರಿಗೆ ಪಿತೃಗಳೂ, ಸರ್ವದೇವತೆಗಳೂ ಪ್ರೀತರಾಗುವರು.

೬. "ನಿನ್ನ (ಮುಖದ)ಲ್ಲಿ ತೃಪ್ತಿಪಡಿಸಲ್ಪಟ್ಟ +ಚತುರ್ವಿಧ ಭೂತಗಳೂ, ಮನುಷ್ಯರೂ, ಪಶುಗಳೂ, ಅಸುರರೂ ಗಂಧರ್ವಸಹಿತರಾದ ಸರ್ವದೇವತೆಗಳೂ ಪ್ರೀತರಾಗುವರು.

---

* ಪದ=ಉದ್ಯೋಗ, ಕಿರಣ, ಸಂರಕ್ಷಣೆ, ಸ್ಥಾನ, ಪಾದ.

\+ ಚತುರ್ಭೂತಗಳು=ಪೃಥ್ವಿ, ನೀರು, ವಾಯು,ಆಕಾಶ.

ಯಶ್ಚೋಪವಾಸಂ ಕುರ್ವೀತ ತ್ವದ್ಭಕ್ತಃ ಪ್ರತಿಪದ್ದಿನೇ ।
ಕ್ಷೀರಾಶನೋ ವಾ ವರ್ತೇತ ಶೃಣು ತಸ್ಯ ಫಲಂ ಮಹತ್ ॥
ಚತುರ್ಯುಗಾನಿ ಷಡ್‌ವಿಶಂ ಸ್ವರ್ಗಲೋಕೇ ಮಹೀಯತೇ ॥ ೭ ॥

ತೇಜಸ್ವೀ ರೂಪಸಂಪನ್ನೋ ದ್ರವ್ಯವಾನ್ ಜಾಯತೇ ನರಃ ।
ಇಹ ಜನ್ಮನ್ಯಸೌರಾಜಾ ಪ್ರೇತ್ಯ ಸ್ವರ್ಗೇ ಮಹೀಯತೇ ॥ ೮ ॥

ತೂಷ್ಣೀಂ ಬಭೂವ ಸೋಽಪ್ಯಗ್ನಿ ರ್ಬ್ರಹ್ಮದತ್ತಾಶ್ರಮಂ ಯಯೌ ॥ ೯ ॥

ಯ ಇದಂ ಶೃಣುಯಾನ್ನಿತ್ಯಂ ಪ್ರಾತರುತ್ಥಾಯ ಮಾನವಃ ।
ಅಗ್ನೇರ್ಜನ್ಮ ಸ ಪಾಪೇಭ್ಯಃ ಮುಚ್ಯತೇ ನಾತ್ರ ಸಂಶಯಃ ॥ ೧೦ ॥

ಇತಿ ಶ್ರೀ ವರಾಹಪುರಾಣೇ ಆದಿಕೃತವೃತ್ತಾಂತೇ ಮಹಾತಪ ಉಪಾಖ್ಯಾನೇ
ಅಗ್ನಿ ಪ್ರಾಶಸ್ತ್ಯ ನಿರೂಪಣಂ ನಾಮ ಏಕೋನವಿಂಶೋಽಧ್ಯಾಯಃ

೭-೮. "ಪಾಡ್ಯದದಿನ ನಿನ್ನ ಭಕ್ತರಾರು ಉಪವಾಸಮಾಡುವರೋ ಅಥವಾ ಹಾಲನ್ನು ಮಾತ್ರ ಕುಡಿದಿರುವರೋ ಅವರಿಗಾಗುವ ಮಹಾಫಲವನ್ನು ಕೇಳು. ಅಂತಹವರು ಇಪ್ಪತ್ತಾರು ಚತುರ್ಯುಗ ಕಾಲ ಸ್ವರ್ಗಲೋಕದಲ್ಲಿ ಸಂತೋಷದಿಂದಿರುವರು. ಈ ಲೋಕದಲ್ಲಿ ತೇಜಸ್ವಿಗಳೂ, ರೂಪಸಂಪನ್ನರೂ ಧನಿಕರೂ ಆಗಿ ಶುಭವನ್ನು ಪಡೆಯುವರು. (ಮನುಷ್ಯಜನ್ಮದಲ್ಲಿ) ರಾಜನಾದವನು ಈ ದೇಹವನ್ನು ತ್ಯಜಿಸಿದ ಬಳಿಕ ಸ್ವರ್ಗಲೋಕದಲ್ಲಿ ಸೇರಿ, ಪೂಜ್ಯನಾಗುವನು."

೯-೧೦. ಅಗ್ನಿಯು ಸುಮ್ಮನಾಗಿ ಬ್ರಹ್ಮದತ್ತವಾದ ಆಶ್ರಮಕ್ಕೆ ಹೋದನು. ಯಾರು ನಿತ್ಯವೂ ಬೆಳಗ್ಗೆ ಎದ್ದು, ಈ ಅಗ್ನಿ ಜನ್ಮವಿಚಾರವನ್ನು ಕೇಳುವರೋ ಅವರು ಪಾಪಗಳಿಂದ ಬಿಡುಗಡೆಯನ್ನು ಪಡೆಯುವುದರಲ್ಲಿ ಸಂದೇಹವಿಲ್ಲ.

ಅಧ್ಯಾಯದ ಸಾರಾಂಶ:—

ಮಹಾತಪಮುನಿಯು ಪ್ರಜಾಪಾಲನಿಗೆ—ಅಗ್ನಿಯ ಪ್ರಾಶಸ್ತ್ಯವನ್ನು ಹೇಳಿ, ತಿಥಿಗಳ ಮಹಿಮೆಯನ್ನೂ ಹೇಳಲು ಆರಂಭಿಸುವನು. "ಅಗ್ನಿಯು ಬ್ರಹ್ಮನನ್ನು ತನಗೊಂದು ತಿಥಿಯನ್ನು ನಿಷ್ಕರ್ಷಿಸಿಕೊಡುವಂತೆ ಕೇಳಲು 'ನೀನು ಪ್ರತಿಪತ್ತಿಥಿಯಲ್ಲಿ ಉದಿಸಿರುವುದರಿಂದ ನಿನಗೆ ಅದೇ ತಿಥಿಯಿರಲಿ. ಪಾಡ್ಯದದಿನ ನಿನ್ನಲ್ಲಿ ಹೋಮಮಾಡುವವರಿಗೆ ಪಿತೃಗಳೂ, ಸರ್ವದೇವತೆಗಳೂ ಪ್ರೀತರಾಗುವರು.' ಎಂಬುದೇ ಮೊದಲಾದ ವರಗಳನ್ನು ಕೊಟ್ಟನು" ಎಂಬುದಾಗಿ ಹೇಳುವನು. ಇಲ್ಲಿಗೆ ಶ್ರೀವರಾಹ ಪುರಾಣದಲ್ಲಿ ಹತ್ತೊಂಭತ್ತನೆಯ ಅಧ್ಯಾಯ.

|| ಶ್ರೀಃ ||

-X-

ವಿಂಶೋಽಧ್ಯಾಯಃ

ಅಥಾಶ್ವಿನೋರುತ್ಪತ್ತಿಃ

|| ಪ್ರಜಾಪಾಲ ಉವಾಚ ||

ಏವಮುಗ್ನೇಃ ಸಮುತ್ಪತ್ತಿರ್ಜಾತಾ ಬ್ರಹ್ಮನ್ಮಹಾತ್ಮನಃ ।
ಪ್ರಾಣಾಪಾನೌ ಕಥಂ ದೇವಾವಶ್ವಿನೌ ಸಂಬಭೂವತುಃ || ೧ ||

|| ಮಹಾತಪಾ ಉವಾಚ ||

ಮರೀಚಿರ್ಬ್ರಹ್ಮಣಃ ಪುತ್ರಃ ಸ್ವಯಂ ಬ್ರಹ್ಮಾ ದ್ವಿಸಪ್ತಭಿಃ ।
ರೂಪೈರ್ವ್ಯವಸ್ಥಿತಸ್ತೇಷಾಂ ಮರೀಚಿಃ ಶ್ರೇಷ್ಠತಾಮಗಾತ್ || ೨ ||

ಇಪ್ಪತ್ತನೆಯ ಅಧ್ಯಾಯ

ಅಶ್ವಿನೀ ದೇವತೆಗಳ ಉತ್ಪತ್ತಿ

೧. ಪ್ರಜಾಪಾಲ—ಬ್ರಹ್ಮನೇ, ಮಹಾತ್ಮನಾದ ಅಗ್ನಿಯ ಉತ್ಪತ್ತಿಯು ಹೀಗಾಯಿತು. ಪ್ರಾಣಾಪಾನಗಳು ಅಶ್ವಿನೀದೇವರಾಗಿ ಹೇಗೆ ಆದುವು ?

೨. ಮಹಾತಪಮುನಿ— ಮರೀಚಿಯು ಬ್ರಹ್ಮನ(ಮಾನಸ)ಪುತ್ರ. ಬ್ರಹ್ಮನು ತಾನೇ ಒಂಬತ್ತು ರೂಪಗಳುಳ್ಳವನಾದನು. ಎಂದರೆ ಒಂಬತ್ತು ಮಂದಿ ಮಾನಸ ಪುತ್ರರನ್ನು ಸೃಷ್ಟಿಸಿದನು. ಅವರಲ್ಲಿ ಮರೀಚಿಯು ಶ್ರೇಷ್ಠತೆಯನ್ನು ಪಡೆದನು.

ತಸ್ಯ ಪುತ್ರೋ ಮಹಾತೇಜಾಃ ಕಶ್ಯಪೋ ನಾಮ ವೈ ಮುನಿಃ ।
ಸ್ವಯಂ ಪ್ರಜಾಪತಿಃ ಶ್ರೀಮಾನ್ದೇವತಾನಾಂ ಪಿತಾಭವತ್ ॥ ೩ ॥

ತಸ್ಯ ಪುತ್ರಾ ಬಭೂವುರ್ಹಿ ಆದಿತ್ಯಾ ದ್ವಾದಶಪ್ರಭೋ ।
ನಾರಾಯಣಾತ್ಮಕಂ ತೇಜೋ ದ್ವಾದಶೇತಿಪ್ರಕೀರ್ತಿತಂ ॥ ೪ ॥

ತೇ ಚ ಮಾಸಾಸ್ತ ಆದಿತ್ಯಾಃ ಸ್ವಯಂ ಸಂವತ್ಸರೋ ಹರಿಃ ।
ಏವಂ ತೇ ದ್ವಾದಶಾದಿತ್ಯಾ ಮಾರ್ತಂಡಶ್ಚ ಪ್ರತಾಪವಾನ್ ॥ ೫ ॥

ತಸ್ಯ ತ್ವಷ್ಟಾ ದದೌ ಕನ್ಯಾಂ ಸಂಜ್ಞಾಂ ನಾಮ ಮಹಾಪ್ರಭಾಂ ।
ತಸ್ಯಾಪತ್ಯದ್ವಯಂ ಜಜ್ಞೇ ಯಮಶ್ಚ ಯಮುನಾ ತಥಾ ॥ ೬ ॥

ತಸ್ಯ ತೇಜೋಽಪ್ಯಸಹತೀ ಬಭೂವಾಶ್ವಾಮನೋಜವಾ ।
ಸ್ವಾಂ ಛಾಯಾಂ ತತ್ರ ಸಂಸ್ಥಾಪ್ಯ ಸಾ ಜಗಾಮೋತ್ತರಾನ್ಕುರೂನ್ ॥ ೭ ॥

---

೩. ಆ ಮರೀಚಿಯ ಮಗ ಮಹಾತೇಜನಾದ ಕಶ್ಯಪನೆಂಬ ಮುನಿಯು ಶ್ರೀಮಂತನೂ, ತಾನೇ ಪ್ರಜಾಪತಿಯೂ ಆಗಿ ದೇವತೆಗಳಿಗೆ ತಂದೆಯಾದನು.

೪. ದೊರೆಯೇ, ಆ ಕಶ್ಯಪರ ಪುತ್ರರು ದ್ವಾದಶಾದಿತ್ಯರು. ನಾರಾಯಣಾತ್ಮಕವಾದ ತೇಜಸ್ಸೇ ದ್ವಾದಶಾದಿತ್ಯರೆಂದೆನಿಸಿಕೊಂಡಿದೆ.

೫. ಆ ಹನ್ನೆರಡು ಮಾಸಗಳೂ ದ್ವಾದಶಾದಿತ್ಯರು. ಸಂವತ್ಸರವು ಸಾಕ್ಷಾತ್ ಹರಿ. ಹೀಗೆ ಆದಿತ್ಯರು ಹನ್ನೆರಡು ಮಂದಿ. ಅವರಲ್ಲಿ ಮಾರ್ತಂಡನು ಮಹಾಪ್ರತಾಪವುಳ್ಳವನು.

೬. ಆ ಸೂರ್ಯನಿಗೆ ತ್ವಷ್ಟೃವು ಮಹಾ ಕಾಂತಿವಂತೆಯಾದ ಸಂಜ್ಞೆಯೆಂಬ ತನ್ನ ಪುತ್ರಿಯನ್ನು ವಿವಾಹ ಮಾಡಿಕೊಟ್ಟನು. ಅವಳಲ್ಲಿ ಯಮ, ಯಮುನೆಯರೆಂಬ ಇಬ್ಬರು ಮಕ್ಕಳುದಿಸಿದರು.

೭. ಬಳಿಕ ಸಂಜ್ಞೆಯು ಸೂರ್ಯನ ತೇಜಸ್ಸನ್ನು ಸಹಿಸಲಾರದೆ ತನ್ನ ಛಾಯೆಯನ್ನು ಅಲ್ಲಿ ನಿಲ್ಲಿಸಿ, ತಾನು ಹೆಣ್ಣುಕುದುರೆಯಾಗಿ ಮನೋವೇಗದಿಂದ ಉತ್ತರ ಕುರುದೇಶಕ್ಕೆ ಹೋದಳು.

ತದ್ರೂಪಾಂ ತಾಂ ಸವರ್ಣಾಂ ತು ಭೇಜೇ ಮಾರ್ತಂಡಭಾಸ್ಕರಃ ।
ತಸ್ಮಾದಪಿ ದ್ವಯಂ ಜಜ್ಞೇ ಶನಿಂ ತಪತಿಮೇವ ಚ ॥ ೮ ॥

ಯದಾ ತ್ವಸದೃಶಂ ಭೇಜೇ ಪುತ್ರಾನ್‌ಪ್ರತಿನರೋತ್ತಮ ।
ಛಾಯಾಂ ಪ್ರೋವಾಚ ಭಗವಾನ್ ಕ್ರೋಧಸಂರಕ್ತಲೋಚನಃ ॥
ಅಸಮತ್ವಂ ನ ಕರ್ತವ್ಯಂ ಸ್ವೇಷ್ವಪತ್ಯೇಷು ಭಾಮಿನಿ ॥ ೯ ॥

ಏವಮುಕ್ತಾ ಯದಾಸಾ ತು ಹ್ಯಸಮತ್ವಂ ವ್ಯರೋಚತ ।
ತದಾ ಯಮಃ ಸ್ವಪಿತರಂ ಪ್ರೋವಾಚ ಭೃಶದುಃಖಿತಃ ॥ ೧೦ ॥

ನೇಯಂ ಮಾತಾಭವೇತ್ತಾತ ತ್ವಸ್ಮಾಕಂ ಶತ್ರುವತ್ಸದಾ ।
ಸಪತ್ನೀವ ವೃಥಾಚಾರಾ ಸ್ವೇಷ್ವಪತ್ಯೇಷು ವತ್ಸಲಾ ॥ ೧೧ ॥

---

೮. ಸಂಜ್ಞೆಯಂತೆಯೇ ವರ್ಣರೂಪಗಳುಳ್ಳ ಆ ಛಾಯೆಯನ್ನೇ ಅವಳೆಂದು ಕೊಂಡು ಸೂರ್ಯನು ಅವಳೊಡಗೂಡಿದ್ದನು. ಅವಳಲ್ಲಿಯೂ ಶನಿ, ತಪತಿ ಯೆಂಬಿಬ್ಬರು ಮಕ್ಕಳು ಹುಟ್ಟಿದರು.

೯. ನರೋತ್ತಮನೇ, ಛಾಯಾದೇವಿಯು, ಸಂಜ್ಞಾದೇವಿಯ ಮಕ್ಕಳಿಗೂ ತನ್ನ ಮಕ್ಕಳಿಗೂ ಭೇದವನ್ನು ಮಾಡುತ್ತಿರಲು ಪೂಜ್ಯನಾದ ಸೂರ್ಯನು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಛಾಯೆಗೆ "ಭಾಮಿನಿ, ತಮ್ಮಮಕ್ಕಳಲ್ಲಿ ವ್ಯತ್ಯಾಸವನ್ನು ಮಾಡಬಾರದು" ಎಂದು ಹೇಳಿದನು.

೧೦–೧೧. ಹೀಗೆ ಹೇಳಿದರೂ ಆಕೆಯು ಪಕ್ಷಪಾತಮಾಡುವುದರಲ್ಲಿಯೇ ಆಸಕ್ತಳಾಗಿರಲು ಅತಿ ದುಃಖಿತನಾದ ಯಮನು ತಂದೆಗೆ "ಅಪ್ಪಾ, ತನ್ನ ಮಕ್ಕಳಲ್ಲಿ ವಾತ್ಸಲ್ಯವುಳ್ಳವಳಾಗಿ ನಮ್ಮಲ್ಲಾದರೆ ಶತ್ರುವಿನಂತೆ ಇರುವ ಇವಳು ನಮಗೆ ತಾಯಾಗಲಾರಳು. ಕಪಟಾಚಾರವುಳ್ಳವಳಾದ ಇವಳು ಸವತಿ ತಾಯಿಯಂತೆ ಇದ್ದಾಳೆ" ಎಂದು ಹೇಳಿದನು.

ಏವಂ ಯಮವಚಃ ಶ್ರುತ್ವಾ ಸಾ ಛಾಯಾ ಕ್ರೋಧಮೂರ್ಛಿತಾ ।
ಶಶಾಪ ಪ್ರೇತರಾಜಸ್ತ್ವಂ ಭವಿಷ್ಯಸ್ಯಚಿರಾದಿವ ॥ ೧೨ ॥

ಏವಂ ಶ್ರುತ್ವಾಥ ಮಾರ್ತಂಡಸ್ತದಾ ಪುತ್ರಹಿತೇಚ್ಛಯಾ ।
ಉವಾಚ ಮಧ್ಯವರ್ತೀ ತ್ವಂ ಭವಿತಾ ಧರ್ಮಪಾಪಯೋಃ ।
ಲೋಕಪಾಲಶ್ಚ ಭವಿತಾ ತ್ವಂ ಪುತ್ರ ದಿವಿ ಶೋಭಸೇ ॥ ೧೩ ॥

ಶನಿಂ ಶಶಾಪ ಮಾರ್ತಂಡಃ ಛಾಯಾಕೋಪಪ್ರಧರ್ಷಿತಃ ।
ತ್ವಂ ಕ್ರೂರದೃಷ್ಟಿರ್ಭವಿತಾ ಮಾತೃದೋಷೇಣ ಪುತ್ರಕ ॥ ೧೪ ॥

ಏವಮುಕ್ತ್ವಾ ಸಮುತ್ಥಾಯ ಯಯೌ ಭಾನುರ್ದಿದೃಕ್ಷಯಾ ।
ತಾಮಪಶ್ಯತ್ಸಾವಶ್ವಾಮುತ್ತರೇಷು ಕುರುಷ್ವಥ ॥ ೧೫ ॥

---

೧೨. ಯಮನ ಈ ಬಗೆಯ ಮಾತನ್ನು ಕೇಳಿ ಸಿಟ್ಟಿನಿಂದ ಮೈಮರೆದ ಆ ಛಾಯೆಯು "ನೀನು ಬೇಗನೆ ಪ್ರೇತರಾಜನಾಗುವೆ" ಎಂದು ಯಮನನ್ನು ಶಪಿಸಿದಳು.

೧೩. ಹೀಗೆಂದುದನ್ನು ಕೇಳಿ, ಆಗ ಸೂರ್ಯನು ಮಗನ ಹಿತೇಚ್ಛೆಯಿಂದ ಮಗನೇ ನೀನು ಪುಣ್ಯಪಾಪಗಳಿಗೆ ಮಧ್ಯವರ್ತಿಯಾಗುವೆ. ಎಂದರೆ ಪ್ರಾಣಿಗಳ ಧರ್ಮಾಧರ್ಮಗಳನ್ನು ನಿರ್ಣಯಿಸುವ ಧರ್ಮಾಧೀಶನಾಗುವೆ. ಲೋಕಪಾಲನಾಗಿ ಸ್ವರ್ಗದಲ್ಲಿ ಪ್ರಕಾಶಿಸುವೆ. ಎಂದು ಹೇಳಿದನು.

೧೪. ಅಲ್ಲದೆ ಛಾಯೆಯ ಮೇಲಿನ ಸಿಟ್ಟಿನಿಂದ ಶನಿಯನ್ನು "ಮಗನೇ, ನೀನು ತಾಯಿಯ ದೋಷದಿಂದ ಕ್ರೂರದೃಷ್ಟಿಯುಳ್ಳವನಾಗುವೆ" ಎಂದು ಶಪಿಸಿದನು.

೧೫. ಹೀಗೆ ಶಪಿಸಿ ಅಲ್ಲಿಂದೆದ್ದು ಸೂರ್ಯನು ಸಂಜ್ಞೆಯನ್ನು ನೋಡಲಿಚ್ಛಿಸಿ ಹೊರಟನು. ಬಳಿಕ ಉತ್ತರ ಕುರುದೇಶದಲ್ಲಿ ಕುದುರೆಯಾಗಿದ್ದ ಅವಳನ್ನು ನೋಡಿದನು.

ತತೋಽಶ್ವರೂಪಂ ಕೃತ್ವಾ ಸ ಗತ್ವಾ ತತ್ರೋತ್ತರಾನ್ಕುರೂನ್ ।
ಪ್ರಾಜಾಪತ್ಯೇನ ಮಾರ್ಗೇಣ ಯುಯೋಜಾತ್ಮಾನಮಾತ್ಮನಾ ॥ ೧೬ ॥

ತಸ್ಯಾಂ ತ್ವಾಷ್ಟ್ರ್ಯಾಮಶ್ವರೂಪ್ಯಾಂ ಮಾರ್ತಂಡಸ್ತೀವ್ರತೇಜಸಾ ।
ಬೀಜಂ ನಿರ್ವಾಪಯಾಮಾಸ ತಜ್ಜ್ವಲತ್ತು ದ್ವಿಧಾಪತತ್ ॥ ೧೭ ॥

ತತ್ರ ಪ್ರಾಣಸ್ತ್ವಪಾನಶ್ಚ ಯೋಽಸೌ ಚಾತ್ಮಜಿತೌ ಪುರಾ ।
ವರದಾನೇನ ಚ ಪುನರ್ಮೂರ್ತಿಮಂತೌ ಬಭೂವತುಃ ॥ ೧೮ ॥

ತೌ ತ್ವಾಷ್ಟ್ರ್ಯಾಮಶ್ವರೂಪಾಯಾಂ ಜಾತೌ ಯೇನ ನರೋತ್ತಮೌ ।
ತತಸ್ತಾವಶ್ವಿನೌ ದೇವೌ ಕೀರ್ತ್ಯೇತೇ ರವಿನಂದನೌ ॥ ೧೯ ॥

ಪ್ರಾಜಾಪತ್ಯಂ ಸ್ವಯಂ ಭಾನುಃ ತ್ವಾಷ್ಟ್ರೀ ಶಕ್ತಿಃ ಪರಾ* ಪುರಾ ।
ತಸ್ಯಾಃ ಪ್ರಾಗ್ವಚ್ಛರೀರಸ್ಥಾವಮೂರ್ತೌ ಮೂರ್ತಿಮಾಶ್ರಿತೌ ॥ ೨೦ ॥

---

೧೬. ಬಳಿಕ ತಾನೂ ಕುದುರೆಯ ರೂಪವನ್ನು ತಾಳಿ, ಅವಳಿದ್ದೆಡೆಗೆ ಹೋಗಿ ಮೋಹದಿಂದ ಅವಳೊಡನೆ ರಮಿಸಿದನು.

೧೭. ಕುದುರೆಯ ರೂಪದಲ್ಲಿದ್ದ ತ್ವಷ್ಟೃಪುತ್ರಿಯಾದ ಸಂಜ್ಞೆಯಲ್ಲಿ (ಕುದುರೆಯ ರೂಪಿನಿಂದ) ಸೂರ್ಯನು ತೀವ್ರವಾದ ತೇಜಸ್ಸಿನಿಂದ ರೇತಸ್ಸೇಚನ ಮಾಡಿದನು. ಜ್ವಲಿಸುವ ಅದು ಎರಡುಭಾಗವಾಗಿ ಬಿದ್ದಿತು.

೧೮. ಹಿಂದೆ ಪರಮಾತ್ಮನಿಂದ ಜಿತವಾಗಿದ್ದ ಪ್ರಾಣಾಪಾನಗಳು ಅವನ ವರದಾನದಿಂದ ಆ ಅಶ್ವಗರ್ಭದಲ್ಲಿ ದೇಹವನ್ನು ಧರಿಸಿ ಹುಟ್ಟಿದುವು.

೧೯. ನರೋತ್ತಮರೂ, ಸೂರ್ಯಪುತ್ರರೂ ಆದ ಅವರು ಅಶ್ವ (ಕುದುರೆಯ)ರೂಪದಲ್ಲಿದ್ದ ಸಂಜ್ಞಾದೇವಿಯಲ್ಲಿ ಜನಿಸಿದುದರಿಂದ ಅಶ್ವನೀದೇವ ರೆಂದು ಕೀರ್ತಿಯನ್ನು ಪಡೆದಿರುವರು.

೨೦. ಸೂರ್ಯನು ತಾನು ಬ್ರಹ್ಮನಿಂದುದಿಸಿದವನು. ಸಂಜ್ಞೆಯು ಪೂರ್ವದಲ್ಲಿ ಪರಾಶಕ್ತಿ. ನಿರಾಕಾರರಾದವರು ಅವಳಲ್ಲಿ ಹಿಂದಿನಂತೆ ಶರೀರವನ್ನು ಪಡೆದು, ಸಾಕಾರರಾದರು.

---

* ಪರಾ

ತತಸ್ತಾವಶ್ವಿನೌ ದೇವೌ ಮಾರ್ತಂಡಮುಪತಸ್ಥತುಃ ।
ಊಚತುಃ ಸ್ವರುಚಿಂ ತಾವತ್ಕಿಂಕರ್ತವ್ಯಮಥಾವಯೋಃ ॥ ೨೧ ॥

॥ ಮಾರ್ತಂಡ ಉವಾಚ ॥

ಪುತ್ರೌ ಪ್ರಜಾಪತಿಂ ದೇವಂ ಭಕ್ತ್ಯಾರಾಧಯತಾಂ ವರಂ ।
ನಾರಾಯಣಂ ಸ ವೋ ದಾತಾ ವರಂ ನೂನಮವಾಪ್ಸ್ಯಥಃ ॥ ೨೨ ॥

ಏವಂ ತಾವಶ್ವಿನೌ ಪ್ರೋಕ್ತೌ ಮಾರ್ತಂಡೇನ ಮಹಾತ್ಮನಾ ।
ತೇಪತುಸ್ತೀವ್ರತಪಸೌ ತಪಃ ಪರಮದುಶ್ಚರಂ ॥
ಬ್ರಹ್ಮಪಾರಮಯಂ ಸ್ತೋತ್ರಂ ಜಪಂತೌ ತು ಸಮಾಹಿತೌ ॥ ೨೩ ॥

ತಯೋಃ ಕಾಲೇನ ಮಹತಾ ಬ್ರಹ್ಮಾ ನಾರಾಯಣಾತ್ಮಕಃ ।
ತುತೋಷ ಪರಮಪ್ರೀತ್ಯಾ ವರಂಚೈವಂ ದದೌ ತಯೋಃ ॥ ೨೪ ॥

---

೨೧ ಬಳಿಕ ಆ ಅಶ್ವಿನೀದೇವತೆಗಳು ಸೂರ್ಯನ ಸಮೀಪಕ್ಕೆ ಹೋಗಿ "ನಾವು ಮಾಡಬೇಕಾದುದೇನು?" ಎಂದು ತಮ್ಮ ಇಷ್ಟವನ್ನು ಹೇಳಿದರು.

೨೨. ಸೂರ್ಯ—ಪುತ್ರರೇ, ಪರಬ್ರಹ್ಮನೂ, ಸರ್ವೋತ್ತಮನೂ ಆದ ನಾರಾಯಣನನ್ನು ಭಕ್ತಿಯಿಂದ ಆರಾಧಿಸಿರಿ. ಅವನೇ ದಾತೃವು. ನಿಜವಾಗಿಯೂ ಅವನಿಂದ ವರವನ್ನು ಪಡೆಯುವಿರಿ. ಎಂದು ಹೇಳಿದನು.

೨೩. ಮಹಾತ್ಮನಾದ ಸೂರ್ಯನಿಂದ ಹೀಗೆ ಹೇಳಿಸಿಕೊಂಡ ಆ ಅಶ್ವಿನೀ ದೇವತೆಗಳು ತೀವ್ರತಪಸ್ವಿಗಳಾಗಿ, ಏಕಾಗ್ರಚಿತ್ತರಾಗಿ, ಬ್ರಹ್ಮಪಾರಸ್ತೋತ್ರವನ್ನು ಜಪಿಸುತ್ತಾ, ಅತಿ ಕಷ್ಟವಾದ ತಪಸ್ಸನ್ನು ಮಾಡಿದರು.

೨೪. ಬಹಳ ಕಾಲವಾದಮೇಲೆ ನಾರಾಯಣಾತ್ಮಕನಾದ ಬ್ರಹ್ಮನು, ಸಂತೋಷಪಟ್ಟು ಅವರಿಗೊಲಿದು, ಪರಮಪ್ರೀತಿಯಿಂದ ವರವನ್ನು ಕೊಟ್ಟನು.

॥ ಪ್ರಜಾಪಾಲ ಉವಾಚ ॥

ಅಶ್ವಿಭ್ಯಾಮೀರಿತಂ ಸ್ತೋತ್ರಂ ಬ್ರಹ್ಮಣೋವ್ಯಕ್ತಜನ್ಮನಃ ।
ಶ್ರೋತುಮಿಚ್ಛಾಮ್ಯಹಂ ಬ್ರಹ್ಮಂಸ್ತ್ವತ್ಪ್ರಸಾದಾನ್ಮಹಾಮುನೇ ॥ ೨೫ ॥

॥ ಮಹಾತಪಾ ಉವಾಚ ॥

ಶೃಣು ರಾಜನ್ಯಥಾ ಸ್ತೋತ್ರಮಶ್ವಿಭ್ಯಾಂ ಬ್ರಹ್ಮಣಃ ಕೃತಂ ।
ಕೀದೃಶಂ ಚ ಫಲಂ ಪ್ರಾಪ್ತಂ ತಯೋಃ ಸ್ತೋತ್ರಸ್ಯ ಚಾನಘ ॥ ೨೬ ॥

ಓಂ ನಮಸ್ತೇ ನಿಷ್ಕ್ರಿಯ ನಿಷ್ಪ್ರಪಂಚ
ನಿರಾಶ್ರಯ ನಿರಪೇಕ್ಷ ನಿರಾಲಂಬ ।
ನಿರ್ಗುಣನಿರಾಲೋಕ ನಿರಾಧಾರ
ನಿರ್ಮಮ ನಿರಾಲಂಬ ॥ ೨೭ ॥

ಬ್ರಹ್ಮನ್ಮಹಾಬ್ರಹ್ಮನ್ ಬ್ರಾಹ್ಮಣಪ್ರಿಯ
ಪುರುಷ ಮಹಾಪುರುಷ ಪುರುಷೋತ್ತಮ ।
ದೇವಮಹಾದೇವ ದೇವೋತ್ತಮ
ಸ್ಥಾಣೋ ಸ್ಥಿತಿ (ತ) ಸ್ಥಾಪಕ ॥ ೨೮ ॥

---

೨೫. ಪ್ರಜಾಪಾಲ— ಮಹಾಮುನಿಯೇ, ಅಶ್ವಿನೀದೇವರು ಹೇಳಿದ ಅವ್ಯಕ್ತಜನ್ಮನಾದ ಬ್ರಹ್ಮನಸ್ತೋತ್ರವನ್ನು ನಿನ್ನ ಅನುಗ್ರಹದಿಂದ ಕೇಳಲಿಚ್ಛಿಸುತ್ತೇನೆ.

೨೬. ಮಹಾತಪಮುನಿ— ಪಾಪರಹಿತನಾದ ರಾಜನೇ, ಅಶ್ವಿನೀ ದೇವತೆಗಳು ಬ್ರಹ್ಮಸ್ತುತಿಯನ್ನು ಹೇಗೆ ಮಾಡಿದರೆಂಬುದನ್ನೂ, ಅವರ ಸ್ತೋತ್ರಕ್ಕೆ ಎಂತಹ ಫಲವು ದೊರೆಯಿತೆಂಬುದನ್ನೂ ಕೇಳು.

೨೭. ಓಂ ನಿಷ್ಕ್ರಿಯ, ನಿಷ್ಪ್ರಪಂಚ, ನಿರಾಶ್ರಯ, ನಿರಪೇಕ್ಷ, ನಿರಾಲಂಬ, ನಿರ್ಗುಣ, ನಿರಾಲೋಕ, ನಿರಾಧಾರ, ನಿರ್ಮಮ, ನಿನಗೆ ನಮಸ್ಕಾರ.

೨೮. ಬ್ರಹ್ಮನೇ, ಮಹಾಬ್ರಹ್ಮನೇ, ಬ್ರಾಹ್ಮಣಪ್ರಿಯನೇ, ಪುರುಷ, ಮಹಾಪುರುಷ, ಪುರುಷೋತ್ತಮ, ದೇವಾ, ಮಹಾದೇವ, ದೇವೋತ್ತಮಾ, ಸ್ಥಾಣೂ, ಸ್ಥಿತಿಸ್ಥಾಪಕಾ, ನಿನಗೆ ನಮಸ್ಕಾರ.

ಭೂತಮಹಾಭೂತ ಭೂತಾಧಿಪತೇ
ಯಕ್ಷ ಮಹಾಯಕ್ಷ ಯಕ್ಷಾಧಿಪತೇ ।
ಗುಹ್ಯ ಮಹಾಗುಹ್ಯ ಗುಹ್ಯಾಧಿಪತೇ
ಸೌಮ್ಯ ಮಹಾಸೌಮ್ಯ ಸೌಮ್ಯಾಧಿಪತೇ ॥ ೨೯ ॥

ಪಕ್ಷಿನ್ಮಹಾಪಕ್ಷಿಪತೇ
ದೈತ್ಯ ಮಹಾದೈತ್ಯಾಧಿಪತೇ ।
ರುದ್ರ ಮಹಾರುದ್ರಾಧಿಪತೇ
ವಿಷ್ಣೋ ಮಹಾವಿಷ್ಣುಪತೇ
ಪರಮೇಶ್ವರ ನಾರಾಯಣ ಪ್ರಜಾಪತಯೇ ನಮಃ ॥ ೩೦ ॥

ಏವಂ ಸ್ತುತಸ್ತದಾ ತಾಭ್ಯಾಮಶ್ವಿಭ್ಯಾಂ ಸ ಪ್ರಜಾಪತಿಃ ।
ತುತೋಷ ಪರಮಪ್ರೀತ್ಯಾ ವಾಕ್ಯಂ ಚೇದಮುವಾಚ ಹ ॥ ೩೧ ॥

ವರಂ ವರಯತಾಂ ಶೀಘ್ರಂ ದೇವ್ಯೈಃ ಪರಮದುರ್ಲಭಂ ।
ಯೇನ ವೋ ವರದಾನೇನ ಚರತಸ್ತ್ರಿದಿವೇ ಸುಖಂ ॥ ೩೨ ॥

---

೨೯. ಭೂತ, ಮಹಾಭೂತ, ಭೂತಾಧಿಪತೀ, ಯಕ್ಷನೇ, ಮಹಾಯಕ್ಷನೇ, ಯಕ್ಷಾಧಿಪತೀ, ಗುಹ್ಯ, ಮಹಾಗುಹ್ಯ, ಗುಹ್ಯಾಧಿಪತೀ, ಸೌಮ್ಯ, ಮಹಾಸೌಮ್ಯ, ಸೌಮ್ಯಾಧಿಪತೀ ನಿನಗೆ ನಮಸ್ಕಾರ.

೩೦. ಪಕ್ಷಿ, ಮಹಾಪಕ್ಷಿಪತೀ, ದೈತ್ಯ, ಮಹಾದೈತ್ಯಾಧಿಪತೀ, ರುದ್ರ, ಮಹಾರುದ್ರಾಧಿಪತೀ, ವಿಷ್ಣುವೇ, ಮಹಾವಿಷ್ಣುಪತೀ, ಪರಮೇಶ್ವರ, ನಾರಾಯಣ, ಪ್ರಜಾಪಾಲಕನೇ, ನಿನಗೆ ನಮಸ್ಕಾರ.

೩೧–೩೨. ಅಶ್ವಿನೀದೇವರಿಂದ ಆಗ ಹೀಗೆ ಸ್ತೋತ್ರಮಾಡಿಸಿಕೊಂಡ ಆ ಬ್ರಹ್ಮನು ಸಂತುಷ್ಟನಾಗಿ ಪರಮಪ್ರೀತಿಯಿಂದ “ನಿಮಗೆ ಕೊಡುವ ಯಾವ ವರದಿಂದ ಸ್ವರ್ಗಲೋಕದಲ್ಲಿ ನೀವು ಸುಖವಾಗಿ ಸಂಚರಿಸುವಿರೋ, ದೇವತೆಗಳಿಗೂ ದುರ್ಲಭವಾದ ಅಂತಹ ವರವನ್ನು ಬೇಗನೆ ಬೇಡಿರಿ” ಎಂದು ಹೇಳಿದನು.

॥ ಅಶ್ವಿನಾವೂಚತುಃ ॥

ಆವಯೋರ್ದೇವ ಭಾಗಂ ತು ದೇಹಿ ದೇವ ಪ್ರಜಾಪತೇ ।
ಸೋಮಪತ್ವಂಚ ದೇವಾನಾಂ ಸಾಮಾನ್ಯತ್ವಂ ಚ ಶಾಶ್ವತಂ ॥ ೩೩ ॥

॥ ಬ್ರಹ್ಮೋವಾಚ ॥

ರೂಪಂ ಕಾಂತಿರನೌಪಮ್ಯಂ ಭಿಷಕ್ತ್ವಂ ಸರ್ವವಸ್ತುಷು ।
ಸೋಮಪತ್ವಂಚ ಲೋಕೇಷು ಸರ್ವಮೇತದ್ಭವಿಷ್ಯತಿ ॥ ೩೪ ॥

॥ ಮಹಾತಪಾ ಉವಾಚ ॥

ಏತತ್ಸರ್ವಂ ದ್ವಿತೀಯಾಯಾಮಶ್ವಿಭ್ಯಾಂ ಬ್ರಹ್ಮಣಾ ಪುರಾ ।
ದತ್ತಂ ಯಸ್ಮಾದತಸ್ತೇಷಾಂ ತಿಥೀನಾಮುತ್ತಮಾ ತಿಥಿಃ ॥ ೩೫ ॥

ಏತಸ್ಯಾಂ ರೂಪಕಾಮಸ್ತು ಪುಷ್ಪಾಹಾರೋ ಭವೇನ್ನರಃ ।
ಸಂವತ್ಸರಂ ಶುಚಿರ್ನಿತ್ಯಂ ಸುಸ್ವರೂಪೋ ಭವೇನ್ನರಃ ॥ ೩೬ ॥

---

೩೩. ಅಶ್ವಿನೀದೇವರು—"ದೇವ, ಬ್ರಹ್ಮನೇ ನಮಗೆ ದೇವತೆಗಳ ಭಾಗವನ್ನೂ, ಸೋಮಪತ್ವವನ್ನೂ, ದೇವತೆಗಳ ಸಮಾನತೆಯನ್ನೂ ಶಾಶ್ವತವಾಗಿ ಕೊಡು." ಎಂದರು.

೩೪. ಬ್ರಹ್ಮ—ನಿಮಗೆ ಲೋಕಗಳಲ್ಲಿ ಅನುಪಮವಾದ ರೂಪವೂ, ಕಾಂತಿಯೂ, ಸರ್ವ ವಸ್ತುಗಳಲ್ಲಿ ವೈದ್ಯತೆಯೂ, ಸೋಮಪತೆಯೂ ಇದೆಲ್ಲವೂ ಆಗುವುದು.

೩೫. ಮಹಾತಪಮುನಿ—ಅಶ್ವಿನೀದೇವತೆಗಳಿಗೆ ಪೂರ್ವದಲ್ಲಿ ಬ್ರಹ್ಮನು ಇದೆಲ್ಲವನ್ನೂ ಬಿದಿಗೆಯದಿನ ಕೊಟ್ಟಿದರಿಂದ ದ್ವಿತೀಯಾ (ಬಿದಿಗೆ) ತಿಥಿಯು ಅವರಿಗೆ ತಿಥಿಗಳಲ್ಲೆಲ್ಲಾ ಉತ್ತಮವಾದುದು.

೩೬. ಸೌಂದರ್ಯವನ್ನು ಬಯಸುವ ಪುರುಷನು ಒಂದು ವರ್ಷಕಾಲ ಪ್ರತಿಯೊಂದು ಬಿದಿಗೆಯಲ್ಲಿಯೂ ಶುಚಿರ್ಭೂತನಾಗಿ ಪುಷ್ಪಾಹಾರನಾಗಿದ್ದರೆ ಸುರೂಪ ಸಂಪನ್ನನಾಗುವನು.

ಅಶ್ವಿನೋರ್ಯೇ ಗುಣಾಃ ಪ್ರೋಕ್ತಾಸ್ತೇ ತಸ್ಯಾಪಿ ಭವಂತಿ ಚ |
ಯ ಇದಂ ಶೃಣುಯಾನ್ನಿತ್ಯ ಮಶ್ವಿನೋರ್ಜನ್ಮಚೋತ್ತಮಂ ||
ಸರ್ವಪಾಪವಿನಿರ್ಮುಕ್ತಃ ಪುತ್ರವಾನ್ಜಾಯತೇ ನರಃ || ೩೭ ||

ಇತಿ ಶ್ರೀವರಾಹಪುರಾಣೇ ಆದಿಕೃತವೃತ್ತಾಂತೇ ಮಹಾತಪ ಉಪಾಖ್ಯಾನೇ ಅಶ್ವಿನೋರುತ್ಪತ್ತಿರ್ನಾಮ ವಿಂಶೋಽಧ್ಯಾಯಃ

---

೩೭. ಅಲ್ಲದೆ, ಅಶ್ವಿನೀಕುಮಾರರ ಗುಣಗಳು ಅವನಿಗೂ ಬರುವುವು. ಉತ್ತಮವಾದ ಈ ಅಶ್ವಿನಿಗಳ ಜನ್ಮವನ್ನು ದಿನವೂ ಕೇಳುವವನು ಎಲ್ಲಾ ಪಾಪಗಳಿಂದಲೂ ಬಿಡುಗಡೆಯನ್ನು ಪಡೆದು, ಪುತ್ರವಂತನಾಗುವನು.

ಅಧ್ಯಾಯದ ಸಾರಾಂಶ:—

ಮಹಾತಪಮುನಿಯು ಪ್ರಜಾಪಾಲನಿಗೆ ಪ್ರಾಣಾಪಾನಗಳು ಅಶ್ವಿನೀದೇವತೆಗಳಾದಕ್ರಮವನ್ನು ತಿಳಿಸುವನು. ಕಶ್ಯಪಪುತ್ರನಾದ ಸೂರ್ಯನಿಗೂ ತ್ವಷ್ಟೃಪುತ್ರಿಯಾದ ಸಂಜ್ಞೆಗೂ ವಿವಾಹವಾಗಿದ್ದಿತು. ಆಕೆಯು ಯಮ, ಯಮುನೆಯರೆಂಬ ಇಬ್ಬರು ಮಕ್ಕಳನ್ನು ಹೆತ್ತು ಬಳಿಕ ಸೂರ್ಯತೇಜಸ್ಸನ್ನು ಸಹಿಸಲಾರದೆ ಹೊರಟು ಹೋಗಿ, ಉತ್ತರಕುರುವಿನಲ್ಲಿ ಹೆಣ್ಣು ಕುದುರೆಯ ರೂಪದಿಂದ ಸಂಚರಿಸುತ್ತಿದ್ದಳು. ಬಹಳ ದಿನಗಳಮೇಲೆ ಅಲ್ಲಿಗೆ ಹೋದ ಸೂರ್ಯನು ತಾನೂ ಕುದುರೆಯ ರೂಪವನ್ನು ವಹಿಸಿ, ಮೋಹದಿಂದ ಅವಳೊಡನೆ ರಮಿಸಿದನು. ಎರಡು ಭಾಗವಾಗಿ ಬಿದ್ದ ಅವನ ರೇತಸ್ಸಿನಿಂದ, ಹಿಂದೆ ಪರಮಾತ್ಮನಿಂದ ಜಿತವಾಗಿದ್ದ ಪ್ರಾಣಾಪಾನಗಳ ಅಶ್ವಗರ್ಭದಲ್ಲಿ ದೇಹವನ್ನು ಪಡೆದು ಜನಿಸಿ, ಅಶ್ವಿನೀದೇವರೆನಿಸಿಕೊಂಡರು. ಅವರು ಸೂರ್ಯನ ಅಪ್ಪಣೆಯಂತೆ ತಪಸ್ಸನ್ನು ಮಾಡಿಯೂ, ಬ್ರಹ್ಮಪಾರಸ್ತೋತ್ರದಿಂದಲೂ ನಾರಾಯಣನನ್ನು ಒಲಿಸಿಕೊಂಡರು. ಆ ಬ್ರಹ್ಮನು ಅನುಪಮ ಸೌಂದರ್ಯ, ವೈದ್ಯತೆ, ಸೋಮಪತೆ ಮೊದಲಾದುವುಗಳನ್ನು ಬಿದಿಗೆಯದಿನ ಕೊಟ್ಟನು. ಅವರ ತಿಥಿ ಬಿದಿಗೆ. ಸೌಂದರ್ಯವನ್ನು ಬಯಸುವವರು ಬಿದಿಗೆಯ ದಿನ ಅವರನ್ನು ಪೂಜಿಸಬೇಕು. ಎಂದು ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ಇಪ್ಪತ್ತನೆಯ ಅಧ್ಯಾಯ.

|| ಶ್ರೀಃ ||

-x-

ಏಕವಿಂಶೋಽಧ್ಯಾಯಃ

ಅಥ ಗೌರ್ಯುತ್ಪತ್ತಿಃ

॥ ಪ್ರಜಾಪಾಲ ಉವಾಚ ॥

ಕಥಂ ಗೌರೀ ಮಹಾಪ್ರಾಜ್ಞ ಸಂಸ್ತುತಾ ವರದಾನತಃ ।
ಮೂರ್ತಿಂ ಲಬ್ಧವತೀ ಪುಂಸಃ ಪರಸ್ಯ ಪರಮಾತ್ಮನಃ ॥ ೧ ॥

॥ ಮಹಾತಪಾ ಉವಾಚ ॥

ಪೂರ್ವಂ ಪ್ರಜಾಪತಿರ್ದೇವಃ ಸಿಸೃಕ್ಷುರ್ವಿವಿಧಾಃ ಪ್ರಜಾಃ ।
ಚಿಂತಯಾಮಾಸ ಧರ್ಮಾತ್ಮಾ ಯದಾ ತಾ ನಾಧ್ಯಗಚ್ಛತ ॥ ೨ ॥

ತದಾಸ್ಯ ಕೋಪಾತ್ಸಂಜಜ್ಞೇ ಸ ಚ ರುದ್ರಃ ಪ್ರತಾಪವಾನ್ ।
ರೋದನಾತ್ತಸ್ಯ ರುದ್ರತ್ವಂ ಸಂಜಾತಂ ಪರಮೇಷ್ಠಿನಃ ॥ ೩ ॥

ಇಪ್ಪತ್ತೊಂದನೆಯ ಅಧ್ಯಾಯ

ಗೌರಿಯ ಉತ್ಪತ್ತಿ

೧. ಪ್ರಜಾಪಾಲ—ಮಹಾಪ್ರಾಜ್ಞನೇ, ಸ್ತೋತ್ರಾರ್ಹಳಾದ ಗೌರಿಯು, ಪರಮಪುರುಷನಾದ ಪರಮಾತ್ಮನು ವರಕೊಟ್ಟುದುದರಿಂದ ಹೇಗೆ ದೇಹವನ್ನು ಪಡೆದಳು ?

೨-೩. ಮಹಾತಪಮುನಿ—ಪೂರ್ವದಲ್ಲಿ ಧರ್ಮಾತ್ಮನಾದ ಬ್ರಹ್ಮದೇವನು ಬಗೆಬಗೆಯ ಪ್ರಜೆಗಳನ್ನು ಸೃಷ್ಟಿಸಲು ಯೋಚಿಸುತ್ತಿದ್ದನು. ಒಡನೆಯೇ ಸೃಷ್ಟಿಯಾಗದಿರಲು ಅವನಿಗೆ ಕೋಪವುಂಟಾಯಿತು. ಆ ಕೋಪದಿಂದ ಪ್ರತಾಪವುಳ್ಳ ಆ ರುದ್ರನುದಿಸಿದನು. ಅವನ ರೋದನದಿಂದ ಬ್ರಹ್ಮನು ಅವನಿಗೆ ರುದ್ರನೆಂದು ಹೆಸರುಕೊಟ್ಟನು.

ತಸ್ಮೈ ಬ್ರಹ್ಮಾ ಶುಭಾಂ ಕನ್ಯಾಂ ಭಾರ್ಯಾರ್ಥೇಸ್ಸ್ವಮೂರ್ತಿಸಂಭವಾಂ |
ಗೌರೀನಾಮ್ನೀಂ ಸ್ವಯಂ ದೇವೀಂ ಭಾರತೀಂ ತಾಂ ದದೌ ಪಿತಾ ||
ರುದ್ರಾಯಾಮಿತದೇಹಾಯ ಸ್ವಯಂ ಬ್ರಹ್ಮಾ ಪ್ರಜಾಪತಿಃ || ೪ ||

ಸ ತಾಂ ಲಬ್ಧ್ವಾ ವರಾರೋಹಾಂ ಮುದಾ ಪರಮಯಾ ಯುತಃ || ೫ ||

ಸರ್ಗಕಾಲೇಷು ತಂ ಬ್ರಹ್ಮಾ ತಪಸಾ ಪ್ರತ್ಯುವಾಚ ಹಿ |
ರುದ್ರ ಪ್ರಜಾಃ ಸೃಜಸ್ವೇತಿ ಪೌನಃ ಪುನ್ಯೇನ ಚೋದಿತಃ ||
ಅಸಮರ್ಥೋಽಸ್ಮೀತಿ ಜಲೇ ನ್ಯಮಜ್ಜತ ಮಹಾಬಲಃ || ೬ ||

ತಪೋಽರ್ಥೀ ತ್ವಂ ತಪೋಹೀನಃ ಸ್ರಷ್ಟುಂ ಶಕ್ನೋತಿ ನ ಪ್ರಜಾಃ |
ಏವಂ ಚಿಂತ್ಯ ಜಲೇ ಮಗ್ನಃ ತತೋ ರುದ್ರಃ ಪ್ರತಾಪವಾನ್ || ೭ ||

---

೪. ಮಹಾದೇಹವುಳ್ಳ ಆ ರುದ್ರನಿಗೆ ಪ್ರಜೆಗಳೊಡೆಯನಾದ ಬ್ರಹ್ಮನು ತನ್ನ ಮೂರ್ತಿಯಿಂದುದಿಸಿದ, ಮಂಗಳೆಯೂ, ಸ್ವಯಂವಾಣಿಯೂ ದೇವಿಯೂ ಆದ ಗೌರಿಯೆಂಬ ಹೆಸರಿನ ಕನ್ಯೆಯನ್ನು ತಂದೆಯಾದ ತಾನೇ ವಿವಾಹಮಾಡಿಕೊಟ್ಟನು.

೫. ಆ ರುದ್ರನು ವರಾರೋಹೆಯಾದ ಅವಳನ್ನು ಪಡೆದು ಪರಮ ಸಂತೋಷವುಳ್ಳವನಾದನು.

೬. ಬ್ರಹ್ಮನು ಅವನಿಗೆ, "ರುದ್ರನೇ ಸೃಷ್ಟಿಕಾಲಗಳಲ್ಲಿ ತಪ(ಧರ್ಮ)ದಿಂದ ಪ್ರಜೆಗಳನ್ನು ಸೃಷ್ಟಿಸು" ಎಂದು ಹೇಳಿದನು. ಮತ್ತೆ ಮತ್ತೆ ಪ್ರೇರಿಸಿದರೂ ಮಹಾಬಲವುಳ್ಳ ರುದ್ರನು ನಾನು ಅಸಮರ್ಥನಾಗಿದ್ದೇನೆಂದು ಹೇಳಿ, ನೀರಿನಲ್ಲಿ ಮುಳುಗಿದನು.

೭. ಬ್ರಹ್ಮನಾದ ನೀನು ತಪಸ್ಸನ್ನು ಅಪೇಕ್ಷಿಸುವೆ. ತಪೋರಹಿತನಾದವನು ಪ್ರಜೆಗಳನ್ನು ಸೃಷ್ಟಿಸಲಾರನು ಎಂದು ಯೋಚಿಸಿಯೇ ಪ್ರತಾಪವುಳ್ಳವನಾಗಿದ್ದರೂ ರುದ್ರನು ನೀರಿನಲ್ಲಿ ಮುಳುಗಿದನು.

ತಸ್ಮಿನ್ನಿಮಗ್ನೇ ದೇವೇಶೇ ತಾಂ ಬ್ರಹ್ಮಾ ಕನ್ಯಕಾಂ ಪುನಃ ।
ಅಂತಃಶರೀರಗಾಂ ಕೃತ್ವಾ ಗೌರೀಂ ಪರಮಶೋಭನಾಂ ॥ ೮ ॥

ಪುನಃ ಸಿಸೃಕ್ಷುರ್ಭಗವಾನ್ ಅಸೃಜತ್ಸಪ್ತಮಾನಸಾನ್ ।
ದಕ್ಷಂ ಚ ತತ ಆರಭ್ಯ ಪ್ರಜಾಃ ಸಮ್ಯಗ್ವಿವರ್ಧಿತಾಃ ॥ ೯ ॥

ತತ್ರ ದಾಕ್ಷಾಯಣೀ ಪುತ್ರಾಃ ಸರ್ವೇ ದೇವಾಃ ಸವಾಸವಾಃ ।
ವಸವೋಽಷ್ಟೌ ಚ ರುದ್ರಾಶ್ಚ ಆದಿತ್ಯಾ ಮರುತಸ್ತಥಾ ॥ ೧೦ ॥

ಸಾಪಿ ದಕ್ಷಾಯ ಸುಶ್ರೋಣೀ ಗೌರೀ ದತ್ತಾಥ ಬ್ರಹ್ಮಣಾ ।
ದುಹಿತೃತ್ವೇ ಪುರಾಯಾ ಹಿ ರುದ್ರೇಣೋಢಾ ಮಹಾತ್ಮನಾ ॥ ೧೧ ॥

ಸಾ ಚ ದಾಕ್ಷಾಯಣೀ ದೇವೀ ಪುನರ್ಭೂತ್ವಾ ನೃಪೋತ್ತಮ ॥ ೧೨ ॥

ತತೋ ದಕ್ಷಃ ಪ್ರಹೃಷ್ಟಾತ್ಮಾ ದೌಹಿತ್ರಾಂಸ್ತಾನ್ಸಮೃದ್ಧಿಕೃತ್ ।
ದೃಷ್ಟ್ವಾ ಯಜ್ಞಮಥಾರೇಭೇ ಪ್ರೀಣನಾಯ ಪ್ರಜಾಪತೇಃ ॥ ೧೩ ॥

೮–೯ ದೇವೇಶನಾದ ಅವನು ಮುಳುಗಲಾಗಿ ಬ್ರಹ್ಮನು ಕನ್ನೆಯೂ, ಪರಮಮಂಗಳೆಯೂ ಆದ ಗೌರಿಯನ್ನು ಮತ್ತೆ ತನ್ನ ದೇಹಾಂತರ್ಗತಳನ್ನಾಗಿ ಮಾಡಿ, ಮತ್ತೆ ಪ್ರಜಾಸೃಷ್ಟಿಯನ್ನು ಮಾಡಲು ಇಚ್ಛಿಸಿ, ಭಗವಂತನಾದ ಅವನು ಸಪ್ತಮಾನಸಪುತ್ರರನ್ನೂ ದಕ್ಷಬ್ರಹ್ಮನನ್ನೂ ಸೃಜಿಸಿದನು. ಅದುಮೊದಲುಗೊಂಡು ಪ್ರಜೆಗಳು ಚೆನ್ನಾಗಿ ಅಭಿವೃದ್ಧಿಯನ್ನು ಪಡೆದರು.

೧೦. ಅವರಲ್ಲಿ ಇಂದ್ರಸಹಿತರಾದ ಸರ್ವದೇವತೆಗಳೂ, ಅಷ್ಟವಸುಗಳೂ, ರುದ್ರರೂ, ಆದಿತ್ಯರೂ ಮರುತ್ತುಗಳೂ ದಕ್ಷಪುತ್ರಿಯರ ಮಕ್ಕಳು.

೧೧–೧೨ ಮಹಾತ್ಮನಾದ ರುದ್ರನು ವರಿಸಿದ್ದ ಸುಶ್ರೋಣಿಯಾದ ಆ ಗೌರಿಯನ್ನು ಬ್ರಹ್ಮನು ದಕ್ಷಬ್ರಹ್ಮನಿಗೆ ಪುತ್ರಿಯಾಗಿ ಕೊಟ್ಟನು. ಆ ಗೌರಿಯೇಮತ್ತೆ ದಾಕ್ಷಾಯಣಿಯಾದಳು.

೧೩. ಸರ್ವಸಮೃದ್ಧಿಯುಳ್ಳ ದಕ್ಷನು ಬಳಿಕ ತನ್ನ ದೌಹಿತ್ರರಾದ ಅವರನ್ನು ನೋಡಿ ಹೆಚ್ಚಾದ ಸಂತೋಷವುಳ್ಳವನಾಗಿ ಬ್ರಹ್ಮನನ್ನು ಸಂತೋಷಪಡಿಸುವುದಕ್ಕಾಗಿ ಯಜ್ಞವನ್ನಾರಂಭಿಸಿದನು.

ತತ್ರ ಬ್ರಹ್ಮಸುತಾಃ ಸರ್ವೇ ಮರೀಚ್ಯಾದಯ ಏವ ಚ ।
ಚಕ್ರುರಾರ್ತ್ವಿಜ್ಯಕಂ ಕರ್ಮ ಸ್ವೇ ಸ್ವೇ ಮಾರ್ಗೇ ವ್ಯವಸ್ಥಿತಾಃ ॥ ೧೪ ॥

ಬ್ರಹ್ಮಾ ಸ್ವಯಂ ಮರೀಚ್ಯಸ್ತು ಬಭೂವಾನ್ಯೇ ತಥಾಪರೇ ।
ಅತ್ರಿಸ್ತು ಯಜ್ಞಕರ್ಮಸ್ಥ *ಅಗ್ನೀಧ್ರಸ್ತ್ವಂಗಿರಾ ಭವತ್ ॥ ೧೫ ॥

ಹೋತಾ ಪುಲಸ್ತ್ಯಸ್ತ್ವಭವತ್ ಉದ್ಗಾತಾ ಪುಲಹೋಭವತ್ ।
ಕ್ರತೌ ಕ್ರತುಸ್ತು ಪ್ರಸ್ತೋತಾ ತದಾ ಯಜ್ಞೇ ಮಹಾತಪಾಃ ॥ ೧೬ ॥

ಪ್ರತಿಹರ್ತಾ ಪ್ರಚೇತಾಸ್ತು ತಸ್ಮಿನ್ ಕ್ರತುವರೇ ಬಭೌ ।
ಸುಬ್ರಹ್ಮಣ್ಯೋ ವಸಿಷ್ಠಸ್ತು ಸನಕಾದ್ಯಾಸ್ಸಭಾಸದಃ ॥ ೧೭ ॥

ತತ್ರ ಯಾಜ್ಯಃ ಸ್ವಯಂ ಬ್ರಹ್ಮಾ ಸಚ ಇಜ್ಯಸ್ತು ವಿಶ್ವಕೃತ್ ।
ಪೂಜ್ಯಾ ದಕ್ಷಸ್ಯ ದೌಹಿತ್ರಾಃ ರುದ್ರಾದಿತ್ಯಾಂಗಿರಾದಯಃ ॥
ಪ್ರತ್ಯಕ್ಷಂ ಪಿತರಸ್ತೇಹಿ ತೈಃ ಪ್ರೀತೈಃ ಪ್ರೀಯತೇ ಜಗತ್ ॥ ೧೮ ॥

---

೧೪. ಆ ಯಜ್ಞದಲ್ಲಿ ಮರೀಚ್ಯಾದಿಗಳಾದ ಬ್ರಹ್ಮಪುತ್ರರೆಲ್ಲರೂ ತಮ್ಮ ತಮ್ಮ ಮಾರ್ಗದಲ್ಲಿ ನಿಷ್ಕೃಷ್ಟರಾಗಿ ಋತ್ವಿಕ್ಕುಗಳಾಗಿದ್ದರು.

೧೫. ಮರೀಚಿಯು ತಾನೇ ಬ್ರಹ್ಮನಾಗಿದ್ದನು. ಬೇರೆಯವರಲ್ಲಿ ಅತ್ರಿಯು ಅಧ್ವರ್ಯುವಾಗಿದ್ದನು. ಅಂಗಿರಸ್ಸು *ಅಗ್ನೀಧ್ರನಾಗಿದ್ದನು.

೧೬-೧೭. ಪುಲಸ್ತ್ಯನು ಹೋತೃವಾಗಿದ್ದನು. ಪುಲಹನು ಉದ್ಗಾತೃ. ಆ ಕ್ರತುವಿನಲ್ಲಿ ಕ್ರತುವೆಂಬುವನೇ ಪ್ರಸ್ತೋತೃವು. ಮಹಾತಪಸ್ವಿಯಾದ ಪ್ರಚೇತಸ್ಸು ಪ್ರತಿಹರ್ತೃವಾಗಿ ಪ್ರಕಾಶಿಸುತ್ತಿದ್ದನು. ವಸಿಷ್ಠಋಷಿಯು ಸುಬ್ರಹ್ಮಣ್ಯ. ಸನಕಾದಿಋಷಿಗಳು ಸಾಮಾಜಿಕರಾಗಿದ್ದರು.

೧೮. ಅಲ್ಲಿ ಯಜ್ಞಮಾಡುವವನು ದಕ್ಷಬ್ರಹ್ಮ. ಯಜ್ಞದಿಂದ ಆರಾಧ್ಯನು ವಿಶ್ವಕರ್ತೃವಾದ ಬ್ರಹ್ಮ. ದಕ್ಷಬ್ರಹ್ಮನ ದೌಹಿತ್ರರಾದ ರುದ್ರಾದಿತ್ಯಾಂಗಿರಸ್ಸೇ ಮೊದಲಾದವರೂ, ಪ್ರತ್ಯಕ್ಷರಾದ ಆ ಪಿತೃಗಳೂ ಪೂಜ್ಯರು. ಅವರು ಪ್ರೀತರಾದರೆ ಜಗತ್ತೇ ಪ್ರೀತವಾಗುವುದು.

---

* ಆಗ್ನೀಧ್ರ.

ತತ್ರ ಭಾಗಾರ್ಥಿನೋ ದೇವಾಃ ಆದಿತ್ಯಾ ವಸವಸ್ತಥಾ ॥ ೧೯ ॥

ವಿಶ್ವೇದೇವಾಃ ಸಪಿತರೋ ಗಂಧರ್ವಾದ್ಯಾಮರುದ್ಗಣಾಃ ।
ಜಗೃಹುರ್ಯಜ್ಞಭಾಗಾಂಸ್ತಾನ್ ಯಾವಂತೋ ಹವಿಷಾರ್ಪಿತಾ ॥ ೨೦ ॥

ತಾವತ್ಕಾಲಂ ಜಲಾತ್ಸದ್ಯ ಉತ್ತಸ್ಥೌ ಬ್ರಹ್ಮಣಃ ಪುನಃ ।
ರುದ್ರಃ ಕೋಪೋದ್ಭವೋ ಯಸ್ತು ಪೂರ್ವಮಗ್ನೋ ಮಹಾಜಲೇ ॥ ೨೧ ॥

ಸ ಸಹಸ್ರಾರ್ಕಸಂಕಾಶೋ ನಿಶ್ಚಕ್ರಾಮ ಜಲಾತ್ತತಃ ।
ಸರ್ವಜ್ಞಾನಮಯೋ ದೇವಃ ಸರ್ವದೇವಮಯೋಮಲಃ ॥ ೨೨ ॥

ಪ್ರತ್ಯಕ್ಷದರ್ಶೀ ಸರ್ವಸ್ಯ ಜಗತಸ್ತಪಸಾ ಬಭೌ ॥ ೨೩ ॥

ತಸ್ಮಿಂಸ್ತುಕಾಲೇ ಪಂಚಾನಾಂ ಜಾತಃ ಸರ್ಗೋ ನರೋತ್ತಮ ।
ದಿವ್ಯಾನಾಂ ಪೃಥಿವೀಸ್ಥಾನಾಂ ಚತುರ್ಣಾಂ ಮರಜನ್ಮನಾಂ ॥ ೨೪ ॥

೧೯–೨೦. ಅಲ್ಲಿ ಯಜ್ಞಭಾಗವನ್ನಪೇಕ್ಷಿಸುವ ದೇವತೆಗಳೂ, ಆದಿತ್ಯರೂ ವಸುಗಳೂ, ಪಿತೃಸಹಿತರಾದ ವಿಶ್ವೇದೇವತೆಗಳೂ, ಗಂಧರ್ವಾದಿಗಳೂ, ಮರುತ್ತುಗಳೂ, ಹವಿಸ್ಸಾಗಿ ಅರ್ಪಿಸಿದ ತಮ್ಮ ತಮ್ಮ ಯಜ್ಞಭಾಗವೆಲ್ಲವನ್ನೂ ಪ್ರತ್ಯಕ್ಷವಾಗಿ ಸ್ವೀಕರಿಸಿದರು.

೨೧. ಹಿಂದೆ ಬ್ರಹ್ಮನ ಕೋಪದಿಂದುದಿಸಿ, ಂವರೆಗೆ ಮಹಾಜಲದಲ್ಲಿ ಮುಳುಗಿದ್ದ ರುದ್ರನು ಆಗ ಮೇಲಕ್ಕೆದ್ದನು.

೨೨–೨೩. ಸರ್ವಜ್ಞಾನಮಯನೂ, ಸರ್ವದೇವಮಯನೂ, ನಿರ್ಮಲನೂ, ಸಮಸ್ತ ಜಗತ್ತನ್ನೂ ಏಕಕಾಲದಲ್ಲಿ ಪ್ರತ್ಯಕ್ಷವಾಗಿ ನೋಡುವವನೂ, ಸಹಸ್ರ ಸೂರ್ಯಸಮಾನನೂ, ಆದ ದೇವನು ಬಳಿಕ ನೀರಿನಿಂದ ಈಚೆಗೆ ಹೊರಟನು. ಅವನು ತಪಸ್ಸಿನಿಂದ ಹಾಗೆ ಪ್ರಕಾಶಿಸುತ್ತಿದ್ದನು.

೨೪. ನರೋತ್ತಮನೇ, ಆ ವೇಳೆಗೆ ಭೂಮಿಯುಲ್ಲಿರುವ ಐದು ಬಗೆಯ ಮತ್ತು ದಿವ್ಯವಾದ ನಾಲ್ಕುಬಗೆಯ ಸೃಷ್ಟಿಯೂ ಆಗಿದ್ದಿತು.

ರೌದ್ರಸರ್ಗಸ್ಯ ಸಂಭೂತಿಸ್ತದಾ ಸದ್ಯೋಽಪಿ ಜಾಯತೇ ।
ಇದಾನೀಂ ರುದ್ರಸರ್ಗಂ ತ್ವಂ ಶೃಣು ಪಾರ್ಥಿವಸತ್ತಮ ॥ ೨೫ ॥

ದಶವರ್ಷಸಹಸ್ರಾಣಿ ತಪಸ್ತಪ್ತ್ವಾ ಮಹಾಜಲೇ ।
ಅತಿರುದ್ರೋ ಯದಾ ರುದ್ರಸ್ತಥಾಚೋರ್ವೀಂ ಸಕಾನನಾಂ ।
ದೃಷ್ಟ್ವಾ ಸಸ್ಯವತೀಂ ರಮ್ಯಾಂ ಮನುಷ್ಯಪಶುಸಂಕುಲಾಂ ॥ ೨೬ ॥

ಶುಶ್ರಾವ ಚ ತದಾ ಶಬ್ದಾನೃತ್ವಿಜಾಂ ದಕ್ಷಸದ್ಮನಿ ॥ ೨೭ ॥

ಆಶ್ರಮೇ ಯಜ್ಞಿಯಾನೋಚ್ಚೈರ್ಯೋಗಸ್ಥೈರಿತಿ ಕೀರ್ತಿತಾನ್ ।
ತತಃ ಶ್ರುತ್ವಾ ಮಹಾತೇಜಾಃ ಸರ್ವಜ್ಞಃ ಪರಮೇಶ್ವರಃ ।
ಚುಕೋಪ ಸುಭೃಶಂ ದೇವೋ ವಾಕ್ಯಂ ಚೇದಮುವಾಚ ಹ ॥ ೨೮ ॥

ಅಹಂ ಪೂರ್ವಂ ತು ಕವಿನಾ ಸೃಷ್ಟಃ ಸರ್ವಾತ್ಮನಾ ವಿಭುಃ ।
ಪ್ರಜಾಃ ಸೃಜಸ್ವೇತಿ ತದಾ ವಾಕ್ಯಮೇತತ್ತಥೋಕ್ತವಾನ್ ॥ ೨೯ ॥

---

೨೫. ರುದ್ರನ ಸೃಷ್ಟಿಯು ಆಗ ತತ್‌ಕ್ಷಣವೇ ಆಗಿದ್ದಿತು. ರಾಜೋತ್ತಮನೇ, ಈಗ ಆ ರುದ್ರಸೃಷ್ಟಿಯನ್ನು ವಿವರವಾಗಿ ಕೇಳು.

೨೬–೨೭. ಹತ್ತುಸಾವಿರವರ್ಷಕಾಲ ಮಹಾಜಲದಲ್ಲಿ ತಪಸ್ಸುಮಾಡಿ ಅತ್ಯುಗ್ರನಾದ ರುದ್ರನು, ನೀರಿನಿಂದೀಚೆಗೆ ಬಂದು ವನಗಳಿಂದಲೂ, ಮನುಷ್ಯರು ಪಶುಗಳೇ ಮೊದಲಾದುವುಗಳಿಂದಲೂ ನಿಬಿಡವಾಗಿ ಸಸ್ಯಗಳಿಂದ ತುಂಬಿ ರಮ್ಯವಾಗಿರುವ ಭೂಮಿಯನ್ನು ನೋಡಿ, ಆಗಲೇ ದಕ್ಷಬ್ರಹ್ಮನ ಮನೆಯಲ್ಲಿ ಋತ್ವಿಜರ ಧ್ವನಿಗಳನ್ನೂ ಕೇಳಿದನು.

೨೮. ಬಳಿಕ ಆಶ್ರಮದಲ್ಲಿ ಯಜ್ಞಸಂಬಂಧವಾಗಿ ಗಟ್ಟಿಯಾಗಿ ಹೇಳುವ ಮತ್ತು ಯೋಗಸ್ಥರ (ಮಂತ್ರಮೊದಲಾದುವುಗಳ) ಧ್ವನಿಗಳನ್ನೂ ಕೇಳಿ, ಮಹಾತೇಜನೂ, ಸರ್ವಜ್ಞನೂ, ಪರಮೇಶ್ವರನೂ ಆದ ಆ ದೇವನು ಅತ್ಯಧಿಕವಾಗಿ ಕೋಪಿಸಿಕೊಂಡುದಲ್ಲದೆ ಮುಂದಿನ ಈ ವಾಕ್ಯವನ್ನೂ ಹೇಳಿದನು.

೨೯–೩೦. "ಸರ್ವಾತ್ಮನಾದ ಪರಬ್ರಹ್ಮನು ವಿಭುವಾದ ನನ್ನನ್ನು ಮೊದಲು ಸೃಷ್ಟಿಸಿದನು. 'ಪ್ರಜೆಗಳನ್ನು ಸೃಜಿಸು' ಎಂಬ ಈ ವಾಕ್ಯವನ್ನೂ ಹೇಳಿದನು.

ಇದಾನೀಂ ಕೇನ ತತ್ಕರ್ಮ ಕೃತಂ ಸೃಷ್ಟ್ಯಾದಿವರ್ಣನಂ ।
ಏವಮುಕ್ತ್ವೋ ಭೃಶಂ ಕೋಪಾನ್ನನಾದ ಪರಮೇಶ್ವರಃ ॥ ೩೦ ॥

ತಸ್ಯೈವ ನದತೋ ಜ್ವಾಲಾಃ ಶ್ರೋತ್ರೇಭ್ಯೋ ನಿರ್ಯಯುಸ್ತದಾ॥ ೩೧ ॥

ತತ್ರ ಭೂತಾನಿ ವೇತಾಲಾಃ ಉಚ್ಛೃಷ್ಮಾಃ ಪ್ರೇತಪೂತನಾಃ ।
ಉತ್ತಸ್ಥುಃ ಕೋಟಿಶಸ್ತತ್ರ ನಾನಾಪ್ರಹರಣಾವೃತಾಃ ॥ ೩೨ ॥

ತದ್ದೃಷ್ಟ್ವಾ ಭೂತಸಂಘಾತಾ ವಿವಿಧಾಯುಧಪಾಣಯಃ ।
ಸಸರ್ಜ ವೇದವಿದ್ಯಾಂಗರಥಂ ಪರಮಶೋಭನಂ ॥ ೩೩ ॥

ತಸ್ಮಿನ್ ಋಚೋದ್ವಯಂ ಸ್ವಶ್ವೌ ತ್ರಿತತ್ತ್ವಂ ಚ ತ್ರಿವೇಣುಕಂ ।
ತ್ರಿಪೂಜಕಂ ತ್ರಿಷವಣಂ ಧರ್ಮಾಕ್ಷಂ ಮಾರುತೋಧ್ವನಿಃ ॥ ೩೪ ॥

ಅಹೋರಾತ್ರೇ ಪತಾಕೇ ದ್ವೇ ಧರ್ಮಾಧರ್ಮೇತು ದಂಡಕಂ ।
ಶಕಟಂ ಸರ್ವವಿದ್ಯಾಶ್ಚ ತ್ವಯಂ ಬ್ರಹ್ಮಾ ಹಿ ಸಾರಥಿಃ ॥ ೩೫ ॥

ಈಗ ಸೃಷ್ಟ್ಯಾದಿ ವಿವರವಾದ ಆ ನನ್ನ ಕಾರ್ಯವನ್ನು ಯಾರು ಮಾಡಿದರು?" ಎಂದು ಹೇಳಿ ಪರಮೇಶ್ವರನು ಅತಿಕೋಪದಿಂದ ಕೂಗಿದನು.

೩೧. ಗರ್ಜಿಸುತ್ತಿದ್ದ ಆ ರುದ್ರನ ಕಿವಿಗಳಿಂದ ಆಗ ಉರಿಗಳು ಹೊರಟುವು.

೩೨-೩೩. ಅಲ್ಲದೆ ಅತಿ ತೇಜಸ್ಸೂ, ಸಾಮರ್ಥ್ಯವೂ ಉಳ್ಳ, ಬಗೆಬಗೆಯಾದ ಆಯುಧವನ್ನು ಹಿಡಿದಿರುವ ಭೂತಗಳೂ, ಭೇತಾಳಗಳೂ, ಪ್ರೇತಗಳೂ, ಪೂತನಗಳೂ ಕೋಟಿಕೋಟಿಯಾಗಿ ಹೊರಟು ನಿಂತುವು. ಅದನ್ನು ನೋಡಿ ರುದ್ರನು ಅತಿಯಾಗಿ ಶೋಭಿಸುವ ವೇದವಿದ್ಯಾಂಗರಥವನ್ನು ಸೃಷ್ಟಿಸಿದನು.

೩೪. ಆ ರಥಕ್ಕೆ ವೇದದ್ವಯವೇ ಉತ್ತಮಾಶ್ವಗಳು. ತ್ರಿತತ್ವವೇ ರಥವನ್ನು ನಡೆಸುವವನು ಕುಳಿತುಕೊಳ್ಳುವುದಕ್ಕಾಗಿ ಮುಂದುಗಡೆ ಮೂಕಿಯ ಮೇಲಿರುವ ತಿಕ್ಕಡಿ. ತ್ರಿಕಾಲಯಜ್ಞವೇ ತ್ರಿಪೂಜಕ. ಧರ್ಮವೇ ಅಚ್ಚು. ಮಾರುತವೇ ಧ್ವನಿ.

೩೫. ಅಹೋರಾತ್ರಿಗಳೇ ಧ್ವಜಗಳು. ಧರ್ಮಾಧರ್ಮಗಳೇ ಕೋಲು. ಸರ್ವವಿದ್ಯೆಗಳೇ ಬಂಡಿ. ಬ್ರಹ್ಮನೇ ಸಾರಥಿಯು.

ಗಾಯತ್ರೀ ಚ ಧನುಸ್ತಸ್ಯ ಓಂಕಾರೋ ಗುಣ ಏವ ಚ ।
ಸ್ವರಾಃ ಸಪ್ತ ಶರಾಸ್ತಸ್ಯ ದೇವದೇವಸ್ಯ ಸುವ್ರತ ॥ ೩೬ ॥

ಏವಂ ಕೃತ್ವಾ ಸ ಸಾಮಗ್ರೀರ್ದೇವದೇವಃ ಪ್ರತಾಪವಾನ್ ।
ಜಗಾಮ ದಕ್ಷಯಜ್ಞಾಯ ಕೋಪಾದ್ರುದ್ರಃ ಪ್ರತಾಪವಾನ್ ॥ ೩೭ ॥

ಗಚ್ಛತೋ ರುದ್ರ ದೇವಸ್ಯ ಅಂಬರಾತ್ತ (ತರಸನ್ನಯತ್) ತ್ರಚದ್ರುತಂ ।
ಋತ್ವಿಜಾಂ ಮಂತ್ರನಿಚಯೋ ನಷ್ಟಸ್ತಸ್ಯಾಗಮೋ ತದಾ ॥ ೩೮ ॥

ವಿಪರೀತಮಿದಂ ದೃಷ್ಟ್ವಾ ತದಾ ಸರ್ವೇತ್ರ ಋತ್ವಿಜಃ ।
ಊಚುಃ ಸನ್ನಹ್ಯತಾಂ ದೇವಾಃ ಮಹದ್ಭೋ ಭಯಮಾಗತಂ ॥ ೩೯ ॥

ಕಶ್ಚಿದಾಯಾತಿ ಬಲವಾನಸುರೋ ಬ್ರಹ್ಮನಿರ್ಮಿತಃ ।
ಯಜ್ಞಭಾಗಾರ್ಥಮೇತಸ್ಮಿನ್ ಕ್ರತೌ ಪರಮದುರ್ಲಭೇ ॥ ೪೦ ॥

ಏವಮುಕ್ತಾಸ್ತತೋ ದೇವಾಃ ಊಚುರ್ಮಾತಾಮಹಂತದಾ ।
ದಕ್ಷ ತಾತ ಕಿಮತ್ರಾಸ್ಮತ್ಕಾರ್ಯಂ ಬ್ರೂಹಿ ವಿವಕ್ಷಿತಂ ॥ ೪೧ ॥

೩೬–೩೭. ಗಾಯತ್ರಿಯೇ ಬಿಲ್ಲು. ಓಂಕಾರವೇ ಹೆದೆ. ಸಪ್ತಸ್ವರಗಳೇ ಬಾಣಗಳು. ಪ್ರತಾಪಶಾಲಿಯೂ, ದೇವದೇವನೂ ಆದ ರುದ್ರನು ಹೀಗೆ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು, ಕೋಪದಿಂದ ದಕ್ಷಯಜ್ಞಕ್ಕೆ ಹೋದನು.

೩೮. ಆಕಾಶ ಮಾರ್ಗದಿಂದ ಗಮಿಸುತ್ತಾ ವೇಗದಿಂದ ಅಲ್ಲಿಗೆ ಆ ರುದ್ರ ದೇವನು ಬರುತ್ತಿರಲು ಋತ್ವಿಜರ ಮಂತ್ರಗಳು ನಷ್ಟವಾದುವು.

೩೯–೪೦. ಈ ಕೇಡನ್ನು ನೋಡಿ, ಆಗ ಋತ್ವಿಕ್ಕುಗಳೆಲ್ಲರೂ "ದೇವತೆಗಳೆ ಸಿದ್ಧರಾಗಿರಿ. ನಮಗೆ ಮಹಾಭೀತಿಯಾಗಿದೆ. ಬ್ರಹ್ಮನಿಂದ ಸೃಷ್ಟನಾದ ಯಾವನೋ ಬಲಶಾಲಿಯಾದ ರಾಕ್ಷಸನು ಪರಮದುರ್ಲಭವಾದ ಈ ಯಜ್ಞದಲ್ಲಿ ಭಾಗವನ್ನು ಪಡೆಯಲು ಬರುತ್ತಿದ್ದಾನೆ." ಎಂದು ಹೇಳಿದರು.

೪೧. ದೇವತೆಗಳು ಆಗ ಅಜ್ಜನಿಗೆ "ದಕ್ಷ, ತಾತ, ಇಲ್ಲಿ ನಾವು ಮಾಡಬೇಕಾದುದೇನು? ಹೇಳಬೇಕಾದುದನ್ನು ಹೇಳು" ಎಂದರು.

॥ ದಕ್ಷ ಉವಾಚ ॥

ಊಹ್ಯಂತಾಂ ದ್ರುತಮಸ್ತ್ರಾಣಿ ಸಂಗ್ರಾಮೋತ್ರವಿಧೀಯತಾಂ ।
ಏವಮುಕ್ತೇ ತದಾ ದೇವೈರ್ವಿವಿಧಾಯುಧಧಾರಿಭಿಃ ॥
ರುದ್ರಸ್ಯಾನುಚರೈಃ ಸಾರ್ಧಂ ಮಹದ್ಯುದ್ಧಂ ಪ್ರವರ್ತಿತಂ ॥ ೪೨ ॥

ತತ್ರ ವೇತಾಲಭೂತಾನಿ ಕೂಷ್ಮಾಂಡಾ ಗ್ರಹಪೂತನಾಃ ।
ಯುಯುಧುರ್ಲೋಕಪಾಲೈಶ್ಚ ನಾನಾಯುಧಧರಾಣಿ ಚ ॥ ೪೩ ॥

ದಿವೋ ರೌದ್ರಾಣಿ ಭೂತಾನಿ ನಿರ್ಗಚ್ಛಂತೋ ಯಮಾಲಯಂ ।
ಚಿಕ್ಷಿಪುಃ ಸಾಯಕಾನ್ಘೋರಾವಸೀಪ್ರಾಸಪರಶ್ವಧಾನ್ ॥ ೪೪ ॥

ಭೂತಾನ್ಯಪಿ ಮೃಧೇ ಘೋರಾಣ್ಯುಲ್ಮುಕೈರಸ್ಥಿಭಿಃ ಶರೈಃ ।
ಜಘ್ನುರ್ದೇವಾನ್ಮೃಧೇ ರೋಷಾದ್ರುದ್ರಸ್ಯ ಪುರತೋ ಬಲಾತ್ ॥ ೪೫ ॥

---

೪೨. ದಕ್ಷ—“ಅಸ್ತ್ರಗಳನ್ನು ಬೇಗನೆ ಧರಿಸಿರಿ. ಯುದ್ಧ ಮಾಡಿರಿ” ಎಂದನು. ಅವನು ಹೀಗೆ ಹೇಳಲು ಬಗೆಬಗೆಯ ಆಯುಧಗಳನ್ನು ಧರಿಸಿದ ದೇವತೆಗಳಿಗೆ ರುದ್ರನ ಸೇವಕರೊಡನೆ ಮಹಾಯುದ್ಧವು ಮೊದಲಾಯಿತು.

೪೩. ಅಲ್ಲಿ ಬಗೆಬಗೆಯ ಆಯುಧಗಳನ್ನು ಧರಿಸಿದ ಭೂತ ಭೇತಾಳ ಪ್ರೇತ, ಗ್ರಹಪೂತನಿಗಳು ದೇವತೆಗಳ ಸಂಗಡ ಯುದ್ಧಮಾಡಿದವು.

೪೪. ಸ್ವರ್ಗದಿಂದ ಕ್ರೂರಭೂತಗಳು ಯಮಗೃಹಕ್ಕೆ ಹೋಗುತ್ತಾ ಘೋರವಾದ ಕತ್ತಿಗಳನ್ನೂ, ಬಾಣಗಳನ್ನೂ, ಈಟಿ ಗಂಡುಗೊಡಲಿಗಳನ್ನೂ ಹಾಕಿದುವು.

೪೫. ಘೋರವಾದ ಭೂತಗಳೂ ಯುದ್ಧದಲ್ಲಿ ಬೆಂಕಿಯಕೊಳ್ಳಿಗಳಿಂದಲೂ ಎಲುಬುಗಳಿಂದಲೂ, ಬಾಣಗಳಿಂದಲೂ, ರೋಷದಿಂದ ರುದ್ರನೆದುರಿಗೆ ಶಕ್ತಿಯಿಂದ ದೇವತೆಗಳನ್ನು ಹೊಡೆದುವು.

ತತಸ್ತಸ್ಮಿನ್ಮಹಾರೌದ್ರೇ ಸಂಗ್ರಾಮೇ ಭೀಮರೂಪಿಣಿ ।
ರುದ್ರೋ *ಭಗಸ್ಯ ನೇತ್ರೇ ತು ಬಿಭೇದೈಕೇಷುಣಾಮೃಧೇ ॥ ೪೬ ॥

ರುದ್ರಸ್ಯ ಶರಪಾತೇನ ನಷ್ಟನೇತ್ರಂ ಭಗಂ ತದಾ ।
ದೃಷ್ಟ್ವಾಸ್ಯ ಕ್ರೋಧಾತ್ತೇಜಸ್ವೀ *ಪೂಷಾ ರುದ್ರಮಯೋಧಯತ್ ॥ ೪೭ ॥

ಸೃಜಂತಮಿಷುಜಾಲಾನಿ ÷ಪೂಷಣಂ ತು ಮಹಾಮೃಧೇ ।
ದೃಷ್ಟ್ವಾ ರುದ್ರೋಸ್ಯ ದಂತಾಂಸ್ತು ಚಕರ್ಷ ಪರವೀರಹಾ ॥ ೪೮ ॥

ತಸ್ಯ ದಂತಾಂಸ್ತದಾ ದೃಷ್ಟ್ವಾ ಪೂಷ್ಣೋ ರುದ್ರೇಣ ಪಾತಿತಾನ್ ।
ದುದ್ರುವುಃ ಸರ್ವತೋ ದಿಕ್ಷು ರುದ್ರಾಸ್ತ್ವೇಕಾದಶ ದ್ರುತಂ ॥ ೪೯ ॥

ತಾಂ ಭಗ್ನಾಂ ಸಹಸಾ ದಿಕ್ಷು ದೃಷ್ಟ್ವಾ ವಿಷ್ಣುಃ ಪ್ರತಾಪವಾನ್ ।
ಆದಿತ್ಯಾವರಜೋ ವಾಕ್ಯಮುವಾಚ ಸ್ವಬಲಂ ತದಾ ॥ ೫೦ ॥

---

೪೬. ಬಳಿಕ ಆ ಮಹಾಭಯಂಕರವಾದ ಘೋರ ಯುದ್ಧದಲ್ಲಿ ರುದ್ರನು *ಭಗನ ಕಣ್ಣುಗಳನ್ನು ಒಂದು ಬಾಣದಿಂದ ಸೀಳಿದನು.

೪೭. ರುದ್ರನ ಬಾಣದಿಂದ ಕಣ್ಣುಗಳನ್ನು ಕಳೆದುಕೊಂಡ ಭಗನನ್ನು ಕಂಡು, ಆ ಕೋಪದಿಂದ *ಪೂಷನು ರುದ್ರನಮೇಲೆ ಯುದ್ಧಮಾಡಿದನು.

೪೮. ಆ ಮಹಾಯುದ್ಧದಲ್ಲಿ ಬಾಣಗಳ ಗುಂಪನ್ನೇ ಬಿಡುತ್ತಿದ್ದ ÷ಪೂಷಣ ನನ್ನು ನೋಡಿ ವೈರಿವೀರನಾಶಕನಾದ ರುದ್ರನು ಅವನ ಹಲ್ಲುಗಳನ್ನು ಬೀಳಿಸಿದನು.

೪೯. ಪೂಷನ ಹಲ್ಲುಗಳನ್ನು ರುದ್ರನು ಬೀಳಿಸಿದುದನ್ನು ಕಂಡು, ಏಕಾದಶ ರುದ್ರರೂ ದಿಕ್ಕುದಿಕ್ಕಿಗೆ ವೇಗವಾಗಿ ಓಡಿದರು.

೫೦–೫೩. ತಟ್ಟನೆ ದಿಕ್ಕುದಿಕ್ಕಿಗೆ ಮುರಿದೋಡಿದ ಅವರನ್ನು ನೋಡಿ ಸೂರ್ಯನ ತಮ್ಮನೂ, ಪ್ರತಾಪಶಾಲಿಯೂ ಆದ ವಿಷ್ಣುವು ತನ್ನ ಸೇನೆಯನ್ನು

---

* ದ್ವಾದಶಾದಿತ್ಯರಲ್ಲಿ ಒಬ್ಬನು.

÷ ”

ಕ್ವ ಯಾತ ಪೌರುಷಂ ತ್ಯಕ್ತ್ವಾ ದರ್ಪಂ ಮಾಹಾತ್ಮ್ಯಮೇವಚ ।
ವ್ಯವಸಾಯಂ ಕುಲಂ ಭೂತಿಂ ಕಥಂ ನ ಸ್ಮರ್ಯತೇ ದ್ರುತಂ ॥ ೫೧ ॥

ಪರಮೇಷ್ಠಿಗುಣೈರ್ಯುಕ್ತಃ ಲಬ್ಧಮಾಯುರ್ಯತಃ ಪುರಾ ।
ತಂ ನಮಸ್ಕುರುತಾಮೋಘಂ ಪೃಥಿವ್ಯಾಂ ಪದ್ಮಜಂ ಸ್ವಯಂ ॥ ೫೨ ॥

ಏವಮುಕ್ತ್ವಾ ಗರುತ್ಮಂತಮಾರುರೋಹ ಹರಿಸ್ತದಾ ।
ಶಂಖಚಕ್ರಗದಾಪಾಣಿಃ ಪೀತವಾಸಾ ಜನಾರ್ದನಃ ॥ ೫೩ ॥

ತತೋ ಹರಿಹರಂ ಯುದ್ಧಮಭವಲ್ಲೋಮಹರ್ಷಣಂ ॥ ೫೪ ॥

ರುದ್ರಃ ಪಾಶುಪತಾಸ್ತ್ರೇಣ ವಿವ್ಯಾಧ ಹರಿಮೋಜಸಾ ।
ಹರಿರ್ನಾರಾಣಾಸ್ತ್ರೇಣ ರುದ್ರಂ ವಿವ್ಯಾಧಕೋಪವಾನ್ ॥ ೫೫ ॥

ಕುರಿತು "ಪೌರುಷವನ್ನು ಕಳೆದುಕೊಂಡು ಎಲ್ಲಿ ಹೋಗುತ್ತೀರಿ? ದರ್ಪವನ್ನೂ, ಮಹಿಮೆಯನ್ನೂ, ಪ್ರಯತ್ನವನ್ನೂ, ಕುಲವನ್ನೂ, ಐಶ್ವರ್ಯವನ್ನೂ ಏಕೆ ತಟ್ಟನೆ ಜ್ಞಾಪಿಸಿಕೊಳ್ಳುವುದಿಲ್ಲ! ಬ್ರಹ್ಮಗುಣದಿಂದ ನೀವು ಪೂರ್ವದಲ್ಲಿ ಯಾರಿಂದ ಆಯುಸ್ಸನ್ನು ಪಡೆದರೋ, ಆ ಬ್ರಹ್ಮನನ್ನು ದೃಢಭಕ್ತಿಯಿಂದ ನಮಸ್ಕರಿಸಿರಿ." ಎಂದು ಹೇಳಿ ಶಂಖ ಚಕ್ರಗದಾಪಾಣಿಯೂ, ಪೀತಾಂಬರಧಾರಿಯೂ, ಜನಾರ್ದನನೂ ಆದ ವಿಷ್ಣುವು ಆಗ ಗರುಡನನ್ನೇರಿದನು.

೫೪. ಬಳಿಕ ರೋಮಾಂಚವನ್ನುಂಟುಮಾಡುವ ಹರಿಹರಯುದ್ಧವು ನಡೆಯಿತು.

೫೫. ರುದ್ರನು ಪಾಶುಪತಾಸ್ತ್ರದಿಂದ ಹರಿಯನ್ನು ಬಲ(ಗರ್ವ)ದಿಂದ ಹೊಡೆದನು. ಕೋಪಗೊಂಡ ವಿಷ್ಣುವು ನಾರಾಯಣಾಸ್ತ್ರದಿಂದ ರುದ್ರನನ್ನು ಹೊಡೆದನು.

ನಾರಾಯಣಂ ಪಾಶುಪತಮುಭೇಸ್ತ್ರೇ ವ್ಯೋಮ್ನಿ ರೋಷಿತೇ ।
ಯುಯುಧಾತೇ ಭೃಶಂ ದಿವ್ಯಂ ಪರಸ್ಪರ ಜಿಘಾಂಸಯಾ ॥
ದಿವ್ಯಂ ವರ್ಷಸಹಸ್ರಂ ತು ತಯೋರ್ಯುದ್ಧಮಭೂತ್ತದಾ ॥ ೫೬ ॥

ತತ್ರೈಕಂ ಮಕುಟೋದ್ಬದ್ಧಮನ್ಯಚ್ಚ ಜಟಜಾಲಕಂ ।
ಏಕಂ ಪ್ರಧ್ಮಾಪಯಚ್ಛಂಖಮನ್ಯಡ್ಡಮರುಕಂ ಶುಭಂ ॥ ೫೭ ॥

ಏಕಂ ಖಡ್ಗಕರಂ ತತ್ರ ತಥಾನ್ಯದ್ದಂಡಧಾರಿಣಂ ।
ಏಕಂ ಕೌಸ್ತುಭದೀಪ್ತಾಂಗಮನ್ಯಂ ಭಸ್ಮವಿಭೂಷಿತಂ ॥ ೫೮ ॥

ಏಕಂ ಗದಾಂ ಭ್ರಾಮಯಂತ ದ್ವಿತೀಯಂ ದಂಡಮೇವಚ ।
ಏಕಂ ಶೋಭತಿ ಕಂಠಸ್ಥೈರ್ಮಣಿಭಿಃ ಸ್ವಸ್ಥಿಭಿಃ ಪರಂ ॥ ೫೯ ॥

ಏಕಂ ಪೀತಾಂಬರಂ ತತ್ರ ದ್ವಿತೀಯಂ ಸರ್ಪಮೇಖಲಂ ।
ಏವಂ ತೇ ಸ್ಪರ್ಧಿನಾವಸ್ತ್ರೇ ರೌದ್ರನಾರಾಯಣಾತ್ಮಕೇ ॥ ೬೦ ॥

---

೫೬. ದಿವ್ಯವಾದ ನಾರಾಯಣಪಾಶುಪತಾಸ್ತ್ರಗಳೆರಡೂ ರೋಷವುಳ್ಳವುಗಳಾಗಿ ಒಂದನ್ನೊಂದು ನಾಶಮಾಡಬೇಕೆಂದು ಆಕಾಶದಲ್ಲಿ ಬಲವಾಗಿ ಯುದ್ಧ ಮಾಡಿದುವು. ದೇವತೆಗಳಸಾವಿರವರ್ಷಕಾಲ ಆಗಿನ ಆ ಯುದ್ಧವು ನಡೆಯಿತು.

೫೭–೬೧. ಒಂದು ಪೀತಾಂಬರ ಕಿರೀಟಧಾರಿಯಾಗಿ ಕೌಸ್ತುಭದಿಂದಲೂ ಕೊರಳ ರತ್ನಹಾರದಿಂದಲೂ ಹೊಳೆಯುವ ಅವಯವಗಳುಳ್ಳದಾಗಿ ಶಂಖವನ್ನೂದುತ್ತಾ, ಕತ್ತಿಯನ್ನು ಹಿಡಿದು ಗದೆಯನ್ನು ತಿರುಗಿಸುತ್ತಲೂ, ಮತ್ತೊಂದು ಜಡೆಮುಡಿಯನ್ನೂ, ಸರ್ಪದುಡಿದಾರವನ್ನೂ ಧರಿಸಿ ಭಸ್ಮಾಸ್ಥಿಭೂಷಿತಾಂಗವುಳ್ಳದಾಗಿ, ಡಮರುಕವನ್ನು ಬಾರಿಸುತ್ತಾ, ದಂಡಧಾರಿಯಾಗಿ ಅದನ್ನೇ ತಿರುಗಿಸುತ್ತಲೂ ಅಸ್ತ್ರಗಳಿಂದ ಪರಸ್ಪರಾತಿಶಯವುಳ್ಳವಾಗಿ ಹೋರಾಡುತ್ತಿರುವ ನಾರಾಯಣ

ಅನ್ಯೋನ್ಯಾತಿಶಯೋಪೇತೇ ತದಾಲೋಕ್ಯ ಪಿತಾಮಹಃ ।
ಉವಾಚ ಶಾಮ್ಯತಾಮಸ್ತ್ರೇ ಸ್ವಸ್ವಭಾವೇನ ಸುವ್ರತೇ ॥ ೬೧ ॥

ಏವಂ ತೇ ಬ್ರಹ್ಮಣಾ ಪ್ರೋಕ್ತೇ ಶಾಂತಭಾವಂ ಪ್ರಜಗ್ಮತುಃ ॥ ೬೨ ॥

ಅಥ ವಿಷ್ಣುಹರೌ ಬ್ರಹ್ಮಾ ವಾಕ್ಯಮೇತದುವಾಚ ಹ ।
ಬಭೌ ಹರಿಹರೌ ದೇವೌ ಲೋಕೇ ಖ್ಯಾತಿ ಗಮಿಷ್ಯಥಃ ॥ ೬೩ ॥

ಅಯಂ ಚ ಯಜ್ಞೋ ವಿಧ್ವಸ್ತಃ ಸಂಪೂರ್ಣತ್ವಂ ಗಮಿಷ್ಯತಿ ।
ದಕ್ಷಸ್ಯ ಖ್ಯಾತಿಮಾಂಲ್ಲೋಕೇ ಸಂತತ್ಯಾಯಂ ಭವಿಷ್ಯತಿ ॥ ೬೪ ॥

ಏವಮುಕ್ತ್ವಾ ಹರಿಹರೌ ತದಾ ಲೋಕಪಿತಾಮಹಃ ।
ಬ್ರಹ್ಮಾ ಲೋಕಾನುವಾಚೇದಂ ರುದ್ರಭಾಗೋಽಸ್ಯ ದೀಯತಾಂ ॥ ೬೫ ॥

ರುದ್ರಭಾಗೋ ಜ್ಯೇಷ್ಠಭಾಗ ಇತೀಯಂ ವೈದಿಕೀ ಶ್ರುತಿಃ ।
ಸ್ತುತಿಂಚ ದೇವಾಃ ಕುರುತ ರುದ್ರಸ್ಯ ಪರಮೇಷ್ಠಿನಃ ॥ ೬೬ ॥

ರುದ್ರಾತ್ಮಕವಾದ ಆ ಅಸ್ತ್ರಗಳನ್ನು ಬ್ರಹ್ಮನು ನೋಡಿ, "ನಿಮ್ಮ ನಿಮ್ಮ ಸ್ವಭಾವ ದಿಂದ, ಸುವ್ರತಿಗಳೇ, ಶಾಂತರಾಗಿರಿ" ಎಂದು ಹೇಳಿದನು.

೬೨. ಬ್ರಹ್ಮನು ಹೀಗೆ ಹೇಳಲು ಆ ನಾರಾಯಣ ಪಾಶುಪತಾಸ್ತ್ರಗಳು ಶಾಂತಭಾವವನ್ನು ಪಡೆದುವು.

೬೩-೬೪. ಬಳಿಕ ಬ್ರಹ್ಮನು ಹರಿಹರರನ್ನು ಕುರಿತು "ಹರಿಹರದೇವರೇ, ನೀವಿಬ್ಬರೂ ಲೋಕದಲ್ಲಿ ಪ್ರಸಿದ್ಧಿಯನ್ನು ಪಡೆಯುವಿರಿ. ಧ್ವಂಸವಾದ ಈ ಯಜ್ಞವು ಸಂಪೂರ್ಣತೆಯನ್ನು ಪಡೆಯುವುದು. ಈ ದಕ್ಷನು ತನ್ನ ಸಂತತಿ ಯಿಂದ ಲೋಕಪ್ರಸಿದ್ಧನಾಗುವನು" ಎಂಬ ಈ ಮಾತನ್ನು ಹೇಳಿದನು.

೬೫-೬೬. ಲೋಕಪಿತಾಮಹ(ಅಜ್ಜ)ನಾದ ಬ್ರಹ್ಮನು ಹರಿಹರರಿಗೆ ಹೀಗೆ ಹೇಳಿ ಲೋಕಗಳಿಗೆ ಹೀಗೆ ಹೇಳಿದನು. "ಈ ರುದ್ರನ ಭಾಗವನ್ನು ಇವನಿಗೆ ಕೊಡಬೇಕು. ರುದ್ರಭಾಗವು ಜ್ಯೇಷ್ಠಭಾಗ ಎಂಬಿದು ವೇದಶ್ರುತಿ. ದೇವತೆ ಗಳೇ ಉತ್ಕೃಷ್ಟಸ್ಥಾನದಲ್ಲಿರುವ ರುದ್ರನ ಸ್ತುತಿಯನ್ನೂ ಮಾಡಿರಿ."

ಭಗನೇತ್ರಹರಂ ದೇವಂ ಪೂಷ್ಣೋ ದಂತವಿನಾಶನಂ ।
ಸ್ತುತಿಂ ಕುರುತ ವಃ ಶೀಘ್ರಂ ಗೀತೈರೇತೈಸ್ತು ನಾಮಭಿಃ ॥
ಯೇನಾಯಂ ವಃ ಪ್ರಸನ್ನಾತ್ಮಾ ವರದತ್ವಂ ಭಜೇತ ಹ ॥ ೬೭ ॥

ಏವಮುಕ್ತಾಸ್ತು ತೇ ದೇವಾಃ ಸ್ತೋತ್ರಂ ಶಂಭೋರ್ಮಹಾತ್ಮನಃ ।
ಚಕ್ರುಃ ಪರಮಯಾ ಭಕ್ತ್ಯಾ ನಮಸ್ಕೃತ್ಯ ಸ್ವಯಂಭುವೇ ॥ ೬೮ ॥

॥ ದೇವಾ ಊಚುಃ ॥

ನಮೋ ವಿಷಮನೇತ್ರಾಯ ನಮಸ್ತೇ ತ್ರ್ಯಂಬಕಾಯ ಚ ॥ ೬೯ ॥

ನಮಃ ಸಹಸ್ರನೇತ್ರಾಯ ನಮಸ್ತೇ ಶೂಲಪಾಣಯೇ ।
ನಮಃ *ಖಟ್ವಾಂಗಹಸ್ತಾಯ ನಮಸ್ತೇ ದಂಡಧಾರಿಣೇ ॥ ೭೦ ॥

ತ್ವಂ ದೇವ ಹುತಭುಗ್ಜ್ವಾಲಾಕೋಟಿಭಾನುಸಮಪ್ರಭಃ ।
ಅದರ್ಶನೇ ವಯಂ ದೇವ ಮೂಢಾ ವಿಜ್ಞಾನತೋಧುನಾ ॥ ೭೧ ॥

---

೬೭. "ಭಗನೇತ್ರಹರನೂ, ಪೂಷನ ಹಲ್ಲುಮುರಿದವನೂ ಆದ ದೇವನನ್ನು ಈ ನಾಮಗಳಿಂದ ಕೂಡಿದ ನಿಮ್ಮ ಗೀತ (ಶ್ಲೋಕ)ಗಳಿಂದ ಬೇಗನೆ ಸ್ತುತಿಸಿರಿ. ಅದರಿಂದ ಪ್ರಸನ್ನಾತ್ಮನಾದ ಇವನು ನಿಮಗೆ ವರದನಾಗುವನು."

೬೮. ಹೀಗೆ ಹೇಳಿಸಿಕೊಂಡ ಆ ದೇವತೆಗಳು ಪರಮಭಕ್ತಿಯಿಂದ ಬ್ರಹ್ಮನಿಗೆ ನಮಸ್ಕರಿಸಿ, ಮಹಾತ್ಮನಾದ ಶಂಭುವಿನ ಸ್ತೋತ್ರವನ್ನು ಮಾಡಿದರು.

೬೯. ದೇವತೆಗಳು—ವಿಷಮನೇತ್ರನಿಗೆ ನಮಸ್ಕಾರ. ತ್ರಿನಯನನಾದ ನಿನಗೆ ನಮಸ್ಕಾರ.

೭೦. ಸಾವಿರಕಣ್ಣುಳ್ಳವನಿಗೆ ನಮಸ್ಕಾರ. ಶೂಲಪಾಣಿಗೆ ನಮಸ್ಕಾರ. *ಖಟ್ವಾಂಗಹಸ್ತನಿಗೆ ನಮಸ್ಕಾರ. ದಂಡಧಾರಿಯಾದ ನಿನಗೆ ನಮಸ್ಕಾರ.

೭೧. ದೇವಾ, ನೀನು ಕೋಟ್ಯಂತರ ಅಗ್ನಿಜ್ವಾಲೆಗೂ ಕೋಟಿಸೂರ್ಯರಿಗೂ ಸಮಾನವಾದ ಕಾಂತಿಯುಳ್ಳವನು. ದೇವಾ, ನಿನ್ನ ದರ್ಶನವಿಲ್ಲದುದರಿಂದ ನಾವು ಇದುವರೆಗೆ ಜ್ಞಾನವಿಲ್ಲದ ಮೂಢರಾಗಿದ್ದೆವು.

---

* ಮಂಚದ ಕಾಲಿನಂತಿರುವ ಒಂದು ಆಯುಧ.

ನಮಸ್ತ್ರಿನೇತ್ರಾರ್ತಿಹರಾಯ ಶಂಭೋ
ತ್ರಿಶೂಲಪಾಣೇ ವಿಕೃತಾಸ್ಯರೂಪ ।
ಸಮಸ್ತದೇವೇಶ್ವರ ಶುದ್ಧಭಾವ
ಪ್ರಸೀದ ರುದ್ರಾಚ್ಯುತ ಸರ್ವಭಾವ ॥ ೭೨ ॥

ಪೂಷ್ಣೋಸ್ಯ ದಂತಾಂತಕ ಭೀಮರೂಪ
ಪ್ರಲಂಬಭೋಗೀಂದ್ರಮನೋಜ್ಞಕಂಠ ।
ವಿಶಾಲದೇಹಾಚ್ಯುತ ನೀಲಕಂಠ
ಪ್ರಸೀದ ವಿಶ್ವೇಶ್ವರ ವಿಶ್ವಮೂರ್ತೇ ॥ ೭೩ ॥

ಭಗಾಕ್ಷಿಸಂಸ್ಫೋಟನದಕ್ಷಕರ್ಮನ್
ಗೃಹಾಣ ಭಾಗಂ ಮಖತಃ ಪ್ರಧಾನಂ ।
ಪ್ರಸೀದ ದೇವೇಶ್ವರ ನೀಲಕಂಠ
ಪ್ರಪಾಹಿ ನಃ ಸರ್ವಗುಣೋಪಪನ್ನ ॥ ೭೪ ॥

---

೭೨. ಪೀಡಾಪರಿಹಾರಕನಾದ ತ್ರಿನೇತ್ರನೇ, ಶಂಭೂ, ತ್ರಿಶೂಲಪಾಣೇ, ವಿಕಾರವಾದ ಮುಖವೂ ರೂಪವೂ ಉಳ್ಳವನೇ, ನಿನಗೆ ನಮಸ್ಕಾರ. ಸಮಸ್ತ ದೇವೇಶ್ವರ, ಶುದ್ಧಭಾವ, ರುದ್ರ, ನಾಶರಹಿತ, ಸರ್ವಭಾವ, ಪ್ರಸನ್ನನಾಗು.

೭೩. ಈ ಪೂಷನ ಹಲ್ಲುಗಳನ್ನು ಕಳೆದವನೆ, ಭಯಂಕರರೂಪ, ಬಹಳ ಉದ್ದವಾದ ನಾಗೇಂದ್ರನಿಂದೊಪ್ಪುವ ಕೊರಳುಳ್ಳವನೆ, ವಿಶಾಲದೇಹನೆ, ಅಚ್ಯುತ, ನೀಲಕಂಠ, ವಿಶ್ವೇಶ್ವರ, ವಿಶ್ವಮೂರ್ತಿ, ಪ್ರಸನ್ನನಾಗು.

೭೪. ಭಗನ ಕಣ್ಣುಗಳನ್ನೊಡೆಯುವ ಶಕ್ತಿಯುಕಾರ್ಯವುಳ್ಳವನೇ, ಯಜ್ಞದಿಂದ ಮುಖ್ಯವಾದ ಭಾಗವನ್ನು ಪರಿಗ್ರಹಿಸು. ದೇವೇಶ್ವರ, ನೀಲಕಂಠ, ಸರ್ವಗುಣಯುತ, ಪ್ರಸನ್ನನಾಗಿ ನಮ್ಮನ್ನು ಪರಿಪಾಲಿಸು.

ಸಿತಾಂಗರಾಗಾಪ್ರತಿಪನ್ನಮೂರ್ತೇ
ಕಪಾಲಧಾರಿಂಸ್ತ್ರಿಪುರಘ್ನ ದೇವ ।
ಪ್ರಪಾಹಿನಃ ಸರ್ವಭಯೇಷು ಚೈವಂ
ಉಮಾಪತೇ ಪುಷ್ಕರನಾಲಜನ್ಮ ॥ ೭೫ ॥

ಪಶ್ಯಾಮಿ ತೇ ದೇಹಗತಾನ್ಸುರೇಶ
ಸರ್ಗಾದ್ಯಕಾನ್ವೇದವರಾನನಂತ ।
ಸಾಂಗಾನ್ಸವಿದ್ಯಾನ್ಸಪದಕ್ರಮಾಂಶ್ಚ
ಸರ್ವಾನಿಲೀನಾಸ್ತ್ವಯಿ ದೇವದೇವ ॥ ೭೬ ॥

ಭವ ಶರ್ವ ಮಹಾದೇವ ಪಿನಾಕಿನ್ರುದ್ರತೇ ಹರ ।
ನತಾಃ ಸ್ಮ ಸರ್ವೇ ವಿಶ್ವೇಶ ತ್ರಾಹಿ ನಃ ಪರಮೇಶ್ವರ ॥ ೭೭ ॥

ಇತ್ಥಂ ಸ್ತುತಸ್ತದಾ ದೇವೈರ್ದೇವದೇವೋ ಮಹೇಶ್ವರಃ ।
ತುತೋಷ ಸರ್ವದೇವಾನಾಂ ವಾಕ್ಯಂ ಚೇದಮುವಾಚ ಹ ॥ ೭೮ ॥

---

೭೫. ಬಿಳಿಯ(ವ್ಯ)ಬಣ್ಣವನ್ನೂ ವಿಭೂತಿಯನ್ನೂ ಧರಿಸಿರುವ ಮೂರ್ತಿಯುಳ್ಳವನೇ, ಕಪಾಲಧಾರೀ, ತ್ರಿಪುರಾಂತಕ, ಕಮಲನಾಳೋದ್ಭವ, ಉಮಾಪತೀ, ದೇವಾ, ಎಲ್ಲಾ ಭಯಗಳಿಂದಲೂ ಕಾಪಾಡು.

೭೬. ದೇವೇಶ, ಅನಂತ, ಸೃಷ್ಟಿಮೊದಲಾದುವುಗಳೂ ಸರ್ಗಗಳಿಂದ ಕೂಡಿದ ಸಾಂಗಗಳೂ, ಸವಿದ್ಯೆಗಳೂ, ಪದಕ್ರಮಸಹಿತಗಳೂ ಆದ ಉತ್ತಮವಾದ ವೇದಗಳೂ ಸರ್ವವೂ ನಿನ್ನಲ್ಲಿ ಅಡಗಿ ನಿನ್ನ ದೇಹದಲ್ಲಿರುವುವೆಂದು ತಿಳಿಯುತ್ತೇವೆ.

೭೭. ಭವ, ಶರ್ವ, ಮಹಾದೇವ, ಪಿನಾಕೀ, ರುದ್ರ, ಹರ, ವಿಶ್ವೇಶ, ಪರಮೇಶ್ವರ, ಎಲ್ಲರೂ ನಿನಗೆ ನಮಸ್ಕರಿಸಿದವರಾಗಿದ್ದೇವೆ. ನಮ್ಮನ್ನು ರಕ್ಷಿಸು.

೭೮. ಆಗ ದೇವತೆಗಳಿಂದ ಹೀಗೆ ಸ್ತುತನಾದ ದೇವದೇವನಾದ ಮಹೇಶ್ವರನು ಸಂತೋಷಪಟ್ಟು, ದೇವತೆಗಳೆಲ್ಲರಿಗೂ ಮುಂದಿನ ಮಾತನ್ನು ಹೇಳಿದನು.

|| ರುದ್ರ ಉವಾಚ ||

ಭಗಸ್ಯ ನೇತ್ರಂ ಭವತು ಪೂಷ್ಣೋ ದಂತಾಸ್ತಥಾಮುಖೇ ।
ದಕ್ಷಸ್ಯಾಚ್ಛಿದ್ರತಾಂ ಯಾತು ಯಜ್ಞಶ್ಚಾಪ್ಯದಿತೇಃ ಸುತಾಃ || ೭೯ ||

ಪಶುಭಾವಂ ತಥಾ ಚಾಪಿ ಅಪನೇಷ್ಯಾಮಿ ವಃ ಸುರಾಃ ।
ಮದ್ದರ್ಶನೇನ ಯೋ ಜಾತಃ ಪಶುಭಾವೋ ದಿವೌಕಸಾಂ || ೮೦ ||

ಸ ಮಯಾಪಹೃತಃ ಸದ್ಯಃ ಪತಿತ್ವಂ ವೋ ಭವಿಷ್ಯತಿ ।
ಅಹಂ ಚ ಸರ್ವವಿದ್ಯಾನಾಂ ಪತಿರಾದ್ಯಃ ಸನಾತನಃ || ೮೧ ||

ಅಹಂ ವೈ ಪತಿಭಾವೇನ ಪಶುಮಧ್ಯೇ ವ್ಯವಸ್ಥಿತಃ ।
ಅತಃ ಪಶುಪತಿರ್ನಾಮ ಮಮ ಲೋಕೇ ಭವಿಷ್ಯತಿ || ೮೨ ||

ಯೇ ಮಾಂ ಯಜಂತಿ ತೇಷಾಂ ಸ್ಯಾದ್ದೀಕ್ಷಾ ಪಾಶುಪತೀ ಭವೇತ್ || ೮೩ ||

ಏವಮುಕ್ತೇತು ರುದ್ರೇಣ ಬ್ರಹ್ಮಾ ಲೋಕಪಿತಾಮಹಃ ।
ಉವಾಚ ರುದ್ರಂ ಸಸ್ನೇಹಂ ಸ್ಮಿತಪೂರ್ವಮಿದಂ ವಚಃ || ೮೪ ||

೭೯–೮೧. ರುದ್ರನು—"ಭಗನಿಗೆ ಕಣ್ಣುಗಳೂ, ಪೂಷನಿಗೆ ಬಾಯಲ್ಲಿ ಹಲ್ಲುಗಳೂ ಬರಲಿ. ದಕ್ಷನ ಯಜ್ಞವೂ ಲೋಪವಿಲ್ಲದಂತೆ ಪೂರ್ಣವಾಗಲಿ. ಅದಿತಿ ಪುತ್ರರೇ, ದೇವತೆಗಳೇ, ನಿಮ್ಮ ಪಶುಭಾವವನ್ನು(ಅಜ್ಞಾನವನ್ನು) ಹೋಗಲಾಡಿಸುತ್ತೇನೆ. ನನ್ನನ್ನು ನೋಡಿದುದರಿಂದ ದೇವತಗಳಿಗೆ ಉಂಟಾಗಿದ್ದ ಪಶುತ್ವ (ಅಜ್ಞಾನ)ವನ್ನು ನಾನು ಈಗಲೇ ಹೋಗಲಾಡಿಸಿದ್ದೇನೆ. ನಿಮಗೆ ಒಡೆತನವೂ ಉಂಟಾಗುವುದು. ನಾನು ಸನಾತನನು. ಸರ್ವವಿದ್ಯೆಗಳಿಗೂ ಮುಖ್ಯಾಧಿಪತಿ.

೮೨–೮೩. ನಾನು ಪ್ರಭುತ್ವದಿಂದ ಪ್ರಮಥಗಣಗಳ ಮತ್ತು ಪಶುಗಳ ಮಧ್ಯದಲ್ಲಿದ್ದುದರಿಂದ ನನಗೆ ಲೋಕದಲ್ಲಿ ಪಶುಪತಿಯೆಂಬ ಹೆಸರುಂಟಾಗುವುದು. ಯಾರು ಪೂಜಿಸುವರೋ ಅವರ ನಿಯಮವು ಪಾಶುಪತ ದೀಕ್ಷೆಯೆನಿಸುವುದು."

೮೪-೮೫. ರುದ್ರನು ಹೀಗೆ ಹೇಳಲು, ಲೋಕಪಿತಾಮಹನಾದ ಬ್ರಹ್ಮನು ರುದ್ರನಿಗೆ ಪ್ರೀತಿಪೂರ್ವಕವಾಗಿ ಮುಗುಳುನಗೆಯಿಂದ "ದೇವ ಪಶುಪತಿಯಿಂದ

ಧ್ರುವಂ ಪಶುಪತಿರ್ದೇವ ತ್ವಂ ಲೋಕೇ ಖ್ಯಾತಿಮೇಷ್ಯಸಿ ।
ಅಯಂ ಚ ದೇವಸ್ತನ್ನಾಮ್ನಾ ಲೋಕೇ ಖ್ಯಾತಿಂ ಗಮಿಷ್ಯತಿ ||
ಆರಾಧ್ಯಶ್ಚ ಸಮಸ್ತಾನಾಂ ಲೋಕಾದೀನಾಂ ಗಮಿಷ್ಯತಿ || ೮೫ ||

ಏವಮುಕ್ತ್ವಾ ತದಾ ಬ್ರಹ್ಮಾ ದಕ್ಷಂ ಪ್ರೋವಾಚ ಬುದ್ಧಿಮಾನ್ ।
ಗೌರೀಂ ಪ್ರಯಚ್ಛ ರುದ್ರಾಯ ಪೂರ್ವಮೇವೋಪಪಾದಿತಾಂ || ೮೬ ||

ಏವಮುಕ್ತ್ವಾ ತದಾ ದೇವಸ್ತಾಂ ಕನ್ಯಾಂ ದಕ್ಷಸನ್ನಿಧೌ ।
ದದೌ ರುದ್ರಾಯ ಮಹತೇ ಗೌರೀಂ ಪರಮಶೋಭನಾಂ || ೮೭ ||

ದಕ್ಷಸ್ಯ ಚ ಪ್ರಿಯಂ ಕುರ್ವನ್ ಬಹುಮಾನಪುರಸ್ಸರಂ ।
ಗೃಹೀತಾಯಾಂ ತು ಕನ್ಯಾಯಾಂ ದಾಕ್ಷಾಯಣ್ಯಾಂ ಪಿತಾಮಹಃ ।
ದದೌ ರುದ್ರಾಯ ನಿಲಯಂ ಕೈಲಾಸಂ ಸುರಸನ್ನಿಧೌ || ೮೮ ||

ರುದ್ರೋಽಪಿ ಪ್ರಯಯೌ ಭೂತೈಃ ಸಮಂ ಕೈಲಾಸಪರ್ವತಂ || ೮೯ ||

ನೀನು ಲೋಕದಲ್ಲಿ ಸ್ಥಿರವಾದ ಪ್ರಸಿದ್ಧಿಯನ್ನು ಪಡೆಯುವೆ. ಈ ವಿಷ್ಣುದೇವನೂ ಅವನ ಹೆಸರಿನಿಂದ ಲೋಕದಲ್ಲಿ ಪ್ರಸಿದ್ಧನಾಗುವನು. ಅಲ್ಲದೇ ಜನರೇ ಮೊದಲಾದ ಸಮಸ್ತರಿಗೂ ಪೂಜ್ಯನಾಗುವನು." ಎಂದು ಹೇಳಿದನು.

೮೬. ರುದ್ರನಿಗೆ ಹೀಗೆ ಹೇಳಿ ಬುದ್ಧಿವಂತನಾದ ಬ್ರಹ್ಮನು ದಕ್ಷನನ್ನು ಕುರಿತು, "ಪೂರ್ವದಲ್ಲಿಯೇ ಕೊಟ್ಟಿದ್ದ ಗೌರಿಯನ್ನು ರುದ್ರನಿಗೆ ಈಗ ಒಪ್ಪಿಸು." ಎಂದು ನುಡಿದನು.

೮೭. ಹೀಗೆ ನುಡಿದು ಬ್ರಹ್ಮದೇವನು ದಕ್ಷನೆದುರಾಗಿ ಪರಮಮಂಗಳೆಯಾದ ಆ ಗೌರಿಯನ್ನು ಮಹಾತ್ಮನಾದ ರುದ್ರನಿಗೆ ಕೊಟ್ಟನು.

೮೮. ಕನ್ಯೆಯಾದ ದಾಕ್ಷಾಯಿಣಿಯನ್ನು ರುದ್ರನು ಪರಿಗ್ರಹಿಸಲಾಗಿ ಬ್ರಹ್ಮನು ದಕ್ಷನಿಗೂ ಹಿತವನ್ನು ಮಾಡಬೇಕೆಂದು ದೇವಸನ್ನಿಧಿಯಲ್ಲಿ ಕೈಲಾಸವನ್ನು ರುದ್ರನಿಗೆ ವಾಸಸ್ಥಾನವನ್ನಾಗಿ ಬಹುಮಾನಪೂರ್ವಕವಾಗಿ ಕೊಟ್ಟನು

೮೯. ರುದ್ರನು ಕೈಲಾಸಪರ್ವತಕ್ಕೆ ಭೂತಗಳೊಡನೆ ಹೊರಟುಹೋದನು.

ದೇವಾಶ್ಚಾಪಿ ಯಥಾಸ್ಥಾನಂ ಸ್ವಂ ಸ್ವಂ ಜಗ್ಮುರ್ಮುದಾನ್ವಿತಾಃ ।
ಬ್ರಹ್ಮಾಪಿ ದಕ್ಷಸಹಿತಃ ಪ್ರಾಜಾಪತ್ಯಂ ಪುರಂ ಯಯೌ ॥ ೯೦ ॥

ಇತಿ ಶ್ರೀ ವರಾಹಪುರಾಣೇ ಆದಿಕೃತ್ತಾಂತೇ ಮಹಾತಪ ಉಪಾಖ್ಯಾನೇ ಗೌರ್ಯುತ್ಪತ್ತಿರ್ನಾಮ ಏಕವಿಂಶೋಽಧ್ಯಾಯಃ

---

೯೦. ದೇವತೆಗಳೂ ಸಂತೋಷದಿಂದ ತಂತಮ್ಮೆಡೆಗಳಿಗೆ ಹೊರಟು ಹೋದರು. ಬ್ರಹ್ಮನೂ ದಕ್ಷನೊಡನೆ ಸತ್ಯಲೋಕಕ್ಕೆ ತೆರಳಿದನು.

ಅಧ್ಯಾಯದ ಸಾರಾಂಶ :—

ಮಹಾತಪಮುನಿಯು ಪ್ರಜಾಪಾಲನಿಗೆ ಗೌರಿಯ ಜನನ ವಿವಾಹಾದಿಗಳ ವಿಚಾರವನ್ನು ತಿಳಿಸುವನು.—ಪೂರ್ವದಲ್ಲಿ ಬ್ರಹ್ಮನು ಪ್ರಜೆಗಳನ್ನು ಸೃಷ್ಟಿಸಲು ಬಯಸಿ, ಒಡನೆಯೇ ಆಗದಿರಲು ಕೋಪವುಂಟಾಯಿತು. ಆ ಕೋಪದಿಂದ ರುದ್ರನುದಿಸಿದನು. ಹುಟ್ಟಿದೊಡನೆ ಅಳುತ್ತಿದ್ದುದರಿಂದ ಅವನಿಗೆ ರುದ್ರನೆಂದೇ ನಾಮಕರಣವಾಯಿತು. ಬ್ರಹ್ಮನು ಸ್ವದೇಹದಿಂದಲೇ ಉದಿಸಿದ ಗೌರಿಯೆಂಬ ಕನ್ನೆಯನ್ನು ರುದ್ರನಿಗೆ ವಿವಾಹ ಮಾಡಿಕೊಟ್ಟು, ಪ್ರಜೆಗಳನ್ನು ಸೃಷ್ಟಿಸಲು ಹೇಳಿದನು. ತಪೋಹೀನನಾದ ತಾನು ಸೃಷ್ಟಿಸಲಾಗುವುದಿಲ್ಲವೆಂದು ರುದ್ರನು ತಪಸ್ಸಿಗಾಗಿ ನೀರಿನಲ್ಲಿ ಮುಳುಗಿದನು. ಬ್ರಹ್ಮನು ಗೌರಿಯನ್ನು ಮತ್ತೆ ತನ್ನ ದೇಹದಲ್ಲಿ ಅಡಗಿಸಿ ದಕ್ಷಬ್ರಹ್ಮನನ್ನೂ ಸೃಷ್ಟಿಗಾಗಿ ಸೃಜಿಸಿ ನಿಯಮಿಸಿದನು. ಇಂದ್ರಾದಿ ದೇವತೆಗಳೂ ದಕ್ಷಪುತ್ರಿಯರ ಮಕ್ಕಳು ಗೌರಿಯು ಮತ್ತೆ ದಕ್ಷನಲ್ಲಿ ದಾಕ್ಷಾಯಣಿಯೆಂಬ ಹೆಸರಿನಿಂದುದಿಸಿ ಬೆಳೆಯುತಿದ್ದಳು. ದಕ್ಷನು ಯಜ್ಞವನ್ನು ಆರಂಭಿಸಿದನು. ಹಿಂದೆ ನೀರಿನಲ್ಲಿ ಮುಳುಗಿದ್ದ ರುದ್ರನು ಆಗ ಮೇಲೆದ್ದು, ಪ್ರಪಂಚವು ಸೃಷ್ಟಿಯಿಂದ ತುಂಬಿರುವುದನ್ನೂ, ಯಜ್ಞದ ಧ್ವನಿಯನ್ನೂ ಕೇಳಿ ತಾನು ಮಾಡಬೇಕಾಗಿದ್ದ ಸೃಷ್ಟಿಯು ಬೇರೆಯವರಿಂದಾದುದಕ್ಕೆ ಅತಿಕೋಪವುಳ್ಳವನಾದನು. ಆತನ ಕಿವಿಯಿಂದ ಭೂತಬೇತಾಳಾದಿ ಅಸಂಖ್ಯಾತ ವೀರರುದಿಸಿದರು. ಅವರ ಜೊತೆಯಲ್ಲಿ ಹೋಗಿ ದಕ್ಷಯಜ್ಞಭಂಗಮಾಡಿದನು. ಹರಿಹರ ಯುದ್ಧ—ನಾರಾಯಣ ಪಾಶುಪತಾಸ್ತ್ರಗಳು ಸಾವಿರಾರು ವರ್ಷ ಹೊಡೆದಾಡಿದವು. ಅಷ್ಟರಲ್ಲಿ ಬ್ರಹ್ಮನು ಬಂದು ಸಮಾಧಾನಮಾಡಿ, ರುದ್ರನಿಗೂ ಯಜ್ಞಭಾಗವು ಸಲ್ಲುವಂತೆಯೂ ದೇವತೆಗಳು ರುದ್ರನನ್ನು ಸ್ತುತಿಸುವಂತೆಯೂ, ಯಜ್ಞವು ಪೂರ್ತಿಯಾಗುವಂತೆಯೂ ಮಾಡಿ ದಕ್ಷಪುತ್ರಿಯಾದ ಗೌರಿಯನ್ನು ಮತ್ತೆ ರುದ್ರನಿಗೊಪ್ಪಿಸಿ ಕೈಲಾಸವನ್ನು ಅವನಿಗೆ ವಾಸಕ್ಕಾಗಿ ಬಹುಮಾನ ಪೂರ್ವಕವಾಗಿ ಕೊಟ್ಟನು. ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಇಪ್ಪತ್ತೊಂದನೆಯ ಅಧ್ಯಾಯ.

॥ ಶ್ರೀಃ ॥

-x-

ದ್ವಾವಿಂಶೋಽಧ್ಯಾಯಃ

ಅಥ ಗೌರೀವಿವಾಹಃ

॥ ಮಹಾತಪಾ ಉವಾಚ ॥

ತಸ್ಮಿನ್ನಿವಸತಸ್ತಸ್ಯ ರುದ್ರಸ್ಯ ಪರಮೇಷ್ಠಿನಃ ।
ಚುಕೋಪ ಗೌರೀ ದೇವಸ್ಯ ಪಿತುರ್ವೈರಮಥಾಸ್ಮರತ್ ॥ ೧ ॥

ಚಿಂತಯಾಮಾಸ ದೇವಸ್ಯ ತ್ವನೇನಾಪಹೃತಂ ಪುರಂ ।
ಯಜ್ಞೋ ವಿಧ್ವಂಸಿತೋ ಯಸ್ಮಾತ್ತಸ್ಮಾದ್ದೇಹಂ ತ್ಯಜಾಮ್ಯಹಂ ॥ ೨ ॥

ಆರಾಧ್ಯ ತಪಸಾ ತಸ್ಯ ಗೃಹೇ ಭೂತ್ವಾವ್ರಜಾಮ್ಯಹಂ ।
ಕಥಂ ಗಚ್ಛಾಮಿ ಪಿತರಂ ದಕ್ಷಂ ಕ್ಷಯಿತಬಾಂಧವಂ ॥ ೩ ॥

ಇಪ್ಪತ್ತೆರಡನೆಯ ಅಧ್ಯಾಯ

ಪಾರ್ವತಿಯ ವಿವಾಹ

೧ ಮಹಾತಪಮುನಿ—ಆ ಕೈಲಾಸಗಿರಿಯಲ್ಲಿ ಪರಮೇಷ್ಠಿಯಾದ ರುದ್ರನು ಗೌರಿಯೊಡನೆ ವಾಸಮಾಡುತ್ತಿರಲು ಒಂದಾನೊಂದು ಕಾಲದಲ್ಲಿ ಆ ಗೌರಿಯು, ರುದ್ರದೇವನು ತನ್ನ ತಂದೆಯ ಮೇಲೆ ಮಾಡಿದ ಹಗೆತನವನ್ನು ನೆನೆದುಕೊಂಡಳು. ಆದರಿಂದ ರುದ್ರನ ಮೇಲೆ ಕೋಪಬಂದಿತು.

೨-೪. ಈ ರುದ್ರನು ತಂದೆಯ ಯಜ್ಞವನ್ನು ಧ್ವಂಸಮಾಡಿದನು. ಪುರವನ್ನಪಹರಿಸಿದನು. ಬಂಧುಗಳನ್ನು ಕಳೆದುಕೊಂಡಿರುವ ತಂದೆಯ ಹತ್ತಿರ ಹೇಗೆತಾನೇ ಹೋಗಲಿ ! ತಪಸ್ಸನ್ನು ಮಾಡಿ ಆರಾಧಿಸಿ ಈ ದೇಹವನ್ನು ಬಿಟ್ಟು ಅವನ ಮನೆಯಲ್ಲಿ ಹೋಗಿ ಹುಟ್ಟುವೆನು." ಎಂಬುದಾಗಿ ಯೋಚಿಸಿ ನಿರ್ಧರಿಸಿ

ಭವಪತ್ನೀ ಚ ದುಹಿತಾ ಏವಂ ಸಂಚಿಂತ್ಯ ಸುಂದರೀ ।
ಜಗಾಮ ತಪಸೇ ದೇವೀ ಹಿಮವಂತಂ ಮಹಾಗಿರಿಂ ॥ ೪ ॥

ತತ್ರ ಕಾಲೇನ ಮಹತಾ ಕ್ಷಪಯಂತೀ ಕಲೇವರಂ ।
ಸ್ವಶರೀರಾಗ್ನಿನಾ ದಗ್ಧ್ವಾ ತತಃ ಶೈಲಸುತಾಭವತ್ ॥
ಉಮಾ ನಾಮ್ನಾತಿಮಹತೀ ಕೃಷ್ಣಾ ಚೇತ್ಯಭಿಧಾನತಃ ॥ ೫ ॥

ಲಬ್ಧ್ವಾ ತು ಶೋಭನಾಂ ಮೂರ್ತಿಂ ಹಿಮವಂತಗೃಹೇ ಶುಭಾಂ ।
ಪುನಸ್ತಪಶ್ಚಕಾರೋಗ್ರಂ ದೇವಂ ಸ್ಮೃತ್ವಾ ತ್ರಿಲೋಚನಂ ॥ ೬ ॥

ಅಸಾವೇವ ಪತಿರ್ಮಹ್ಯಮಿತ್ಯುಕ್ತ್ವಾ ತಪಸಿ ಸ್ಥಿತಾ ।
ಕುರ್ವಂತ್ಯಾ ತತ್ತಪಶ್ಚೋಗ್ರಂ ಹಿಮವಂತೇ ಮಹಾಗಿರೌ ॥ ೭ ॥

ಕಾಲೇನ ಮಹತಾ ದೇವಸ್ತಪಸಾರಾಧಿತಸ್ತಯಾ ।
ಆಜಗಾಮಾಶ್ರಮಂ ತಸ್ಯಾ ವಿಪ್ರೋ ಭೂತ್ವಾ ಮಹೇಶ್ವರಃ ॥ ೮ ॥

ಕೊಂಡು ದಕ್ಷಪುತ್ರಿಯೂ, ಭವಪತ್ನಿಯೂ, ಸುಂದರಿಯೂ ಆದ ಆ ಗೌರಿಯು ತಪಸ್ಸಿಗಾಗಿ ಹಿಮವನ್ಮಹಾಪರ್ವತಕ್ಕೆ ಹೋದಳು.

೫. ಬಹುಕಾಲದಮೇಲೆ ಅಲ್ಲಿ ಸ್ವಶರೀರಾಗ್ನಿಯಿಂದಲೇ ಸುಟ್ಟುಹೋಗಿ ದೇಹವನ್ನು ಪರಿತ್ಯಜಿಸಿ ಬಳಿಕ ಉಮಾ, ಕಾಳೀ, ಎಂಬ ಹೆಸರುಗಳಿಂದ ಹಿಮವಂತನ ಪುತ್ರಿಯಾದಳು.

೬. ಹಿಮವಂತನ ಮನೆಯಲ್ಲಿ ಮಂಗಳಕರವಾದ ರೂಪದಿಂದವತರಿಸಿದ ಆ ಪಾರ್ವತಿಯು ತಿರಿಗಿ ದೇವನಾದ ಮುಕ್ಕಣ್ಣನನ್ನೇ ಸ್ಮರಿಸಿ ಉಗ್ರವಾದ ತಪಸ್ಸನ್ನು ಮಾಡಿದಳು.

೭-೮. ಹಿಮವನ್ಮಹಾಗಿರಿಯಲ್ಲಿ ಶಿವನೇ ನನಗೆ ಪತಿಯಾಗಲೆಂದು ಉಗ್ರವಾದ ತಪಸ್ಸನ್ನು ಮಾಡುತ್ತಾ ಆರಾಧಿಸುತ್ತಿರಲು, ಬಹು ಕಾಲದಮೇಲೆ ದೇವನಾದ ಮಹೇಶ್ವರನು ಬ್ರಾಹ್ಮಣನಾಗಿ ಆಕೆಯ ಆಶ್ರಮಕ್ಕೆ ಬಂದನು.

ವೃದ್ಧಃ ಶಿಥಿಲಸರ್ವಾಂಗಃ ಸ್ಖಲಂಶ್ಚೈವ ಪದೇಪದೇ ।
ಕೃಚ್ಛ್ರಾತ್ತಸ್ಯಾಃ ಸಮೀಪಂಚಾಪ್ಯಾಗತ್ಯ ದ್ವಿಜಸತ್ತಮಃ ॥
ಬುಭುಕ್ಷಿತೋಽಸ್ಮಿ ಮೇ ದೇಹಿ ಭದ್ರೇ ಭೋಜ್ಯಂ ದ್ವಿಜಸ್ಯ ತು ॥ ೯ ॥

ಏವಮುಕ್ತಾ ತದಾ ಕನ್ಯಾ ಉಮಾ ಶೈಲಸುತಾ ಶುಭಾ ।
ಉವಾಚ ಬ್ರಾಹ್ಮಣಂ ಭೋಜ್ಯಂ ದದ್ಮಿ ವಿಪ್ರ ಫಲಾದಿಕಂ ॥
ಕುರು ಸ್ನಾನಂ ದ್ರುತಂ ವಿಪ್ರ ಭುಂಜಸ್ವಾನ್ನಂ ಯದೃಚ್ಛಯಾ ॥ ೧೦ ॥

ಏವಮುಕ್ತಸ್ತದಾವಿಪ್ರಃ ತಸ್ಯಾಃ ಪಾರ್ಶ್ವೇಮಹಾನದೀಮ್ ।
ಗಂಗಾಂ ಜಗಾಮ ಸ್ನಾನಾರ್ಥಂ ಸ್ನಾನಂ ಕರ್ತುಮವಾತರತ್ ॥ ೧೧ ॥

ಸ್ನಾನಂತು ಕುರ್ವತಾ ತೇನ ರುದ್ರೇಣ ದ್ವಿಜರೂಪಿಣಾ ।
ಭೂತ್ವಾಮಾಯಾಮಯಂ ಭೀಮಂ ಮಕರಂ ಭಯದರ್ಶನಮ್ ।
ಗ್ರಾಹಿತಸ್ತು ತದಾ ವಿಪ್ರಸ್ತೇನ ದುಷ್ಟೇನ ಮದ್ಗುನಾ ॥ ೧೨ ॥

---

೯. ಸಡಿಲವಾದ ಸರ್ವಾಂಗವುಳ್ಳ ಮುದುಕನಾದ ಆ ಬ್ರಾಹ್ಮಣೋತ್ತಮನು ಅಡಿಗಡಿಗೆ ಮುಗ್ಗರಿಸುತ್ತಾ ಕಷ್ಟದಿಂದ ಆಕೆಯ ಹತ್ತಿರ ಬಂದು "ಭದ್ರೇ ಹಸಿವಾಗಿದೆ. ಬ್ರಾಹ್ಮಣನಾದ ನನಗೆ ಊಟವನ್ನು ಕೊಡು." ಎಂದನು

೧೦. ಆಗ ಶುಭಕರಳಾದ ಪಾರ್ವತಿಯು ಬ್ರಾಹ್ಮಣನನ್ನು ಕುರಿತು "ಬ್ರಾಹ್ಮಣನೇ ಹಣ್ಣುಕಾಯಿಗಳೇ ಮೊದಲಾದ ತಿಂಡಿಯನ್ನು ಕೊಡುತ್ತೇನೆ. ಬೇಗನೆ ಸ್ನಾನಮಾಡು ಉತ್ತಮಾಹಾರವನ್ನು ಬೇಕಾದಹಾಗೆ ತಿನ್ನು." ಎಂದಳು.

೧೧ ಹೀಗೆ ಹೇಳಿಸಿಕೊಂಡ ಬ್ರಾಹ್ಮಣನು ಸ್ನಾನಕ್ಕಾಗಿ ಪಕ್ಕದ ಗಂಗಾ ಮಹಾನದಿಗೆ ಹೋಗಿ, ಸ್ನಾನಮಾಡಲು ಇಳಿದನು.

೧೨. ಸ್ನಾನಮಾಡುತ್ತಿದ್ದ ಬ್ರಾಹ್ಮಣರೂಪನಾದ ಆ ರುದ್ರನು ತಾನೇ ಮಾಯೆಯಿಂದ ಭಯಂಕರವಾದ ಮೊಸಳೆಯೂ ಆಗಿ, ನೀರಿನಲ್ಲಿದ್ದು ಬ್ರಾಹ್ಮಣ ರೂಪದವನನ್ನು ಹಿಡಿದನು.

ದೃಷ್ಟ್ವಾ ಧೃತಮಥಾತ್ಮಾನಂ ಮಕರೇಣ ಬಲೀಯಸಾ ।
ವೃದ್ಧನಾತ್ಮಾನಮಥ ತಾಂ ದರ್ಶಯನ್ವಾಕ್ಯಮಬ್ರವೀತ್ ॥ ೧೩ ॥

ಅಬ್ರಹ್ಮಣ್ಯಂ ಗತಂ ಕನ್ಯೇ ತ್ರಾಯಸ್ವಮಾಮತೋ ಝಷಾತ್ ।
ಯಾವನ್ನ ಯಾತಿ ವಿಕೃತಿಂ ತಾವನ್ಮಾಂತ್ರಾತುಮರ್ಹಸಿ ॥ ೧೪ ॥

ಏವಮುಕ್ತಾ ತದಾ ಕನ್ಯಾ ಚಿಂತಯಾಮಾಸ ಪಾರ್ವತೀ ।
ಪಿತೃಭಾವೇನ ಶೈಲೇಂದ್ರಂ ಭರ್ತೃಭಾವೇನ ಶಂಕರಮ್
ಸ್ಪೃಶಾಮಿ ತಪಸಾ ಪೂತಾ ಕಥಂ ವಿಪ್ರಂ ಸ್ಪೃಶಾಮ್ಯಹಮ್ ॥ ೧೫ ॥

ಯದ್ಯೇನಂ ನಾಪಕರ್ಷಾಮಿ ಮಕರೇಣ ಜಲೇ ಧೃತಮ್ ।
ತದಾನೀಂ ಬ್ರಹ್ಮವಧ್ಯಾ ಮೇ ಭವಿಷ್ಯತಿ ನ ಸಂಶಯಃ ॥ ೧೬ ॥

ಅನ್ಯಂ ವ್ಯತಿಕ್ರಮೇ ಧರ್ಮಮಪನೇತುಂಚ ಶಕ್ಯತೇ ।
ಬ್ರಹ್ಮವಧ್ಯಾಪುನರ್ನೈವಮೇವಮುಕ್ತ್ವಾ ಗತಾಂಜಸಾ ॥ ೧೭ ॥

೧೩-೧೪. ಬಳಿಕ ಮುದುಕನಾದ ತನ್ನನ್ನು ಶಕ್ತಿಯುಳ್ಳ ಮೊಸಳೆಯು ಹಿಡಿದುಕೊಂಡಿರುವುದನ್ನು ನೋಡಿಕೊಳ್ಳುತ್ತಾ ಪಾರ್ವತಿಗೆ ತೋರಿಸಿ, "ಕನ್ನೆ, ಕೊಲೆಗೀಡಾಗಬಾರದ ನನ್ನನ್ನು ಮೊಸಳೆಯಿಂದ ಕಾಪಾಡು. (ಅವಯವಯವಗಳನ್ನು ಕಚ್ಚಿ) ವಿಕಾರಮಾಡುವುದಕ್ಕೆ ಮೊದಲೇ ನೀನು ಕಾಪಾಡಬೇಕು." ಎಂದು ಹೇಳಿದನು.

೧೫. ಹೀಗೆನಿಸಿಕೊಂಡ ಆ ಪಾರ್ವತಿಯು ಯೋಚಿಸಿದಳು. "ಶೈಲೇಂದ್ರನನ್ನು ತಂದೆಯೆಂಬುದರಿಂದಲೂ, ಶಂಕರನನ್ನು ಪತಿಯೆಂಬುದರಿಂದಲೂ ಮುಟ್ಟುತ್ತೇನೆ. ತಪದಿಂದ ಪರಿಶುದ್ಧಳಾದ ನಾನು ಬ್ರಾಹ್ಮಣರನ್ನು ಹೇಗೆ ಮುಟ್ಟಲಿ!

೧೬. ನೀರಿನಲ್ಲಿ ಮೊಸಳೆಯು ಹಿಡಿದಿರುವ ಈತನನ್ನು ಈಚೆಗೆಳೆಯದಿದ್ದರೆ ನನಗೆ ಬ್ರಹ್ಮಹತ್ಯೆಯು ಬರುವುದು. ಸಂದೇಹವಿಲ್ಲ.

೧೭. ಬೇರೆ ಧರ್ಮವನ್ನು ಅತಿಕ್ರಮಿಸದೆ ಅದಕ್ಕೆ ಪರಿಹಾರ ಮಾಡಿಕೊಳ್ಳುವುದು ಸಾಧ್ಯ. ಬ್ರಹ್ಮಹತ್ಯೆಗಾದರೆ ಪರಿಹಾರವು ಇಲ್ಲವೇ ಇಲ್ಲ." ಹೀಗೆಂಬುದಾಗಿ ಯೋಚಿಸಿ, ಹೇಳಿಕೊಂಡು ಬೇಗನೆ ಹೇಳಿದಳು.

ಸಾಗತ್ವಾತ್ವರಿತಂ ಭೀರುರ್ಗೃಹೀತ್ವಾ ಪಾಣಿನಾದ್ವಿಜಮ್ ।
ಚಕರ್ಷಾಂತರ್ಜಲಾತ್ತಾವತ್ಸ್ವಯಂಭೂತಪತಿರ್ಹರಃ ॥ ೧೮ ॥

ಯಮಾರಾಧ್ಯ ತಪಶ್ಚರ್ತುಮಾರಬ್ಧಂ ಶೈಲಕನ್ಯಯಾ ।
ಸ ಏವ ಭಗವಾನ್ರುದ್ರಸ್ತಸ್ಯಾಃ ಪಾಣ್ಯಾವಲಂಭಿತಃ ॥ ೧೯ ॥

ತಂ ದೃಷ್ಟ್ವಾ ಲಜ್ಜಿತಾ ದೇವೀ ಪೂರ್ವತ್ಯಾಗಮನುಸಂಸ್ಮರತ್ ।
ನ ಕಿಂಚಿದುತ್ತರಂ ಸುಭ್ರೂರ್ವದತಿಸ್ಮ ಸುಲಜ್ಜಯಾ ॥ ೨೦ ॥

ತೂಷ್ಣೀಂಭೂತಾಂ ತು ತಾಂ ದೃಷ್ಟ್ವಾಗೌರೀಂ ರುದ್ರೋಹಸನ್ನಿವ ।
ಪಾಣೌಗೃಹೀತ್ವಾ ಮಾಂ ಭದ್ರೇ ಕಥಂ ತ್ಯಕ್ತುಮಿಹಾರ್ಹಸಿ ॥ ೨೧ ॥

ಮತ್ಪಾಣಿಗ್ರಹಣಂ ಭದ್ರೇ ವೃಥಾಯದಿ ಕರಿಷ್ಯಸಿ ।
ತದಾನೀಂ ಬ್ರಹ್ಮಣಃ ಪುತ್ರ್ಯೈ *ಆಹಾರಾರ್ಥಂ ಬ್ರವೀಮ್ಯಹಮ್ ॥ ೨೨ ॥

೧೮-೧೯. ಅಂಜಿಕೆಯುಳ್ಳ ಅವಳು ಬೇಗನೆ ಹೋಗಿ, ಕೈಯಿಂದ ಬ್ರಾಹ್ಮಣನನ್ನು ಹಿಡಿದುಕೊಂಡು ನೀರೊಳಗಿನಿಂದ ಎಳೆದಳು. ಶೈಲಸುತೆಯಾದ ಅವಳು ಯಾರನ್ನು ಪೂಜಿಸಿ ತಪಸ್ಸನ್ನು ಮಾಡಲು ಆರಂಭಿಸಿದ್ದಳೋ ಆ ಭೂತೇಶ್ವರನೂ, ಹರನೂ, ಭಗವಂತನೂ, ಸಾಕ್ಷಾದ್ರುದ್ರನೂ ಅವಳು ಕೈಯಿಂದ ಹಿಡಿದುಕೊಂಡಿರುವವನೇ ಆಗಿದ್ದನು.

೨೦. ಅವನನ್ನು ನೋಡಿ ನಾಚಿಕೊಂಡ ಸುಂದರವಾದ ಹುಬ್ಬುಳ್ಳ ಆ ದೇವಿಯು ಪೂರ್ವತ್ಯಾಗವನ್ನು ಜ್ಞಾಪಿಸಿಕೊಂಡು, ಮತ್ತಷ್ಟು ನಾಚಿಕೆಯಿಂದ ಏನನ್ನೂ ಮಾತನಾಡದಿದ್ದಳು.

೨೧-೨೨. ಸುಮ್ಮನಿದ್ದ ಆ ಗೌರಿಯನ್ನು ನೋಡಿ, ರುದ್ರನು ನಗುತ್ತಾ ಕೈಹಿಡಿದುಕೊಂಡು, "ಭದ್ರೇ ನನ್ನನ್ನು ಹೇಗೆ ಬಿಡುತ್ತೀಯೆ ! ನನ್ನ ಪಾಣಿಗ್ರಹಣವನ್ನು ವ್ಯರ್ಥಮಾಡುವೆಯಾದರೆ ಬ್ರಹ್ಮನಿಗೆ ಮಗಳಾದ ನಿನ್ನನ್ನು ಕರೆದುಕೊಂಡುಬರುವುದಕ್ಕೋಸ್ಕರ ಹೇಳುತ್ತೇನೆ. ಇದು ಪರಿಹಾಸಕ್ಕಾಗಿ ಹೇಳುವುದಲ್ಲ."

---

* ಪುತ್ರ್ಯಾ ಮಾಹಾರಾರ್ಥಂ.

ನ ಭವೇತ್ಪರಿಹಾಸೋಽಯಮುಕ್ತಂ ದೇವೀ ಪರಂಪರಾ ।
ಲಜ್ಜಮಾನಾ ತದಾ ವಾಕ್ಯಂ ವದತಿ ಸ್ಮಿತಪೂರ್ವಕಮ್ ॥ ೨೩ ॥

ದೇವದೇವ ತ್ರಿಲೋಕೇಶ ತ್ವದರ್ಥೋಽಯಂ ಸಮುದ್ಯಮಃ ।
ಪ್ರಾಗ್ಜನ್ಮಾರಾಧಿತೋ ಭರ್ತಾ ಭವಾನ್ದೇವೋ ಮಹೇಶ್ವರಃ ॥
ಇದಾನೀಂ ಮೇ ಭವಾನ್ದೇವಃ ಪತಿರ್ನಾನ್ಯೋ ಭವಿಷ್ಯತಿ ॥ ೨೪ ॥

ಕಿಂತು ಸ್ವಾಮೀ ಪಿತಾ ಮಹ್ಯಂ ಶೈಲೇಂದ್ರೋಮೇವ್ರಜಾಮಿತಂ ॥ ೨೫ ॥

ಅನುಜ್ಞಾಪ್ಯ ವಿಧಾನೇನ ತತಃ ಪಾಣಿಂ ಗೃಹೀಷ್ಯಸಿ ॥ ೨೬ ॥

ಏವಮುಕ್ತ್ವಾ ತದಾ ದೇವೀ ಪಿತರಂ ಪ್ರತಿ ಭಾಮಿನೀ ।
ಕೃತಾಂಜಲಿಪುಟಾ ಭೂತ್ವಾ ಹಿಮವಂತಮುವಾಚ ಹ ॥ ೨೭ ॥

ಇತೋಽನ್ಯಜನ್ಮಭರ್ತಾ ಮೇ ರುದ್ರೋ ದಕ್ಷಮಖಾಂತಕಃ ।
ಇದಾನೀಂ ತಪಸಾ ಸೈವ ಜ್ಞಾತೋಽಭೂದ್ಗತಿಭಾವತಃ ॥ ೨೮ ॥

ಎಂದನು. ಆಗ ಉತ್ತಮಳಾದ ದೇವಿಯು ಅತಿಯಾಗಿ ನಾಚುತ್ತಾ ಮುಗುಳು ನಗೆಯಿಂದ ಮುಂದಿನಂತೆ ಹೇಳಿದಳು.

೨೪. "ಮೂರು ಲೋಕಗಳೊಡೆಯನೇ, ದೇವದೇವನೇ, ನಿನಗೋಸ್ಕರ ವಾಗಿಯೇ ಈ ನನ್ನ ತಪಸ್ಸಿನ ಉದ್ಯೋಗ. ಪೂರ್ವಜನ್ಮದಲ್ಲಿ ಪೂಜಿತನಾಗಿ ಪತಿಯಾಗಿದ್ದ ಮಹೇಶ್ವರನೂ, ದೇವನೂ ಆದ ನೀನೇ ನನಗೆ ಈಗಲೂ ಪತಿ. ಬೇರೆಯವನು ಪತಿಯಾಗಲಾರನು.

೨೫-೨೬. ಆದರೆ ನನ್ನ ತಂದೆಯಾದ ಹಿಮವಂತನು ನನಗೆ ಸ್ವಾಮಿ ಯಾಗಿದ್ದಾನೆ. ಅವನ ಸಮ್ಮತಿಯನ್ನು ಪಡೆದು ಬಳಿಕ ಶಾಸ್ತ್ರೋಕ್ತವಾಗಿ ವಿವಾಹಮಾಡಿಕೊಳ್ಳುವೆಯಂತೆ" ಎಂದಳು.

೨೭. ಹೀಗೆ ಹೇಳಿ ಆ ಪಾರ್ವತೀದೇವಿಯು ಆಗ ತಂದೆಯ ಸಮೀಪಕ್ಕೆ ಹೋಗಿ ಕೈಮುಗಿದುಕೊಂಡವಳಾಗಿ ಹಿಮವಂತನನ್ನು ಕುರಿತು ಹೀಗೆ ಹೇಳಿದಳು.

೨೮-೨೯. "ಅಪ್ಪಾ, ಇದಕ್ಕೆ ಹಿಂದಿನ ಜನ್ಮದಲ್ಲಿ ನನಗೆ ದಕ್ಷಯಜ್ಞ ವನ್ನು ನಾಶಮಾಡಿದ ರುದ್ರನು ಪತಿಯಾಗಿದ್ದನು. ಈಗ ತಪಸ್ಸಿನಿಂದ ಅವನೇ

ಸ ಚ ವಿಶ್ವಪತಿರ್ಭೂತ್ವಾ ಬ್ರಾಹ್ಮಣೋ ಮೇ ತಪೋವನಮ್ ।
ಆಗತ್ಯ ಭೋಜನಾರ್ಥಂ ಮಾಂ ಯಾಚಯಾಮಾಸ ಶಂಕರಃ ॥ ೨೯ ॥

ಮಯಾ ಸ್ನಾತುಂ ವ್ರಜಸ್ವೇತಿ ಚೋದಿತೋ ಜಾಹ್ನವೀಂ ಗತಃ ।
ತತ್ರಾಸೌ ವೃದ್ಧಭಾವೇನ ದ್ವಿಜರೂಪೇಣ ಶಂಕರಃ ॥
ಮಕರೇಣ ಧೃತಃ ಪೂರ್ವಮಬ್ರಹ್ಮಣ್ಯಮುವಾಚ ಹ ॥ ೩೦ ॥

ಬ್ರಹ್ಮಹತ್ಯಾಭಯಾತ್ತಾತ ಮಯಾ ಪಾಣೌ ಧೃತಸ್ತತಃ ।
ಧೃತಮಾತ್ರಃ ಸ್ವಕಂ ದೇಹಂ ದರ್ಶಯಾಮಾಸ ಶಂಕರಃ ॥ ೩೧ ॥

ತತೋ ಮಾಮಬ್ರವೀದ್ದೇವಃ ಪಾಣಿಗ್ರಹಣಮಾಗತಮ್ ।
ಭವತೀ ದೇವಿ ಮಾ ಕಿಂಚಿದ್ವಿಚಾರಯ ತಪೋಧನೇ ॥ ೩೨ ॥

ಏವಮುಕ್ತ್ವಾ ತ್ವಹಂ ತೇನ ಶಂಕರೇಣ ಮಹಾತ್ಮನಾ ।
ತಮನುಜ್ಞಾಪ್ಯ ದೇವೇಶಂ ಭವಂತಂ ಪ್ರಷ್ಟುಮಾಗತಾ ॥ ೩೩ ॥

ಎಂಬುದನ್ನು (ಅದನ್ನು) ತಿಳಿದಿದ್ದೇನೆ. ವಿಶ್ವಪತಿಯಾದ ಶಂಕರನು ನಡೆ ಮತ್ತು ಭಾವಗಳಿಂದ ಬ್ರಾಹ್ಮಣನಾಗಿ ನನ್ನ ತಪೋವನಕ್ಕೆ ಬಂದು ಭೋಜನಕ್ಕಾಗಿ ನನ್ನನ್ನು ಬೇಡಿದನು.

೩೦. ಸ್ನಾನವನ್ನು ಮಾಡಿಕೊಂಡು ಬರುವಂತೆ ನಾನು ಹೇಳಲು ಅವನು ಅದಕ್ಕಾಗಿ ಗಂಗೆಗೆ ಹೋದನು. ಅಲ್ಲಿ ವೃದ್ಧಬ್ರಾಹ್ಮಣವೇಷದ ಆ ಶಂಕರನು ಮೊಸಳೆಯಿಂದ ಹಿಡಿಯಲ್ಪಟ್ಟವನಾಗಿ ರಕ್ಷಿಸಬೇಕೆಂದು ಕೂಗಿದನು.

೩೧. ಬ್ರಹ್ಮಹತ್ಯದೋಷದ ಹೆದರಿಕೆಯಿಂದ ನಾನು ಅವನ ಕೈಯನ್ನು ಹಿಡಿದುಕೊಂಡೆನು. ಒಡನೆಯೇ ಶಂಕರನು ತನ್ನ ನಿಜರೂಪವನ್ನು ತೋರಿಸಿದನು.

೩೨. ಬಳಿಕ ಆ ದೇವನು "ತಪೋಧನಳೂ, ಪೂಜ್ಯಳೂ ಆದ ದೇವಿ, ನಿನ್ನ ಪಾಣಿಗ್ರಹಣವಾಯಿತು. ಬೇರಾವುದನ್ನೂ ಸ್ವಲ್ಪವೂ ವಿಚಾರಮಾಡಬೇಡ." ಎಂದು ಹೇಳಿದನು.

೩೩-೩೪. ಮಹಾತ್ಮನಾದ ಶಂಕರನು ಹೀಗೆ ನನಗೆ ಹೇಳಲು ಅವನ ಅಪ್ಪಣೆಯನ್ನು ಪಡೆದು ನಾನು ನಿನ್ನನ್ನು ಕೇಳುವುದಕ್ಕೆ ಬಂದೆನು. ಈಗ ಯಾವುದು

ಇದಾನೀಂ ಯತ್ಕ್ಷಮಂ ಕಾರ್ಯಂ ತಚ್ಛೀಘ್ರಂ ಸಂವಿಧೀಯತಾಮ್॥೩೪॥

ಏವಂ ಶ್ರುತ್ವಾ ತದಾ ವಾಕ್ಯಂ ಶೈಲರಾಜೋ ಮುದಾಯುತಃ ।
ಊಚೇ ದುಹಿತರಂ ಕನ್ಯಾಂ ತಸ್ಮಿನ್ಕಾಲೇ ವರಾನನೇ ॥ ೩೫ ॥

ಪುತ್ರಿ ಧನ್ಯೋಽಸ್ಮ್ಯಹಂ ಲೋಕೇ ಯಸ್ಯ ರುದ್ರಃ ಸ್ವಯಂ ಹರಃ ।
ಜಾಮಾತಾ ಭವಿತಾ ದೇವಸ್ತ್ವಯಾಪತ್ಯವದಸ್ಮ್ಯಹಮ್ ॥ ೩೬ ॥

ಸ್ಥಾಪಿತೋ ಮೂರ್ಧ್ನಿ ದೇವಾನಾ ೦ಪಿ ಪುತ್ರಿ ತ್ವಯಾಹ್ಯಹಮ್ ।
ಸ್ಥೀಯತಾಂ ಕ್ಷಣಮೇಕಂತು ಯಾವದಾಗಮನಂ ಮಮ ॥ ೩೭ ॥

ಏವಮುಕ್ತ್ವಾ ಗತೋ ರಾಜಾ ಶೈಲಾನಾಂ ಬ್ರಹ್ಮಣೋಂತಿಕಮ್ ।
ತತ್ರ ದೃಷ್ಟ್ವಾ ಮಹಾತ್ಮಾನಂ ಸರ್ವದೇವಪಿತಾಮಹಂ ॥ ೩೮ ॥

ಉವಾಚ ಪ್ರಣತೋ ಭೂತ್ವಾ ಬ್ರಹ್ಮಾಣಂ ಶೈಲರಾಟ್ ತತಃ ।
ದೇವೋಮಾದುಹಿತಾಮೇದ್ಯ ತಾಂ ರುದ್ರಾಯ ದದಾಮ್ಯಹಮ್ ॥ ೩೯ ॥

ಉಚಿತವೋ (ಅದನ್ನು) ಆ ಕಾರ್ಯವನ್ನು ಬೇಗನೆ ಮಾಡುವವನಾಗು.'' ಎಂದಳು.

೩೫–೩೭. ಆಗ ಈ ಮಾತನ್ನು ಕೇಳಿ ಸಂತಸಗೊಂಡ ಶೈಲರಾಜನು ಕನ್ನೆಯಾದ ತನ್ನ ಮಗಳನ್ನು ಕುರಿತು ''ಸುಂದರಮುಖಿ, ಪುತ್ರಿ, ರುದ್ರನಾದ ಹರನು, ಆ ದೇವನು ತಾನಾಗಿ ನನಗೆ ಅಳಿಯನಾಗುವಾಗ ನಾನೇ ಲೋಕದಲ್ಲಿ ಸುಕೃತಿ. ನಿನ್ನಿಂದ ನಾನು ಸಂತಾನವಂತನಾದೆ ಮಗಳೇ ನೀನು ನನ್ನನ್ನು ದೇವತೆಗಳ ಶಿರೋಭೂಷಣನನ್ನಾಗಿ ಮಾಡಿದೆ. ನಾನು ಹೋಗಿಬರುವವರೆಗೆ ಒಂದು ಕ್ಷಣಕಾಲವಿರು'' ಎಂದು ಹೇಳಿದನು.

೩೮–೩೯. ಮಗಳಿಗೆ ಹೀಗೆ ಹೇಳಿ ಶೈಲರಾಜನು ಬ್ರಹ್ಮನ ಹತ್ತಿರಕ್ಕೆ ಹೋಗಿ (ಅಲ್ಲಿ) ಸರ್ವದೇವತೆಗಳಿಗೂ ಅಜ್ಜನಾದ ಆ ಮಹಾತ್ಮನನ್ನು ಕಂಡು, ಅಡ್ಡಬಿದ್ದು ಬಳಿಕ ''ದೇವ (ಸ್ವಾಮಿ) ಉಮೆಯು ಈಗ ನನಗೆ ಮಗಳಾಗಿದ್ದಾಳೆ. ಆವಳನ್ನು ನಾನು ರುದ್ರನಿಗೆ ವಿವಾಹಮಾಡಿಕೊಡುತ್ತೇನೆ.'' ಎಂದನು.

ಪ್ರಯಚ್ಛೋವಾಚ ದೇವಾನಾಂ ತದಾ ಲೋಕಪಿತಾಮಹಃ || ೪೦ ||

ಏವಮುಕ್ತಃ ಶೈಲರಾಜಃ ಸ್ವವೇಶ್ಮಾಗಮ್ಯ ಸತ್ವರಮ್ ।
ತುಂಬುರುನ್ನಾರದಂ ಚೈವ ಹಾಹಾಹೂಹೂಮಥಾಹ್ವಯತ್ ॥
ಸ ಗತ್ವಾ ಕಿನ್ನರಾಂಶ್ಚೈವ ಅಸುರಾನ್ರಾಕ್ಷಸಾನಪಿ ॥ ೪೧ ॥

ಪರ್ವತಾಃ ಸರಿತಃ ಶೈಲಾಃ ವೃಕ್ಷಾಓಷಧಯಸ್ತಥಾ ।
ಆಗತಾ ಮೂರ್ತಿಮಂತೋ ವೈ ಪರ್ವತಾಃ ಸಂಗವೋಪಲಾಃ ॥
ಹಿಮವತ್ಕನ್ಯಕಾಂ ದ್ರಷ್ಟುಂ ವಿವಾಹಂ ಶಂಕರೇಣ ಹ || ೪೨ ॥

ತತ್ರ ವೇದಿಃ ಕ್ಷಿತಿಶ್ಚಾಸೀತ್ಕಲಶಾಃ ಸಪ್ತಸಾಗರಾಃ ।
ಸೂರ್ಯೋ ದೀಪಸ್ತಥಾಸೋಮಃ ಸರಿತೋ ವವಹುರ್ಜಲಮ್ || ೪೩ ॥

ಏವಂ ವಿವಾಹಸಾಮಗ್ರೀಂ ಕೃತ್ವಾಶೈಲವರಾಧಿಪಃ ।
ಪ್ರೇಷಯಾಮಾಸ ರುದ್ರಾಯ ಸಮೀಪಂ ಮಂದರಂ ಗಿರಿಮ್ || ೪೪ ||

---

೪೦. ಬ್ರಹ್ಮನು "ಕೊಡು" ಎಂದು ಹೇಳಿದನು.

೪೧. ಹೀಗೆ ಹೇಳಿಸಿಕೊಂಡ ಶೈಲರಾಜನಾದ ಹಿಮವಂತನು ಬೇಗನೆ ತನ್ನ ಮನೆಗೆ ಬಂದು ತುಂಬುರುನಾರದರನ್ನೂ, ಹಾಹಾಹೂಹುಗಳನ್ನೂ, ಕಿನ್ನರರನ್ನೂ, ಅಸುರರಾಕ್ಷಸರನ್ನೂ, ಹೋಗಿ (ಮದುವೆಗೆ) ಕರೆದನು.

೪೨. ಪರ್ವತಗಳೂ, ನದಿಗಳೂ, ಶೈಲಗಳೂ, ಮರಗಳೂ, ಓಷಧಿಗಳೂ, ಸಾಕಾರಗಳಾಗಿ ಶಂಕರಪಾರ್ವತಿಯರ ವಿವಾಹವನ್ನು ನೋಡುವುದಕ್ಕಾಗಿ ಬಂದುವು.

೪೩. ಆ ಮದುವೆಯಲ್ಲಿ ಪೃಥ್ವಿಯೇ ಹಸೆಯ ಜಗುಲಿಯೂ, ಸಪ್ತಸಾಗರಗಳೇ ಪೂರ್ಣಕಲಶಗಳೂ, ಸೂರ್ಯಚಂದ್ರರೇ ದೀಪಗಳೂ ಆಗಿದ್ದುವು. ನದಿಗಳು ನೀರನ್ನು ವಹಿಸಿದುವು.

೪೪. ಪರ್ವತರಾಜೋತ್ತಮನು ಹೀಗೆ ವಿವಾಹಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ವರನಾದ ರುದ್ರನನ್ನು ವಿವಾಹಕ್ಕೆ ಕರೆಯಲು ಹತ್ತಿರವಲ್ಲಿದ್ದ ಮಂದರಗಿರಿರಾಜನನ್ನು ಕಳುಹಿಸಿದನು.

ಸ ತದಾ*ಶಂಕರೋಕ್ತಸ್ತು ಮಂದರೋ ದ್ರುತಮಾಯಯೌ ।
ವಿಧಿನಾ ಸೋಮಯಾ ಪಾಣಿಂ ಜಗ್ರಾಹ ಪರಮೇಶ್ವರಃ ॥ ೪೫ ॥

ತತ್ರೋತ್ಸವೇ ಪರ್ವತನಾರದೌ ದ್ವೌ ।
ಜಗುಶ್ಚ ಸಿದ್ಧಾ ನನೃತುರ್ವನಸ್ಪತೀಃ ॥
ಪುಷ್ಪಾಣ್ಯನೇಕಾನಿ ವಿಚಿಕ್ಷಿಪುಃ ಶುಭಾ ।
ನನೃತುರುಚ್ಚೈಃ ಸುರಯೋಷಿತೋ ಭೃಶಮ್ ॥ ೪೬ ॥

ತಸ್ಮಿನ್ವಿವಾಹೇ ಸಲಿಲಪ್ರವಾಹೇ ।
ಚತುರ್ಮುಖೋ ಲೋಕಪರಃ ಸ್ವಸಂಸ್ಥಃ ॥
ಉವಾಚಕನ್ಯಾಂ ತವ ಪುತ್ರಿ ಲೋಕೇ ।
ನಾರೀಸುಭರ್ತಾ ತವ ಚಾನ್ಯಪುಂಸಾಮ್ ॥ ೪೭ ॥

ಇತ್ಯೇವಮುಕ್ತ್ವಾ ಸ ಉಮಾಂ ಸರುದ್ರಾಂ ।
ಪಿತಾಮಹಃ ಸ್ವಂ ಪುರಮಾಜಗಾಮ ॥ ೪೮ ॥

---

೪೫. ಆಗ ಮಂದರನು ಹೋಗಿ ಹೇಳಲು ಪರಮೇಶ್ವರನಾದ ಆ ಶಂಕರನು ಬೇಗನೆ ಬಂದು ವಿಧಿಪೂರ್ವಕವಾಗಿ ಪಾರ್ವತಿಯನ್ನು ವಿವಾಹಮಾಡಿಕೊಂಡನು.

೪೬. ಆ ವಿವಾಹೋತ್ಸವದಲ್ಲಿ ಪರ್ವತನಾರದರಿಬ್ಬರೂ ಹಾಡಿದರು. ಸಿದ್ಧರು ನರ್ತನಮಾಡಿದರು. ಮರಗಳು ಹೆಚ್ಚಾಗಿ ಹೂಗಳನ್ನೆರಚಿದುವು. ಮಂಗಳೆಯರಾದ ದೇವತಾಸ್ತ್ರೀಯರು ಮೇಲಾಗಿ ಕುಣಿದರು.

೪೭–೪೮. ಆನಂದಾಶ್ರುಜಲಪ್ರವಾಹವುಳ್ಳ ಆ ಮದುವೆಯಲ್ಲಿ ಲೋಕೋತ್ತಮನಾದ ಬ್ರಹ್ಮನು ತನ್ನ ನಿಜರೂಪದಲ್ಲಿದ್ದು ರುದ್ರಸಹಿತಳೂ, ಕನ್ನೆಯೂ ಆದ ಪಾರ್ವತಿಯನ್ನು ಕುರಿತು, "ಮಗಳೇ, ನಿನ್ನ ಪತಿಯು (ಗಂಡನು) ಲೋಕದ ಇತರ ನಾರಿಯರಿಗೂ ಪುರುಷರಿಗೂ ಪತಿ (ಲೋಕದ ಜನರಿಗೆಲ್ಲಾ ರಕ್ಷಕನು)" ಎಂದು ಹೇಳಿ ತನ್ನ ಪಟ್ಟಣಕ್ಕೆ ಹೋದನು.

---

* ಮಂದರೋಕ್ತಸ್ತು ಶಂಕರೋ ಎಂದಿರಬೇಕು.

ಸ ಬಭೂವ ಯಥಾಪ್ರೋಕ್ತಂ ಪ್ರಜಾಪಾಲಾಯ ಪೃಚ್ಛತೇ ।
ಋಷಿಣಾ ಮಹತಾ ಪೂರ್ವಂ ತಪಸಾ ಭಾವಿತಾತ್ಮನಾ ॥ ೪೯ ॥

ಗೌರ್ಯಾ ಉತ್ಪತ್ತಿರೇಷಾ ವೈ ಕಥಿತಾ ಪರಮರ್ಷಿಣಾ ।
ವಿವಾಹಶ್ಚ ಯಥಾವೃತ್ತಸ್ತತ್ಸರ್ವಂ ಕಥಿತಂ ತವ ॥ ೫೦ ॥

ಏತತ್ಸರ್ವಂತು ಗೌರ್ಯಾ ವೈ ಸಂಪನ್ನಂತು ತೃತೀಯಯಾ ।
ತಸ್ಯಾಂ ತಿಥೌ ತೃತೀಯಾಯಾಂ ಲವಣಂ ವರ್ಜಯೇತ್ಸದಾ ॥ ೫೧ ॥

ಯಶ್ಚೋಪೋಷ್ಯತಿ ನಾರೀ ವಾ ಸಾ ಸೌಭಾಗ್ಯಂತು ವಿಂದತಿ ॥ ೫೨ ॥

ದುರ್ಭಗಾಯಾ ತು ನಾರೀಸ್ಯಾತ್ಪುರುಷಶ್ಚಾತಿದುರ್ಭಗಃ ।
ಏತಚ್ಛ್ರುತ್ವಾ ತೃತೀಯಾಯಾಂ ಲವಣಂ ತು ವಿವರ್ಜಯೇತ್ ॥ ೫೩ ॥

೪೯-೫೦. ತಪಸ್ಸಿನಿಂದ ಸುಸಂಸ್ಕೃತಾತ್ಮನೂ, ಮಹಾತ್ಮನೂ ಆದ ಮಹಾತಪಋಷಿಯು ತನ್ನನ್ನು ಕೇಳಿದ ಪ್ರಜಾಪಾಲರಾಜನಿಗೆ ಹೇಳಿದಂತೆ ಗೌರಿಯ ಜನನವನ್ನೂ, ಅವಳ ವಿವಾಹವು ಹೇಗೆ ನಡೆಯಿತೆಂಬುದನ್ನೂ ಭೂದೇವಿಯಾದ ನಿನಗೆ ಹೇಳಿದುದಾಯಿತು.

೫೧-೫೨. ಗೌರೀದೇವಿಗೆ ಇದೆಲ್ಲವೂ ತದಿಗೆ (ತೃತೀಯೆ) ಯ ದಿನ ಲಭಿಸಿತು. ಆದುದರಿಂದ ಆ ತದಿಗೆಯ ತಿಥಿಯಲ್ಲಿ ಉಪ್ಪನ್ನು ಬಿಟ್ಟು ಉಪವಾಸ ಮಾಡುವ ಗಂಡಸಾಗಲೀ, ಹೆಂಗಸಾಗಲೀ, ಸೌಭಾಗ್ಯವನ್ನು ಪಡೆಯುವರು.

೫೩-೫೪. ದೌರ್ಭಾಗ್ಯ ಅಥವಾ ಕುರೂಪವುಳ್ಳ ಹೆಂಗಸಾಗಲೀ, ಗಂಡಸಾಗಲೀ, ತದಿಗೆಯಲ್ಲಿ ಪಾರ್ವತಿಯ ಈ ಕಥೆಯನ್ನು ಕೇಳಿ, ಉಪ್ಪನ್ನು ಬಿಟ್ಟುಬಿಟ್ಟರೆ

ಸರ್ವಕಾಮಾನವಾಪ್ನೋತಿ ಸೌಭಾಗ್ಯಂ ದ್ರವ್ಯಸಂಪದಃ ।
ಆರೋಗ್ಯಂಚ ಸದಾ ಲೋಕೇ ಕಾಂತಿಂ ಪುಷ್ಟಿಂ ಚ ವಿಂದತಿ ॥ ೫೪ ॥

ಇತಿ ಶ್ರೀವರಾಹಪುರಾಣೇ ಆದಿಕೃತವೃತ್ತಾಂತೇ ಮಹಾತಪ ಉಪಾಖ್ಯಾನೇ ಗೌರ್ಯುದ್ವಾಹೋನಾಮ ದ್ವಾವಿಂಶೋಧ್ಯಾಯಃ

ಸೊಬಗನ್ನೂ, ಧನಸಂಪತ್ತನ್ನೂ, ಸರ್ವೇಷ್ಟಗಳನ್ನೂ, ಲೋಕದಲ್ಲಿ ಯಾವಾಗಲೂ ಆರೋಗ್ಯವನ್ನೂ, ಕಾಂತಿಯನ್ನೂ, ಪುಷ್ಟಿಯನ್ನೂ ಪಡೆಯುವರು.

ಅಧ್ಯಾಯದ ಸಾರಾಂಶ:—

ಮಹಾತಪಮುನಿಯು ಪ್ರಜಾಪಾಲನಿಗೆ ಗೌರಿಯು ಮತ್ತೆ ಪಾರ್ವತಿಯಾಗಿ ಅವತರಿಸಿ ಶಂಕರನನ್ನು ವರಿಸಿದ ವಿಚಾರವನ್ನು ತಿಳಿಸುವನು—ಗೌರಿಯು ರುದ್ರನೊಡನೆ ಕೈಲಾಸದಲ್ಲಿರುತ್ತಾ, ಒಂದು ದಿನ ರುದ್ರನಿಂದ ತಂದೆಯಾದ ದಕ್ಷಬ್ರಹ್ಮನಿಗಾದ ತೊಂದರೆಯನ್ನು ನೆನೆದುಕೊಂಡು, ಖಿನ್ನಳಾಗಿ, ತಪಸ್ಸಿನಿಂದ ದೇಹತ್ಯಾಗಮಾಡಿ ಮತ್ತೆ ತಂದೆಯ ಮನೆಯಲ್ಲಿ ಹುಟ್ಟಬೇಕೆಂದು ನಿರ್ಧರಿಸಿ, ಹಿಮಗಿರಿಯಲ್ಲಿ ತಪೋಗ್ನಿಯಿಂದಲೇ ದಗ್ಧವಾದ ದೇಹವನ್ನು ತ್ಯಜಿಸಿ ಉಮಾ, ಕಾಳಿ ಎಂಬ ಹೆಸರುಗಳಿಂದ ಹಿಮವಂತನ ಪುತ್ರಿಯಾಗಿ ಜನಿಸಿದಳು. ಪರ್ವತ ರಾಜಪುತ್ರಿಯಾದುದರಿಂದ ಪಾರ್ವತಿಯೆನಿಸಿಕೊಂಡ ಆಕೆಯು ಮತ್ತೆ ಶಿವನನ್ನೇ ಸ್ಮರಿಸುತ್ತ, ಆತನೇ ಪತಿಯಾಗ(ಬೇಕೆಂದು)ಲು ತಪಸ್ಸನ್ನು ಮಾಡಿದಳು. ಶಿವನು ಬ್ರಾಹ್ಮಣವೇಷದಿಂದ ಅವಳ ಹತ್ತಿರ ಬಂದು ಅವಳ ಮನಸ್ಸನ್ನು ಪರೀಕ್ಷಿಸಿ, ಬಳಿಕ ಅವಳ ಇಷ್ಟದಂತೆ ಪರ್ವತರಾಜನ ದಾನಪೂರ್ವಕವಾಗಿಯೇ ಆ ಪಾರ್ವತಿಯನ್ನು ವಿವಾಹಮಾಡಿಕೊಂಡನು. ಇದೆಲ್ಲವೂ ತದಿಗೆಯ ದಿನ ನಡೆದುದರಿಂದ ಅದು ಗೌರಿಗೆ ಪ್ರಿಯವಾದ ದಿನ. ಎಂದು ಹೇಳಿ, ವಿವಾಹಮಹೋತ್ಸವವನ್ನು ವರ್ಣಿಸಿರುವನು. ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಇಪ್ಪತ್ತೆರಡನೆಯ ಅಧ್ಯಾಯ.

|| ಶ್ರೀಃ ||

–X–

ತ್ರಯೋವಿಂಶೋಧ್ಯಾಯಃ

ಅಥ ಗಣಪತ್ಯುತ್ಪತ್ತಿಃ

|| ಪ್ರಜಾಪಾಲ ಉವಾಚ ||

ಕಥಂ ಗಣಪತೇರ್ಜನ್ಮ ಮೂರ್ತಿಮತ್ವಂ ಚ ಸತ್ತಮ ।
ಏತನ್ಮೇಸಂಶಯಂ ಛಿಂದಿ ಹೃದಿ ಕಷ್ಟಂ ವ್ಯವಸ್ಥಿತಮ್ || ೧ ||

|| ಮಹಾತಪಾ ಉವಾಚ ||

ಪೂರ್ವಂ ದೇವಗಣಾಃ ಸರ್ವೇ ಋಷಯಶ್ಚ ತಪೋಧನಾಃ ।
ಕಾರ್ಯಾರಂಭಂ ತಥಾಚಕ್ರುಃ ಸಿಧ್ಯಂತೇ ಚ ನ ಸಂಶಯಃ || ೨ ||

ಇಪ್ಪತ್ತಮೂರನೆಯ ಅಧ್ಯಾಯ

ಗಣಪತಿಯ ಜನ್ಮ

೧. ಪ್ರಜಾಪಾಲರಾಜ—ಸಜ್ಜನೋತ್ತಮನೇ, ಗಣಪತಿಯ ಜನ್ಮವೂ, ದೇಹಧಾರಣೆಯೂ ಹೇಗೆಂಬ ನನ್ನ ಈ ಸಂದೇಹವನ್ನು ಹೋಗಲಾಡಿಸು. ತಿಳಿಯದೆ ಮನಸ್ಸಿಗೆ ಕಷ್ಟವಾಗಿದೆ.

೨. ಮಹಾತಪಮುನಿ—ಪೂರ್ವದಲ್ಲಿ ಎಲ್ಲಾ ದೇವತೆಗಳೂ, ತಪೋಧನರಾದ ಋಷಿಗಳೂ ಸಂದೇಹವಿಲ್ಲದೇ ಸಿದ್ಧಿಸುವಂತೆ ಕಾರ್ಯಗಳನ್ನು ಪ್ರಾರಂಭಿಸುತ್ತಿದ್ದರು.

ಸನ್ಮಾರ್ಗಪರ್ತಿಷು ತಥಾ ಸಿಧ್ಯಂತೇ ವಿಘ್ನತಃ ಕ್ರಿಯಾಃ ।
ಅಸತ್ಕಾರಿಷು ಸರ್ವೇಷು ತದ್ವದೇವಮವಿಘ್ನತಃ ॥ ೩ ॥

ತತೋ ದೇವಾಃ ಸಪಿತರಶ್ಚಿಂತಯಾಮಾಸುರೋಜಸಾ ।
ಅಸತ್ಕಾರ್ಯೇಷು ವಿಘ್ನಾರ್ಥೇ ಸರ್ವ ಏವಾಭ್ಯಮಂತ್ರಯನ್ ॥ ೪ ॥

ತತಸ್ತೇಷಾಂ ತದಾ ಮಂತ್ರಂ ಕುರ್ವತಾಂ ತ್ರಿದಿವೌಕಸಾಂ ।
ಬಭೂವ ಬುದ್ಧಿರ್ಗಮನೇ ರುದ್ರಂ ಪ್ರತಿಮಹಾಮತಿಂ ॥ ೫ ॥

ತೇ ತತ್ರ ರುದ್ರಮಾಮಂತ್ರ್ಯ ಕೈಲಾಸನಿಲಯಂ ಗುರುಂ ।
ಊಚುಃ ಸವಿನಯಂ ಸರ್ವೇ ಪ್ರಣಿಪಾತಪುರಸ್ಸರಂ ॥ ೬ ॥

॥ ದೇವಾ ಊಚುಃ ॥

ದೇವದೇವ ಮಹಾದೇವ ಶೂಲಪಾಣೇ ತ್ರಿಲೋಚನ ।
ವಿಘ್ನಾರ್ಥಮವಿಶಿಷ್ಟಾನಾಮುತ್ಪಾದಯಿತುಮರ್ಹಸಿ ॥ ೭ ॥

---

೩. ಒಳ್ಳೆಯ ದಾರಿಯಲ್ಲಿ ನಡೆಯುವವರ ಕೆಲಸಗಳು ತಡೆಯಿಲ್ಲದೆ ಕೈಗೂಡುವಂತೆಯೇ ಕೆಟ್ಟದಾರಿಯವರೆಲ್ಲರವೂ ತಡೆಯಿಲ್ಲದೆಯೇ ಕೈಗೂಡುತ್ತಿದ್ದವು.

೪. ಬಳಿಕ ಪಿತೃಗಳೊಡಗೂಡಿದ ದೇವತೆಗಳೆಲ್ಲರೂ ಸೇರಿ, ಕೆಟ್ಟಕೆಲಸಗಳಲ್ಲಿ ತಡೆಯನ್ನುಂಟುಮಾಡಬೇಕೆಂದು ಚಿಂತಿಸಿ, ಬಲವಾದ ಮಂತ್ರಾಲೋಚನೆಯನ್ನು ಮಾಡಿದರು.

೫. ಹಾಗೆ ಮಂತ್ರಾಲೋಚನೆಯನ್ನು ಮಾಡುತ್ತಿದ್ದ ದೇವತೆಗಳಿಗೆ ಆ ವಿಚಾರಕ್ಕೆ ಮಹಾಬುದ್ಧಿಯುಳ್ಳ ರುದ್ರನ ಹತ್ತಿರ ಹೋಗಬೇಕೆಂದು ತೋರಿತು.

೬. ಅವರೆಲ್ಲರೂ ಕೈಲಾಸದಲ್ಲಿ ವಾಸಿಸುವ ಗುರುವಾದ ಆ ರುದ್ರನ ಹತ್ತಿರ ಹೋಗಿ ಅವನಿಗೆ ಪ್ರಣಾಮಪುರಸ್ಸರವಾಗಿ ವಿನಯದಿಂದ(ಮುಂದಿರುವಂತೆ) ಹೇಳಿದರು..

೭. ದೇವತೆಗಳು—ದೇವದೇವ, ಮಹಾದೇವ, ಶೂಲಪಾಣೀ, ತ್ರಿಲೋಚನಾ, ಕೆಟ್ಟಕೆಲಸಗಳ ತಡೆಗಾಗಿ ಯಾರನ್ನಾದರೂ ಸೃಷ್ಟಿಸಲು ನೀನೇ ಶಕ್ತನು.

ಏವಮುಕ್ತಸ್ತದಾ ದೇವೈರ್ಭವಃ ಪರಮಯಾ ಮುದಾ ।
ಉಮಾಂ ನಿರೀಕ್ಷಯಾಮಾಸ ಚಕ್ಷುಷಾಽನಿಮಿಷೇಣ ಹ ॥ ೮ ॥

ದೇವಾನಾಂ ಸನ್ನಿಧೌ ತಸ್ಯ ಪಶ್ಯತಸ್ತಾಂ ಮಹಾತ್ಮನಃ ।
ಚಿಂತಾಭೂದ್ವ್ಯೋಮ್ನಿ ಮೂರ್ತಿರ್ನೋ ದೃಶ್ಯತೇ ಕೇನ ಹೇತುನಾ ॥ ೯ ॥

ಪೃಥಿವ್ಯಾ ವಿದ್ಯತೇ ಮೂರ್ತಿರಪಾಂಮೂರ್ತಿಸ್ತಥೈವ ಚ ।
ತೇಜಸಃ ಶ್ವಸನಸ್ಯಾಪಿ ಮೂರ್ತಿರೇಷಾ ತು ದೃಶ್ಯತೇ ।
ಆಕಾಶಂ ಚ ಕಥಂ ನೈತಿ ಮತ್ವಾ ದೇವೋ ಜಹಾಸ ಚ ॥ ೧೦ ॥

ಜ್ಞಾನಶಕ್ತಿಃ ಪುಮಾನ್ ದೃಷ್ಟ್ವಾ ಯದ್ದೃಷ್ಟಂ ವ್ಯೋಮ್ನಿ ಶಂಭುನಾ ॥೧೧॥

ಯಥೋಕ್ತಂ ಬ್ರಹ್ಮಣಾ ಪೂರ್ವಂ ಶರೀರಂತು ಶರೀರಿಣಾಂ ।
ಯಚ್ಚಾಪಿ ಹಸಿತಂ ತೇನ ದೇವೇನ ಪರಮೇಷ್ಠಿನಾ ॥ ೧೨ ॥

---

೮. ಆಗ ದೇವತೆಗಳು ಹೀಗೆ ಹೇಳಲು ಶಿವನು ಅತಿಸಂತೋಷದಿಂದ ಪಾರ್ವತಿಯನ್ನು ಎವೆಯಿಕ್ಕದೆ ನೋಡಿದನು.

೯. ದೇವತೆಗಳ ಸಮೀಪದಲ್ಲಿ ಆಕೆಯನ್ನು ನೋಡುತ್ತಿದ್ದ ಆ ಮಹಾತ್ಮನಿಗೆ ಆಕಾಶದಲ್ಲಿ ಏಕೆ ಯಾವಮೂರ್ತಿಯೂ ಕಾಣುವುದಿಲ್ಲ ಎಂದು ಯೋಚನೆ ಯುಂಟಾಯಿತು.

೧೦. ಭೂಮಿಗೆ ರೂಪವಿದೆ. ನೀರಿಗೂ ರೂಪವಿದೆ. ತೇಜಸ್ಸಿಗೂ ವಾಯುವಿಗೂ ರೂಪವಿರುವುದು ಕಾಣುತ್ತಿದೆ. ಆಕಾಶವು ಮಾತ್ರ ಹೇಗೆ ರೂಪವಿಲ್ಲದುದಾಯಿತು ? ಎಂದು ಆಲೋಚಿಸಿ ಆ ದೇವನು ನಕ್ಕನು.

೧೧.–೧೪ ರುದ್ರನು ನೋಡಿದ ಜ್ಞಾನಶಕ್ತಿ (ಗೌರಿ), ಅವನ ಆಕಾಶದ್ಧ ನೋಟ ಹಿಂದೆ ಪರಬ್ರಹ್ಮನು ಅಗ್ನಿಯೇ ಮೊದಲಾದವರಿಗೆ ಶರೀರಗಳನು ಕರುಣಿಸಿದಾಗ ಪೃಥಿವ್ಯಪ್ತೇಜೋವಾಯುಗಳ ಗುಣವು ಗಣಪತಿಯಾಗುವುದೆಂದು ಹೇಳಿದ್ದುದು ಉತ್ಕೃಷ್ಟಸ್ಥಾನದಲ್ಲಿರುವ ರುದ್ರದೇವನ ನಗು ಈ ನಾಲ್ಕರಿಂದ

ಏತತ್ಕಾರ್ಯಂ ಚತುಷ್ಕೇಣ ಪೃಥಿವ್ಯಾದಿಚತುಷ್ಟಯಾತ್ ।
ಮೂರ್ತಿಮಾನತಿತೇಜಸ್ವೀ ಹಸತಃ ಪರಮೇಷ್ಠಿನಃ ॥ ೧೩ ॥

ಪ್ರದೀಪ್ತಾಸ್ಯೋ ಮಹಾದೀಪ್ತಃ ಕುಮಾರೋ ಭಾಸಯನ್ದಿಶಃ ।
ಪರಮೇಷ್ಠಿಗುಣೈರ್ಯುಕ್ತಃ ಸಾಕ್ಷಾದ್ರುದ್ರ ಇವಾಪರಃ ॥ ೧೪ ॥

ಉತ್ಪನ್ನಮಾತ್ರೋ ದೇವಾನಾಂ ಪ್ರ್ಯಕ್ಷಿತಃ ಸಂಪ್ರಮೋಹಯನ್ ।
ಕಾಂತ್ಯಾ ದೀಪ್ತ್ಯಾ ತಥಾ ಮೂರ್ತ್ಯಾ ರೂಪೇಣ ಚ ಮಹಾತ್ಮವಾನ್ ॥೧೫॥

ತಂ ದೃಷ್ಟ್ವಾ ಪರಮಂ ರೂಪಂ ಕುಮಾರಸ್ಯ ಮಹಾತ್ಮನಃ ।
ಉಮಾನಿಮೇಷನೇತ್ರಾಭ್ಯಾಂ ತಮುವಶ್ಯಚ್ಚ ಭಾಮಿನೀ ॥ ೧೬ ॥

ತಂ ದೃಷ್ಟ್ವಾ ಕುಪಿತೋ ದೇವಃ ಸ್ತ್ರೀಭಾವಂ ಚಂಚಲಂ ತಥಾ ।
ಮತ್ವಾ ಕುಮಾರರೂಪಂತು ಶೋಭನಂ ಮೋಹನಂ ದೃಶಾಂ ॥ ೧೭ ॥

(ಪೃಥ್ವಿಜಲತೇಜಸ್ಸುವಾಯು ಈ ನಾಲ್ಕರಿಂದ ನಗುತ್ತಿದ್ದ ರುದ್ರನ ದೆಸೆಯಿಂದ) ಮೂರ್ತೀಭವಿಸಿದವನೂ, ಅತಿತೇಜೋವಂತನೂ, ಹೊಳೆಯುವ ಮುಖವುಳ್ಳವನೂ, ತನ್ನ ಕಾಂತಿಯಿಂದ ದಿಕ್ಕುಗಳನ್ನು ಪ್ರಕಾಶಗೊಳಿಸುವವನೂ, ಬ್ರಹ್ಮಗುಣಗಳುಳ್ಳವನೂ ಎರಡನೆಯ ಸಾಕ್ಷಾದ್ರುದ್ರನೋ ಎಂಬಂತಿರುವವನೂ ಆದ ಕುಮಾರನೊಬ್ಬನು ಉದಿಸಿದನು.

೧೫. ಮಹಾತ್ಮನಾದ ಅವನು ಹುಟ್ಟಿದಾಗಲೇ ತನ್ನ ಕಾಂತಿದೇಹಸೌಂದರ್ಯಾದಿಗಳಿಂದ ದೇವಸಮೂಹಗಳನ್ನು ಸಮ್ಮೋಹಗೊಳಿಸುತ್ತಿದ್ದನು.

೧೬. ಮಹಾತ್ಮನಾದ ಆ ಕುಮಾರನ ಅತಿಸೌಂದರ್ಯವನ್ನು ನೋಡಿ ಪಾರ್ವತೀದೇವಿಯು ಎವೆಯಿಕ್ಕದ ಕಣ್ಣುಗಳಿಂದ ಅವನನ್ನು ನೋಡಿದಳು.

೧೭-೧೮. ರುದ್ರದೇವನು ಆ ಬಗೆಯ ಚಂಚಲವಾದ ಸ್ತ್ರೀಸ್ವಭಾವವನ್ನು ನೋಡಿ ಕೋಪಗೊಂಡು ಆ ಕುಮಾರನ(ಸೊಗಸಾದ) ರೂಪವು ಕಣ್ಣುಗಳಿಗೆ

ತತಃ ಶಶಾಪ ತಂ ದೇವೋ ಗಣೇಶಂ ಪರಮೇಶ್ವರಃ ।
ಕುಮಾರ ಗಜವಕ್ತ್ರಸ್ತ್ವಂ ಪ್ರಲಂಬಜಠರಸ್ತಥಾ ॥
ಭವಿಷ್ಯಸಿ ತಥಾ ಸರ್ಪೈರುಪವೀತಗತಿರ್ಧ್ರುವಂ ॥ ೧೮ ॥

ಏವಂ ಶಶಾಪ ತಂ ದೇವಸ್ತೀವ್ರಕೋಪಸಮನ್ವಿತಃ ।
ಧುನ್ವನ್ ಶರೀರಮುತ್ಥಾಪ್ಯ ತತೋ ದೇವೋ ರುಷಾನ್ವಿತಃ ॥ ೧೯ ॥

ಯಥಾಯಥಾಸೌ ಸ್ವಶರೀರಮಾದ್ಯಂ
ಧುನೋತಿ ದೇವಸ್ತ್ರಿಶಿಖಾಸ್ತ್ರಪಾಣಿಃ ।
ತಥಾ ತಥಾ ಚಾಂಗರುಹಾಚ್ಚ ಕಾಸೇ
ಜಲಂ ಕ್ಷಿತೌ ಸನ್ಯಪತತ್ತಥಾನ್ಯೇ ॥ ೨೦ ॥

ವಿನಾಯಕಾನೇಕವಿಧಾ ಗಜಾಸ್ಯಾಃ ।
ತಮಾಲನೀಲಾಂಜನಸನ್ನಿಕಾಶಾಃ ॥
ಉತ್ತಸ್ಥುರುಚ್ಚೈರ್ವಿವಿಧಾಸ್ತ್ರಹಸ್ತಾಃ ।
ತತಸ್ತು ದೇವೋ ಮನಸಾಕುಲೇನ ॥ ೨೧ ॥

ಸೊಗಸಾದುದು, ಮೋಹಕವಾದುದು ಎಂದರಿತು ಬಳಿಕ ಆ ಪರಮೇಶ್ವರನು ಉಗ್ರಕೋಪದಿಂದ ಅವನನ್ನು "ಕುಮಾರ, ನೀನು ಗಜಮುಖನೂ, ಲಂಬೋದರನೂ(ದೊಳ್ಳುಹೊಟ್ಟೆಯವನೂ,) ಸರ್ಪಗಳ ಯಜ್ಞೋಪವೀತವುಳ್ಳವನೂ ನಿಜವಾಗಿಯೂ ಆಗುವೆ." ಎಂದು ಶಪಿಸಿದನು. ಬಳಿಕ ಇನ್ನೂ ಕೋಪದಿಂದಲೇ ಎದ್ದು ನಿಂತು ಆ ದೇವನು ಮೈಯ್ಯೊದರಿದನು.

೨೦. ತ್ರಿಶೂಲಪಾಣಿಯಾದ ಆ ದೇವನು ಆದಿಭೂತವಾದ ತನ್ನ ದೇಹವನ್ನು ಒದರಿದಷ್ಟೂ ಮೈಯ ರೋಮಗಳಿಂದ ನೀರು ಭೂಮಿಯಮೇಲೆ ಬಿದ್ದಿತು.

೨೧–೨೨. ಅದರಿಂದ ಆನೆಮೊಗದವರೂ, ಹೊಂಗೆಯಮರ, ನೀಲಮಣಿ, ಕಾಡಿಗೆ ಇವುಗಳಂತೆ ಮೈಬಣ್ಣವುಳ್ಳವರೂ, ಬಗೆಬಗೆಯಾದ ಆಯುಧಗಳನ್ನು ಹಿಡಿದಿರುವವರೂ ಆದ ಹಲವು ಬಗೆಯ ವಿನಾಯಕರು ಎದ್ದುನಿಂತರು. ಬಳಿಕ ರುದ್ರದೇವನು ವ್ಯಾಕುಲಗೊಂಡ ಮನಸ್ಸಿನಿಂದ "ಇದೇನು! ಅದ್ಭುತಕಾರ್ಯಗಳನ್ನು

ಕಿಮೇತದಿತ್ಯದ್ಭುತಕರ್ಮಕಾರೀ ।
ಹ್ಯೇಕಃ ಕರೋತ್ಯಪ್ರತಿಮಂ ಮಹಚ್ಚ ॥
ಕಾರ್ಯಂ ಸುರಾಣಾಂ ಕೃತಮೇತದಿಷ್ಟಂ ।
ಭವೇದಥೈನಂ ಪರಿತಃ ಕುತಸ್ತ್ವತ್ ॥ ೨೨ ॥

ದಿವೌಕಸಾಂ ಚಿಂತಯತಾಂ ತಥಾತು ।
ವಿನಾಯಕೈಃ ಕ್ಷ್ಮಾ ಕ್ಷುಭಿತಾ ಬಭೂವ ।
ಚತುರ್ಮುಖಶ್ಚಾಪತ್ರಿಮಂ ವಿಮಾನಮ್ ।
ಆರುಹ್ಯ ಖೇ ವಾಕ್ಯಮಿದಂ ಜಗಾದ ॥ ೨೩ ॥

ಧನ್ಯಾಃ ಸ್ಥ ದೇವಾಃ ಸುರನಾಯಕೇನ ।
ತ್ರಿಲೋಚನೇನಾದ್ಭುತರೂಪಿಣಾ ಚ ।
ಅನುಗ್ರಹಿತಾಃ ಪರಮೇಶ್ವರೇಣ ।
ಸುರದ್ವಿಷಾಂ ವಿಘ್ನಕೃತಾಂ ನತೌ ಚ ॥ ೨೪ ॥

ಇತ್ಯೇವಮುಕ್ತ್ವಾ ಪ್ರಹಿತಾಮಹಸ್ತಾನ್ ।
ಉವಾಚ ದೇವಸ್ತ್ರಿಶಿಖಾಸ್ತ್ರಪಾಣಿಮ್ ।
ಯಸ್ತೇ ವಿಭೋ ವಕ್ತ್ರಸಮುದ್ಭವಃ ಪ್ರಭುಃ ।
ವಿನಾಯಕಾನಾಂ ಭವ ಸಂತ್ವಿಮೇ ನುಗಾಃ ॥ ೨೫ ॥

ಮಾಡುವ ಒಬ್ಬನು ಅಸದೃಶವಾದ ಮಹಿಮೆಯನ್ನು ತೋರಿಸಿದ್ದಾನೆ. ದೇವತೆಗಳಿಗಿಷ್ಟವಾದ ಇವನ ಸೃಷ್ಟಿಯನ್ನು ನಾನುಮಾಡಿದೆನು. ಆಮೇಲೆ ಇವನ ಸುತ್ತಲೂ ಇರುವುದು ಹೇಗಾಯಿತು!'' ಎಂದು ಚಿಂತಿಸುತ್ತಿದ್ದನು.

೨೩. ದೇವತೆಗಳೂ ಹಾಗೆಯೇ ಚಿಂತಿಸುತ್ತಿರುವಷ್ಟರಲ್ಲಿ ಆ ವಿನಾಯಕರಿಂದ ಭೂಮಿಯು ಅಲ್ಲೋಲಕಲ್ಲೋಲವಾಯಿತು. ಬ್ರಹ್ಮನು ಅಸದೃಶವಾದ ವಿಮಾನವನ್ನೇರಿ ಬಂದು ಆಕಾಶದಲ್ಲಿ ನಿಂದು ಈ (ಮುಂದಿನ) ಮಾತನಾಡಿದನು.

೨೪. ''ದೇವತೆಗಳೇ, ನಿಮಗೊಡೆಯನೂ, ಮೂರುಕಣ್ಣುಳ್ಳವನೂ, ಅದ್ಭುತರೂಪನೂ ಆದ ಪರಮೇಶ್ವರನಿಂದ ಸುರದ್ವೇಷಿಗಳಿಗೆ ವಿಘ್ನಕಾರಿಯನ್ನು ಸೃಷ್ಟಿಸುವುದರ ಮೂಲಕವಾಗಿ ಅನುಗ್ರಹವನ್ನು ಪಡೆದ ನೀವು ಧನ್ಯರು.''

೨೫. ಹೀಗೆಂದು ಆ ಬ್ರಹ್ಮದೇವನು ಶೂಲಪಾಣಿಯಾದ ರುದ್ರನನ್ನು ಕುರಿತು"ವಿಭುವಾದ ಭವನೇ, ನಿನ್ನ ಮುಖದಿಂದುಸಿದವನು ಈ ವಿನಾಯಕರಿಗೆ ಪ್ರಭುವಾಗಲಿ. ಇವರು ಈತನ ಅನುಚರರಾಗಲಿ.''

ಭವಾನ್ತಥಾಸ್ಯಾತ್ಮವರೇಣ ಚಾಂಬರೇ
ತ್ವಯಾ ಚತುಷ್ವರ್ಗಸ್ತು ಶರೀರಚಾರೀ ।
ಆಕಾಶಮೇತದ್ಬಹುಧಾ ವ್ಯವಸ್ಥಿತಂ
ತ್ವಯಾ ಚ್ಯೈ (ಕೋ)ತೇ ವದತಾ ತೇಽಪಯಾಂತು ॥ ೨೬ ॥

ಪ್ರಭುರ್ಭವ ತ್ವಂ ಪ್ರತಿಮಾಸ್ತ್ರಪಾಣಯೋ
ಇಮಾನಿ ಚಾಸ್ತ್ರಾಣಿ ವರಾಂಶ್ಚ ದೇಹಿ ।
ಇತ್ಯೇವಮುಕ್ತ್ವಾ ವಿಗತೇ ಪಿತಾಮಹೇ
ತ್ರಿಲೋಚನಶ್ಚಾತ್ಮಭವಂ ಜಗಾದ ॥ ೨೭ ॥

ವಿನಾಯಕೋ ವಿಘ್ನಕರೋ ಗಜಾಸ್ಯೋ
ಗಣೇಶನಾಮಾ ಚ ಭವಸ್ಯ ಪುತ್ರಃ ।
ಏತೇ ಚ ಸರ್ವೇ ತ್ವಪಯಾಂ ತು ಭೃತ್ಯಾ
ವಿನಾಯಕಾಃ ಕ್ರೂರದೃಶಃ ಪ್ರಚಂಡಾಃ ॥ ೨೮ ॥

---

೨೬. ನೀನು ಹಾಗೆಯೇ ಈತನಿಗೆ ಪ್ರಭು. ಬೇಕಾದ ವರವನ್ನು ಕೊಡುವ ನಿನ್ನಿಂದ ಈ ವಿನಾಯಕನು ಆಕಾಶದಲ್ಲಿ ನಾಲ್ಕು ದಿಕ್ಕುಗಳಲ್ಲೂ ಈ ದೇಹದಿಂದಲೇ ಸಂಚರಿಸುವವನಾಗಲಿ. ಈ ಆಕಾಶವು ಆ ವಿನಾಯಕರಿಂದ ಬಹಳವಾಗಿ ತುಂಬಿದೆ. ನಿನ್ನ ಮಾತಿನಿಂದ ಅವರೆಲ್ಲರೂ ಹೊರಟುಹೋಗಲಿ.

೨೭. ಭವನೇ, ಪ್ರಭುವಾದ ನೀನು ಅಸದೃಶವಾದ ಅಸ್ತ್ರವನ್ನು ಕೈಯಲ್ಲಿ ಹಿಡಿದುಕೊಂಡಿರುವ ಈ ಮೂಲವಿನಾಯಕನಿಗೆ ಈ ಅಸ್ತ್ರಗಳನ್ನೂ ವರಗಳನ್ನೂ ಕೊಡು." ಎಂದು ಹೇಳಿ ಬ್ರಹ್ಮನು ಹೊರಟುಹೋಗಲು ತ್ರಿನೇತ್ರನಾದ ರುದ್ರನು ಮಗನನ್ನು ಕುರಿತು ಹೇಳಿದನು.

೨೮. "ನಿನಗೆ ವಿನಾಯಕ, (ದುಷ್ಕಾರ್ಯ) ವಿಘ್ನಕರ, ಗಜಾಸ್ಯ, ಗಣೇಶ, ಮಹೇಶಪುತ್ರ, ಎಂಬ ಹೆಸರುಗಳಾಗಲಿ. ಕ್ರೂರವಾದ ದೃಷ್ಟಿಯುಳ್ಳವರೂ, ಅತಿ ಕ್ರೂರರೂ, ನಿನ್ನ ಭೃತ್ಯರೂ ಆದ ಈ ವಿನಾಯಕರು ಇಲ್ಲಿಂದ ಹೊರಟುಹೋಗಲಿ.

ಉಚ್ಛ್ರಿಷ್ಟದಾನಾದಿವಿವೃದ್ಧದೇಹಾಃ
ಕಾರ್ಯೇಷು ಸಿದ್ಧಿಂಪ್ರತಿಪಾದಯಂತಃ ॥ ೨೯ ॥

ಭವಾಂಶ್ಚ ದೇವೇಷು ತಥಾ ಮಖೇಷು
ಕಾರ್ಯೇಷು ಚಾನ್ಯೇಷು ಮಹಾನುಭಾವಃ ।
ಅಗ್ರೇತುಪೂಜಾಂ ಲಭತೇಽನ್ಯಥಾ ಚ
ವಿನಾಶಯಿಷ್ಯಸ್ಯಥ ಕಾರ್ಯಸಿದ್ಧಿಂ ॥ ೩೦ ॥

ಇತ್ಯೇವಮುಕ್ತ್ವಾ ಪರಮೇಶ್ವರೇಣ
ಸುರೈಃ ಸಮಂ ಕಾಂಚನಕುಂಭಸಂಸ್ಥೈಃ ।
ಜಲೈಸ್ತಥಾಸಾವಭಿಷಿಕ್ತಗಾತ್ರೋ
ರರಾಜ ರಾಜೇಂದ್ರ ವಿನಾಯಕಾನಾಂ ॥ ೩೧ ॥

ದೃಷ್ಟ್ವಾಭಿಷಿಚ್ಯಮಾನಂ ತು ದೇವಾಸ್ತಂ ಗಣನಾಯಕಂ ।
ತುಷ್ಟುವುಃ ಪ್ರಯತಾಃ ಸರ್ವೇ ತ್ರಿಶೂಲಾಸ್ತ್ರಸ್ಯ ಸನ್ನಿಧೌ ॥ ೩೨ ॥

---

೨೯. ಅವರು ಹೆಚ್ಚಾದ ತೇಜಸ್ಸಾಮರ್ಥ್ಯವುದಗಳಿಂದ ಕೂಡಿ ಬೆಳೆದು ಸೃಜ್ಜನರ ಮತ್ತು ದೇವತೆಗಳ ಕಾರ್ಯಗಳಲ್ಲಿ ಸಿದ್ಧಿಯನ್ನುಂಟುಮಾಡುವವರಾಗಲಿ.

೩೦. ಮಹಾನುಭಾವನಾಗಿ ನೀನು ಯಜ್ಞಗಳಲ್ಲಿಯೂ ಬೇರೆ ಕಾರ್ಯಗಳಲ್ಲಿಯೂ ದೇವತೆಗಳಲ್ಲಿ ಅಗ್ರಪೂಜೆಯನ್ನು ಪಡೆಯುತ್ತೀಯೆ. ನಿನಗೆ ಅಗ್ರಪೂಜೆಯಾಗದಿದ್ದರೆ ಕಾರ್ಯಸಿದ್ಧಿಯನ್ನು ಹಾಳುಮಾಡುತ್ತೀಯೆ."

೩೧. ಹೀಗೆ ಹೇಳಿ ದೇವತೆಗಳೊಡನೆ ಪರಮೇಶ್ವರನು ಸುವರ್ಣ ಕಲಶಗಳಲ್ಲಿದ್ದ ನೀರಿನಿಂದ ಅಭಿಷೇಕ ಮಾಡಲಾಗಿ ಆ ವಿನಾಯಕರಾಜನಾದ ಗಣಪತಿಯು ಪ್ರಕಾಶಿಸಿದನು.

೩೨. ಅಭಿಷೇಕ ಮಾಡಿಸಿಕೊಳ್ಳುತ್ತಿದ್ದ ಆ ಗಣಪತಿಯನ್ನು ನೋಡಿ ದೇವತೆಗಳೆಲ್ಲರೂ ತ್ರಿಶೂಲಪಾಣಿಯಾದ ಆ ಶಿವನೆದುರಿನಲ್ಲಿಯೇ ಪರಿಶುದ್ಧರಾಗಿ ಸ್ತೋತ್ರಮಾಡಿದರು.

|| ದೇವಾ ಊಚುಃ ||

ನಮಸ್ತೇ ಗಜವಕ್ತ್ರಾಯ ನಮಸ್ತೇ ಗಣನಾಯಕ ।
ವಿನಾಯಕ ನಮಸ್ತೇಽಸ್ತು ನಮಸ್ತೇ ಚಂಡವಿಕ್ರಮ ॥ ೩೩ ॥

ನಮೋಽಸ್ತು ತೇ ವಿಘ್ನಕರ್ತ್ರೇ ನಮಸ್ತೇ ಸರ್ಪಮೇಖಲ ।
ನಮಸ್ತೇ ರುದ್ರವಕ್ತ್ರೋತ್ಥ ಪ್ರಲಂಬಜಠರಾಶ್ರಿತ ॥
ಸರ್ವದೇವನಮಸ್ಕಾರಾದವಿಘ್ನಂ ಕುರು ಸರ್ವದಾ ॥ ೩೪ ॥

ಏವಂ ಸ್ತುತಸ್ತದಾ ದೇವೈಃ ಮಹಾತ್ಮಾ ಗಣನಾಯಕಃ ।
ಅಭಿಷಿಕ್ತಸ್ತು ರುದ್ರೇಣ ಸೋಮಾಯಾಪತ್ಯತಾಂಗತಃ ॥ ೩೫ ॥

ಏತಚ್ಚತುರ್ಥ್ಯಾಂ ಸಂಪನ್ನಂ ಗಣಾಧ್ಯಕ್ಷಸ್ಯ ಪಾರ್ಥಿವ ।
ಯತಸ್ತತೋಽಯಂ ಮಹತೀ ತಿಥೀನಾಂ ಪರಮಾ ತಿಥಿಃ ॥ ೩೬ ॥

ಏತಸ್ಯಾಂ ಯಸ್ತಿಲಾನ್ ಭುಕ್ತ್ವಾ ಭಕ್ತ್ಯಾ ಗಣಪತಿಂನೃಪ ।
ಆರಾಧಯತಿ ತಸ್ಯಾಶು ತುಷ್ಯತೇ ನಾತ್ರ ಸಂಶಯಃ ॥ ೩೭ ॥

---

೩೩. ವಂದನಂ ಗಜವಕ್ತ್ರಂಗೆ ವಂದನಂ ಗಣನಾಯಕ. ವಿನಕಂಗೆ ನಮಸ್ಕಾರಂ, ವಂದನಂ ಚಂಡವಿಕ್ರಮ.

೩೪. ನಮಸ್ಕಾರಂ ವಿಘ್ನಕಾರಿ, ವಂದನಂ ಸರ್ಪಮೇಖಲ. ವಂದನಂ ರುದ್ರಮುಖಜ, ಲಂಬೋದರನೆ, ವಂದನಂ. ಸರ್ವದೇವ ನಮಸ್ಕಾರಂ ಅವಿಘ್ನಂ ಮಾಳ್ಪುದಾವಗಮ್.

೩೫. ರುದ್ರನಿಂದ ಅಭಿಷಕ್ತನಾಗಿ ದೇವತೆಗಳಿಂದ ಹೀಗೆ ಸ್ತುತನಾದ ಮಹಾತ್ಮನಾದ ಆ ಗಣಪತಿಯು ಆಗ ಪಾರ್ವತಿಗೂ ಪುತ್ರತ್ವವನು ಪಡೆದನು.

೩೬. ದೊರೆಯೇ, ಗಣನಾಥನ ಈ ವಿಚಾರವು ಚೌತಿಯಂದಿನ ನಡೆದುದರಿಂದ ಉತ್ತಮವಾದ ಈ ಚೌತಿಯು ತಿಥಿಗಳಲ್ಲೆಲ್ಲಾ ಶ್ರೇಷ್ಠವಾದುದು.

೩೭. ಈ ಚೌತಿಯಲ್ಲಿ ಭಕ್ತಿಯಿಂದ ಗಣಪತಿಯನ್ನು ಪೂಜಿಸಿ, ಎಳ್ಳನ್ನು ಮಾತ್ರ ತಿಂದಿರುವವರಿಗೆ ತೃಪ್ತನಾದ ಅವನು ಒಲಿಯುವುದರಲ್ಲಿ ಸಂದೇಹವಿಲ್ಲ.

ಯಶ್ಚೈತತ್ಪಠತಿ ಸ್ತೋತ್ರಂ ಯಶ್ಚೈತಚ್ಛೃಣುಯಾತ್ಸದಾ ।
ನ ತಸ್ಯ ವಿಘ್ನಾ ಜಾಯಂತೇ ನಪಾಪಂ ಸರ್ವಥಾ ನೃಪ ॥ ೩೮ ॥

ಇತಿ ಶ್ರೀವರಾಹಪುರಾಣೇ ಆದಿವೃತ್ತಾಂತೇ ಮಹಾತಪ ಉಪಾಖ್ಯಾನೇ ವಿನಾಯಕೋತ್ಪತ್ತಿರ್ನಾಮ ತ್ರಯೋವಿಂಶೋಽಧ್ಯಾಯಃ

---

೩೮. ಯಾರು ಸದಾ ಈ ಸ್ತೋತ್ರವನ್ನು ಹೇಳುವರೋ, ಯಾರು ಕೇಳುವರೋ, ಅವರಿಗೆ ನಿಜವಾಗಿಯೂ ಕಾರ್ಯಗಳಲ್ಲಿ ತಡೆಯುಂಟಾಗುವುದಿಲ್ಲ. ಪಾಪವೂ ಇಲ್ಲ.

ಅಧ್ಯಾಯದ ಸಾರಾಂಶ—ಮಹಾತಪನು ಪ್ರಜಾಪಾಲನಿಗೆ ಗಣಪತಿಯ ವಿಚಾರವನ್ನು ಹೇಳುವನು—ಇಂದ್ರಾದಿದೇವತೆಗಳು ಒಂದಾನೊಂದು ಕಾಲದಲ್ಲಿ ದುಷ್ಕಾರ್ಯಗಳಿಗೆ ವಿಘ್ನವನ್ನುಂಟುಮಾಡಲು ಯಾರನ್ನಾದರೂ ಸೃಷ್ಟಿಸಬೇಕೆಂದು ಶಿವನನ್ನು ಪ್ರಾರ್ಥಿಸಿದರು. ಆಗ ಆ ದೇವನು ಪಾರ್ವತಿಯ ಮುಖವನ್ನು ನೋಡುತ್ತಾ, ಚಿಂತಿಸುತ್ತಿರಲು, ಆಕಾಶಕ್ಕೆ ಯಾವ ಮೂರ್ತಿಯೂ ಇಲ್ಲವೆಂಬ ಯೋಚನೆಯು ಹೊಳೆಯಲು ನಕ್ಕನು ಆ ನಗುವಿನಿಂದ ಅತಿಶಯ ಸೌಂದರ್ಯವುಳ್ಳ ಕುಮಾರನೊಬ್ಬನುದಿಸಿದನು. ಪಾರ್ವತೀದೇವಿಯೂ ಎವೆಯಿಕ್ಕದೆ ಅವನನ್ನು ನೋಡುತ್ತಿದ್ದಳು. ರುದ್ರನು, ಆ ಕುಮಾರನ ರೂಪವು ಮೋಹಕವಾಗಿರುವುದೇ ಕಾರಣವೆಂದು ಉಗ್ರಕೋಪದಿಂದ ಕುಮಾರನನ್ನು ಗಜಮುಖನೂ, ಲಂಬೋದರನೂ, ಸರ್ಪಯಜ್ಞೋಪವೀತನೂ ಆಗುವಂತೆ ಶಪಿಸಿ ಇನ್ನೂ ಕೋಪದಿಂದ ಮಯ್ಯನ್ನೊದರಿದನು. ಆತನ ರೋಮಗಳಿಂದ ಬಿದ್ದ ನೀರಿನಿಂದ ವಿವಿಧಾಯುಧಧಾರಿಗಳಾದ ಅಸಂಖ್ಯಾತ ಗಜಮುಖರುದಿಸಿದರು. ಆ ಅದ್ಭುತವನ್ನು ನೋಡಿ ಶಿವನು ಚಿಂತಿಸುತ್ತಿರಲು ಬ್ರಹ್ಮನು ಅಲ್ಲಿಗೆ ಬಂದು"ದೇವಾ, ನಿನ್ನ ನಗುವಿನಿಂದ ಮೊದಲು ಉದಿಸಿದವನೇ ಸುರದ್ವೇಷಿಗಳ ಕಾರ್ಯಕ್ಕೆ ವಿಘ್ನಕರನಾಗಿರುವನು. ಉಳಿದವರು ಅವನಿಗ ಅನುಚರರು ಕುಮಾರನಿಗೆ ಬೇಕಾದ ವರಗಳನ್ನು ಕೊಡು." ಎಂದು ಹೇಳಿದನು. ಈಶ್ವರನು ವಿನಾಯಕನಿಗೆ ಯಜ್ಞಾದಿ ಸಕಲ ಕಾರ್ಯಗಳಲ್ಲೂ ಅಗ್ರಪೂಜೆಯೇ ಮೊದಲಾದ ಹಲವು ವರಗಳನ್ನು ಕೊಟ್ಟು, ಸುವರ್ಣಕಲಶಗಳಿಂದ ಅಭಿಷೇಕಮಾಡಿದನು. ಅಭಿಷೇಕವಾಗುತ್ತಿರುವಾಗ ದೇವತೆಗಳೆಲ್ಲರೂ ಸ್ತೋತ್ರಗಳಿಂದ ಸ್ತುತಿಸಿದರು. ಇದೆಲ್ಲವೂ ಚೌತಿಯದಿನ ನಡೆದುದರಿಂದ ಗಣಪತಿಗೆ ಅದು ಪ್ರಿಯವಾದ ತಿಥಿ.(ಗಣೇಶ ಜನ್ಮದ ಈ ಕಥೆಯು ಇತರ ಪುರಾಣಕಥೆಗಳಿಗೆ ಭಿನ್ನವಾಗಿದೆ.) ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇಪ್ಪತ್ತಮೂರನೆಯ ಅಧ್ಯಾಯ

॥ ಶ್ರೀಃ ॥

-X-

ಚತುರ್ವಿಂಶೋಽಧ್ಯಾಯಃ

ಅಥ ಸರ್ಪೋತ್ಪತ್ತಿಃ

॥ ಧರಣ್ಯುವಾಚ ॥

ಕಥಂತೇ ಗಾತ್ರಸಂಸ್ಪರ್ಶಾನ್ಮೂರ್ತಿಮಂತೋ ಮಹಾಬಲಾಃ |
ನಾಗಾ ಬಭೂವುರ್ದೇವಸ್ಯ ಕಾರಣಂತೇ ಮಹೀಧರ ॥ ೧ ॥

॥ ಶ್ರೀ ವರಾಹ ಉವಾಚ ॥

ಶ್ರುತ್ವಾ ಗಣಪತೇರ್ಜನ್ಮ ಪ್ರಜಾಪಾಲೋ ನರಾಧಿಪಃ ।
ಉವಾಚ ಶ್ಲಕ್ಷ್ಣಯಾ ವಾಚಾ ತಂ ಮುನಿಂ ಶಂಸಿತವ್ರತಂ ॥ ೨ ॥

ಇಪ್ಪತ್ತನಾಲ್ಕನೆಯ ಅಧ್ಯಾಯ

ಸರ್ಪೋತ್ಪತ್ತಿ

೧. ಭೂದೇವಿ—ಭೂಧರನೇ, ಪರಬ್ರಹ್ಮನಾದ ನಿನ್ನ ಆ ಧಾತುಗಳು ಹೇಗೆ ದೇವನ ದೇಹಸಂಬಂಧದಿಂದ ರೂಪಗಳನ್ನು ಪಡೆದು ಮಹಾಬಲವುಳ್ಳ ನಾಗಗಳಾದುವು?

೨. ಶ್ರೀವರಾಹ—ಗಣಪತಿಯ ಜನ್ಮವಿಚಾರವನ್ನು ಕೇಳಿ, ಪ್ರಜಾಪಾಲ ರಾಜನು ಶ್ಲಾಘ್ಯವ್ರತಿಯಾದ ಮಹಾತಪಮುನಿಯನ್ನು ಕುರಿತು ಮೃದುನುಡಿಗಳಿಂದ ಕೇಳಿದನು.

॥ ಪ್ರಜಾಪಾಲ ಉವಾಚ ॥

ಭಗವಂಸ್ತಾರ್ಕ್ಷ್ಯವಿಷಯಾಃ ಕಥಂ ಮೂರ್ತಿಮುಪಾಗತಾಃ |
ನಾಗಾ ಬಭೂವುಃ ಕುಟಿಲಾ ಏತದಾಖ್ಯಾತುಮರ್ಹಸಿ ॥ ೩ ॥

॥ ಮಹಾತಪಾ ಉವಾಚ ॥

ಸೃಜತಾ ಬ್ರಹ್ಮಣಾ ಸೃಷ್ಟಿಂ ಮರೀಚೇಃ ಸೂತಿಕಾರಣಂ |
ಪ್ರಥಮಂ ಮನಸಾ ಧ್ಯಾತಸ್ತಸ್ಯ ಪುತ್ರಸ್ತು ಕಶ್ಯಪಃ ॥ ೪ ॥

ತಸ್ಯ ದಾಕ್ಷಾಯಣೀ ಭಾರ್ಯಾ ಕದ್ರೂರ್ನಾಮ ಶುಚಿಸ್ಮಿತಾ ॥ ೫ ॥

ಮಾರೀಚೋ ಜನಯಾಮಾಸ ತಸ್ಯಾಂ ಪುತ್ರಾನ್ಮಹಾಬಲಾನ್ |
ಅನಂತಂ ವಾಸುಕಿಂ ಚೈವ ಕಂಬಲಂ ಚ ಮಹಾಬಲಂ ॥
ಕಾರ್ಕೋಟಕಂ ಚ ರಾಜೇಂದ್ರ ಪದ್ಮಂಚಾನ್ಯಂ ಸರೀಸೃಪಂ ॥ ೬ ॥

ಮಹಾಪದ್ಮಂ ತಥಾ ಶಂಖಂ ಕುಲಿಕಂ ಪಾಪರಾಜಿಲಂ |
ಏತೇ ಕಶ್ಯಪದಾಯಾದಾಃ ಪ್ರಧಾನಾಃ ಪರಿಕೀರ್ತಿತಾಃ ॥ ೭ ॥

---

೩. ಪ್ರಜಾಪಾಲ—ಪೂಜ್ಯನೇ ನಾಗಲೋಕದವರು ಹೇಗೆ ದೇಹವನ್ನು ಪಡೆದು ವಕ್ರಗಳಾದ ಹಾವುಗಳಾದರು ? ಎಂಬುದನ್ನು ಹೇಳಬೇಕು.

೪. ಮಹಾತಪಮುನಿ—ಸೃಷ್ಟಿಯನ್ನು ಮಾಡುವುದಕ್ಕೆ ಇಚ್ಛಿಸಿದ ಬ್ರಹ್ಮನು ಮೊದಲು ಮರೀಚಿಯನ್ನು ಮಾನಸಪುತ್ರನನ್ನಾಗಿ ಪಡೆದನು. ಮರೀಚಿಗೆ ಕಶ್ಯಪನೆಂಬ ಪುತ್ರನುದಿಸಿದನು.

೫. ಕಶ್ಯಪನಿಗೆ ದಕ್ಷಪುತ್ರಿಯೂ, ಮಂದಹಾಸೆಯೂ ಆದ ಕದ್ರುವೆಂಬುವಳು ಪತ್ನಿಯಾದಳು.

೬–೭. ಕಶ್ಯಪನು ಆ ಕದ್ರುವಿನಲ್ಲಿ ಅನಂತ, ವಾಸುಕಿ, ಕಂಬಲ, ಕಾರ್ಕೋಟಕ, ಪದ್ಮ, ಮಹಾಪದ್ಮ, ಶಂಖ, ಕುಲಿಕ ಎಂಬ ಮಹಾಬಲಶಾಲಿಗಳಾದ ನಾಗರನ್ನು ಪುತ್ರರನ್ನಾಗಿ ಪಡೆದನು. ಈ ಕಶ್ಯಪಪುತ್ರರು ನಾಗರಲ್ಲಿ ಪ್ರಮುಖರೆನಿಸಿಕೊಂಡರು.

ಏತೇಷಾಂ ತು ಪ್ರಸೂತ್ಯಾ ತು ಇದಮಾಪೂರಿತಂ ಜಗತ್ ॥ ೮ ॥

ಕುಟಿಲಾ ಹೀನಕರ್ಮಾಣಃ ತೀಕ್ಷ್ಣಾಸ್ಯೋತ್ಥವಿಷೋಲ್ಬಣಾಃ ।
ದೃಷ್ಟ್ವಾ ಸಂದಶ್ಯ ಮನುಜಾನ್ ಭಸ್ಮ ಕುರ್ಯುಃ ಕ್ಷಣಾತ್ ಧ್ರುವಂ ॥
ಶಬ್ದಗಾಮೀ ಯಥಾ ಸ್ಪರ್ಶಃ ಮನುಷ್ಯಾಣಾಂ ನರಾಧಿಪ ॥ ೯ ॥

ಅಹನ್ಯಹನಿ ಜಾಯೇತ ಕ್ಷಯಃ ಪರಮದಾರುಣಃ ॥ ೧೦ ॥

ಆತ್ಮನಸ್ತು ಕ್ಷಯಂ ದೃಷ್ಟ್ವಾ ಪ್ರಜಾಃ ಸರ್ವಾಃ ಸಮಂತತಃ ।
ಜಗ್ಮುಃ ಶರಣ್ಯಂ ಶರಣಂ ಪರಂತು ಪರಮೇಶ್ವರಂ ॥ ೧೧ ॥

ಇಮಮೇವಾರ್ಥಮುದ್ದಿಶ್ಯ ಪ್ರಜಾಃ ಸರ್ವಾ ಮಹೀಪತೇ ।
ಊಚುಃ ಕಮಲಜಂದೇವಂ ಪುರಾಣಂ ಬ್ರಹ್ಮಸಂಜ್ಞಿತಂ ॥ ೧೨ ॥

---

೮. ಈ ನಾಗರ ಸಂತಾನದಿಂದಲಾದರೋ ಈ ಜಗತ್ತೆಲ್ಲವೂ ತುಂಬಿ ಹೋಯಿತು.

೯. ದೊರೆಯೇ, ಕುಟಿಲಗಳೂ, ಹೀನಕರ್ಮಿಗಳೂ, ಕ್ರೂರವಾದ ಬಾಯ ವಿಷದಿಂದ ಭಯಂಕರಗಳೂ ಆದ ಅವು, ಮನುಷ್ಯರನ್ನು ನೋಡಿ ಕ್ಷಣಮಾತ್ರದಲ್ಲಿ ಕಚ್ಚಿ, ನಿಜವಾಗಿಯೂ ಮನುಷ್ಯರ ಸ್ಪರ್ಶವು ಗಂಟೆಯೇ ಮೊದಲಾದುವುಗಳ ಧ್ವನಿಯನ್ನು ಹಾಳುಮಾಡುವಂತೆ ಹಾಳುಮಾಡಿ ಬೂದಿಗೊಳಿಸುತ್ತಿದ್ದವು.

೧೦. ದಿನದಿನವೂ ಅತಿಭಯಂಕರವಾದ ನಾಶವಾಗುತ್ತಿದ್ದಿತು.

೧೧-೧೨. ತಮ್ಮ ನಾಶವನ್ನು ನೋಡಿ ಪ್ರಜೆಗಳೆಲ್ಲರೂ ಎಲ್ಲಾ ಕಡೆಯಿಂದಲೂ ಹೊರಟು, ಈ ತೊಂದರೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿಯೇ ರಕ್ಷಕನೂ, ಪರಮೇಶ್ವರನೂ, ಕಮಲಸಂಭವನೂ ಆದ ಬ್ರಹ್ಮನ ಹತ್ತಿರ ಹೋಗಿ ಅವನನ್ನು ಮರೆಹೊಕ್ಕು ಹೇಳಿಕೊಂಡರು.

ತ್ರಾಹಿ ನಸ್ತೀಕ್ಷ್ಣದಂಷ್ಟ್ರೇಭ್ಯೋ ಭುಜಂಗೇಭ್ಯೋ ಮಹಾಬಲ ।
ಅಹನ್ಯಹನಿ ಯೇ ದೇವ ಪಶ್ಯೇಯುರುರಗಾ ದೃಶಾ ॥
ಮನುಷ್ಯಂ ಮೃಗಯೂಥಂ ವಾ ತತ್ಸರ್ವಂ ಭಸ್ಮಸಾದ್ಭವೇತ್ ॥ ೧೩ ॥

ತ್ವಯಾ ಸೃಷ್ಟಿಃ ಕೃತಾ ದೇವ ಲೀಯತೇ ಸಾ ಭುಜಂಗಮೈಃ ।
ಏತದ್ ಜ್ಞಾತ್ವಾ ತು ದುರ್ವೃತ್ತಂ ತತ್ಕುರುಷ್ವ ಮಹಾಮತೇ ॥ ೧೪ ॥

॥ ಬ್ರಹ್ಮೋವಾಚ ॥

ಅಹಂ ರಕ್ಷಾಂ ವಿಧಾಸ್ಯಾಮಿ ಭವತೀನಾಂ ನ ಸಂಶಯಃ ।
ವ್ರಜಧ್ವಂ ಸ್ವಾನಿ ಧಿಷ್ಣ್ಯಾನಿ ಪ್ರಜಾಪಾಲಾಃ ಸಸಾಧ್ವಸಾಃ ॥ ೧೫ ॥

ಏವಮುಕ್ತಾಸ್ತು ಜಗ್ಮುಸ್ತೇ ಬ್ರಹ್ಮಣಾವ್ಯಕ್ತಮೂರ್ತಿನಾ ।
ಆಗತಾಸು ಪ್ರಜಾಸ್ವಾದ್ಯಸ್ತಾನಾಹೂಯ ಭುಜಂಗಮಾನ್ ।
ಶಶಾಪ ಪರಮಕ್ರುದ್ಧೋ ವಾಸುಕಿಪ್ರಮುಖಾಂಸ್ತಥಾ ॥ ೧೬ ॥

೧೩-೧೪. "ಮಹಾಬಲನಾದ ದೇವನೇ, ಹರಿತವಾದ ಹಲ್ಲುಗಳುಳ್ಳ ಸರ್ಪಗಳಿಂದ ನಮ್ಮನ್ನು ಳಿಸು. ದಿನದಿನವೂ ಆ ಉರಗಗಳು ನೋಡಿದ ಮೃಗಗಳಾಗಲಿ, ಮನುಷ್ಯರಾಗಲಿ, ಸುಟ್ಟು ಬೂದಿಯಾಗುವರು. ದೇವ, ನೀನು ಮಾಡಿದ ಸೃಷ್ಟಿಯು ಸರ್ಪಗಳಿಂದ ನಾಶವಾಗುತ್ತದೆ. ಈ ದುರ್ವೃತ್ತಿಯನ್ನರಿತು ಮಾಡಬೇಕಾದುದನ್ನು ಮಾಡಿ ನಮ್ಮನ್ನು ರಕ್ಷಿಸು."

೧೫. ಬ್ರಹ್ಮ—"ಭೀತರಾದ ಪ್ರಜೆಗಳೇ, ಪ್ರಜಾಪಾಲಕರೇ, ನಾನು ನಿಜವಾಗಿ ನಿಮಗೆ ರಕ್ಷಣೆಯನ್ನು ಮಾಡುತ್ತೇನೆ. ನಿಮ್ಮನಿಮ್ಮ ಸ್ಥಾನಕ್ಕೆ ಹೋಗಿರಿ."

೧೬. ಪ್ರತ್ಯಕ್ಷನಾಗಿ ಬ್ರಹ್ಮನಿಂದ ಹೀಗೆ ಹೇಳಿಸಿಕೊಂಡ ಪ್ರಜೆಗಳು ತಮ್ಮೆಡೆಗೆ ಹೊರಟು ಹೋದರು ಪ್ರಜೆಗಳು ಬಂದು ಬಿಡಲಾಗಿ ಬ್ರಹ್ಮನು ವಾಸುಕಿಯೇ ಮೊದಲಾದ ಆ ನಾಗರನ್ನು ಬರಮಾಡಿ ಅತಿಯಾಗಿ ಕೋಪಗೊಂಡು ಶಪಿಸಿದನು.

॥ ಬ್ರಹ್ಮೋವಾಚ ॥

ಯತೋ ಮತ್ಪ್ರಭವಾನ್ನಿತ್ಯಂ ಕ್ಷಯಂ ನಯತ ಮಾನುಷಾನ್ ।
ಭವಾಂತರೇ ಅಥಾನ್ಯಸ್ಮಿನ್ಮಾತುಃ ಶಾಪಾತ್ಸುದಾರುಣಾತ್ ।
ಭವಿತಾತಿಕ್ಷಯೋ ಘೋರೋ ನೂನಂ ಸ್ವಾಯಂ ಭುವೇಂತರೇ ॥ ೧೭ ॥

ಏವಮುಕ್ತಾಸ್ತು ವೇಪಂತೋ ಬ್ರಹ್ಮಣೋ ಭುಜಗೋತ್ತಮಾಃ ।
ನಿಪತ್ಯ ಪಾದಯೋಸ್ತಸ್ಯ ಇದಮೂಚುರ್ವಚಸ್ತದಾ ॥ ೧೮ ॥

॥ ನಾಗಾ ಊಚುಃ ॥

ಭಗವನ್ಕುಟಿಲಾ ಜಾತಿರಸ್ಮಾಕಂ ಭವತಾ ಕೃತಾ ।
ವಿಷೋಲ್ಬಣತ್ವಂ ಕ್ರೂರತ್ವಂ ದೃಕ್‌ಶಸ್ತ್ರತ್ವಂಚ ನೋಽವ್ಯಯಂ ।
ಸಂಪಾದಿತಂ ತ್ವಯಾ ದೇವ ಇದಾನೀಂ ಶಮಯಾಚ್ಯುತ ॥ ೧೯ ॥

॥ ಬ್ರಹ್ಮೋವಾಚ ॥

ಯದಿ ನಾಮ ಮಯಾ ಸೃಷ್ಟಾ ಭವಂತಃ ಕುಟಿಲಾಶಯಾಃ ।
ತತಃ ಕಿಂ ಮನುಜಾನ್ನಿತ್ಯಂ ಭಕ್ಷಯಧ್ವಂ ಗತವ್ಯಥಾಃ ॥ ೨೦ ॥

---

೧೭. ಬ್ರಹ್ಮ—"ನೀವು ನನ್ನಿಂದುದಿಸಿದ ಮನುಷ್ಯರನ್ನು ನಿತ್ಯವೂ ನಾಶ ಮಾಡುವುದರಿಂದ ಬೇರೆ ಸ್ವಾಯಂಭುವ ಮನ್ವಂತರದಲ್ಲಿ ಕ್ರೂರವಾದ ತಾಯಿಯ ಶಾಪದಿಂದ ನಿಮಗೆ ನಿಶ್ಚಯವಾಗಿಯೂ ಅತಿ ಘೋರವಾದ ನಾಶವಾಗುವುದು."

೧೮. ಬ್ರಹ್ಮನಿಂದ ಹೀಗೆನಿಸಿಕೊಂಡ ನಾಗೋತ್ತಮರು ನಡುಗುತ್ತಾ ಅವನ ಕಾಲಿಗೆ ಬಿದ್ದು ಈ ಮುಂದಿನ ಮಾತನ್ನಾಡಿದರು.

೧೯. ನಾಗರು—"ಭಗವಂತನೇ, ಕುಟಿಲಜಾತಿಯನ್ನು ನಮಗೆ ಮಾಡಿದವನು ನೀನೇ. ವಿಷವೇಗವನ್ನೂ, ಕ್ರೂರತೆಯನ್ನೂ, ದೃಷ್ಟಿಶಸ್ತ್ರತೆಯನ್ನೂ ನಮಗೆ ಸ್ಥಿರವಾಗಿ ಉಂಟುಮಾಡಿರುವವನು ನೀನೇ. ಅಚ್ಯುತನಾದ ದೇವನೇ, ಈಗ ಶಾಂತಿಗೊಳಿಸು.

೨೦. ಬ್ರಹ್ಮ—ಕುಟಿಲಾಶಯರಾದ ನಿಮ್ಮನ್ನು ನಾನೇ ಸೃಷ್ಟಿಸಿದಮಾತ್ರಕ್ಕೇ ನೀವು ವ್ಯಥೆಯಿಲ್ಲದೆ ನಿತ್ಯವೂ ಮನುಷ್ಯರನ್ನು ತಿನ್ನುತ್ತೀರೋ?

॥ ನಾಗಾ ಊಚುಃ ॥
ಮರ್ಯಾದಾಂ ಕುರು ದೇವೇಶ ಸ್ಥಾನಂ ಚೈವ ಪೃಥಕ್ ಪೃಥಕ್ ॥ ೨೧ ॥

ನಾಗಾನಾಂ ವಚನಂ ಶ್ರುತ್ವಾ ದೇವೋ ವಚನಮಬ್ರವೀತ್ ।
ಅಯಂ ಕರೋಮಿ ವೋ ನಾಗಾಃ ಸಮಯಂ ಮನುಜೈಃ ಸಹ ।
ತದೇಕಮನಸಃ ಸರ್ವೇ ಶೃಣುಧ್ವಂ ಮಮ ಶಾಸನಂ ॥ ೨೨ ॥

ಪಾತಾಲಂ ವಿತಲಂ ಚೈವ ಸುತಲಾಖ್ಯಂ ತೃತೀಯಕಂ ।
ದತ್ತಂ ವೈ ವಸ್ತುಕಾಮಾನಾಂ ಗೃಹಂ ತತ್ರ ಗಮಿಷ್ಯಥ ॥ ೨೩ ॥

ತತ್ರ ಭೋಗಾನ್ಬಹುವಿಧಾನ್ಭುಂಜಾನಾ ಮಮ ಶಾಸನಾತ್ ।
ತಿಷ್ಠಧ್ವಂ ಸಪ್ತಮಂ ಯಾವದ್ರಾತ್ರ್ಯಂತಂ ಮೇ ಪುನಃ ಪುನಃ ॥ ೨೪ ॥

ತತೋ ವೈವಸ್ವತಸ್ಯಾದೌ ಕಾಶ್ಯಪೇಯಾ ಭವಿಷ್ಯಥ ।
ದಾಯಾದಾಃ ಸರ್ವದೇವಾನಾಂ ಸುಪರ್ಣಸ್ಯ ಚ ಧೀಮತಃ ॥ ೨೫ ॥

ತದಾ ಪ್ರಸೂತಿರ್ವಃ ಸರ್ವಾ ಭೋಕ್ಷ್ಯತೇ ಚಿತ್ರಭಾನುನಾ ॥ ೨೬ ॥

---

೨೧. ನಾಗರು—ದೇವೇಶ, ನಮಗೆ ನಿಯಮವನ್ನೂ, ಬೇರೆ ಬೇರೆಯಾಗಿ ವಾಸಸ್ಥಾನವನ್ನೂ ಮಾಡು.

೨೨. ನಾಗರ ಈ ಮಾತನ್ನು ಕೇಳಿ ಬ್ರಹ್ಮನು(ದೇವನು) ಹೀಗೆ ಹೇಳಿದನು. "ನಾಗರೇ, ನಿಮಗೆ ಮನುಷ್ಯರ ಸಂಗಡ ನಿಯಮವನ್ನು ನಾನು ಮಾಡುತ್ತೇನೆ. ನನ್ನ ಅಪ್ಪಣೆಯನ್ನು ಎಲ್ಲರೂ ಗಮನಿಸಿ ಕೇಳಿರಿ.

೨೩. ವಾಸಮಾಡಲಿಚ್ಛಿಸುವ ನಿಮಗೆ ಪಾತಾಲ, ವಿತಲ, ಸುತಲ ಎಂಬ ಮೂರು ಸ್ಥಾನಗಳನ್ನು ಕೊಟ್ಟಿದೆ. ಅಲ್ಲಿ ಹೋಗಿರಿ.

೨೪. ನನ್ನ ನಿಯಮದಿಂದ ಅಲ್ಲಿ ಬಹುವಿಧಭೋಗಗಳನ್ನು ಅನುಭವಿಸುತ್ತಾ ನನ್ನ ಏಳನೆಯ ರಾತ್ರಿಯು ಕಳೆಯುವವರಿಗೆ ಇರಿ.

೨೫. ಬಳಿಕ ವೈವಸ್ವತಮನ್ವಾದಿಯಲ್ಲಿ ಕಶ್ಯಪನ ಪುತ್ರರಾಗಿ ದೇವತೆಗಳೆಲ್ಲರಿಗೂ, ಬುದ್ಧಿವಂತನಾದ ಗರುಡನಿಗೂ, ದಾಯಾದರಾಗುವಿರಿ.

೨೬. ಆಗ ನಿಮ್ಮ ಸಂತತಿಯನ್ನು ಗರುಡನು ತಿಂದುಬಿಡುವನು.

ಭವತಾಂ ನೈವ ದೋಷೋಽಯಂ ಭವಿಷ್ಯತಿ ನ ಸಂಶಯಃ ॥ ೨೭ ॥

ಯೇವೈ ಕ್ರೂರಾ ಭೋಗಿನೋ ದುರ್ವಿನೀತಾಸ್ತೇಷಾಮಂತೋ ಭವಿತಾ ನಾನ್ಯಥೈತತ್ ।
ಕಾಲಪ್ರಾಪ್ತಂ ಭಕ್ಷಯಧ್ವಂ ದಶಧ್ವಂ ತಥಾಪಕಾರೇ ಚ ಕೃತೇ ಮನುಷ್ಯಾನ್ ॥ ೨೮ ॥

ಮಂತ್ರೌಷಧೈರ್ಗಾರುಡಮಂಡಲೈಶ್ಚ ಬದ್ಧೈರ್ದೃಷ್ಟೈರ್ವಿರ್ಮಾನವಾ ಯೇ ಚರಂತಿ ।
ತೇಷಾಂ ಭೀತೈರ್ವರ್ತಿತವ್ಯಂ ನಚಾನ್ಯಚ್ಚಿಂತ್ಯಂ ಕಾರ್ಯಂಚಾನ್ಯಥಾವೋ ವಿನಾಶಃ ॥ ೨೯ ॥

ಇತೀರಿತಾ ಬ್ರಹ್ಮಣಾತೇ ಭುಜಂಗಾ ಜಗ್ಮುಃ ಸ್ಥಾನಂ ಕ್ಷ್ಮಾತಲಾಖ್ಯಂ ಹಿ ಸರ್ವೇ ॥ ೩೦ ॥

ಏವಂ ಶಾಪಂ ತೇತು ಲಬ್ಧ್ವಾ ಪ್ರಸಾದಂ ಚ ಚತುರ್ಮುಖಾತ್ ।
ತಸ್ಥುಃ ಪಾತಾಲನಿಲಯಂ ಮುದಿತೇನಾಂತರಾತ್ಮನಾ ॥ ೩೧ ॥

---

೨೭. ಆದರೆ ನಿಮಗೆಲ್ಲರಿಗೂ ಈ ದೋಷವು ತಟ್ಟುವುದಿಲ್ಲವೆಂಬುದರಲ್ಲಿ ಸಂದೇಹವಿಲ್ಲ.

೨೮. ಕ್ರೂರಿಗಳೂ, ದುರ್ವಿನೀತರೂ ಆದ ಭೋಗಿಗಳಿಗೆ ನಾಶವೊದಗದೆ ಇರುವುದಿಲ್ಲ. ನೀವು, ಮರಣಕಾಲವು ಸಮೀಪಿಸಿರುವ ಮತ್ತು ಅಪಕಾರಮಾಡುವ ಮನುಷ್ಯರನ್ನು ಕಚ್ಚಿ ತಿನ್ನಿ.

೨೯. ನಿಮ್ಮಿಂದ ಕಚ್ಚಿಸಿಕೊಂಡವರಿಗೆ ಧಮಂತ್ರೌಷಗಳಿಂದಲೂ, ಗಾರುಡ ಮಂಡಲಬಂಧನಗಳಿಂದಲೂ, ಚಿಕಿತ್ಸೆಮಾಡುವವರ ವಿಷಯದಲ್ಲಿ ನೀವು ಹೆದರಿ ನಡೆಯಬೇಕು. ಬೇರೆ ಯೋಚಿಸಬಾರದು. ಹಾಗಿಲ್ಲದಿದ್ದರೆ ನಿಮಗೆ ವಿನಾಶ ವೊದಗುವುದು."

೩೦. ಬ್ರಹ್ಮನಿಂದ ಹೀಗೆ ಹೇಳಿಸಿಕೊಂಡ ಆ ನಾಗಗಳೆಲ್ಲವೂ ಪಾತಾಳ ವೆಂಬ ಹೆಸರಿನ ಪ್ರದೇಶಕ್ಕೆ ಹೊರಟುಹೋದುವು.

೩೧. ಹೀಗೆ ಬ್ರಹ್ಮನಿಂದ ಶಾಪವನ್ನೂ, ಅನುಗ್ರಹ(ವರ)ವನ್ನೂ ಪಡೆದು ಅವು ಸಂತೋಷಗೊಂಡ ಮನಸ್ಸುಳ್ಳವುಗಳಾಗಿ ಪಾತಾಳದಲ್ಲಿ ನೆಲಸಿದವು.

ಏತತ್ಸರ್ವಂ ಚ ಪಂಚಮ್ಯಾಂ ತೇಷಾಂ ಜಾತಂ ಮಹಾತ್ಮನಾಂ ।
ಅತಃ ಪ್ರಿಯಾ ತಿಥಿರ್ಧನ್ಯಾ ಸರ್ವಪಾಪಹರಾ ಶುಭಾ ॥ ೩೨ ॥

ಏತಸ್ಯಾಂ ಸಂಯುತೋ ಯಸ್ತು ಅಮ್ಲಂತು ಪರಿವರ್ಜಯೇತ್ ।
ಕ್ಷೀರೇಣ ಸ್ನಾಪಯೇನ್ನಾಗಾಂಸ್ತಸ್ಯ ಯಾಸ್ಯಂತಿ ಮಿತ್ರತಾಂ ॥ ೩೩ ॥

ಇತಿ ಶ್ರೀ ವರಾಹಪುರಾಣೇ ಆದಿಕೃತವೃತ್ತಾಂತೇ ಮಹಾತಪ ಉಪಾಖ್ಯಾನೇ ಸರ್ಪೋತ್ಪತ್ತಿರ್ನಾಮ ಚತುರ್ವಿಂಶೋಧ್ಯಾಯಃ

---

೩೨. ಮಹಿಮೆಯುಳ್ಳ ನಾಗಗಳಿಗೆ ಇದೆಲ್ಲವೂ ಪಂಚಮಿಯದಿನ ಆದುದರಿಂದ ಆ ತಿಥಿಯು ಪವಿತ್ರವೂ, ಸರ್ವಪಾಪಹರವೂ, ಪ್ರಿಯವೂ, ಶುಭಕರವೂ ಆದುದು.

೩೩. ಈ ಪಂಚಮಿಯಲ್ಲಿ ಜಿತೇಂದ್ರಿಯನಾಗಿ, ನಾಗಗಳಿಗೆ ಕ್ಷೀರಾಭಿಷೇಕ ಮಾಡಿ, ಹುಳಿಯನ್ನು ಭುಜಿಸದಿರುವವರಿಗೆ ಅವು ಮೈತ್ರಿಯುಳ್ಳವಾಗುವುವು.

ಅಧ್ಯಾಯದ ಸಾರಾಂಶ:—

ಮಹಾತಪನು ಪ್ರಜಾಪಾಲನಿಗೆ ಸರ್ಪಗಳ ವಿಚಾರವನ್ನು ತಿಳಿಸುವನು. "ಕಶ್ಯಪನಿಗೆ ಕದ್ರುವೆಂಬ ಪತ್ನಿಯಲ್ಲಿ ಅನಂತವಾಸುಕ್ಯಾದಿ ನಾಗರುದಿಸಿದರು. ನಾಗರ ಸಂತಾನದಿಂದ ಜಗತ್ತೆಲ್ಲವೂ ತುಂಬಿಹೋಯಿತು. ಪ್ರಜೆಗಳು ಅವುಗಳಿಂದ ಉಳಿಯುವಂತಿರಲಿಲ್ಲ. ಬ್ರಹ್ಮನಲ್ಲಿ ಮೊರೆಯಿಟ್ಟರು. ಬ್ರಹ್ಮನು ನಾಗರಿಗೆ ಶಾಪವನ್ನು ಕೊಟ್ಟನು. ನಾಗೋತ್ತಮರು 'ನೀನೇ ನಮಗೆ ವಿಷವನ್ನು ಸೃಷ್ಟಿಸಿ ನಮ್ಮನ್ನು ಶಪಿಸಬಹುದೆ? ಶಾಪವನ್ನು ಶಾಂತಿಗೊಳಿಸಿ ನಮಗೆ ಬೇರೆ ನಿವಾಸವನ್ನೂ, ನಿಯಮಗಳನ್ನೂ ಏರ್ಪಡಿಸು.' ಎಂದು ಬ್ರಹ್ಮನಲ್ಲಿ ಕೇಳಿದರು. ಬ್ರಹ್ಮನು ಪಾತಾಳ, ವಿತಲ, ಸುತಲ ಎಂಬ ಲೋಕಗಳನ್ನು ನಾಗರಿಗೆ ವಾಸಸ್ಥಾನವಾಗಿ ಕೊಟ್ಟು, ವೈವಸ್ವತಮನ್ವಂತರದಲ್ಲಿ ದುರ್ವಿನೀತರಾದ ನಿಮ್ಮ ವಂಶದವರಿಗೆ ಗರುಡನಿಂದ ನಾಶವುಂಟಾಗುವುದು. ಎಂಬುದೇ ಮೊದಲಾದ ಕೆಲವು ಮಾತುಗಳನ್ನೂ ಹೇಳಿ ಸಂತೈಸಿದನು. ಇದೆಲ್ಲವೂ ಪಂಚಮಿಯದಿನ ನಡೆದುದರಿಂದ ನಾಗರಿಗೆ ಪಂಚಮಿಯು ಪ್ರಿಯವಾದ ತಿಥಿಯಾಗಿದೆ" ಎಂದು ಹೇಳುವಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಇಪ್ಪತ್ತನಾಲ್ಕನೆಯ ಅಧ್ಯಾಯ

॥ ಶ್ರೀಃ ॥

-X-

ಪಂಚವಿಂಶೋಽಧ್ಯಾಯಃ

ಅಥ ಕಾರ್ತಿಕೇಯೋತ್ಪತ್ತಿಃ

॥ ಪ್ರಜಾಪಾಲ ಉವಾಚ ॥

ಅಹಂಕಾರಾತ್ಕಥಂ ಯಜ್ಞೇ ಕಾರ್ತಿಕೇಯೋ ದ್ವಿಜೋತ್ತಮ ।
ಏತನ್ಮೇ ಸಂಶಯಂ ಛಿಂದಿ ಪೃಚ್ಛತೋ ವೈ ಮಹಾಮುನೇ ॥ ೧ ॥

॥ ಮಹಾತಪಾ ಉವಾಚ ॥

ಸರ್ವೇಷಾಮೇವ ತತ್ತ್ವಾನಾಂ ಯಃ ಪರಃ ಪುರುಷಃ ಸ್ಮೃತಃ ।
ತಸ್ಮಾದವ್ಯಕ್ತಮುತ್ಪನ್ನಂ ತತ್ತ್ವಾದಿ ತ್ರಿವಿಧಂತು ತತ್ ॥ ೨ ॥

ಪುರುಷಾವ್ಯಕ್ತಯೋರ್ಮಧ್ಯೇ ಮಹತ್ತ್ವಂ ಸಮುಪದ್ಯತ ।
ಸ ಚಾಹಂಕಾರ ಇತ್ಯುಕ್ತೋ ಯೋ ಮಹಾನ್ಸಮುದಾಹೃತಃ ॥ ೩ ॥

ಇಪ್ಪತ್ತೈದನೆಯ ಅಧ್ಯಾಯ

ಷಣ್ಮುಖೋತ್ಪತ್ತಿ

೧ ಪ್ರಜಾಪಾಲ— ದ್ವಿಜೋತ್ತಮಾ, ಮಹಾಮುನಿಯೇ, ಅಹಂಕಾರ (ತತ್ತ್ವ)ದಿಂದ ಷಣ್ಮುಖನು ಹೇಗೆ ಜನಿಸಿದನು ? ನನ್ನ ಈ ಸಂದೇಹವನ್ನು ಹೋಗಲಾಡಿಸು.

೨-೩ ಮಹಾತಪಮುನಿ—ತತ್ತ್ವಗಳಲ್ಲೆಲ್ಲಾ ಶ್ರೇಷ್ಠನು(ಜ್ಯೇಷ್ಠನು)ಪುರುಷನೆನಿಸಿಕೊಳ್ಳುವನು. ಆ ಪುರುಷನಿಂದ ಅವ್ಯಕ್ತ(ತತ್ತ್ವ)ವು ಉದಿಸಿತು. ಪುರುಷಾವ್ಯಕ್ತಗಳ ಸಾಮರಸ್ಯವುಂಟಾಗಲು, ಮೂರು ಬಗೆಯಾದ ಮಹತ್ತ್ವವುದಿಸಿತು. ಆ ಮಹತ್ತತ್ತ್ವವೆಂಬುದೇ(ಮೂರ ಬಗೆಯ)ಅಹಂಕಾರವೆನಿಸಿಕೊಂಡಿತು.

ಪುರುಷೋ ವಿಷ್ಣುರಿತ್ಯುಕ್ತಃ ಶಿವೋ ವಾ ನಾಮತಃ ಸ್ಮೃತಃ ।
ಅವ್ಯಕ್ತಂ ತು ಉಮಾ ದೇವೀ ಶ್ರೀರ್ವಾ ಪದ್ಮನಿಭೇಕ್ಷಣಾ ॥ ೪ ॥

ತತ್ಸಂಯೋಗಾದಹಂಕಾರಃ ಸಚ ಸೇನಾಪತಿರ್ಗುಹಃ ।
ತಸ್ಯೋತ್ಪತ್ತಿಂ ಪ್ರವಕ್ಷ್ಯಾಮಿ ಶೃಣು ರಾಜನ್ಮಹಾಮತೇ ॥ ೫ ॥

ಆದ್ಯೋ ನಾರಾಯಣೋ ದೇವಸ್ತಸ್ಮಾದ್ಬ್ರಹ್ಮಾ ತತೋಽಭವತ್ ।
ಅತಃ ಸ್ವಯಂಭುವಶ್ಚಾನ್ಯೇ ಮರೀಚ್ಯಾದ್ಯಾರ್ಕಸಂಭವಾಃ ॥ ೬ ॥

ತದಾರಭ್ಯ ಸುರಾ ದೈತ್ಯಾ ಗಂಧರ್ವಾ ಮಾನುಷಾಃ ಖಗಾಃ ।
ಪಶವಃ ಸರ್ವಭೂತಾನಿ ಸೃಷ್ಟಿರೇಷಾ ಪ್ರಕೀರ್ತಿತಾ ॥ ೭ ॥

ಸೃಷ್ಟ್ಯಾಂ ವಿಸ್ತಾರಿತಾಯಾಂತು ದೇವದೈತ್ಯಾ ಮಹಾಬಲಾಃ ।
*ಸತ್ವಾನಾಂ ಭಾವಮಾಸ್ಥಾಯ ಯುಯುಧುರ್ವಿಜಿಗೀಷವಃ ॥ ೮ ॥

---

೪. ಪುರುಷನಿಗೆ ವಿಷ್ಣು ಅಥವಾ ಶಿವನೆಂದು ಹೆಸರು. ಅವ್ಯಕ್ತವಾದರೋ ಕಮಲನೇತ್ರೆಯಾದ ಶ್ರೀದೇವಿ, ಅಥವಾ ಉಮಾದೇವಿ.

೫. ಪುರುಷಾವ್ಯಕ್ತ ಸಂಯೋಗದಿಂದ ಅಹಂಕಾರೋತ್ಪತ್ತಿ. ಆ ಅಹಂಕಾರವೇ ದೇವಸೇನಾಪತಿಯಾದ ಗುಹ ಅಥವಾ ಷಣ್ಮುಖನೆನಿಸಿಕೊಳ್ಳುವನು. ಮಹಾಮತಿಯಾದ ಪ್ರಜಾಪಾಲನೇ, ಆ ಷಣ್ಮುಖನ ಉತ್ಪತ್ತಿಯನ್ನು ಹೇಳುತ್ತೇನೆ ಕೇಳು.

೬. ಸರ್ವಕ್ಕೂ ಆದಿಯಾದವನು ನಾರಾಯಣ ದೇವನು. ಬಳಿಕ ಅವನಿಂದ ಬ್ರಹ್ಮನುದಿಸಿದನು. ಆ ಬ್ರಹ್ಮನಿಂದ ಮರೀಚ್ಯಾದಿಗಳೂ, ಸೂರ್ಯನೂ ಸಂಭವಿಸಿದರು.

೭. ಅಲ್ಲಿಂದ ಮೊದಲುಗೊಂಡು ಸುರರೂ, ಅಸುರರೂ, ಗಂಧರ್ವರೂ, ಮನುಷ್ಯರೂ, ಪಶುಪಕ್ಷಿಗಳೂ, ಇತರ ಸರ್ವ(ಭೂತ) ಪ್ರಾಣಿಗಳೂ ಉದಿಸಿರುದ. ಇದಕ್ಕೇ ಸೃಷ್ಟಿಯೆಂದು ಹೆಸರು.

೮. ಸೃಷ್ಟಿಯು ವಿಸ್ತಾರವಾಗಲು ಮಹಾಬಲಶಾಲಿಗಳಾದ ದೇವಾಸುರರು ಸಾಮಾನ್ಯ ಜಂತುಗಳ ಸ್ವಭಾವವನ್ನು ಪಡೆದು ಪರಸ್ಪರವಾಗಿ ಜಯಿಸಲಿಷ್ಟವುಳ್ಳವರಾಗಿ ಯುದ್ಧ ಮಾಡಿದರು.

---

* ಸಾತ್ವತಂ

ದೈತ್ಯಾನಾಂ ಬಲಿನಃ ಸಂತಿ ನಾಯಕಾ ಯುದ್ಧದುರ್ಮದಾಃ ॥ ೯ ॥
ಹಿರಣ್ಯಕಶಿಪುಃ ಪೂರ್ವಂ ಹಿರಣ್ಯಾಕ್ಷೋ ಮಹಾಸುರಃ ।
ವಿಪ್ರಚಿತ್ತಿರ್ವಿಚಿತ್ರಸ್ತು ಭೀಮಾಕ್ಷಃ ಕ್ರೌಂಚ ಏವ ಚ ॥ ೧೦ ॥

ಏತೇತಿಬಲಿನಃ ಶೂರಾ ದೇವಸೈನ್ಯಂ ಮಹಾಮೃಧೇ ।
ಅಮರಾಂಶ್ಚ ಶಿತೈರ್ಬಾಣೈರ್ಜಯಂತ್ಯನುದಿನಂ ಮೃಧೇ ॥ ೧೧ ॥

ತೇಷಾಂ ಪರಾಜಯಂ ದೃಷ್ಟ್ವಾ ದೇವಾನಾಂಚ ಬೃಹಸ್ಪತಿಃ ।
ಉವಾಚ ಹೀನಂ ವೈ ಸೈನ್ಯಂ ನಾಯಕೇನ ವಿನಾ ಸುರಾಃ ।
ಏಕೇನೇಂದ್ರೇಣ ದಿವ್ಯಂತು ಸೈನ್ಯಂ ಪಾತುಂ ನ ಶಕ್ಯತೇ ॥ ೧೨ ॥

ಅತಃ ಸೇನಾಪತಿಂ ಕಂಚಿದನ್ವೇಷಯತ ಮಾಚಿರಂ ।
ಏವಮುಕ್ತಾಸ್ತತೋ ದೇವಾಃ ಜಗ್ಮುರ್ಲೋಕಪಿತಾಮಹಂ ॥ ೧೩ ॥

---

೯. ರಾಕ್ಷಸರಿಗೆ ಯುದ್ಧದಲ್ಲಿ ಹೆಚ್ಚು ಸೊಕ್ಕುಳ್ಳ ಬಲಶಾಲಿಗಳಾದ(ಸೇನಾ) ನಾಯಕರಿದ್ದರು.

೧೦-೧೧. ಮೊದಲು ಹಿರಣ್ಯಾಕ್ಷನೆಂಬ ಮಹಾರಾಕ್ಷಸನೂ, ಹಿರಣ್ಯಕಶಿಪು, ವಿಪ್ರಚಿತ್ತಿ, ವಿಚಿತ್ರ, ಭೀಮಾಕ್ಷ, ಕ್ರೌಂಚ ಎಂಬ ಬಲಿಷ್ಠರಾದ ಶೂರರೂ ಮಹಾ ಯುದ್ಧದಲ್ಲಿ ದೇವತೆಗಳನ್ನು ಹರಿತವಾದ ಬಾಣಗಳಿಂದ ದಿನದಿನವೂ ಜಯಿಸುತ್ತಿದ್ದರು.

೧೨-೧೩. ದೇವತೆಗಳ ಸೋಲನ್ನು ಕಂಡು, ದೇವಗುರುವಾದ ಬೃಹಸ್ಪತಿಯು " ದೇವತೆಗಳೇ, ನಾಯಕನಿಲ್ಲದ ಸೈನ್ಯವು ಹೀನವಾದುದು. ಇಂದ್ರನೊಬ್ಬನಿಗೆ ದೇವಸೈನ್ಯವನ್ನು ರಕ್ಷಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ತಡಮಾಡದೆ ಸೇನಾಪತಿಯೊಬ್ಬನನ್ನು ಹುಡುಕಿರಿ." ಎಂದನು. ಹೀಗೆ ಹೇಳಿಸಿಕೊಂಡ ದೇವತೆಗಳು ಬ್ರಹ್ಮನ ಹತ್ತಿರಕ್ಕೆ ಹೋದರು.

ಸೇನಾಪತಿಂ ಚ ನೋ ದೇಹಿ ವಾಕ್ಯಮೂಚುಃ ಸಸಂಭ್ರಮಂ ।
ತತೋ ದಧ್ಯೌ ಚತುರ್ವಕ್ತ್ರಃ ಕಿಮೇಷಾಂ ಕ್ರಿಯತೇ ಮಯಾ ॥ ೧೪ ॥

ಬ್ರಹ್ಮಣಶ್ಚಿಂತ್ಯಮಾನಸ್ಯ ರುದ್ರಂ ಪ್ರತಿ ಮನೋ ಗತಂ ।
ತತೋ ದೇವಾಃ ಸಗಂಧರ್ವಾ ಋಷಯಃ ಸಿದ್ಧಚಾರಣಾಃ ॥
ಬ್ರಹ್ಮಾಣಂ ಪುರತಃ ಕೃತ್ವಾ ಜಗ್ಮುಃ ಕೈಲಾಸಪರ್ವತಂ ॥ ೧೫ ॥

ತತ್ರ ದೃಷ್ಟ್ವಾ ಮಹಾದೇವಂ ಶಿವಂ ಪಶುಪತಿಂ ವಿಭುಂ ।
ತುಷ್ಟುವುರ್ವಿವಿಧೈಃ ಸ್ತೋತ್ರೈಃ ಶಕ್ರಾದ್ಯಾಸ್ತ್ರಿದಿವೌಕಸಃ ॥ ೧೬ ॥

॥ ದೇವಾ ಊಚುಃ ॥

ನಮಾಮ ಸರ್ವೇ ಶರಣಾರ್ಥಿನೋ ವಯಂ
ಮಹೇಶ್ವರಂ ತ್ರ್ಯಂಬಕಭೂತಭಾವನಂ ।
ಉಮಾಪತೇ ವಿಶ್ವಪತೇ ಮರುತ್ಪತೇ
ಜಗತ್ಪತೇ ಶಂಕರ ಪಾಹಿ ನಃ ಸ್ವಯಂ ॥ ೧೭ ॥

---

೧೪. ಅವರು ಬ್ರಹ್ಮನನ್ನು "ನಮಗೆ ಸೇನಾಪತಿಯನ್ನು ಕೊಡು" ಎಂದು ತ್ವರೆಯಿಂದ ಬೇಡಿದರು. ಬಳಿಕ ಚತುರ್ಮುಖಬ್ರಹ್ಮನು ಇವರಿಗೆ ನಾನೇನು ಮಾಡಲಿ! ಎಂದು ಆಲೋಚಿಸಿದನು.

೧೫. ಆಲೋಚಿಸುತ್ತಿದ್ದ ಬ್ರಹ್ಮನ ಮನಸ್ಸು ರುದ್ರನಕಡೆಗೋಡಿತು. ಬಳಿಕ ಗಂಧರ್ವಸಹಿತರಾದ ದೇವತೆಗಳೂ, ಋಷಿಗಳೂ, ಸಿದ್ಧಚಾರಣರೂ, ಬ್ರಹ್ಮನನ್ನು ಮುಂದಿಟ್ಟುಕೊಂಡು ಕೈಲಾಸ ಪರ್ವತಕ್ಕೆ ಹೋದರು.

೧೬. ಅಲ್ಲಿ ಮಹಾದೇವನೂ, ಪಶುಪತಿಯೂ, ವಿಭುವೂ ಆದ ಶಿವನನ್ನು ಕಂಡು, ಇಂದ್ರನೇ ಮೊದಲಾದ ದೇವತೆಗಳೆಲ್ಲರೂ, ಬಗೆಬಗೆಯ ಸ್ತೋತ್ರಗಳಿಂದ ಅವನನ್ನು ಸ್ತುತಿಸಿದರು.

೧೭. ದೇವತೆಗಳು—ಮಹೇಶ್ವರ, ತ್ರಿನಯನ, ಪ್ರಾಣಿಗಳಿಗೆ ಬೇಕಾದುದೆಲ್ಲವನ್ನೂ ಕೊಟ್ಟು ಬೆಳೆಸುವ ನಿನ್ನನ್ನು, ನಿನ್ನ ಶರಣಾರ್ಥಿಗಳಾದ ನಾವೆಲ್ಲರೂ ನಮಸ್ಕರಿಸುತ್ತೇವೆ. ಉಮಾಪತೀ, ವಿಶ್ವಪತೀ, ಮರುತ್ಪತೀ, ಜಗತ್ಪತೀ, ಶಂಕರಾ, ನಮ್ಮನ್ನು ನೀನೇ ರಕ್ಷಿಸು.

ಜಟಾಕಲಾಪಾಗ್ರಶಶಾಂಕದೀಧಿತಿ
ಪ್ರಕಾಶಿತಾಶೇಷಜಗತ್ರಯಾಮಲ ।
ತ್ರಿಶೂಲಪಾಣೇ ಪುರುಷೋತ್ತಮಾಚ್ಯುತ
ತ್ವಂಪಾಹಿನೋ ದೈತ್ಯ ಭಯಾದುಪಸ್ಥಿತಾತ್ ॥ ೧೮ ॥

ತ್ವಮಾದಿದೇವಃ ಪುರುಷೋತ್ತಮೋ ಹರಿಃ
ಭವೋ ಮಹೇಶಸ್ತ್ರಿಪುರಾಂತಕೋ ವಿಭುಃ ।
ಭಗಾಕ್ಷಹಾ ದೈತ್ರರಿಪುಃ ಪುರಾತನೋ
ವೃಷಧ್ವಜಃ ಪಾಹಿ ಸುರೋತ್ತಮೋತ್ತಮ ॥ ೧೯ ॥

ಗಿರೀಶಜಾನಾಥ ಗಿರಿಪ್ರಿಯಾಪ್ರಿಯ
ಪ್ರಭೋ ಸಮಸ್ತಾಮರಲೋಕಪೂಜಿತ ।
ಗಣೇಶ ಭೂತೇಶ ಶಿವಾಕ್ಷಯಾಯನ
ತ್ವಂ ಪಾಹಿ ನೋ ದೈತ್ಯವರಾಂತಕಾಚ್ಯುತ ॥ ೨೦ ॥

ಪೃಥ್ವ್ಯಾದಿತತ್ವೇಷು ಭವಾನ್ಪ್ರತಿಷ್ಠಿತೋ
ಧ್ವನಿಸ್ವರೂಪೋ ಗಗನೇ ವಿಶೇಷತಃ ।

---

೧೮. ಜಡೆಮುಡಿಯ ಮೇಲೊಪ್ಪುವ ಚಂದ್ರನಕಿರಣಗಳಿಂದ ಮೂರು ಲೋಕಗಳೆಲ್ಲವನ್ನೂ ಬೆಳಗುವವನೇ, ನಿರ್ಮಲನೇ, ತ್ರಿಶೂಲಪಾಣೀ, ಪುರುಷೋತ್ತಮಾ, ನಾಶರಹಿತ, ರಕ್ಕಸರ ಭಯದಿಂದ ಬಂದಿರುವ ನಮ್ಮನ್ನು ರಕ್ಷಿಸು.

೧೯. ಸುರೋತ್ತಮನೇ, ಆದಿದೇವನೂ ಪುರುಷೋತ್ತಮನೂ, ಹರಿಯೂ, ಭವನೂ, ಮಹೇಶನೂ, ತ್ರಿಪುರಾಂತಕನೂ, ವಿಭುವೂ, ಭಗನೇತ್ರನಾಶಕನೂ, ರಾಕ್ಷಸಾಂತಕನೂ, ಪುರಾತನೂ, ವೃಷಭಧ್ವಜನೂ ಆದ ನೀನು ನಮ್ಮನ್ನು ಪಾಲಿಸು.

೨೦. ಗೌರೀಶನೇ, ದೇವ, ಗಂಗೆಯಪ್ರಿಯಾ, ಪ್ರಭು, ಸಮಸ್ತಾಮರ ಲೋಕಪೂಜಿತ, ಗಣೇಶ, ಭೂತೇಶ, ಶಿವ, ಅಕ್ಷಯಾಯನ, ದೈತ್ಯವರನಾಶಕಾ, ಅಚ್ಯುತ, ನೀನು ನಮ್ಮನ್ನು ರಕ್ಷಿಸು.

೨೧ ಪೃಥಿವ್ಯಾದಿತತ್ವಗಳಲ್ಲಿ ನೀನು ನೆಲಸಿದ್ದೀಯೆ ಆಕಾಶದಲ್ಲಿ ಧ್ವನಿಯ ಒಂದುರೂಪದಿಂದಲೂ ವಾಯುವಿನಲ್ಲಿ ಶಬ್ದಸ್ಪರ್ಶವೆಂಬ ಎರಡು ಗುಣಗಳಿಂದಲೂ,

ಲೀನೋದ್ವಿಧಾ ತೇಜಸಿ ಸ ತ್ರಿಧಾ ಜಲೇ
ಚತುಃ ಕ್ಷಿತೌ ಪಂಚ ಗುಣಪ್ರಧಾನಃ || ೨೦ ||

ಅಗ್ನಿಸ್ವರೂಪೋಽಸಿ ತರೌ ತಥೋಽಪಲೇ
ಸತ್ಯಸ್ವರೂಪೋಽಸಿ ತಥಾತಿಲೇಷ್ವಪಿ ।
ತೈಲಸ್ವರೂಪೋ ಭಗವಾನ್ಮಹೇಶ್ವರಃ
ತ್ವಂ ಪಾಹಿ ನೋ ದೈತ್ಯಗಣಾರ್ದಿತಾನ್ಹರ || ೨೧ ||

*ಆಸೀದ್ಯದಾಕಾಂಡಮಿದಂ ತ್ರಿಲೋಚನ
ಪ್ರಭಾಕರೇಂದ್ರೇಂದುಮುಖ್ಯೈ+ ರ್ವಿನಾ ಕೃತಂ ।
ತದಾ ಭವಾನೇವ ವಿರುದ್ಧಲೋಚನ
ಪ್ರಮಾಣಬಾಧಾದಿವಿವರ್ಜಿತಃ ಸ್ಥಿತಃ || ೨೩ ||

ಕಪಾಲಮಾಲಿನ್ ಶಶಿಖಂಡಶೇಖರ
ಶ್ಮಶಾನವಾಸಿನ್ ಸಿತಭಸ್ಮಗುಂಠಿತ ।

ತೇಜಸ್ಸಿನಲ್ಲಿ ಶಬ್ದಸ್ಪರ್ಶರೂಪಗಳೆಂಬ ಮೂರು ಬಗೆಯಿಂದಲೂ, ನೀರಿನಲ್ಲಿ (ಶಬ್ದ ಸ್ಪರ್ಶರೂಪರಸಗಳೆಂಬ) ನಾಲ್ಕು ಗುಣಗಳಿಂದಲೂ, ಭೂಮಿಯಲ್ಲಿ (ಶಬ್ದಸ್ಪರ್ಶ ರೂಪರಸಗಂಧಗಳೆಂಬ) ಐದುಗುಣಗಳಿಂದಲೂ, ಪ್ರಧಾನನಾಗಿದ್ದೀಯೆ.

೨೨. ಮರದಲ್ಲಿ ಅಗ್ನಿಸ್ವರೂಪನಾಗಿಯೂ, ಕಲ್ಲಿನಲ್ಲಿ ಸತ್ಯಸ್ವರೂಪನಾಗಿಯೂ, ಎಳ್ಳಿನಲ್ಲಿ ಎಣ್ಣೆಯ ರೂಪವಾಗಿಯೂ, ಮಹೇಶ್ವರನಾದ ನೀನು ಇದ್ದೀಯೆ. ಹರನೇ, ರಾಕ್ಷಸರ ಗುಂಪಿನಿಂದ ಪೀಡಿತರಾದ ನಮ್ಮನ್ನು ನೀನು ಕಾಪಾಡು.

೨೩. ತ್ರಿಲೋಚನನೇ, ಈ ಜಗತ್ತು ಜಲಬಲರಹಿತವಾದುದೂ, ಸೂರ್ಯೇಂದ್ರಚಂದ್ರನೇ ಮೊದಲಾದವರಿಲ್ಲದುದೂ ಆಗಿದ್ದಾಗಲೂ, ಮೂರು ಕಣ್ಣಿನವನಾದ ನೀನೇ ಪ್ರಮಾಣಗಳಿಗೆ ಬಾಧೆಯಿಲ್ಲದಂತೆ ಎಂದರೆ ಸಂದೇಹವಿಲ್ಲದೆ ಇದ್ದೆ.

೨೪. ರುಂಡಮಾಲೆಯುಳ್ಳವನೇ, ಚಂದ್ರಕಲಾಧರನೇ, ಶ್ಮಶಾನವಾಸಿಯೇ,

---

* ನಾಸೀದ್ಯದಾ + ಮುಖಾನ್ವಿನಾ

ಫಣೀಂದ್ರಸಂವೀತತನೋಂತಕಾಂತಕ
ತ್ವಂ ಪಾಹಿ ನೋ ದಕ್ಷಧಿಯಾ ಸುರೇಶ್ವರ || ೨೪ ||

ಭವಾನ್ಪುಮಾನ್ ಶಕ್ತಿರಿಯಂ ಗಿರೇಃ ಸುತಾ
ಸರ್ವಾಂಗರೂಪಾ ಭಗವಂಸ್ತಥಾ ತ್ವಯಿ ।
ತ್ರಿಶೂಲರೂಪೇಣ ಜಗದ್ಭಯಂಕರೇ
ಸ್ಥಿತಂ ತ್ರಿನೇತ್ರೇಷು ಮಖಾಗ್ನಯಸ್ತ್ರಯಃ || ೨೫ ||

ಜಟಾಸ್ವರೂಪೇಣ ಸಮಸ್ತಸಾಗರಾಃ
ಕುಲಾಚಲಾಃ ಸಿಂಧುವಹಾಶ್ಚ ಸರ್ವಶಃ ।
ಶರೀರಜಂ ಜ್ಞಾನಮಿದಂ ತ್ವವಸ್ಥಿತಂ
ತದೇವ ಪಶ್ಯಂತಿ ಕುದೃಷ್ಟಯೋ ಜನಾಃ || ೨೬ ||

ನಾರಾಯಣಸ್ತ್ವಂ ಜಗತಾಂ ಸಮುದ್ಭವಃ
ತಥಾ ಭವಾನೇವ ಚತುರ್ಮುಖೋ ಮಹಾನ್ ।

ಬೆಳ್ಳಗಿರುವ ವಿಭೂತಿಯನ್ನು ಧರಿಸಿರುವವನೇ, ಮೃತ್ಯುಂಜಯಾ, ಸುರೇಶ್ವರಾ. ದಕ್ಷಬುದ್ಧಿಯಿಂದ ನಮ್ಮನ್ನು ರಕ್ಷಿಸು.

೨೫. ಭಗವಂತನೇ, ನೀನು ಪುರುಷನು. ಸರ್ವಾಂಗಸುಂದರಿಯಾದ ಈ ಪಾರ್ವತಿಯೇ ಶಕ್ತಿ. ಜಗದ್ಭಯಂಕರನಾದ ನಿನ್ನಲ್ಲಿ ಯಜ್ಞಾಗ್ನಿಗಳು ಮೂರೂ ತ್ರಿಶೂಲರೂಪದಿಂದಲೂ, ತ್ರಿನೇತ್ರಗಳಲ್ಲೂ ಇವೆ.

೨೬. ಸಮಸ್ತಸಾಗರಗಳೂ, ಕುಲಪರ್ವತಗಳೂ, ನಿನ್ನ ಜಟಾಸ್ವರೂಪಗಳು. ಎಲ್ಲಾಕಡೆಯೂ ಹರಿಯುವ ನದಿಗಳು ನಿನ್ನ ದೇಹದಲ್ಲಿ ಉದಿಸಿದ ಜ್ಞಾನವಾಗಿದೆ. ಆದರೆ ಅಲ್ಪದೃಷ್ಟಿಯುಳ್ಳವರು ಅವನ್ನು ಸಾಗರ ಪರ್ವತನದಿಗಳನ್ನಾಗಿಯೇ ತಿಳಿದುಕೊಳ್ಳುವರು.

೨೭. ಜಗತ್ತುಗಳ ಉತ್ಪತ್ತಿಕಾರಣನಾದ ನಾರಾಯಣನೂ ನೀನೇ.

ಸತ್ವಾಗ್ನಿಭೇದೇನ ತಥಾಗ್ನಿಭೇದತೋ
ಯುಗಾದಿಭೇದೇನ ಚ ಸಂಸ್ಥಿತಸ್ತ್ರಿಧಾ || ೨೭ ||

ಭವಂತಮೇತೇ ಸುರನಾಯಕಾಃ ಪ್ರಭೋ
ಭವಾರ್ಥಿನೋಽನ್ಯಸ್ಯ ವದಂತಿ ತೋಷಕಂ |
ಯತಸ್ತತೋ ನೋ ಭವ ಭೂತಿಭೂಷಣ
ತ್ವಂ ಪಾಹಿ ವಿಶ್ವೇಶ್ವರ ರುದ್ರ ತೇ ನಮಃ || ೨೮ ||

|| ಮಹಾತಪಾ ಉವಾಚ ||

ಏವಂ ಸ್ತುತಸ್ತದಾ ದೇವೋ ರುದ್ರಃ ಪಶುಪತಿಃ ಸುರೈಃ |
ಉವಾಚ ದೇವಾನವ್ಯಗ್ರಃ ಕಿಂಕಾರ್ಯಂ ಬ್ರೂತ ಮಾಚಿರಂ || ೨೯ ||

|| ದೇವಾ ಊಚುಃ ||

ಸೇನಾಪತಿಂ ಚ ದೇವೇಶ ದೇಹಿದೈತ್ಯವಧಾಯ ವೈ |
ದೇವಾನಾಂ ಬ್ರಹ್ಮಮುಖ್ಯಾನಾಂ ಏತದೇವ ಹಿತಂಭವೇತ್ || ೩೦ ||

ಮಹಾತ್ಮನಾದ ಚತುರ್ಮುಖನೂ ನೀನೇ. ಸತ್ವಾದಿಗುಣಭೇದದಿಂದಲೂ, ಯುಗಾದಿಭೇದದಿಂದಲೂ ಮೂರು ರೂಪದಿಂದಿರುತ್ತೀಯೆ.

೨೮ ಪ್ರಭುವೇ, ಸ್ಥಿತಿ (ಇರುವಿಕೆ) ಯನ್ನು ಅಪೇಕ್ಷಿಸುವ ಈ ಸುರನಾಯಕರು ನಿನ್ನನ್ನು, ಅನ್ಯರನ್ನು ಸಂತೋಷಪಡಿಸುವವನೆಂದು ಹೇಳುವರು. ಆದುದರಿಂದ ನೀನು ನಮ್ಮನ್ನು ಪಾಲಿಸು. ಭವನೇ, ವಿಭೂತಿಭೂಷಣ, ವಿಶ್ವೇಶ್ವರ, ರುದ್ರ, ನಿನಗೆ ನಮಸ್ಕಾರ.

೨೯. ಮಹಾತಪಮುನಿ–ದೇವತೆಗಳಿಂದ ಹೀಗೆ ಸ್ತುತನಾದ ಪಶುಪತಿಯಾದ ರುದ್ರದೇವನು ಸಂತೋಷದಿಂದ ದೇವತೆಗಳಿಗೆ "ನಾನು ಮಾಡಬೇಕಾದುದೇನು? ಹೇಳಿ. ತಡಮಾಡಬೇಡಿ." ಎಂದು ಹೇಳಿದನು.

೩೦. ದೇವತೆಗಳು–ದೇವೇಶನೇ, ರಾಕ್ಷಸರ ವಧೆಗಾಗಿ ನಮಗೆ ಸೇನಾಪತಿಯನ್ನು ಕೊಡು. ಬ್ರಹ್ಮನೇ ಮೊದಲಾದ ದೇವತೆಗಳಿಗೆ ಇದೇ ಹಿತವಾಗುವುದು.

॥ ರುದ್ರ ಉವಾಚ ॥

ದದಾಮಿ ಸೇನಾನಾಥಂ ವೋ ದೇವಾ ಭವತ ವಿಜ್ವರಾಃ ।
ಭವಿಷ್ಯಮಸ್ತಿ ಪೌರಾಣಾಂ ಯೋಗಾದೀನಾಮಚಿಂತಿತಂ* ॥ ೩೧ ॥

ಏವಮುಕ್ತ್ವಾ ಹರೋ ದೇವಾನ್ವಿಸೃಜ್ಯ ಸ್ವಾಂಗಸಂಸ್ಥಿತಾಂ ।
ಶಕ್ತಿಂ ಸಂಕ್ಷೋಭಯಾಮಾಸ ಪುತ್ರಹೇತೋಃ ಪರಂತಪ ॥ ೩೨ ॥

ತಸ್ಯ ಕ್ಷೋಭಯತಃ ಶಕ್ತಿಂ ಜ್ವಲನಾರ್ಕಸಮಪ್ರಭಃ ।
ಕುಮಾರಃ ಸಹಜಾಂ ಶಕ್ತಿಂ ಬಿಭ್ರಜ್ಜ್ಞಾನೈಕಶಾಲಿನೀಂ ॥ ೩೩ ॥

ಉತ್ಪತ್ತಿಸ್ತಸ್ಯ ರಾಜೇಂದ್ರ ಬಹುರೂಪಾ ವ್ಯವಸ್ಥಿತಾ ।
ಮನ್ವಂತರೇಷ್ವನೇಕೇಷು ದೇವಸೇನಾಪತಿಃ ಕಿಲ ॥ ೩೪ ॥

---

೩೧. ರುದ್ರನು–ದೇವತೆಗಳೇ, ನಿಮಗೆ ಸೇನಾಪತಿಯನ್ನು ಕೊಡುತ್ತೇನೆ. ಸಂತಾಪರಹಿತರಾಗಿ. ದೇವತೆಗಳಿಗೂ, ಯೋಗಾದಿಗಳಿಗೂ, ಅಚಿಂತಿತವಾದ ಶುಭವು ಆಗುವುದು.

೩೨. ಶತ್ರುಸಂತಾಪಕನೇ, ದೇವನಾದ ಹರನು ದೇವತೆಗಳಿಗೆ ಹೀಗೆ ಹೇಳಿ, ಪುತ್ರನನ್ನು ಪಡೆಯುವುದಕ್ಕಾಗಿ ತನ್ನ ದೇಹದಲ್ಲಿದ್ದ ಶಕ್ತಿಯನ್ನು ಸಂಚಲನಮಾಡಿದನು.

೩೩. ಶಕ್ತಿಯನ್ನು ಮಥಿಸಿದ ಆ ರುದ್ರನಿಗೆ, ಅಗ್ನಿಸೂರ್ಯರಿಗೆ ಸಮವಾದ ತೇಜಸ್ಸುಳ್ಳವನೂ, ಮುಖ್ಯವಾಗಿ ಜ್ಞಾನದಿಂದೊಡಗೂಡಿದ ಸಹಜಶಕ್ತಿಯುಳ್ಳವನೂ ಆದ ಕುಮಾರನುದಿಸಿದನು.

೩೪. ರಾಜೇಂದ್ರನೇ, ಆ ಕುಮಾರನ ಅಥವಾ ಷಣ್ಮುಖನ ಉತ್ಪತ್ತಿಯು ಹಲವು ಬಗೆಯಾಗಿದೆ. ಅವನು ಅನೇಕ ಮನ್ವಂತರಗಳಲ್ಲಿ ದೇವತೆಗಳಿಗೆ ಸೇನಾಪತಿಯಲ್ಲವೆ !

---

* ಅಚಿಂತಯತ್

ಯೋಽಸೌ ಶರೀರಗೋ ದೇವಸ್ತ್ವಹಂಕಾರೇತಿ ಕೀರ್ತಿತಃ |
ಪ್ರಯೋಜನವಶಾದ್ದೇವಃ ದೇವಸೇನಾಪತಿರ್ಬಭೌ || ೩೫ ||

ತಸ್ಮಿನ್ ಜಾತೇ ಸ್ವಯಂ ಬ್ರಹ್ಮಾ ಸರ್ವದೇವೈಃ ಸಮನ್ವಿತಃ |
ಪೂಜಯಾಮಾಸ ದೇವೇಶಂ ಶಿವಂ ಪಶುಪತಿಂ ತದಾ || ೩೬ ||

ಸರ್ವೈಶ್ಚ ದೇವೈರ್ಋಷಿಭಿಶ್ಚ ಸಿದ್ಧೈಃ
ಸೇನಾಪತಿರ್ದಾನವರೇಣ ತೇನ |
ಆಪ್ಯಾಯಿತಃ ಸೋಽಪಿ ಸುರಾನುವಾಚ
ಸಹಾಯೌ ಮೇ ಕ್ರೀಡನಕಂ ಚ ದತ್ತಂ || ೩೭ ||

ಶ್ರುತ್ವಾ ವಚಸ್ತಸ್ಯ ಮಹಾನುಭಾವೋ
ವಾಕ್ಯಂ ಮಹಾದೇವ ಇದಂ ಜಗಾದ |
ದದಾಮಿ ತೇ ಕ್ರೀಡನಕಂ ತು ಕುಕ್ಕುಟಂ
ತಥಾನುಗೌ ಶಾಖವಿಶಾಖಸಂಜ್ಞೌ || ೩೮ ||

---

೩೫. ರುದ್ರದೇಹದಲ್ಲಿದ್ದ ಅಹಂಕಾರವೆಂಬ ದೇವನಾದ ಈ ಕುಮಾರನು ಪ್ರಯೋಜನವಶದಿಂದ ದೇವತೆಗಳ ಸೇನಾಪತಿಯಾಗಿ ಪ್ರಕಾಶಕ್ಕೆ ಬಂದನು.

೩೬. ಆ ಕುಮಾರನುದಯಿಸಲು, ಆಗ ಸರ್ವದೇವತೆಗಳಿಂದ ಕೂಡಿದ ಬ್ರಹ್ಮನು ತಾನೇ ದೇವೇಶನೂ, ಪಶುಪತಿಯೂ, ಆದ ಶಿವನನ್ನು ಪೂಜಿಸಿದನು.

೩೭. ಎಲ್ಲಾ ದೇವತೆಗಳೂ, ಋಷಿಗಳೂ, ಸಿದ್ಧರೂ, ರುದ್ರನೂ ವರದಾನದಿಂದ ಕುಮಾರನನ್ನು ಸಂತೋಷಗೊಳಿಸಲಾಗಿ, ಅವನು ದೇವತೆಗಳನ್ನು— "ನನಗೆ ಇಬ್ಬರು ಜತೆಗಾರರನ್ನೂ, ಆಟದ ವಸ್ತುವನ್ನೂ ಕೊಡಿ" ಎಂದು ಕೇಳಿದನು.

೩೮-೩೯. ಮಹಾನುಭಾವನಾದ ಶಿವನು ಅವನ ಮಾತನ್ನು ಕೇಳಿ, "ನಿನಗೆ ಆಟಕ್ಕೆ ಕೋಳಿಯನ್ನೂ ಶಾಖವಿಶಾಖರೆಂಬ ಜತೆಗಾರರನ್ನೂ ಕೊಡುತ್ತೇನೆ.

ಕುಮಾರ ಭೂತಗ್ರಹನಾಯಕೋ ಭವಾನ್ ।
ಸೇನಾಪತಿಸ್ತ್ವಂ ಭವ ದೇವಸಂಘೇ ॥ ೩೯ ॥

ಏವಮುಕ್ತ್ವಾ ತತೋ ದೇವಃ ಸರ್ವದೇವಾಶ್ಚ ಪಾರ್ಥಿವ ।
ತುಷ್ಟುವುರ್ವಾಗ್ಭಿರಿಷ್ಟಾಭಿಃ ಸ್ಕಂದಂ ಸೇನಾಪತಿಂ ತದಾ ॥ ೪೦ ॥

॥ ದೇವಾ ಊಚುಃ ॥

ಭವ ತ್ವಂ ದೇವಸೇನಾನೀರ್ಮಹೇಶ್ವರಸುತ ಪ್ರಭೋ ।
ಷಣ್ಮುಖ ಸ್ಕಂದ ವಿಶ್ವೇಶ ಕುಕ್ಕುಟಧ್ವಜ ಪಾವಕೇ ॥
ಕಂಪಿತಾರೇ ಕುಮಾರೇಶ ಸ್ಕಂದ ಬಾಲಗ್ರಹಾನುಗ ॥ ೪೧ ॥

ಜಿತಾರೇ ಕ್ರೌಂಚವಿಧ್ವಂಸ ಕೃತ್ತಿಕಾಜ ಶಿವಾತ್ಮಜ ।
ಭೂತಗ್ರಹಪತಿಶ್ರೇಷ್ಠ ಪಾವಕಪ್ರಿಯದರ್ಶನ ॥ ೪೨ ॥

ಮಹಾಭೂತಪತೇಃ ಪುತ್ರ ತ್ರಿಲೋಚನ ನಮೋಽಸ್ತು ತೇ ॥ ೪೩ ॥

ಕುಮಾರ, ನೀನು ಭೂತಗ್ರಹಗಳ ನಾಯಕನು. ದೇವತೆಗಳ ಸಮೂಹಕ್ಕೆ ನೀನು ಸೇನಾಪತಿಯಾಗು'' ಎಂದು ಹೇಳಿದನು.

೪೦. ದೊರೆಯೇ, ಹೀಗೆ ಹೇಳಿ, ರುದ್ರದೇವನೂ, ಎಲ್ಲಾದೇವತೆಗಳೂ ಸೇನಾಪತಿಯಾದ ಸ್ಕಂದ (ಷಣ್ಮುಖ) ನನ್ನು ಆಗ ಹಿತಕರವಾದ ವಾಕ್ಯಗಳಿಂದ ಸ್ತುತಿಸಿದರು.

೪೧. ದೇವತೆಗಳು—ಸೇನಾಧಿಪತಿ ನೀನಾಗು ಮಹೇಶ್ವರಸುತ, ಪ್ರಭೂ, ಷಣ್ಮುಖ, ಸ್ಕಂದ, ವಿಶ್ವೇಶ, ಕುಕ್ಕುಟಧ್ವಜ, ಪಾವಕೀ, ಕಂಪಿತಾರೀ, ಕುಮಾರೇಶ, ಸ್ಕಂದ, ಬಾಲಗ್ರಹಾನುಗ.

೪೨-೪೩. ಜಿತಾರೀ, ಕ್ರೌಂಚವಿಧ್ವಂಸ, ಕೃತ್ತಿಕಾಜ, ಶಿವಾತ್ಮಜ, ಭೂತಗ್ರಹಪತಿಶ್ರೇಷ್ಠ, ಪಾವಕಪ್ರಿಯದರ್ಶನ, ಮಹಾಭೂತೇಶಸುತನೇ, ತ್ರಿಲೋಚನನೆ, ವಂದನಂ.

ಏವಂಸ್ತುತಸ್ತದಾ ದೇವೈರ್ವಿವರ್ಧನ್ ಭವನಂದನಃ ।
ದ್ವಾದಶಾದಿತ್ಯಸಂಕಾಶೋ ಬಭೂವಾತುಲವಿಕ್ರಮಃ ॥
ತ್ರೈಲೋಕ್ಯಂ ತೇಜಸಾ ಸ್ವೇನ ತಾಪಯಾಮಾಸ ಪಾರ್ಥಿವ ॥ ೪೪ ॥

॥ ಪ್ರಜಾಪಾಲ ಉವಾಚ ॥

ಕಥಂ ತ್ವಂ ಕೃತ್ತಿಕಾಪುತ್ರಮುಕ್ತವಾನ್ ಶಂಸ ಮೇ ಗುರೋ ।
ಕಥಂ ವಾ ಪಾವಕಿರಸೌ ಕಥಂ ಷಣ್ಮಾತೃನಂದನಃ ॥ ೪೫ ॥

॥ ಮಹಾತಪಾ ಉವಾಚ ॥

ಆದಿಮನ್ವಂತರೇ ದೇವಸ್ಯೋತ್ಪತ್ತಿರ್ಯಾ ಮಯೋದಿತಾ ।
ಪರೋಕ್ಷದರ್ಶಿಭಿರ್ದೇವೈರೇವಮೇವ ಸ್ತುತಃ ಪ್ರಭೋ ॥ ೪೬ ॥

ಕೃತ್ತಿಕಾ ಪಾವಕಸ್ತಸ್ಯ ಮಾತರೋ ಗಿರಿಜಾ ತಥಾ ।
ದ್ವಿತೀಯಜನ್ಮನಿ ಗುಹಸ್ಯೈತೇ ಉತತ್ತಿಹೇತವಃ ॥ ೪೭ ॥

ಏವಮೇತತ್ತವಾಖ್ಯಾತಂ ಪೃಚ್ಛತಃ ಪಾರ್ಥಿವೋತ್ತಮ ।
ಆತ್ಮವಿದ್ಯಾಮೃತಂ ಗುಹ್ಯಮಹಂಕಾರಸ್ಯ ಸಂಭವಃ ॥ ೪೮ ॥

---

೪೪. ದೊರೆಯೇ, ಹೀಗೆ ದೇವತೆಗಳಿಂದ ಸ್ತುತನಾದ ಶಿವಕುಮಾರನು ಆಗ ಅಭಿವೃದ್ಧನಾಗಿ ಅಸಮಾನವಾದ ಪರಾಕ್ರಮವುಳ್ಳವನೂ, ದ್ವಾದಶಾದಿತ್ಯ ಸಮಾನನೂ ಆಗಿ ತನ್ನ ತೇಜದಿಂದ ಮೂರು ಲೋಕವನ್ನೂ ತಾಪಗೊಳಿಸಿದನು.

೪೫. ಪ್ರಜಾಪಾಲ–ಗುರುವೇ, ನೀನು ಕುಮಾರನನ್ನು ಕೃತ್ತಿಕಾಪುತ್ರ ನೆಂದು ಹೇಗೆ ಹೇಳಿದೆಯೆಂಬುದನ್ನು ನನಗೆ ತಿಳಿಸು. ಆ ಕುಮಾರನಿಗೆ ಪಾವಕಿ ಯೆಂದೂ ಷಣ್ಮಾತೃನಂದನನೆಂದೂ ಹೆಸರು ಹೇಗೆ ಬಂದಿತು ?

೪೬. ಮಹಾತಪಮುನಿ:–ಆ ಕುಮಾರದೇವನು ಆದಿಮನ್ವಂತರದಲ್ಲಿ ಉದಿ ಸಿದುದನ್ನು ನಾನು ಹೇಳಿದೆನು. ಎದುರಿಗಿಲ್ಲದುದನ್ನೂ ಅರಿಯಬಲ್ಲ ದೇವತೆಗಳು ಎಲ್ಲವನ್ನೂ ಅರಿತು ಹೀಗೆಯೇ ಸ್ತುತಿಸಿದರು.

೪೭. ಆ ಷಣ್ಮುಖನಿಗೆ ಕೃತ್ತಿಕಾನಕ್ಷತ್ರಾಭಿಮಾನದೇವತೆಯರು ಆರು ಮಂದಿಯೂ, ಅಗ್ನಿಯೂ, ಪಾರ್ವತಿಯೂ ಎರಡನೆಯ ಜನ್ಮದಲ್ಲಿ ಉತ್ಪತ್ತಿಕಾರ ಣರಾದ ತಾಯಿಯರು.

೪೮. ರಾಜೋತ್ತಮನೇ, ನೀನು ಕೇಳಿದುದರಿಂದ ಆತ್ಮವಿದ್ಯಾಮೃತವೂ, ರಹಸ್ಯವೂ ಆದ ಅಹಂಕಾರ (ತತ್ವ)ದ ಉತ್ಪತ್ತಿಯನ್ನು ಹೀಗೆ ಹೇಳಿದೆನು.

ಸ್ವಯಂ ಸ್ಕಂದೋ ಮಹಾದೇವಃ ಸರ್ವಪಾಪಪ್ರಣಾಶನಃ |
ತಸ್ಯ ಷಷ್ಠೀಂ ತಿಥಿಂ ಪ್ರಾದಾದಭಿಷೇಕೇ ಪಿತಾಮಹಃ || ೪೯ ||

ಅಸ್ಯಾಂ ಫಲಾಶನೋ ಯಸ್ತು ಪೂಜಯೇದ್ಯತಮಾನಸಃ |
ಅಪುತ್ರೋ ಲಭತೇ ಪುತ್ರಮಧನೋಽಪಿ ಧನಂ ಲಭೇತ್ || ೫೦ ||

ಯಂ ಯಮಿಚ್ಛೇತ್ತು ಮನಸಾ ಲಭತೇ ತಂ ತು ಮಾನವಃ || ೫೧ ||

ಯಶ್ಚೈತತ್ಪಠತಿ ಸ್ತೋತ್ರಂ ಕಾರ್ತಿಕೇಯಸ್ಯ ಮಾನವಃ |
ತಸ್ಯ ಗೇಹೇ ಕುಮಾರಾಣಾಂ ಕ್ಷೇಮಾರೋಗ್ಯಂ ಭವಿಷ್ಯತಿ || ೫೨ ||

ಇತಿ ಶ್ರೀ ವರಾಹಪುರಾಣೇ ಅದಿಕೃತವೃತ್ತಾಂತೇ ಮಹಾತಪ ಉಪಾಖ್ಯಾನೇ ಸ್ಕಂದೋತ್ಪತ್ತಿರ್ನಾಮ ಪಂಚವಿಂಶೋಽಧ್ಯಾಯಃ

---

೪೯. ಮಹಾದೇವನಾದ ಷಣ್ಮುಖನುತಾನೇ, ಸರ್ವಪಾಪಗಳನ್ನೂ ಪರಿಹರಿಸುವನು. ಬ್ರಹ್ಮನು ಅವನ ಅಭಿಷೇಕಕ್ಕೆ ಷಷ್ಠೀತಿಥಿಯನ್ನು ನಿರ್ಣಯಿಸಿಕೊಟ್ಟನು.

೫೦-೫೨. ಈ ಷಷ್ಠಿಯಲ್ಲಿ ಶುದ್ಧಮನಸ್ಕನಾಗಿ ಷಣ್ಮುಖನನ್ನು ಪೂಜಿಸಿ, ಫಲಾಹಾರದಿಂದಿರುವವನು ಪುತ್ರನಿಲ್ಲದಿದ್ದರೆ ಪುತ್ರನನ್ನೂ ದರಿದ್ರನಾಗಿದ್ದರೆ ಧನವನ್ನೂ ಮನಸ್ಸಿನಲ್ಲಿ ಏನೇನನ್ನು ಬಯಸುವನೋ ಅದೆಲ್ಲವನ್ನೂ ಪಡೆಯುವನು. ಷಣ್ಮುಖನ ಈ ಸ್ತೋತ್ರವನ್ನು ಹೇಳುವವರ ಮನೆಯಲ್ಲಿ ಮಕ್ಕಳಿಗೆ ಆರೋಗ್ಯವೂ, ಕ್ಷೇಮವೂ ಆಗುವುದು.

ಅಧ್ಯಾಯದ ಸಾರಾಂಶ:—ಈ ಅಧ್ಯಾಯದಲ್ಲಿ ಕಾರ್ತಿಕೇಯ ಅಥವಾ ಷಣ್ಮುಖನ ಅವತಾರವನ್ನು ಹೇಳಿದೆ—ಅಹಂಕಾರವೆಂಬ ತತ್ತ್ವವೇ, ಷಣ್ಮುಖನಾಗಿ ಉದಿಸಿತು. ದೇವತೆಗಳು ರಾಕ್ಷಸರನ್ನು ಜಯಿಸಲು ತಮಗೆ ಸರಿಯಾದ ಸೇನಾಪತಿಯು ಬೇಕೆಂದು ಬ್ರಹ್ಮನಿಗೆ ಹೇಳಿಕೊಂಡರು. ಬ್ರಹ್ಮನು ಅವರೊಡನೆ ಈಶ್ವರನ ಸನ್ನಿಧಿಗೆ ಹೋದನು. ಅವನನ್ನು ಸ್ತೋತ್ರಗಳಿಂದ ಎಲ್ಲರೂ ಸ್ತುತಿಸಿದರು. ಸಂತುಷ್ಟನಾದ ರುದ್ರನು ಅವರ ಪ್ರಾರ್ಥನೆಯಂತೆ ತೇಜಸ್ವಿಯೂ, ಜ್ಞಾನಿಯೂ, ಮಹಾವೀರನೂ, ಆದ ಕುಮಾರನನ್ನು ಪಡೆದನು. ದೇವತೆಗಳು ಕುಮಾರನನ್ನು ಸ್ತೋತ್ರಗಳಿಂದ ಸ್ತುತಿಸಿದರು. ಶಿವನು ಷಣ್ಮುಖನನ್ನು ದೇವತೆಗಳಿಗೆ ಸೇನಾಪತಿಯಾಗುವಂತೆ ನಿಯಮಿಸಿದನು. ಬ್ರಹ್ಮನು ಷಣ್ಮುಖನ ಅಭಿಷೇಕಕ್ಕೆ ಷಷ್ಠೀತಿಥಿಯನ್ನು ನಿಷ್ಕರ್ಷಿಸಿಕೊಟ್ಟನು. ಎಂಬುದೇ ಮೊದಲಾದ ವಿಚಾರಗಳನ್ನು ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ಇಪ್ಪತ್ತೈದನೆಯ ಅಧ್ಯಾಯ

|| ಶ್ರೀಃ ||

-X-

ಷಡ್ವಿಂಶೋಽಧ್ಯಾಯಃ

ಅಥಾದಿತ್ಯೋತ್ಪತ್ತಿಃ

|| ಪ್ರಜಾಪಾಲ ಉವಾಚ ||

ಶರೀರಸ್ಯ ಕಥಂ ಮೂರ್ತಿಗ್ರಹಣಂ ಜ್ಯೋತಿಷೋ ದ್ವಿಜ ।
ಏತನ್ಮೇ ಸಂಶಯಂ ಛಿಂದಿ ಪ್ರಣತಸ್ಯ ದ್ವಿಜೋತ್ತಮ || ೧ ||

|| ಮಹಾತಪಾ ಉವಾಚ ||

ಯೋಽಸಾವಾತ್ಮಾ ಜ್ಞಾನಶಕ್ತಿರೇಕ ಏವ ಸನಾತನಃ ।
ಸ ದ್ವಿತೀಯಂ ಯದಾ ಚೈಚ್ಛತ್ತದಾ ತೇಜಃ ಸಮುತ್ಥಿತಂ || ೨ ||

ಇಪ್ಪತ್ತಾರನೆಯ ಅಧ್ಯಾಯ

ಆದಿತ್ಯನ ಉತ್ಪತ್ತಿ

೧, ಪ್ರಜಾಪಾಲ–ದ್ವಿಜೋತ್ತಮನೇ, ಜ್ಯೋತಿಶ್ಶರೀರಕ್ಕೆ ಮೂರ್ತಿ (ಆಕಾರ)ಲಾಭವು ಹೇಗಾಯಿತು? ನಮಸ್ಕರಿಸಿದ ನನ್ನ ಈ ಸಂದೇಹವನ್ನು ಹೋಗಲಾಡಿಸು.

೨. ಮಹಾತಪಮುನಿ–ಜ್ಞಾನಶಕ್ತಿಯುಳ್ಳವನೂ, ಏಕನೂ (ಅದ್ವಿತೀಯ), ಸನಾತನನೂ ಆದ ಪರಮಾತ್ಮನು ಎರಡನೆಯವ (ಪುತ್ರ)ನನ್ನಿಚ್ಛಿಸಿದಾಗ ತೇಜಸ್ಸುಂಟಾಯಿತು.

ತತಸ್ಸೂರ್ಯ ಇತಿ ಭಾಸ್ವಾಂಸ್ತು ಅನ್ಯೋನ್ಯೇನ ಮಹಾತ್ಮನಃ ।
ಲೀನೀಭೂತಾನಿ ತೇಜಾಂಸಿ ಭಾಸಯಂತಿ ಜಗತ್ತ್ರಯಂ ॥ ೩ ॥

ತಸ್ಮಿನ್ಸರ್ವೇ ಸುರಾಃ ಸಿದ್ಧಾ ಗಣಾಃ ಸರ್ವೈರ್ಮಹರ್ಷಿಭಿಃ ।
ಸ್ವಯಂಭೂತ ಇತಿ ಪ್ರೋಕ್ತೈಸ್ತಸ್ಮಾತ್ಸೂರ್ಯಸ್ತು ಸೋಭವತ್ ॥ ೪ ॥

ಲೀನೀಭೂತಸ್ಯ ತಸ್ಯಾಶು ತೇಜಸೋ ಭೂಚ್ಛರೀರಕಂ ।
ಪೃಥಕ್ತ್ವೇನ ರವಿಃ ಸೋಥ ಕೀರ್ತ್ಯತೇ ವೇದವಾದಿಭಿಃ ॥ ೫ ॥

ಭಾಸಯೇತ್ಸರ್ವಲೋಕಾಂಸ್ತು ಯತೋಸಾವುತ್ಥಿತೋ ದಿವಿ ।
ಅತೋಸೌ ಭಾಸ್ಕರಃ ಪ್ರೋಕ್ತಃ ಪ್ರಕಾಶಾಚ್ಚ ಪ್ರಭಾಕರಃ ॥ ೬ ॥

ದಿವಾ ದಿವಸ ಇತ್ಯುಕ್ತಃ ತತ್ಕಾರಿತ್ವಾದ್ದಿವಾಕರಃ ।
ಸರ್ವಸ್ಯ ಜಗತಸ್ತ್ವಾದಿರಾದಿತ್ಯಸ್ತೇನ ಚೋಚ್ಯತೇ ॥ ೭ ॥

---

೩. ಅದಕ್ಕೆ ಸೂರ್ಯನೆಂದೂ, ಭಾಸ್ವತ್ತೆಂದೂ ಹೆಸರು. ಈ ತೇಜಸ್ಸು ಮಹಾತ್ಮನಾದ ಪರಮಾತ್ಮ ತೇಜಸ್ಸಿನೊಡನ್ನೆ ಕಲೆತು, ಮೂರುಲೋಕವನ್ನೂ ಬೆಳಗುತ್ತಿದ್ದಿತು.

೪. ಅದನ್ನು ಸರ್ವದೇವತೆಗಳೂ, ಸಿದ್ಧಗಣಗಳೂ, ಎಲ್ಲಾ ಮಹರ್ಷಿಗಳೊಡನೆ ತಾನಾಗಿ ಉದಿಸಿದುದೆಂದು ಹೇಳಿದುದರಿಂದ ಅದು ಸೂರ್ಯನೆಂದೆನಿಸಿಕೊಂಡಿತು.

೫. ಎಲ್ಲೆಲ್ಲೂ ವ್ಯಾಪಿಸಿದ್ದ ಆ ತೇಜಸ್ಸಿಗೆ ತಟ್ಟನೆ ದೇಹವುಂಟಾಯಿತು. ಬಳಿಕ ಶರೀರವುಳ್ಳ ಅದನ್ನು ವೇದವಾದಿಗಳು ರವಿಯೆಂದು ಬೇರೆಯ ಹೆಸರಿನಿಂದ ಹೊಗಳಿದರು.

೬. ಆಕಾಶದಲ್ಲುದಿಸಿ, ಸರ್ವಲೋಕಗಳನ್ನೂ ಬೆಳಗುವುದರಿಂದ ಅವನಿಗೆ ಭಾಸ್ಕರನೆಂದೂ, ಪ್ರಕಾಶವಾಗಿರುವುದರಿಂದ ಪ್ರಭಾಕರನೆಂದೂ ಹೆಸರಾಯಿತು.

೭. ಹಗಲಿಗೆ 'ದಿವಾ' ಎಂದು ಹೆಸರುಂಟು. ಅದನ್ನುಂಟುಮಾಡುವುದರಿಂದ ರವಿಗೆ ದಿವಾಕರನೆಂದೂ ಹೆಸರು. ಸರ್ವಜಗತ್ತಿಗೂ ಅವನು ಆದಿಯಾದುದರಿಂದ ಆದಿತ್ಯನೆಂದು ಹೇಳಿಸಿಕೊಳ್ಳುವನು.

ಏತಸ್ಯ ತೇಜಸಾ ಜಾತಾ ಆದಿತ್ಯಾ ದ್ವಾದಶ ಪೃಥಕ್ ।
ಪ್ರಧಾನ ಏಕ ಏವಾಯಂ ಜಗತ್ಸು ಪರಿವರ್ತತೇ ॥ ೮ ॥

ತಂ ದೃಷ್ಟ್ವಾ ಜಗತೋ ವ್ಯಾಪ್ತಿಂ ಕುರ್ವಾಣಂ ಪರಮೇಶ್ವರಂ ।
ತಸ್ಯೈವಾಂತಃ ಸ್ಥಿತಾ ದೇವಾ ವಿನಿಷ್ಕ್ರಮ್ಯ ಸ್ತುತಿಂ ಜಗುಃ ॥ ೯ ॥

॥ ದೇವಾ ಊಚುಃ ॥

ಭವಾನ್ಪ್ರಸೂತಿರ್ಜಗತಃ ಪುರಾಣಃ
ಪ್ರಪಾಸಿ ವಿಶ್ವಂ ಪ್ರಲಯೇ ಚ ಹಂಸಿ ।
ಸಮುತ್ಥಿತಸ್ತ್ವಂ ಸತತಂ ಪ್ರಯಾಸಿ
ವಿಶ್ವಂ ಸದಾ ತ್ವಾಂ ಪ್ರಣತಾಃ ಸ್ಮ ನಿತ್ಯಂ ॥ ೧೦ ॥

---

೮. ಈ ರವಿಯ ಅಥವಾ ಆದಿತ್ಯನ ತೇಜಸ್ಸಿನಿಂದ ಬೇರೆ ಹನ್ನೆರಡುಜನ ಆದಿತ್ಯರುದಿಸಿದರು. ಆದರೆ ಮುಖ್ಯನಾದ ಆದಿತ್ಯನೊಬ್ಬನೇ ಜಗತ್ತುಗಳಲ್ಲಿ ಸುತ್ತುತ್ತಾನೆ.

೯. ಪ್ರಪಂಚದಲ್ಲೆಲ್ಲಾ ವ್ಯಾಪಿಸುವ ಪರಮೇಶ್ವರನಾದ ಅವನನ್ನು ನೋಡಿ, ಅವನೊಳಗೇ ಇದ್ದ ದೇವತೆಗಳು ಈಚೆಗೆ ಬಂದು, ಸ್ತೋತ್ರವನ್ನು ಹಾಡಿದರು.

೧೦. ದೇವತೆಗಳು—ಪುರಾತನನಾದ ನೀನು ಪ್ರಪಂಚದ ಉತ್ಪತ್ತಿಗೆ ಕಾರಣನು. ವಿಶ್ವವನ್ನು ನೀನು ರಕ್ಷಿಸುತ್ತೀಯೆ. ಪ್ರಲಯದಲ್ಲಿ ಉಗ್ರನಾಗಿ ನಾಶಮಾಡುತ್ತೀಯೆ. ಯಾವಾಗಲೂ ನೀನು ವಿಶ್ವಸಂಚಾರಕನು. ನಿನಗೆ ನಾವು ಯಾವಾಗಲೂ ಪ್ರಣತರಾಗುತ್ತೇವೆ.

ತ್ವಯಾ ತತಂ ಸರ್ವತ ಏವ ತೇಜಃ
ಪ್ರತಾಪಿತಂ ಸೂರ್ಯ ಜಗತ್ಪ್ರವೃತ್ತೌ ।
*ಸಪ್ತಾಶ್ವಯುಕ್ತೇ ಚ ರಥೇ ಸ್ಥಿತಸ್ತ್ವಂ
ಕಾಲಾಕ್ಷಮನ್ವಂತರ ವೇಗಯುಕ್ತೇ ॥ ೧೧ ॥

ಪ್ರಭಾಕರಸ್ತ್ವಂ ರವಿರಾದಿದೇವ
ಆತ್ಮಾಸಮಸ್ತಸ್ಯ ಚರಾಚರಸ್ಯ ।
ಪಿತಾಮಹಸ್ತ್ವಂ ವರುಣೋ ಯಮಶ್ಚ
ಭೂತಂಭವಿಷ್ಯಚ್ಚ ವದಂತಿ ಸಿದ್ಧಾಃ ॥ ೧೨ ॥

ತೇಜೋರಿವಿಧ್ವಂಸನ ವೇದಮೂರ್ತೇ
ಪ್ರಪಾಹಿ ಚಾಸ್ಮಾನ್ ಶರಣಾಗತಾನ್ಸದಾ ।
ವೇದಾಂತವೇದ್ಯೋಽಸಿ ಮಖೇಷು ದೇವ
ತ್ವಂ ಹೂಯಸೇ ವಿಷ್ಣುರಿತಿ ಪ್ರಸನ್ನ ॥ ೧೩ ॥

---

೧೧. ಸೂರ್ಯನೇ, ಕಾಲವೆಂಬ ಅಚ್ಚೂ, ಮನ್ವಂತರವೆಂಬ ವೇಗವೂ ಉಳ್ಳ *ಸಪ್ತಾಶ್ವಯುಕ್ತರಥದಲ್ಲಿ ನೆಲೆಸಿ, ನೀನು ಎಲ್ಲೆಡೆಯಲ್ಲಿಯೂ ತೇಜಸ್ಸನ್ನು ಹರಡಿದ್ದೀಯೆ. ಜಗತ್ತನ್ನು, ಜೀವನದಲ್ಲಿ ಪೌರುಷವುಳ್ಳದನ್ನಾಗಿ ಮಾಡಿರುತ್ತೀಯೆ. (ಅಥವಾ) ನಿನ್ನ ಸಂಚಾರದಲ್ಲಿ ಜಗತ್ತನ್ನು ಬಿಸಿಲುಳ್ಳದನ್ನಾಗಿ ಮಾಡಿರುವೆ.

೧೨. ನೀನು ಪ್ರಶಸ್ತವಾದ ಪ್ರಕಾಶವನ್ನುಂಟುಮಾಡುವವನು. ಸ್ತುತ್ಯನು. ಆದಿದೇವನು. ಚಲಿಸುವ ಮತ್ತು ಚಲಿಸದಿರುವ ಸಮಸ್ತಕ್ಕೂ ಆತ್ಮನೂ, ಬ್ರಹ್ಮನೂ, ವರುಣನೂ, ಯಮನೂ, *ಭೂತನೂ, +ಭವಿಷ್ಯನೂ ನೀನೇ ಎಂದು ಸಿದ್ಧರು ಹೇಳುತ್ತಾರೆ.

೧೩. ತೇಜಸ್ಸಿನಿಂದ ಶತ್ರುಗಳನ್ನು ನಾಶಮಾಡುವವನೇ, ವೇದಮೂರ್ತಿಯೇ, ನೀನೇ ವೇದಾಂತದಿಂದ ತಿಳಿಯಲ್ಪಡುವವನಾಗಿರುತ್ತೀಯೆ. ದೇವ.

---

* ಸಪ್ತಾಶ್ವ= ಏಳು ಕುದುರೆ, ಸಪ್ತವೆಂಬ ಹೆಸರಿನ ಒಂದುಕುದುರೆ, ಏಳುಬಗೆಯ ಬಣ್ಣಗಳು.

* ಭೂತ= ಸತ್ಯ, ಹಿಂದಿದ್ದುದು, ಪಂಚಭೂತ, ದ್ರವ್ಯ.

+ ಭವಿಷ್ಯ= ಮುಂದಾಗುವುದು, ಮುಂದಿರುವುದು.

ಇತಿಸ್ತುತಸ್ತೈಃ ಸುರನಾಥ ಭಕ್ತ್ಯಾ ।
ಪ್ರಸಾಹಿ ಶಂಭೋ ನ ಇತಿ ಪ್ರಸಹ್ಯ ॥ ೧೪ ॥

ಏವಮುಕ್ತಸ್ತದಾ ದೇವೈಃ ಸೌಮ್ಯಾಂ ಮೂರ್ತಿಮಥಾಕರೋತ್ ।
ಪ್ರಕಾಶತ್ವಂ ಜಗಾಮಾಶು ದೇವತಾನಾಂ ಮಹಾಪ್ರಭಃ ॥ ೧೫ ॥

ಏತತ್ಸರ್ವಸುರಾಣಾಂತು ದಹನಂ ಶಾಮಿತಂ ತ್ವಯಾ ।
ಸಪ್ತಮ್ಯಾಂ ಖಲು ಸೂರ್ಯೇಣ ಮೂರ್ತಿಸ್ತ್ವಂಗೀಕೃತಾ ಭುವಿ ॥ ೧೬ ॥

ಏತಾಂ ಯಃ ಪುರುಷೋ ಭಕ್ತ್ಯಾ ಉಪಾಸ್ತೇ ಸೂರ್ಯಮರ್ಚಯೇತ್ ।
ಭಾಸ್ಕರಶ್ಚೈವ ತಸ್ಯಾಸೌ ಫಲಮಿಷ್ಟಂ ಪ್ರಯಚ್ಛತಿ ॥ ೧೭ ॥

ನೀನು ಯಜ್ಞಗಳಲ್ಲಿ ವಿಷ್ಣುವೆಂದು ಹವಿರ್ಭಾಗವನ್ನು ಪಡೆಯುತ್ತೀಯೆ. ಪ್ರಸನ್ನನೇ, ಶರಣಾಗತರಾದ ನಮ್ಮನ್ನು ಯಾವಾಗಲೂ ಪರಿಪಾಲಿಸು.

೧೪. ದೇವತೆಗಳೊಡೆಯನೇ, ಶಂಭುವೇ, ನಮ್ಮನ್ನು ಪರಿರಕ್ಷಿಸು. ಎಂದು ಅವರು ಭಕ್ತಿಪೂರ್ವಕವಾಗಿ ಬಲವಾಗಿ ಸ್ತುತಿಸಿದರು.

೧೫. ಹೀಗೆ ದೇವತೆಗಳು ಸ್ತುತಿಸಿದ ಬಳಿಕ ಪ್ರಭುವಾದ ಆದಿತ್ಯನು ಸೌಮ್ಯವಾದ ರೂಪವನ್ನು ವಹಿಸಿದನು. ಅಲ್ಲದೆ ಅವರಿಗೆ ಬೇಗನೆ ಕಾಣಿಸಿಕೊಂಡನು.

೧೬. ಸೂರ್ಯನು ದೇಹವನ್ನು ಧರಿಸಿದುದು, ಸೌಮ್ಯನಾಗಿ ದೇವತೆಗಳ ಸುಡುವಿಕೆಯನ್ನು (ತಾಪವನ್ನು) ಶಮನಮಾಡಿದುದು, ಇದೆಲ್ಲವೂ ಸಪ್ತಮಿಯ ದಿನ ನಡೆಯಿತು.

೧೭. ಈ ಸಪ್ತಮಿಯಲ್ಲಿ, ಉಪವಾಸಮಾಡಿ, ಸೂರ್ಯನನ್ನು ಪೂಜಿಸುವ ಮನುಷ್ಯನಿಗೆ ಆ ಭಾಸ್ಕರನು ಇಷ್ಟವಾದ ಫಲವನ್ನು ಕೊಡುವನು.

ಏತತ್ತೇ ಕಥಿತಂ ರಾಜನ್ ಸೂರ್ಯಾಖ್ಯಾನಂ ಪುರಾತನಂ ।
ಆದಿಮನ್ವಂತರೇ ವೃತ್ತಂ ಮಾತಸ್ತ್ವಂ ಶೃಣು ಸಾಂಪ್ರತಂ ॥ ೧೮ ॥

ಇತಿ ಶ್ರೀ ವರಾಹಪುರಾಣೇ ಆದಿಕೃತವೃತ್ತಾಂತೇ ಮಹಾತಪ ಉಪಾಖ್ಯಾನೇ ಆದಿತ್ಯೋತ್ಪತ್ತಿರ್ನಾಮ ಷಡ್ವಿಂಶೋಧ್ಯಾಯಃ

---

೧೮. ರಾಜನೇ, ಆದಿಮನ್ವಂತರದಲ್ಲಿ ನಡೆದ ಪುರಾತನವಾದ ಈ ಸೂರ್ಯನ ಕಥೆಯನ್ನು ಹೇಳಿದೆನು. ಈಗ ಇನ್ನು ಕೇಳಬೇಡ.

ಅಧ್ಯಾಯದ ಸಾರಾಂಶ :—ಮಹಾತಪಮುನಿಯು ಪ್ರಜಾಪಾಲನಿಗೆ ಆದಿತ್ಯ(ಸೂರ್ಯ)ನ ವಿಚಾರವನ್ನು "ಏಕನಾಗಿದ್ದ ಪರಮಾತ್ಮನು ಎರಡನೆಯವನನ್ನಿಚ್ಛಿಸಲು ತೇಜಸ್ಸುದಿಸಿತು. ಅದಕ್ಕೆ ಸೂರ್ಯನೆಂದು ಹೆಸರಾಯಿತು. ಅದು ಪರಮಾತ್ಮತೇಜದೊಡನೆ ಕಲೆತು, ಲೋಕವನ್ನೆಲ್ಲಾ ಬೆಳಗಲಾರಂಭಿಸಿತು. ಆ ತೇಜಸ್ಸಿಗೆ ಒಂದು ದೇಹವೂ ಉಂಟಾಯಿತು. ದೇಹಧಾರಿಯಾದ ಅವನಿಗೆ ರವಿ, ವಿವಸ್ವತ್ ಎಂಬುವೇ ಮೊದಲಾದ ಹಲವು ಹೆಸರುಗಳಾದುವು. ದೇವತೆಗಳಿಂದ ಸ್ತುತನಾದ ಆತನು ಸೌಮ್ಯರೂಪದಿಂದ ಅವರಿಗೆ ಕಾಣಿಸಿಕೊಂಡನು. ಇದೆಲ್ಲವೂ ಸಪ್ತಮಿಯದಿನ ನಡೆದುದರಿಂದ ಅದು ಸೂರ್ಯನಿಗೆ ಪ್ರಿಯವಾದ ತಿಥಿ" ಎಂದು ಹೇಳುವಲ್ಲಿಗೆ ಶ್ರೀವರಾಹ ಪುರಾಣದಲ್ಲಿ ಇಪ್ಪತ್ತಾರನೆಯ ಅಧ್ಯಾಯ.

॥ ಶ್ರೀಃ ॥

-X-

ಸಪ್ತವಿಂಶೋಽಧ್ಯಾಯಃ

ಅಥ ಅಷ್ಟಮಾತ್ರುತ್ಪತ್ತಿಃ

॥ ಮಹಾತಪಾ ಉವಾಚ ॥

ಪೂರ್ವಮಾಸೀನ್ಮಹಾದೈತ್ಯೋ ಬಲವಾನಂಧಕೋ ಭುವಿ ।
ಸ ದೇವಾನ್ವಶಮಾನಿನ್ಯೇ ಬ್ರಹ್ಮಣೋ ವರದರ್ಪಿತಃ ॥ ೧ ॥

ತೇನಾತ್ಮಸಾತ್ಸುರಾಃ ಕೃತ್ವಾ ತ್ಯಾಜಿತಾ ಮೇರುಪರ್ವತಂ ।
ಬ್ರಹ್ಮಾಣಂ ಶರಣಂ ಜಗ್ಮುರಂಧಕಸ್ಯ ಭಯಾರ್ದಿತಾಃ ॥ ೨ ॥

ತಾನಾಗತಾನ್ ತದಾ ಬ್ರಹ್ಮಾ ಉವಾಚ ಸುರಸತ್ತಮಾನ್ ।
ಕಿಮಾಗಮನಕೃತ್ಯಂ ವೋ ದೇವಾ ಬ್ರೂತ ಕಿಮಾಸ್ಯತೇ ॥ ೩ ॥

ಇಪ್ಪತ್ತೇಳನೆಯ ಅಧ್ಯಾಯ

ಅಷ್ಟಮಾತೃಗಳ ಉತ್ಪತ್ತಿ

೧. ಮಹಾತಪಮುನಿ—ಪೂರ್ವದಲ್ಲಿ ಭೂಮಿಯಲ್ಲಿ ಅಂಧಕನೆಂಬ ಮಹಾದೈತ್ಯನಿದ್ದನು. ಅವನು ಬ್ರಹ್ಮನವರದಿಂದ ಕೊಬ್ಬಿ, ದೇವತೆಗಳನ್ನೂ ತನ್ನ ಅಧೀನರನ್ನಾಗಿ ಮಾಡಿಕೊಂಡಿದ್ದನು

೨. ಅವನು ತನ್ನ ಅಧೀನರಾದ ದೇವತೆಗಳನ್ನು ಮೇರುಪರ್ವತದಿಂದ ಓಡಿಸಿಬಿಟ್ಟನು. ಭಯಪೀಡಿತರಾದ ಅವರು ಬ್ರಹ್ಮನನ್ನು ಮರೆಹೊಕ್ಕರು.

೩. ಬ್ರಹ್ಮನು ತನ್ನಲ್ಲಿ ಬಂದ ಆ ಸುರೋತ್ತಮರನ್ನು ಕುರಿತು, "ನೀವು ಬಂದ ಕಾರ್ಯವೇನು? ದೇವತೆಗಳೇ, ಹೇಳಿ. ಸುಮ್ಮನೆ ಏಕಿರುವಿರಿ?" ಎಂದನು.

|| ದೇವಾ ಊಚುಃ ||

ಅಂಧಕೇನಾರ್ದಿತಾಸ್ಸರ್ವೇ ವಯಂ ದೇವಾ ಜಗತ್ಪತೇ |
ತ್ರಾಹಿ ಸರ್ವಾಂಶ್ಚತುರ್ವಕ್ತ್ರ ಪಿತಾಮಹ ನಮೋಽಸ್ತು ತೇ || ೪ ||

|| ಬ್ರಹ್ಮೋವಾಚ ||

ಅಂಧಕಾನ್ನೈವ ಶಕ್ತೋಽಹಂ ತ್ರಾತುಂ ವ್ಯೆ ಸುರಸತ್ತಮಾಃ ।
ಭವಂ ಶರ್ವಂ ಮಹಾದೇವಂ ವ್ರಜಾಮಃ ಶರಣಾರ್ಥಿನಃ || ೫ ||

ಕಿಂತು ಪೂರ್ವಂ ಮಯಾ ದತ್ತೋ ವರಸ್ತಸ್ಯ ಸುರೋತ್ತಮಾಃ
ಅವಧ್ಯಸ್ತ್ವಂಹಿ ಭವಿತಾ ನ ಶರೀರಂ ಸ್ಪೃಶೇನ್ಮಹೀಂ || ೬ ||

ತಸ್ಯೈವಂ ಬಲಿನಸ್ತ್ವೇಕೋ ಹಂತಾ ರುದ್ರಃ ಪರಂತಪಃ |
ತತ್ರ ಗಚ್ಛಾಮಹೇ ಸರ್ವೇ ಕೈಲಾಸನಿಲಯಪ್ರಭುಂ || ೭ ||

---

೪. ದೇವತೆಗಳು—ಜಗತ್ಪತೀ, ಪಿತಾಮಹನೇ, ಚತುರ್ಮುಖನೇ, ನಿನಗೆ ನಮಸ್ಕಾರ. ದೇವತೆಗಳಾದ ನಾವೆಲ್ಲರೂ ಅಂಧಕಾಸುರನಿಂದ ಪೀಡಿತರಾಗಿದ್ದೇವೆ. ನಮ್ಮೆಲ್ಲರನ್ನೂ ಕಾಪಾಡು.

೫. ಬ್ರಹ್ಮ—ದೇವೋತ್ತಮರೇ, ಅಂಧಕನಿಂದ ನಿಮ್ಮನ್ನು ಕಾಪಾಡಲು ನಾನು ಶಕ್ತನಲ್ಲವೇ ಅಲ್ಲ. ಮಹಾದೇವನಾದ ಶಿವನನ್ನು ಮರೆಹೊಗಲು ಹೋಗೋಣ.

೬. ಏಕೆಂದರೆ ನಾನೇ ಪೂರ್ವದಲ್ಲಿ ಅಂಧಕನಿಗೆ "ನೀನು ಅವಧ್ಯನಾಗುವೆ. ನಿನ್ನ ಶರೀರವು ಭೂಮಿಯನ್ನು ಮುಟ್ಟಲಾರದು" ಎಂದು ವರವನ್ನು ಕೊಟ್ಟಿನು.

೭. ಅದರಿಂದ ಬಲಶಾಲಿಯಾಗಿರುವ ಅವನನ್ನು ಕೊಲ್ಲುವವನು ಶತ್ರುಸಂತಾಪಕನಾದ ರುದ್ರನೊಬ್ಬನೇ. ಆದುದರಿಂದ ಎಲ್ಲರೂ ಕೈಲಾಸದಲ್ಲಿರುವ ಆ ಪ್ರಭುವಿನ ಹತ್ತಿರ ಹೋಗೋಣ.

ಏವಮುಕ್ತ್ವಾ ಯಯೌ ಬ್ರಹ್ಮಾ ಸದೇವೋ ಭವಸನ್ನಿಧೌ ।
ತಸ್ಯ ಸಂದರ್ಶನಾದ್ರುದ್ರಃ ಪ್ರತ್ಯುತ್ಥಾನಾದಿಕಾಃ ಕ್ರಿಯಾಃ ॥
ಕೃತ್ವಾಭ್ಯುವಾಚ ದೇವೇಶೋ ಬ್ರಹ್ಮಾಣಂ ಭುವನೇಶ್ವರಂ ॥ ೮ ॥

॥ ಶಂಭುರುವಾಚ ॥

ಕಿಂ ಕಾರ್ಯಂ ದೇವತಾಸ್ಸರ್ವಾ ಆಗತಾ ಮಮ ಸನ್ನಿಧೌ ।
ಯೇನಾಹಂ ತತ್ಕರೋಮ್ಯಾಶು ಆಜ್ಞಾ ಕಾರ್ಯಾ ಹಿ ಸತ್ವರಂ ॥ ೯ ॥

ರಕ್ಷಸ್ವ ದೇವ ಬಲಿನಸ್ತ್ವಂಧಕಾದ್ದುಷ್ಟಚೇತಸಃ ॥ ೧೦ ॥

ಯಾವದೇವ ಸುರಾಸ್ಸರ್ವೇ ಶಂಸಂತಿ ಪರಮೇಷ್ಠಿನಃ ।
ತಾವತ್ಸೈನ್ಯೇನ ಮಹತಾ ತತ್ರ ಚಾಂಧಕ ಆಯಯೌ ॥ ೧೧ ॥

ಬಲೇನ ಚತುರಂಗೇನ ಹಂತುಕಾಮೋ ಭವಂ ಮೃಧೇ ।
ತಸ್ಯ ಭಾರ್ಯಾಂ ಗಿರಿಸುತಾಂ ಹಂತುಮಿಚ್ಛನ್ಸಸಾಧನಃ ॥ ೧೨ ॥

---

೮. ಹೀಗೆಂದು ಹೇಳಿ ಬ್ರಹ್ಮನು, ದೇವತೆಗಳೊನೆ ಶಿವಸನ್ನಿಧಿಗೆ ಹೊರಟು ಹೋದನು. ಅವನನ್ನು ಕಂಡು ದೇವೇಶನಾದ ರುದ್ರನು ಎದುರುಗೊಂಡೇಳುವುದೇ ಮೊದಲಾದ ಸತ್ಕಾರಗಳನ್ನು ಮಾಡಿ ಲೋಕೇಶ್ವರನಾದ ಆ ಬ್ರಹ್ಮನಿಗೆ ಮುಂದಿನಂತೆ ಹೇಳಿದನು.

೯. ಶಂಭು-ದೇವತೆಗಳೆಲ್ಲರೂ ನನ್ನ ಬಳಿಗೆ ಯಾವ ಕಾರ್ಯಕ್ಕಾಗಿ ಬಂದಿರುವಿರಿ? ನಾನು ಬೇಗನೆ ಅದನ್ನು ಮಾಡುವುದಕ್ಕೆ ಅನುಕೂಲಿಸುವಂತೆ ತಟ್ಟನೆ ಅಪ್ಪಣೆಮಾಡಬೇಕಲ್ಲವೆ !

೧೦-೧೧. "ದುಷ್ಟಚೇತನನೂ ಬಲಶಾಲಿಯೂ ಆದ ಅಂಧಕನಿಂದ ನಮ್ಮನ್ನು ರಕ್ಷಿಸು, ದೇವಾ" ಎಂದು ದೇವತೆಗಳೆಲ್ಲರೂ ರುದ್ರನಿಗೆ ಬಿನ್ನವಿಸುವಷ್ಟರಲ್ಲಿಯೇ ದೊಡ್ಡದಾದ ಸೇನೆಯೊಡನೆ ಅಂಧಕನು ಅಲ್ಲಿಗೇ ಬಂದನು.

೧೨. ಸಾಮಗ್ರಿಗಳೊಡನೆಯೂ, ನಾಲ್ಕುವಿಧವಾದ ಸೇನೆಯೊಡನೆಯೂ ಬಂದು ಅವನು ಯುದ್ಧದಲ್ಲಿ ಶಿವನನ್ನೂ, ಅವನ ಪತ್ನಿಯಾದ ಪಾರ್ವತಿಯನ್ನೂ ಕೊಲ್ಲಬೇಕೆಂದಿದ್ದನು.

ತಂ ದೃಷ್ಟ್ವಾ ಸಹಸಾಯಾಂತಂ ದೇವಂ‡ ದೈತ್ಯಂ ಪ್ರಹಾರಿಣಂ ।
ಸನ್ನಹ್ಯ ಸಹಸಾದೇವಾ ರುದ್ರಸ್ಯಾನುಚರಾಭವನ್ ॥ ೧೩ ॥

ರುದ್ರೋಽಪಿ [1]ವಾಸುಕಿಂ ಧ್ಯಾತ್ವಾ [2]ತಕ್ಷಕಂ ಚ [3]ಧನಂಜಯಂ ।
ವಲಯಂ ಕಟಿಸೂತ್ರಂ ಚ ಚಕಾರ ಪರಮೇಶ್ವರಃ ॥ ೧೪ ॥

ನೀಲನಾಮಾ ತು ದೈತ್ಯೇಂದ್ರೋ ಹಸ್ತೀಭೂತ್ವಾ ಭವಾಂತಿಕಂ ।
ಆಗತಸ್ತ್ವರಿತಃ ಶತ್ರುರ್ಹಸ್ತೀವಾದ್ಭುತರೂಪವಾನ್ ॥ ೧೫ ॥

ಸ ಜ್ಞಾತೋ ನಂದಿನಾ ದೈತ್ಯೋ ವೀರಭದ್ರಾಯ ದರ್ಶಿತಃ ॥ ೧೬ ॥

ವೀರಭದ್ರೋಽಪಿ ಸಿಂಹೇನರೂಪೇಣಾಹತ್ಯ ತಂ ದ್ರುತಂ ।
ತಸ್ಯ ಕೃತ್ತಿಂ ವಿದಾರ್ಯಾಶು ಕರಿಣಸ್ತ್ವಂಜನಪ್ರಭಾಂ ॥
ರುದ್ರಾಯಾರ್ಪಿತವಾನ್ಸೋಽಪಿ ತಮೇವಾಂಬರಮಾವೃಣೋತ್ ॥ ೧೭ ॥

---

೧೩. ಶಿವನನ್ನು ಹೊಡೆಯಲು ತಟ್ಟನೆ ಬಂದ ಅಂಧಕನನ್ನು ಕಂಡು ದೇವತೆಗಳು ಬೇಗನೆ ಸನ್ನದ್ಧರಾಗಿ ರುದ್ರನಿಗೆ ಸಹಾಯಕರಾದರು.

೧೪. ಪರಮೇಶನಾದ ರುದ್ರನೂ ವಾಸುಕಿ[1]ಯನ್ನೂ, ತಕ್ಷಕ[2]ನನ್ನೂ, ಧನಂಜಯ[3]ನನ್ನೂ ಸ್ಮರಿಸಿ, ಬರಿಸಿ ಅವರಿಂದ ಕಂಕಣವನ್ನೂ, ಉಡೆದಾರವನ್ನೂ ಮಾಡಿಕೊಂಡನು.

೧೫. ನೀಲನೆಂಬ ಹೆಸರಿನ ಅಂಧಕನ ಸೇನಾಪತಿಯು ಆನೆಯಾಗಿ ಅದ್ಭುತಾಕಾರದಿಂದ ಬೇಗನೆ ಶಿವನ ಹತ್ತಿರಕ್ಕೆ ಬಂದನು.

೧೬. ನಂದೀಶ್ವರನು, ಅವನು ಯಾರೆಂಬುದನ್ನು ತಿಳಿದು ವೀರಭದ್ರನಿಗೆ ತೋರಿಸಿದನು.

೧೭. ವೀರಭದ್ರನಾದರೋ, ಸಿಂಹರೂಪದಿಂದ ಬೇಗನೆ ಅವನಮೇಲೆ ಬಿದ್ದು, ಕೊಂದು. ಆನೆಯಾದ ಅವನ ಚರ್ಮವನ್ನು ಸುಲಿದು, ಕಾಡಿಗೆಯಂತೆ ಕಪ್ಪಾಗಿ ಹೊಳೆಯುವ ಆ ಚರ್ಮವನ್ನು ರುದ್ರನಿಗೆ ಒಪ್ಪಿಸಿದನು ರುದ್ರನೂ ಅದನ್ನೇ ವಸ್ತ್ರದಂತೆ ಹೊದೆದುಕೊಂಡನು.

---

‡ ದೇವೋ   1, 2, 3 ನಾಗಶ್ರೇಷ್ಠರು.

ತತಃಪ್ರಭೃತಿ ರುದ್ರೋಽಪಿ ಗಜಚರ್ಮಪಟೋಽಭವತ್ ॥ ೧೮ ॥

ಗಜಚರ್ಮಪಟೋ ಭೂತ್ವಾ ಭುಜಂಗಾಭರಣೋಜ್ವಲಃ ।
ಆದಾಯ ತ್ರಿಶಿಖಂ ಶೂಲಂ ಸಗಣೋಂಧಕಮನ್ವಿಯಾತ್ ॥
ತತಃ ಪ್ರವವೃತೇ ಯುದ್ಧಂ ದೇವದಾನವಯೋರ್ಮಹತ್ ॥ ೧೯ ॥

ಇಂದ್ರಾದ್ಯಾ ಲೋಕಪಾಲಾಸ್ತು ಸ್ಕಂದಸ್ಸೇನಾಪತಿಸ್ತಥಾ ।
ಸರ್ವೇ ದೇವಗಣಾಶ್ಚಾನ್ಯೇ ಯುಯುಧುಸ್ಸಮರೇ ತದಾ ॥ ೨೦ ॥

ತದ್ದೃಷ್ಟ್ವಾ ನಾರದಸ್ತೂರ್ಣಂ ಯಯೌ ನಾರಾಯಣಂ ಪ್ರತಿ ।
ಶಶಂಸ ಚ ಮಹದ್ಯುದ್ಧಂ ಕೈಲಾಸೇ ದಾನವೈಸ್ಸಹ ॥ ೨೧ ॥

ತಚ್ಛ್ರುತ್ವಾ ಚಕ್ರಮಾದಾಯ ಗರುಡಸ್ಥೋ ಜನಾರ್ದನಃ ।
ತಮೇವ ದೇಶಮಾಗತ್ಯ ಯುಯುಧೇದಾನವೈಃ ಸಹ ॥ ೨೨ ॥

---

೧೮. ಅದು ಮೊದಲುಗೊಂಡು ರುದ್ರನು ಗಜಚರ್ಮಾಂಬರನಾದನು

೧೯. ಗಜಚರ್ಮಾಂಬರನೂ, ಸರ್ಪಾಭರಣದಿಂದ ಹೊಳೆಯುವವನೂ ಆಗಿ ತ್ರಿಶೂಲವನ್ನು ತೆಗೆದುಕೊಂಡು, ಗಣಸಮೇತನಾಗಿ ಅಂಧಕನಮೇಲೆ ಹೋದನು. ಆಮೇಲೆ ದೇವತೆಗಳಿಗೂ, ರಾಕ್ಷಸರಿಗೂ ಮಹಾಯುದ್ಧವು ಮೊದಲಾಯಿತು,

೨೦. ಇಂದ್ರನೇ ಮೊದಲಾದ ಲೋಕಪಾಲಕರೂ, ಸೇನಾಪತಿಯಾದ ಷಣ್ಮುಖನೂ ಇತರ ಎಲ್ಲಾ ದೇವತೆಗಳೂ ಆಗ ಆ ಯುದ್ಧದಲ್ಲಿ ಕಾದಿದರು.

೨೧. ಅದನ್ನು ನೋಡಿ, ನಾರದನು ಬೇಗನೆ ನಾರಾಯಣನ ಹತ್ತಿರಕ್ಕೆ ಹೋಗಿ, ಕೈಲಾಸದಲ್ಲಿ ರಾಕ್ಷಸರೊಡನೆ ನಡೆಯುತ್ತಿರುವ ಮಹಾಯುದ್ಧವನ್ನು ಅವನಿಗೆ ತಿಳಿಸಿದನು.

೨೨. ಅದನ್ನು ಕೇಳಿ, ಆ ಜನಾರ್ದನನು ಚಕ್ರಾಯುಧವನ್ನು ತೆಗೆದುಕೊಂಡು ಗರುಡನನ್ನೇರಿ, ಆ ಕೈಲಾಸಕ್ಕೇ ಬಂದು, ರಾಕ್ಷಸರ ಸಂಗಡ ಯುದ್ಧವನ್ನು ಮಾಡಿದನು.

ಆಗತ್ಯಾಚ ತತೋ ದೇವಾ ಹರಿಣಾಪ್ಯಾಯಿತಾ ರಣೇ ।
ವಿಷಣ್ಣವದನಾಸ್ಸರ್ವೇ ಪಲಾಯನಪರಾಭವನ್ ॥ ೨೩ ॥

ತತ್ರ ಭಗ್ನೇಷು ದೇವೇಷು ಸ್ವಯಂ ರುದ್ರೋಽಂಧಕಂ ಯಯೌ ।
ತತ್ರ ತೇನ ಮಹದ್ಯುದ್ಧಮಭವಲ್ಲೋಮಹರ್ಷಣಂ ॥ ೨೪ ॥

ತತ್ರ ದೇವೋಽಪ್ಯಸೌ ದೈತ್ಯಂ ತ್ರಿಶೂಲೇನಾಹನದ್ಭೃಶಂ ।
ತಸ್ಯಾಹತಸ್ಯ ಯದ್ರಕ್ತಮಪತದ್ಭೂತಲೇ ಕಿಲ ॥
ತತ್ರಾಂಧಕಾ ಅಸಂಖ್ಯಾತಾ ಬಭೂವುರಪರೇ ಭೃಶಂ ॥ ೨೫ ॥

ತದ್ದೃಷ್ಟ್ವಾ ಮಹದಾಶ್ಚರ್ಯಂ ರುದ್ರೋ ಮೂಲಾಂಧಕಂ ಮೃಧೇ ।
ಗೃಹೀತ್ವಾ ತ್ರಿಶಿಖಾಸ್ತ್ರೇಣ ನನರ್ತ ಪರಮೇಶ್ವರಃ ॥ ೨೬ ॥

---

೨೩. ಹರಿಯು ಬಂದು, ಯುದ್ಧದಲ್ಲಿ ದೇವತೆಗಳಿಗೆ ಹಿತವನ್ನುಂಟುಮಾಡಿದನು. ಆದರೂ ಕಂದಿದ ಮುಖವುಳ್ಳವರಾಗಿ ಅವರು ಎಲ್ಲರೂ ಓಡುವುದರಲ್ಲಿ ಆಸಕ್ತರಾದರು.

೨೪. ಅಲ್ಲಿ ದೇವತೆಗಳು ಮುರಿದೋಡಲು, ರುದ್ರನು ತಾನೇ ನೇರವಾಗಿ ಅಂಧಕನಮೇಲೆ ಹೋದನು. ಅವನೊಡನೆ ರೋಮಾಂಚವನ್ನುಂಟುಮಾಡುವ ಘೋರವಾದ ಕದನವು ನಡೆಯಿತು.

೨೫. ಆ ಕದನದಲ್ಲಿ ಆ ರುದ್ರದೇವನು ತ್ರಿಶೂಲದಿಂದ ಅಂಧಕದೈತ್ಯನನ್ನು ಹೆಚ್ಚಾಗಿ ಹೊಡೆದನು. ಹೊಡೆಸಿಕೊಂಡ ಅವನ ರಕ್ತವು ನೆಲದಮೇಲೆ ಬಿದ್ದಿತಲ್ಲವೆ ! ಅದರಿಂದ ಲೆಕ್ಕವಿಲ್ಲದಷ್ಟು ಜನ ಬೇರೆಯಾದ ಅಂಧಕರುದಿಸಿದರು.

೨೬. ಪರಮೇಶನಾದ ರುದ್ರನು ಆ ಅತ್ಯಾಶ್ಚರ್ಯವನ್ನು ಕಂಡು, ಮೂಲನಾದ ಅಂಧಕನನ್ನು ತ್ರಿಶೂಲಾಗ್ರದಿಂದ ಚುಚ್ಚಿ ಎತ್ತಿ ಹಿಡಿದುಕೊಂಡು ಕುಣಿದನು.

ಇತರೇಷ್ವಂಧಕಾಸ್ಸರ್ವೇ ಚಕ್ರೇಣಪರಮೇಷ್ಠಿನಾ ।
ನಾರಾಯಣೇನ ನಿಹತಾಸ್ತತ್ರ ಯೇನ್ಯೇ ಸಮುತ್ಥಿತಾಃ ॥ ೨೭ ॥

ಅಸೃಗ್ಧಾರಾತುಷಾರ್ಯೈಸ್ತು ಶೂಲಪ್ರೋತಸ್ಯ ಚಾಸಕೃತ್ ।
ಅನಾರತಂ ಸಮುತ್ತಸ್ಥೌ ತತೋ ರುದ್ರೋ ರುಷಾನ್ವಿತಃ ॥ ೨೮ ॥

ತಸ್ಯ ಕ್ರೋಧೇನ ಮಹತಾ ಮುಖಾಜ್ಜ್ವಾಲಾ ವಿನಿರ್ಯಯೌ ।
ತದ್ರೂಪಧಾರಿಣೀದೇವೀ ಯಾ ತಾಂ ಯೋಗೇಶ್ವರೀಂ ವಿದುಃ ॥ ೨೯ ॥

ಸ್ವರೂಪಧಾರಿಣೀ ಚಾನ್ಯಾ ವಿಷ್ಣುನಾಪಿ ವಿನಿರ್ಮಿತಾ ॥ ೩೦ ॥

ಬ್ರಹ್ಮಣಾ ಕಾರ್ತಿಕೇಯೇನ ರುದ್ರೇಣ ಚ ಯಮೇನ ಚ ।
ವರಾಹೇಣಚ ದೇವೇನ ವಿಷ್ಣುನಾ *ಪರಮೇಷ್ಠಿನಾ ।
ಪಾತಾಲೋದ್ಧಾರಣಂ ರೂಪಂ ತಸ್ಯಾ ದೇವ್ಯಾವಿನಿರ್ಮಮೇ ॥ ೩೧ ॥

---

೨೭. ಅಲ್ಲಿ ರಕ್ತದಿಂದೆದ್ದಿದ್ದ ಇತರ ಅಂಧಕರೆಲ್ಲರನ್ನೂ ಪರಮೇಷ್ಠಿಯಾದ ನಾರಾಯಣನು ಚಕ್ರದಿಂದ ಕೊಂದನು

೨೮. ಶೂಲದಿಂದ ಚುಚ್ಚಿ ಹಿಡಿದ ಮೂಲಾಂಧಕನ ರಕ್ತಧಾರೆಯ ತುಂತುರುಗಳಿಂದ ಅಡಿಗಡಿಗೆ ಯಾವಾಗಲೂ ಅಂಧಕರಗುಂಪು ಏಳುತ್ತಿದ್ದಿತು. ಆಗ ರುದ್ರನಿಗೆ ಸಿಟ್ಟುಬಂದಿತು.

೨೯. ಹೆಚ್ಚಾದ ಅವನ ಸಿಟ್ಟಿನಿಂದ ಮುಖದಲ್ಲಿ ಜ್ವಾಲೆ (ಉರಿ)ಯೆದ್ದಿತು. ಆ ಜ್ವಾಲೆಯೇ ಮೂರ್ತೀಭವಿಸಿ, ಯೋಗೇಶ್ವರಿಯೆಂಬ ದೇವಿಯಾಯಿತು.

೩೦. ವಿಷ್ಣುವೂ ತನ್ನಂತೆ ರೂಪವುಳ್ಳ ಬೇರೊಬ್ಬಳು ದೇವಿಯನ್ನು ಸೃಷ್ಟಿಸಿದನು.

೩೧-೩೨. ಬ್ರಹ್ಮನೂ, ಷಣ್ಮುಖನೂ, ರುದ್ರನೂ, ಯಮನೂ, ವರಾಹರೂಪಿಯಾದ ವಿಷ್ಣುವೂ, ಪಾತಾಳವನ್ನುದ್ಧರಿಸುವ ಆ ದೇವಿಯ

---

* ಪರಮೇಷ್ಠಿ= ಅತ್ಯುತ್ಕೃಷ್ಟವಾದ ಸ್ಥಾನದಲ್ಲಿರುವವನು.

‡ಮಹೇಂದ್ರೇಣ ಚ ಮಾಹೇಂದ್ರೀ ಇತ್ಯೇತಾ ಅಷ್ಟಮಾತರಃ || ೩೨ ||

ಕಾರಣಂ ಯಸ್ಯ ಯತ್ಪ್ರೋಕ್ತಂ ಕ್ಷೇತ್ರಜ್ಞೇನಾವಧಾರಿತಂ |
ಶರೀರಂ ದೇವತಾನಾಂ ತು ತದಿದಂ ಕೀರ್ತಿತಂ ಮಯಾ || ೩೩ ||

ಕಾಮಃ ಕ್ರೋಧಸ್ತಥಾ ಲೋಭೋ ಮದೋ ಮೋಹೋಥಪಂಚಮಃ |
ಮಾತ್ಸರ್ಯಂ ಷಷ್ಠಮಿತ್ಯಾಹುಃ ಪೈಶುನ್ಯಂ ಸಪ್ತಮಂ ತಥಾ ||
ಅನಸೂಯಾಷ್ಟಮೀ ಜ್ಞೇಯಾ ಇತ್ಯೇತಾ ಅಷ್ಟಮಾತರಃ || ೩೪ ||

ಕಾಮಂ ಯೋಗೇಶ್ವರೀಂ ವಿದ್ಧಿ ಕ್ರೋಧಂ ಮಾಹೇಶ್ವರೀಂ ತಥಾ || ೩೫ ||

ಲೋಭಸ್ತು ವೈಷ್ಣವೀ ಪ್ರೋಕ್ತಾ ಬ್ರಹ್ಮಾಣೀ ಮದ ಏವ ಚ |
ಮೋಹಃ ಸ್ವಯಂಭೂಃ ಕೌಮಾರೀ ಮಾತ್ಸರ್ಯಂ ಚೇಂದ್ರಜಾಂ ವಿದುಃ || ೩೬ ||

ಯಮದಂಡಧರಾ ದೇವೀ ಪೈಶುನ್ಯಂ ಸ್ವಯಮೇವ ಚ |
ಅನಸೂಯಾ ವರಾಹಾಖ್ಯಾ ಇತ್ಯೇತಾಃ ಪರಿಕೀರ್ತಿತಾಃ || ೩೭ ||

ರೂಪವನ್ನು ನಿರ್ಮಿಸಿದರು. ‡ಮಹೇಂದ್ರನು ಮಾಹೇಂದ್ರಿಯೆಂಬ ದೇವಿಯ ಮೂರ್ತಿಯನ್ನು ಸೃಷ್ಟಿಸಿದನು. ಹೀಗೆ ಆದ ಇವರೇ ಅಷ್ಟಮಾತೃಗಳು.

೩೩. ಯಾರಿಗೆ ಯಾವುದು ಕಾರಣವೋ ಅದು ಪರಮಾತ್ಮನಿಂದ ನಿರ್ಣಯವಾಗಿದ್ದಿತು. ನಾನು ಇದುವರೆಗೆ ದೇವತೆಗಳ ಶರೀರವನ್ನು ಹೇಳಿದೆನು.

೩೪. ಕಾಮ, ಕ್ರೋಧ, ಲೋಭ, ಮದ, ಮೋಹ, ಮಾತ್ಸರ್ಯ, ಪೈಶುನ್ಯ, ಅನಸೂಯೆ ಎಂಬಿವು ಎಂಟು ಅಷ್ಟಮಾತೃ (ಅತ್ಮ)ಗಳು.

೩೫–೩೭. ಕಾಮವೇ ಯೋಗೇಶ್ವರಿ. ಕ್ರೋಧವೇ ಮಹೇಶ್ವರಿ. ಲೋಭವೇ ವೈಷ್ಣವಿ. ಮದವೇ ಬ್ರಾಹ್ಮಿ. ಮೋಹವೇ ತಾನಾಗಿ ಉದಿಸಿದ ಕೌಮಾರೀ. ಮಾತ್ಸರ್ಯವೇ ಇಂದ್ರಜೆ(ಐಂದ್ರಿ). ಪೈಶುನ್ಯವೇ ಯಮದಂಡಧರೆ (ಯಾಮ್ಯೆ). ಅನಸೂಯೆಯೇ ವಾರಾಹಿ.

---

‡ ಮಾಹೇಶ್ವರಿ ಚ ಮಾಹೇಂದ್ರೀ.

ಕಾಮಾದಿಗಣ ಏಷೋಽಯಂ ಶರೀರಂ ಪರಿಕೀರ್ತಿತಂ ।
ಜಗ್ರಾಹ ಮೂರ್ತಿಂ ತು ತಥಾ ಯಥಾ ತೇ ಕೀರ್ತಿತಂ ಮಯಾ ॥ ೩೮ ॥

ಏತಾಭಿರ್ದೇವತಾಭಿಶ್ಚ ತಸ್ಯ ರಕ್ತೇತಿಶೋಷಿತೇ ।
ಕ್ಷಯಂ ಗತಾಸುರೀ ಮಾಯಾ ಸ ಚ ಸಿದ್ಧೋಽಂಧಕೋಽಭವತ್ ॥ ೩೯ ॥

ಏತತ್ತೇ ಸರ್ವಮಾಖ್ಯಾತಂ ಆತ್ಮವಿದ್ಯಾಮೃತಂ ಮಯಾ ॥ ೪೦ ॥

ಯ ಏತಚ್ಛೃಣುಯಾನ್ನಿತ್ಯಂ ಮಾತೄಣಾಮುದ್ಭವಂ ಶಿವಂ ।
ತಸ್ಯ ತಾಃ ಸರ್ವತೋ ರಕ್ಷಾಂ ಕುರ್ವಂತ್ಯನುದಿನಂ ನೃಪ ॥ ೪೧ ॥

ಯಶ್ಚೈತತ್ಪಠತೇ ಜನ್ಮ ಮಾತೄಣಾಂ ಪುರುಷೋತ್ತಮ ।
ಸ ಧನ್ಯಃ ಸರ್ವಥಾ ಲೋಕೇ ಶಿವಲೋಕಂ ಚ ಗಚ್ಛತಿ ॥ ೪೨ ॥

---

೩೮. ಈ ಕಾಮಾದಿಗಳು ಹಿಂದೆ ಹೇಳಿದ ಶರೀರಗಳನ್ನು ಪಡೆದು ಹೇಗೆ ದೇವಿಯರಾದರೆಂಬುದನ್ನು ನಾನು ಹೇಳಿದ್ದೇನೆ.

೩೯. ಈ ದೇವತೆಗಳು ಅಂಧಕನ ರಕ್ತವನ್ನು ಪೂರ್ತಿಯಾಗಿ ಇಂಗಿಸಲು ರಾಕ್ಷಸಮಾಯೆಯು ನಾಶವಾಯಿತು. ಆ ಅಂಧಕನು ಮೃತನಾಗಿ, ಸಿದ್ಧನಾದನು.

೪೦. ದೊರೆಯೇ, ಆತ್ಮವಿದ್ಯಾಮೃತವನ್ನೆಲ್ಲಾ ನಾನು ನಿನಗೆ ಹೇಳಿದ್ದೇನೆ.

೪೧. ಮಂಗಳಕರವಾದ ಈ ಮಾತೃಗಳ ಉತ್ಪತ್ತಿಯನ್ನು ನಿತ್ಯವೂ ಕೇಳುವವರಿಗೆ ಆ ಮಾತೃಗಳು ನಿತ್ಯವೂ, ಎಲ್ಲೆಲ್ಲಿಯೂ ರಕ್ಷಣೆಯನ್ನು ಮಾಡುತ್ತಾರೆ.

೪೨. ಪುರುಷೋತ್ತಮನೇ, ಈ ಮಾತೃಜನ್ಮವನ್ನು ಪಠಿಸುವವನು ಲೋಕದಲ್ಲಿ ನಿಜವಾಗಿಯೂ ಪುಣ್ಯಶಾಲಿ. ಅವನು ಶಿವಲೋಕವನ್ನು ಪಡೆಯುವನು.

ತಾಸಾಂ ಚ ಬ್ರಹ್ಮಣಾ ದತ್ತಾ ತ್ವಷ್ಟಮೀ ತಿಥಿರುತ್ತಮಾ |
ಏತಾಃ ಸಂಪೂಜಯೇದ್ಭಕ್ತ್ಯಾ ಬಿಲ್ವಾಹಾರಾ ನರಸ್ಸದಾ |
ತಸ್ಯ ತಾಃ ಪರಿತುಷ್ಟಾಃ ಸ್ಯುಃ ಕ್ಷೇಮಾರೋಗ್ಯಂ ದದಂತಿ ಚ || ೪೩ ||

ಇತಿ ಶ್ರೀ ವರಾಹಪುರಾಣೇ ಆದಿಕೃತವೃತ್ತಾಂತೇ ಮಹಾತಪ ಉಪಾಖ್ಯಾನೇ ಅಷ್ಟಮಾತೃೂತ್ಪತ್ತಿರ್ನಾಮ ಸಪ್ತವಿಂಶೋಽಧ್ಯಾಯಃ

---

೪೩. ಆ ದೇವತೆಯರಿಗೆ ಬ್ರಹ್ಮನು ಉತ್ತಮವಾದ ಅಷ್ಟಮಿಯ ತಿಥಿಯನ್ನು ಕೊಟ್ಟನು. ಅಷ್ಟಮಿಯದಿನ ಆ ಮಾತೃಗಳನ್ನು (ಸದಾ)ಭಕ್ತಿಯಿಂದ ಬಿಲ್ವಾಹಾರನಾಗಿ ಮನುಷ್ಯನು ಪೂಜಿಸಬೇಕು. ಅವನಿಗೆ ಅವರು ತೃಪ್ತರಾಗಿ ಕ್ಷೇಮಾರೋಗ್ಯಗಳನ್ನು ಕೊಡುವರು.

ಅಧ್ಯಾಯದ ಸಾರಾಂಶ :—

ಮಹಾತಪಮುನಿಯು ಪ್ರಜಾಪಾಲನಿಗೆ ಅಷ್ಟಮಾತೃಗಳ ಉತ್ಪತ್ತಿಯನ್ನು ತಿಳಿಸುವನು. ಅಂಧಕಾಸುರನಿಂದ ಪೀಡಿತರಾದ ಬ್ರಹ್ಮಾದಿದೇವತೆಗಳು ಶಿವನ ಹತ್ತಿರಕ್ಕೆ ಬಂದು ಬಿನ್ನೈಸುತ್ತಿರುವಷ್ಟರಲ್ಲಿ ಅಂಧಕನು ದೊಡ್ಡದಾದ ಸೇನೆಯೊಡನೆ ಅಲ್ಲಿಗೆ ಬಂದು ಶಿವಪಾರ್ವತಿಯರನ್ನು ಕೊಲ್ಲಲು ಯತ್ನಿಸಿದನು. ದೇವತೆಗಳೊಡಗೂಡಿದ ರುದ್ರನಿಗೂ ಅಂಧಕನಿಗೂ ಘೋರಯುದ್ಧವಾಯಿತು. ಅದನ್ನರಿತ ನಾರಾಯಣನೂ ಶಿವನ ಸಹಾಯಕ್ಕೆ ಬಂದನು. ದೇವತೆಗಳು ಸೋತು ಓಡಲಾರಂಭಿಸಲು ರುದ್ರನು ತಾನೇ ತ್ರಿಶೂಲದಿಂದ ಅಂಧಕನನ್ನು ಚುಚ್ಚಿ ಮೇಲೆತ್ತಿ ಹಿಡಿದನು. ಕೆಳಗೆ ನೆಲದಲ್ಲಿ ಬೀಳುವ ಅಂಧಕನ ರಕ್ತದಿಂದ ಅಸಂಖ್ಯಾತರಾದ ಅಂಧಕರುದಿಸುತ್ತಿದ್ದರು. ಅದನ್ನು ನೋಡಿ ರುದ್ರನಿಗೆ ಉಗ್ರಕೋಪವುಂಟಾಗಿ ಮುಖದಲ್ಲಿ ಜ್ವಾಲೆಯೆದ್ದಿತು. ಆ ಜ್ವಾಲೆಯೇ ಮೂರ್ತೀಭವಿಸಿ ಯೋಗೇಶ್ವರಿಯೆಂಬ ದೇವಿಯಾಯಿತು. ಬಳಿಕ ವಿಷ್ಣು ಬ್ರಹ್ಮ ಷಣ್ಮುಖಯಮಾದಿಗಳು ತಾವೂ ಒಬ್ಬೊಬ್ಬ ದೇವಿಯನ್ನು ಸೃಷ್ಟಿಸಿದರು. ಅವರೇ ಬ್ರಾಹ್ಮಿ ವೈಷ್ಣವೀ ಮೊದಲಾದ ಅಷ್ಟಮಾತೃಗಳು. ಅವರು ಅಂಧಕನ ದೇಹದಿಂದ ಬೀಳುವ ರಕ್ತವನ್ನು ಪೂರ್ತಿಯಾಗಿ ಇಂಗಿಸಿಬಿಟ್ಟರು. ಅಂಧಕನು ಮೃತನಾದನು. ಆ ಮಾತೃಗಳಿಗೆ ಬ್ರಹ್ಮನು ಅಷ್ಟಮಿಯನ್ನು ಪ್ರಿಯತಿಥಿಯಾಗಿ ಕೊಟ್ಟನು. ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಇಪ್ಪತ್ತೇಳನೆಯ ಅಧ್ಯಾಯ.

|| ಶ್ರೀಃ ||

-X-

ಅಷ್ಟವಿಂಶೋಽಧ್ಯಾಯಃ

ಅಥ ದುರ್ಗಾಯಾ ಉತ್ಪತ್ತಿಃ

|| ಪ್ರಜಾಪಾಲ ಉವಾಚ ||

ಕಥಂ ನಾಮ ಸಮುತ್ಪನ್ನಾ ದುರ್ಗಾ ಕಾತ್ಯಾಯಿನೀ ಶುಭಾ ।
ಆದಿಕ್ಷೇತ್ರೇ ಸ್ಥಿತಾ ಸೂಕ್ಷ್ಮಾ ಪೃಥಙ್ಮೂರ್ತ್ಯಾ ವ್ಯಜಾಯತ || ೧ ||

|| ಮಹಾತಪಾ ಉವಾಚ ||

ಆಸೀದ್ರಾಜಾ ಪುರಾ ರಾಜನ್ ಸಿಂಧುದ್ವೀಪಃ ಪ್ರತಾಪವಾನ್ ।
ವರುಣಾಂಶೋ ಮಹಾರಾಜ ಸೋಽರಣ್ಯೇ ತಪಸಿ ಸ್ಥಿತಃ || ೨ ||

ಇಪ್ಪತ್ತೆಂಟನೆಯ ಅಧ್ಯಾಯ

ದುರ್ಗಿಯ ಉತ್ಪತ್ತಿ

೧. ಪ್ರಜಾಪಾಲ—ಪರಬ್ರಹ್ಮನಲ್ಲಿ ಸೂಕ್ಷ್ಮರೂಪದಿಂದಿದ್ದ ಮಾಯೆಯು ದುರ್ಗಿ ಅಥವಾ ಕಾತ್ಯಾಯಿನಿ ಎಂಬ ಹೆಸರಿನಿಂದ ಬೇರೆ ರೂಪವನ್ನು ಪಡೆದು ಶುಭಕರಳಾಗಿ ಉದಿಸಿದುದು ಹೇಗೆ ?

೨. ಮಹಾತಪಮುನಿ—ದೊರೆಯೇ, ಪೂರ್ವದಲ್ಲಿ ವರುಣನ ಅಂಶದಿಂದ ಉದಿಸಿದವನೂ, ಪ್ರತಾಪಶಾಲಿಯೂ ಆದ ಸಿಂಧುದ್ವೀಪನೆಂಬ ಮಹಾರಾಜನಿದ್ದನು. ಅವನು ವನದಲ್ಲಿ ತಪಸ್ಸಿನಲ್ಲಿ ನಿಂತನು.

ಪುತ್ರೋ ಮೇ ಶಕ್ರನಾಶಾಯ ಭವೇದಿತಿ ನರಾಧಿಪಃ ।
ಏವಂ ಕೃತಮತಿಸ್ಸೋಽಥ ಮಹತಾ ತಪಸಾ ಸ್ವಕಮ್ ।
ಕಲೇವರಂ ಸ್ಥಿರೋಽಭೂತ್ವಾ ಶೋಷಯಾಮಾಸ ಸುವ್ರತ ॥ ೩ ॥

॥ **ಪ್ರಜಾಪಾಲ ಉವಾಚ** ॥

ಕಥಂ ತಸ್ಯ ದ್ವಿಜಶ್ರೇಷ್ಠ ಶಕ್ರೇಣಾಪಕೃತಂ ಭವೇತ್ ।
ಯೇನಾಸೌ ತದ್ವಿನಾಶಾಯ ಪುತ್ರಮಿಚ್ಛನ್ ವ್ರತೇ ಸ್ಥಿತಃ ॥ ೪ ॥

॥ **ಮಹಾತಪಾ ಉವಾಚ** ॥

ಸೋಽನ್ಯಜನ್ಮನಿ ಪುತ್ರೋಽಭೂತ್ತ್ವಷ್ಟುರ್ಬಲಭೃತಾಂ ವರಃ ॥ ೫ ॥

ಅವಧ್ಯಸ್ಸರ್ವಶಸ್ತ್ರೌಘೈರಪಾಂ ಫೇನೇನ ನಾಶಿತಃ ।
ಜಲಫೇನೇನನಿಹತಸ್ತಸ್ಮಿನ್ ಲಯಮವಾಪ್ತವಾನ್ ॥ ೬ ॥

---

೩. ಸುವ್ರತನೇ, ಆ ರಾಜನು, ಇಂದ್ರನನ್ನು ನಾಶಮಾಡುವ ಮಗನು ತನಗಾಗಲೆಂದು ಮನಸ್ಸುಮಾಡಿ, ಹೆಚ್ಚಾದ ತಪಸ್ಸಿನಲ್ಲಿ ಸ್ಥಿರವಾಗಿದ್ದು ತನ್ನ ದೇಹವನ್ನು ಕುಂದಿಸಿದನು.

೪. ಪ್ರಜಾಪಾಲ—ಬ್ರಾಹ್ಮಣೋತ್ತಮನೇ, ಇಂದ್ರನು ಅವನಿಗೆ ಹೇಗೆ ಏನು ಅಪಕಾರಮಾಡಿದನು ? ಏತಕ್ಕಾಗಿ ಇಂದ್ರನನ್ನು ಕೊಲ್ಲುವ ಮಗನನ್ನು ಬಯಸಿ ತಪದಲ್ಲಿ ನಿಂತನು ?

೫. ಮಹಾತಪಮುನಿ—ಆ ಸಿಂಧುದ್ವೀಪನು, ಹಿಂದಿನ ಜನ್ಮದಲ್ಲಿ ಬಲಶಾಲಿಗಳಲ್ಲಿ ಮೊದಲನೆಯವನಾಗಿ ತ್ವಷ್ಟೃವಿನ ಮಗನಾಗಿದ್ದನು.

೬. ಸರ್ವಶಸ್ತ್ರಸಮೂಹಗಳಿಂದಲೂ ಅವಧ್ಯನಾದ ಅವನನ್ನು ಇಂದ್ರನು ನೀರಿನ ನೊರೆಯಿಂದ ಹೊಡೆದು ಕೊಂದನು.

ಪುನರ್ಬ್ರಹ್ಮಾನ್ವಯೇ ಜಾತಃ ಸಿಂಧುದ್ವೀಪಃ ಪ್ರತಾಪವಾನ್ ।
ಸ ತೇಪೇ ಪರಮಂ ತೀವ್ರಂ ಶಕ್ರವೈರಮನುಸ್ಮರನ್ ॥ ೭ ॥

ತತಃ ಕಾಲೇನ ಮಹತಾ ನದೀ ವೇತ್ರವತೀ ಶುಭಾ ।
ಮಾನುಷಂ ರೂಪಮಾಸ್ಥಾಯ ಸಾಲಂಕಾರಂ ಮನೋರಮಮ್ ।
ಆಜಗಾಮ ಯತೋ ರಾಜಾ ತೇಪೇ ಸ ಪರಮಂ ತಪಃ ॥ ೮ ॥

ತಾಂ ದೃಷ್ಟ್ವಾ ರೂಪಸಂಪನ್ನಾಂ ಸ ರಾಜಾ ಕ್ಷುಬ್ಧಮಾನಸಃ ।
ಉವಾಚ ಕಾಸಿ ಸುಶ್ರೋಣಿ ಸತ್ಯಂ ಕಥಯ ಭಾಮಿನಿ ॥ ೯ ॥

॥ ನದ್ಯುವಾಚ ॥

ಅಹಂ ಜಲಪತೇಃ ಪತ್ನೀ ವರುಣಸ್ಯ ಮಹಾತ್ಮನಃ ॥ ೧೦ ॥
ನಾಮ್ನಾ ವೇತ್ರವತೀ ಚೈಷಾ ತ್ವಾಮಿಚ್ಛಂತೀಹ ಚಾಗತಾ ।
ಸಾಭಿಲಾಷಾಂ ಪರಸ್ತ್ರೀಂ ಚ ಭಜಮಾನಾಂ ವಿಸರ್ಜಯೇತ್ ॥ ೧೧ ॥

---

೭. ತಿರುಗಿ ಬ್ರಹ್ಮನ ವಂಶದಲ್ಲಿ ಹುಟ್ಟಿದ ಪ್ರತಾಪಶಾಲಿಯಾದ ಆ ಸಿಂಧುದ್ವೀಪನು ಇಂದ್ರನ ಹಗೆತನವನ್ನು ಜ್ಞಾಪಿಸಿಕೊಂಡು, ಅತ್ಯುಗ್ರವಾದ ತಪಸ್ಸನ್ನು ಮಾಡಿದನು.

೮. ಬಳಿಕ ಬಹುಕಾಲದಮೇಲೆ ಶುಭಕರಳಾದ ವೇತ್ರವತೀನದಿಯು ಅಲಂಕಾರಯುತವಾಗಿ ಮನೋಹರವಾದ ಸ್ತ್ರೀರೂಪವನ್ನು ಧರಿಸಿ, ಸಿಂಧುದ್ವೀಪ ರಾಜನು ಉಗ್ರತಪವನ್ನಾಚರಿಸುತ್ತಿದ್ದೆಡೆಗೆ ಬಂದಳು.

೯. ರೂಪವತಿಯಾದ ಅವಳನ್ನು ನೋಡಿ, ಕದಡಿದ ಮನವುಳ್ಳ ಆ ದೊರೆಯು, "ಸುಂದರಿ, ನೀನು ಯಾರು ? ನಿಜವನ್ನು ಹೇಳು" ಎಂದನು.

೧೦–೧೨." ನಾನು, ಜಲಾಧಿಪತಿಯೂ, ಮಹಾತ್ಮನೂ ಆದ ವರುಣನ ಹೆಂಡತಿ. ವೇತ್ರವತಿಯೆಂದು ನನಗೆ ಹೆಸರು. ನಾನು ನಿನ್ನನ್ನು ಬಯಸಿ, ಇಲ್ಲಿಗೆ ಬಂದಿದ್ದೇನೆ. ಕಾಮಿಸಿ ತಾನಾಗಿ ಬಂದು ಸೇವಿಸುವ ಪರಸ್ತ್ರೀಯನ್ನು ತಿರಸ್ಕರಿಸುವ ಪುರುಷನು ಪಾಪಿಯೆನಿಸಿಕೊಳ್ಳುವನು. ಅವನು ಬ್ರಹ್ಮಹತ್ಯ

ಸಪಾಪಃ ಪುರುಷೋಜ್ಞೇಯಃ ಬ್ರಹ್ಮಹತ್ಯಾಂ ಚ ವಿಂದತಿ ।
ಏವಂ ಜ್ಞಾತ್ವಾ ಮಹಾರಾಜ ಭಜಮಾನಾಂ ಭಜಸ್ವಮಾಮ್ ॥ ೧೨ ॥

ಏವಮುಕ್ತಸ್ತಯಾ ರಾಜಾ ಸಾಭಿಲಾಷೋಪಭುಕ್ತವಾನ್ ।
ತಸ್ಯ ಸದ್ಯೋಭವತ್ಪುತ್ರೋ ದ್ವಾದಶಾರ್ಕಸಮಪ್ರಭಃ ॥ ೧೩ ॥

ವೇತ್ರವತ್ಯುದರೇ ಜಾತೋ ನಾಮ್ನಾ ವೇತ್ರಾಸುರೋಭವತ್ ।
ಬಲವಾನತಿತೇಜಸ್ವೀ ಪ್ರಾಗ್ಜ್ಯೋತಿಷ ಪತಿಸ್ತ್ವಭೂತ್ ॥ ೧೪ ॥

ಸಕಾಲೇನ ಯುವಾ ಜಾತೋ ಬಲವಾನ್ ದೃಢವಿಕ್ರಮಃ ।
ಮಹಾಯೋಗೇನ ಸಂಯುಕ್ತೋ ಜಿಗಾಯೇಮಾಂ ವಸುಂಧರಾಮ್॥ ೧೫ ॥

ಸಪ್ತದ್ವೀಪವತೀಂ ಪಶ್ಚಾನ್ಮೇರುಪರ್ವತ ಮಾರುಹತ್ ।
ತತ್ರೇಂದ್ರಂ ಪ್ರಥಮಂ ಜಿಗ್ಯೇ ಪಶ್ಚಾದಗ್ನಿಂ ಯಮಂ ತತಃ ॥ ೧೬ ॥

ದೋಷಕ್ಕೂ ಗುರಿಯಾಗುವನು, ಎಂಬುದನ್ನು ಅರಿತು, ಮಹಾರಾಜನೇ, ಒಲಿದು ಬಂದಿರುವ ನನ್ನನ್ನು ಪರಿಗ್ರಹಿಸು'' ಎಂದಳು.

೧೩. ಆ ರಾಣಿಯಿಂದ ಹೀಗೆ ಹೇಳಿಸಿಕೊಂಡ ಅವನೂ ಕಾಮಿಯಾಗಿ ಅವಳಲ್ಲಿ ಭೋಗಿಸಿದನು. ಅವನಿಗೆ ಅವಳಲ್ಲಿ ಒಡನೆಯೇ ದ್ವಾದಶಾದಿತ್ಯರಂತೆ ಕಾಂತಿವಂತನಾದ ಮಗನು ಜನಿಸಿದನು.

೧೪. ವೇತ್ರವತಿಯ ಉದರದಲ್ಲಿ ಜನಿಸಿದ ಅವನಿಗೆ ವೇತ್ರಾಸುರನೆಂದು ಹೆಸರಾಯಿತು. ಬಲಶಾಲಿಯೂ, ಅತಿ ತೇಜಸ್ವಿಯೂ, ಆದ ಅವನು ಪ್ರಾಗ್ಜ್ಯೋತಿಷ ರಾಜ್ಯಕ್ಕೆ ಅಧಿಪತಿಯಾದನು.

೧೫-೧೬. ಕಾಲಕಳೆಯಲು, ಯೌವನವನ್ನು ಪಡೆದ ಅವನು ಬಲಶಾಲಿಯೂ, ದೃಢವಾದ ವಿಕ್ರಮವುಳ್ಳವನೂ, ಸರ್ವಸನ್ನಾಹವುಳ್ಳವನೂ, ಆಗಿ ಸಪ್ತದ್ವೀಪಗಳಿಂದ ಕೂಡಿದ ಈ ಭೂಮಿಯನ್ನೇ ಜಯಿಸಿದನು. ಬಳಿಕ ಅವನು ಮೇರುಪರ್ವತವನ್ನೇರಿದನು. ಅಲ್ಲಿ ಮೊದಲು ಇಂದ್ರನನ್ನೂ, ಆಮೇಲೆ ಅಗ್ನಿಯನ್ನೂ, ಅನಂತರ ಯಮನನ್ನೂ ಜಯಿಸಿದನು.

ಇಂದ್ರೋ ಭಗ್ನೋ ಗತಸ್ಸೋಽಗ್ನಿಮಗ್ನಿರ್ಭಗ್ನೋ ಯಮಂ ಯಯೌ ।
ಯಮೋ ನಿರುತಿಮಾಗಚ್ಛನ್ನಿರುತಿರ್ವರುಣಂ ಯಯೌ ॥ ೧೭ ॥

ಇಂದ್ರಾದಿಭಿರುಪೇತಸ್ತು ವರುಣೋ ವಾಯುಮನ್ವಗಾತ್ ।
ವಾಯುರ್ಧನಪತಿಂ ತ್ವಾಗಾತ್ಸರ್ವೈರಿಂದ್ರಾದಿಭಿಃ ಸಹ ॥ ೧೮ ॥

ಧನದೋಽಪಿ ಸ್ವಕಂ ಮಿತ್ರಮೀಶಂ ದೇವೈಃ ಸಮನ್ವಿತಃ ।
ಇಯಾಯ ಗದಯಾ ಸೋಽಪಿ ದಾನವೋ ಬಲಗರ್ವಿತಃ ।
ಗದಾಮಾದಾಯ ದುದ್ರಾವ ಶಿವಲೋಕಂಪ್ರತಿ ಪ್ರಭೋ ॥ ೧೯ ॥

ಶಿವೋಽಪ್ಯವಧ್ಯಂ ತಂ ಮತ್ವಾ ದೇವಾನ್ ಗೃಹ್ಣನ್ ಯಯೌ ಪುರೀಮ್ ।
ಬ್ರಹ್ಮಣಃ ಸುರಸಿದ್ಧಾದ್ಯೈರ್ವಂದಿತಃ ಪುಣ್ಯಕಾರಿಭಿಃ ॥ ೨೦ ॥

ತತ್ರ ಬ್ರಹ್ಮಾ ಜಗತ್ಸ್ರಷ್ಟಾ ವಿಷ್ಣುಪಾದೋದ್ಭವೇ ಜಲೇ ॥ ೨೧ ॥

---

೧೭. ಇಂದ್ರನು ಸೋತು ಅಗ್ನಿಯ ಹತ್ತಿರಕ್ಕೂ, ಅಗ್ನಿಯು ಸೋತು ಯಮನ ಹತ್ತಿರಕ್ಕೂ, ಯಮನು ನಿರುತಿಯ ಹತ್ತಿರಕ್ಕೂ, ನಿರುತಿಯು ವರುಣನೆಡೆಗೂ ಹೋದರು.

೧೮. ಇಂದ್ರನೇ ಮೊದಲಾದವರಿಂದ ಕೂಡಿದ ವರುಣನು ವಾಯುವಿನ ಹತ್ತಿರಕ್ಕೆ ಹೋದನು. ವಾಯುವು ಅವರೆಲ್ಲರೊಡನೆ ಕುಬೇರನ ಸಮೀಪಕ್ಕೆ ಹೋದನು.

೧೯. ಕುಬೇರನು ಇಂದ್ರಾದಿ ದೇವತೆಗಳೊಡನೆ ತನ್ನ ಮಿತ್ರನಾದ ಈಶ್ವರನ ಸಮೀಪಕ್ಕೆ ಹೋದನು. ಬಲಗರ್ವಿತನಾದ ವೇತ್ರಾಸುರನೂ ಗದೆಯನ್ನು ಧರಿಸಿ, ಶಿವಲೋಕಕ್ಕೆ ಓಡಿದನು.

೨೦–೨೩. ಶಿವನೂ, ಅವನು ಅವಧ್ಯನೆಂದರಿತು, ದೇವತೆಗಳನ್ನೂ ಕರೆದುಕೊಂಡು ಬ್ರಹ್ಮಪುರಿಗೆ ಹೊರಟುಹೋದನು. ಸುರಸಿದ್ಧಾದಿ ಪುಣ್ಯಕಾರಿಗಳಿಂದ ವಂದಿತನಾದ ಜಗತ್ಸೃಷ್ಟಿಕರ್ತನಾದ ಬ್ರಹ್ಮನು ಅಲ್ಲಿ ವಿಷ್ಣುಪಾದದಿಂದುದಿಸಿದ

ನಿಯಮೇನ ಚ ಸಂಯುಕ್ತೋ ಜಪನ್ನಂತರ್ಜಲೇ ಶುಭೇ ।
ಕ್ಷೇತ್ರಜ್ಞಮಾಯಾಂ ಗಾಯತ್ರೀಂ ತತೋ ದೇವಾಪಿ ಚುಕ್ರುಶುಃ ॥ ೨೨ ॥

ತ್ರಾಹಿ ಪ್ರಜಾಪತೇ ಸರ್ವಾನ್ದೇವಾನೃಷಿವರಾನಪಿ ।
ಅಸುರಾದ್ಭಯಮಾಪನ್ನಾನ್ ತ್ರಾಹಿತ್ರಾಹೀತ್ಯಚೋದಯತ್ ॥ ೨೩ ॥

ಏವಮುಕ್ತಸ್ತದಾ ಬ್ರಹ್ಮಾ ದೃಷ್ಟ್ವಾ ದೇವಾಂ ಸ್ತದಾಗತಾನ್ ।
ಚಿಂತಯಾಮಾಸ ದೇವಸ್ಯ ಮಾಯೇಯಂ ವಿಗತಂ ಜಗತ್ ॥ ೨೪ ॥

ನಾಸುರಾ ನ ಚರಕ್ಷೋತ್ರ ಮಾಯೇಯಂ ಕೀದೃಶೀ ಮತಾ ।
ಏವಂ ಚಿಂತಯತಸ್ತಸ್ಯ ಪ್ರಾದುರಾಸೀದಯೋನಿಜಾ ॥ ೨೫ ॥

ಶುಕ್ಲಾಂಬರಧರಾ ಕನ್ಯಾ ಸ್ರಕ್ಕಿರೀಟೋಜ್ಜ್ವಲಾನನಾ ।
ಅಷ್ಟಭಿರ್ಬಾಹುಭಿರ್ಯುಕ್ತಾ ದಿವ್ಯಪ್ರಹರಣೋದ್ಯತಾ ॥ ೨೬ ॥

ಚಕ್ರಂ ಶಂಖಂ ಗದಾಂ ಪಾಶಂ ಖಡ್ಗಂ ಘಂಟಾಂ ತಥಾ ಧನುಃ ।
ಧಾರಯಂತೀ ತಥಾಚನ್ಯಾನ್ಸ್ವಧ್ಯತೂಣಾ ಜಲಾದ್ಬಹಿಃ ॥ ೨೭ ॥

ಶುಭವಾದ(ಗಂಗೆಯ)ನೀರಿನೊಳಗೆ ನಿಯಮದಿಂದ ಪರಮಾತ್ಮ ಮಾಯೆಯಾದ ಗಾಯತ್ರಿಯನ್ನು ಜಪಿಸುತ್ತಿದ್ದನು. ದೇವತೆಗಳು "ಪ್ರಜೆಗಳೊಡೆಯನೇ, ರಾಕ್ಷಸನಿಂದ ಹೆದರಿದ ಸರ್ವದೇವತೆಗಳನ್ನೂ, ಋಷಿವರರನ್ನೂ ರಕ್ಷಿಸು, ರಕ್ಷಿಸು." ಎಂದು ಮೊರೆಯಿಟ್ಟರು.

೨೪–೨೭. ಹಾಗೆ ಹೇಳಲಾಗಿ ಬ್ರಹ್ಮನು ಆ ದೇವತೆಗಳನ್ನು ನೋಡಿ, ಇದು ದೇವನ ಮಾಯೆ. ಜಗತ್ತು ಹೋಯಿತು! ಇಲ್ಲಿ ಅಸುರರಾಗಲೀ, ರಾಕ್ಷಸರಾಗಲೀ ಇಲ್ಲ. ಇದೆಂತಹ ಮಾಯೆ! ಎಂದು ಯೋಚಿಸುತ್ತಿದ್ದ ಅವನೆದುರಿಗೆ ಬಿಳಿಯ ಉಡುಗೆಯುಳ್ಳವಳೂ, ಎಂಟು ತೋಳುಗಳುಳ್ಳವಳೂ, ದಿವ್ಯಾಯುಧವನ್ನು ಎತ್ತಿಹಿಡಿದಿರುವವಳೂ, ಶಂಖಚಕ್ರಗದಾಪಾಶಖಡ್ಗಘಂಟಾಧನುರ್ಧಾರಿಣಿಯೂ, ಬೇರೆ ಆಯುಧಗಳನ್ನೂ ಬತ್ತಳಿಕೆಯನ್ನೂ ಧರಿಸಿರುವವಳೂ, ಮಹಾಯೋಗವುಳ್ಳವಳೂ, ಸಿಂಹವಾಹನೆಯೂ ಆದ ಕನ್ನೆಯು ನೀರಿನಿಂದ ಹೊರಕ್ಕೆ ಬಂದಳು.

ನಿಶ್ಚಕ್ರಾಮ ಮಹಾಯೋಗಾ ಸಿಂಹವಾಹನ ವೇಗಿತಾ ॥ ೨೮ ॥

ಯಯುಧೇ ಚಾಸುರಾನ್ಸರ್ವಾನೇಕೈವ ಬಹುಧಾಸ್ಥಿತಾ ।
ದಿವ್ಯಂ ವರ್ಷಸಹಸ್ರಂ ತು ದಿವ್ಯೈರಸ್ತ್ರೈರ್ಮಹಾಬಲಾ ॥
ಯುಧ್ವಾಕಾಲಾತ್ಯಯೋ ದೇವ್ಯಾ ಹತೋ ವೇತ್ರಾಸುರೋ ರಣೇ ॥ ೨೯ ॥

ತತಃ ಕಿಲಕಿಲಾಶಬ್ದೋ ದೇವಸೈನ್ಯೇಭವನ್ಮಹಾನ್ ।
ಹತೇ ವೇತ್ರಾಸುರೇ ಭೀಮೇ ತದಾ ಸರ್ವೇ ದಿವೌಕಸಃ ।
ಪ್ರಣೇಮುರ್ಜಯ ಯುದ್ಧೇತ್ವಮಿತ್ಥಮೀಶಃ ಸ್ತುತಿಂ ಜಗೌ ॥ ೩೦ ॥

॥ ಮಹೇಶ್ವರ ಉವಾಚ ॥

ಜಯಸ್ವದೇವಿ *ಗಾಯತ್ರಿ ಮಹಾಮಾಯೇ ಮಹಾಪ್ರಭೇ ॥ ೩೧ ॥

ಮಹಾದೇವಿ ಮಹಾಭಾಗೇ ಮಹಾಸತ್ವೇ ಮಹೋತ್ಸವೇ ।
ದಿವ್ಯಗಂಧಾನುಲಿಪ್ತಾಂಗಿ ದಿವ್ಯಸ್ರಗ್ದಾಮ ಭೂಷಿತೇ ॥ ೩೨ ॥

೨೮-೨೯. ವೇಗದಿಂದ ಚರಿಸುವವಳೂ ಅತಿಬಲವುಳ್ಳವಳೂ ಆದ ಅವಳೊಬ್ಬಳೆ ದೇವಮಾನದ ಸಾವಿರ ವರ್ಷಗಳಕಾಲ ದಿವ್ಯಾಸ್ತ್ರಗಳಿಂದ ಎಲ್ಲಾ ರಾಕ್ಷಸರೊಡನೆಯೂ ಯುದ್ಧಮಾಡಿದಳು. ಕಡೆಗೆ ಯುದ್ಧದಲ್ಲಿ ವೇತ್ರಾಸುರನನ್ನು ಕೊಂದಳು.

೩೦. ಭಯಂಕರನಾದ ವೇತ್ರಾಸುರನು ಹತನಾಗಲು ಬಳಿಕ ದೇವಸೈನ್ಯದಲ್ಲಿ ಹರ್ಷದ ಕಲಕಲಧ್ವನಿಯು ಹೆಚ್ಚಾಗಿ ಉಂಟಾಯಿತು. ದೇವತೆಗಳೆಲ್ಲರೂ "ಯುದ್ಧದಲ್ಲಿ ನೀನು ಹೀಗೆಯೇ ಜಯಶೀಲಳಾಗು" ಎಂದು ನಮಸ್ಕರಿಸಿದರು. ಈಶ್ವರನು ಮುಂದಿನ ಸ್ತೋತ್ರವನ್ನು ಹಾಡಿದನು.

೩೧-೩೨. ಮಹೇಶ್ವರ—ಜಯಿಸೌ ದೇವಿ, *ಗಾಯತ್ರೀ, ಮಹಾಮಾಯೇ, ಮಹಾಪ್ರಭೇ, ಮಹಾದೇವಿ, ಮಹಾಭಾಗೇ, ಮಹಾಸತ್ವೇ, ಮಹೋತ್ಸವೇ, ದಿವ್ಯಗಂಧಾನುಲಿಪ್ತಾಂಗೀ, ದಿವ್ಯಮಾಲಾ ವಿಭೂಷಿತೇ.

---

* ಗಾಯತ್ರೀ=ಗಾನ ಮಾಡುವವರನ್ನು ಕಾಪಾಡುವವಳು.

ದೇವಮಾತರ್ನಮಸ್ತುಭ್ಯಮಕ್ಷರಸ್ಥೇ ಮಹೇಶ್ವರಿ ।
ತ್ರಿಲೋಕಸ್ಥೇ ತ್ರಿತತ್ವಸ್ಥೇ *ತ್ರಿವಹ್ನಿಸ್ಥೇ ತ್ರಿಶೂಲಿನಿ ॥ ೩೩ ॥

ತ್ರಿನೇತ್ರೇ ಭೀಮವಕ್ತ್ರೇ ಚ ಭೀಮನೇತ್ರೇ ಭಯಾನಕೇ ।
ಕಮಲಾಸನಜೇ ದೇವಿ ಸರಸ್ವತಿ ನಮೋಽಸ್ತು ತೇ ॥ ೩೪ ॥

ನಮಃ ಪಂಕಜಪತ್ರಾಕ್ಷಿ ಮಹಾಮಾಯೇಽಮೃತಸ್ರವೇ ।
ಸರ್ವಗೇ ಸರ್ವಭೂತೇಶಿ ಸ್ವಾಹಾಕಾರೇ ಸ್ವಧೇಂಬಿಕೇ ॥ ೩೫ ॥

ಸಂಪೂರ್ಣೇ ಪೂರ್ಣಚಂದ್ರಾಭೇ ಭಾಸ್ವರಾಂಗೇ ಭವೋದ್ಭವೇ ।
ಮಹಾವಿದ್ಯೇ ಮಹಾವೇದ್ಯೇ ಮಹಾದೈತ್ಯವಿನಾಶಿನಿ ॥ ೩೬ ॥

ಮಹಾಬುದ್ಧ್ಯುದ್ಭವೇ ದೇವಿ ವೀತಶೋಕೇ ಕಿರಾತಿನಿ ।
ತ್ವಂ ನೀತಿಸ್ತ್ವಂ ಮಹಾಭಾಗೇ ಗೀಸ್ತ್ವಂ ತ್ವಂ ಗೌಸ್ತ್ವಮಕ್ಷರಂ ॥ ೩೭ ॥

೩೩-೩೪. ದೇವಮಾತೇ, ನಮಸ್ಕಾರಂ ಅಕ್ಷರಸ್ಥೇ, ಮಹೇಶ್ವರೀ, ತ್ರಿಲೋಕಸ್ಥೇ, ತ್ರಿತತ್ವಸ್ಥೇ, *ತ್ರಿವಹ್ನಿಸ್ಥೇ, ತ್ರಿಶೂಲಿನೀ, ತ್ರಿನೇತ್ರೇ, ಭೀಮಮುಖಿಯೇ, ಭೀಮನೇತ್ರೇ, ಭಯಂಕರೇ ಕಮಲಾಸನಜೇ, ದೇವಿ, ಸರಸ್ವತಿಯೆ, ವಂದನಂ.

೩೫. ವಂದನಂ ಪದ್ಮಪತ್ರಾಕ್ಷಿ, ಮಹಾಮಾಯೇ, ಅಮೃತಸ್ರವೇ, ಸರ್ವಗೇ, ಸರ್ವಭೂತೇಶೀ, ಸ್ವಾಹಾಕಾರೇ, ಸ್ವಧೇಂಬಿಕೇ.

೩೬. ಸಂಪೂರ್ಣೇ, ಪೂರ್ಣಚಂದ್ರಾಭೇ, ಭಾಸ್ವರಾಂಗೀ, ಭವೋದ್ಭವೇ, ಮಹಾವಿದ್ಯೇ, ಮಹಾವೇದ್ಯೇ, ಮಹಾದೈತ್ಯವಿನಾಶಿನೀ.

೩೭. ಮಹಾಬುದ್ಧ್ಯುದ್ಭವೇ, ದೇವಿ, ವೀತಶೋಕೇ, ಕಿರಾತಿನೀ, ನೀತಿ ನೀನೇ ಮಹಾಭಾಗೇ, ವಾಣಿ, ನೀಂ ಗೋವುಮಕ್ಷರಂ.

---

* ತ್ರಿವಹ್ನಿಸ್ಥೆ=ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ ಈ ಮೂರು ಅಗ್ನಿಯಲ್ಲೂ ಇರುವವಳು.

ತ್ವಂ ಧೀಸ್ತ್ವಂ ಶ್ರೀಸ್ತ್ವಮೋಂಕಾರಸ್ತತ್ತ್ವೇಚಾಪಿ ಪರಿಸ್ಥಿತಾ |
ಸರ್ವ*ಸತ್ವಹಿತೇ ದೇವಿ ನಮಸ್ತೇ ಪರಮೇಶ್ವರಿ || ೩೮ ||

ಇತ್യೇವಂ ಸಂಸ್ತುತಾ ದೇವೀ ಭವೇನ ಪರಮೇಷ್ಠಿನಾ |
ದೇವೈರಪಿ ಜಯೇತ್ಯುಚ್ಚೈರುಕ್ತಾ ಸಾ ಪರಮೇಶ್ವರೀ || ೩೯ ||

ಯಾವದಾಸ್ತೇ ಚತುರ್ವಕ್ತ್ರಸ್ತಾವದಂತರ್ಜಲಾದ್ಬಹಿಃ |
ನಿಶ್ಚಕ್ರಾಮ ತತೋ ದೇವೀಂ ಕೃತಕೃತ್ಯಾಂ ದದರ್ಶಸಃ || ೪೦ ||

ತಾಂ ದೃಷ್ಟ್ವಾ ದೇವಕಾರ್ಯಂಚ ಸಿದ್ಧಂ ಮತ್ವಾ ಪಿತಾಮಹಃ |
ಭವಿಷ್ಯಂ ಕಾರ್ಯಮುದ್ದಿಶ್ಯ ತತೋ ವಚನಮಬ್ರವೀತ್ || ೪೧ ||

|| ಬ್ರಹ್ಮೋವಾಚ ||

ಇಯಂ ದೇವೀ ವರಾರೋಹಾ ಯಾತು ಶೈಲಂ ಹಿಮಾಲಯಂ |
ತತ್ರ ಯೂಯಂ ಸುರಾಃ ಸರ್ವೇ ಗತ್ವಾನಂದತ ಮಾಚಿರಂ || ೪೨ ||

---

೩೮. ಓಂಕಾರಂ ಬುದ್ಧಿಯುಂ ಶ್ರೀಯುಂ ನೀನೆ ತತ್ವದೊಳಿರ್ಪಳುಂ ಸರ್ವ*ಸತ್ವಹಿತೇ, ದೇವಿ, ವಂದನಂ ಪರಮೇಶ್ವರೀ.

೩೯. ಪರಮೇಷ್ಠಿಯಾದ ಈಶ್ವರನು ಹೀಗೆ ದೇವಿಯನ್ನು ಸ್ತುತಿಸಿದನು. ದೇವತೆಗಳೂ ಆ ಪರಮೇಶ್ವರಿಗೆ, 'ಜಯವಾಗಲಿ', ಎಂದು ಕೂಗಿ ಹೇಳಿದರು.

೪೦. ಬ್ರಹ್ಮನು ನೀರೊಳಗಿನಿಂದ ಹೊರಕ್ಕೆ ಬಂದು ನಿಂತಾಗ (ವೇತ್ರಾಸುರನಾಶ) ಕಾರ್ಯವನ್ನು ಮುಗಿಸಿರುವ ಆ ದೇವಿಯನ್ನು ಕಂಡನು.

೪೧. ಬ್ರಹ್ಮನು ಅವಳನ್ನು ನೋಡಿ, ದೇವತೆಗಳ ಕಾರ್ಯವು ಸಿದ್ಧಿಸಿರುವುದನ್ನೂ ತಿಳಿದು, ಮುಂದಾಗಬೇಕಾದ ಕಾರ್ಯವನ್ನುದ್ದೇಶಿಸಿ, ಮಾತನಾಡಿದನು.

೪೨. ಬ್ರಹ್ಮ—ಉತ್ತಮವನಿತೆಯಾದ ಈ ದೇವಿಯು ಹಿಮಾಲಯ ಪರ್ವತಕ್ಕೆ ಹೋಗಲಿ. ದೇವತೆಗಳಾದ ನೀವೆಲ್ಲರೂ ಅಲ್ಲಿಗೆ ಹೋಗಿ ಆನಂದಪಡಿರಿ. ತಡಮಾಡಬೇಡಿ.

---

* ಸತ್ವ= ಪ್ರಾಣಿ, ಪ್ರಾಣ, ದ್ರವ್ಯ, ಉದ್ಯೋಗ.

ನವಮ್ಯಾಂಚ ಸದಾ ಪೂಜ್ಯಾ ಇಯಂ ದೇವೀ ಸಮಾಧಿನಾ ।
ವರದಾ ಸರ್ವಲೋಕಾನಾಂ ಭವಿಷ್ಯತಿ ನ ಸಂಶಯಃ ॥ ೪೩ ॥

ನವಮ್ಯಾಂ ಯಸ್ತು ಪಿಷ್ಟಾಶೀ ಭವಿಷ್ಯತಿ ಹಿ ಮಾನವಃ ।
ನಾರೀವಾ ತಸ್ಯ ಸಂಪನ್ನಂ ಭವಿಷ್ಯತಿ ಮನೋಗತಂ ॥ ೪೪ ॥

ಯಶ್ಚ ಸ್ವಯಂ ಸದಾಪ್ರಾತರಿದಂ ಸ್ತೋತ್ರಂ ಪಠಿಷ್ಯತಿ ।
ತ್ವಯೋರಿತಂ ಮಹಾದೇವ ತಸ್ಯ ದೇವ್ಯಾ ಸಮಂ ಭವಾನ್ ॥
ವರದೋ ದೇವ ಸರ್ವಾಸು ಆಪತ್ಸ್ವಪ್ಯುದ್ಧರೇತ್ಸ್ವಯಂ ॥ ೪೫ ॥

ಏವಮುಕ್ತ್ವಾ ಭವಂ ಬ್ರಹ್ಮಾ ಪುನರ್ದೇವೀಂ ಸ ಚಾಬ್ರವೀತ್ ॥ ೪೬ ॥

ತ್ವಯಾ ದೇವಿ ಮಹಾಕಾರ್ಯಂ ಕರ್ತವ್ಯಂ ಚಾನ್ಯದಸ್ತಿ ನಃ ।
ಭವಿಷ್ಯಂ ಮಹಿಷಾಖ್ಯಸ್ಯ ಅಸುರಸ್ಯ ವಿನಾಶನಂ ॥ ೪೭ ॥

ಏವಮುಕ್ತ್ವಾ ತತೋ ಬ್ರಹ್ಮಾ ಸರ್ವೇ ದೇವಾಶ್ಚ ಪಾರ್ಥಿವ ।
ಯಥಾಗತಂ ತತೋ ಜಗ್ಮುರ್ದೇವೀಂ ಸ್ಥಾಪ್ಯ ಹಿಮೋ ಗಿರೌ ॥ ೪೮ ॥

---

೪೩. ಯಾವಾಗಲೂ ಈ ದೇವಿಯನ್ನು ನವಮಿಯ ದಿನ ನಿಯಮದಿಂದ ಪೂಜಿಸಬೇಕು. ಈಕೆಯು ಸರ್ವಲೋಕಗಳಿಗೂ ವರವನ್ನು ಕೊಡುವವಳಾಗುವುದರಲ್ಲಿ ಸಂದೇಹವಿಲ್ಲ.

೪೪. ನವಮಿಯ ದಿನ, ಹೆಂಗಸಾಗಲಿ, ಗಂಡಸಾಗಲಿ, ಪಿಷ್ಟವನ್ನು ತಿಂದು ನಿಯಮದಿಂದಿದ್ದರೆ ಅವರ ಬಯಕೆಯು ಕೈಗೂಡುವುದು.

೪೫. "ಮಹಾದೇವನೇ, ನೀನು ಹೇಳಿದ ಈ ದೇವಿಯ ಸ್ತೋತ್ರವನ್ನು ನಿತ್ಯವೂ ಬೆಳಗ್ಗೆ ಹೇಳುವವರಿಗೆ ದೇವಿಯ ಹಾಗೆಯೇ ನೀನೂ ವರವನ್ನು ಕೊಡು. ಅವರನ್ನು ಎಲ್ಲಾ ತೊಂದರೆಗಳಿಂದಲೂ ಪಾರುಮಾಡು.

೪೬–೪೭. ಹೀಗೆ ಈಶ್ವರನಿಗೆ ಹೇಳಿ, ಆ ಬ್ರಹ್ಮನು ಆ ದೇವಿಗೆ ಮತ್ತೆ "ದೇವಿ, ನೀನು ನಮಗೆ ಮಾಡಬೇಕಾದ ಮಹಾಕಾರ್ಯವು ಬೇರೊಂದಿದೆ. ಮಹಿಷನೆಂಬ ಹೆಸರಿನ ಅಸುರನ ಸಂಹಾರವು ಮುಂದೆ ನಿನ್ನಿಂದಾಗಬೇಕು." ಎಂದು ಹೇಳಿದನು.

೪೮. ರಾಜನೇ, ಬಳಿಕ ಬ್ರಹ್ಮನೂ, ಎಲ್ಲಾ ದೇವತೆಗಳೂ, ದೇವಿಯನ್ನು ಹಿಮಗಿರಿಯಲ್ಲಿ ನಿಲ್ಲಿಸಿ, ಬಂದ ಹಾಗೆಯೇ ಹಿಂದಕ್ಕೆ ಹೊರಟರು.

ಸಂಸ್ಥಾಪ್ಯ ನಂದಿತಾ ಯಸ್ಮಾತ್ತಸ್ಮಾನ್ನಂದಾಭವತ್ತು ಸಾ ॥ ೪೯ ॥
ಯಶ್ಚೇದಂ ಶೃಣುಯಾಜ್ಜನ್ಮ ದೇವ್ಯಾಯಶ್ಚ ಸ್ವಯಂ ಪಠೇತ್ ।
ಸರ್ವಪಾಪವಿನಿರ್ಮುಕ್ತಃ ಪರಂ ನಿರ್ವಾಣಮೃಚ್ಛತಿ ॥ ೫೦ ॥

ಇತಿ ಶ್ರೀ ವರಾಹಪುರಾಣೇ ಅದಿಕೃತವೃತ್ತಾಂತೇ ಮಹಾತಪ ಉಪಾಖ್ಯಾನೇ ದುರ್ಗಾದೇವ್ಯುತ್ಪತ್ತಿರ್ನಾಮ ಅಷ್ಟವಿಂಶೋಽಧ್ಯಾಯಃ

---

೪೯. ದೇವತೆಗಳು ಕಾತ್ಯಾಯನೀದೇವಿಯನ್ನು ಹಿಮಗಿರಿಯಲ್ಲಿ ನೆಲೆಗೊಳಿಸಿ ಅವಳನ್ನು ಆನಂದಿತಳಾಗಿ ಮಾಡಿ, ತಾವೂ ಆನಂದಿತರಾದುದರಿಂದ ಆ ನವಮಿಗೆ ನಂದಾ ಎಂದು ಹೆಸರಾಯಿತು.

೫೦. ದೇವಿಯ ಜನ್ಮವನ್ನು ಕೇಳುವವರೂ, ಹೇಳುವವರೂ, ಸರ್ವ ಪಾಪಗಳಿಂದ ಬಿಡುಗಡೆಯನ್ನು ಹೊಂದಿ ಪರಮ ನಿರ್ವಾಣವನ್ನು ಪಡೆಯುವರು.

ಅಧ್ಯಾಯದ ಸಾರಾಂಶ :—

ಪ್ರಜಾಪಾಲನಿಗೆ ಮಹಾತಪನು ದುರ್ಗೆಯು ಉತ್ಪತ್ತಿಯನ್ನು ತಿಳಿಸುವನು. ಸಿಂಧುದ್ವೀಪನೆಂಬ ರಾಜನು, ಇಂದ್ರನನ್ನು ಕೊಲ್ಲುವ ಮಗನನ್ನು ಪಡೆಯಲು ತಪಸ್ಸನ್ನು ಮಾಡಿದನು. ಸ್ತ್ರೀರೂಪವನ್ನು ಧರಿಸಿದ ನೇತ್ರವತೀನದಿಯು ಅವನನ್ನು ಕಾಮಿಸಿದಳು. ಅವಳಲ್ಲಿ ಸಿಂಧುದ್ವೀಪನಿಗೆ ನೇತ್ರಾಸುರನೆಂಬ ಪುತ್ರನುದಿಸಿದನು. ಮಹಾವೀರನಾದ ಅವನು ಬ್ರಹ್ಮಾದಿದೇವತೆಗಳನ್ನೆಲ್ಲಾ ಸೋಲಿಸಿದನು. ಅವನನ್ನು ಕೊಲ್ಲುವ ಸಾಮರ್ಥ್ಯವನ್ನು ಸಂಪಾದಿಸಲು ಬ್ರಹ್ಮನು ಗಂಗೆಯಲ್ಲಿ ತಪಸ್ಸುಮಾಡುತ್ತಿರಲು ಅವನೆದುರಿಗೆ ಶುಭ್ರವಸ್ತ್ರಮಾಲಾ ಕಿರೀಟಶಂಖಚಕ್ರಾದಿಗಳನ್ನು ಧರಿಸಿ, ಅಷ್ಟ ಭುಜಗಳುಳ್ಳವಳೂ, ಸಿಂಹವಾಹನೆಯೂ, ಅತಿಬಲವುಳ್ಳವಳೂ ಆದ ದೇವಿಯೊಬ್ಬಳು ಉದಿಸಿ, ವೇತ್ರಾಸುರನನ್ನು ಸಂಹರಿಸಿದಳು. ಅವಳೇ ದುರ್ಗಾದೇವಿ. ಈಶ್ವರನು ಅವಳನ್ನು ಸ್ತೋತ್ರದಿಂದ ಸ್ತುತಿಸಿದನು. ಬ್ರಹ್ಮನು ಆಕೆಯನ್ನು ನವಮಿಯ ದಿನ ಪೂಜಿಸಬೇಕೆಂದೂ ಆ ದಿನ ಎಲ್ಲರಿಗೂ ಆನಂದವಾದುದರಿಂದ ಆ ತಿಥಿಗೆ ನಂದಾ ಎಂಬ ಹೆಸರಾಗಲೆಂದೂ ಹೇಳಿ, ಮುಂದೆ ಮಹಿಷಾಸುರನ ಸಂಹಾರವು ದೇವಿಯಿಂದಾಗಬೇಕೆಂದೂ ಅದುವರೆಗೆ ದೇವಿಯು ಹಿಮಾಲಯದಲ್ಲಿರಬೇಕೆಂದೂ ಪ್ರಾರ್ಥಿಸುವನು. ಇಲ್ಲಿಗೆ ಶ್ರೀ ವರಾಹ ಪುರಾಣದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯ.

॥ ಶ್ರೀಃ ॥

-X-

ಏಕೋನತ್ರಿಂಶೋಽಧ್ಯಾಯಃ

ಅಥ ದಿಗುತ್ಪತ್ತಿಃ

॥ ಮಹಾತಪಾ ಉವಾಚ ॥

ಶೃಣು ರಾಜನ್ನವಹಿತಃ ಪ್ರಜಾಪಾಲ ಕಥಾಮಿಮಾಂ ।
ಯದಾ ದಿಶಃ ಸಮುತ್ಪನ್ನಾಃ ಶ್ರೋತ್ರೇಭ್ಯಃ ಪೃಥಿವೀಪತೇ ॥ ೧ ॥

ಬ್ರಹ್ಮಣಸ್ಸೃಜತಸ್ಸೃಷ್ಟಿಂ ಆದಿಸ್ಸರ್ಗೇ ಸಮುತ್ಥಿತೇ ।
ಚಿಂತಾಭೂನ್ಮಹತೀ ಕೋನೋ ಪ್ರಜಾಃ ಸೃಷ್ಟ್ವಾ ಧರಿಷ್ಯತಿ ॥ ೨ ॥

ಏವಂ ಚಿಂತಯತಸ್ತಸ್ಯ ಅವಕಾಶಂ ವ್ರಜಂತ್ವಿಹ ।
ಪ್ರಾದುರ್ಬಭೂವುಃ ಶ್ರೋತ್ರೇಭ್ಯೋ ದಶಕನ್ಯಾ ಮಹಾಪ್ರಭಾಃ ॥ ೩ ॥

ಇಪ್ಪತ್ತೊಂಭತ್ತನೆಯ ಅಧ್ಯಾಯ

ದಿಕ್ಕುಗಳ ಉತ್ಪತ್ತಿ

೧. ಮಹಾತಪಮುನಿ–ರಾಜನಾದ ಪ್ರಜಾಪಾಲನೆ, ಬ್ರಹ್ಮನ ಕಿವಿಗಳಿಂದ ದಿಕ್ಕುಗಳು ಯಾವಾಗ ಹುಟ್ಟಿದುವೆಂಬುದನ್ನು ಗಮನಿಸಿ ಕೇಳು.

೨. ಸೃಷ್ಟಿಕರ್ತನಾದ ಬ್ರಹ್ಮನಿಂದ ದೊದಲು ಸೃಷ್ಟಿಯು ಆಗಲಾಗಿ ಆತನಿಗೆ ನನ್ನ ಪ್ರಜೆಗಳನ್ನು ಯಾರು ಧರಿಸುವರು? ಎಂದು ಹೆಚ್ಚಾದ ಚಿಂತೆಯುಂಟಾಯಿತು.

೩. ಹೀಗೆ ಚಿಂತಿಸುತ್ತಿದ್ದ ಅವನ ಅವಕಾಶಗಳು ಮಹಾಕಾಂತಿ ಯುತೆಯರಾದ ಹತ್ತು ಜನ ಕನ್ಯೆಯರಾಗಿ ಕಿವಿಗಳಿಂದ ಉದಿಸಿದುವು.

ಪೂರ್ವಾ ಚ ದಕ್ಷಿಣಾಚ್ಚೈವ ಪ್ರತೀಚೀ ಚೋತ್ತರಾ ತಥಾ ।
ಊರ್ಧ್ವಾಧರಾ ಚ ಷಣ್ಮುಖ್ಯಾಃ ಕನ್ಯಾ ಹ್ಯಾಸಂಸ್ತದಾ ನೃಪ ॥ ೪ ॥

ತಾಸಾಂ ಮಧ್ಯೇ ಚತಸ್ರಸ್ತು ಕನ್ಯಾಃ ಪರಮಶೋಭನಾಃ ।
ರೂಪವತ್ಯೋ ಮಹಾಭಾಗಾ ಗಾಂಭೀರ್ಯೇಣ ಸಮನ್ವಿತಾಃ ॥ ೫ ॥

ತಾ ಊಚುಃ ಪ್ರಣಯಾದ್ದೇವಂ ಪ್ರಜಾಪತಿಮಕಲ್ಮಷಂ ।
ಅವಕಾಶಂ ತು ನೋ ದೇಹಿ ದೇವದೇವ ಪ್ರಜಾಪತೇ ॥ ೬ ॥

ತಿಷ್ಠಾಮೋ ಯತ್ರ ವಾ ಸರ್ವಾ ಭರ್ತೃಭಿಸ್ಸಹಿತಾಸ್ಸುಖಂ ।
ಪತೀಂಶ್ಚೈವ ಮಹಾಭಾಗಾನ್ದೇಹಿ ನೋಽವ್ಯಕ್ತಸಂಭವ ॥ ೭ ॥

॥ ಬ್ರಹ್ಮೋವಾಚ ॥

ಬ್ರಹ್ಮಾಂಡಮೇತತ್ಸುಶ್ರೋಣ್ಯಃ ಶತಕೋಟಿಪ್ರವಿಸ್ತರಂ ।
ತಸ್ಯಾಂತೇ ಸ್ವೇಚ್ಛಯಾ ತುಷ್ಟಾ ಉಷ್ಯತಾಂ ಮಾಂ ವಿಲಂಬಥ ॥ ೮ ॥

---

೪. ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ, ಊರ್ಧ್ವ (ಮೇಲು), ಕೆಳಗು ಎಂಬ ಆರುಜನರು ಮುಖ್ಯಕನ್ಯೆಯರು.

೫. ಅವರಲ್ಲಿ (ಮೊದಲ) ನಾಲ್ಕುಜನ ಕನ್ಯೆಯರು ಪರಮ ಮಂಗಳೆಯರೂ, ರೂಪವತಿಯರೂ, ಮಹಾಭಾಗ್ಯಶಾಲಿಗಳೂ, ಗಾಂಭೀರ್ಯ ವುಳ್ಳವರೂ ಆಗಿದ್ದರು.

೬-೭. ಆ ಕನ್ಯೆಯರು ಪರಿಶುದ್ಧಾತ್ಮನಾದ ಬ್ರಹ್ಮದೇವನನ್ನು ಪ್ರೀತಿಯಿಂದ "ದೇವದೇವನಾದ ಬ್ರಹ್ಮನೇ, ನಮಗೆ ಮಹಾಭಾಗರಾದ ಪತಿಗಳನ್ನೂ ನಮ್ಮ ಪತಿಗಳೊಡನೆ ಸುಖವಾಗಿ ವಾಸಮಾಡುವುದಕ್ಕೆ ಸ್ಥಳವನ್ನೂ ನಮಗೆಲ್ಲರಿಗೂ ಕೊಡು" ಎಂದು ಕೇಳಿದರು.

೮. ಬ್ರಹ್ಮ—ಸುಂದರಿಯರೇ, ಈ ಬ್ರಹ್ಮಾಂಡವು ನೂರುಕೋಟಿ ಯೋಜನವಿಸ್ತಾರವುಳ್ಳದಾಗಿದೆ. ಇದರ ಕಡೆಯಲ್ಲಿ ಸಂತೋಷದಿಂದ ನಿಮ್ಮ ಇಷ್ಟಾನುಸಾರವಾಗಿ ವಾಸಮಾಡಿ. ತಡಮಾಡಬೇಡಿ.

ಭರ್ತ್ರೄಂಶ್ಚ ವಃ ಪ್ರಯಚ್ಛಾಮಿ ಸೃಷ್ಟ್ವಾ ರೂಪವತೋನಘಾನ್ ।
ಯಥೇಷ್ಟಂ ಗಮ್ಯತಾಂ ದೇಶೋ ಯಸ್ಯೈ ಯೋ ರೋಚತೇಧುನಾ ॥ ೯ ॥

ಏವಮುಕ್ತಾ ಚ ತಾಸ್ಸರ್ವಾ ಯಥೇಷ್ಟಂ ಪ್ರಯಯುಸ್ತದಾ ॥ ೧೦ ॥

ಬ್ರಹ್ಮಾ ಸಸರ್ಜ ತೂರ್ಣಂ ತಾಂಲ್ಲೋಕಪಾಲಾನ್ಮಹಾಬಲಾನ್ ।
ಸೃಷ್ಟ್ವಾತು ಲೋಕಪಾಲಾಂಸ್ತಾಂಸ್ತಾಃ ಕನ್ಯಾಃ ಪುನರಾಹ್ವಯಾತ್ ॥
ವಿವಾಹಂ ಕಾರಯಾಮಾಸ ಬ್ರಹ್ಮಾ ಲೋಕಪಿತಾಮಹಃ ॥ ೧೧ ॥

ಏಕಾಮಿಂದ್ರಾಯ ಸಪ್ರಾದಗ್ನಯೇನ್ಯಾಂ ಯಮಾಯ ಚ ।
ನಿಋತಾಯ ಚ ದೇವಾಯ ವರುಣಾಯ ಮಹಾತ್ಮನೇ ॥
ವಾಯವೇ ಧನದೇಶಾಯ ಈಶಾನಾಯ ಚ ಸುವ್ರತ ॥ ೧೨ ॥

ಊರ್ಧ್ವಾಂ ಸ್ವಯಮಥಿಷ್ಠಾಯ ಶೇಷಾಯಾಥೋ ವ್ಯವಸ್ಥಿತಾಂ ॥ ೧೩ ॥

---

೯. ಪಾಪರಹಿತರೂ, ರೂಪವಂತರೂ, ಆದ ಪತಿಗಳನ್ನು ಸೃಷ್ಟಿಸಿ ನಿಮಗೆ ಕೊಡುತ್ತೇನೆ. ಯಾರಿಗೆ ಯಾವುದು ಇಷ್ಟವೋ ಆ ಸ್ಥಳಕ್ಕೆ ಸ್ವೇಚ್ಛೆಯಿಂದ ಹೋಗಿ.

೧೦. ಹೀಗೆ ಹೇಳಿಸಿಕೊಂಡ ಅವರೆಲ್ಲರೂ ಆಗ ತಮ್ಮ ಇಷ್ಟಬಂದ ಕಡೆಗೆ ಹೊರಟುಹೋದರು.

೧೧. ಬ್ರಹ್ಮನು ಮಹಾಬಲಶಾಲಿಗಳಾದ ಆ ಲೋಕಪಾಲರನ್ನು ಬೇಗನೆ ಸೃಷ್ಟಿಸಿ, ಆ ಕನ್ಯೆಯರನ್ನು ಮತ್ತೆ ಬರಮಾಡಿ, ಲೋಕಪಿತಾಮಹನಾದ ತಾನೇ ಅವರಿಗೆ ವಿವಾಹಮಾಡಿಸಿದನು.

೧೨. ಒಬ್ಬಳನ್ನು ಇಂದ್ರನಿಗೂ, ಮತ್ತೊಬ್ಬಳನ್ನು ಅಗ್ನಿದೇವನಿಗೂ, ಇತರರನ್ನು ಹಾಗೆಯೇ ಯಮ, ನಿರುತಿ, ವರುಣ, ವಾಯು, ಕುಬೇರ, ಈಶಾನರಿಗೂ ಕೊಟ್ಟನು.

೧೩. ಊರ್ಧ್ವೆಯನ್ನು ತಾನೇ ಪರಿಗ್ರಹಿಸಿ, ಅಧಃ ಕನ್ಯೆಯನ್ನು ಆದಿಶೇಷನಿಗೆ ಕೊಟ್ಟನು.

ಏವಂ ದತ್ವಾ ಪುನರ್ಬ್ರಹ್ಮಾ ತಿಥಿಂ ಪ್ರಾದಾದ್ದಿಶಾಂ ತಥಾ ।
ದಶಮೀ ಚ ತಿಥಿಸ್ತಾಸಾಮತೀವ ದಯಿತಾಭವತ್ ॥ ೧೪ ॥

ತಸ್ಯಾಂ ದಧ್ಯಶನೋ ಯಸ್ತು ಸುವ್ರತೋ ನಾ ಭವಿಷ್ಯತಿ ।
ತಸ್ಯ ಪಾಪಕ್ಷಯಂ ತಾಸ್ತು ಕುರ್ವಂತ್ಯಹರಹರ್ನೃಪ ॥ ೧೫ ॥

ಯಶ್ಚೈತಚ್ಛೃಣುಯಾಜ್ಜನ್ಮ ದಿಶಾಂ ನಿಯತಮಾನಸಃ ।
ಸ ಪ್ರತಿಷ್ಠಾಮವಾಪ್ನೋತಿ ಬ್ರಹ್ಮಲೋಕೇ ನ ಸಂಶಯಃ ॥ ೧೬ ॥

ಇತಿ ಶ್ರೀ ವರಾಹಪುರಾಣೇ ಆದಿಕೃತವೃತಾಂತೇ ಮಹಾತಪ ಉಪಾಖ್ಯಾನೇ ದಿಗುತ್ಪತ್ತಿರ್ನಾಮೈಕೋನತ್ರಿಂಶೋಽಧ್ಯಾಯಃ

---

೧೪. ಕನ್ಯೆಯರನ್ನು ಹೀಗೆ ಕೊಟ್ಟು ಬ್ರಹ್ಮನು ದಿಗ್ವನಿತೆಯರಿಗೆ ತಿಥಿಯನ್ನೂ ಕೊಟ್ಟನು. ದಶಮೀತಿಥಿಯು ಅವರಿಗೆ ಅತಿಪ್ರಿಯವಾದುದು.

೧೫. ರಾಜನೇ, ಯಾರು ದಶಮಿಯ ದಿನ ವ್ರತವುಳ್ಳವನಾಗಿ ಮೊಸರನ್ನು ಆಹಾರವಾಗಿ ಮಾಡಿಕೊಂಡಿರುವನೋ ಅವನ ಪಾಪವನ್ನು ಆ ದಿಗ್ವನಿತೆಯರು ದಿನ ದಿನವೂ ನಾಶಮಾಡುವರು.

೧೬. ದಿಕ್ಕುಗಳ ಈ ಜನ್ಮಕಥೆಯನ್ನು ಸ್ಥಿರಮನಸ್ಸಿನಿಂದ ಕೇಳುವವರು ಬ್ರಹ್ಮಲೋಕದಲ್ಲಿ ನೆಲಸುವುದರಲ್ಲಿ ಸಂದೇಹವಿಲ್ಲ.

ಅಧ್ಯಾಯದ ಸಾರಾಂಶ :—

ಈ ಅಧ್ಯಾಯದಲ್ಲಿ ದಿಕ್ಕುಗಳ ಉತ್ಪತ್ತಿಯ ವಿಚಾರವನ್ನು ಹೇಳಿದೆ. ಆದಿಯಲ್ಲಿ ಸೃಷ್ಟಿಮಾಡಲು ಇಚ್ಛಿಸಿದ ಪರಬ್ರಹ್ಮನ ಕಿವಿಗಳಿಂದ ದಿಗಂಗನೆಯರು ಉದಿಸಿದರು. ಪತಿಗಳನ್ನು ಪ್ರಾರ್ಥಿಸಿದ ಅವರನ್ನು ಕ್ರಮವಾಗಿ ಇಂದ್ರನೇ ಮೊದಲಾದ ದಿಕ್ಪಾಲಕರಿಗೆ ಬ್ರಹ್ಮನು ವಿವಾಹಮಾಡಿಕೊಟ್ಟನು. ದಿಕ್ಕುಗಳ ತಿಥಿಯು ದಶಮಿ. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇಪ್ಪತ್ತೊಂಬತ್ತನೆಯ ಅಧ್ಯಾಯ.

॥ ಶ್ರೀಃ ॥

-X-

ತ್ರಿಂಶೋಽಧ್ಯಾಯಃ

ಅಥ ಧನದೋತ್ಪತ್ತಿಃ

॥ ಮಹಾತಪಾ ಉವಾಚ ॥

ಶೃಣು ಚಾನ್ಯಾಂ ವಸುಪತೇರುತ್ಪತ್ತಿಂ ಪಾಪನಾಶಿನೀಂ ।
ಯಥಾ ವಾಯುಃಶರೀರಸ್ಥೋ ಧನದಸ್ಸಂಬಭೂವ ಹ ॥ ೧ ॥

ಆದ್ಯಂ ಶರೀರಂ ಯತ್ತಸ್ಮಿನ್ವಾಯುರಂತಃ ಸ್ಥಿತೋಽಭವತ್ ।
ಪ್ರಯೋಜನಾನ್ಮೂರ್ತಿಮತ್ತ್ವಮತಿಷ್ಠತ್ಕ್ಷೇತ್ರದೇವತಾ ॥ ೨ ॥

ತತ್ರ ಮೂರ್ತಸ್ಯ ವಾಯೋಸ್ತು ಉತ್ಪತ್ತಿಃ ಕೀರ್ತಿತಾ ಮಯಾ ।
ತಾಂ ಶೃಣುಷ್ವ ಮಹಾಭಾಗ ಕಥ್ಯಮಾನಾಂ ಮಯಾನಘ ॥ ೩ ॥

ಮೂವತ್ತನೆಯ ಅಧ್ಯಾಯ

ಕುಬೇರನ ಉತ್ಪತ್ತಿ

೧. ಮಹಾತಪಮುನಿ—ದೊರೆಯೇ, ಪಾಪನಾಶಕವಾದ ಕುಬೇರನ ಉತ್ಪತ್ತಿಯನ್ನೂ, ಎಂದರೆ ಪರಮಾತ್ಮದೇಹದಲ್ಲಿದ್ದ ವಾಯುವು ಹೇಗೆ ಧನವ (ಕುಬೇರ)ನಾದನೆಂಬುದನ್ನೂ ಕೇಳು.

೨. ಪರಮಾತ್ಮದೇಹದೊಳಗೆ ವಾಯುವಿದ್ದನು. ಪ್ರಯೋಜನಕ್ಕಾಗಿ ಶರೀರದೇವತೆಯಾದ ಅವನು ರೂಪವನ್ನು ಧರಿಸಿದನು.

೩. ಹಿಂದೆ ಮೂರ್ತೀಭವಿಸಿದ ವಾಯುವಿನ ಹುಟ್ಟನ್ನು ಸಂಗ್ರಹವಾಗಿ ಹೇಳಿದ್ದೆನು. ಮಹಾಭಾಗನೇ, ಅದನ್ನೇ ಈಗ ಹೇಳುತ್ತೇನೆ. ಕೇಳು.

ಬ್ರಹ್ಮಣಸ್ಸೃಷ್ಟಿಕಾಮಸ್ಯ ಮುಖಾದ್ವಾಯುರ್ವಿನಿರ್ಯಯೌ ।
ಪ್ರಚಂಡಶರ್ಕರಾವರ್ಷೀ ತಂ ಬ್ರಹ್ಮಾ ಪ್ರತ್ಯಷೇಧಯತ್ ॥ ೪ ॥

ಮೂರ್ತೋ ಭವತ್ವಂ ಶಾಂತಶ್ಚ ತೇನೋಕ್ತೋ ಮೂರ್ತಿಮಾನಭೂತ್
॥ ೫ ॥

ಸರ್ವೇಷಾಂ ಚೈವ ದೇವಾನಾಂ ಯದ್ವಿತ್ತಂ ಫಲಮೇವ ಚ ।
ತತ್ಸರ್ವಂ ಪಾಹಿ ಯೇನೋಕ್ತಂ ತಸ್ಮಾದ್ಧನಪತಿರ್ಭವಾನ್ ॥
ತಸ್ಯ ಬ್ರಹ್ಮಾ ದದೌ ತುಷ್ಟಃ ತಿಥಿಮೇಕಾದಶೀಂ ಪ್ರಭುಃ ॥ ೬ ॥

ತಸ್ಯಾಮನಗ್ನಿಪಕ್ವಾಶೀ ಯೋ ಭವೇನ್ನಿಯತಃ ಶುಚಿಃ ।
ತಸ್ಯಾಪಿ ಧನದೋ ದೇವಸ್ತುಷ್ಟಸ್ಸರ್ವಂ ಪ್ರಯಚ್ಛತಿ ॥ ೭ ॥

೪-೫. ಸೃಷ್ಟಿಯನ್ನು ಮಾಡಲು ಇಚ್ಛಿಸಿದ ಬ್ರಹ್ಮನ ಬಾಯಿಂದ ವಾಯುವು ಈಚೆಗೆ ಹೊರಟನು. ಕ್ರೂರವಾಗಿ ಮಳಲನ್ನು ಎರಚುತ್ತಿದ್ದ ಅವನನ್ನು "ನೀನು ದೇಹಧಾರಿಯೂ, ಶಾಂತನೂ ಆಗು" ಎಂದು ಆ ಬ್ರಹ್ಮನು ಹೇಳಲು ಅವನು ರೂಪವನ್ನು ಪಡೆದನು.

೬. "ದೇವತೆಗಳೆಲ್ಲರ ದ್ರವ್ಯಫಲಗಳನ್ನು ನೀನು ರಕ್ಷಿಸುವುದರಿಂದ ನಿನಗೆ ಧನಪತಿಯೆಂದು ಹೆಸರು" ಎಂದು ಹೇಳಿ, ಸಂತುಷ್ಟನಾದ ಆ ಪ್ರಭುವು ಅವನಿಗೆ ಏಕಾದಶೀತಿಥಿಯನ್ನು ನಿಷ್ಕರ್ಷಿಸಿಕೊಟ್ಟನು.

೭. ಆ ಏಕಾದಶಿಯಲ್ಲಿ (ಬೆಂಕಿಯಿಂದ) ಬೇಯದ ಪದಾರ್ಥವನ್ನು ಆಹಾರಮಾಡಿಕೊಂಡು, ಶುಚಿಯಾದ ನಿಯಮದಲ್ಲಿರುವವರಿಗೆ ತುಷ್ಟನಾದ ಕುಬೇರದೇವನು ಎಲ್ಲವನ್ನೂ ಕೊಡುವನು.

ಏಷಾ ಧನಪತೇರ್ಮೂರ್ತಿಃ ಸರ್ವಕಿಲ್ಬಿಷನಾಶಿನೀ ।
ಯ ಏತಾಂ ಶೃಣುಯಾದ್ಭಕ್ತ್ಯಾ ಪುರುಷಃ ಪಠತೇಽಪಿ ವಾ ॥
ಸರ್ವಕಾಮಾನವಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ॥ ೮ ॥

ಇತಿ ಶ್ರೀ ವರಾಹಪುರಾಣೇ ಆದಿಕೃತವೃತಾಂತೇ ಮಹಾತಪ ಉಪಾಖ್ಯಾನೇ ಧನದೋತ್ಪತ್ತಿರ್ನಾಮ ತ್ರಿಂಶೋಽಧ್ಯಾಯಃ

---

೮. ಈ ಧನಪತಿಯ ಮೂರ್ತಿಯು ಸರ್ವಪಾಪನಾಶಕವಾದುದು. ಈ ವಿಚಾರವನ್ನು ಭಕ್ತಿಯಿಂದ ಕೇಳುವವರಿಗೂ, ಹೇಳುವವರಿಗೂ ಸರ್ವೇಷ್ಟಾರ್ಥಗಳೂ ಲಭಿಸುವುವು. ಸ್ವರ್ಗಪ್ರಾಪ್ತಿಯೂ ಆಗುವುದು.

ಅಧ್ಯಾಯದ ಸಾರಾಂಶ :—

ಈ ಅಧ್ಯಾಯದಲ್ಲಿ, ಪರಬ್ರಹ್ಮಶರೀರಾಂತಸ್ಥಿತನಾದ ವಾಯುವೇ ಕುಬೇರನಾಗಿ ಮೂರ್ತೀಭವಿಸಿದನೆಂದೂ, ಅವನ ಪೂಜಾದಿಗಳಿಗೆ ಏಕಾದಶೀ ತಿಥಿಯು ಪ್ರಶಸ್ತವಾದುದೆಂದೂ ಹೇಳಿದೆ. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಮೂವತ್ತನೆಯ ಅಧ್ಯಾಯ.

॥ ಶ್ರೀಃ ॥

-x-

ಏಕತ್ರಿಂಶೋಽಧ್ಯಾಯಃ

ಅಥ ವಿಷ್ಣೂತ್ಪತ್ತಿಃ

॥ ಮಹಾತಪಾ ಉವಾಚ ॥

ಮನೋರ್ನಾಮ ಮನುತ್ವಂ ಚ ಯದೇತತ್ಪಠ್ಯತೇ ಕಿಲ ।
ಪ್ರಯೋಜನವಶಾದ್ವಿಷ್ಣುರಸಾವೇವ ತು ಮೂರ್ತಿಮಾನ್ ॥ ೧ ॥

ಯೋಽಸೌ ನಾರಾಯಣೋ ದೇವಃ ಪರಾತ್ಪರತರೋ ನೃಪ ।
ತಸ್ಯ ಚಿಂತಾ ಸಮುತ್ಪನ್ನಾ ಸೃಷ್ಟಿಂ ಪ್ರತಿ ನರೋತ್ತಮ ॥ ೨ ॥

ಮೂವತ್ತೊಂದನೆಯ ಅಧ್ಯಾಯ

ವಿಷ್ಣುವಿನ ಉತ್ಪತ್ತಿ

೧. ಮಹಾತಪಮುನಿ—ಮನುವಿನ ಹೆಸರನ್ನೂ, ಮನುತ್ವವನ್ನೂ, ಲೋಕದಲ್ಲಿ ಹೇಳುತ್ತಾರಷ್ಟೆ. ಪ್ರಯೋಜನಕ್ಕಾಗಿ ಮೂರ್ತಿಭವಿಸಿದ ಆ ಮನುವು ವಿಷ್ಣುವೇ. ಎಂದರೆ ವಿಷ್ಣುವೇ ಕಾರ್ಯವಶದಿಂದ ಮನುವಾಗಿ ಉದಿಸಿದನು.

೨. ಪ್ರಜಾಪಾಲನೇ, ಪರಾತ್ಪರತರನಾದ ನಾರಾಯಣನಿಗೆ ಸೃಷ್ಟಿ ವಿಷಯದಲ್ಲಿ ಹೀಗೆ ಚಿಂತೆಯುಂಟಾಯಿತು—

ಸೃಷ್ಟ್ವಾ ಚೇಯಂ ಮಯಾ ಸೃಷ್ಟಿಃ ಪಾಲನೀಯಾಮಯೈವ ಹ ।
ಕರ್ಮಕಾಂಡಂ ತ್ವಮೂರ್ತೇನ ಕರ್ತುಂ ನೈವೇಹ ಶಕ್ಯತೇ ॥
ತಸ್ಮಾನ್ಮೂರ್ತಿಂ ಸೃಜಾಮ್ಯೇಕಾಂ ಯಯಾ ಪಾಲ್ಯಮಿದಂ ಜಗತ್ ॥ ೩ ॥

ಏವಂ ಚಿಂತಯತಸ್ತಸ್ಯ ಸತ್ಯಾಭಿಧ್ಯಾಯಿನೋ ನೃಪ ।
ಪ್ರಾಕ್ಸೃಷ್ಟಿಜಾತಂರಾಜನ್ವೈ ಮೂರ್ತಿಮತ್ತತ್ಪುರೋ ಬಭೌ ॥ ೪ ॥

ಪುರೋಭೂತಸ್ತತಸ್ತಸ್ಮಿನ್ದೇವೋ ನಾರಾಯಣಃ ಸ್ವಯಂ ।
ಪ್ರವಿಶಂತಂ ದದರ್ಶಾಥ ತ್ರೈಲೋಕ್ಯಂ ತಸ್ಯ ದೇಹತಃ ॥ ೫ ॥

ತತಃ ಸಸ್ಮಾರ ಭಗವಾನ್ವರದಾನಂ ಪುರಾತನಂ ।
ವಾಗಾದೀನಾಂ ತತಸ್ತುಷ್ಟಃ ಪ್ರಾದಾತ್ತಸ್ಯ ಪುನರ್ವರಂ ॥ ೬ ॥

---

೩. "ನಾನು ಈ ಸೃಷ್ಟಿಯನ್ನೇನೋ ಮಾಡಿದೆನು. ಇದನ್ನು ನಾನೇ ರಕ್ಷಿಸಲೂ ಬೇಕಲ್ಲವೆ ? ನಿರಾಕಾರನಿಗೆ ಕರ್ಮಸಮೂಹವನ್ನು ಮಾಡಲು ಸಾಧ್ಯವಾಗುವುದಿಲ್ಲ. ಆದುದರಿಂದ ಈ ಜಗತ್ತನ್ನು ಪಾಲಿಸುವ ಮೂರ್ತಿಯೊಬ್ಬನನ್ನು ಸೃಷ್ಟಿಸುತ್ತೇನೆ."

೪. ಸತ್ಯಸಂಧನಾದ ಅವನು ಹೀಗೆ ಚಿಂತಿಸುತ್ತಿರಲು, ಹಿಂದೆ ಸೃಷ್ಟಿಸಿದುದೆಲ್ಲವೂ ಮೂರ್ತಿಮತ್ತಾಗಿ ಅವನೆದುರಿಗೆ ಪ್ರಕಾಶಿಸಿತು.

೫. ಮುಂದಿದ್ದ ದೇವದೇವನಾದ ನಾರಾಯಣನು ತಾನೇ, ತನ್ನ ದೇಹದಿಂದ ಆ ತ್ರಿಲೋಕದಲ್ಲಿ ಪ್ರವೇಶಿಸುತ್ತಿರುವುದನ್ನು ಕಂಡನು.

೬. ಬಳಿಕ ಭಗವಂತನು ಹಿಂದಿನ (ಮನಸ್ಸು ವಿಷ್ಣುವಾಗುವುದು ಎಂಬ) ವರದಾನವನ್ನು ಜ್ಞಾಪಿಸಿಕೊಂಡನು. ಬಳಿಕ ಸಂತೋಷಗೊಂಡ ಆ ನಾರಾಯಣನು ವಿಷ್ಣುವಿಗೆ ತಿರುಗಿ ವಾಕ್ಕೇ ಮೊದಲಾದುವುಗಳ ವರವನ್ನು ಕೊಟ್ಟನು.

ಸರ್ವಜ್ಞಸ್ಸರ್ವಕರ್ತಾ ತ್ವಂ ಸರ್ವಲೋಕನಮಸ್ಕೃತಃ ।
ತ್ರೈಲೋಕ್ಯಪ್ರತಿಪಾಲಶ್ಚ ಭವ ವಿಷ್ಣುಸ್ಸನಾತನಃ ॥ ೭ ॥

ದೇವಾನಾಂ ಸರ್ವದಾ ಕಾರ್ಯಂ ಕರ್ತವ್ಯಂ ಬ್ರಹ್ಮಣಃ ಸದಾ ।
ಸರ್ವಜ್ಞತ್ವಂ ಚ ಭವತು ತವ ದೇವ ನ ಸಂಶಯಃ ॥ ೮ ॥

ಏವಮುಕ್ತ್ವಾ ತತೋ ದೇವಃ ಪ್ರಕೃತಿಸ್ಥೋ ಬಭೂವ ಹ ॥ ೯ ॥

ವಿಷ್ಣುರಪ್ಯಧುನಾ ಪೂರ್ವಾಂ ಬುದ್ಧಿಂ ಸಸ್ಮಾರ ಸ ಪ್ರಭುಃ ।
ತದಾ ಸಂಚಿಂತ್ಯ ಭಗವಾನ್ಯೋಗನಿದ್ರಾಂ ಮಹಾತಪಾಃ ॥ ೧೦ ॥

ತಸ್ಯಾಂ ಸಂಸ್ಥಾಪ್ಯ ಭಗವಾನಿಂದ್ರಿಯಾರ್ಥೋದ್ಭವಾಃ ಪ್ರಜಾಃ ।
ಧ್ಯಾತ್ವಾಪರೇಣ ರೂಪೇಣ ತತಃ ಸುಷ್ವಾಪ ವೈ ಪ್ರಭುಃ ॥ ೧೧ ॥

ತಸ್ಯ ಸುಪ್ತಸ್ಯ ಜಠರಾನ್ಮಹತ್ಪದ್ಮಂ ವಿನಿಃಸೃತಂ ।
ಸಪ್ತದ್ವೀಪವತೀ ಪೃಥ್ವೀ ಸಸಮುದ್ರಾ ಸಕಾನನಾ ।
ತಸ್ಯ ರೂಪಸ್ಯ ವಿಸ್ತಾರಂ ಪಾತಾಲಾತಲಸಂಸ್ಥಿತಂ ॥ ೧೨ ॥

೭–೯. "ದೇವನೇ, ಸನಾತನನೂ ವಿಷ್ಣುವೂ (ವ್ಯಾಪಕನೂ) ಆದ ನೀನು ಸರ್ವಜ್ಞನೂ, ಸರ್ವಕರ್ತೃವೂ, ಸರ್ವಲೋಕ ನಮಸ್ಕೃತನೂ, ತ್ರಿಲೋಕ ಪರಿಪಾಲಕನೂ ಆಗು ಯಾವಾಗಲೂ ದೇವತೆಗಳಿಗೂ, ಬ್ರಹ್ಮನಿಗೂ ನೀನು ಸಹಾಯಕಾರ್ಯಗಳನ್ನು ಮಾಡಬೇಕೆಂಬುದರಲ್ಲಿ ಸಂದೇಹವಿಲ್ಲ" ಎಂದು ಹೇಳಿ ತಾನು ಸ್ವಸ್ವರೂಪವನ್ನು ಪಡೆದನು.

೧೦–೧೧. ಪ್ರಭುವೂ, ಮಹಾತಪನೂ ಆದ ಆ ವಿಷ್ಣುವು ಆಗ ಹಿಂದಿನ ಯೋಗನಿದ್ರೆಯ ಬುದ್ಧಿಯನ್ನು ಜ್ಞಾಪಿಸಿಕೊಂಡು, ಇಂದ್ರಿಯ ಪ್ರಯೋಜನೋತ್ಪನ್ನರಾದ ಪ್ರಜೆಗಳನ್ನು ಅದರಲ್ಲಿ ನಿಲ್ಲಿಸಿ, ಬಳಿಕ ಯೋಚಿಸಿ, ಬೇರೆಯ ರೂಪದಿಂದ ನಿದ್ರಿಸಿದನು.

೧೨. ನಿದ್ರಿಸಿದ ಅವನ ಉದರದಿಂದ ದೊಡ್ಡದಾದ ಕಮಲವು ಉದಿಸಿತು. ಅದು ಸಪ್ತದ್ವೀಪಗಳಿಂದಲೂ, ಸಮುದ್ರಗಳಿಂದಲೂ, ವನಗಳಿಂದಲೂ ಕೂಡಿದ ಪೃಥ್ವಿಯಷ್ಟು ವಿಸ್ತಾರವುಳ್ಳದಾಗಿ ಪಾತಾಳಾತಳವನ್ನು ಮುಟ್ಟಿದ್ದಿತು.

ಕರ್ಣಿಕಾಯಾಂ ತಥಾ ಮೇರುಸ್ತನ್ಮಧ್ಯೇ ಬ್ರಹ್ಮಣೋ ಭವಃ ॥ ೧೩ ॥

ಏವಂ ದೃಷ್ಟ್ವಾಪರಂ ತಸ್ಯ ಶರೀರಸ್ಯ ತು ಸಂಭವಂ ।
ಮುಮುದೇ ತಚ್ಛರೀರಸ್ಥೋ ವಾಯುರ್ವಾರ್ಕ್ಯಂ* ಸಸರ್ಜ ಹ ॥ ೧೪ ॥

ಅವಿದ್ಯಾವಿಜಯಂಚೇಮಂ ಶಂಖರೂಪೇಣ ಧಾರಯ ।
ಅಜ್ಞಾನಚ್ಛೇದನಾರ್ಥಾಯ ಖಡ್ಗಂ ತೇಸ್ತು ಸದಾಕರೇ ॥
ಕಾಲಚಕ್ರಮಯಂ ಘೋರಂ ಚಕ್ರಂ ತದ್ಧಾರಯಾಚ್ಯುತ ॥ ೧೫ ॥

ಅಧರ್ಮರಾಜಘಾತಾರ್ಥಂ ಗದಾಂ ಧಾರಯಕೇಶವ ॥ ೧೬ ॥

ಮಾಲೇಯಂ ಭೂತಮಾತಾ ತೇ ಕಂಠೇ ತಿಷ್ಠತು ಸರ್ವದಾ ।
ಶ್ರೀವತ್ಸಕೌಸ್ತುಭೌ ಚೇಮೌ ಚಂದ್ರಾದಿತ್ಯೌ‡ಖಿಲೇನ ಹ ॥ ೧೭ ॥

---

೧೩. ಅದರ ಕರ್ಣಿಕೆಯ ಮೇಲೆ ಮೇರುವಿದ್ದಿತು. ಅದರ ನಡುವೆ ಬ್ರಹ್ಮನ ಉದಯ.

೧೪. ಹೀಗೆ ಆ ವಿಷ್ಣುವಿನ ದೇಹದಿಂದ ಬೇರೊಂದು ದೇಹವು ಉದಿಸಿದುದನ್ನು ನೋಡಿ ಆ ದೇಹದಲ್ಲಿದ್ದ ವಾಯುವು ಸಂತೋಷಪಟ್ಟನು.

೧೫. ಅಲ್ಲದೆ, "ನಾಶರಹಿತನೇ, ಈ ಅವಿದ್ಯಾವಿಜಯವನ್ನು ಶಂಖವಾಗಿ ಧರಿಸು. ಅಜ್ಞಾನವನ್ನು ಛೇದಿಸುವುದಕ್ಕಾಗಿ ನಿನ್ನ ಕಯ್ಯಲ್ಲಿ ಯಾವಾಗಲೂ ಕತ್ತಿಯಿರಲಿ. ಕಾಲಚಕ್ರಮಯವಾದ ಭಯಂಕರವಾದ ಈ ಚಕ್ರವನ್ನು ಧರಿಸು.

೧೬. ಕೇಶವನೇ, ಅಧರ್ಮರಾಜನ ಕೊಲೆಗಾಗಿ, ಗದೆಯನ್ನು ಧರಿಸು.

೧೭. ಭೂತಮಾತೆಯಾದ ಈ ವನಮಾಲೆಯು ಯಾವಾಗಲೂ ನಿನ್ನ ಕೊರಳಿನಲ್ಲಿರಲಿ. ಚಂದ್ರಸೂರ್ಯರು ಶ್ರೀವತ್ಸಕೌಸ್ತುಭವೇಷದಿಂದ ನಿನ್ನ ಎದೆಯಲ್ಲಿರಲಿ.

---

* ವಾಯು.

‡ ಚಂದ್ರಾದಿತ್ಯಚ್ಛಲೇನ.

ಮಾರುತಸ್ತೇ ಗತಿರ್ವೀರ ಗರುತ್ಮಾನ್ಸ ಚ ಕೀರ್ತಿತಃ ।
ತ್ರೈಲೋಕ್ಯಗಾಮಿನೀ ದೇವೀ ಲಕ್ಷ್ಮೀಸ್ತೇಽಸ್ತು ಸದಾಶ್ರಯೇ ॥
ದ್ವಾದಶೀ ಚ ತಿಥಿಸ್ತೇಽಸ್ತು ಕಾಮರೂಪೀ ಚ ಜಾಯತೇ ॥ ೧೮ ॥

ಘೃತಾಶನೋ ಭವೇದ್ಯಸ್ತು ದ್ವಾದಶ್ಯಾಂ ತ್ವತ್ಪರಾಯಣಃ ॥ ೧೯ ॥

ಸ ಸ್ವರ್ಗವಾಸೀ ಭವತು ಪುಮಾನ್ ಸ್ತ್ರೀ ವಾ ವಿಶೇಷತಃ ।
ಸ ಚ ವಿಷ್ಣುಸ್ತದಾಖ್ಯಾತೋ ಮೂರ್ತಯೋ ದೇವದಾನವಾಃ ॥ ೨೦ ॥

ಹಂತಿ ಪಾತಿ ಶರೀರಾಣಿ ಸೃಜತ್ಯನ್ಯಾನಿ ಚಾತ್ಮನಃ ।
ಯುಗೇ ಯುಗೇ ಸರ್ವಗೋಽಯಂ ವೇದಾಂತಪುರುಷೋಹ್ಯಸೌ ॥ ೨೧ ॥

ನ ಹೀನಬುದ್ಧ್ಯಾ ವಕ್ತವ್ಯೋ ಮನುಷ್ಯೋಽಯಂ ಕದಾಚನ ॥ ೨೨ ॥

---

೧೮. ನಿನ್ನ ವಾಹನವಾದ ವಾಯುವು ಗರುಡನೆನಿಸಿಕೊಳ್ಳುವನು. ತ್ರಿಲೋಕಸಂಚಾರಿಣಿಯಾದ ಈ ಲಕ್ಷ್ಮೀದೇವಿಯು ಯಾವಾಗಲೂ ನಿನ್ನ ಆಶ್ರಯದಲ್ಲಿರುವವಳಾಗಲಿ. ದ್ವಾದಶೀತಿಥಿಯು ನಿನಗೆ ಮೀಸಲಾಗಿರಲಿ. ಕಾಮರೂಪಿಯು ನಿನಗೆ ಪುತ್ರನಾಗಿ ಉದಿಸುವನು.

೧೯–೨೦. ದ್ವಾದಶೀದಿನ ಪುರುಷನಾಗಲೀ, ಸ್ತ್ರೀಯಾಗಲೀ, ನಿನ್ನಲ್ಲಿ ಭಕ್ತಿಯುಳ್ಳವರಾಗಿ ತುಪ್ಪವನ್ನು ಮಾತ್ರ ಆಹಾರವಾಗಿ ತೆಗೆದುಕೊಂಡಿರುವರಾದರೆ ಅವರು ಸ್ವರ್ಗವನ್ನು ಪಡೆಯಲಿ" ಎಂದು ಆ ವಿಷ್ಣುವಿಗೆ ಹೇಳಿದನು.

೨೧–೨೨. "ದೇವದಾನವಮೂರ್ತಿಗಳೇ, ಇವನು ಉಪನಿಷತ್ಪ್ರತಿಪಾದ್ಯನಾದ ಪುರುಷನಲ್ಲವೆ ! ಸರ್ವಾಂತರ್ಯಾಮಿಯಾದ ಇವನು ಯುಗಯುಗದಲ್ಲೂ ತನ್ನ ದೇಹಗಳನ್ನು ರಕ್ಷಿಸುತ್ತಾನೆ. ಸಂಹರಿಸುತ್ತಾನೆ. ಬೇರೆಯಾದ ದೇಹಗಳನ್ನು ಧರಿಸುತ್ತಾನೆ. ಹೀನಬುದ್ಧಿಯಿಂದ ಇವನನ್ನು ಮನುಷ್ಯನೆಂದು ಎಂದಿಗೂ ಹೇಳಬಾರದು" ಎಂದನು.

ಯ ಏವ ಶೃಣುಯಾತ್ಸರ್ಗಂ *ವೈಷ್ಣವಂ ಪಾಪನಾಶನಂ |
ಸ ಕೀರ್ತಿಮಿಹ ಸಂಪ್ರಾಪ್ಯ ಸ್ವರ್ಗಲೋಕೇ ಮಹೀಯತೇ || ೨೩ ||

ಇತಿ ಶ್ರೀ ವರಾಹಪುರಾಣೇ ಆದಿಕೃತವೃತ್ತಾಂತೇ ಮಹಾತಪ ಉಪಾಖ್ಯಾನೇ ಪರಾಪರನಿರ್ಣಯೋನಾಮ ಏಕತ್ರಿಂಶೋಽಧ್ಯಾಯಃ

---

೨೩. ಪಾಪನಾಶಕವಾದ ಈ *ವೈಷ್ಣವ ಸರ್ಗವನ್ನು ಕೇಳುವವರು ಈ ಲೋಕದಲ್ಲಿ ಕೀರ್ತಿಯನ್ನು ಪಡೆದು, ಸ್ವರ್ಗಲೋಕದಲ್ಲೂ ಮೇಲ್ಮೆಯನ್ನು ಪಡೆಯುವರು.

ಅಧ್ಯಾಯದ ಸಾರಾಂಶ:—

ಈ ಅಧ್ಯಾಯದಲ್ಲಿ ಮಹಾತಪಮುನಿಯು ಪ್ರಜಾಪಾಲನಿಗೆ—ಸಾಕ್ಷಾತ್ ಪರಬ್ರಹ್ಮನಾದ ನಾರಾಯಣನೇ ಜಗದ್ರಕ್ಷಣೆಗಾಗಿ ವಿಷ್ಣುವಾದನೆಂದು ಹೇಳಿ, ಅವನ ಪತ್ನಿವಾಹನಾಯುಧಾದಿಗಳನ್ನೂ, ಕಾರ್ಯಗಳನ್ನೂ ವಿಷ್ಣುವಿಗೆ ದ್ವಾದಶೀ ತಿಥಿಯು ಮೀಸಲಾಗಿದೆಯೆಂಬುದನ್ನೂ ಹೇಳಿರುವನು. ಇಲ್ಲಿಗೆ ಶ್ರೀ ವರಾಹ ಪುರಾಣದಲ್ಲಿ ಮೂವತ್ತೊಂದನೆಯ ಅಧ್ಯಾಯ.

---

* ವೈಷ್ಣವಸರ್ಗ = ವಿಷ್ಣುವಿನ ಸೃಷ್ಟಿ, ವಿಷ್ಣುವಿನ ವಿಚಾರದ ಅಧ್ಯಾಯ.

॥ ಶ್ರೀಃ ॥

-X-

ದ್ವಾತ್ರಿಂಶೋಽಧ್ಯಾಯಃ

ಅಥ ಧರ್ಮೋತ್ಪತ್ತಿಃ

॥ ಮಹಾತಪಾ ಉವಾಚ ॥

ಅಥೋತ್ಪತ್ತಿಂ ಪ್ರವಕ್ಷ್ಯಾಮಿ ಧರ್ಮಸ್ಯ ಮಹತೋ ನೃಪ ।
ಮಾಹಾತ್ಮ್ಯಂ ಚ ತಿಥಿಂ ಚೈವ ತನ್ನಿಬೋಧ ನರಾಧಿಪ ॥ ೧ ॥

ಪೂರ್ವಂ ಬ್ರಹ್ಮಾವ್ಯಯಃ ಶುದ್ಧಃ ಪರಾದಪರಸಂಜ್ಞಿತಃ ।
ಸ ಸಿಸೃಕ್ಷುಃ ಪ್ರಜಾಸ್ತ್ವಾದೌ ಪಾಲನಂ ಚ ವಿಚಿಂತಯನ್ ॥ ೨ ॥

ತಸ್ಯ ಚಿಂತಯತಸ್ತ್ವಂಗಾದ್ದಕ್ಷಿಣಾಚ್ಛ್ವೇತಕುಂಡಲಃ ।
ಪ್ರಾದುರ್ಬಭೂವ ಪುರುಷಃ ಶ್ವೇತಮಾಲ್ಯಾನುಲೇಪನಃ ॥ ೩ ॥

ಮೂವತ್ತೆರಡನೆಯ ಅಧ್ಯಾಯ

ಧರ್ಮೋತ್ಪತ್ತಿ

೧. ಮಹಾತಪಮುನಿ—ದೊರೆಯೇ, ಇನ್ನು ಮಹಾಧರ್ಮದ ಉತ್ಪತ್ತಿಯನ್ನೂ, ಮಹಿಮೆಯನ್ನೂ ತಿಥಿಯನ್ನೂ ಹೇಳುವೆನು. ಕೇಳು.

೨-೩. ಪೂರ್ವದಲ್ಲಿ ನಾಶರಹಿತನೂ, ಶುದ್ಧನೂ ಆದ ಪರಾತ್ಪರಬ್ರಹ್ಮನು ಪ್ರಜೆಗಳನ್ನು ಸೃಷ್ಟಿಸಲಿಚ್ಛಿಸಿ, ಅವರ ಪಾಲನೆಯ ವಿಚಾರವನ್ನು ಯೋಚಿಸುತ್ತಿರಲು ಅವನ ದೇಹದ ಬಲಭಾಗದಿಂದ ಬೆಳ್ಳಗಿರುವ ಕರ್ಣಾಭರಣವುಳ್ಳವನೂ, ಬಿಳಿಯ ಗಂಧಮಾಲೆಗಳನ್ನು ಧರಿಸಿದವನೂ ಆದ ಪುರುಷನೊಬ್ಬನು ಉದಿಸಿದನು.

ತಂ ದೃಷ್ಟ್ವೋವಾಚ ಭಗವಾಂಶ್ಚತುಷ್ಪಾದಂ ವೃಷಾಕೃತಿಂ ।
ಪಾಲಯೇಮಾಃ ಪ್ರಜಾಃ ಸಾಧೋ ತ್ವಂ ಜ್ಯೇಷ್ಠೋ ಜಗತೋ ಭವ ॥ ೪ ॥

ಇತ್ಯುಕ್ತಃ ಸಮುವಸ್ಥೋಽಸೌ ಚತುಷ್ಪಾತ್ಸ್ಯಾತ್ಕೃತೇ ಯುಗೇ ।
ತ್ರೇತಾಯಾಂ ತ್ರಿಪದಶ್ಚಾಸೌ ದ್ವಿಪದೋ ದ್ವಾಪರೇ ಭವತ್ ॥ ೫ ॥

ಕಲಾವೇಕೇನ ಪಾದೇನ ಪ್ರಜಾಃ ಪಾಲಯತೇ ಪ್ರಭುಃ ॥ ೬ ॥

ಷಡ್ಭೇದೋ ಬ್ರಾಹ್ಮಣಾನಾಂ ಸ ತ್ರಿಧಾ ಕ್ಷತ್ರೇ ವ್ಯವಸ್ಥಿತಃ ।
ದ್ವಿಧಾ ವೈಶ್ಯೇ ತಥಾ ಶೂದ್ರೇ ಏಕಸ್ಸರ್ವಗತಃ ಸ್ಥಿತಃ ॥ ೭ ॥

ರಸಾತಲೇಷು ಸರ್ವೇಷು ದ್ವೀಪವರ್ಷೇಷ್ವಯಂ ಪ್ರಭುಃ ।
ಗುಣದ್ರವ್ಯಕ್ರಿಯಾಜಾತಿ ಚತುಷ್ಪಾತ್ಸಂಪ್ರಕೀರ್ತಿತಃ ॥ ೮ ॥

---

೪. ನಾಲ್ಕು ಪಾದಗಳುಳ್ಳ ವೃಷಭಾಕೃತಿಯ ಅವನನ್ನು ನೋಡಿ, ಭಗವಂತನು "ಸಾಧುವೇ, ನೀನು ಈ ಪ್ರಜೆಗಳನ್ನು ಪಾಲಿಸು. ನೀನು ಪ್ರಪಂಚಕ್ಕೆ ಹಿರಿಯನಾಗು" ಎಂದು ಹೇಳಿದನು.

೫. ಹೀಗೆ ಹೇಳಿಸಿಕೊಂಡ ಸರಿಯಾದ ರೂಪವುಳ್ಳ ಆ ಧರ್ಮಪ್ರಭುವು ಕೃತಯುಗದಲ್ಲಿ ನಾಲ್ಕು ಪಾದಗಳುಳ್ಳವನಾಗಿಯೇ ಇದ್ದು, ತ್ರೇತಾಯುಗದಲ್ಲಿ ಮೂರು ಪಾದಗಳುಳ್ಳವನಾಗಿಯೂ, ದ್ವಾಪರಯುಗದಲ್ಲಿ ಎರಡು ಪಾದಗಳುಳ್ಳವನಾಗಿಯೂ ಆದನು.

೬. ಆ ಪ್ರಭುವು ಕಲಿಯುಗದಲ್ಲಿ ಒಂದೇ ಪಾದದಿಂದ ಪ್ರಜೆಗಳನ್ನು ಪಾಲಿಸುವನು.

೭. ಆ ಧರ್ಮಪ್ರಭು ಬ್ರಾಹ್ಮಣರಿಗೆ ಆರು ಬಗೆಯಾಗಿಯೂ, ಕ್ಷತ್ರಿಯರಿಗೆ ಮೂರು ಬಗೆಯಾಗಿಯೂ, ವೈಶ್ಯರಲ್ಲಿ ಎರಡು ವಿಧವಾಗಿಯೂ, ಶೂದ್ರರಲ್ಲಿ ಒಂದೇ ವಿಧವಾಗಿಯೂ ಎಲ್ಲೆಲ್ಲೂ ಇರುವನು.

೮. ರಸಾತಲಾದಿ ಅಧೋಲೋಕಗಳಲ್ಲೂ, ಎಲ್ಲಾ ದ್ವೀಪಗಳಲ್ಲೂ, ವರ್ಷಗಳಲ್ಲೂ, ಆ ಧರ್ಮಪ್ರಭುವು ಗುಣ ದ್ರವ್ಯ ಕ್ರಿಯಾ ಜಾತಿಗಳೆಂಬ ನಾಲ್ಕು ಪಾದಗಳುಳ್ಳವನೆಂದೆನಿಸಿಕೊಳ್ಳುವನು.

ತ್ರಿಶೃಂಗೋಽಸೌ ಸ್ಮೃತೋ ವೇದೇ ಸ ಸಂಹಿತಪದಕ್ರಮಃ ।
ತಥಾ ಆದ್ಯಂತ ಓಂಕಾರ ದ್ವಿಶಿರಾಃ ಸಪ್ತಹಸ್ತವಾನ್ ॥
ಉದಾತ್ತಾದಿತ್ರಿಭಿರ್ಬದ್ಧ ಏವಂ ಧರ್ಮೋ ವ್ಯವಸ್ಥಿತಃ ॥ ೯ ॥

ಸ ಧರ್ಮಃ ಪೀಡಿತಃ ಪೂರ್ವಂ ಸೋಮೇನಾದ್ಭುತಕರ್ಮಣಾ ।
ತಾರಾಂ ಜಿಘೃಕ್ಷುಣಾ ಪತ್ನೀಂ ಭ್ರಾತುರಂಗಿರಸಸ್ಯ ಚ ॥ ೧೦ ॥

ಸೋಽಪಾಯಾದ್ಭ್ರಂಶಿತಸ್ತೇನ ಬಲಿನಾ ಕ್ರೂರಕರ್ಮಣಾ ।
ಅರಣ್ಯಂ ಗಹನಂ ಘೋರಮಾವಿವೇಶ ತದಾ ಪ್ರಭುಃ ॥ ೧೧ ॥

ತಸ್ಮಿನ್ಗತೇ ಸುರಾಸ್ಸರ್ವೇ ಅಸುರಾಣಾಂತು ಪತ್ತಯಃ ।
ಜಿಘೃಕ್ಷಂತಸ್ತದೌಕಾಂಸಿ ಬಭ್ರಮುರ್ಧರ್ಮವಂಚಿತಾಃ ॥ ೧೨ ॥

---

೯. ವೇದದಲ್ಲಿ ಸಂಹಿತೆಪದಕ್ರಮಗಳೆಂಬ ಮೂರು ಶೃಂಗ(ಕೋಡು)ಗಳುಳ್ಳವನೆಂದು ಹೇಳಿಸಿಕೊಂಡಿರುವನು. ವೇದದ ಆದ್ಯಂತಗಳ ಓಂಕಾರಗಳೆಂಬ ಎರಡು ತಲೆಗಳುಳ್ಳವನು ಏಳು ಕೈಗಳುಳ್ಳವನು. ಉದಾತ್ತಾನುದಾತ್ತ ಸ್ವರಿತಗಳೆಂಬ ಮೂರು ಸ್ವರಗಳಿಂದ ಬಂಧಿತನಾದವನು. ಇದು ಧರ್ಮದ ಸ್ಥಿತಿ.

೧೦. ಪೂರ್ವದಲ್ಲಿ ಸಹೋದರನಾದ ಬೃಹಸ್ಪತಿಯ ಹೆಂಡತಿಯಾದ ತಾರೆಯನ್ನು ಅಪಹರಿಸಲಿಚ್ಛಿಸಿದ ಅದ್ಭುತಕರ್ಮನಾದ ಚಂದ್ರನು ಆ ಧರ್ಮನನ್ನು ಪೀಡಿಸಿದನು.

೧೧. ಬಳಿಕ ಕ್ರೂರಕರ್ಮಿಯಾದ ಬಲಿಯು ಅವನನ್ನು ಅಪಾಯದಿಂದ ತಪ್ಪಿಸಿದನು. ಆಮೇಲೆ ಧರ್ಮಪ್ರಭುವು ಘೋರವಾದ ಅರಣ್ಯವನ್ನು ಹೊಕ್ಕನು.

೧೨. ಅವನು ಹೊರಟುಹೋಗಲು ಎಲ್ಲಾ ದೇವತೆಗಳೂ, ಧರ್ಮವನ್ನು ಬಿಟ್ಟು, ಧರ್ಮದ ಸ್ಥಾನವನ್ನೂ ಅಸುರರ ಸ್ಥಾನಗಳನ್ನೂ ಅಪಹರಿಸಲು ಬಯಸಿ ಅಲೆದರು.

ಅಸುರಾ ಅಪಿ ತದ್ವಚ್ಚ ಸುರವೇಶ್ಮನಿ ಬಭ್ರಮುಃ ।
ನಿರ್ಮರ್ಯಾದೇ ತಥಾಜಾತೇ ಧರ್ಮನಾಶೇ ಚ ಪಾರ್ಥಿವ ॥ ೧೩ ॥

ದೇವಾಸುರಾ ಯುಯುಧಿರೇ ಸೋಮದೋಷೇಣ ಕೋಪಿತಾಃ ।
ಸ್ತ್ರೀಹೇತೋಶ್ಚ ಮಹಾಭಾಗ ವಿವಿಧಾಯುಧಪಾಣಯಃ ॥ ೧೪ ॥

ತಾನ್ ದೃಷ್ಟ್ವಾ ಯುಧ್ಯತೋ ದೇವಾನಸುರೈಃ ಸಹ ಕೋಪಿತಾನ್ ।
ನಾರದಃ ಪ್ರಾಹ ಸಂಗಮ್ಯ ಪಿತರಂ ಪ್ರತಿ ಹರ್ಷಿತಃ ॥ ೧೫ ॥

ಸ ಹಂಸಯಾನಮಾರುಹ್ಯ ಸರ್ವಲೋಕಪಿತಾಮಹಃ ।
ನಿವಾರಯಾಮಾಸ ತದಾ ಕಸ್ಯಾರ್ಥೇ ಯುದ್ಧಮುದ್ಯ ವಃ ॥ ೧೬ ॥

---

೧೩. ರಾಜನೇ, ಧರ್ಮನಾಶವಾಗಲು, ನಿಯಮವಿಲ್ಲದೆ ಸ್ವೇಚ್ಛೆಯಿಂದ ಅಸುರರೂ ಹಾಗೆಯೇ ದೇವತೆಗಳ ನೆಲೆಗಳಲ್ಲಿ ಅಲೆದರು.

೧೪ ಚಂದ್ರನ ದೋಷದಿಂದ ಕೋಪಗೊಂಡ ದೇವತೆಗಳೂ, ರಾಕ್ಷಸರೂ ಬಗೆಬಗೆಯ ಆಯುಧಗಳನ್ನು ಹಿಡಿದು ಸ್ತ್ರೀನಿಮಿತ್ತದಿಂದಲೂ ಯುದ್ಧ ಮಾಡಿದರು.

೧೫. ಕೋಪಿಸಿಕೊಂಡು ರಾಕ್ಷಸರೊಡನೆ ಯುದ್ಧಮಾಡುತ್ತಿರುವ ಆ ದೇವತೆಗಳನ್ನು ನೋಡಿ, ನಾರದನು ಸಂತೋಷಗೊಂಡು ತಂದೆಯಾದ ಬ್ರಹ್ಮನ ಹತ್ತಿರಕ್ಕೆ ಹೋಗಿ ಹೇಳಿದನು.

೧೬. ಸರ್ವಲೋಕಕ್ಕೂ ಪಿತಾಮಹ (ಅಜ್ಜ)ನಾದ ಬ್ರಹ್ಮನು ತನ್ನ ವಾಹನವಾದ ಹಂಸವನ್ನೇರಿ ಬಂದು, ಯುದ್ಧವನ್ನು ತಪ್ಪಿಸಿ, 'ನಿಮಗೆ ಏತಕ್ಕಾಗಿ ಯುದ್ಧ,' ಎಂದನು.

ಸರ್ವೇ ಶಶಂಸುಃ ಸೋಮಂತು ಸತು ಬುದ್ಧ್ವಾ ಸ್ವಕಂ ಸುತಂ ।
ಪೀಡನಾದಪಯಾತಂ ತು ಗಹನಂ ವನಮಾಶ್ರಿತಂ ।
ತತೋ ಬ್ರಹ್ಮಾ ಯಯೌ ತತ್ರ ದೇವಾಸುರಯುತೋಂಜಸಾ ॥ ೧೭ ॥

ದದರ್ಶ ಚ ಸುರೈಸ್ಸಾರ್ಧಂ ಚತುಷ್ಪಾದಂ ವೃಷಾಕೃತಿಂ ।
ಚರಂತಂ ಶಶಿಸಂಕಾಶಂ ದೃಷ್ಟ್ವಾ ದೇವಾನುವಾಚ ಹ ॥ ೧೮ ॥

॥ ಬ್ರಹ್ಮೋವಾಚ ॥

ಅಯಂ ಮೇ ಪ್ರಥಮಃ ಪುತ್ರಃ ಪೀಡಿತಃ ಶಶಿನಾ ಭೃಶಂ ।
ಪತ್ನೀಂ ಪಿತೃಕ್ಷುಣಾ ಭ್ರಾತುರ್ಧರ್ಮಸಂಜ್ಞೋ ಮಹಾಮುನಿಃ ॥ ೧೯ ॥

ಇದಾನೀಂ ತೋಷಯಧ್ವಂ ತಂ ಸರ್ವ ಏವ ಸುರಾಸುರಾಃ ।
ಯೇನ ಸ್ಥಿತಿರ್ವ್ಯೈ ಭವತಿ ಸಮಂ ದೇವಾಸುರಾ ಇತಿ ॥ ೨೦ ॥

ತತಸ್ಸರ್ವೇ ಸ್ತುತಿಂ ಚಕ್ರುಸ್ತಸ್ಯ ದೇವಸ್ಯ ಹರ್ಷಿತಾಃ ।
ವಿದಿತ್ವಾ ಬ್ರಹ್ಮಣೋ ವಾಕ್ಯಾತ್ಸಂಪೂರ್ಣಶಶಿಸನ್ನಿಭಂ ॥ ೨೧ ॥

---

೧೭. ಎಲ್ಲರೂ ಚಂದ್ರನಮೇಲೆ ಹೇಳಿದರು. ಬ್ರಹ್ಮನು ಬುದ್ಧಿವಂತಿಕೆಯಿಂದ ಆ ದೇವಾಸುರರೆಲ್ಲರೊಡನೆ ಬೇಗನೆ, ಚಂದ್ರಪೀಡನದಿಂದ ಘೋರಾರಣ್ಯವನ್ನು ಆಶ್ರಯಿಸಿದ ತನ್ನ ಮಗನಾದ ಧರ್ಮನಿದ್ದೆಡೆಗೆ ಹೋದನು.

೧೮. ಅಲ್ಲಿ ನಾಲ್ಕುಪಾದಗಳುಳ್ಳ ವೃಷಭಾಕಾರದಿಂದ ಚಂದ್ರನಂತೆ ಹೊಳೆಯುತ್ತ ಸಂಚರಿಸುತ್ತಿದ್ದ (ಅಥವಾ ಮೇಯುತ್ತಿದ್ದ) ಅವನನ್ನು ಕಂಡು, ದೇವತೆಗಳನ್ನು ಕುರಿತು ಹೇಳಿದನು.

೧೯–೨೦. "ಬ್ರಹ್ಮ—ದೇವಾಸುರರೇ, ಸಹೋದರನ ಹೆಂಡತಿಯನ್ನು ಪಹರಿಸಲಿಚ್ಛೆಯುಳ್ಳ ಚಂದ್ರನು ನನ್ನ ಹಿರಿಯಮಗನಾದ ಧರ್ಮನೆಂಬ ಹೆಸರುಳ್ಳ ಮಹರ್ಷಿಯನ್ನು ಹೆಚ್ಚಾಗಿ ತೊಂದರೆಪಡಿಸಿದನು. ಈಗ ಸಮಾಧಾನಸ್ಥಿತಿಗೆ ಬರುವಂತೆ ಧರ್ಮನನ್ನು ದೇವಾಸುರರೆಲ್ಲರೂ ಸಂತೋಷಪಡಿಸಿರಿ."

೨೧. ಬ್ರಹ್ಮನ ಈ ಮಾತನ್ನು ಕೇಳಿ, ತಿಳಿದ ಎಲ್ಲರೂ ಹರ್ಷವುಳ್ಳವರಾಗಿ ಪೂರ್ಣಚಂದ್ರನಂತಿರುವ ಆ ಧರ್ಮದೇವನನ್ನು ಸ್ತುತಿಸಿದರು.

॥ ದೇವಾ ಊಚುಃ ॥

ನಮೋಸ್ತು ಶಶಿಸಂಕಾಶ ನಮಸ್ತೇ ಜಗತಃ ಪತೇ ॥ ೨೨ ॥

ನಮೋಸ್ತು ದೇವರೂಪಾಯ ಸ್ವರ್ಗಮಾರ್ಗಪ್ರದರ್ಶಕ ।
ಕರ್ಮಮಾರ್ಗಸ್ವರೂಪಾಯ ಸರ್ವಗಾಯ ನಮೋ ನಮಃ ॥ ೨೩ ॥

ತ್ವಯ್ಯೈವ ಪಾಲ್ಯತೇ ಪೃಥ್ವೀ ತ್ರೈಲೋಕ್ಯಂ ಚ ತ್ವಯ್ಯೈವ ಹಿ ।
ಜನಸ್ತಪಸ್ತಥಾ ಸತ್ಯಂ ತ್ವಯಾ ಸರ್ವಂ ತು ಪಾಲ್ಯತೇ ॥ ೨೪ ॥

ನ ತ್ವಯಾರಹಿತಂ ಕಿಂಚಿಜ್ಜಗತ್ ಸ್ಥಾವರಜಂಗಮಮ್ ।
ವಿದ್ಯತೇ ತ್ವದ್ವಿಹೀನಂ ತು ಸದ್ಯೋ ನಶ್ಯತಿ ವೈ ಜಗತ್ ॥ ೨೫ ॥

ತ್ವಮಾತ್ಮಾ ಸರ್ವಭೂತಾನಾಂ ಸತಾಂ ಸತ್ವಸ್ವರೂಪವಾನ್ ।
ರಾಜಸೀನಾಂ ರಜಸ್ತ್ವಂ ಚ ತಾಮಸೀನಾಂ ತಮೋಮಯಃ ॥ ೨೬ ॥

ಚತುಷ್ಪಾದೋ ಭವಾನ್ವೇದಃ ಚತುಃಶೃಂಗಸ್ತ್ರಿಲೋಚನಃ ।
ಸಪ್ತಹಸ್ತಸ್ತ್ರಿಬಂಧಶ್ಚ ವೃಷರೂಪ ನಮೋಸ್ತು ತೇ ॥ ೨೭ ॥

೨೨-೨೩. ದೇವತೆಗಳು—ವಂದನಂ ಚಂದ್ರಸದೃಶ, ವಂದನಂ ಜಗತೀಪತೀ. ವಂದನಂ ದೇವರೂಪಂಗೆ, ಸ್ವರ್ಗಮಾರ್ಗವ ತೋರ್ಪಗೆ. ಕರ್ಮಮಾರ್ಗಸ್ವರೂಪಂಗೆ, ಸರ್ವಗಂಗತಿವಂದನಂ.

೨೪. ಭೂಮಿಯುಂ ನೀನೆ ಪಾಲಿಪ್ಪೈ ಮೂರುಲೋಕಂಗಳೆಲ್ಲಮುಂ. ಜನಮುಂ ತಪಮುಂ ಸತ್ಯಲೋಕಮುಂ ನೀನೆ ಪಾಲಿಪ್ಪೈ.

೨೫. ನೀನಿಲ್ಲದಿರ್ಪುದೊಂದಿಲ್ಲಂ ಜಗದೊಳ್ಚರಾಚರಂ. ನೀನಿಲ್ಲದಿರ್ಪಲೋಕಂ ತಾಂ ಕೂಡೆ ನಾಶಮನೊಂದುಗುಂ.

೨೬. ನೀನಾತ್ಮನೆಲ್ಲಭೂತಕ್ಕಂ ಸಂತರೊಳ್ಸತ್ವರೂಪನುಂ. ರಾಜಸರ್ಗಂ ರಜೋರೂಪಂ ತಾಮಸರ್ಗೆ ತಮೋಮಯುಂ.

೨೭. ನಾಲ್ಕುಪಾದದ ವೇದಂ ನೀಂ, ನಾಲ್ಕೋಡಂ, ಮೂರುಕಣ್ಣನುಂ. ಸಪ್ತಹಸ್ತ, ತ್ರಿಬಂಧಾತ್ಮ, ವೃಷರೂಪನೆ, ವಂದನಂ.

ತ್ವಯಾ ಹೀನಾ ವಯಂ ದೇವ ಸರ್ವ ಉನ್ಮಾರ್ಗವರ್ತಿನಃ ।
‡ಸನ್ಮಾರ್ಗಂ ಯಚ್ಚ ಮೂಢಾನಾಂ ತ್ವಂಹಿನಃ ಪರಮಾಗತಿಃ ॥ ೨೮ ॥

ಏವಂ ಸ್ತುತಸ್ತದಾ ದೇವೈಃ ವೃಷರೂಪೀ ಪ್ರಜಾಪತಿಃ ।
ತುಷ್ಟಃ ಪ್ರಸನ್ನಮನಸಾ ಶಾಂತಚಕ್ಷುರಭಾಷತ ॥ ೨೯ ॥

ದೃಷ್ಟಮಾತ್ರಾಸ್ತು ತೇ ದೇವಾಃ ಸ್ವಯಂ ಧರ್ಮೇಣ ಚಕ್ಷುಷಾ ।
ಕ್ಷಣೇನ ಗತಸಮ್ಮೋಹಾಃ ಸಮ್ಯಕ್ಸದ್ಧರ್ಮಸಂಹಿತಾಃ ॥ ೩೦ ॥

ಅಸುರಾ ಅಪಿ ತದ್ವಚ್ಚ ತತೋ ಬ್ರಹ್ಮಾಽವದಚ್ಚ ತಂ ।
ಅದ್ಯಪ್ರಭೃತಿ ತೇ ಧರ್ಮ ತಿಥಿರಸ್ತು ತ್ರಯೋದಶೀ ॥ ೩೧ ॥

---

೨೮. ನೀನಿಲ್ಲದಿರೆ ನಾವೆಲ್ಲರ್ ದೇವ, ದುರ್ಮಾರ್ಗಗಾಮಿಗಳ್. ನೀಡು ಸನ್ಮಾರ್ಗಮಂ ನೀನೇ ಮೂಢರ್ಗೆಗತಿಯುತ್ತಮಂ.

೨೯. ಹೀಗೆ ದೇವತೆಗಳಿಂದ ಆಗ ಸ್ತುತನಾದ ವೃಷಭರೂಪನಾದ ಬ್ರಹ್ಮನು ಸಂತೋಷಗೊಂಡು, ಒಲಿದ ಮನದಿಂದ ಶಾಂತದೃಷ್ಟಿಯುಳ್ಳವನಾಗಿ ಮಾತನಾಡಿದನು.

೩೦. ಆ ಧರ್ಮನು ಕಣ್ಣಿನಿಂದ ನೋಡಿದ ಮಾತ್ರಕ್ಕೇ ಆ ದೇವತೆಗಳು ಒಡನೆಯೇ ಮೋಹ(ಅಜ್ಞಾನ)ವನ್ನು ಕಳೆದುಕೊಂಡು ಪೂರ್ಣವಾಗಿ ಸದ್ಧರ್ಮಯುತರಾದರು.

೩೧. ಅಸುರರೂ ಹಾಗೆಯೇ ಸದ್ಧರ್ಮಯುಕ್ತರಾದರು. ಬ್ರಹ್ಮನು ಧರ್ಮ(ವೃಷ)ನನ್ನು ಕುರಿತು ಹೇಳಿದನು—"ಧರ್ಮನೇ, ಇಂದಿನಿಂದ ತ್ರಯೋದಶೀತಿಥಿಯು ನಿನಗೆ ಮೀಸಲಾಗಿರಲಿ.

---

‡ ತನ್ಮಾರ್ಗಂ

ಯಸ್ತ್ವಾಮುಪೋಷ್ಯ ಪುರುಷೋ ಭವಂತಂ ಸಮುಪಾರ್ಚಯೇತ್ ।
ಕೃತ್ವಾ ಪಾಪಸಮಾಚಾರಂ ತಸ್ಮಾನ್ಮುಂಚತಿ ಮಾನವಃ ॥ ೩೨ ॥

ಯಚ್ಚಾರಣ್ಯಮಿದಂ ಧರ್ಮ ತ್ವಯಾ ವ್ಯಾಪ್ತಂ ಚಿರಂ ಪ್ರಭೋ ।
ನಾಮ್ನಾ ಭವಿಷ್ಯತಿ ಹ್ಯೇತದ್ಧರ್ಮಾರಣ್ಯಮಿತಿ ಪ್ರಭೋ ॥ ೩೩ ॥

ಚತುಸ್ತ್ರಿಪಾದ್ವ್ಯೇಕಪಾಚ್ಚ ಪ್ರಭೋತ್ವಂ ।
ಕೃತಾದಿಭಿರ್ಲಕ್ಷ್ಯಸೇ ಯೇನ ಲೋಕೈಃ ।
ತಥಾತಥಾ ಕರ್ಮಭೂಮೌ ನಭಶ್ಚ
ಪ್ರಾಯೋ ಯುಕ್ತೈಸ್ಸ್ವಗೃಹಂ ಪಾಹಿ ವಿಶ್ವಂ ॥ ೩೪ ॥

ಇತ್ಯುಕ್ತಮಾತ್ರಃ ಪ್ರಪಿತಾಮಹೋಧುನಾ
ಸುರಾಸುರಾಣಾಮಥ ಪಶ್ಯತಾಂ ನೃಪ ।
ಅದೃಶ್ಯತಾಮಗಮತ್ಸ್ವಾಲಯಾಂಶ್ಚ
ಜಗ್ಮುಸ್ಸುರಾಃ ಸವೃಷಾ ವೀತಶೋಕಾಃ ॥ ೩೫ ॥

---

೩೨. ತ್ರಯೋದಶಿಯದಿನ ಉಪವಾಸಮಾಡಿ, ನಿನ್ನನ್ನು ಪೂಜಿಸುವ ಮನುಷ್ಯನು ಪಾಪವನ್ನು ಮಾಡಿದರೂ, ಅದರಿಂದ ಮುಕ್ತನಾಗುವನು.

೩೩. ಧರ್ಮಾ, ಪ್ರಭುವೇ, ನೀನು ಈ ಅರಣ್ಯದಲ್ಲಿ ಬಹುಕಾಲವಿದ್ದುದರಿಂದ ಇದಕ್ಕೆ ಧರ್ಮಾರಣ್ಯವೆಂಬ ಹೆಸರಾಗುವುದು.

೩೪. ನೀನು ಲೋಕದಲ್ಲಿ ಕೃತಾದಿಯಾದ ನಾಲ್ಕುಯುಗಗಳಲ್ಲಿ ಅನುಕ್ರಮವಾಗಿ ನಾಲ್ಕು, ಮೂರು, ಎರಡು, ಒಂದು ಪಾದವುಳ್ಳವನಾಗಿ ಕಾಣಿಸಿಕೊಳ್ಳುವುದರಿಂದ ಅದಕ್ಕನುಸಾರವಾಗಿ ಕರ್ಮಭೂಮಿಯಲ್ಲೂ, ಸ್ವರ್ಗಾಕಾಶಗಳಲ್ಲೂ ಇದ್ದುಕೊಂಡು ನಿನ್ನ ಗೃಹವಾದ ವಿಶ್ವವನ್ನು ಪಾಲಿಸು”

೩೫. ಹೀಗೆ ಹೇಳಿ ಕೂಡಲೆ, ದೇವಾಸುರರು ನೋಡುತ್ತಿದ್ದಹಾಗೆಯೇ ಬ್ರಹ್ಮನು ಕಣ್ಮರೆಯಾದನು. ದುಃಖವನ್ನು ಕಳೆದುಕೊಂಡು, ಸಂತೋಷವುಳ್ಳವರಾದ ದೇವತೆಗಳೂ ಧರ್ಮಸಮೇತರಾಗಿ ತಮ್ಮೆಡೆಗೆ ಹೊರಟುಹೋದರು.

ಧರ್ಮೋತ್ಪತ್ತಿಂ ಯ ಇಮಾಂ ಶ್ರಾವಯೀತ
ಪಿತೄನ್ ಶ್ರಾದ್ಧೇ ತರ್ಪಯೀತೈವಮೇವ ।
ತ್ರಯೋದಶ್ಯಾಂ ಪಾಯಸೇನ ಸ್ವಶಕ್ತ್ಯಾ
ಸ್ವರ್ಗಂ ಗತ್ವಾ ದೇವಸಂಘಾನುಪೇಯಾತ್ || ೩೬ ||

ಇತಿ ಶ್ರೀ ವರಾಹಪುರಾಣೇ ಆದಿಕೃತವೃತ್ತಾಂತೇ ಮಹಾತಪ ಉಪಾಖ್ಯಾನೇ ಧರ್ಮೋತ್ಪತ್ತಿರ್ನಾಮ ದ್ವಾತ್ರಿಂಶೋಽಧ್ಯಾಯಃ

---

೩೬. ಈ ಧರ್ಮೋತ್ಪತ್ತಿಯ ಕಥೆಯನ್ನು ಶ್ರಾದ್ಧದಲ್ಲಿ ಪಿತೃಗಳಿಗೆ ಹೇಳುವವನೂ, ತ್ರಯೋದಶೀದಿನ ತನ್ನ ಶಕ್ತಿಗನುಸಾರವಾಗಿ ಪಾಯಸದಿಂದ ಪಿತೃಗಳಿಗೆ ತೃಪ್ತಿಪಡಿಸುವವನೂ, ಸ್ವರ್ಗವನ್ನು ಪಡೆದು, ಅಲ್ಲಿ ದೇವತೆಗಳ ಗುಂಪನ್ನು ಸೇರುವನು.

ಅಧ್ಯಾಯದ ಸಾರಾಂಶ:—ಪ್ರಪಂಚವನ್ನು ಸೃಷ್ಟಿಸಿದ ಪರಬ್ರಹ್ಮನು ಅದರ ರಕ್ಷಣೆಯ ವಿಷಯವನ್ನು ಆಲೋಚಿಸಲು, ಅವನ ದೇಹದ ಬಲಭಾಗದಿಂದ ವೃಷಭರೂಪದಿಂದ ಧರ್ಮವು ಉದಿಸಿತು. ಧರ್ಮವೇ ಪ್ರಪಂಚರಕ್ಷಣೆಗೆ ಮುಖ್ಯವಾದುದೆಂದು ಪರಬ್ರಹ್ಮನು ಪ್ರಜೆಗಳನ್ನೆಲ್ಲಾ ಪಾಲಿಸುವಂತೆ ಆ ಧರ್ಮಕ್ಕೆ ನಿಯಮಿಸಿದನು. ಧರ್ಮವು ಕೃತಾದಿಯಾದ ನಾಲ್ಕುಯುಗಗಳಲ್ಲಿ ಮೊದಲನೆಯದರಲ್ಲಿ ಪೂರ್ಣವಾಗಿದ್ದು, ಕ್ರಮವಾಗಿ ಕಾಲುಪಾಲು (ನಾಲ್ಕನೆಯ ಒಂದುಭಾಗ) ಕಡಿಮೆಯಾಗುತ್ತಾ, ಕಲಿಯುಗದಲ್ಲಿ ನಾಲ್ಕರಲ್ಲಿ ಒಂದುಭಾಗವಾಗುವುದು. ಚಂದ್ರನು, ಗುರುವೂ ಸಹೋದರನೂ ಆದ ಬೃಹಸ್ಪತಿಯ ಪತ್ನಿಯಾದ ತಾರೆಯನ್ನು ಅಪಹರಿಸಿ, ಧರ್ಮದ್ರೋಹವನ್ನು ಮಾಡಿದನು. ಆದುದರಿಂದ ಧರ್ಮವು ಅರಣ್ಯದ ಪಾಲಾಯಿತು. ಎಂದರೆ ಲೋಕದಲ್ಲಿ ಧರ್ಮವೇ ಇಲ್ಲದಂತಾಗಿದ್ದಿತು. ನಾರದನು ಹೇಳಲು ಬ್ರಹ್ಮನು ಅರಣ್ಯಗತವಾಗಿದ್ದ ಧರ್ಮವನ್ನು ಮತ್ತೆ ಕರೆತಂದು ದೇವಾಸುರಾದಿಗಳೆಲ್ಲರನ್ನೂ ರಕ್ಷಿಸುವಂತೆ ಮಾಡಿ, ಲೋಕದಲ್ಲಿ ಧರ್ಮವನ್ನು ನೆಲೆಗೊಳಿಸಿದನು. ಬ್ರಹ್ಮನು ಧರ್ಮನಿಗೆ ತ್ರಯೋದಶೀತಿಥಿಯನ್ನು ಮೀಸಲಾಗಿ ಕೊಟ್ಟನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಮೂವತ್ತೆರಡನೆಯ ಅಧ್ಯಾಯ.

|| ಶ್ರೀಃ ||

-X-

ತ್ರಯಸ್ತ್ರಿಂಶೋಽಧ್ಯಾಯಃ

ಅಥ ರುದ್ರೋತ್ಪತ್ತಿಃ

|| ಸೂತ ಉವಾಚ ||

ಅಥಾಪರಾಂ ರುದ್ರಸಂಭೂತಿಮಾದ್ಯಾಂ
ಶೃಣುಷ್ವೇಮಾಂ ಯತ್ನತಃ ಸೋಽಭ್ಯುವಾಚ ।
ಮಹಾತಪಾಃ ಪಾತಿತಾಽ+ಧರ್ಮವೃಕ್ಷಃ
ಕ್ಷಮಾಸ್ತ್ರಧಾರೀ ಋಷಿರುಗ್ರತೇಜಾಃ || ೧ ||

ಜಾತಃ ಪ್ರಜಾನಾಂ ಪತಿರುಗ್ರತೇಜಾಃ
ಜ್ಞಾನಂ ಪರಂ ತತ್ತ್ವಭಾವಂ ವಿದಿತ್ವಾ ।
ಸೃಷ್ಟಿಂ ಸಿಸೃಕ್ಷುಃ ಕ್ಷುಭಿತೋಽತಿರೋಷಾತ್
ಅವೃದ್ಧಿಕಾಲೇ ಜಗತಃ ಪ್ರಕಾಮಂ || ೨ ||

ಮೂವತ್ತಮೂರನೆಯ ಅಧ್ಯಾಯ

ರುದ್ರೋತ್ಪತ್ತಿ

೧. ಸೂತಮುನಿ—ಅತಿತೇಜಸ್ವಿಯೂ, ಸಹನೆಯೆಂಬ ಅಸ್ತ್ರವನ್ನು ಧರಿಸಿ ಅಧರ್ಮವೆಂಬ ಮರವನ್ನು ಬೀಳಿಸಿದವನೂ ಆದ ಆ ಮಹಾತಪಋಷಿಯು, ಪ್ರಜಾಪಾಲನಿಗೆ "ಇನ್ನು ಆದಿರುದ್ರೋತ್ಪತ್ತಿಯ ಈ ಬೇರೊಂದು ಕಥೆಯನ್ನು ಮನಸ್ಸಿಟ್ಟು ಕೇಳು" ಎಂದು ಮನಃಪೂರ್ವಕವಾಗಿ ಹೇಳಿದನು.

೨. ಅತಿತೇಜಸ್ವಿಯೂ ಪರಮತತ್ತ್ವಜ್ಞನೂ ಆದ ಬ್ರಹ್ಮನು ಪ್ರಜಾಸೃಷ್ಟಿಯನ್ನು ಮಾಡಲಿಚ್ಛಿಸಿದರೂ, ಒಡನೆಯೇ ಅದು ಆಗದಿರಲು ಆತನಿಗೆ ಜಗತ್ತನ್ನು ತಾಪಗೊಳಿಸುವ ಅತಿರೋಷವುಂಟಾಯಿತು.

+ ಪಾತಿತೋ ಧರ್ಮವೃಕ್ಷಃ

ತಪಸ್ಥಿತೋಽಂತಃಸ್ಥಿರಕೀರ್ತಿಪುಣ್ಯೋ
ರಜಸ್ತಮೋಧ್ವಸ್ತಗತಿರ್ಬಭೂವ ।
ವರೋ ವರೇಣ್ಯೋ ವರದಃ ಪ್ರತಾಪೀ
ಕೃಷ್ಣಾರುಣಃ ಪುರುಷಃ ಪಿಂಗನೇತ್ರಃ ॥ ೩ ॥

ರುದನ್ನುಕ್ತೋ ಬ್ರಹ್ಮಣಾಮಾರುದ ತ್ವಂ
ರುದ್ರಸ್ತತೋಽಸಾವಭವತ್ಪುರಾಣಃ ।
ನಯಸ್ವ ಸೃಷ್ಟಿಂ ವಿತತಸ್ವರೂಪಾಂ
ಭವಾನ್ಸಮರ್ಥೋಽಸ್ತಿ ಮಹಾನುಭಾವ ॥ ೪ ॥

ಇತ್ಯುಕ್ತಮಾತ್ರಸ್ಸಲಿಲೇ ಮಮಜ್ಜ
ಮಗ್ನೇ ಸಸರ್ಜಾತ್ಮಭವಾಯ ದಕ್ಷಾನ್* ।
ಕಸ್ಥೇ ತದಾದೇವವರೇಽಪಿ ತೇ ತು
ಸೃಷ್ಟಿಂ ಚಕ್ರುರ್ಮಾನಸಾ ಬ್ರಹ್ಮಜಾತಾಃ ॥ ೫ ॥

---

೩. ಅದರಿಂದ ಸ್ಥಿರಕೀರ್ತಿಯುಳ್ಳವನೂ, ಪುಣ್ಯಶಾಲಿಯೂ, ರಜಸ್ತಮೋ ಗುಣಗಳಿಂದ ನಷ್ಟವಾದ ಜ್ಞಾನವುಳ್ಳವನೂ, ಉತ್ತಮನೂ, ವರಪ್ರದನೂ, ಅತಿ ಪ್ರತಾಪಿಯೂ, ಕಪ್ಪುಮಿಶ್ರವಾದ ಕೆಂಪುಬಣ್ಣವುಳ್ಳವನೂ, ಗೋರೋಚನ ವರ್ಣದ ಕಣ್ಣುಗಳುಳ್ಳವನೂ, ನೀರಿನೊಳಗೆ ತಪಸ್ಸುಮಾಡುವವನೂ, ಆದ ಪುರುಷನೊಬ್ಬನು ಉದಿಸಿದನು.

೪. ಅಳುತ್ತಿದ್ದ ಅವನಿಗೆ ಬ್ರಹ್ಮನು "ಮಾ ರುದ (ಅಳಬೇಡ)" ಎಂದು ಹೇಳಿದನು. ಆದುದರಿಂದ ಪುರಾತನನಾದ ಅವನಿಗೆ ರುದ್ರನೆಂದು ಹೆಸರಾಯಿತು. "ಮಹಾನುಭಾವನೇ, ನೀನು ಶಕ್ತನಾಗಿದ್ದೀಯೆ. ಪ್ರಜೆಗಳನ್ನು ಸೃಷ್ಟಿಸಿ, ಸೃಷ್ಟಿಯನ್ನು ವಿಸ್ತಾರಗೊಳಿಸು" ಎಂದೂ ಬ್ರಹ್ಮನು ಆ ರುದ್ರನಿಗೆ ಹೇಳಿದನು.

೫. ಹೀಗೆ ಬ್ರಹ್ಮನು ಹೇಳುತ್ತಲೂ, ರುದ್ರನು ನೀರಿನಲ್ಲಿ ಮುಳುಗಿದನು. ಅವನು ಮುಳುಗಲು ಬ್ರಹ್ಮನು ಪ್ರಜೆಗಳನ್ನು ಸೃಷ್ಟಿಸುವುದಕ್ಕಾಗಿ ಸಮರ್ಥರಾದ ದಕ್ಷನೇ ಮೊದಲಾದ ನವಪ್ರಜೇಶ್ವರರನ್ನು ಸೃಜಿಸಿದನು. ದೇವೋತ್ತಮನಾದ ರುದ್ರನು ನೀರಿನಲ್ಲಿರುತ್ತಿರಲು, ಬ್ರಹ್ಮನ ಮಾನಸಪುತ್ರರಾದ ನವಪ್ರಜೇಶ್ವರರು ಪ್ರಜೆಗಳನ್ನು ಸೃಷ್ಟಿಸಿದರು.

---

* ದಕ್ಷಃ.

ತಸ್ಯಾಂ ತತಾಯಾಂತು ಸುರಾಧಿಪೇ ತು
ಪೈತಾಮಹಂ ಯಜ್ಞವರಂ ಪ್ರಕಾಮಂ ।
ಮಗ್ನಃ ಪುರಾ ಯಸ್ಸಲಿಲೇ ಸ ರುದ್ರಃ
ಉತ್ಸೃಜ್ಯ ವಿಶ್ವಂತು ಸುರಾನ್ ಸಿಸೃಕ್ಷುಃ ||
ಶುಶ್ರಾವ+ ಯಜ್ಞಂ ಸುರಸಿದ್ಧಯಕ್ಷಾ
ನುಪಾಗತಾನ್ಕ್ರೋಧವಶಂ ಜಗಾಮ || ೬ ||

ಕನ್ಯಾಂ ಚ ದೀಪ್ತಾಂ ಪರಿಭಾವ್ಯ ಕೇನ
ಸೃಷ್ಟಂ ಜಗನ್ಮಾಂ ವ್ಯತಿರಿಚ್ಯಮೋಹಾತ್ ।
ಹಾಹೇತಿ ಚೋಕ್ತೇ ಜ್ವಲನಾರ್ಚಿಷಸ್ತು
ನಿಶ್ಚೇರುರಾಸ್ಯಾತ್ಪರಿಪಿಂಗಲಸ್ಯ ॥ ೭ ॥

ತತ್ರಾಭವನ್ ಕ್ಷುದ್ರಪಿಶಾಚಸಂಘಾ
ವೇತಾಲಭೂತಾನಿ ಚ ಯೋಗಿ ಸಂಘಾಃ ॥ ೮ ॥

---

೬. ಪ್ರಜಾಸೃಷ್ಟಿಯು ವಿಸ್ತಾರವಾಗಲು, ಬ್ರಹ್ಮನ ಸಂತೋಷಾರ್ಥವಾಗಿ ನಡೆಯುತ್ತಿದ್ದ ಉತ್ತಮಯಜ್ಞವನ್ನೂ, ಆ ಯಜ್ಞಕ್ಕೆ ಸುರಸಿದ್ಧಯಕ್ಷರೆಲ್ಲರೂ ಬಂದಿರುವುದನ್ನೂ, ಹಿಂದೆ ನೀರಿನಲ್ಲಿ ಮುಳುಗಿದ್ದು, ದೇವತೆಗಳೇ ಮೊದಲಾದವರನ್ನು ಸೃಷ್ಟಿಸಬೇಕೆಂದು ನೀರನ್ನು ಬಿಟ್ಟು ಆಗ ಮೇಲಕ್ಕೆದ್ದುಬಂದ ಆ ರುದ್ರನು, ಕೇಳಿ, ಕೋಪಗೊಂಡನು.

೭. "ದೀಪ್ತಳಾದ ಕನ್ಯೆ (ಗೌರಿ) ಯನ್ನು ಅಲಕ್ಷ್ಯಮಾಡಿ, ನನ್ನನ್ನು ಅತಿಕ್ರಮಿಸಿ, ಮೋಹದಿಂದ ಯಾರು ಜಗತ್ತನ್ನು ಸೃಷ್ಟಿಸಿದರು? ಆಹಾ, ಹಾ!" ಎಂದು ಆ ರುದ್ರನು ಹೇಳಲು ಪಿಂಗಲವರ್ಣದವನಾದ ಅವನ ಮುಖದಿಂದ ಅಗ್ನಿಜ್ವಾಲೆಗಳು ಹೊರಟುವು.

೮. ಅಲ್ಲಿ ಕುತ್ಸಿತಪಿಶಾಚಸಮೂಹಗಳೂ, ಭೂತಭೇತಾಳಯೋಗಿಸಂಘಗಳೂ ಉದಿಸಿದುವು.

+ ಶುಸ್ರಾವ.

ಘನಂ ಯದಾ ತೈರ್ವಿತತಂ ವಿಯಚ್ಚ
ಭೂಮಿಶ್ಚ ಸರ್ವಾಶ್ಚ ದಿಶಶ್ಚ ಲೋಕಾಃ ।
ತದಾಸ ಸರ್ವಜ್ಞತಯಾ ಚಕಾರ
ಧನುಶ್ಚತುರ್ವಿಂಶತಿಹಸ್ತಮಾತ್ರಂ ॥ ೯ ॥

ಗುಣಾಂಸ್ತ್ರಿವೃತ್ತಂ ಚ ಚಕಾರ ತೋಷಾ
ದಾದತ್ತದಿವ್ಯೇ ಇಷುಧೀಶರಾಂಶ್ಚ ।
ತತಶ್ಚ ಪೂಷ್ಣೋ ದಶನಾನಪಾತಯ
ದ್ಭಗಸ್ಯ ನೇತ್ರೇ ವೃಷಣೌ ಕ್ರತೋಶ್ಚ ॥ ೧೦ ॥

ಸವಿದ್ಧಬೀಜೋ ವ್ಯಪಯಾತ್ಕ್ರತುಶ್ಚ
ಮಾರ್ಗಂ ವಾಯುರ್ಧಾರಯನ್ಯಜ್ಞವಾಟಾತ್ ।
ದೇವಾಶ್ಚ ಸರ್ವೇ ಪಶುತಾಮುಪೇಯುಃ
ಜಗ್ಮುಶ್ಚ ಸರ್ವೇ ಪ್ರಣತಿಂ ಭವಸ್ಯ ॥ ೧೧ ॥

---

೯. ಅವುಗಳಿಂದ ಭೂಮ್ಯಾಕಾಶಗಳೂ, ಎಲ್ಲಾ ದಿಕ್ಕುಗಳೂ, ಲೋಕಗಳೂ ತುಂಬಿಹೋಗಲು, ರುದ್ರನು ತನ್ನ ಸರ್ವಜ್ಞತೆಯಿಂದ ಇಪ್ಪತ್ತನಾಲ್ಕುಮೊಳದ ಅಳತೆಯ ಬಿಲ್ಲನ್ನು ಮಾಡಿಕೊಂಡನು.

೧೦. ತ್ರಿಗುಣಗಳನ್ನೇ ಹೆದೆಯನ್ನಾಗಿ ಮಾಡಿಕೊಂಡು, ಸಂತೋಷದಿಂದ ದಿವ್ಯವಾದ ಬಾಣಬತ್ತಳಿಕೆಗಳನ್ನೂ ತೆಗೆದುಕೊಂಡು ಹೋಗಿ, ಬಳಿಕ ಪೂಷನೆಂಬ ಆದಿತ್ಯನ ಹಲ್ಲುಗಳನ್ನೂ, ಭಗನೆಂಬುವನ ಕಣ್ಣುಗಳನ್ನೂ, ಕ್ರತುವೆಂಬುವನ ವೃಷಣವನ್ನೂ ಬೀಳಿಸಿದನು.

೧೧. ಒಡೆದುಹೋದ ಬೀಜವುಳ್ಳ ಆ ಕ್ರತುವು ಹೊರಟುಹೋದನು. ವಾಯುವೂ ಯಜ್ಞಶಾಲೆಯಿಂದ ತನ್ನ ದಾರಿಯನ್ನು ಹಿಡಿದನು. ದೇವತೆಗಳೆಲ್ಲರೂ ಪಶುತ್ವವನ್ನು (ಅಜ್ಞಾನವನ್ನು) ಪಡೆದರು. ಎಲ್ಲರೂ ರುದ್ರನಿಗೆ ಪ್ರಣಾಮ ಮಾಡಿದರು.

ಆಗಮ್ಯ ತತ್ರೈವ ಪಿತಾಮಹಸ್ತು
ಭವಂ ಪ್ರತೀತಃ ಸಂಪರಿಷ್ವಜ್ಯ ದೇವಾನ್ ।
ಭಕ್ತ್ಯೋಪೇತಾನೀಕ್ಷಯನ್ದೇವದೇವಾನ್
ವಿಜ್ಞಾಯ ರುದ್ರೇಣ ಕೃತಾಪಕಾರಾನ್ ॥
ರುದ್ರಂ ದೃಷ್ಟ್ವಾ ದೇವದೇವೋ ಜಗಾದ
ಮಾ ತಾತ ಕೋಪೇನ ಗತೋ ಹಿ ಯಜ್ಞಃ ॥ ೧೨ ॥

ಇತಿ ಬ್ರಹ್ಮವಚಃ ಶ್ರುತ್ವಾ ರುದ್ರಃ ಪ್ರೋವಾಚ ಕೋಪವಾನ್ ॥ ೧೩ ॥

॥ ರುದ್ರ ಉವಾಚ ॥
ಸೃಷ್ಟಃ ಪೂರ್ವಂ ಭವತಾಹಂ ತವೇಮೇ
ಕಸ್ಮಾನ್ನಭಾಗಂ ಪರಿಕಲ್ಪಯಂತಿ ।
ಯಜ್ಞೋದ್ಭವಂ ತೇನರೂಪಂ ಮಯೇಮೇ
ವೀತಜ್ಞಾನಾ ವಿಕೃತಾ ದೇವದೇವ ॥ ೧೪ ॥

---

೧೨. ಪ್ರಸಿದ್ಧನಾದ ಬ್ರಹ್ಮನು ಅಲ್ಲಿಗೇ ಬಂದು, ರುದ್ರನನ್ನು ಅಪ್ಪಿಕೊಂಡು, ಭಕ್ತರಾದ ದೇವತೆಗಳನ್ನು ನೋಡಿ, ಅವರಿಗೆ ರುದ್ರನಿಂದ ಅಪಕಾರವಾದುದನ್ನರಿತು ರುದ್ರನನ್ನು ನೋಡಿ, "ಅಪ್ಪಾ ಬೇಡ. ನಿನ್ನ ಕೋಪದಿಂದ ಯಜ್ಞವು ಹಾಳಾಯಿತಲ್ಲ!" ಎಂದನು.

೧೩. ಬ್ರಹ್ಮನ ಈ ಮಾತನ್ನು ಕೇಳಿ, ಸಿಟ್ಟುಳ್ಳ ರುದ್ರನು (ಮುಂದಿನಂತೆ) ಹೇಳಿದನು.

೧೪. ರುದ್ರ—ದೇವದೇವನೆ, ಪೂರ್ವದಲ್ಲಿ ಇವರೆಲ್ಲರಿಗಿಂತ ಮೊದಲು ನೀನು ನನ್ನನ್ನು ಸೃಷ್ಟಿಸಿದೆ. ಆದರೂ ಇವರು ಏಕೆ ನನಗೆ ಯಜ್ಞಭಾಗವನ್ನು ಕೊಡುವುದಿಲ್ಲ? ಅದರಿಂದಲೇ ನಾನು ಇವರನ್ನು ಜ್ಞಾನವಿಲ್ಲದವರನ್ನಾಗಿಯೂ, ವಿಕಾರವುಳ್ಳವರನ್ನಾಗಿಯೂ ಮಾಡಿದೆನು.

|| ಬ್ರಹ್ಮೋವಾಚ ||

ದೇವಾಃ ಶಂಭುಂ ಸ್ತುತಿಭಿರ್ಜ್ಞಾನಹೇತೋಃ
ಯಜಧ್ವಮುಚ್ಚೈರಸುರಾಶ್ಚ ಸರ್ವೇ |
ಯೇನ ರುದ್ರೋ ಭಗವಾನ್ ತೋಷಮೇತಿ
ಸರ್ವಜ್ಞತಾ ತೋಷಮಾತ್ರಾದಿಹಸ್ಯಾತ್ || ೧೫ ||

ಇತ್ಯುಕ್ತಾಸ್ತೇನ ತೇ ದೇವಾಃ ಸ್ತುತಿಂ ಚಕ್ರುರ್ಮಹಾತ್ಮನಃ || ೧೬ ||

|| ದೇವಾ ಊಚುಃ ||

ನಮೋ ದೇವಾದಿದೇವಾಯ ತ್ರಿಣೇತ್ರಾಯ ಮಹಾತ್ಮನೇ |
ರಕ್ತಪಿಂಗಲನೇತ್ರಾಯ ಜಟಾಮುಕುಟಧಾರಿಣೇ ||
ಭೂತವೇತಾಲಜುಷ್ಟಾಯ ಮಹಾಭೋಗೋಪವೀತಿನೇ || ೧೭ ||

ಭೀಮಾಟ್ಟಹಾಸವಕ್ತ್ರಾಯ ಕಪರ್ದಿಸ್ಥಾಣವೇ ನಮಃ |
ಪೂಷ್ಣೋ ದಂತವಿನಾಶಾಯ ಭಗನೇತ್ರಭಿದೇ ನಮಃ || ೧೮ ||

---

೧೫. ಬ್ರಹ್ಮ—ದೇವತೆಗಳೇ, ಅಸುರರೇ, ಮತ್ತೆ ಜ್ಞಾನವನ್ನು ಪಡೆಯುವುದಕ್ಕಾಗಿ, ಶಂಭುವನ್ನು ಸ್ತುತಿಗಳಿಂದ ಎಲ್ಲರೂ ಪೂಜಿಸಿರಿ. ಅದರಿಂದ ರುದ್ರನು ಸಂತುಷ್ಟನಾಗುವನು. ಅವನು ಸಂತೋಷಪಟ್ಟ ಮಾತ್ರದಲ್ಲಿಯೇ ನಿಮಗೆ ಸರ್ವಜ್ಞತೆಯುಂಟಾಗುವುದು.

೧೬. ಬ್ರಹ್ಮನಿಂದ ಹೀಗೆ ಹೇಳಿಸಿಕೊಂಡ ಆ ದೇವತೆಗಳು ಮಹಾತ್ಮನಾದ ಶಂಭುವನ್ನು ಸ್ತೋತ್ರಮಾಡಿದರು.

೧೭. ದೇವತೆಗಳು—ವಂದನಂ ದೇವದೇವಂಗೆ ಮಹಾತ್ಮಂಗೆ ತ್ರಿಚಕ್ಷುಗೆ, ರಕ್ತಪಿಂಗಳನೇತ್ರಂಗೆ ಜಟಾಮುಕುಟಧಾರಿಗೆ, ಭೂತವೇತಾಳಯುಕ್ತಂಗೆ ಮಹಾಸರ್ಪೋಪವೀತಿಗೆ.

೧೮. ಭೀಮಾಟ್ಟಹಾಸವಕ್ತ್ರಂಗೆ ಸ್ಥಾಣುಗಂ ತು ಕಪರ್ದಿಗೆ, ಪೂಷನಾ ಪಲ್ಗಳಂ ಕಿತ್ತಭಗನೇತ್ರ ವಿಭೇದಿಗೆ.

ಭವಿಷ್ಯವೃಷಚಿಹ್ನಾಯ ಮಹಾಭೂತಪತೇ ನಮಃ ।
ಭವಿಷ್ಯತ್ರಿಪುರಾಂತಾಯ ತಥಾಂಧಕವಿನಾಶಿನೇ ॥ ೧೯ ॥

ಕೈಲಾಸವರವಾಸಾಯ ಕರೀಕೃತ್ತಿನಿವಾಸಿನೇ ।
ವಿಕರಾಲೋರ್ಧ್ವಕೇಶಾಯ ಭೈರವಾಯ ನಮೋನಮಃ ॥ ೨೦ ॥

ಅಗ್ನಿಜ್ವಾಲಾಕರಾಲಾಯ ಶಶಿಮೌಲಿಕೃತೇ ನಮಃ ।
ಭವಿಷ್ಯಕೃತಕಾಪಾಲಿವ್ರತಾಯ ಪರಮೇಷ್ಠಿನೇ ॥ ೨೧ ॥

ತಥಾ ದಾರುವನಧ್ವಂಸಕಾರಿಣೇ ತಿಗ್ಮಶೂಲಿನೇ ।
ಕೃತಕಂಕಣಭೋಗೀಂದ್ರನೀಲಕಂಠತ್ರಿಶೂಲಿನೇ ॥ ೨೨ ॥

ಪ್ರಚಂಡದಂಡಹಸ್ತಾಯ ಬಡಬಾಗ್ನಿಮುಖಾಯ ಚ ।
ವೇದಾಂತವೇದ್ಯಾಯ ನಮೋ ಯಜ್ಞಮೂರ್ತೇ ನಮೋನಮಃ ॥ ೨೩ ॥

---

೧೯. ಮುಂದಿನಾವೃಷಚಿಹ್ನಂಗೆ ವಂದನಂ ಭೂತಪಾಲಗೆ. ಮುಂದಿನಾ ತ್ರಿಪುರಾಂತಂಗೆ ಮತ್ತೆಯಂಧಕನಾಶಿಗೆ

೨೦. ಕೈಲಾಸವಗವಾಸಂಗೆ ಗಜಚರ್ಮಾಂಬರಂಗೆಯುಂ ವಿಕರಾಲೋರ್ಧ್ವಕೇಶಂಗೆ ಭೈರವಂಗತಿ ವಂದನಂ.

೨೧. ಅಗ್ನಿಜ್ವಾಲಾಕರಾಳಂಗೆ ಶಶಿಮೌಳಿಗೆ ವಂದನಂ, ಮುಂದೆ ಕಾಪಾಲಿ ವ್ರತಮಂ ಮಾಳ್ಪಂಗೆ ಪರಮೇಷ್ಠಿಗೆ.

೨೨. ಮತ್ತೆ ದಾರುವನಧ್ವಂಸಕಾರಿಗಂ ತೀಕ್ಷ್ಣಶೂಲಿಗಂ, ಭೋಗಿಕಂಕಣ ನಾಗಿರ್ಪ ನೀಲಕಂಠ ತ್ರಿಶೂಲಿಗೆ.

೨೩. ಪ್ರಚಂಡದಂಡಹಸ್ತಂಗೆ ಬಡಬಾಗ್ನಿಮುಖಂಗೆಯುಂ ವೇದವೇದಾಂತ ವೇದ್ಯಂಗೆ ಯಜ್ಞಮೂರ್ತಿಗೆ ವಂದನಂ.

ದಕ್ಷಯಜ್ಞವಿನಾಶಾಯ ಜಗದ್ಭಯಕರಾಯ ಚ ।
ವಿಶ್ವೇಶ್ವರಾಯ ದೇವಾಯ ಶಿವಶಂಭೋ ಭವಾಯ ಚ ॥
ಕಪರ್ದಿನೇ ಕರಾಲಾಯ ಮಹಾದೇವಾಯ ತೇ ನಮಃ ॥ ೨೪ ॥

ಏವಂ ದೇವೈಃ ಸ್ತುತಃ ಶಂಭುರುಗ್ರಧನ್ವಾ ಸನಾತನಃ ।
ಉವಾಚ ದೇವದೇವೋಽಹಂ ಯತ್ಕರೋಮಿ ತದುಚ್ಯತಾಂ ॥ ೨೫ ॥

॥ ದೇವಾ ಊಚುಃ ॥

ವೇದಶಾಸ್ತ್ರಾಣಿ ವಿಜ್ಞಾನಂ ದೇಹಿ ನೋ ಭವ ಮಾ ಚಿರಂ ।
ಯಜ್ಞಶ್ಚ ಸರಹಸ್ಯೋ ಭೋ ಯದಿ ತುಷ್ಟೋಽಸಿ ನಃ ಪ್ರಭೋ ॥ ೨೬ ॥

॥ ಮಹಾದೇವ ಉವಾಚ ॥

ಭವಂತಃ ಪಶವಸ್ಸರ್ವೇ ಭವಂತು ಸಹಿತಾ ಇತಿ ।
ಅಹಂ ಪತಿಶ್ಚ ಭವತಾಂ ತತೋ ಮೋಕ್ಷಮವಾಪ್ಸ್ಯಥ ॥ ೨೭ ॥

---

೨೪. ದಕ್ಷಯಜ್ಞವಿನಾಶಂಗೆ ಜಗದ್ಭಯಕರಂಗೆಯುಂ ವಿಶ್ವೇಶ್ವರಂಗೆ ದೇವಂಗೆ ಶಿವಶಂಭು ಭವಂಗೆಯುಂ. ಕಪರ್ದಿಗಂ ಕರಾಳಂಗಂ ಮಹಾದೇವಂಗೆ ವಂದನಂ.

೨೫. ಹೀಗೆ ದೇವತೆಗಳಿಂದ ಸ್ತುತನಾದ, ಭಯಂಕರವಾದ ಧನುಸ್ಸನ್ನು ಧರಿಸಿರುವವನೂ, ಸನಾತನನೂ, ದೇವದೇವನೂ ಆದ ಶಂಭುವು "ನಾನು ಮಾಡಬೇಕಾದುದನ್ನು ಹೇಳಿ" ಎಂದನು.

೨೬. ದೇವತೆಗಳು—ಎಲೈ, ಭವನೇ, ಪ್ರಭೂ, ರಹಸ್ಯನೂ, ಯಜ್ಞ, ಸ್ವರೂಪನೂ ಆದ ನೀನು ಸಂತುಷ್ಟನಾಗಿದ್ದರೆ, ನಮಗೆ ವೇದಶಾಸ್ತ್ರಗಳನ್ನೂ, ಜ್ಞಾನವನ್ನೂ ಕೊಡು. ತಡಮಾಡಬೇಡ.

೨೭. ಮಹಾದೇವ—ನೀವೆಲ್ಲರೂ ಒಟ್ಟಿಗೆ ಪಶುಗಳಾಗಿರಿ. ನಾನು ನಿಮಗೆ ಪತಿಯಾಗಿರುವೆನು. ಬಳಿಕ ನಿಮಗೆ ಮುಕ್ತಿಯು ದೊರೆಯುವುದು. ಎಂದನು.

ತಥೇತಿ ದೇವಾಸ್ತಂ ಪ್ರಾಹುಸ್ತತಃ ಪಶುಪತಿರ್ಭವಾನ್ ॥ ೨೮ ॥

ಬ್ರಹ್ಮಾ ಪಶುಪತಿಂ ಪ್ರಾಹ ಪ್ರಸನ್ನೇನಾಂತರಾತ್ಮನಾ ।
ಚತುರ್ದಶೀ ತೇ ದೇವೇಶ ತಿಥಿರಸ್ತು ನ ಸಂಶಯಃ ॥ ೨೯ ॥

ತಸ್ಯಾಂ ತಿಥೌ ಭವಂತಂ ಯೇ ಯಜಂತಿ ಶ್ರದ್ಧಯಾನ್ವಿತಾಃ ।
ಉಪೋಷ್ಯ ಭೋಜನೀಯಾಸ್ತು ಗೋಧೂಮಾನ್ನೇನ ವೈ ದ್ವಿಜಾಃ ॥ ೩೦ ॥

ತೇಷಾಂ ತ್ವಂ ತುಷ್ಟಿಮಾಪನ್ನೋ ದೇಹಿ ಸ್ಥಾನಮನುತ್ತಮಂ ॥ ೩೧ ॥

ಏವಮುಕ್ತಸ್ತದಾ ರುದ್ರೋ ಬ್ರಹ್ಮಣಾವ್ಯಕ್ತಜನ್ಮನಾ ।
ದಂತಾನ್ನೇತ್ರೇ ಫಲಂ ಪ್ರಾದಾತ್ ಭಗಪೂಷ್ಣೋಃ ಕ್ರತೋರಪಿ ॥ ೩೨ ॥

ಪರಿಜ್ಞಾನಂ ಚ ಸಕಲಂ ಸಪ್ರಾದಾದಮರೇಷ್ವಪಿ ।
ಏವಂ ರುದ್ರಸ್ಯ ಸಂಭೂತಿಃ ಸಂಭೂತಾ ಬ್ರಹ್ಮಣಃ ಪುರಾ ।
ಅನೇನೈವ ಪ್ರಯೋಗೇಣ ದೇವಾನಾಂ ಪತಿರುಚ್ಯತೇ ॥ ೩೩ ॥

---

೨೮. ದೇವತೆಗಳು "ಹಾಗೆಯೇ ಆಗಲಿ. ಇನ್ನುಮೇಲೆ ನೀನು ಪಶುಪತಿ" ಎಂದರು.

೨೯. ಬ್ರಹ್ಮನು ಒಲಿದಮನದಿಂದ ಪಶುಪತಿಗೆ ಹೀಗೆ ಹೇಳಿದನು. "ದೇವೇಶನೆ, ನಿಜವಾಗಿ ಚತುರ್ದಶೀತಿಥಿಯು ನಿನಗೆ ಮೀಸಲಾಗಿರಲಿ.

೩೦–೩೧. ಆ ತಿಥಿಯಲ್ಲಿ ನಿನ್ನನ್ನು ಆಸಕ್ತಿಯುಳ್ಳವರಾಗಿ ಪೂಜಿಸಿ, ಉಪವಾಸಮಾಡಿ, ಗೋದುವೆಯ ಅನ್ನದಿಂದ ಬ್ರಾಹ್ಮಣರಿಗೆ ಭೋಜನಮಾಡಿಸುವವರಿಗೆ ನೀನು ಸಂತುಷ್ಟನಾಗಿ ಅತ್ಯುತ್ತಮವಾದ ಸ್ಥಾನವನ್ನು ಕೊಡು."

೩೨ ಪ್ರತ್ಯಕ್ಷವಾಗಿ ಬ್ರಹ್ಮನು ಹೀಗೆ ಹೇಳಲು ರುದ್ರನು, ಭಗಪೂಷಕ್ರತುಗಳಿಗೆ ಅವರವರು ಕಳೆದುಕೊಂಡಿದ್ದ ಹಲ್ಲುಕಣ್ಣುಗಳನ್ನೂ, ಅಂಡವನ್ನೂ ಕ್ರಮವಾಗಿ ಮತ್ತೆ ಕೊಟ್ಟನು.

೩೩. ದೇವತೆಗಳಿಗೂ ಸಕಲಪರಿಜ್ಞಾನವನ್ನೂ ಆ ರುದ್ರನು ಕೊಟ್ಟನು. ಹೀಗೆ ಹಿಂದೆ ಬ್ರಹ್ಮನಿಂದ ರುದ್ರನ ಉತ್ಪತ್ತಿಯಾಯಿತು. ಮೇಲೆ ಹೇಳಿದ ಈ ಕಾರ್ಯದಿಂದಲೇ ರುದ್ರನು ದೇವತೆಗಳಿಗೂ ಪತಿಯೆನಿಸಿಕೊಳ್ಳುವನು.

ಯಶ್ಚೈತಚ್ಛೃಣುಯಾನ್ನಿತ್ಯಂ ಪ್ರಾತರುತ್ಥಾಯ ಮಾನವಃ ।
ಸರ್ವಪಾಪವಿನಿರ್ಮುಕ್ತೋ ರುದ್ರಲೋಕಮವಾಪ್ನುಯಾತ್ ॥ ೩೪ ॥

ಇತಿ ಶ್ರೀವರಾಹಪುರಾಣೇ ಆದಿಕೃತವೃಂತ್ತಾಂತೇ ಮಹಾತಪೋಉಪಾ ಖ್ಯಾನೇ ರುದ್ರೋತ್ಪತ್ತಿರ್ನಾಮ ತ್ರಯಸ್ತ್ರಿಂಶೋಧ್ಯಾಯಃ

---

೩೪. ನಿತ್ಯವೂ ಬೆಳಗ್ಗೆ ಎದ್ದು, ಈ ಕಥೆಯನ್ನು ಕೇಳುವವರು, ಸರ್ವಪಾಪಗಳನ್ನೂ ಕಳೆದುಕೊಂಡು ರುದ್ರಲೋಕವನ್ನು ಪಡೆಯುವರು.

ಅಧ್ಯಾಯದ ಸಾರಾಂಶ :—

ಮೊತ್ತಮೊದಲು ಬ್ರಹ್ಮನ ಕೋಪದಿಂದ ರುದ್ರನುದಿಸಿದನು. ಬ್ರಹ್ಮನು ಪ್ರಜೆಗಳನ್ನು ಸೃಷ್ಟಿಸೆಂದು ಹೇಳಿದರೂ, ರುದ್ರನು ತಾನು ಆಗ ಅಶಕ್ತನೆಂದು ತಪಸ್ಸಿಗಾಗಿ ನೀರಿನಲ್ಲಿ ಮುಳುಗಿದನು. ಅವನು ಮುಳುಗಿದ ಬಳಿಕ ಬ್ರಹ್ಮನು ದಕ್ಷಾದಿನವಪ್ರಜೇಶ್ವರರನ್ನು ಸೃಷ್ಟಿಸಿದನು. ಅವರಿಂದ ಲೋಕವೆಲ್ಲವೂ ಪ್ರಜಾಪೂರ್ಣವಾಯಿತು. ದಕ್ಷನು ಯಜ್ಞವನ್ನು ಮಾಡುತ್ತಿದ್ದನು. ತಪಸ್ಸನ್ನು ಮುಗಿಸಿ, ಆ ಸಮಯದಲ್ಲಿ ಮೇಲೆದ್ದ ರುದ್ರನು, ತಾನು ಮಾಡಬೇಕಾಗಿದ್ದ ಸೃಷ್ಟಿಕಾರ್ಯವು ದಕ್ಷಾದಿಗಳಿಂದಾಗಿರುವುದನ್ನೂ, ತನಗೆ ಹವಿರ್ಭಾಗವನ್ನೂ ಕೊಡದೆ ಯಜ್ಞಮಾಡುತ್ತಿರುವುದನ್ನೂ ಕಂಡು, ಅತಿ ರೋಷದಿಂದ ಭೂತಗಣಗಳೊಡನೆ ಯಜ್ಞಶಾಲೆಗೆ ಹೋಗಿ ದೇವತೆಗಳನ್ನು ಹೊಡೆದು, ಯಜ್ಞವನ್ನು ನಾಶಮಾಡಿದನು. ಬಳಿಕ ಬ್ರಹ್ಮನು ಅಲ್ಲಿಗೆ ಬಂದು, ರುದ್ರನಿಗೆ ಸಮಾಧಾನವನ್ನು ಹೇಳಿ, ದೇವತೆಗಳೆಲ್ಲರೂ ಪ್ರಣತರಾಗಿ ಅವನನ್ನು ಸ್ತುತಿಸುವಂತೆ ಮಾಡಿದನು. ಆದರಿಂದ ಸಂತೋಷಗೊಂಡ ರುದ್ರನು ಎಲ್ಲರಿಗೂ ಅನುಗ್ರಹಿಸಿ ಯಜ್ಞವು ಪೂರ್ತಿಯಾಗುವಂತೆ ವರವನ್ನು ಇತ್ತನು. ಚತುರ್ದಶಿಯು ರುದ್ರತಿಥಿ ಎಂದು ಹೇಳಿ ಈ ಕಥೆಯು ಶ್ರವಣಫಲವನ್ನೂ ಹೇಳುವಲ್ಲಿಗೆ ಶ್ರೀ ವರಾಹ ಪುರಾಣದಲ್ಲಿ ಮೂವತ್ತಮೂರನೆಯ ಅಧ್ಯಾಯ.

॥ ಶ್ರೀಃ ॥

-X-

ಚತುಸ್ತ್ರಿಂಶೋಽಧ್ಯಾಯಃ

ಅಥ ಪಿತೃಸರ್ಗಸ್ಥಿತಿವರ್ಣನಮ್

॥ ಮಹಾತಪಾ ಉವಾಚ ॥

ಪಿತೄಣಾಂ ಸಂಭವಂ ರಾಜನ್ ಕಥ್ಯಮಾನಂ ನಿಬೋಧಮೇ ॥ ೧ ॥

ಪೂರ್ವಂ ಪ್ರಜಾಪತಿರ್ಬ್ರಹ್ಮಾ ಸಿಸೃಕ್ಷುರ್ವಿವಿಧಾಃ ಪ್ರಜಾಃ ।
ಏಕಾಗ್ರಮನಸಸ್ಸರ್ವಾಸ್ತನ್ಮಾತ್ರಾ ಮನಸೋಬಹಿಃ ॥
ಕೃತ್ವಾ ಪರಮಕಂ ಬ್ರಹ್ಮಾ ಧ್ಯಾಯನ್ಸರ್ವೇಷು ರೂಪಕೈಃ ॥ ೨ ॥

ತಸ್ಯಾತ್ಮನಿ ತದಾ ಯೋಗಂ ಗತಸ್ಯ ಪರಮೇಷ್ಠಿನಃ ।
ತನ್ಮಾತ್ರಾನಿರ್ಯಯುರ್ದೇಹಾದ್ಧೂಮವರ್ಣಕೃತತ್ವಿಷಃ ॥ ೩ ॥

ಮೂವತ್ತನಾಲ್ಕನೆಯ ಅಧ್ಯಾಯ

ಪಿತೃಸೃಷ್ಟಿಸ್ಥಿತಿ ವರ್ಣನೆ

೧. ಮಹಾತಪಮುನಿ—ದೊರೆಯೇ, ಪಿತೃಗಳ ಉತ್ಪತ್ತಿಯನ್ನು ನಾನು ಹೇಳುತ್ತೇನೆ. ಕೇಳು.

೨-೩. ಪೂರ್ವದಲ್ಲಿ ಸೃಷ್ಟಿಕರ್ತನಾದ ಬ್ರಹ್ಮನು ಬಗೆ ಬಗೆಯ ಪ್ರಜೆಗಳನ್ನು ಸೃಜಿಸಲು ಇಷ್ಟವುಳ್ಳವನಾಗಿ ಏಕಾಗ್ರಮನಸ್ಕರಾದ ತನ್ಮಾತ್ರೆಗಳನ್ನೆಲ್ಲಾ ಮನಸ್ಸಿನಿಂದ ಹೊರಗಿಟ್ಟು, ಪರಬ್ರಹ್ಮನನ್ನು ಸರ್ವರೂಪಗಳಿಂದಲೂ ಧ್ಯಾನಿಸುತ್ತ ತನ್ನಲ್ಲಿ ತಾನು ಯೋಗಸ್ಥನಾಗಿರಲು, ಆ ಬ್ರಹ್ಮನ ದೇಹದಿಂದ ಧೂಮವರ್ಣದ ಕಾಂತಿಯುಳ್ಳ ತನ್ಮಾತ್ರೆಗಳು ಹೊರಗೆ ಬಂದರು.

ಪಿಬಾಮ ಇತಿ ಭಾಷಂತಃ ಸುರಾನ್ಸೋಮಮಿತಿ ಸ್ಮಹ ।
ಊರ್ಧ್ವಂ ಜಿಗಮಿಷಂತೋ ವೈ ವಿಯತ್ಸಂಸ್ಥಾಸ್ತಪಸ್ವಿನಃ ॥ ೪ ॥

ತಾನ್ ದೃಷ್ಟ್ವಾ ಸಹಸಾ ಬ್ರಹ್ಮಾತಿರ್ಯಕ್ಸಂಸ್ಥಾಸ್ತಥೋನ್ಮುಖಾನ್ ।
ಭವಂತಃ ಪಿತರಸ್ಸಂತು ಸರ್ವೇಷಾಂ ಗೃಹಮೇಧಿನಾಂ ॥ ೫ ॥

ಊರ್ಧ್ವವಕ್ತ್ರಾಸ್ತು ಯೇ ತತ್ರ ತೇ ನಾಂದೀಮುಖಸಂಜ್ಞಿತಾಃ ।
ಇತ್ಯುಕ್ತ್ವಾತು ತತೋ ಬ್ರಹ್ಮಾ ತೇಷಾಂ ಪಂಥಾನಮಾಕರೋತ್ ॥
ದಕ್ಷಿಣಾಯನ ಸಂಜ್ಞಂತು ಪಿತೄಣಾಂಚ ಪಿತಾಮಹಃ ॥ ೬ ॥

ತೂಷ್ಣೀಂ ಸಸರ್ಜ ಭೂತಾನಿ ತಮೂಚುಃ ಪಿತರಸ್ತತಃ ।
ವೃತ್ತಿಂ ನೋ ದೇಹಿ ಭಗವನ್ ಯಯಾ ವಿಂದಾಮಹೇ ಸುಖಂ ॥ ೭ ॥

---

೪. ತಪಸ್ವಿಗಳಾದ ಅವರು ದೇವತೆಗಳನ್ನು ಕುರಿತು 'ಸೋಮವನ್ನು ಕುಡಿಯುತ್ತೇವೆ.' ಎಂದು ಹೇಳುತ್ತ ಮೇಲೆ ಹೋಗಲು ಇಷ್ಟವುಳ್ಳವರಾಗಿ ಆಕಾಶದಲ್ಲಿ ನಿಂತರು.

೫. ಮೇಲೆನೋಡುತ್ತಲೂ, ಅಡ್ಡಲಾಗಿಯೂ ನಿಂತಿರುವ ಅವರನ್ನು ಬ್ರಹ್ಮನು, ತಟ್ಟನೆ ನೋಡಿ "ಗೃಹಸ್ಥರೆಲ್ಲರಿಗೂ ನೀವು ಪಿತೃಗಳಾಗಿರಿ.

೬. ನಿಮ್ಮಲ್ಲಿ ಮೇಲ್ಗಡೆಗೆ ಮುಖವುಳ್ಳವರಾಗಿರುವವರು ನಾಂದೀಮುಖರೆನಿಸಿಕೊಳ್ಳುವಿರಿ." ಎಂದು ಹೇಳಿ, ಪಿತಾಮಹನಾದ ಅವನೇ ಆ ಪಿತೃಗಳಿಗೆ ದಕ್ಷಿಣಾಯನವೆಂಬ ಹೆಸರಿನ ದಾರಿಯನ್ನು ಮಾಡಿಕೊಟ್ಟನು.

೭. ಸುಮ್ಮನೆ ಪ್ರಾಣಿಗಳನ್ನು ಸೃಷ್ಟಿಸಿದನು. ಬಳಿಕ ಬ್ರಹ್ಮನಿಗೆ ಪಿತೃಗಳು "ಭಗವಂತನೇ, ನಾವು ಸುಖವನ್ನು ಪಡೆಯಬಹುದಾದ ವೃತ್ತಿ (ಜೀವನ)ಯನ್ನು ನಮಗೆ ಕಲ್ಪಿಸು" ಎಂದು ಹೇಳಿದರು.

॥ ಬ್ರಹ್ಮೋವಾಚ ॥

ಅಮಾವಾಸ್ಯಾ ದಿನಂ ಹ್ಯೇಸ್ತು ತಸ್ಯಾಂ ಕುಶತಿಲೋದಕೈಃ ।
ತರ್ಪಿತಾ ಮಾನುಷ್ಯೈಸ್ತೃಪ್ತಿಂ ಪರಾಂ ಗಚ್ಛತ ನಾನ್ಯಥಾ ॥ ೮ ॥

ತಿಲಾ ದೇಯಾಸ್ತಥೈತಸ್ಯಾಮುಪೋಷ್ಯ ಪಿತೃಭಕ್ತಿತಃ ।
ಪರಮಂ ತಸ್ಯ ಸಂತುಷ್ಟಾ ವರಂ ಯಚ್ಛತ ಮಾಚಿರಂ ॥ ೯ ॥

ಇತಿ ಶ್ರೀ ವರಾಹಪುರಾಣೇ ಆದಿಕೃತವೃತ್ತಾಂತೇ ಮಹಾತಪ ಉಪಾಖ್ಯಾನೇ ಪಿತೃಸರ್ಗಸ್ಥಿತಿವರ್ಣನಂನಾಮ ಚತುಸ್ತ್ರಿಂಶೋಽಧ್ಯಾಯಃ

---

೮. ಬ್ರಹ್ಮ—ಅಮಾವಾಸ್ಯೆಯ ದಿನವು ನಿಮಗೆ ಮೀಸಲಾಗಿರಲಿ. ಅಮಾವಾಸ್ಯೆಯಲ್ಲಿ ದರ್ಭೆ, ಎಳ್ಳು, ನೀರುಗಳಿಂದ ಮನುಷ್ಯರು ಮಾಡುವ ತರ್ಪಣದಿಂದ ನೀವು ಪರಮ ತೃಪ್ತಿಯನ್ನು ಪಡೆಯಿರಿ. ಬೇರೆಯುದರಿಂದಲ್ಲ.

೯. ಅಲ್ಲದೆ ಅಮಾವಾಸ್ಯೆಯಲ್ಲಿ ಪಿತೃಭಕ್ತಿಯಿಂದ ಎಳ್ಳನ್ನು ದಾನಮಾಡಿ, ಉಪವಾಸಮಾಡುವವನಿಗೆ ಸಂತುಷ್ಟರಾದ ನೀವು ಉತ್ತಮವಾದ ವರವನ್ನು ತಡಮಾಡದೆ ಕೊಡಿ.

ಅಧ್ಯಾಯದ ಸಾರಾಂಶ:—

ಮಹಾತಪಮುನಿಯು ಪ್ರಜಾಪಾಲರಾಜನಿಗೆ—ಪಿತೃಗಳ ಸೃಷ್ಟಿಸ್ಥಿತಿಗಳ ವಿಚಾರವನ್ನು ತಿಳಿಸುವನು. "ಬ್ರಹ್ಮನು ಪ್ರಜೆಗಳನ್ನು ಸೃಷ್ಟಿಸಬೇಕೆಂದು ಪರಬ್ರಹ್ಮನನ್ನು ಧ್ಯಾನಿಸುತ್ತಿರುವಾಗ ಬ್ರಹ್ಮನ ದೇಹದಿಂದ ಧೂಮ್ರವರ್ಣದ ಕಾಂತಿಯುಳ್ಳ ಪಂಚಮಾತ್ರೆಗಳು ಹೊರಗೆ ಬಂದರು. ಅವರು ಸೋಮಪಾನಾಸಕ್ತರಾಗಿ ಮೇಲೆ ಹೋಗಲಿಷ್ಟದಿಂದ ಮೇಲ್ಮುಖರಾಗಿ ಆಕಾಶದಲ್ಲಿ ನಿಂತರು. ಬ್ರಹ್ಮನು ಅವರಿಗೆ "ನೀವು ಗೃಹಸ್ಥರಿಗೆಲ್ಲಾ ಪಿತೃಗಳಾಗಿರಿ. ಅಮಾವಾಸ್ಯೆಯು ನಿಮಗೆ ಮೀಸಲಾದ ದಿನವಾಗಿರಲಿ. ಎಂಬುದೇ ಮೊದಲಾದ ವರಗಳನ್ನು ಕೊಟ್ಟನು." ಎಂದು ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ಮೂವತ್ತನಾಲ್ಕನೆಯ ಅಧ್ಯಾಯ.

॥ ಶ್ರೀಃ ॥

-x-

ಪಂಚತ್ರಿಂಶೋಽಧ್ಯಾಯಃ

ಅಥ ಸೋಮೋತ್ಪತ್ತಿಸ್ಥಿತಿರಹಸ್ಯಮ್

॥ ಮಹಾತಪಾ ಉವಾಚ ॥

ಬ್ರಹ್ಮಣೋ ಮಾನಸಃ ಪುತ್ರೋ ಹ್ಯತ್ರಿರ್ನಾಮಮಹಾಯಶಾಃ ।
ತಸ್ಯ ಪುತ್ರೋಽಭವತ್ಸೋಮೋ ದಕ್ಷಜಾಮಾತೃತಾಂ ಗತಃ ॥ ೧ ॥

ಯಾಸ್ಸಪ್ತವಿಂಶತಿಃ ಕನ್ಯಾ ದಾಕ್ಷಾಯಣ್ಯಾಃ ಪ್ರಕೀರ್ತಿತಾಃ ।
ಸೋಮಪತ್ನ್ಯೋಽತಿಮಾನ್ಯಾಸ್ತಾಸ್ತಾಸಾಂ ಶ್ರೇಷ್ಠಾತು ರೋಹಿಣೀ ॥ ೨ ॥

ಮೂವತ್ತೈದನೆಯ ಅಧ್ಯಾಯ

ಸೋಮೋತ್ಪತ್ತಿಸ್ಥಿತಿರಹಸ್ಯ

೧. ಮಹಾತಪಮುನಿ—ಬ್ರಹ್ಮನು ಮಾನಸಪುತ್ರನಾದ ಅತ್ರಿಯೆಂಬ ಮಹಾಕೀರ್ತಿವಂತನಿದ್ದನು. ಅತ್ರಿಗೆ ಸೋಮನೆಂಬ ಮಗನು ಹುಟ್ಟಿದನು. ಸೋಮನು ದಕ್ಷನ ಅಳಿಯನಾದನು.

೨. ದಾಕ್ಷಾಯಣಿಯರೆಂದು ಹೆಸರುಗೊಂಡ ಇಪ್ಪತ್ತೇಳು ಜನ ದಕ್ಷ ಕನ್ಯೆಯರು ಸೋಮನ(ಚಂದ್ರನ)ಪತ್ನಿಯರು. ಅವರೆಲ್ಲರೂ ಮಾನ್ಯೆಯರು ಅವರಲ್ಲಿ ಮೇಲಾದವಳು ರೋಹಿಣಿಯೆಂಬುವಳು.

ತಾಮೇವ ರಮತೇ ಸೋಮೋ ನೇತರಾಸಿತಿ ಶುಶ್ರುಮ ।
ಇತರಾಃ ಪ್ರೋಚುರಾಗತ್ಯ ಚಂದ್ರಸ್ಯಾಸಮತಾಂ ಪಿತುಃ ॥ ೩ ॥

ದಕ್ಷೋಽಪ್ಯಸಕೃದಾಗತ್ಯ ತಮುವಾಚ ಸ ನಾಕರೋತ್ ।
ಸಮತಾಂ ಸೋಽಪಿ ತಂ ದಕ್ಷಃ ಶಶಾಪಾಂತರ್ಹಿತೋ ಭವ ॥ ೪ ॥

ಏವಮುಕ್ತಃ ಕ್ಷಯಂ ಸೋಮ ಅಗಮದ್ದಕ್ಷಶಾಪತಃ ।
ದೇವಾ ಮನುಷ್ಯಾಃ ಪಶವಃ ನಷ್ಟೇ ಸೋಮೇ ಸವೀರುಧಃ ॥
ಕ್ಷೀಣಾಭವಂಸ್ತದಾ ಸರ್ವಾ ಓಷಧ್ಯಶ್ಚ ವಿಶೇಷತಃ ॥ ೫ ॥

ಕ್ಷಯಂ ಗಚ್ಛದ್ಭಿರತ್ಯರ್ಥಮೋಷಧೀಭಿಃ ಸುರರ್ಷಭಾಃ ।
ಮೂಲೇಷು ವೀರುಧಾಂ ಸೋಮಃ ಸ್ಥಿತ ಇತ್ಯೂಚುರಾತುರಾಃ ॥ ೬ ॥

---

೩. ಚಂದ್ರನು ಯಾವಾಗಲೂ ರೋಹಿಣಿಯಲ್ಲಿಯೇ ಲೋಲನಾಗಿ ಮಿಕ್ಕವರನ್ನು ಕಡೆಗಣಿಸಿದನು, ಎಂದು ಕೇಳಿದ್ದೇವೆ. ಆದುದರಿಂದ ಅವರೆಲ್ಲರೂ ತಂದೆಯಬಳಿಗೆ ಬಂದು ಚಂದ್ರನ ಪಕ್ಷಪಾತವನ್ನು ಅವನಿಗೆ ಹೇಳಿದರು.

೪. ದಕ್ಷನೂ ಹಲವುಬಾರಿ ಬಂದು ಚಂದ್ರನಿಗೆ ಹೇಳಿದನು. ಆದರೂ ಚಂದ್ರನು ಎಲ್ಲಾ ಪತ್ನಿಯರಲ್ಲಿಯೂ ಸಮನಾಗಿರಲಿಲ್ಲ. ಆದುದರಿಂದ "ನೀನು ಕಾಣಿಸದೆ ಹೋಗು" ಎಂದು ದಕ್ಷನು ಚಂದ್ರನಿಗೆ ಶಾಪವನ್ನು ಕೊಟ್ಟನು.

೫. ಹೀಗೆನಿಸಿಕೊಂಡ ಸೋಮನು ಆ ದಕ್ಷಶಾಪದಿಂದ ಕ್ಷಯವನ್ನೈದಿದನು. ಚಂದ್ರನು ನಷ್ಟವಾಗಲು ಪೊದೆಬಳ್ಳಿಗಳೊಡನೆ ವಿಶೇಷವಾಗಿ ಸರ್ವೌಷಧಿಗಳೂ, ದೇವತೆಗಳೂ, ಮನುಷ್ಯರೂ ಕ್ಷೀಣರಾದರು.

೬. ಓಷಧಿಗಳು ಹೆಚ್ಚಾಗಿ ನಾಶವಾಗಲು, ದೇವೋತ್ತಮರೂ ರೋಗ ಪೀಡಿತರಾಗಿ, ಬಳ್ಳಿಪೊದೆಗಳ ಬೇರುಗಳಲ್ಲಿ ಸೋಮನಿದ್ದನೆಂದು ಹೇಳಿದರು.

ತೇಷಾಂ ಚಿಂತಾಭವತ್ತೀವ್ರಾ ವಿಷ್ಣುಂ ಚ ಶರಣಂ ಯಯುಃ ।
ಭಗವಾನಾಹ ತಾನ್ಸರ್ವಾನ್ಬ್ರೂತ ಕಿಂ ಕ್ರಿಯತೇ ಮಯಾ ॥ ೭ ॥

ತೇ ಚೋಚುರ್ದೇವ ದಕ್ಷೇಣ ಶಪ್ತಃ ಸೋಮೋ ವಿನಾಶಿತಃ ॥
ತಾನುವಾಚ ತದಾ ದೇವೋ ಮಥ್ಯತಾಂ ಕಲಶೋದಧಿಃ ॥
ಓಷಧ್ಯಃ ಸರ್ವತೋ ದೇವಾಃ ಪ್ರಕ್ಷಿಪ್ಯಾಶು ಸುಸಂಯತೈಃ ॥ ೮ ॥

ಏವಮುಕ್ತ್ವಾ ತತೋ ದೇವಾನ್ ದಧ್ಯೌ ರುದ್ರಂ ಹರಿಃ ಸ್ವಯಮ್ ।
ಬ್ರಹ್ಮಾಣಂ ಚ ತಥಾ ದಧ್ಯೌ ವಾಸುಕಿಂ ನೇತ್ರರೂಪಿಣಮ್ ॥ ೯ ॥

ತೇ ಸರ್ವೇ ತತ್ರ ಸಹಿತಾ ಮಮಂಥುರ್ವರುಣಾಲಯಮ್ ।
ತಸ್ಮಿಂಸ್ತು ಮಥಿತೇ ಜಾತಃ ಪುನಃ ಸೋಮೋ ಮಹೀಪತೇ ॥ ೧೦ ॥

---

೭. ಅತಿ ಚಿಂತೆಯುಳ್ಳವರಾಗಿ ಅವರು ವಿಷ್ಣುವನ್ನು ಮರೆಹೊಕ್ಕರು. ಭಗವಂತನು ಅವರೆಲ್ಲರಿಗೂ "ನಾನು ಮಾಡಬೇಕಾದುದೇನು? ಹೇಳಿ." ಎಂದನು.

೮. ಅವರು, "ದೇವಾ, ದಕ್ಷನ ಶಾಪವನ್ನು ಪಡೆದು ಚಂದ್ರನು ಹಾಳಾದನು." ಎಂದರು. ಆಗ ದೇವನು ಅವರಿಗೆ "ದೇವತೆಗಳೇ ಓಷಧಿಗಳನ್ನು ಅದರ ಎಲ್ಲಾ ಕಡೆಯಲ್ಲೂ ಹಾಕಿ, ನಿಯಮವುಳ್ಳವರಾಗಿ ಕ್ಷೀರಸಮುದ್ರವನ್ನು ಕಡೆಯಿರಿ" ಎಂದು ಹೇಳಿದನು.

೯. ದೇವತೆಗಳಿಗೆ ಹೀಗೆ ಹೇಳಿ ಹರಿಯು, ತಾನೇ ರುದ್ರನನ್ನೂ ಬ್ರಹ್ಮನನ್ನೂ ಕಡೆಯುವ ಹಗ್ಗದಂತಿರುವ ವಾಸುಕಿಯನ್ನೂ ಸ್ಮರಿಸಿದನು.

೧೦. ಅವರೆಲ್ಲರೂ ಅಲ್ಲಿ ಒಟ್ಟಿಗೆ ಸೇರಿ, ಸಮುದ್ರವನ್ನು ಕಡೆದರು. ರಾಜನೇ, ಚೆನ್ನಾಗಿ ಕಡೆಯಲು, ಆ ಕ್ಷೀರಸಾಗರದಲ್ಲಿ ಮತ್ತೆ ಚಂದ್ರನುದಿಸಿದನು.

ಯೋಽಸೌ ಕ್ಷೇತ್ರಜ್ಞಸಂಜ್ಞೋಽನ್ಯೆ ದೇಹೇಸ್ಮಿನ್ಪುರುಷಃ ಪರಃ |
ಸ ಏವ ಸೋಮೋ ಮಂತವ್ಯೋ ದೇಹಿನಾಂ ಜೀವಸಂಜ್ಞಕಃ || ೧೧ ||

ಪರೋಕ್ಷಯಾ ಸ ಮೂರ್ತಿಂತು ಪೃಥಕ್ಸೌಮ್ಯಾಂ ಪ್ರಪೇದಿವಾನ್ ।
ತಮೇವ ದೇವಮನುಜಾಃ ಷೋಡಶೇಮಾಶ್ಚ ದೇವತಾಃ || ೧೨ ||

ಉಪಜೀವಂತಿ ವೃಕ್ಷಾಶ್ಚ ತಥೈವೌಷಧಯಃ ಪ್ರಭುಮ್ || ೧೩ ||

ರುದ್ರಸ್ತಮೇವ ಸಕಲಂ ದಧಾರ ಶಿರಸಾ ತದಾ |
ತದಾತ್ಮಿಕಾ ಭವಂತ್ಯಾಪೋ ವಿಶ್ವಮೂರ್ತಿರಸೌಸ್ಮೃತಃ ||
ತಸ್ಯ ಬ್ರಹ್ಮಾ ದದೌ ಪ್ರೀತಃ ಪೌರ್ಣಮಾಸೀಂ ತಿಥಿಂ ಪ್ರಭುಃ || ೧೪ ||

---

೧೧. ಯಾವ ಉತ್ತಮಪುರುಷನು ಆತ್ಮನೆಂಬ ಹೆಸರುಳ್ಳವನಾಗಿ ಈ ದೇಹದಲ್ಲಿರುವನೋ, ಅವನೇ ದೇಹಿಗಳ ಜೀವವೆಂಬ ಹೆಸರಿನ ಸೋಮನೆಂದು ತಿಳಿಯಬೇಕು.

೧೨-೧೩. ಅವನು ಪರೋಕ್ಷವಾಗಿ ಬೇರೆ ಸೌಮ್ಯ(ಚಂದ್ರ) ಮೂರ್ತಿಯನ್ನು ಪಡೆದನು ಪ್ರಭುವಾದ ಅವನ ಆಶ್ರಯದಿಂದಲೇ ದೇವತೆಗಳೂ, ಮನುಷ್ಯರೂ, ಈ ಹದಿನಾರುಜನ ದೇವತೆಗಳೂ, ವೃಕ್ಷಗಳೂ, ಓಷಧಿಗಳೂ ಜೀವಿಸುತ್ತವೆ.

೧೪. ರುದ್ರನು ಕಲಾಸಹಿತನಾದ ಅವನನ್ನೇ ಆಗ ತಲೆಯಲ್ಲಿ ಧರಿಸಿದನು. ನೀರೂ ಚಂದ್ರಾತ್ಮಕವಾದುದೇ. ಚಂದ್ರನಿಗೆ ವಿಶ್ವಮೂರ್ತಿಯೆಂದೂ ಹೆಸರು. ಪ್ರಭುವಾದ ಬ್ರಹ್ಮನು ಪ್ರೀತನಾಗಿ ಚಂದ್ರನಿಗೆ ಹುಣಿಮೆಯ ತಿಥಿಯನ್ನು ಮೀಸಲಾಗಿ ಕೊಟ್ಟನು.

ತಸ್ಯಾಮುಪೋಷಯೇದ್ರಾಜಂಸ್ತಮರ್ಥಂ ಪ್ರತಿಪಾದಯೇತ್ ।
ಸ ಚಾನ್ನಾಹಾರಶ್ಚ ಭವೇತ್ ತಸ್ಯ ಜ್ಞಾನಂ ಪ್ರಯಚ್ಛತಿ ॥
ಕಾಂತಿಂ ಪುಷ್ಟಿಂ ಚ ರಾಜೇಂದ್ರ ಧನಂ ಧಾನ್ಯಂ ಚ ಕೇವಲಮ್ ॥ ೧೫ ॥

ಇತಿ ಶ್ರೀವರಾಹಪುರಾಣೇ ಆದಿಕೃತವೃತ್ತಾಂತೇ ಮಹಾತಪ ಉಪಾಖ್ಯಾನೇ ಸೋಮೋತ್ಪತ್ತಿಸ್ಥಿತಿರಹಸ್ಯಂನಾಮ ಪಂಚತ್ರಿಂಶೋಧ್ಯಾಯಃ

---

೧೫. ರಾಜನೇ, ಹುಣಿಮೆಯ ದಿನ ಉಪವಾಸಮಾಡುವವನಿಗೆ ಚಂದ್ರನು ದ್ರವ್ಯವನ್ನೂ, ಅನ್ನವನ್ನೂ, ಜ್ಞಾನವನ್ನೂ, ಕೊಡುವನು. ಅಲ್ಲದೆ ಕಾಂತಿಯನ್ನೂ ಪುಷ್ಟಿಯನ್ನೂ, ಧನಧಾನ್ಯಗಳನ್ನೂ ಕೊಡುವನು.

ಅಧ್ಯಾಯದ ಸಾರಾಂಶ :—

ಅತ್ರಿಋಷಿಗೆ ಚಂದ್ರನು ಮಗನಾಗಿ ಉದಿಸಿದನು. ಅವನು ಅಶ್ವಿನ್ಯಾದಿಯರಾದ ಇಪ್ಪತ್ತೇಳುಜನ ದಕ್ಷಪುತ್ರಿಯರನ್ನು ವಿವಾಹಮಾಡಿಕೊಂಡು, ರೋಹಿಣಿಯೆಂಬೊಬ್ಬಳಲ್ಲಿ ಮಾತ್ರವೇ ಆಸಕ್ತನಾದನು. ಆದರಿಂದ ಕೋಪಗೊಂಡು ದಕ್ಷನು ಶಪಿಸಲು, ಚಂದ್ರನು ಕ್ಷಯಿಸಿಹೋದನು. ಚಂದ್ರನಿಲ್ಲದೆ ದೇವಲೋಕವೇ ಹಾಳಾಗುತ್ತಾ ಬರಲು ವಿಷ್ಣುವು ಹೇಳಿದಂತೆ ದೇವತೆಗಳು ಕ್ಷೀರಸಮುದ್ರವನ್ನು ಕಡೆಯಲಾಗಿ ಮತ್ತೆ ಚಂದ್ರನು ಅಲ್ಲಿ ಉದಿಸಿದನು. ಆ ಚಂದ್ರನನ್ನು ಶಿವನು ತಲೆಯಲ್ಲಿ ಧರಿಸಿದನು. ಪೌರ್ಣಿಮೆಯು ಚಂದ್ರನಿಗೆ ಪ್ರಿಯವಾದ ತಿಥಿ. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಮೂವತ್ತೈದನೆಯ ಅಧ್ಯಾಯ.

|| ಶ್ರೀಃ ||

–x–

ಷಟ್ತ್ರಿಂಶೋಽಧ್ಯಾಯಃ

ಅಥ ಪ್ರಾಚೀನೇತಿಹಾಸವರ್ಣನಮ್

|| ಮಹಾತಪಾ ಉವಾಚ ||

ಆದಿತ್ರೇತಾಸು ರಾಜಾನೋ ಮಣಿಜಾ ಯೇ ಪ್ರಕೀರ್ತಿತಾಃ |
ಕಥಯಿಷ್ಯಾಮಿ ತಾನ್ರಾಜನ್ ಯತ್ರ ಜಾತೋಽಸಿ ಪಾರ್ಥಿವ || ೧ ||

ಯೋಽಸೌ ಸುಪ್ರಭನಾಮಾಸೀತ್ಸತ್ವಂರಾಜನ್ ಕೃತೇಽಯುಗೇ |
ಜಾತೋಽಸಿ ನಾಮ್ನಾ ವಿಖ್ಯಾತಃ ಪ್ರಜಾಪಾಲೇತಿ ಶೋಭನಃ || ೨ ||

ಶೇಷಾಸ್ತ್ರೇತಾಯುಗೇ ರಾಜನ್ ಭವಿಷ್ಯಂತಿ ಮಹಾಬಲಾಃ || ೩ ||

ಮೂವತ್ತಾರನೆಯ ಅಧ್ಯಾಯ

ಪ್ರಾಚೀನೇತಿಹಾಸವರ್ಣನೆ

೧. ಮಹಾತಪಮುನಿ—ಪ್ರಜಾಪಾಲನೇ, ಮಣಿಜರೆಂದು ಹೇಳಿಸಿಕೊಂಡವರು ಆದಿ ತ್ರೇತ್ರಾಯುಗದಲ್ಲಿ ರಾಜರಾದರಷ್ಟೆ. ಅವರ(ವಿಚಾರವನ್ನೂ) ನೀನು ಎಲ್ಲಿ ಹುಟ್ಟಿದೆಯೆಂಬುದನ್ನೂ ಹೇಳುವೆನು.

೨. ದೊರೆಯೇ ಕೃತಯುಗದಲ್ಲಿ ಸುಪ್ರಭನೆಂಬ ಹೆಸರುಳ್ಳವನಾಗಿದ್ದ ನೀನು ಪ್ರಖ್ಯಾತನೂ, ಮಂಗಳಯುತನೂ, ಆಗಿ ಪ್ರಜಾಪಾಲನೆಂಬ ಹೆಸರಿನಿಂದ ಉದಿಸಿದ್ದೀಯೆ.

೩. ರಾಜನೇ, ಉಳಿದವರು ತ್ರೇತಾಯುಗದಲ್ಲಿ ಮಹಾಬಲಶಾಲಿಗಳಾದ ರಾಜರಾಗಿ ಉದಿಸುವರು.

ಯೋ ದೀಪ್ತತೇಜಾ ಮಣಿಜಃ ಸಶಾಂತ ಇತಿ ಕೀರ್ತಿತಃ ।
ಸುರಶ್ಮಿರ್ಭವಿತಾ ರಾಜಾ ಶಶಕರ್ಣೋ ಮಹಾಬಲಃ ॥
ಶುಭದರ್ಶನಃ ಪಾಂಚಾಲೋ ಭವಿಷ್ಯತಿ ನ ಸಂಶಯಃ ॥ ೪ ॥

ಸುಶಾಂತಿರಂಗವಂಶೇಽನ್ಯೆ ಸುಂದರೋಽಪ್ಯಂಗ ಇತ್ಯುತ ।
ಸುಂದಶ್ಚ ಮುಚುಕುಂದೋಽಭೂತ್ಸುದ್ಯುಮ್ನಸ್ತುರುರೇವ ಚ ॥ ೫ ॥

ಸುಮನಾಃ ಸೋಮದತ್ತಸ್ತು ಶುಭಸ್ಸಂವರಣೋಽಭವತ್ ।
ಸುಶೀಲೋ ವಸುದಾನಸ್ತ್ವಸುಪತಿಃ ಸುಖದೋಽಭವತ್ ॥ ೬ ॥

ಶಂಭುಃ ಸೇನಾಪತಿರಭೂ*ತ್ಕಾಂತೋ ದಶರಥಃ ಸ್ಮೃತಃ ।
ಸೋಮೋಽಭೂಜ್ಜನಕೋ ರಾಜಾ ಏತೇ ತ್ರೇತಾಯುಗೇ ನೃಪಾಃ ॥ ೭ ॥

---

೪. ದೀಪ್ತತೇಜನೆಂಬ ಮಣಿಜನು ಶಾಂತನೆನಿಸಿಕೊಳ್ಳುವನು. ಸುರಶ್ಮಿಯು ಶಶಕರ್ಣನೆಂಬ ಹೆಸರಿನವನಾಗುವನು. ಶುಭದರ್ಶನನು ಸಂದೇಹವಿಲ್ಲದೆ ಪಾಂಚಾಲನಾಗುವನು.

೫. ಸುಶಾಂತಿಯೂ, ಸುಂದರನೂ ಅಂಗವಂಶದಲ್ಲಿ ಜನಿಸುವರು. ಸುಂದನು ಮುಚುಕುಂದನಾಗುವನು. ಸುದ್ಯುಮ್ನನು ತುರುವೆಂಬ ರಾಜನಾಗುವನು

೬. ಸುಮನನು ಸೋಮದತ್ತನೆನಿಸಿಕೊಳ್ಳುವನು ಶುಭನು ಸಂವರಣನಾಗುವನು. ಸುಶೀಲನು ವಸುದಾನನಾಗುವನು. ಸುಖದನು ಅಸುಪತಿಯೆನಿಸಿಕೊಳ್ಳುವನು.

೭-೮. ಶಂಭುವು ಸೇನಾಪತಿಯೆಂಬ ಹೆಸರುಳ್ಳವನಾಗುವನು. *ಕಾಂತನು (ಸುದಾಂತನು)ದಶರಥನೆನಿಸಿಕೊಳ್ಳುವನು. ಸೋಮನು ಜನಕರಾಜನೆನಿಸಿಕೊಳ್ಳುವನು. ರಾಜನೇ ಇವರೆಲ್ಲರೂ ತ್ರೇತಾಯುಗದಲ್ಲಿ ರಾಜರಾಗಿ ಈ ಭೂಮಿಯನ್ನು

---

* ಹಿಂದೆ ೧೧ನೆಯ ಅಧ್ಯಾಯದಲ್ಲಿ ಕಾಂತ ಎಂಬ ಹೆಸರಿಲ್ಲ. ಅಲ್ಲಿ ಸುದಾಂತ ಎಂದಿದೆ.

ಸರ್ವೇ ಭೂಮಿಮಿಮಾಂ ರಾಜನ್ ಭುಕ್ತ್ವಾ ತೇ ವಸುಧಾಧಿಪಾಃ ।
ಇಷ್ಟ್ವಾ ಚ ವಿವಿಧೈರ್ಯಜ್ಞೈರ್ದಿವಂ ಪ್ರಾಪ್ಸ್ಯಂತ್ಯಸಂಶಯಮ್ ॥ ೮ ॥

॥ ವರಾಹ ಉವಾಚ ॥

ಏವಂ ಶ್ರುತ್ವಾ ಸ ರಾಜರ್ಷಿಃ ಬ್ರಹ್ಮವಿದ್ಯಾಮೃತಂ ಪ್ರಭುಃ ।
ಆಖ್ಯಾನಂ ಪರಮಂ ಪ್ರೀತಃ ತಪಶ್ಚರ್ತುಮಗಾದ್ವನಮ್ ॥ ೯ ॥

ಋಷಿರಧ್ಯಾತ್ಮಯೋಗೇನ ವಿಹಾಯೇದಂ ಕಲೇವರಮ್ ।
ಬ್ರಹ್ಮಭೂತೋಽಭವದ್ಧಾತ್ರಿ ಹರೌ ಲಯಮವಾಪ ಚ ॥ ೧೦ ॥

ಬೃಂದಾವನಂ ಚ ರಾಜಾಸೌ ತಪೋಽರ್ಥೇ ಗತವಾನ್ಪ್ರಭುಃ ।
ತತ್ರ ಗೋವಿಂದನಾಮಾನಂ ಹರಿಂ ಸ್ತೋತುಮಥಾರಭತ್ ॥ ೧೧ ॥

॥ ರಾಜೋವಾಚ ॥

ನಮಾಮಿ ದೇವಂ ಜಗತಾಂ ಚ ಮೂರ್ತಿಂ ।
ಗೋಪೇಂದ್ರಮಿಂದ್ರಾನುಜಮಪ್ರಮೇಯಮ್ ॥
ಸಂಸಾರಚಕ್ರಕ್ರಮಣೈಕದಕ್ಷಮ್ ॥
ಪೃಥ್ವೀಧರಂ ದೇವವರಂ ನಮಾಮಿ ॥ ೧೨ ॥

ಆಳಿ, ಬಗೆಬಗೆಯ ಯಜ್ಞಗಳನ್ನು ಮಾಡಿ, ನಿಜವಾಗಿಯೂ ಸ್ವರ್ಗವನ್ನು ಪಡೆಯುವರು.

೯. ವರಾಹ—ಧಾತ್ರಿಯೇ, ರಾಜರ್ಷಿಯಾದ ಆ ಪ್ರಜಾಪಾಲನು ಬ್ರಹ್ಮವಿದ್ಯಾಮೃತವಾದ ಶ್ರೇಷ್ಠವಾದ ಈ ಕಥೆಯನ್ನು ಕೇಳಿ, ಸಂತೋಷಪಟ್ಟು ತಪಸ್ಸುಮಾಡಲು ವನಕ್ಕೆ ಹೊರಟುಹೋದನು.

೧೦. ಮಹಾತಪಋಷಿಯು ಅಧ್ಯಾತ್ಮಯೋಗದಿಂದ ಈ ದೇಹವನು ಬಿಟ್ಟು ಬ್ರಹ್ಮಸ್ವರೂಪನಾಗಿ ಹರಿಸಾಯುಜ್ಯವನ್ನು ಪಡೆದನು.

೧೧ ತಪಸ್ಸಿಗಾಗಿ ಬೃಂದಾವನಕ್ಕೂ ಹೋದ ಪ್ರಜಾಪಾಲರಾಜನು ಅಲ್ಲಿ ಗೋವಿಂದನೆಂಬ ಹೆಸರಿನ ಹರಿಯನ್ನು ಸ್ತುತಿಸುವುದಕ್ಕೆ ಮೊದಲುಮಾಡಿದನು.

೧೨. ರಾಜ—ಜಗನ್ಮೂರ್ತಿಯೂ, ಗೋ*ಪೇಂದ್ರನೂ, ಇಂದ್ರಾನುಜನೂ, ಅಪ್ರಮೇಯನೂ ಆದ ದೇವನನ್ನು ನಮಸ್ಕರಿಸುತ್ತೇನೆ. ಸಂಸಾರ ಚಕ್ರವನ್ನು

---

* ಗೋ = ಸ್ವರ್ಗ, ಪಶು, ಭೂಮಿ.

ಭವೋದಧೌ ದುಃಖಶತೋರ್ಮಿಭೀಮೇ ।
ಜರಾವರ್ತೇ ತೃಷ್ಣಪಾತಾಲಮೂಲೇ ॥
ತದಂತ ಏಕೋ ದದಕೇ ಸುಖಂ ಮೇ ।
ನಮೋಽಸ್ತು ತೇ ಗೋಪತಯೇಽಪ್ರಮೇಯ ॥ ೧೩ ॥

ವ್ಯಾಧ್ಯಾದಿಯುಕ್ತೈಃ ಪುರುಷೈರ್ಗ್ರಹೈಶ್ಚ ।
ಸಂಘಟ್ಟಮಾನಂ ಪುನರೇವ ದೇವ ॥
ಗೋಪೇಂದ್ರ ಮಾಂ ಪಾಹಿ ಮಹಾನುಭಾವ ।
ಭವಾದ್ಭೀತಂ ತಿಗ್ಮರಥಾಂಗಪಾಣೇ ॥ ೧೪ ॥

ನಮೋಽಸ್ತು ತೇ ಯುದ್ಧರತೇ ಮಹಾತ್ಮನ್ ।
ಜನಾರ್ದನೋಪೇಂದ್ರ ಸಮಸ್ತಬಂಧೋ ॥
ತ್ವಮುತ್ತಮಃ ಸರ್ವವಿದಾಂ ಸುರೇಶ ।
ತ್ವಯಾ ತತಂ ವಿಶ್ವಮಿದಂ ಸಮಸ್ತಮ್ ॥ ೧೫ ॥

ನಡೆಯಿಸುವುದರಲ್ಲಿ ಅತಿಸಮರ್ಥನೂ, ಭೂಧರನೂ ಆದ ದೇವೋತ್ತಮನನ್ನು ನಮಸ್ಕರಿಸುತ್ತೇನೆ.

೧೩. ನೂರಾರುಬಗೆಯ ದುಃಖಗಳೆಂಬ ಅಲೆಗಳಿಂದ ಭಯಂಕರವಾಗಿ ಮುಪ್ಪೆಂಬಸುಳಿಯೂ, ಆಸೆಯೆಂಬ ಆಳವಾದ ತಳವೂ ಉಳ್ಳ ಜನ್ಮಸಂಸಾರ ಸಾಗರದಲ್ಲಿ ಬಿದ್ದಿರುವ ನನಗೆ ಅದರ ಕೊನೆ(ದಡ)ವೊಂದೇ ಸುಖವು. ಅದನ್ನು ನನಗೆ ಕೊಡುವ ಅಪ್ರಮೇಯನೇ, ಗೋಪತಿಯಾದ ನಿನಗೆ ನಮಸ್ಕಾರವು.

೧೪. ದೇವಾ, ತೀಕ್ಷ್ಣವಾದ ಚಕ್ರವನ್ನು ಧರಿಸುವವನೇ, ಗೋಪೇಂದ್ರನೇ, ಮಹಾನುಭಾವನೇ, ವ್ಯಾಧಿಯೇ ಮೊದಲಾದುವುಗಳಿಂದ ಕೂಡಿದ ಮನುಷ್ಯರ ಮತ್ತು ಭೂತವಿಶೇಷಗಳ ಸಂಘಟ್ಟನಕ್ಕೊಳಗಾಗಿ, ಮತ್ತೆ ಸಂಸಾರಕ್ಕೆ ಭೀತನಾಗಿರುವ ನನ್ನನ್ನು ಕಾಪಾಡು.

೧೫. ಯುದ್ಧದಲ್ಲಿ ಆಸಕ್ತಿಯುಳ್ಳವನೇ, ಮಹಾತ್ಮ, ಜನಾರ್ದನ, ಉಪೇಂದ, ಸರ್ವಬಂಧುವೇ, ನಿನಗೆ ನಮಸ್ಕಾರ. ದೇವೇಶ, ನೀನು ಸರ್ವಜ್ಞೋತ್ತಮನು. ನಿನ್ನಿಂದ ಈ ಸಮಸ್ತ ವಿಶ್ವವೂ ವ್ಯಾಪ್ತವಾಗಿದೆ.

ಪರೋಽಸಿ ದೇವಃ ಪ್ರವರಃ ಸುರಾಣಾಮ್ ।
ಪುರಾಣರೂಪೋಽಸಿ ಶಶಿಪ್ರಕಾಶಃ ॥
ಹುತಾಶವಕ್ತ್ರಾಚ್ಯುತ ತೀವ್ರಭಾವ ।
ಗೋಪೇಂದ್ರ ಮಾಂ ಪಾಹಿ ಭವೇಪತಂತಮ್ ॥ ೧೬ ॥

ಸಂಸಾರಚಕ್ರಕ್ರಮಣಾನ್ಯನೇಕಾ ॥
ನ್ಯಾವಿರ್ಭವಂತ್ಯಚ್ಯುತ ದೇಹಿನಾಂ ಯತ್ ।
ತ್ವನ್ಮಾಯಯಾ ಮೋಹಿತಾನಾಂ ಸುರೇಶ ॥
ಕಸ್ತೇ ಮಾಯಾಂ ತರತೇ ದ್ವಂದ್ವಭಾವಾ ॥ ೧೭ ॥

ಅಗೋತ್ರಮಸ್ಪರ್ಶಮರೂಪಗಂಧ ।
ಮನಾಮನಿರ್ದೇಶಮಜಂ ವರೇಣ್ಯಮ್ ॥
ಗೋಪೇಂದ್ರ ಯೇ ತ್ವಾಮುಪಾಸಂತಿ ಧೀರಾ ।
ಸ್ತೇ ಮುಕ್ತಿಭಾಜೋಽಭವಧರ್ಮಯುಕ್ತಾಃ ॥ ೧೮ ॥

---

೧೬. ಲೋಕದಲ್ಲಿ ನೀನೇ ಶ್ರೇಷ್ಠನೂ, ಜ್ಯೇಷ್ಠನೂ ಆಗಿರುವೆ. ದೇವೋತ್ತಮನೂ, ಪುರಾಣಪುರುಷನೂ, ಚಂದ್ರಪ್ರಕಾಶನೂ ಆಗಿರುವೆ. ಅಗ್ನಿಮುಖನೇ, ಅಚ್ಯುತ, ಅತಿಶಯವಾದ ಭಾವ*ವುಳ್ಳವನೇ, ಗೋಪೇಂದ್ರನೇ, ಸಂಸಾರದಲ್ಲಿ ಬಿದ್ದಿರುವ ನನ್ನನ್ನು ಕಾಪಾಡು.

೧೭. ಅಚ್ಯುತನೇ, ನಿನ್ನ ಮಾಯೆಯಿಂದ ಮೋಹಿತರಾದ ದೇಹಿಗಳಿಗೆ ಅನೇಕ ಸಂಸಾರಚಕ್ರಭ್ರಮಣಗಳುಂಟಾಗುವುವು. ರಹಸ್ಯವಾದ ನೆಲೆಯುಳ್ಳವನೇ, ಸುರೇಶನೇ, ನಿನ್ನ ಮಾಯೆಯನ್ನು ಮೀರುವವರಾರು !

೧೮. ಗೋಪೇಂದ್ರನೇ, ಗೋತ್ರಸ್ಪರ್ಶರೂಪಗಂಧಗಳಿಲ್ಲದವನೂ, ನಿಷ್ಕೃಷ್ಟವಾದ ಒಂದು ಹೆಸರಿಲ್ಲದವನೂ, ಹುಟ್ಟಿಲ್ಲದವನೂ, ಶ್ರೇಷ್ಠನೂ ಆದ ನಿನ್ನನ್ನು ಸಂಸಾರಧರ್ಮಯುಕ್ತರಾದರೂ, ವಿದ್ವಾಂಸರಾದ ಯಾರು ಸೇವಿಸುವರೋ ಅವರು ಮುಕ್ತಿಗೆ ಪಾತ್ರರಾಗುವರು.

---

* ಭಾವ = ಸ್ವಭಾವ, ಮಹಿಮೆ, ಆತ್ಮ, ಐಶ್ವರ್ಯ, ವಿಲಾಸ, ಅಭಿಪ್ರಾಯ.

ಶಬ್ದಾತಿಗಂ ವ್ಯೋಮರೂಪಂ ವಿಮೂರ್ತಿಮ್ ।
ವಿಕರ್ಮಿಣಂ ಶುಭಭಾವಂ ವರೇಣ್ಯಮ್ ॥
ಚಕ್ರಾಬ್ಜಪಾಣಿಂ ತು ತಥೋಪಚಾರಾ ।
ದುಕ್ತಂ ಪುರಾಣೇ ಸತತಂ ನಮಾಮಿ ॥ ೧೯ ॥

ತ್ರಿವಿಕ್ರಮಂ ಕ್ರೀತಜಗತ್ರಯಂ ಚ ।
ಚತುರ್ಮೂರ್ತಿಂ ವಿಶ್ವಜಗತ್ ಕ್ಷಿತೀಶಮ್ ॥
ಶಂಭುಂ ವಿಭುಂ ಭೂತಪತಿಂ ಸುರೇಶಮ್ ।
ನಮಾಮ್ಯಹಂ ವಿಷ್ಣುಮನಂತಮೂರ್ತಿಮ್ ॥ ೨೦ ॥

ತ್ವಂ ದೇವ ಸರ್ವಾಣಿ ಚರಾಚರಾಣಿ ।
ಸೃಜಸ್ಯಥೋ ಸಂಹರಸೇ ತ್ವಮೇವ ॥
ಮಾಂ ಮುಕ್ತಿಕಾಮಂ ನಯ ದೇವ ಶೀಘ್ರಮ್ ।
ಯಸ್ಮಿನ್ಗತಾ ಯೋಗಿನೋ ನೋಪಯಾಂತಿ ॥ ೨೧ ॥

---

೧೯. ಶಬ್ದಾತೀತನೂ, ಆಕಾಶರೂಪನೂ, ರೂಪರಹಿತನೂ, ಕರ್ಮರಹಿತನೂ, ಉತ್ತಮವಾದ ಅಭಿಪ್ರಾಯವುಳ್ಳವನೂ, ಶ್ರೇಷ್ಠನೂ, ಚಕ್ರಪದ್ಮಹಸ್ತನೂ ಆಗಿರುವನೆಂದು ಔಪಚಾರಿಕವಾಗಿ ಪುರಾಣದಲ್ಲಿ ಹೇಳಿಸಿಕೊಂಡಿರುವವನನ್ನು ಯಾವಾಗಲೂ ನಮಸ್ಕರಿಸುತ್ತೇನೆ.

೨೦. ತ್ರಿವಿಕ್ರಮನೂ, ಮೂರುಲೋಕಗಳಧಿಪತಿಯೂ, ಚತುರ್ಮೂರ್ತಿಯೂ, ಸರ್ವಜಗತ್ಪತಿಯೂ, ಶಂಭುವೂ, ಭೂತಪತಿಯೂ, ದೇವೇಶನೂ, ಅನಂತಮೂರ್ತಿಯೂ ಆದ ವಿಷ್ಣುವನ್ನು ನಾನು ನಮಸ್ಕರಿಸುತ್ತೇನೆ.

೨೧. ದೇವ, ಸರ್ವಚರಾಚರಗಳನ್ನೂ ನೀನೇ ಸೃಷ್ಟಿಸುತ್ತೀಯೆ. ಬಳಿಕ ನೀನೇ ಸಂಹರಿಸುತ್ತೀಯೆ. ಸ್ವಾಮಿ, ಮುಕ್ತಿಯನ್ನು ಬಯಸುವ ನನ್ನನ್ನು, ಯಾವೆಡೆಗೆ ಹೋದ ಯೋಗಿಗಳು ಹಿಂದಕ್ಕೆ ಬರುವುದಿಲ್ಲವೋ ಆಯೆಡೆಗೆ ಬೇಗನೆ ಒಯ್ಯಿ.

ಜಯಸ್ವ ಗೋವಿಂದ ಮಹಾನುಭಾವ
ಜಯಸ್ವ ವಿಷ್ಣೋ ಜಯಪದ್ಮನಾಭ ।
ಜಯಸ್ವ ಸರ್ವಜ್ಞ ಜಯಾಪ್ರಮೇಯ
ಜಯಸ್ವ ವಿಶ್ವೇಶ್ವರ ವಿಶ್ವಮೂರ್ತೇ ॥ ೨೨ ॥

॥ ಶ್ರೀವರಾಹ ಉವಾಚ ॥

ಏವಂ ಸ್ತುತ್ವಾ ತದಾ ರಾಜಾ ನಿಧಾಯ ಸ್ವಂ ಕಲೇವರಮ್ ।
ಪರಮಾತ್ಮನಿ ಗೋವಿಂದೇ ಮೋಕ್ಷಮಾಗಾಚ್ಛಶಾಶ್ವತಮ್ ॥ ೨೩ ॥

ಇತಿ ಶ್ರೀ ವರಾಹಪುರಾಣೇ ಪ್ರಾಗಿತಿಹಾಸೇ ಷಟ್ತ್ರಿಂಶೋಽಧ್ಯಾಯಃ

---

೨೨. ಜಯಿಸು ಗೋವಿಂದನೇ, ಪೃಥುಲಾನುಭಾವನೇ. ಜಯಿಸು ವಿಷ್ಣುವೆ, ಜಯಿಸು ನೀಂ ಪದ್ಮನಾಭ. ಜಯಿಸು ಸರ್ವಜ್ಞನೇ, ಜಯಿಸ ಪ್ರಮೇಯನೇ, ಜಯಿಸು ವಿಶ್ವೇಶ್ವರನೆ, ವಿಶ್ವಮೂರ್ತಿೀ.

೨೩. ಶ್ರೀವರಾಹ--ಹೀಗೆ ಸ್ತುತಿಸಿ, ಆ ಪ್ರಜಾಪಾಲನು ದೇಹವನ್ನು ಬಿಟ್ಟು, ಪರಮಾತ್ಮನಾದ ಗೋವಿಂದನಲ್ಲಿ ಶಾಶ್ವತವಾದ ಮೋಕ್ಷವನ್ನು ಪಡೆದನು.

ಅಧ್ಯಾಯದ ಸಾರಾಂಶ :—

ಪ್ರಜಾಪಾಲರಾಜನು, ಮಹಾತಪಮುನಿಯಿಂದ ತನ್ನ ಮತ್ತು ಹಿಂದೆ ದುರ್ಜಯನ ನಾಶಕ್ಕಾಗಿ ತನ್ನೊಡನೆ ಉದಿಸಿದ ಇತರ ಮಣಿಜರ ಮುಂದಿನ ಜನ್ಮವೃತ್ತಾಂತವನ್ನು ಕೇಳಿ, ಜ್ಞಾನವನ್ನು ಪಡೆದು ತಪಸ್ಸಿಗಾಗಿ ಬೃಂದಾವನಕ್ಕೆ ಹೋದನು. ಅಲ್ಲಿ ಗೋವಿಂದನಾಮನಾದ ಹರಿಯನ್ನು ಸ್ತುತಿಸಿ ದೇಹವನ್ನು ತ್ಯಜಿಸಿ, ಮೋಕ್ಷವನ್ನು ಪಡೆದನು. ಎಂಬಲ್ಲಿಗೆ ಶ್ರೀವರಾಹಪುರಾಣದಲ್ಲಿ ಮೂವತ್ತಾರನೆಯ ಅಧ್ಯಾಯ

|| ಶ್ರೀಃ ||

-x-

ಸಪ್ತಸ್ತ್ರಿಂಶೋಽಧ್ಯಾಯಃ

ಅಥ ಪ್ರಾಚೀನೇತಿಹಾಸವರ್ಣನಂ

|| ಧರಣ್ಯುವಾಚ ||

ಕಥಮಾರಾಧ್ಯಸೇ ದೇವ ಭಕ್ತಿಮದ್ಭಿರ್ನರೈರ್ವಿಭೋ ।
ಸ್ತ್ರೀಭಿರ್ವಾ ಸರ್ವಮೇತನ್ಮೇ ಶಂಸ ತ್ವಂ ಭೂತಭಾವನ || ೧ ||

|| ಶ್ರೀವರಾಹ ಉವಾಚ ||

ಭಾವಸಾಧ್ಯೋಽಸ್ಮ್ಯಹಂ ದೇವಿ ನ ವಿತ್ತೈರ್ನ ಜಪೈರಹಮ್ ।
ಸಾಧ್ಯಸ್ತಥಾಪಿ ಭಕ್ತಾನಾಂ ಕಾಯಕ್ಲೇಶಂ ವದಾಮಿ ತೇ || ೨ ||

ಕರ್ಮಣಾ ಮನಸಾ ವಾಚಾ ಮಚ್ಚಿತ್ತೋ ಯೋ ನರೋ ಭವೇತ್ ।
ತಸ್ಯ ವ್ರತಾನಿ ವಕ್ಷ್ಯೇಽಹಂ ವಿವಿಧಾನಿ ನಿಬೋಧ ಮೇ || ೩ ||

ಮೂವತ್ತೇಳನೆಯ ಅಧ್ಯಾಯ

ಪ್ರಾಚೀನೇತಿಹಾಸ ವರ್ಣನೆ.

೧. ಭೂದೇವಿ—ದೇವ, ಭೂತಭಾವನ, ವಿಭುವೇ, ಭಕ್ತಿಯುಳ್ಳ ಮನುಷ್ಯರು, ಹೆಂಗಸರಾಗಲಿ, ಗಂಡಸರಾಗಲಿ ನಿನ್ನನ್ನು ಹೇಗೆ ಆರಾಧಿಸಬೇಕು. (ಪೂಜಿಸಬೇಕು)? ಇದನ್ನು ನನಗೆ ವಿಶದವಾಗಿ ಹೇಳು.

೨. ಶ್ರೀವರಾಹ—ದೇವಿ, ನಾನು ಭಾವದಿಂದ ಸಾಧ್ಯನೇ (ಒಲಿಯುವವನೇ) ಹೊರತು ಧನದಿಂದಲೂ ಜಪಗಳಿಂದಲೂ ಸಾಧ್ಯನಲ್ಲ. (ಒಲಿಯುವವನಲ್ಲ). ಆದರೂ ಭಕ್ತರಿಗೆ ಬೇಕಾದ ಕಾಯಕ್ಲೇಶವನ್ನು ನಿನಗೆ ಹೇಳುತ್ತೇನೆ.

೩. ಮನಸ್ಸಿನಲ್ಲೂ, ಮಾತಿನಲ್ಲೂ, ಕರ್ಮದಲ್ಲೂ, ಯಾರು ನನ್ನಲ್ಲೇ ಚಿತ್ತವುಳ್ಳವರಾಗಿರುವರೋ ಅವರಿಗೆ ಬಗೆಬಗೆಯಾದ ವ್ರತ(ನಿಯಮ)ಗಳನ್ನು ನಾನು ಹೇಳುವೆನು. ತಿಳಿದುಕೊ.

ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ಪ್ರಕೀರ್ತಿತಂ ।
ಏತಾನಿ ಮಾನಸಾನ್ಯಾಹುಃ ವ್ರತಾನಿತು ಧರಾಧರೇ ॥ ೪ ॥

ಏಕಭುಕ್ತಂ ತಥಾ ನಕ್ತಮುಪವಾಸಾದಿಕಂ ಚ ಯತ್ ।
ತತ್ಸರ್ವಂ ಕಾಯಿಕಂ ಪುಂಸಾಂ ವ್ರತಂ ಭವತಿ ನಾನ್ಯಥಾ ॥ ೫ ॥

ವೇದಸ್ಯಾಧ್ಯಯನಂ ವಿಷ್ಣೋಃ ಕೀರ್ತನಂ ಸತ್ಯಭಾಷಣಂ ।
ಅಪೈಶುನ್ಯಂ ಹಿತಂ ಧರ್ಮಂ ವಾಚಿಕಂ ವ್ರತಮುತ್ತಮಂ ॥ ೬ ॥

ಅತ್ರಾಪಿ ಶ್ರೂಯತೇ ಚಾನ್ಯದೃಷಿರುಗ್ರತಪಾಃ ಪುರಾ ।
ಬ್ರಹ್ಮಪುತ್ರಃ ಪುರಾಕಲ್ಪೇ ಆರುಣಿರ್ನಾಮ ನಾಮತಃ ॥ ೭ ॥

ಸೋರಣ್ಯಮಗಮತ್ಕಿಂಚಿತ್ತಪೋರ್ಥೇ ದ್ವಿಜಸತ್ತಮಃ ।
ತಪಸ್ತೇಪೇ ತತಸ್ತಸ್ಮಿನ್ನುಪವಾಸಪರಾಯಣಃ ॥ ೮ ॥

---

೪. ಧರಾಧರೇ, ಅಹಿಂಸೆ, ಸತ್ಯ, ಕದಿಯದಿರುವುದು, ಬ್ರಹ್ಮಚರ್ಯ ಇವು ಮಾನಸಿಕವ್ರತಗಳೆನಿಸುವುವು.

೫. ಒಂದು ಹೊತ್ತುಮಾತ್ರ ಊಟಮಾಡಿ, ರಾತ್ರಿಯಲ್ಲಿ ಉಪವಾಸಾದಿಗಳನ್ನಾಚರಿಸುವುದೆಲ್ಲವೂ ಮನುಷ್ಯರಿಗೆ ಕಾಯಿಕವ್ರತವಾಗಿರುವುದು.

೬. ವೇದಾಭ್ಯಾಸ, ವಿಷ್ಣುಕೀರ್ತನ, ಸತ್ಯಭಾಷಣ, ಪಿಶುನತನವಿಲ್ಲದಿರುವುದು ಇದೆಲ್ಲ ಉತ್ತಮವಾದ ವಾಚಿಕವ್ರತವೆನಿಸುವುದು. (ಕಲಿಯುಗದಲ್ಲಿ ಆಚರಿಸುವುದಕ್ಕೆ)ಇದು ಹಿತವಾದ ಧರ್ಮ.

೭. ಈ ವಿಷಯದಲ್ಲಿ ಬೇರೊಂದು ಕಥೆಯಿದೆ. ಪೂರ್ವಕಲ್ಪದಲ್ಲಿ ಬ್ರಹ್ಮಪುತ್ರನಾದ ಆರುಣಿಯೆಂಬ ಹೆಸರಿನ ಮಹಾತಪಸ್ವಿಯಿದ್ದನು.

೮. ದ್ವಿಜೋತ್ತಮನಾದ ಅವನು ತಪಸ್ಸಿಗಾಗಿ ಒಂದು ವನಕ್ಕೆ ಹೋದನು. ಬಳಿಕ ಅಲ್ಲಿ ಉಪವಾಸನಿರತನಾಗಿ ತಪಸ್ಸನ್ನು ಮಾಡಿದನು.

ದೇವಿಕಾಯಾಸ್ತಟೇ ರಮ್ಯೇ ಸೋಽವಸದ್ಬ್ರಾಹ್ಮಣಃ ಕಿಲ ।
ಕದಾಚಿದಭಿಷೇಕಾಯ ಸ ಜಗಾಮ ಮಹಾನದೀಂ ॥ ೯ ॥

ತತ್ರ ಸ್ನಾತ್ವಾ ಜಪನ್ವಿಪ್ರೋ ದದರ್ಶಾಯಾಂತಮಗ್ರತಃ ।
ವ್ಯಾಧಂ ಮಹಾಧನುಷ್ಪಾಣಿಮುಗ್ರನೇತ್ರಂ ವಿಭೀಷಣಂ ॥ ೧೦ ॥

ತಂ ದ್ವಿಜಂ ಹಂತುಮಾಯಾತ್ಸ ವಲ್ಕಲಾನಾಂ ಜಿಘೃಕ್ಷಯಾ ।
ತಂ ದೃಷ್ಟ್ವಾ ಕ್ಷುಭಿತೋ ವಿಪ್ರೋ ಬ್ರಹ್ಮಘ್ನಸ್ಯ ಭಯಾದಿತಿ ॥
ಧ್ಯಾಯನ್ನಾರಾಯಣಂ ದೇವಂ ತಸ್ಥೌ ತತ್ರೈವ ಸ ದ್ವಿಜಃ ॥ ೧೧ ॥

ತಂ ದೃಷ್ಟ್ವಾಂತರ್ಗತಹರಿಂ ವ್ಯಾಧೋ ಭೀತ ಇವಾಗ್ರತಃ ।
ವಿಹಾಯ ಸಶರಂ ಚಾಪಂ ತತೋ ವಚನಮಬ್ರವೀತ್ ॥ ೧೨ ॥

ಹಂತುಮಿಚ್ಛನ್ನಹಂ ಬ್ರಹ್ಮನ್ ಭವಂತಂ ಪ್ರಾಗಿಹಾಗತಃ ।
ಇದಾನೀಂ ದರ್ಶನಾತ್ತುಭ್ಯಂ ಸಾಮತಿಃ ಕ್ವಾಪಿ ಮೇಗತಾ ॥ ೧೩ ॥

---

೯. ಆ ಬ್ರಾಹ್ಮಣನು ತಪಸ್ಸುಮಾಡುತ್ತಿದ್ದುದು ರಮ್ಯವಾದ ದೇವಿಕಾ ನದಿಯ ದಡದಲ್ಲಲ್ಲವೆ ! ಒಂದಾನೊಂದು ವೇಳೆ ಅವನು ಸ್ನಾನಕ್ಕಾಗಿ ಮಹಾನದಿಗೆ ಹೋದನು.

೧೦. ಅಲ್ಲಿ ಸ್ನಾನಮಾಡಿ, ಜಪಮಾಡುತ್ತಿದ್ದ ಆ ಬ್ರಾಹ್ಮಣನು, ದೊಡ್ಡಬಿಲ್ಲನ್ನುಹಿಡಿದುಕೊಂಡು ಎದುರಿಗೆಬರುತ್ತಿರುವ ಕ್ರೂರದೃಷ್ಟಿಯುಳ್ಳವನೂ, ಭಯಂಕರನೂ ಆದ ಬೇಡನೊಬ್ಬನನ್ನು ಕಂಡನು.

೧೧. ಆ ಬೇಡನು ಬ್ರಾಹ್ಮಣನ ನಾರುಬಟ್ಟೆಗಳನ್ನು ಅಪಹರಿಸುವುದಕ್ಕಾಗಿ ಅವನನ್ನು ಕೊಲ್ಲಲು ಬಂದನು. ಬ್ರಹ್ಮಹತ್ಯಮಾಡುವ ಆ ಬೇಡನಿಂದ ಹೆದರಿದ ಬ್ರಾಹ್ಮಣನು ದೇವನಾದ ನಾರಾಯಣನನ್ನು ಸ್ಮರಿಸುತ್ತ ಅಲ್ಲಿಯೇ ನಿಂತಿದ್ದನು.

೧೨. ಒಳಗೆ ಹರಿಯಿರುವ ಆ ಬ್ರಾಹ್ಮಣನನ್ನು ನೋಡಿ ಹೆದರಿದವನಂತೆ ಬಾಣದಿಂದ ಕೂಡಿದ ಬಿಲ್ಲನ್ನು ಬಿಸುಟ್ಟು, ಬೇಡನು ಬಳಿಕ ಮಾತನಾಡಿದನು.

೧೩. "ಬ್ರಾಹ್ಮಣನೇ, ನಿನ್ನನ್ನು ಕೊಲ್ಲಬೇಕೆಂದು ಮೊದಲು ನಾನು ಇಲ್ಲಿಗೆ ಬಂದೆನು. ಈಗ ನಿನ್ನ ದರ್ಶನದಿಂದ ನನ್ನ ಆ ಬುದ್ಧಿಯು ಎಲ್ಲೋ ಹೋಯಿತು.

ಬ್ರಾಹ್ಮಣಾನಾಂ ಸಹಸ್ರಾಣಿ ಸತ್‌ಸ್ತ್ರೀಣಾಮಯುತಾನಿ ಚ ।
ನಿಹತಾನಿ ಮಯಾ ಬ್ರಹ್ಮನ್ಸತತಂ ಪಾಪಕಾರಿಣಾ ॥ ೧೪ ॥

ಕಾಂ ಗತಿಂ ಪ್ರತಿಪತ್ಸ್ಯಾಮಿ ಬ್ರಹ್ಮಘ್ನೋಽಹಂ ದ್ವಿಜೋತ್ತಮ ॥ ೧೫ ॥

ಇದಾನೀಂ ತಪ್ತುಮಿಚ್ಛಾಮಿ ತಪೋಽಹಂ ತ್ವತ್ಸಮೀಪತಃ ।
ಉಪದೇಶಪ್ರದಾನೇನ ಪ್ರಸಾದಂ ಕರ್ತುಮರ್ಹಸಿ ॥ ೧೬ ॥

ಏವಮುಕ್ತೋಽಪ್ಯಸೌ ವಿಪ್ರೋ ನೋತ್ತರಂ ಪ್ರತ್ಯಪದ್ಯತ ।
ಬ್ರಹ್ಮಹಾ ಪಾಪಕರ್ಮೇತಿ ಮತ್ವಾ ಬ್ರಾಹ್ಮಣಪುಂಗವಃ ॥ ೧೭ ॥

ಅನುಕ್ತೋಽಪಿ ಸ ಧರ್ಮಾರ್ಥೀ ವ್ಯಾಧಸ್ತತ್ರೈವತಸ್ಥಿವಾನ್ ।
ಸ್ನಾತ್ವಾ ನದ್ಯಾಂ ದ್ವಿಜಃ ಸೋಽಪಿ ವೃಕ್ಷಮೂಲಮುಪಾಶ್ರಿತಃ ॥ ೧೮ ॥

---

೧೪. ಬ್ರಾಹ್ಮಣನೇ, ಯಾವಾಗಲೂ ಪಾಪಕಾರಿಯಾದ ನಾನು ಸಾವಿರಾರು ಜನ ಬ್ರಾಹ್ಮಣರನ್ನೂ, ಹತ್ತುಸಾವಿರ ಜನ ಸ್ತ್ರೀಯರನ್ನೂ ಕೊಂದಿರುವೆನು.

೧೫-೧೬. ದ್ವಿಜೋತ್ತಮನೇ, ಬ್ರಾಹ್ಮಣರನ್ನು ಕೊಂದು ನಾನು ಯಾವ ಗತಿಯನ್ನು ಪಡೆಯುವೆನೋ! ಈಗ ನಿನ್ನ ಸಮೀಪದಲ್ಲಿಯೇ ನಾನು ತಪಸ್ಸುಮಾಡಲು ಬಯಸುತ್ತೇನೆ. ನನಗೆ ಉಪದೇಶಮಾಡಿ ಅನುಗ್ರಹಿಸಲು ನೀನೇ ತಕ್ಕವನು.

೧೭. ಹೀಗೆ ಹೇಳಿದರೂ, ಆ ಬ್ರಾಹ್ಮಣನು, ಬೇಡನು ಬ್ರಹ್ಮಹತ್ಯ ಮಾಡುವ ಪಾಪಕರ್ಮನೆಂದು ತಿಳಿದು, ಉತ್ತರವನ್ನೇ ಕೊಡಲಿಲ್ಲ.

೧೮. ಬ್ರಾಹ್ಮಣನು ಏನೂ ಹೇಳದಿದ್ದರೂ, ಧರ್ಮಾಸಕ್ತನಾಗಿ ಆ ಬೇಡನು, ನದಿಯಲ್ಲಿ ಸ್ನಾನಮಾಡಿ ಅಲ್ಲಿಯೇ ನಿಂತುಬಿಟ್ಟನು. ಆ ಬ್ರಾಹ್ಮಣನೂ ಮರದ ಬುಡವನ್ನಾಶ್ರಯಿಸಿದನು.

ಕಸ್ಯಚಿತ್ತ್ವಥಕಾಲಸ್ಯ ತಾಂ ನದೀಮುಗಮತ್ಕಿಲ |
ವ್ಯಾಘ್ರೋ ಬುಭುಕ್ಷಿತಃ ಶಾಂತಂ ತಂ ವಿಪ್ರಂ ಹಂತುಮುದ್ಯತಃ ॥ ೧೯ ॥

ಅಂತರ್ಜಲಗತಂ ವಿಪ್ರಂ ಯಾವದ್ವ್ಯಾಘ್ರೋ ಜಿಘೃಕ್ಷತಿ |
ತಾವದ್ವ್ಯಾಧೇನ ವ್ಯಾಘ್ರೋಽಸೌ ಸದ್ಯಃ ಪ್ರಾಣೈರ್ವಿಯೋಜಿತಃ ॥ ೨೦ ॥

ತಸ್ಮಾದ್ವ್ಯಾಘ್ರಶರೀರಾತ್ತು *ಉತ್ಥಿತಃ ಪುರುಷಃ ಕಿಲ |
ವಿಪ್ರಶ್ಚಾಂತರ್ಜಲೇ ಮಗ್ನಃ ಶ್ರುತ್ವಾ ತಂ ಶಬ್ದಮಾಕುಲಂ ॥
ನಮೋ ನಾರಾಯಣಾಯೇತಿ ವಾಕ್ಯಮೇತದುವಾಚ ಹ ॥ ೨೧ ॥

ವ್ಯಾಘ್ರೇಣಾಪಿ ಶ್ರುತೋ ಮಂತ್ರಃ ಪ್ರಾಣೈಃ ಕಂಠಸ್ಥಿತೈಸ್ತತಃ ॥ ೨೨ ॥

ಶ್ರುತಮಾತ್ರೇ ಜಹೌ ಪ್ರಾಣಾನ್ ಪುರುಷಶ್ಚಾಭವಚ್ಛುಭಃ |
ಸೋಽಬ್ರವೀದ್ಯಾಮಿ ತಂ ದೇಶಂ ಯತ್ರ ವಿಷ್ಣುಃ ಸನಾತನಃ ॥
ತ್ವತ್ಪ್ರಸಾದಾದ್ದ್ವಿಜಶ್ರೇಷ್ಠ ಮುಕ್ತಪಾಪ್ಮಾ ನಿರಾಮಯಃ ॥ ೨೩ ॥

೧೯–೨೦. ಸ್ವಲ್ಪಕಾಲದಮೇಲೆ, ಹಸಿದ ಒಂದು ಹುಲಿಯು ಆ ನದಿಗೆ ಬಂದಿತು. ಅದು ಶಾಂತನಾದ ಆ ಬ್ರಾಹ್ಮಣನನ್ನು ಕೊಲ್ಲಬೇಕೆಂದು (ಸ್ನಾನಕ್ಕಾಗಿ) ನೀರಿನಲ್ಲಿಳಿದಿರುವ ಅವನನ್ನು ಹಿಡಿದುಕೊಳ್ಳುವಷ್ಟರಲ್ಲಿಯೇ ಬೇಡನು ತಟ್ಟನೆ ಆ ಹುಲಿಯನ್ನು ಕೊಂದುಬಿಟ್ಟನು.

೨೧. ಆ ಹುಲಿಯ ದೇಹದಿಂದ ಕಠಿಣವಾದಶಬ್ದವಾಯಿತಲ್ಲವೆ! ನೀರಿನಲ್ಲಿ ಮುಳುಗಿದ್ದ ಬ್ರಾಹ್ಮಣನು ವ್ಯಾಕುಲದ ಆ ಶಬ್ದವನ್ನು ಕೇಳಿ, "ನಮೋ ನಾರಾಯಣಾಯ," ಎಂಬ ಈ ವಾಕ್ಯವನ್ನು ಉಚ್ಚರಿಸಿದನು.

೨೨. ಕತ್ತಿಗೆ ಪ್ರಾಣವುಬಂದಿದ್ದ ಆ ಹುಲಿಯು ಮಂತ್ರವನ್ನು ಕೇಳಿತು.

೨೩. ಕೇಳಿದೊಡನೆಯೇ ಪ್ರಾಣವನ್ನು ತ್ಯಜಿಸಿ, ಹುಲಿಯಾಗಿದ್ದುದು, ಶುಭಕರನಾದ ಪುರುಷನಾಯಿತು. ಆ ಪುರುಷನು "ಬ್ರಾಹ್ಮಣೋತ್ತಮನೇ, ನಿನ್ನ ಅನುಗ್ರಹದಿಂದ ಪಾಪವನ್ನು ಕಳೆದುಕೊಂಡವನಾಗಿ, ಅರೋಗಿಯಾಗಿ, ಸನಾತನನಾದ ವಿಷ್ಣುವಿರುವೆಡೆಗೆ ಹೋಗುತ್ತೇನೆ" ಎಂದನು.

---

* ಉತ್ಥಾಯ ಪುರುಷಃ ಕಿಲ.

ಇತ್ಯುಕ್ತೋ ಬ್ರಾಹ್ಮಣಃ ಪ್ರಾಹ ಕೋಽಸಿ ತ್ವಂ ಪುರುಷೋತ್ತಮ ॥ ೨೪ ॥

ಸೋಽಬ್ರವೀತ್ತಸ್ಯ ರಾಜೇಂದ್ರೋ ಯದ್ವೃತ್ತಂ ಪೂರ್ವಜನ್ಮನಿ ।
ದೀರ್ಘಬಾಹುರಿತಿಖ್ಯಾತಃ ಸರ್ವಧರ್ಮವಿಶಾರದಃ ॥ ೨೫ ॥

ಅಹಂ ಜಾನಾಮಿ ವೇದಾಂಶ್ಚ ಅಹಂ ವೇದ್ಮಿ ಶುಭಾಶುಭಂ ॥ ೨೬ ॥

ಬ್ರಾಹ್ಮಣೈರ್ನೈವ ಮೇ ಕಾರ್ಯಂ ಕಿಂ ವಸ್ತು ಬ್ರಾಹ್ಮಣಾ ಇತಿ ।
ತಸ್ಯೈವಂವಾದಿನೋ ವಿಪ್ರಾಃ ಸರ್ವೇಕ್ರೋಧಸಮನ್ವಿತಾಃ ॥ ೨೭ ॥

ಊಚುಃ ಶಾಪಂ ದುರಾಧರ್ಷಂ ಕ್ರೂರೋ ವ್ಯಾಘ್ರೋ ಭವಿಷ್ಯಸಿ ।
ಅವಮಾನಾತ್ತು ವಿಪ್ರಾಣಾಂ ನಾತ್ಯರ್ಥಂ ಸ್ಮರಣಂ ತವ ।
ಮೃತ್ಯುಕಾಲೇತು ಸಂಮೂಢ ಕೇಶವೇತ್ಯೇವ ಶ್ರೋಷ್ಯಸಿ ॥ ೨೮ ॥

---

೨೪. ಆಗ ಬ್ರಾಹ್ಮಣನು "ಪುರುಷೋತ್ತಮನೇ, ನೀನು ಯಾರು?" ಎಂದನು.

೨೫. ಅವನು ಬ್ರಾಹ್ಮಣೋತ್ತಮನಿಗೆ ತನ್ನ ಪೂರ್ವಜನ್ಮದಲ್ಲಿ ನಡೆದುದನ್ನು ಹೇಳಿದನು. "ನಾನು ದೀರ್ಘಬಾಹುವೆಂಬ ಹೆಸರುಳ್ಳ ರಾಜೇಂದ್ರನಾಗಿ ಸರ್ವಧರ್ಮವಿಶಾರದನಾಗಿದ್ದೆನು.

೨೬. ನಾನು ವೇದಗಳನ್ನೂ ಶುಭಾಶುಭಗಳನ್ನೂ (ಜ್ಯೋತಿಷವನ್ನೂ) ಅರಿತಿದ್ದೆನು.

೨೭-೨೮. 'ಬ್ರಾಹ್ಮಣರಿಂದ ನನಗೆ ಆಗಬೇಕಾದುದೇನೂಇಲ್ಲ. ಬ್ರಾಹ್ಮಣರು ಯಾವ ಪದಾರ್ಥ!' ಎಂದು ಹೇಳುತ್ತಿದ್ದ ನನ್ನಮೇಲೆ ಬ್ರಾಹ್ಮಣರೆಲ್ಲರೂ ಕೋಪವುಳ್ಳವರಾಗಿ, ನೀನು ಕ್ರೂರವಾದ ಹುಲಿಯಾಗುವೆ. ಬ್ರಾಹ್ಮಣರಿಗೆ ಅವಮಾನಮಾಡಿದುದರಿಂದ ನಿನಗೆ ಹೆಚ್ಚಾದ ಜ್ಞಾನ(ಜ್ಞಾಪಕ)ವಿರುವುದಿಲ್ಲ. ಮೂಢನೇ ನಿನ್ನ ಮರಣಕಾಲದಲ್ಲಿ ಕೇಶವ ಎಂಬುದನ್ನೇ ಕೇಳುವೆ ? ಎಂದು ದುಸ್ಸಹವಾದ ಶಾಪವನ್ನು ಕೊಟ್ಟರು.

ಇತ್ಯುಕ್ತೋಽಹಂ ಪುರಾ ತೈಸ್ತು ಬ್ರಾಹ್ಮಣೈರ್ವೇದಪಾರಗೈಃ ।
ತದೇವ ಸರ್ವಂ ಸಂಪ್ರಾಪ್ತೋ ಬ್ರಹ್ಮಶಾಪಂ ಸುಪುಷ್ಕಲಂ ॥ ೨೯ ॥

ತತಸ್ತೇ ಬ್ರಾಹ್ಮಣಾಃ ಸರ್ವೇ ಪ್ರಣಿಪತ್ಯ ಮಯಾಮುನೇ ।
ಉಕ್ತಾನುಗ್ರಹಹೇತೋರ್ವೈ ತ ಊಚುರ್ಮಾಮಿದಂ ಪುರಾ ॥ ೩೦ ॥

ಷಷ್ಠಾಹ್ನಕಾಲಿಕಸ್ಯಾಗ್ರೇ ಯಸ್ತೇ ಸ್ಥಾಸ್ಯತಿ ಕಶ್ಚನ ।
ಸ ಭಕ್ಷ್ಯಸ್ತೇಽಸ್ತು ಭವಿತಾ ಕಂಚಿತ್ಕಾಲಂ ನರಾಧಿಪ ॥ ೩೧ ॥

ಯದೇಷುಘಾತಂ ಲಬ್ಧ್ವಾತು ಪ್ರಾಣೈಃ ಕಂಠಗತೈರ್ಭವಾನ್ ।
ಶ್ರೋಷ್ಯತಿ ದ್ವಿಜವಕ್ತ್ರಾತ್ತು ನಮೋ ನಾರಾಯಣೇತಿ ಚ ॥
ತದಾ ಸ್ವರ್ಗಗತಿಸ್ತುಭ್ಯಂ ಭವಿತಾ ನಾತ್ರ ಸಂಶಯಃ ॥ ೩೨ ॥

ಪರವಕ್ತ್ರ ಗತಂ ಚಾಪಿ ವಿಷ್ಣೋರ್ನಾಮ ಶ್ರುತಂ ಮಯಾ ।
ಕೃತದ್ವೇಷಸ್ಯ ವಿಪ್ರಾಣಾಂ ಪ್ರತ್ಯಕ್ಷೋಽಭವದಚ್ಯುತಃ ॥ ೩೩ ॥

---

೨೯. ವೇದಪಾರಂಗತರಾದ ಬ್ರಾಹ್ಮಣರಿಂದ ಪೂರ್ವದಲ್ಲಿ ಹೀಗೆ ಶಾಪವನ್ನುಪಡೆದೆನು. ಆಗಲೇ ಆ ಬ್ರಹ್ಮಶಾಪವು ಪೂರ್ತಿಯಾಗಿ ನನಗೆ ತಾಕಿತು.

೩೦–೩೧. ಬಳಿಕ ನಾನು ಆ ಬ್ರಾಹ್ಮಣರೆಲ್ಲರಿಗೂ ಪ್ರಣಾಮಮಾಡಿ ಅನುಗ್ರಹಕ್ಕಾಗಿ ಕೇಳಿಕೊಂಡೆನು. ಅವರು ನನಗೆ ರಾಜನೇ, ಬ್ರಹ್ಮನ ಆರನೆಯ ದಿನದಲ್ಲಿರುವ ನಿನಗೆ ಕೆಲವುಕಾಲ ಎದುರಿಗೆ ಯಾರು ನಿಲ್ಲುವನೋ ಅವನೇ ಆಹಾರವಾಗುವನು.

೩೨. ನೀನು ಬಾಣದಪೆಟ್ಟನ್ನು ತಿಂದು ಪ್ರಾಣವು ಕೊರಳಿಗೆ ಬಂದಿರುವಾಗ ಬ್ರಾಹ್ಮಣನ ಬಾಯಿಂದ 'ನಮೋ ನಾರಾಯಣಾಯ' ಎಂದು ಕೇಳಿದರೆ ನಿನಗೆ ಸ್ವರ್ಗಗತಿಯುಂಟಾಗುವುದರಲ್ಲಿ ಸಂಶಯವಿಲ್ಲ. ಎಂದು ಹೇಳಿದರು.

೩೩–೩೪. ಬೇರೆಯವರ ಬಾಯಿಂದ ವಿಷ್ಣುನಾಮವನ್ನು ಕೇಳಿದುದರಿಂದಲೇ ಬ್ರಾಹ್ಮಣರಲ್ಲಿ ದ್ವೇಷಮಾಡಿದ ನನಗೆ ವಿಷ್ಣುವು ಪ್ರತ್ಯಕ್ಷನಾದನು. ಹೀಗಿರುವಲ್ಲಿ ಯಾರು ಬ್ರಾಹ್ಮಣರನ್ನು ಪೂಜಿಸಿ, ತನ್ನ ಬಾಯಿಂದಲೇ ಹರಿಗೆ

ಯಃ ಪುನರ್ಬ್ರಾಹ್ಮಣಾನ್ಪೂಜ್ಯ ಸ್ವವಕ್ತ್ರೇಣ ನಮೋ ಹರಿಮ್ ।
ವದನ್ಪ್ರಾಣೈರ್ವಿಯುಜ್ಯೇತ ಮುಕ್ತೋsಸೌ ವೀತಕಿಲ್ಬಿಷಃ ॥ ೩೪ ॥

ಸತ್ಯಂ ಸತ್ಯಂ ಪುನಃ ಸತ್ಯಮುತ್‌ಕ್ಷಿಪ್ಯ ಭುಜಮುಚ್ಯತೇ ॥ ೩೫ ॥

ಜಂಗಮಾ ಬ್ರಾಹ್ಮಣಾ ದೇವಾಃ ಕೂಟಸ್ಥಃ ಪುರುಷೋತ್ತಮಃ ।
ಏವಮುಕ್ತ್ವಾ ಗತಃ ಸ್ವರ್ಗಂ ಸ ರಾಜಾ ವೀತಕಿಲ್ಬಿಷಃ ॥ ೩೬ ॥

ಬ್ರಾಹ್ಮಣೋsಪಿ ತದಾ ಮುಕ್ತಸ್ತಂ ವ್ಯಾಧಂಪ್ರತ್ಯಭಾಷತ
ಜಿಘೃಕ್ಷೋರ್ಮೃಗ*ರಾಜಾಚ್ಚ ಯತ್ತ್ವಯಾ ರಕ್ಷಿತೋsಹ್ಯಹಮ್ ।
ತತ್ಪುತ್ರ ತುಷ್ಟಸ್ತೇ ದದ್ಮಿ ವರಂ ವರಯ ಸುವ್ರತ ॥ ೩೭ ॥

ನಮಸ್ಕಾರವನ್ನು ಹೇಳುತ್ತಾ ಪ್ರಾಣಬಿಡುವನೋ ಅವನು ಪಾಪವನ್ನು ಕಳೆದು ಕೊಂಡು ಮುಕ್ತನಾಗುವನೆಂದು ಹೇಳಬೇಕೆ ! ಸತ್ಯ, ಸತ್ಯ, ಮತ್ತೆಯೂ ಸತ್ಯ. ಕೈಯೆತ್ತಿ ಸಾರುತ್ತೇನೆ.

೩೬. ಬ್ರಾಹ್ಮಣರು ಚರಿಸುವ ದೇವರು. ಎಂದರೆ ಉತ್ಸವಮೂರ್ತಿಗಳು. ಪುರುಷೋತ್ತಮನಾದ ವಿಷ್ಣುವು ವಿಕಾರವಿಲ್ಲದೆ ನಿಶ್ಚಲನಾಗಿರುವವನು ಎಂದರೆ ಮೂಲಮೂರ್ತಿ" ಎಂದು ಹೇಳಿ ಪಾಪವನ್ನು ಕಳೆದುಕೊಂಡ ಆ ರಾಜನು ಸ್ವರ್ಗಕ್ಕೆ ಹೋರಟುಹೋದನು.

೩೭. ಆಗ ಹುಲಿಯಿಂದ ಮುಕ್ತನಾದ ಆ ಬ್ರಾಹ್ಮಣಋಷಿಯು ಬೇಡನನ್ನು ಕುರಿತು "ಹೊತ್ತುಕೊಂಡು ಹೋಗುತ್ತಿದ್ದ ಹುಲಿಯಿಂದ ನೀನು ನನ್ನನ್ನು ಬದುಕಿಸಿದ್ದೀಯೆ. ಆದುದರಿಂದ ಮಗನೇ, ಸುವ್ರತನೇ, ನಿನ್ನಲ್ಲಿ ಸಂತುಷ್ಟನಾಗಿ ವರವನ್ನು ಕೊಡುತ್ತೇನೆ. ಬೇಡು." ಎಂದನು.

---

* ರಾಜಸ್ಯ.

॥ ವ್ಯಾಧ ಉವಾಚ ॥

ಏಷ ಏವ ವರೋ ಮುಹ್ಯಂ ಯತ್ತ್ವಂ ಮಾಂ ಭಾಷಸೇದ್ವಿಜ ।
ಅತಃ ಪರಂ ವರೇಣಾಹಂ ಕಿಂ ಕರೋಮಿ ಪ್ರಶಾಧಿ ಮಾಂ ॥ ೩೮ ॥

॥ ಋಷಿರುವಾಚ ॥

ಅಹಂ ತ್ವಯಾ ಪುರಾ ವ್ಯಾಧ ಪ್ರಾರ್ಥಿತೋಽಸ್ಮಿತಪೋಽರ್ಥಿನಾ ।
ಬಹುಪಾತಕಯುಕ್ತೇನ ಘೋರರೂಪೇಣ ಚಾನಘ ॥ ೩೯ ॥

ಇದಾನೀಂ ತವ ಪಾಪಾನಿ ದೈವಿಕಾಭಿಷವೇಣ ಚ ।
ಮದ್ದರ್ಶನೇನ ಚ ಚಿರಂ ವಿಷ್ಣುನಾಮಶ್ರುತೇನ ಚ ॥ ೪೦ ॥

ನಷ್ಟಾನಿ ಶುದ್ಧದೇಹೋಽಸಿ ಸಾಂಪ್ರತಂ ನಾತ್ರ ಸಂಶಯಃ ॥ ೪೧ ॥

ಇದಾನೀಂ ವರಮೇಕಂ ತು ಗೃಹಾಣ ಮಮ ಸನ್ನಿಧೌ ।
ತಪಃ ಕುರುಷ್ವ ಸಾಧೋ ತ್ವಂ ಚಿರಕಾಲಂ ಯದೀಚ್ಛಸಿ ॥ ೪೨ ॥

---

೩೮. ಬೇಡ—ಬ್ರಾಹ್ಮಣನೇ, ನೀನು ನನ್ನೊಡನೆ ಮಾತನಾಡುತ್ತಿರುವುದೇ, ನನಗೆ(ನೀನು ಕೊಟ್ಟ)ವರ. ಇದಕ್ಕಿಂತ ಬೇರೆಯಾದ ವರದಿಂದ ನನಗೇನಾಗಬೇಕು. ಅಪ್ಪಣೆಕೊಡು.

೩೯. ಋಷಿ—ಬೇಡನೇ, ಪಾಪವಿಲ್ಲದವನೇ ಮುಂಚೆ ನೀನು ಬಹುಪಾಪದಿಂದ ಕೂಡಿದವನಾಗಿದ್ದು ಘೋರರೂಪದಿಂದ ತಪಸ್ಸನ್ನು ಮಾಡಲು ಬಯಸಿ, ನನ್ನನ್ನು ಬೇಡಿದೆ.

೪೦–೪೧. ಈಗ ದೇವಿಕಾನದಿಯ ಸ್ನಾನದಿಂದಲೂ, ಬಹುಕಾಲದ ನನ್ನ ದರ್ಶನದಿಂದಲೂ, ವಿಷ್ಣುನಾಮವನ್ನು ಕೇಳಿದುದರಿಂದಲೂ, ನಿನ್ನ ಪಾಪಗಳು ನಾಶವಾದುವು. ಈಗ ನೀನು ಪರಿಶುದ್ಧವಾದ ದೇಹವುಳ್ಳವನಾಗಿದ್ದೀಯೆ. ಇದರಲ್ಲಿ ಸಂದೇಹವಿಲ್ಲ.

೪೨. ಸಾಧುವೇ, ಈಗ ಒಂದು ವರವನ್ನು ತೆಗೆದುಕೊ. ನಿನಗೆ ಇಷ್ಟವಿದ್ದಲ್ಲಿ ನನ್ನ ಹತ್ತಿರವೇ ಬಹುಕಾಲ ತಪಸ್ಸುಮಾಡು.

॥ ವ್ಯಾಧ ಉವಾಚ ॥

ಯ ಏಷ ಭವತಾ ಪ್ರೋಕ್ತಃ ವಿಷ್ಣುರ್ನಾರಾಯಣಃ ಪ್ರಭುಃ ।
ಸ ಕಥಂ ಪ್ರಾಪ್ಯತೇ ಮರ್ತ್ಯೈರೇಷ ಏವ ವರೋ ಮಮ ॥ ೪೩ ॥

॥ ಋಷಿರುವಾಚ ॥

ತಮುದ್ದಿಶ್ಯ ವ್ರತಂ ಕುರ್ಯಾತ್ ಯತ್ಕಿಂಚಿತ್ಪುರುಷೋಽಚ್ಯುತಂ ।
ಸ ಪರಂ ತಮವಾಪ್ನೋತಿ ಭಕ್ತ್ಯಾ ಯುಕ್ತಃ ಪುಮಾನಿತಿ ॥
ಏವಂ ಜ್ಞಾತ್ವಾ ಭವಾನ್ಪುತ್ರ ವ್ರತಮೇತತ್ಸಮಾಚರ ॥ ೪೪ ॥

ನ ಭಕ್ಷಯೇದ್ಗಣಾನ್ನಂ ತು ನವದೇದನೃತಂ ಕ್ವಚಿತ್ ॥ ೪೫ ॥

ಏತತ್ತೇ ವ್ರತಮಾದಿಷ್ಟಂ ಮಯಾ ವ್ಯಾಧವರ ಧ್ರುವಂ ।
ಅತ್ರೈವ ತಪಸಾ ಯುಕ್ತಸ್ತಿಷ್ಠ ತ್ವಂ ಯಾವದಿಚ್ಛಸಿ ॥ ೪೬ ॥

---

೪೩. ಬೇಡ—ನೀನು ಯಾರನ್ನು ವಿಷ್ಣು, ನಾರಾಯಣ, ಪ್ರಭು ಎಂದು ಹೇಳಿದೆಯೋ ಅವನನ್ನು ಮನುಷ್ಯರು ಹೇಗೆ ಪಡೆಯುವರು ? ಅದನ್ನು ತಿಳಿಸು. ಇದೇ ನಾನು ಬೇಡುವ ವರ ಎಂದು ಹೇಳಿದನು.

೪೪. ಋಷಿ—ಮಗನೇ, ಆ ಅಚ್ಯುತನನ್ನುದ್ದೇಶಿಸಿ, ಭಕ್ತಿಯಿಂದ ಯಾವುದಾದರೂ ವ್ರತವನ್ನು ಮಾಡುವವರು ಆ ಪರಮಾತ್ಮನನ್ನು ಪಡೆಯುವರು. ಎಂಬುದನ್ನು ಅರಿತು, ನೀನು ಈ ವ್ರತವನ್ನು ಮಾಡು.

೪೫. ಗಣಾನ್ನವನ್ನೂಟಮಾಡಬಾರದು. ಎಂದಿಗೂ ಸುಳ್ಳು ಹೇಳಬಾರದು.

೪೬. ವ್ಯಾಧೋತ್ತಮನೇ, ನಿನಗೆ ಈ ನಿಯಮವನ್ನು ಅಪ್ಪಣೆ ಮಾಡಿದ್ದೇನೆ. ಇದನ್ನನುಸರಿಸಿ, ಇಲ್ಲೇ ತಪಸ್ಸನ್ನು ಮಾಡುತ್ತಾ ನಿನಗೆ ಬೇಕಾದಷ್ಟು ಕಾಲ ಸ್ಥಿರವಾಗಿರು.

॥ ವರಾಹ ಉವಾಚ ॥

ಏವಂ ಚಿಂತಾನ್ವಿತಂ ಮತ್ವಾ ವರದೋ ಬ್ರಾಹ್ಮಣೋಭವತ್ ।
ಮೋಕ್ಷಾರ್ಥಿನಮಥೋ ಬುದ್ಧ್ವಾ ವಂಚಯಿತ್ವಾ ಗತೋ ಮುನಿಃ ॥ ೪೭ ॥

ಇತಿ ಶ್ರೀ ವರಾಹಪುರಾಣೇ ಪ್ರಾಗಿತಿಹಾಸೇ ಸಪ್ತತ್ರಿಂಶೋಽಧ್ಯಾಯಃ

---

೪೭. ಶ್ರೀವರಾಹ—ಬೇಡನು ಹೀಗೆ ಚಿಂತೆಯುಳ್ಳವನಾಗಿರುವನೆಂಬುದನ್ನರಿತು, ಬ್ರಾಹ್ಮಣನು ಅವನಿಗೆ ವರವನ್ನು ಕೊಟ್ಟನು. ಬಳಿಕ ಅವನು ಮೋಕ್ಷಾರ್ಥಿಯೆಂಬುದನ್ನರಿತು, ವಂಚಿಸಿ, ಋಷಿಯು ಬೇರೆಡೆಗೆ ಹೊರಟು ಹೋದನು.

ಅಧ್ಯಾಯದ ಸಾರಾಂಶ :—

"ಭಕ್ತರು ನಿನ್ನನ್ನು ಹೇಗೆ ಆರಾಧಿಸಬೇಕು ?" ಎಂದು ಕೇಳಿದ ಭೂದೇವಿಗೆ ಶ್ರೀವರಾಹನು ತಾನು ಭಾವಸಾಧ್ಯನೆಂದು ತಿಳಿಸಿ, ಭಕ್ತರಿಗೆ ಅವಶ್ಯವಾದ ಮಾನಸಿಕಕಾಯಿಕವಾಚಿಕವ್ರತಗಳನ್ನು ಹೇಳುವನು. ಉದಾಹರಣೆಗಾಗಿ ಆರುಣಿಯೆಂಬ ತಪಸ್ವಿಯಾದ ಬ್ರಾಹ್ಮಣನನ್ನು ಕೊಲ್ಲಲು ಬಂದು, ಅವನು ನಾರಾಯಣಸ್ಮರಣೆಯನ್ನು ಮಾಡಿದುದರಿಂದ ಕೊಲ್ಲಲಾರದೆ ಅವನ ಉಪದೇಶವನ್ನು ಬೇಡುತ್ತಾ ಅಲ್ಲಿಯೇ ನಿಂತ ಬೇಡನ ಕಥೆಯನ್ನು ಹೇಳುವನು. ಬೇಡನು, ಬ್ರಾಹ್ಮಣನನ್ನು ಕೊಲ್ಲಲು ಬಂದ ಹುಲಿಯನ್ನು ಕೊಂದುದು, ಹುಲಿಯು ಸಾಯುವಾಗ ಬ್ರಾಹ್ಮಣನ ಬಾಯಿಂದ ನಾರಾಯಣನಾಮವನ್ನು ಕೇಳಿ ಪ್ರಾಣಬಿಟ್ಟು ದಿವ್ಯಪುರುಷನಾಗಿ ತನ್ನ ಹಿಂದಿನ ಕಥೆಯನ್ನೂ ಬ್ರಾಹ್ಮಣರ ಮಹಿಮೆಯನ್ನೂ ಹೇಳಿ ಮುಕ್ತಿಯನ್ನು ಪಡೆದುದು, ಬಳಿಕ ಬೇಡನಲ್ಲಿ ದಯೆಯುಳ್ಳವನಾದ ಆರುಣಿಯು ಅವನಿಗೆ ವ್ರತವನ್ನುಪದೇಶಿಸಿದುದು, ಆರುಣಿಯು ಬೇರೆಡೆಗೆ ತಪಸ್ಸಿಗೆ ಹೊರಟು ಹೋದುದು ಈ ವಿಚಾರಗಳನ್ನು ವಿವರವಾಗಿ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ಮೂವತ್ತೇಳನೆಯ ಅಧ್ಯಾಯ.

|| ಶ್ರೀಃ ||

-X-

ಅಷ್ಟತ್ರಿಂಶೋಽಧ್ಯಾಯಃ

ಅಥ ಪ್ರಾಚೀನೇತಿಹಾಸವರ್ಣನಂ

|| ವರಾಹ ಉವಾಚ ||

ಸಶುಭಂ ಶೋಭನಂ ಮಾರ್ಗಮಾಸ್ಥಾಯ ವ್ಯಾಧಸತ್ತಮಃ |
ತಪಸ್ತೇಪೇ ನಿರಾಹಾರಸ್ತಂ ಗುರುಂ ಮನಸಾ ಸ್ಮರನ್ || ೧ ||

ಭಿಕ್ಷಾಕಾಲೇ ತು ಸಂಪ್ರಾಪ್ತೇ ಶೀರ್ಣಪರ್ಣಾನ್ಯಭಕ್ಷಯತ್ || ೨ ||

ಸ ಕದಾಚಿತ್ ಕ್ಷುಧಾವಿಷ್ಟೋ ವೃಕ್ಷಮೂಲಂ ಸಮಾಶ್ರಿತಃ |
ಬುಭುಕ್ಷಿತಃ ತರೋಃ ಪರ್ಣಾನ್ಯೈಚ್ಛದ್ಭಕ್ಷಿತುಮಂತಿಕಾತ್ || ೩ ||

ಮೂವತ್ತೆಂಟನೆಯ ಅಧ್ಯಾಯ

ಪ್ರಾಚೀನೇತಿಹಾಸ ವರ್ಣನೆ.

೧. ಶ್ರೀವರಾಹ—ಆ ವ್ಯಾಧೋತ್ತಮನು, ಶುಭಕರವಾದ ಸಾಧುಮಾರ್ಗವನ್ನವಲಂಬಿಸಿ, ನಿರಾಹಾರನಾಗಿ ಮನಸ್ಸಿನಲ್ಲಿ ಗುರುವನ್ನು ನೆನೆಯುತ್ತಾ ತಪಸ್ಸನ್ನು ಮಾಡಿದನು.

೨. ಭಿಕ್ಷೆಮಾಡಬೇಕಾದಾಗ ಸಣ್ಣ ಅಥವಾ ಸೀಳಿದ ಎಲೆಗಳನ್ನು ತಿನ್ನುತ್ತಿದ್ದನು.

೩. ಒಂದಾನೊಂದು ವೇಳೆ ಮರದ ಬುಡದಲ್ಲಿದ್ದ ಅವನು ಹಸಿವುಳ್ಳವನಾಗಿ ಹತ್ತಿರದಲ್ಲಿದ್ದ ಮರದ ಎಲೆಗಳನ್ನು ತಿನ್ನಲು ಬಯಸಿದನು.

ಇತ್ಯೇವಂ ಕುರ್ವತೋ ವ್ಯೋಮ್ನಿ ವಾಗುವಾಚಾಶರೀರಿಣೀ ।
ಮಾ ಭಕ್ಷಯಸ್ವ ಸಕಲಮುಚ್ಚೈರೇವಂ ಪ್ರಭಾಷಿತೇ ॥
ತತೋಽಸೌ ತದ್ವಿಹಾಯಾನ್ಯದ್ವಾರ್ಕ್ಷಂ ಪತಿತಮಗ್ರಹೀತ್ ॥ ೪ ॥

ತದಾಪ್ಯೇವಂ ನಿಷಿದ್ಧಂ ಸ್ಯಾದನ್ಯದೇವ ತಥೈವ ಚ ।
ಏವಂ ಸ ಸಕಲಂ ಮತ್ವಾ ವ್ಯಾಧಃ ಕಿಂಚಿನ್ನ ಭಕ್ಷಯತ್ ॥ ೫ ॥

ನಿರಾಹಾರಸ್ತಪಸ್ತೇಪೇ ಸ್ಮರನ್ಗುರುಮತಂದ್ರಿತಃ ॥ ೬ ॥

ಏವಂ ತಪಸ್ಯತಸ್ತಸ್ಯ ಕಾಲೇ ಋಷಿವರೋಽಭ್ಯಯಾತ್ ।
ದುರ್ವಾಸಾಃ ಶಂಸಿತಾತ್ಮಾ ವೈ ಪ್ರಾಣಯುಕ್ತಮಪಶ್ಯತ್ ॥
ವ್ಯಾಧಂ ತಪೋತ್ಥತೇಜೋಭಿರ್ಜ್ವಲಮಾನಂ ಹವಿರ್ಯಥಾ ॥ ೭ ॥

---

೪. ಅಷ್ಟರಲ್ಲಿ ಆಕಾಶದಲ್ಲಿ ಅಶರೀರವಾಣಿಯು ಬ್ರಾಹ್ಮಣನಿಂದ ಕೂಡಿರುವುದನ್ನು ತಿನ್ನಬೇಡ ಎಂದು ಗಟ್ಟಿಯಾಗಿ ಹೇಳಲು ಅವನು ಅದನ್ನು ಬಿಟ್ಟು ಮರದಿಂದ ಬಿದ್ದಿದ್ದ ಮತ್ತೊಂದೆಲೆಯನ್ನು ತೆಗೆದುಕೊಂಡನು.

೫. ಆಗಲೂ ಹಾಗೆಯೇ ತಡೆಯಾಯಿತು. ಬೇರೊಂದನ್ನು ತೆಗೆದುಕೊಂಡರೂ ಹಾಗೆಯೇ ಆಯಿತು. ಹೀಗೆ ಅವನು ಎಲ್ಲವೂ ಬ್ರಾಹ್ಮಣಸಹಿತವಾದುವೆಂದು ಯಾವುದನ್ನೂ ತಿನ್ನಲಿಲ್ಲ.

೬. ಆಹಾರವಿಲ್ಲದೆಯೇ ಗುರುವನ್ನು ನೆನೆಯುತ್ತ ಎಚ್ಚರಿಕೆಯಿಂದ ತಪಸ್ಸನ್ನು ಮಾಡಿದನು.

೭. ಹಾಗೆ ಕಾಲಕಳೆಯಲು ಅವನ ಬಳಿಗೆ ಪವಿತ್ರಾತ್ಮನಾದ ದುರ್ವಾಸ ಮುನಿಯು ಬಂದು, ಆಹಾರವಿಲ್ಲದಿದ್ದರೂ ಜೀವಿಸಿ, ತಪಸ್ಸಿನಿಂದುದಿಸಿದ ತೇಜಸ್ಸಿನಿಂದ ಅಗ್ನಿಯಂತೆ ಹೊಳೆಯುವ ಆ ಬೇಡನನ್ನು ನೋಡಿದನು.

ಸೋಽಪಿ ವ್ಯಾಧಸ್ತು ತಂ ನತ್ವಾ ಶಿರಸಾಥ ಮಹಾಮುನಿಂ ।
ಉವಾಚ ತಂ ಕೃತಾರ್ಥೋಽಸ್ಮಿ ಭಗವನ್ದರ್ಶನಾತ್ತವ ॥ ೮ ॥

ಇದಾನೀಂ ಶ್ರಾದ್ಧಕಾಲೇ ತ್ವಂ ಪ್ರಾಪ್ತೋಽಸಿ ಮಮ ದೈವತಂ ।
ಶೀರ್ಣಪರ್ಣಾದಿಭಿಃ ಕೃತ್ವಾ ಪ್ರೀಣಯಾಮಿ ದ್ವಿಜೋತ್ತಮಂ ॥ ೯ ॥

ದುರ್ವಾಸಾ ಅಪಿ ತಂ ಶುದ್ಧಭಾವಪೂತಂ ಜಿತೇಂದ್ರಿಯಂ ।
ಜಿಜ್ಞಾಸುಸ್ತತ್ತಪೋ ವಾಕ್ಯಮಿಪಮುಚ್ಚೈರುವಾಚ ಹ ॥ ೧೦ ॥

ಯವಗೋಧೂಮಶಾಲೀನಾಮನ್ನಂ ಚೈವ ಸುಸಂಸ್ಕೃತಂ ।
ದೀಯತಾಂ ಮೇ ಕ್ಷುಧಾರ್ತಾಯ ತ್ವಾಮುದ್ದಿಶ್ಯಾಗತಾಯ ಚ ॥ ೧೧ ॥

ಇತ್ಯುಕ್ತೋ ನನ್ವಸೌ ವ್ಯಾಧಶ್ಚಿಂತಾಂ ಪರಮಿಕಾಂ ಗತಃ ।
ಕ್ವ ಸಂಭವಿಷ್ಯತೇ ಮಹ್ಯಮಿತಿ ಚಿಂತಾಪರೋಽಭವತ್ ॥ ೧೨ ॥

೮-೯. ಆ ಬೇಡನಾದರೋ, ಮಹರ್ಷಿಯಾದ ಅವನನ್ನು ತಲೆವಾಗಿ ವಂದಿಸಿ, "ಪೂಜ್ಯನೇ, ನಿನ್ನ ದರ್ಶನದಿಂದ ಧನ್ಯನಾಗಿದ್ದೇನೆ. ಈಗ ಶ್ರಾದ್ಧಕಾಲದಲ್ಲಿ ನನ್ನ ದೇವರಾಗಿ ನೀನು ಬಂದಿದ್ದೀಯೆ. ಸಣ್ಣಪಣ್ಣಎಲೆ ಮೊದಲಾದುವುಗಳಿಂದ ಶ್ರಾದ್ಧಮಾಡಿ, ಬ್ರಾಹ್ಮಣೋತ್ತಮನಾದ ನಿನ್ನನ್ನು ತೃಪ್ತಿಪಡಿಸುತ್ತೇನೆ" ಎಂದು ಅವನಿಗೆ ಹೇಳಿದನು.

೧೦–೧೧. ದುರ್ವಾಸನೂ, ಶುದ್ಧಭಾವದಿಂದ ಪವಿತ್ರನೂ, ಜಿತೇಂದ್ರಿಯನೂ ಆದ ಅವನ ತಪಸ್ಸನ್ನು ತಿಳಿಯಬೇಕೆಂದು "ನಿನ್ನನ್ನು ನೋಡುವುದಕ್ಕೇ ಬಂದು, ಹಸಿದಿರುವ, ನನಗೆ ಜವೆ ಗೋದುವೆ ಅಕ್ಕಿಗಳ ಪರಿಶುದ್ಧವಾದ ಅನ್ನವನ್ನು ಕೊಡು." ಎಂದು ಅವನಿಗೆ ಗಟ್ಟಿಯಾಗಿ ಹೇಳಿದನು.

೧೨. ಆ ಬೇಡನು ಅತಿ ಚಿಂತೆಯುಳ್ಳವನಾಗಿ, ಅಂತಹ ಅನ್ನವು ನನಗೆಲ್ಲಿ ದೊರೆಯುವುದೋ ! ಎಂದು ಯೋಚಿಸುತ್ತಿದ್ದನು.

ತಸ್ಯ ಚಿಂತಯತಃ ಪಾತ್ರಮಾಕಾಶಾತ್ಪತಿತಂ ಶುಭಂ ।
ಸೌವರ್ಣಂ ಸಿದ್ಧಿಸಂಯುಕ್ತಂ ತಜ್ಜಗ್ರಾಹ ಕರೇಣ ಸಃ ॥ ೧೩ ॥

ತದ್ಗೃಹೀತ್ವಾ ಮುನಿಂ ಪ್ರಾಹ ದುರ್ವಾಸಾಖ್ಯಂ ಸ ಸಾಧ್ವಸಃ ।
ಅತ್ರೈವ ಸ್ಥೀಯತಾಂ ಬ್ರಹ್ಮನ್ ಯಾವದ್ಭಿಕ್ಷಾಟನಂ ತ್ವಹಂ ॥
ಕರೋಮಿ ಮತ್ಪ್ರಸಾದೋಽಯಂ ಕ್ರಿಯತಾಂ ಬ್ರಹ್ಮವಿತ್ತಮ ॥ ೧೪ ॥

ಏವಮುಕ್ತ್ವಾ ತತೋ ಭಿಕ್ಷಾಂ ಯಾಚಿತುಂ ವ್ಯಾಧಸತ್ತಮಃ ।
ನಾತಿದೂರೇಣನಗರಂ ವನಘೋಷಸಮನ್ವಿತಂ ॥ ೧೫ ॥

ತಸ್ಯ ತತ್ರ ಪ್ರಯಾತಸ್ಯ ಅಗ್ರತಃ ಸರ್ವಶೋಭನಾಃ ।
ವೃಕ್ಷೇಭ್ಯೋ ನಿರ್ಯಯುಶ್ಚಾನ್ಯಾ ಹೇಮಪಾತ್ರಾಗ್ರಪಾಣಯಃ ॥ ೧೬ ॥

ವಿವಿಧಾನ್ನಾನಿ ತಸ್ಯಾಶು ದತ್ವಾಪಾತ್ರಂ ಪ್ರಪೂರಿತಂ ॥ ೧೭ ॥

---

೧೩. ಹಾಗೆ ಯೋಚಿಸುತ್ತಿದ್ದ ಅವನ ಹತ್ತಿರ ಆಕಾಶದಿಂದ, ಶುಭಕರವೂ ಸಿದ್ಧಿಯುಳ್ಳದೂ ಆದ ಚಿನ್ನದ ಪಾತ್ರೆಯೊಂದು ಬಿದ್ದಿತು. ಅದನ್ನು ಅವನು ಕೈಗೆ ತೆಗೆದುಕೊಂಡನು.

೧೪. ಅದನ್ನು ತೆಗೆದುಕೊಂಡು, ದುರ್ವಾಸಋಷಿಗೆ ಭಯದಿಂದ "ಬ್ರಹ್ಮನೇ, ನಾನು ಭಿಕ್ಷೆಗೆ ಹೋಗಿ ಬರುವವರೆಗೂ ಇಲ್ಲಿಯೇ ಇರು. ಬ್ರಹ್ಮವಿತ್ತಮನೇ, ನನ್ನಲ್ಲಿ ಈ ಅನುಗ್ರಹವನ್ನು ಮಾಡು." ಎಂದು ಹೇಳಿದನು.

೧೫–೧೬. ಬೇಡರಲ್ಲಿ ಬಲು ಒಳ್ಳೆಯವನಾದ ಅವನು ಋಷಿಗೆ ಹಾಗೆ ಹೇಳಿ, ಬಳಿಕ ಭಿಕ್ಷವನ್ನು ಬೇಡುವುದಕ್ಕಾಗಿ, ಹತ್ತಿರದಲ್ಲಿಯೇ ವನದ ಶಬ್ದದಿಂದ ಕೂಡಿದ ಪಟ್ಟಣಕ್ಕೆ ಹೋಗುತ್ತಿರಲು ಅವನೆದುರಿಗೆ ಬೇರೆ ಕೆಲವರು ಸರ್ವಸುಂದರರು ಚಿನ್ನದ ಪಾತ್ರೆಗಳನ್ನು ತುದಿಗೈಗಳಲ್ಲಿ ಹಿಡಿದುಕೊಂಡು ಮರಗಳಿಂದ ಹೊರಗೆ ಬಂದರು.

೧೭–೧೮. ಅವರು ಬಗೆ ಬಗೆಯಾದ(ಅನ್ನಗಳನ್ನು)ಆಹಾರ ಪದಾರ್ಥಗಳನ್ನು ಕೊಟ್ಟು, ಬೇಡನ ಪಾತ್ರೆಯನ್ನು ತುಂಬಿದರು. ಅವನು ತನ್ನನ್ನು

ಸ ಚ ಭೂತಾರ್ಥಮಾತ್ಮಾನಾಂ ಮತ್ವಾಪುನರಥಾಶ್ರಮಂ ।
ಆಜಗಾಮ ತತೋಽಪಶ್ಯತ್ತಮೃಷಿಂ ಜಪತಾಂ ವರಂ ॥ ೧೮ ॥

ತಂದೃಷ್ಟ್ವಾ ಸ್ಥಾಪ್ಯ ತಾಂ ಭಿಕ್ಷಾಂ ಶುಚ ದೇಶೇಪ್ರಸನ್ನಧೀಃ ।
ಪ್ರಣಮ್ಯ ತಮೃಷಿಂ ವಾಕ್ಯಂ ಉವಾಚ ವ್ಯಾಧಸತ್ತಮಃ ॥ ೧೯ ॥

ಬ್ರಹ್ಮನ್‌ಕ್ಷಾಲಯ ಪಾದೌ ತ್ವಮುಪವಿಶ್ಯಾಸನೇ ಶುಭೇ ।
ಯದಿ ಮೇಽನುಗ್ರಹೋ ದೇವ ತದೇವಂ ಕರ್ತುಮರ್ಹಸಿ ॥ ೨೦ ॥

ಏವಮುಕ್ತಃ ಸ ಜಿಜ್ಞಾಸುಃ ತಪೋವೀರ್ಯಂ ಶುಭೋಮುನಿಃ ।
ನದೀಂ ಗತುಂ ನ ಶಕ್ನೋಮಿ ಜಲಪಾತ್ರಂ ನ ಚಾಸ್ತಿ ಮೇ ॥ ೨೧ ॥

ಕಥಂ ಪ್ರಕ್ಷಾಲನಂ ವ್ಯಾಧ ಪಾದಯೋರ್ಮೇ ಭವಿಷ್ಯತಿ ।
ಇತ್ಯೇವಂ ಮುನಿನಾ ಪ್ರೋಕ್ತೋ ವ್ಯಾಧಶ್ಚಿಂತಾಪರೋಽಭವತ್ ॥ ೨೨ ॥

ಕೃತಾರ್ಥನೆಂದುಕೊಂಡು, ಬಳಿಕ ಮತ್ತೆ ಆಶ್ರಮಕ್ಕೆ ಬಂದು, ತಪಸ್ವಿಗಳಲ್ಲಿ ಶ್ರೇಷ್ಠನಾದ ಋಷಿಯನ್ನು ನೋಡಿದನು.

೧೯–೨೦. ಸಂತುಷ್ಟವೂ, ನಿರ್ಮಲವೂ ಆದ ಮನಸ್ಸುಳ್ಳ ಆ ಒಳ್ಳೇಡನು ತಾನು ತಂದಿದ್ದ ಭಿಕ್ಷೆಯನ್ನು (ಆಹಾರ ಪದಾರ್ಥವನ್ನು)ಶುಚಿಯಾದ ಪ್ರದೇಶದಲ್ಲಿಟ್ಟು ಆ ಋಷಿಗೆ ಪ್ರಣಾಮಮಾಡಿ, "ಬ್ರಹ್ಮನೇ, ಸ್ವಾಮಿ ನನ್ನಲ್ಲಿ ನಿನಗೆ ದಯೆಯಿದ್ದರೆ, ಕಾಲುಗಳನ್ನು ತೊಳೆದುಕೊಂಡು ಭೋಜನಕ್ಕಾಗಿ ಶುಭಕರವಾದ ಪೀಠದಲ್ಲಿ ಕುಳಿತುಕೊಳ್ಳಬೇಕು." ಎಂದು ಬಿನ್ನೈಸಿದನು.

೨೧–೨೨. ಹೀಗೆ ಹೇಳಿಸಿಕೊಂಡ ಆ ದುರ್ವಾಸಮುನಿಯು, ಬೇಡನ ಶುಭತಪಶ್ಶಕ್ತಿಯನ್ನು ತಿಳಿಯಬೇಕೆಂದು "ಬೇಡನೆ, ನದಿಗೆ ಹೋಗಲು ನನಗೆ ಶಕ್ತಿಯಿಲ್ಲ. ನನ್ನಲ್ಲಿ ನೀರಿನಪಾತ್ರೆಯೂ ಇಲ್ಲ. ನಾನು ಕಾಲುತೊಳೆದುಕೊಳ್ಳುವುದು ಹೇಗೆ ? ಎಂದು ಕೇಳಲು ಬೇಡನು ಚಿಂತೆಗೊಳಗಾದನು.

ಕಿಂ ಕರೋಮಿ ಕಥಂ ಚಾಸ್ಯ ಭೋಜನಂ ವೈ ಭವಿಷ್ಯತಿ ।
ಏವಂ ಸಂಚಿಂತ್ಯ ಮನಸಾ ಗುರುಂ ಸ್ಮೃತ್ವಾ ವಿಚಕ್ಷಣಃ ॥
ಜಗಾಮ ಶರಣಂ ತಾಂತು ಸರಿತಂ ದೇವಿಕಾಂ ಸುಧೀಃ ॥ ೨೩ ॥

॥ ವ್ಯಾಧ ಉವಾಚ ॥

ವ್ಯಾಧೋಽಸ್ಮಿ ಪಾಪಕರ್ಮಾಸ್ಮಿ ಬ್ರಹ್ಮಹಾಸ್ಮಿ ಸರಿದ್ವರೇ ।
ತಥಾಪಿ ಸಂಸ್ಮೃತಾ ದೇವಿ ಪಾಹಿ ಮಾಂ ಶರಣಾಗತಂ ॥ ೨೪ ॥

ದೇವತಾಂ ನೈವ ಜಾನಾಮಿ ನ ಮಂತ್ರಂ ನ ತಥಾರ್ಚನಂ ।
ಗುರುಪಾದೌ ಪರಂ ಧ್ಯಾತ್ವಾ ಪಶ್ಯಾಮಿ ಸತತಂ ಶುಭಂ ॥ ೨೫ ॥

ಏವಂವಿಧಸ್ಯ ಮೇ ದೇವಿ ದಯಾಂ ಕುರು ಸರಿದ್ವರೇ ।
ಋಷೇರಾಸನ್ನತಾಂ ಯಾಹಿ ಪಾದಶೌಚಾರ್ಥ ಮಾಪಗೇ ॥ ೨೬ ॥

---

೨೩. ಏನುಮಾಡಲಿ! ಇವನಿಗೆ ಕಾಲುತೊಳೆದುಕೊಳ್ಳದೆ ಊಟವಾಗುವುದು ಹೇಗೆ? ಎಂದು ಬಹಳವಾಗಿ ಯೋಚಿಸಿ ಮನಸ್ಸಿನಿಂದ ಗುರುವನ್ನು ನೆನೆದು ವಿದ್ವಾಂಸನಾದ ಆ ಬೇಡನು ಆ ದೇವಿಕಾನದಿಯನ್ನು ಮರೆಹೊಕ್ಕನು.

೨೪. ಬೇಡ—"ನದ್ಯುತ್ತಮಳೇ, ನಾನು ಬೇಡನೂ, ಪಾಪಕರ್ಮಿಯೂ, ಬ್ರಹ್ಮಹತ್ಯಮಾಡಿದವನೂ ಆಗಿದ್ದೇನೆ. ಆದರೂ ನಾನು ಸ್ಮರಿಸಿದ ನೀನು, ಮರೆಹೊಕ್ಕ ನನ್ನನ್ನು ರಕ್ಷಿಸು.

೨೫. ದೇವತೆಯನ್ನಾಗಲಿ, ಮಂತ್ರವನ್ನಾಗಲಿ, ಪೂಜೆಯನ್ನಾಗಲಿ ಏನೂ ತಿಳಿಯೆನು. ಆದರೆ ಗುರುಪಾದಗಳನ್ನು ನೆನೆದು ಯಾವಾಗಲೂ ಶುಭವನ್ನು ನೋಡುತ್ತಿದ್ದೇನೆ.

೨೬. ದೇವಿ, ಹೀಗಿರುವ ನನ್ನ ಮೇಲೆ ಕೃಪೆಮಾಡು. ಜಲರಾಶಿಯಿಂದ ನಡೆಯುವವಳೇ, ಋಷಿಯು ಕಾಲುತೊಳೆದುಕೊಳ್ಳುವುದಕ್ಕಾಗಿ ಅವನ ಹತ್ತಿರಕ್ಕೆ ಹೋಗು."

ಏವಮುಕ್ತ್ವಾ ತು ವ್ಯಾಧೇನ ದೇವಿಕಾ ಪಾಪನಾಶಿನೀ ।
ಆಜಗಾಮ ಯತಃ ತಸ್ಥೌ ದುರ್ವಾಸಾಃ ಶಂಸಿತವ್ರತಃ ॥ ೨೭ ॥

ತದ್ದೃಷ್ಟ್ವಾ ಮಹದಾಶ್ಚರ್ಯಂ ದುರ್ವಾಸಾ ವಿಸ್ಮಯಂ ಯಯೌ ॥ ೨೮ ॥

ಪ್ರಕ್ಷಾಲ್ಯ ಹಸ್ತಪಾದೌ ಚ ತದನ್ನಂ ಶ್ರದ್ಧಯಾನ್ವಿತಂ ।
ಬುಭುಜೇ ಪರಮಪ್ರೀತಃ ತಥಾಚ್ಯಮ್ಯ ವಿಚಕ್ಷಣಃ ॥ ೨೯ ॥

ತಮಸ್ಥಿಶೇಷಂ ವ್ಯಾಧಂತು ಕ್ಷುಧಾ ದುರ್ಬಲತಾಂ ಗತಂ ।
ಉವಾಚ ವೇದಾಃ ಸಾಂಗಾಸ್ತೇ ಸರಹಸ್ಯಪದಕ್ರಮಾಃ ॥
ಬ್ರಹ್ಮವಿದ್ಯಾಪುರಾಣಾನಿಪ್ರತ್ಯಕ್ಷಾಣಿ ಭವಂತು ತೇ ॥ ೩೦ ॥

ಏವಂ ಪ್ರಾದಾದ್ವರಂ ತಸ್ಯ ದುರ್ವಾಸಾ ನಾಮ ಚಾಕರೋತ್ ।
ಭವಾನ್ ಸತ್ಯತಪಾ ನಾಮ ಋಷಿರಾದ್ಯೋ ಭವಿಷ್ಯತಿ ॥ ೩೧ ॥

ಏವಂ ದತ್ತವರೋ ವ್ಯಾಧಸ್ತಮಾಹ ಮುನಿಸತ್ತಮಂ ।
ವ್ಯಾಧೋ ಭೂತ್ವಾ ಕಥಂ ಬ್ರಹ್ಮನ್ ವೇದಾನಧ್ಯಾಪಯಾಮ್ಯಹಂ ॥ ೩೨ ॥

---

೨೭. ಬೇಡನಿಂದ ಪ್ರಾರ್ಥಿತಳಾದ ಪಾಪನಾಶಿನಿಯಾದ ದೇವಿಕೆಯು ಸ್ತುತ್ಯವಾದ ವ್ರತವುಳ್ಳ ದುರ್ವಾಸನು ನಿಂತಿದ್ದೆಡೆಗೇ ಬಂದಳು.

೨೮. ಆ ಅತ್ಯಾಶ್ಚರ್ಯವನ್ನು ಕಂಡು, ದುರ್ವಾಸನು ವಿಸ್ಮಯಗೊಂಡನು.

೨೯. ಬಳಿಕ ವಿದ್ವಾಂಸನಾದ ಆ ದುರ್ವಾಸಋಷಿಯು ಕೈಕಾಲುಗಳನ್ನು ತೊಳೆದುಕೊಂಡು, ಭಕ್ತಿಯುತವಾದ ಆ ಅನ್ನವನ್ನು ಅತಿಸಂತೋಷದಿಂದ ಊಟಮಾಡಿದನು.

೩೦–೩೧. ಹಸಿವಿನಿಂದ ದುರ್ಬಲನಾಗಿ, ಎಲುಬುಗಳು ಮಾತ್ರವೇ ಉಳಿದಿರುವ ದೇಹವುಳ್ಳ ಆ ಬೇಡನನ್ನು ಕುರಿತು, ದುರ್ವಾಸನು "ಸಾಂಗಗಳೂ, ಸರಹಸ್ಯಪದಕ್ರಮಗಳೂ ಆದ ವೇದಗಳೂ ಬ್ರಹ್ಮವಿದ್ಯೆಪುರಾಣಗಳೂ ನಿನಗೆ ಪ್ರತ್ಯಕ್ಷವಾಗಲಿ" ಎಂದು ಹೇಳಿ ಅವನಿಗೆ ವರವನ್ನು ಕೊಟ್ಟನು. ಅಲ್ಲದೆ "ನೀನು ಸತ್ಯತಪನೆಂಬ ಹೆಸರಿನ ಮೊದಲನೆಯ ಋಷಿಯಾಗುವೆ" ಎಂದು ಹೆಸರನ್ನೂ ಕೊಟ್ಟನು.

೩೨. ಹೀಗೆ ವರವನ್ನು ಪಡೆದು ಬೇಡನು ಮುನಿಸತ್ತಮನಾದ ದುರ್ವಾಸನನ್ನು "ಬ್ರಹ್ಮನೇ ನಾನು ಬೇಡನಾಗಿ ಹೇಗೆ ವೇದಗಳನ್ನು ಹೇಳಲಿ ?" ಎಂದು ಕೇಳಿದನು.

॥ ಋಷಿರುವಾಚ ॥

ಪ್ರಾಕ್ಶರೀರಂ ಗತಂ ತೇದ್ಯ ನಿರಾಹಾರಸ್ಯ ಸತ್ತಮ ।
ತಪೋಮಯಂ ಶರೀರಂತೇ ಪೃಥಗ್ಭೂತಂ ನ ಸಂಶಯಃ ॥ ೩೩ ॥

ಪ್ರಾಗ್ವಿಜ್ಞಾನಂ ಗತಂ ನಾಶಂ ಇದಾನೀಂ ಶುದ್ಧಮಕ್ಷರಂ ।
ಉತ್ಪನ್ನಂ ಶುದ್ಧಕಾಯೋಽಸಿ ಸತ್ಯಮೇತದ್ಬ್ರವೀಮಿ ತೇ ॥ ೩೪ ॥

ತೇನ ವೇದಾಶ್ಚ ಶಾಸ್ತ್ರಾಣಿ ಪ್ರತಿಭಾಸ್ಯಂತಿ ವೈ ಮುನೇ ॥ ೩೫ ॥

ಇತಿ ಶ್ರೀ ವರಾಹಪುರಾಣೇ ಸತ್ಯತಪ ಉಪಾಖ್ಯಾನೇ ಪ್ರಾಗಿತಿಹಾಸೇ ಅಷ್ಟತ್ರಿಂಶೋಽಧ್ಯಾಯಃ

---

೩೩. ಋಷಿ—ಸತ್ಪುರುಷೋತ್ತಮನೇ, ಆಹಾರವಿಲ್ಲದಿರುವ ನಿನ್ನ ಹಿಂದಿನ ಶರೀರವು ಹೋಯಿತು. ಈಗ ನಿನಗೆ ತಪೋಮಯವಾದ ಬೇರೆಯ ಶರೀರವು ಉಂಟಾಗಿರುವುದರಲ್ಲಿ ಸಂಶಯವಿಲ್ಲ.

೩೪. ನಿನ್ನ ಹಿಂದಿನ ವಿಜ್ಞಾನವು ನಾಶವಾಗಿ ಹೋಯಿತು. ನಿನಗೆ ಈಗ ಶುದ್ಧವಾದ ಅಕ್ಷರಜ್ಞಾನವುಂಟಾಗಿದೆ. ಶುದ್ಧವಾದ ದೇಹವುಳ್ಳವನಾಗಿದ್ದೀಯೆ. ಇದನ್ನು ನಿಜವಾಗಿ ಹೇಳುತ್ತಿದ್ದೇನೆ.

೩೫. ಮುನಿಯೇ, ಆದುದರಿಂದ ನಿನಗೆ ವೇದಗಳೂ, ಶಾಸ್ತ್ರಗಳೂ ಗೋಚರಿಸುವುವು.

ಅಧ್ಯಾಯದ ಸಾರಾಂಶ:—ಶ್ರೀವರಾಹನು ಭೂದೇವಿಗೆ ಹಿಂದೆ ಹೇಳಿದ ಬೇಡನ ವಿಚಾರವನ್ನೇ ಮುಂದುವರಿಸುವನು—ಬೇಡನು ಸಾಧುವಾಗಿ ನಿರಾಹಾರನಾಗಿದ್ದು ಗುರುವನ್ನು ಸ್ಮರಿಸುತ್ತಾ ತಪಸ್ಸನ್ನು ಮಾಡುತ್ತಿರಲು, ದುರ್ವಾಸಮುನಿಯು ಅವನ ಹತ್ತಿರ ಬಂದು ಅವನಿಂದ ಆತಿಥ್ಯವನ್ನು ಪಡೆದುದು, ಬೇಡನು ತನ್ನ ತಪಶ್ಶಕ್ತಿಯಿಂದ ದೇವಿಕಾನದಿಯನ್ನು ದುರ್ವಾಸಮುನಿಯ ಹತ್ತಿರಕ್ಕೆ ಬರಿಸಿದುದು, ದುರ್ವಾಸರು ಆಶ್ಚರ್ಯಪಟ್ಟು ಆ ಬೇಡನಿಗೆ ಸಾಂಗವೇದಗಳೂ, ಬ್ರಹ್ಮವಿದ್ಯೆಪುರಾಣಗಳೂ ಪ್ರತ್ಯಕ್ಷವಾಗುವಂತೆಯೂ, ಅವನು ಸತ್ಯತಪನೆಂಬ ಹೆಸರಿನ ಋಷಿಯಾಗುವಂತೆಯೂ ವರವನ್ನು ಕೊಟ್ಟುದು, ಮೊದಲಾದ ವಿಚಾರಗಳನ್ನು ತಿಳಿಸುವಲ್ಲಿಗೆ ಶ್ರೀವರಾಹಪುರಾಣದಲ್ಲಿ ಮೂವತ್ತೆಂಟನೆಯ ಅಧ್ಯಾಯ.

॥ ಶ್ರೀಃ ॥

-X-

ಊನಚತ್ವಾರಿಂಶೋಽಧ್ಯಾಯಃ

ಅಥ ಮತ್ಸ್ಯದ್ವಾದಶೀವ್ರತಮ್

॥ ಸತ್ಯತಪಾ ಉವಾಚ ॥

ಭಗವನ್ ದ್ವೇ ಶರೀರೇತು ಇತಿ ಯತ್ಪರಿಕೀರ್ತಿತಂ ।
ತನ್ಮೇ ಕಥಯ ಭೇದಂ ವೈ ಕೇನ ಬ್ರಹ್ಮವಿದಾಂ ವರ ॥ ೧ ॥

॥ ದುರ್ವಾಸಾ ಉವಾಚ ॥

ನದ್ವೇ ತ್ರೀಣಿ ಶರೀರಾಣಿ ವಾಚ್ಯಂ ತದ್ವಿಪರೀಕಂ ।
ವಿಭೋಗಾಯತನಂ ಚೈವ ಶರೀರಾಣೀತಿ ದೇಹಿನಾಂ ॥ ೨ ॥

ಪ್ರಾಗವಸ್ಥಮಧರ್ಮಾಖ್ಯಂ ಪರಿಜ್ಞಾನವಿವರ್ಜಿತಂ ।
ಅಪರಂ ಸವ್ರತಂ ತದ್ಧಿ ಜ್ಞೇಯಮತ್ಯಂತಧಾರ್ಮಿಕಂ ॥ ೩ ॥

ಮೂವತ್ತೊಂಬತ್ತನೆಯ ಅಧ್ಯಾಯ

ಮತ್ಸ್ಯದ್ವಾದಶೀವ್ರತ

೧. ಸತ್ಯತಪ—ಪೂಜ್ಯನೇ, ಬ್ರಹ್ಮೋತ್ತಮನೇ, ಶರೀರಗಳೆರಡೆಂದು ಹೇಳಿದೆಯಲ್ಲ. ಆ ಭೇದವು ಏತರಿಂದೆಂಬುದನ್ನು ನನಗೆ ಹೇಳು.

೨-೪. ದುರ್ವಾಸಮುನಿ—ಶರೀರಗಳು ಎರಡಲ್ಲ. ಅದಕ್ಕೆ ಪ್ರತಿಯಾಗಿ ಭೋಗಶರೀರವೆಂಬುದೂ ಸೇರಿ ಮೂರೆಂದು ಹೇಳಬೇಕು. ದೇಹಿಗಳ ಶರೀರಗಳಲ್ಲಿ ಪರಿಜ್ಞಾನವಿಲ್ಲದ ಮೊದಲನೆಯ ರೀತಿಯದು ಅಧರ್ಮವೆಂಬ ಹೆಸರುಳ್ಳುದು. ವ್ರತಗಳಿಂದ ಕೂಡಿದ ಮತ್ತೊಂದು ಅತಿಧಾರ್ಮಿಕವೆಂದೆನಿಸಿ

ಧರ್ಮಾಧರ್ಮೋಪಭೋಗಾಯ ಯತ್ತೃತೀಯಮತೀಂದ್ರಿಯಂ ।
ತತ್ತ್ರಿಭೇದಂ ವಿನಿರ್ದಿಷ್ಟಂ ಬ್ರಹ್ಮವಿದ್ಭಿರ್ವಿಚಕ್ಷಣೈಃ ॥ ೪ ॥

ಯಾವತಾ ಧರ್ಮಭೋಗಶ್ಚ ಭುಕ್ತಿಶ್ಚೇತಿ ತ್ರಿಭೇದಕಂ ।
ಯಸ್ತು ಭಾವಃ ಪುರಾಹ್ಯಾಸೀತ್ ಪ್ರಾಣಿನೋ ನಿಘ್ನತಸ್ತವ ॥
ತತ್ಪಾಪಾಖ್ಯಂ ಶರೀರಂ ತೇ ಪಾಪಸಂಜ್ಞಮತೋಽಭವತ್ ॥ ೫ ॥

ಇದಾನೀಂ ಶುಭವೃತ್ತಿಂ ತು ಕುರ್ವತಸ್ತು ಪ ಆರ್ಜವಂ ।
ಅಪರಂ ಧರ್ಮರೂಪಂ ತು ಶರೀರಂ ತೇ ವ್ಯವಸ್ಥಿತಂ ॥ ೬ ॥

ತೇನ ವೇದಪುರಾಣಾನಿ ಜ್ಞಾತುಮರ್ಹಸ್ಯಸಂಶಯಂ ॥ ೭ ॥

ಕೊಳ್ಳುವುದು. ಧರ್ಮಾಧರ್ಮಗಳ ಉಪಭೋಗಾರ್ಥವಾದ ಮೂರನೆಯದು ಇಂದ್ರಿಯಗಳಿಗೆ ಗೋಚರವಾಗುದು. ಅದು ಅತೀಂದ್ರಿಯವೆನಿಸಿಕೊಳ್ಳುವುದು. ಬ್ರಹ್ಮಜ್ಞರಾದ ವಿದ್ವಾಂಸರು ಹೀಗೆ ಶರೀರವನ್ನು ಮೂರು ಬಗೆಯೆನ್ನುವರು.

೫. ಅಧರ್ಮದೇಹ (ಪಾಪದೇಹ), ಧರ್ಮದೇಹ, ಭೋಗ ಅಥವಾ ಭುಕ್ತಿದೇಹ ಎಂದು ಮೂರುವಿಧವಾಯಿತಲ್ಲವೆ. ಪ್ರಾಣಿಗಳನ್ನು ಕೊಲ್ಲುತ್ತಿದ್ದ ನಿನ್ನ ಹಿಂದಿನ ಸ್ಥಿತಿಯದು ಪಾಪಶರೀರವೆಂಬ ಹೆಸರುಳ್ಳದಾಗಿತ್ತು.

೬. ಈಗ ಒಳ್ಳೆಯ ಕೆಲಸಮಾಡುತ್ತಾ ಋಜುಭಾವದ ತಪಸ್ಸನ್ನು ಆಚರಿಸುತ್ತಿರುವ ನಿನ್ನ ಶರೀರವು ಬೇರೆಯಾದ ಧರ್ಮ(ರೂಪ)ಶರೀರವೆಂದು ನಿರ್ಣಯವಾಗಿದೆ.

೭. ಆದುದರಿಂದ ವೇದಶಾಸ್ತ್ರ ಪುರಾಣಗಳನ್ನು ತಿಳಿಯಲು ಸಂಶಯವಿಲ್ಲದೇ ಅರ್ಹನಾಗಿದ್ದೀಯೆ.

ಯದಾಷ್ಟಕೇ ಸಂಪರಿವರ್ತಿತೋ ಪುಮಾನ್
ತದಾನ್ಯವೃತ್ತ್ಯೋ ಭವತೀಹ ನಿಶ್ಚಿತಂ ।
ಗತಾಷ್ಟವರ್ಷಸ್ತು ಪುಮಾನ್ ಯದಾ ಭವೇತ್
ತದಾನ್ಯಚೇಷ್ಟೋ ಭವತೀಹ ಮಾನವಃ ॥ ೮ ॥

ಏಕಂ ಶರೀರಂ ಹಿ ಪೃಥಕ್ ನಿರ್ದಿಷ್ಟಂ ಬ್ರಹ್ಮವಾದಿಭಿಃ ।
ಅವಸ್ಥಾಭೇದತಶ್ಚೈವಂ ತದೇತತ್ಕಥಿತಂ ತ್ರಿಧಾ ॥
ಅಂತರಂ ನಾಮ್ನಿ ಚೈತಸ್ಯ ಯಥಾ ಮೃದ್ಘಟಯೋರಿವ ॥ ೯ ॥

ಕರ್ಮಕಾಂಡಂ ಚತುರ್ಭೇದಂ ಬ್ರಾಹ್ಮಣಾದಿಷುಕೀರ್ತಿತಂ ॥ ೧೦ ॥

ತತ್ರ ವೇದೋಕ್ತಕರ್ಮಾಣಿ ತ್ರಯಃ ಕುರ್ವಂತಿ ನಿತ್ಯಶಃ ।
ತ್ರಿಶುಶ್ರೂಷಾಮಥೈಕಸ್ತು ಏತಾ ವೇದೋದಿತಾಃ ಕ್ರಿಯಾಃ ॥ ೧೧ ॥

---

೮ ಎಂಟುವರ್ಷಕಾಲ ಸರಿಯಾಗಿ ಬದಲಾವಣೆಯನ್ನು ಹೊಂದಿದ ಮನುಷ್ಯನು ಆಮೇಲೆ ಬೇರೆಯ ವೃತ್ತಿ(ಅಥವಾ ಚರಿತ್ರೆ)ಯುಳ್ಳವನಾಗುತ್ತಾನೆಂಬುದು ನಿಶ್ಚಯ. ಎಂಟುವರ್ಷ ಕಳೆದ ಮೇಲೆ, ಮನುಷ್ಯನು ಈ ಲೋಕದಲ್ಲಿ ಬೇರೆಯ ನಡತೆಯುಳ್ಳವನಾಗುವನು.

೯. ಬ್ರಹ್ಮವಾದಿಗಳು ಒಂದೇ ಶರೀರವನ್ನು ಬೇರೆ ಬೇರೆಯಾಗಿ ತೋರಿಸುವರು. ಅವಸ್ಥೆ(ಸ್ಥಿತಿ)ಯ ಭೇದದಿಂದ ಮೂರು ಬಗೆಯನ್ನು ಹೇಳುವುದಾಗಿದೆ. ಈ ಶರೀರಕ್ಕೆ ಹೆಸರಿನ ವ್ಯತ್ಯಾಸವು(ಮಡಕೆಯು ಮಣ್ಣೇ ಆದರೂ ಸ್ಥಿತಿಯ ವ್ಯತ್ಯಾಸದಿಂದ)ಮಣ್ಣು ಮಡಕೆಗಳಿಗಿರುವಂತೆಯೇ.

೧೦. ಕರ್ಮಸಮೂಹವು ಬ್ರಾಹ್ಮಣರೇ ಮೊದಲಾದವರಿಗೆ ನಾಲ್ಕು ಬಗೆಯೆಂದು ಹೇಳಿದೆ.

೧೧. ಅದರಲ್ಲಿ ವೇದೋಕ್ತಕರ್ಮಗಳನ್ನು ಬ್ರಹ್ಮ ಕ್ಷತ್ರಿಯ ವೈಶ್ಯರೆಂಬ ಮೂವರು ನಿತ್ಯವೂ ಮಾಡುತ್ತಾರೆ ಶೂದ್ರನೊಬ್ಬನಾದರೋ ಮೊದಲ ಮೂವರ ಸೇವೆಯನ್ನೂ ಮಾಡುತ್ತಾನೆ. ಇವು ವೇದದಲ್ಲಿ ಹೇಳಿರುವ ಕರ್ಮ ಅಥವಾ ಕಾರ್ಯಗಳು.

ಏತಾನ್ಧರ್ಮಾಂಸ್ತು ವಿಜ್ಞಾಯ ಬ್ರಾಹ್ಮಣೋ ಯಸ್ತಪಸ್ಯತಿ ।
ತಸ್ಯ ಮುಕ್ತಿರ್ಭವೇನ್ನೂನಂ ವೇದವಾದರತಸ್ಯ ಚ ॥ ೧೨ ॥

॥ ಸತ್ಯತಪಾ ಉವಾಚ ॥

ಯತ್ತದೇತತ್ಪರಂ ಬ್ರಹ್ಮ ತ್ವಯಾಪ್ರೋಕ್ತಂ ಮಹಾಮುನೇ ।
ತಸ್ಯ ರೂಪಂ ನ ಜಾನಂತಿ ಯೋಗಿನೋಽಪಿ ಮಹಾತ್ಮನಃ ॥ ೧೩ ॥

ಅನಾಮಗೋತ್ರರಹಿತಮಮೂರ್ತಂ ಮೂರ್ತಿವರ್ಜಿತಂ ।
ಕಥಂ ತದ್ ಜ್ಞಾಯತೇ ಬ್ರಹ್ಮ ಸಂಜ್ಞಾನಾಮವಿವರ್ಜಿತಂ ॥
ತತ್ತಸ್ಯ ಸಂಜ್ಞಾಂ ಕಥಯ ಯೇನ ಜಾನಾಮ್ಯಹಂ ಗುರೋ ॥ ೧೪ ॥

॥ ದುರ್ವಾಸಾ ಉವಾಚ ॥

ಯದೇತತ್ಪರಮಂ ಬ್ರಹ್ಮ ವೇದೇ ಶಾಸ್ತ್ರೇಷು ಪಠ್ಯತೇ ।
ಸವೇದಃ ಪುಂಡರೀಕಾಕ್ಷಃ ಸ್ವಯಂ ನಾರಾಯಣೋ ಹರಿಃ ॥ ೧೫ ॥

---

೧೨. ಈ ಧರ್ಮಗಳನ್ನರಿತು ತಪಸ್ಸನ್ನು ಮಾಡುವ ಮತ್ತು ವೇದವಾದಾಸಕ್ತನಾದ ಬ್ರಾಹ್ಮಣನಿಗೆ ನಿಜವಾಗಿಯೂ ಮುಕ್ತಿಯಾಗುವುದು.

೧೩. ಸತ್ಯತಪ—ಮಹಾಮುನಿಯೇ, ಮಹಾತ್ಮನಾದ ಪರಬ್ರಹ್ಮನ ರೂಪವನ್ನು ಯೋಗಿಗಳೂ ಅರಿಯರೆಂದು ನೀನು ಹೇಳಿದೆಯಷ್ಟೆ.

೧೪. ಹೆಸರೂ, ಕುಲವೂ ಇಲ್ಲದವನೂ, ದೇಹಾಕಾರಗಳಿಲ್ಲದವನೂ, ಆದ ಆ ಬ್ರಹ್ಮನನ್ನು ಹೆಸರೂ ಗುರುತೂ ಇಲ್ಲದ ಮೇಲೆ ತಿಳಿಯುವುದು ಹೇಗೆ? ಗುರುವೇ, ನಾನು ತಿಳಿಯುವುದಕ್ಕೆ ಆಗುವಂತೆ ಅವನ ಗುರುತನ್ನು ಹೇಳು.

೧೫. ದುರ್ವಾಸಮುನಿ—ವೇದದಲ್ಲೂ, ಶಾಸ್ತ್ರಗಳಲ್ಲೂ ಪರಬ್ರಹ್ಮನೆಂದು ಹೇಳಿದೆ. ಕಮಲನೇತ್ರನೂ, ಹರಿಯೂ ಆದ ಸಾಕ್ಷಾನ್ನಾರಾಯಣನೇ ಆ ವೇದ.

ಸಯಜ್ಞೈರ್ವಿವಿಧೈರಿಷ್ಟೈರ್ದಾನೈರ್ದತ್ತೈಶ್ಚ ಸತ್ತಮ ।
ಪ್ರಾಪ್ಯತೇ ಪರಮೋ ದೇವಃ ಸ್ವಯಂ ನಾರಾಯಣೋ ಹರಿಃ ॥ ೧೬ ॥

॥ ಸತ್ಯತಪಾ ಉವಾಚ ॥

ಭಗವನ್ಬಹುವಿತ್ತೇನ ಋತ್ವಿಗ್ಭಿರ್ವೇದಪಾರಗೈಃ ।
ಪ್ರಾಪ್ಯತೇ ಪುಣ್ಯಕೃದ್ಭಿರ್ಹಿ ದೇವೋ ನಾರಾಯಣೋ ಭೃಶಂ ॥
ಅಧನೇನ ಕಥಂ ದೇವಃ ಪ್ರಾಪ್ಯತೇ ತದ್ವದಸ್ವ ಮೇ ॥ ೧೭ ॥

ವಿತ್ತೇನ ಚ ವಿನಾ ದಾನಂ ದಾತುಂ ವಿಪ್ರ ನ ಶಕ್ಯತೇ ।
ವಿದ್ಯಮಾನೇಽಪಿ ನ ಮತಿಃ ಕುಟುಂಬಾಸಕ್ತಚೇತಸಃ ॥ ೧೮ ॥

ತಸ್ಯ ನಾರಾಯಣೋ ದೂರೇ ಸರ್ವಥಾ ಪ್ರತಿಭಾತಿ ಮೇ ।
ಅತ್ಯಾಯಾಸೇನ ಲಭ್ಯೇತ ಯೇನ ದೇವಃ ಸನಾತನಃ ॥
ತನ್ಮೇ ವಿಶೇಷತೋ ಬ್ರೂಹಿ ಸರ್ವವರ್ಣೈಃಕೃತಂ ಭವೇತ್ ॥ ೧೯ ॥

---

೧೬. ಉತ್ತಮನೇ, ಬಗೆಬಗೆಯಜ್ಞಗಳನ್ನು ಮಾಡುವುದರಿಂದಲೂ, ದಾನಮಾಡುವುದರಿಂದಲೂ ಪರಮದೇವನಾದ ಸಾಕ್ಷಾನ್ನಾರಾಯಣನನ್ನು ಪಡೆಯಬಹುದು.

೧೭. ಸತ್ಯತಪ—ಪೂಜ್ಯನೇ, ಬಹು ಧನದಿಂದ ವೇದ ಪಾರಂಗತರಾದ ಋತ್ವಿಜರೂ, ಅತಿಪುಣ್ಯಶಾಲಿಗಳೂ, ದೇವನಾದ ನಾರಾಯಣನನ್ನು ಪಡೆಯುವರು. ಆದರೆ ಧನವಿಲ್ಲದವರು(ಬಡವರು) ಅವನನ್ನು ಪಡೆಯುವುದು ಹೇಗೆಂಬುದನ್ನು ನನಗೆ ಹೇಳು.

೧೮. ಹಣವಿಲ್ಲದೆ ದಾನ ಮಾಡುವುದಕ್ಕೆ ಸಾಧ್ಯವಿಲ್ಲ. ಹಣವಿದ್ದರೂ, ಕುಟುಂಬದಲ್ಲಿ ಆಸಕ್ತಿಯುಳ್ಳವನಿಗೆ ದಾನಮಾಡಲು ಬುದ್ಧಿಯುಂಟಾಗುವುದಿಲ್ಲ.

೧೯. ಆದುದರಿಂದ ಅಂತಹವನಿಗೆ ನಾರಾಯಣನು ದೂರದಲ್ಲಿರುವನು (ದೊರೆಯದವನು)ಎಂದು ನನಗೆ ತೋರುತ್ತದೆ. ಯಾವ ಅತಿಶ್ರಮ(ಕಾರ್ಯ)ದಿಂದ ಸನಾತನನಾದ ಆ ದೇವನನ್ನು ಪಡೆಯಬಹುದೋ ಅಂತಹ, ಸರ್ವವರ್ಣದವರೂ ಮಾಡಬಹುದಾದ ಶ್ರಮ(ಕಾರ್ಯ)ವನ್ನು ನನಗೆ ಮುಖ್ಯವಾಗಿ ಹೇಳು.

|| ದುರ್ವಾಸಾ ಉವಾಚ ||

ಕಥಯಾಮಿ ಪರಂ ಗುಹ್ಯಂ ರಹಸ್ಯಂ ದೇವನಿರ್ಮಿತಮ್ ।
ಧರಣ್ಯಾ ಯತ್ಕೃತಂ ಪೂರ್ವಂ ಮಜ್ಜಂತ್ಯಾನು ರಸಾತಲೇ || ೨೦ ||

ಪೃಥಿವ್ಯಾಃ ಪಾರ್ಥಿವೋ ಭಾವಃ ಸಲಿಲೇನಾತಿರೇಚಿತಃ ।
ತಸ್ಯಾಂ ಸಲಿಲಮಗ್ನಾಯಾಂ ಪೃಥ್ವೀ ಪ್ರಾಯಾದ್ರಸಾತಲಮ್ || ೨೧ ||

ಸಾ ಭೂತಧಾರಿಣೀ ದೇವೀ ರಸಾತಲಗತಾ ಶುಭಾ || ೨೨ ||

ಆರಾಧಯಾಮಾಸ ವಿಭುಂ ದೇವಂ ನಾರಾಯಣಂ ಪ್ರಭುಮ್ ।
ಉಪವಾಸವ್ರತೈರ್ದೇವೀ ನಿಯಮೈಶ್ಚ ಪೃಥಗ್ವಿಧೈಃ || ೨೩ ||

ಕಾಲೇನ ಮಹತಾ ತಸ್ಯಾಃ ಪ್ರಸನ್ನೋ ಗರುಡಧ್ವಜಃ ।
ಉಜ್ಜಹಾರ ಕ್ಷಿತಿಂ ಸ್ಥಿತ್ಯಾಂ ಸ್ಥಾಪಯಾಮಾಸ ಸೋವ್ಯಯಃ || ೨೪ ||

---

೨೦. ದುರ್ವಾಸಮುನಿ—ಪೂರ್ವದಲ್ಲಿ ರಸಾತಲದಲ್ಲಿ ಮುಳುಗಿಹೋಗಿದ್ದ ಭೂದೇವಿಯು ಯಾವುದನ್ನು ಮಾಡಿದಳೋ, ದೇವನಿರ್ಮಿತವೂ, ಅತಿರಹಸ್ಯವೂ ಆದ ಆ ಕಾರ್ಯವನ್ನು ಹೇಳುತ್ತೇನೆ.

೨೧. ಭೂಮಿಯ ಪರಿಮಿತಿಗಿಂತಲೂ, ಜಲಪರಿಮಾಣವು ಅತ್ಯಧಿಕವಾಯಿತು. ಆದುದರಿಂದ ಅದರಲ್ಲಿ ಮುಳುಗಿದ ಭೂದೇವಿಯು ರಸಾತಲಕ್ಕೆ ಹೋದಳು.

೨೨–೨೩. ಅಲ್ಲಿ ನಿಂತ ಭೂತಧಾರಿಣಿಯೂ, ಮಂಗಳೆಯೂ ಆದ ದೇವಿಯು ಉಪವಾಸ ವ್ರತಗಳಿಂದಲೂ, ಬೇರೆ ಬಗೆಯ ನಿಯಮ(ವ್ರತ)ಗಳಿಂದಲೂ ವಿಭುವೂ, ಪ್ರಭುವೂ ಆದ ನಾರಾಯಣದೇವನನ್ನು ಆರಾಧಿಸಿದಳು.

೨೪. ಬಹುಕಾಲದ ಮೇಲೆ ಅವಳಿಗೊಲಿದ ನಾಶರಹಿತನಾದ ನಾರಾಯಣನು ಆ ಭೂದೇವಿಯನ್ನು ಮೇಲಕ್ಕೆತ್ತಿ ನೆಲೆಯಲ್ಲಿ ನಿಲ್ಲಿಸಿದನು.

॥ ಸತ್ಯಾತಪಾ ಉವಾಚ ॥

ಕೋಽಸೌ ಧರಣ್ಯಾ ಸಂಚೀರ್ಣ ಉಪವಾಸೋ ಮಹಾಮುನೇ ।
ಕಾನಿ ವ್ರತಾನಿ ಚ ತಥಾ ಏತನ್ಮೇ ವಕ್ತುಮರ್ಹಸಿ ॥ ೨೫ ॥

॥ ದುರ್ವಾಸಾ ಉವಾಚ ॥

ಯದಾ ಮಾರ್ಗಶಿರೇ ಮಾಸಿ ದಶಮ್ಯಾಂ ನಿಯತಾತ್ಮವಾನ್ ।
ಕೃತ್ವಾ ದೇವಾರ್ಚನಂ ಧೀಮಾನಗ್ನಿಕಾರ್ಯಂ ಯಥಾವಿಧಿ ॥ ೨೬ ॥

ಶುಚಿವಾಸಾಃ ಪ್ರಸನ್ನಾತ್ಮಾ ಹವ್ಯಮನ್ನಂ ಸುಸಂಸ್ಕೃತಮ್ ।
ಭುಕ್ತ್ವಾ ಪಂಚಪದಂ ಗತ್ವಾ ಪುನಃ ಶೌಚಂ ತು ಪಾದಯೋಃ ॥ ೨೭ ॥

ಕೃತ್ವಾಷ್ಟಾಂಗುಲಮಾತ್ರಂ ತು ಕ್ಷೀರವೃಕ್ಷ ಸಮುದ್ಭವಮ್ ।
ಭಕ್ಷಯೇದ್ದಂತಕಾಷ್ಠಂತು ತತ ಆಚಮ್ಯ ಯತ್ನತಃ ॥ ೨೮ ॥

ಸ್ಪೃಷ್ಟ್ವಾದ್ವಾರಾಣಿ ಸರ್ವಾಣಿ ಚಿರಂ ಧ್ಯಾತ್ವಾ ಜನಾರ್ದನಮ್ ।
ಶಂಖಚಕ್ರಗದಾಪಾಣಿಂ ಪೀತಾಂಬರಧರಂ ವಿಭುಮ್ ॥
ಪ್ರಸನ್ನವದನಂ ದೇವಂ ಸರ್ವಲಕ್ಷಣ ಪೂಜಿತಮ್ ॥ ೨೯ ॥

---

೨೫. ಸತ್ಯತಪ—ಮಹಾಮುನಿಯೇ, ಭೂದೇವಿಯು ಮಾಡಿದ ಉಪವಾಸ ವಾವುದು ? ವ್ರತಗಳಾವುವು ? ಇದನ್ನು ನನಗೆ ಹೇಳಬೇಕು.

೨೬-೨೮. ದುರ್ವಾಸಮುನಿ—ತಿಳಿವಳಿಕೆಯುಳ್ಳವನು, ಮಾರ್ಗಶಿರಮಾಸದ ದಶಮಿಯದಿನ ಜಿತೇಂದ್ರಿಯನೂ, ಶುಚಿಯಾದ ಬಟ್ಟೆಗಳುಳ್ಳವನೂ, ನಿರ್ಮಲ ಮನಸ್ಸುಳ್ಳವನೂ ಆಗಿ, ವಿಧಿಗನುಸಾರವಾಗಿ ಅಗ್ನಿಕಾರ್ಯವನ್ನೂ, ದೇವಾರ್ಚನೆಯನ್ನೂ ಮಾಡಿ, ಪರಿಶುದ್ಧವೂ, ದೇವಾರ್ಪಿತವೂ ಆದ ಅನ್ನವನ್ನು ಊಟಮಾಡಿ, ಐದು ಅಡಿ ದೂರನಡೆದು, ಮತ್ತೆ ಕಾಲುತೊಳೆದುಕೊಂಡು, ಎಂಟಂಗುಲ ಉದ್ದವಾದ ಕ್ಷೀರವೃಕ್ಷದ (ಹಾಲೆಗಿಡದ) ಹಲ್ಲುಜ್ಜುವ ಕಡ್ಡಿಯನ್ನು ಅಗಿದು, ಅದರಿಂದ ಹಲ್ಲನ್ನುಜ್ಜಿ ಬಳಿಕ ಆಚಮನ ಮಾಡಬೇಕು.

೨೯-೩೦. ಬಳಿಕ ದೇಹದ ಸರ್ವದ್ವಾರಗಳನ್ನೂ ಯತ್ನಪೂರ್ವಕವಾಗಿ ಮುಟ್ಟಿ, ಶಂಖಚಕ್ರಗದಾಹಸ್ತನೂ, ಪೀತಾಂಬರಧಾರಿಯೂ, ವಿಭುವೂ, ಪ್ರಸನ್ನ

ಧ್ಯಾತ್ವಾ ಪುನರ್ಜಲಂ ಹಸ್ತೇ ಗೃಹ್ಯ ಭಾನ್ವೈರ್ಜನಾರ್ದನಮ್ ।
ದದ್ಯಾದರ್ಘ್ಯಂ ಚ ದೇವಾಯ ಕರತೋ ಯೇನ ಮಾನವಃ ॥ ೩೦ ॥

ಏವಮುಚ್ಚಾರಯನ್ವಾಚಂ ತಸ್ಮಿನ್ಕಾಲೇ ಮಹಾಮುನೇ ॥ ೩೧ ॥

ಏಕಾದಶ್ಯಾಂ ನಿರಾಹಾರಃ ಸ್ಥಿತ್ವಾಚೈವಾಪರೇಽಹನಿ ।
ಭೋಕ್ಷ್ಯಾಮಿ ಪುಂಡರೀಕಾಕ್ಷ ಶರಣಂ ಮೇ ಭವಾಚ್ಯುತ ॥ ೩೨ ॥

ಏವಮುಕ್ತ್ವಾ ತತೋ ರಾತ್ರೌ ದೇವದೇವಸ್ಯ ಸನ್ನಿಧೌ ।
ಜಪನ್ನಾರಾಯಣಾಯೇತಿ ಸ್ವಪೇತ್ತತ್ರ ವಿಧಾನತಃ ॥ ೩೩ ॥

ತತಃ ಪ್ರಭಾತೇ ವಿಮಲೇ ನದೀಂ ಗತ್ವಾ ಸಮುದ್ರಗಾಮ್ ।
ಇತರಾಂ ವಾ ತಟಾಕಂ ವಾ ಗೃಹೇ ವಾ ನಿಯತಾತ್ಮವಾನ್ ॥ ೩೪ ॥

ಆನೀಯ ಮೃತ್ತಿಕಾಂ ಶುದ್ಧಾಂ ಮಂತ್ರೇಣಾನೇನ ಮಾನವಃ ।
ಧಾರಣಂ ಪೋಷಣಂ ತ್ವತ್ತೋ ಭೂತಾನಾಂ ದೇವಿ ಸರ್ವದಾ ॥ ೩೫ ॥

ಮುಖನೂ, ಆದ ವಿಷ್ಣುವನ್ನು ಹೆಚ್ಚುಹೊತ್ತು ಧ್ಯಾನಿಸಿ, ಮತ್ತೆ ಕೈಯಲ್ಲಿ ನೀರನ್ನು ತೆಗೆದುಕೊಂಡು, ಮನಸ್ಸಿನಲ್ಲಿ ಅವನನ್ನು ಸ್ಮರಿಸಿ, ಕೈನೀರಿನಿಂದ ಆ ದೇವನಿಗೆ ಅರ್ಘ್ಯವನ್ನು ಕೊಡಬೇಕು.

೩೧–೩೩. ಮಹಾಮುನಿಯೇ, ಅರ್ಘ್ಯಕೊಡುವಾಗ "ಪುಂಡರೀಕಾಕ್ಷ, ಅಚ್ಯುತ, ಏಕಾದಶಿಯದಿನ ಉಪವಾಸಮಾಡಿ, ದ್ವಾದಶಿಯಲ್ಲಿ ಊಟ ಮಾಡುವೆನು. ನನಗೆ ರಕ್ಷಕನಾಗು." ಎಂದು ಹೇಳಬೇಕು. ಬಳಿಕ ರಾತ್ರಿಯಲ್ಲಿ ದೇವಸನ್ನಿಧಿಯಲ್ಲಿ ವಿಧಿಪೂರ್ವಕವಾಗಿ 'ನಾರಾಯಣಾಯ' ಎಂದು ಜಪಿಸುತ್ತಾ ಮಲಗಬೇಕು.

೩೪-೩೮. ಮಾರನೆಯ ಬೆಳಗಾಗುತ್ತಲೆ, ಸಮುದ್ರವನ್ನು ಸೇರುವ ನದಿಗೆ ಅಥವಾ ಉಪನದಿಗೆ, ಇಲ್ಲವಾದರೆ ಕೆರೆಗೆ ಹೋಗಿಯಾಗಲಿ, ಮನೆಯಲ್ಲಿಯೇ ಆಗಲಿ ಶುದ್ಧಾತ್ಮನಾಗಿ, "ಭೂದೇವಿ, ಯಾವಾಗಲೂ, ಪ್ರಾಣಿಗಳ ಧಾರಣವೂ, ಪೋಷಣವೂ ನಿನ್ನಿಂದಲೇ. ಆದುದರಿಂದ ನಿಜವಾಗಿಯೂ ನನ್ನ ಪಾಪವನ್ನು

ತೇನ ಸತ್ಯೇನ ಮೇ ಪಾಪಂ ಯಾವನ್ಮೋಚಯ ಸುವ್ರತೇ ।
ಬ್ರಹ್ಮಾಂಡೋದರತೀರ್ಥಾನಿ ತ್ವಯಾ *ಸ್ಪೃಷ್ಟಾನಿ ಕಾಶ್ಯಪಿ ॥ ೩೭ ॥

ತೇನೇಮಾಂ ಮೃತ್ತಿಕಾಂ ತ್ವತ್ತೋ ಗೃಹ್ಯ ಸ್ಥಾಸ್ಯೇದ್ಯ ಮೇದಿನಿ ।
ತ್ವಯಿ ಸರ್ವೇ ರಸಾ ನಿತ್ಯಾಃ ಸ್ಥಿತಾವರುಣ ಸರ್ವದಾ ॥ ೩೭ ॥

ತೈರಿಮಾಂ ಮೃತ್ತಿಕಾಂ ಪ್ಲಾವ್ಯ ಪೂತಾಂ ಕುರು ಚ ಮಾಚಿರಮ್ ।
ಏವಂ ಮೃದಂ ತಥಾ ತೋಯಂ ಪ್ರಗೃಹ್ಯಾತ್ಮಾನಮಾಲಭೇತ್ ॥ ೩೮ ॥

ತ್ರಿಃ ಕೃತ್ವಾಽಶೇಷಮೃತ್ಸ್ನಾಭಿಃ ಸರ್ವಾಂಗಂ ಲೇಪಯೇದ್ಬುಧಃ ।
ವಾರುಣೈರೇವ ಮಂತ್ರೈಸ್ತು ಸ್ನಾನಂ ಕುರ್ಯಾದ್ಯಥಾವಿಧಿ ॥ ೩೯ ॥

ಸ್ನಾತ್ವಾಚಾವಶ್ಯಕಂ ಕೃತ್ವಾ ಪುನರ್ದೇವಗೃಹಂ ವ್ರಜೇತ್ ।
ತತ್ರಾರಾಧ್ಯ ಮಯಾಯುಕ್ತಂ ದೇವಂ ನಾರಾಯಣಂ ಪ್ರಭುಮ್ ॥ ೪೦ ॥

ಹೋಗಲಾಡಿಸು. ಸುವ್ರತಳೇ, ಮೇದಿನಿ (ಭೂಮೀ), ಬ್ರಹ್ಮಾಂಡದೊಳಗಿನ ತೀರ್ಥಗಳನ್ನೆಲ್ಲಾ ನೀನು ಮುಟ್ಟಿರುವೆ. ಆದುದರಿಂದ ಈ ಮಣ್ಣನ್ನು ತೆಗೆದು ಕೊಂಡು ಇರುವೆನು. ವರುಣನೇ, ನಿನ್ನಲ್ಲಿ ಯಾವಾಗಲೂ ಸರ್ವರಸಗಳೂ ಶಾಶ್ವತವಾಗಿವೆ. ಅವುಗಳಿಂದ ಈ ಮಣ್ಣನ್ನು ಕೂಡಿಸಿ, ಪವಿತ್ರವನ್ನಾಗಿ ಮಾಡು. ತಡಮಾಡಬೇಡ." ಎಂಬ ಈ ಮಂತ್ರದಿಂದ, ಶುದ್ಧವಾದ ಮಣ್ಣನ್ನು ತೆಗೆದು ಕೊಂಡು ತನಗೆ ಲೇಪಿಸಿಕೊಳ್ಳಬೇಕು.

೩೯. ತೆಗೆದುಕೊಂಡ ಮಣ್ಣನ್ನು ಮೂರುಭಾಗಮಾಡಿ, ಮೂರುಸಾರಿ ಸರ್ವಾವಯವಗಳಿಗೂ ಬಳಿದುಕೊಳ್ಳಬೇಕು. ಬಳಿಕ ವರುಣಮಂತ್ರಗಳಿಂದ ನಿಯಮಾನುಸಾರವಾಗಿ ಸ್ನಾನಮಾಡಬೇಕು.

೪೦. ಸ್ನಾನಮಾಡಿ, ಸಂಧ್ಯಾವಂದನಾದಿಯಾದ ಆವಶ್ಯಕ ಕರ್ಮಗಳನ್ನು ಮಾಡಿ, ಮತ್ತೆ ದೇವರಸನ್ನಿಧಿಗೆ ಹೋಗಬೇಕು. ಅಲ್ಲಿ ಲಕ್ಷ್ಮೀಸಮೇತನಾದ ಪ್ರಭುವಾದ ನಾರಾಯಣನನ್ನು ಪೂಜಿಸಬೇಕು.

---

* ಪೃಷ್ಟಾನಿ.

ಕೇಶವಾಯನಮಃ ಪಾದೌ ಕಟಿಂ ದಾಮೋದರಾಯ ಚ ।
ಊರುಯುಗ್ಮಂ ನೃಸಿಂಹಾಯ ಉರಃ ಶ್ರೀ ವತ್ಸಧಾರಿಣೇ ॥ ೪೧ ॥

ಕೋಷ್ಠಂ ಕೌಸ್ತುಭವಾಸಾಯ ವಕ್ಷಃ ಶ್ರೀ ಪತಯೇ ತಥಾ ।
ತ್ರೈಲೋಕ್ಯವಿಜಯಾಯೇತಿ ಬಾಹೂ ಸರ್ವಾತ್ಮನೇ ಶಿರಃ ॥ ೪೨ ॥

ರಥಾಂಗಧಾರಿಣೇ ಚಕ್ರಂ ಶಂಕರಾಯೇ ವಾರಿಜಮ್ ।
ಗಂಭೀರಾಯೇತಿ ಚ ಗದಾಮಂಭೋಜಂ ಶಾಂತಮೂರ್ತಯೇ ॥
ಏವಮಭ್ಯರ್ಚ್ಯ ದೇವೇಶಂ ದೇವಂ ನಾರಾಯಣಂ ಪ್ರಭುಮ್ ॥ ೪೩ ॥

ಪುನಸ್ತಸ್ಯಾಗ್ರತಃ ಕುಂಭಾಂಶ್ಚತುರಃ ಸ್ಥಾಪಯೇದ್ಬುಧಃ ।
ಜಲಪೂರ್ಣಾನ್ಸಮಾಲ್ಯಾಂಶ್ಚತಿಲಪೂರ್ಣೈಃ ಸಕಾಂಚನೈಃ ॥ ೪೪ ॥

ಚತ್ವಾರಸ್ತೇ ಸಮುದ್ರಾಸ್ತು ಕಲಶಾಃ ಪರಿಕೀರ್ತಿತಾಃ ॥ ೪೫ ॥

೪೧-೪೩. ಕೇಶವಾಯ ನಮಃ (ಕೇಶವನಿಗೆ ನಮಸ್ಕಾರ) ಎಂದು ಪರಮಾತ್ಮನ ಪಾದಗಳನ್ನೂ, ದಾಮೋದರಾಯ ನಮಃ ಎಂದು ನಡುವನ್ನೂ, ನೃಸಿಂಹಾಯನಮಃ ಎಂದು ತೊಡೆಗಳನ್ನೂ, ಶ್ರೀವತ್ಸಧಾರಿಣೆನಮಃ ಎಂದು ಎದೆಯನ್ನೂ ಕೌಸ್ತುಭದಾರಿಣೆನಮಃ ಎಂದು ಜಠರವನ್ನೂ ಶ್ರೀಪತಯೇನಮಃ ಎಂದು ಎದೆಯನ್ನೂ ತ್ರೈಲೋಕ್ಯವಿಜಯಾಯನಮಃ ಎಂದು ತೋಳುಗಳನ್ನೂ, ಸರ್ವಾತ್ಮನೆನಮಃ ಎಂದು ತಲೆಯನ್ನೂ, ಚಕ್ರಧಾರಿಣೆನಮಃ ಎಂದು ಅವನ ಚಕ್ರವನ್ನೂ ಶಂಕರಾಯನಮಃ ಎಂದು ಶಂಖವನ್ನೂ, ಗಂಭೀರಾಯನಮಃ ಎಂದು ಗದೆಯನ್ನೂ ಶಾಂತಮೂರ್ತಯೇನಮಃ ಎಂದು ಪದ್ಮವನ್ನೂ ಅರ್ಚಿಸಬೇಕು.

೪೪. ಹೀಗೆ ದೇವೇಶನೂ, ಪ್ರಭುವೂ ಆದ ಆ ನಾರಾಯಣನನ್ನು ಆರಾಧಿಸಿ, ಬಳಿಕ ಆ ದೇವನೆದುರಿಗೆ ಜಲಪೂರ್ಣಗಳೂ, ಹೂಮಾಲೆಗಳಿಂದಲಂಕೃತಗಳೂ, ಆದ ನಾಲ್ಕು ಕಲಶಗಳನ್ನು ಅವುಗಳಮೇಲೆ ಎಳ್ಳುತುಂಬಿದ (ಸುವರ್ಣ) ನಾಣ್ಯಸಹಿತಗಳಾದ ತಾಮ್ರದ ಚಿಕ್ಕಪಾತ್ರೆಗಳಿರುವಂತೆ ಇಡಬೇಕು.

೪೫. ಆ ನಾಲ್ಕು ಕಲಶಗಳೇ ನಾಲ್ಕು ಸಮುದ್ರಗಳೆನಿಸಿಕೊಳ್ಳುವುವು.

ತೇಷಾಂ ಮಧ್ಯೇ ಶುಭಂ ಪೀಠಂ ಸಾಷ್ಠಯೇದ್ವಸ್ತ್ರಗರ್ಭಿತಮ್ ॥ ೪೬ ॥

ಸೌವರ್ಣಂ ರಜತಂ ಪಾತ್ರಂ ತಾಮ್ರಂ ವಾ ದಾರವಂ ತಥಾ ।
ಅಲಾಭೇ ಸರ್ವಪಾತ್ರಾಣಾಂ ಪಾಲಾಶಂ ಪತ್ರಮಿಷ್ಯತೇ ॥
ತೋಯ ಪೂರ್ಣಂತು ತತ್ಕೃತ್ವಾ ತಸ್ಮಿನ್ಪಾತ್ರೇ ತತೋ ನ್ಯಸೇತ್ ॥ ೪೭ ॥

ಸೌವರ್ಣಂ ಮತ್ಸ್ಯರೂಪೇಣ ಕೃತ್ವಾದೇವಂ ಜನಾರ್ದನಂ ।
ಸರ್ವಾವಯವಸಂಯುಕ್ತಂ ಸರ್ವಾಭರಣಭೂಷಿತಂ ॥ ೪೮ ॥

ತತ್ರಾನೇಕವಿಧೈರ್ಭಕ್ಷ್ಯೈಃ ಫಲೈಃ ಪುಷ್ಪೈಶ್ಚ ಶೋಭಿತಂ ।
ಗಂಧಧೂಪೈಶ್ಚ ವಸ್ತ್ರೈಶ್ಚ ಹ್ಯರ್ಚಯಿತ್ವಾ ಯಥಾವಿಧಿ ॥
ರಸಾಲಗತಾ ವೇದಾ ಯಥಾ ದೇವ ತ್ವಯಾ ಹೃತಾಃ ॥ ೪೯ ॥

ಮತ್ಸ್ಯರೂಪೇಣ ತದ್ವನ್ಮಾಂ ಭವಾನುದ್ಧರ ಕೇಶವ ।
ಏವಮುಚ್ಚಾರ್ಯ ತಸ್ಯಾಗ್ರೇ ಜಾಗರಂ ತತ್ರ ಕಾರಯೇತ್ ॥ ೫೦ ॥

---

೪೬. ಆ ನಾಲ್ಕುಕಲಶಗಳನಡುವೆ ವಸ್ತ್ರದಿಂದ ಮುಚ್ಚಿದ ಶುಭಪೀಠವನ್ನಿಡಬೇಕು.

೪೭. ಚಿನ್ನದ, ಬೆಳ್ಳಿಯ, ತಾಮ್ರದ ಅಥವಾ ಮರದ ಪಾತ್ರೆಯನ್ನೋ, ಈ ಪಾತ್ರೆಗಳಾವುವೂ ಇಲ್ಲದಿದ್ದರೆ ಮುತ್ತುಗದೆಲೆಯ ದೊನ್ನೆಯನ್ನೋ, ನೀರಿನಿಂದ ತುಂಬಿ, ಕಲಶಗಳ ಮಧ್ಯದ ಪೀಠದಲ್ಲಿಡಬೇಕು.

೪೮-೫೦. ದೇವನಾದ ಜನಾರ್ದನಮೂರ್ತಿಯನ್ನು ಚಿನ್ನದಿಂದ ಸರ್ವಾವಯವಗಳುಳ್ಳ ಮತ್ಸ್ಯಾಕಾರವಾಗಿ ಮಾಡಿ, ನೀರಿನಿಂದ ತುಂಬಿದ ಮಧ್ಯದ ಪಾತ್ರೆಯಲ್ಲಿ ಸ್ಥಾಪಿಸಬೇಕು. ಸರ್ವಾಭರಣಭೂಷಿತನೂ, (ಪುಷ್ಪ) ಗಳಿಂದೊಪ್ಪುವನೂ, ಆದ ಆ ಮತ್ಸ್ಯಮೂರ್ತಿಯನ್ನು ಗಂಧವಸ್ತ್ರಧೂಪದೀಪಗಳಿಂದಲೂ, ಬಗೆಬಗೆಯ ಫಲಗಳಿಂದಲೂ ಶಾಸ್ತ್ರೋಕ್ತವಾಗಿ ಪೂಜಿಸಿ, "ಕೇಶವನೇ, ರಸಾತಲಕ್ಕೆ ಹೋಗಿದ್ದ ವೇದಗಳನ್ನು ಮತ್ಸ್ಯರೂಪದಿಂದ ನೀನು ಉದ್ಧರಿಸಿದಹಾಗೆಯೇ ನನ್ನನ್ನೂ ಉದ್ಧರಿಸು, ದೇವ" ಎಂದು ಹೇಳಿ ಅಲ್ಲಿಯೇ ದೇವನೆದುರಿಗೆ ಜಾಗರಣೆಯನ್ನು ಮಾಡಬೇಕು. (ನಿದ್ದೆಯನ್ನು ಮಾಡಬಾರದು)

ಯಥಾ ವಿಭವಸಾರೇಣ ಪ್ರಭಾತೇ ವಿಮಲೇ ತಥಾ ।
ಚತುರ್ಣಾಂ ಬ್ರಾಹ್ಮಣಾನಾಂಚ ಚತುರೋ ದಾಪಯೇದ್ಘಟಾನ್ ॥ ೫೧ ॥

ಪೂರ್ವಂ ತು ಬಹ್ವೃಚೇ ದದ್ಯಾಚ್ಛಂದೋಗೇ ದಕ್ಷಿಣಾಂ ತಥಾ ॥ ೫೨ ॥

ಯಜುಶ್ಶಾಖಾನ್ವಿತೇ ದದ್ಯಾತ್ಪಶ್ಚಿಮಂ ಘಟಮುತ್ತಮಂ ।
ಉತ್ತರಂ ಕಾಮತೋ ದದ್ಯಾದೇಷ ಏವ ವಿಧಿಃ ಸ್ಮೃತಃ ॥ ೫೩ ॥

ಋಗ್ವೇದಃ ಪ್ರೀಯತಾಂ ಪೂರ್ವೇ ಸಾಮವೇದಸ್ತು ದಕ್ಷಿಣೇ ।
ಯಜುರ್ವೇದಃ ಪಶ್ಚಿಮತೋ ಹ್ಯಥರ್ವಶ್ಚೋತ್ತರೇಣತು ॥
ಅನೇನ ಕ್ರಮಯೋಗೇನ ಪ್ರೀಯತಾಮಿತಿ ವಾಚಯೇತ್ ॥ ೫೪ ॥

ಸೌವರ್ಣಂ ಮತ್ಸ್ಯರೂಪಂತು ಆಚಾರ್ಯಾಯ ನಿವೇದಯೇತ್ ।
ಗಂಧಧೂಪಾದಿ ವಸ್ತ್ರೈಶ್ಚ ಸಂಪೂಜ್ಯ ವಿವಿಧಕ್ರಮಾತ್ ॥ ೫೫ ॥

---

೫೧. ಆ ರಾತ್ರಿಕಳೆದು ಬೆಳಗಾಗಲು, ತನ್ನ ಅನುಕೂಲಕ್ಕೆ ತಕ್ಕಂತೆ ಇಟ್ಟಿರುವ ನಾಲ್ಕುಕಲಶಗಳನ್ನೂ ನಾಲ್ಕುಜನ ಬ್ರಾಹ್ಮಣರಿಗೆ ಕೊಡಿಸಬೇಕು.

೫೨. ಪೂರ್ವದಿಕ್ಕಿನ ಕಲಶವನ್ನು, ಋಗ್ವೇದವನ್ನು ಚೆನ್ನಾಗಿ ತಿಳಿದವನಿಗೂ, ದಕ್ಷಿಣದ್ದನ್ನು ಸಾಮವೇದಜ್ಞನಿಗೂ ಕೊಡಬೇಕು.

೫೩. ಯಜುರ್ವೇದಿಗೆ ಪಶ್ಚಿಮದ ಕಲಶವನ್ನು ಕೊಡಬೇಕು. ಉತ್ತರದ ಕಲಶವನ್ನು ಬೇಕಾದವರಿಗೆ ಕೊಡಬಹುದು. ಇದೇ ಹೇಳಿರುವ ವಿಧಿ.

೫೪. ಪೂರ್ವದಿಕ್ಕಿನಲ್ಲಿ ಋಗ್ವೇದವು ಸಂತುಷ್ಟವಾಗಲಿ. ದಕ್ಷಿಣದಲ್ಲಿ ಸಾಮವೇದವೂ, ಪಶ್ಚಿಮದಲ್ಲಿ ಯಜುರ್ವೇದವೂ, ಉತ್ತರದಲ್ಲಿ ಅಥರ್ವಣವೇದವೂ ತೃಪ್ತವಾಗಲಿ. ಎಂದು ದಾತೃವು ಹೇಳಿ, ತೆಗೆದುಕೊಳ್ಳುವರಿಂದಲೂ ಹೇಳಿಸಬೇಕು.

೫೫-೫೬. ಈ ವ್ರತದ ರಹಸ್ಯವಾದ ಮಂತ್ರವನ್ನೂ, ವಿಧಾನವನ್ನೂ ತಿಳಿಸಿದ ಆಚಾರ್ಯನನ್ನು ನಿಯಮದಂತೆ, ಬಗೆಬಗೆಯಲ್ಲಿ ಗಂಧಪುಷ್ಪದೂಪವಸ್ತ್ರಾದಿ

ಯಸ್ತ್ವಿಮಂ ಸರಹಸ್ಯಂ ಚ ಮಂತ್ರಂ ಚೈವೋಪಪಾದಯೇತ್ ।
ವಿಧಾನಂ ತಸ್ಯವೈ ದತ್ವಾ ಫಲಂ ಕೋಟಿಗುಣೋತ್ತರಂ ॥ ೫೬ ॥

ಪ್ರತಿಪದ್ಯ ಗುರುಂ ಯಸ್ತು ಮೋಹಾದ್ವಿಪ್ರತಿಪದ್ಯತೇ ।
ಸ ಕೋಟಿಜನ್ಮ-ನರಕೇ ಪಚ್ಯತೇ ಪುರುಷಾಧಮಃ ॥ ೫೭ ॥

ವಿಧಾನಸ್ಯ ಪ್ರದಾತಾಪ್ರೋಕ್ತೋ ಗುರುರಿತ್ಯುಚ್ಯತೇ ಬುಧೈಃ ॥ ೫೮ ॥

ಏವಂ ದತ್ವಾ ವಿಧಾನೇನ ದ್ವಾದಶ್ಯಾಂ ವಿಷ್ಣುಮರ್ಚ್ಯ ಚ ।
ವಿಪ್ರಾಣಾಂ ಭೋಜನಂ ದದ್ಯಾದ್ಯಥಾಶಕ್ತ್ಯಾ ಸದಕ್ಷಿಣಂ ॥ ೫೯ ॥

ಸತಿಲಂ ತಾಮ್ರಪಾತ್ರಂ ಚ ಸ್ಥಾಪಿತಂ ಕಲಶೋಪರಿ ।
ತತ್ಸರ್ವಂ ಜಲಪಾತ್ರಸ್ಥಂ ಬ್ರಾಹ್ಮಣಾಯ ಕುಟುಂಬಿನೇ ॥ ೬೦ ॥

ಗಳಿಂದ ಪೂಜಿಸಿ, ಸುವರ್ಣದ ಆ ಮತ್ಸ್ಯಮೂರ್ತಿಯನ್ನು ಆತನಿಗೆ ಅರ್ಪಿಸಬೇಕು. ಅದರಿಂದ ವ್ರತದ ಫಲವು ಕೋಟಿಗುಣವಾಗಿ ಹೆಚ್ಚುವುದು.

೫೭. ಗುರುವನ್ನು ಪಡೆದೂ ಅಜ್ಞಾನದಿಂದ ಉದಾಸೀನಮಾಡುವ ಹೀನ ಮನುಷ್ಯನು ಕೋಟಿಜನ್ಮಗಳಲ್ಲಿ ನರಕದಲ್ಲಿ ಸಂತಾಪಗೊಳ್ಳುವನು.

೫೮. ವ್ರತದ ವಿಧಿಯನ್ನೂ, ಕ್ರಮವನ್ನೂ ತಿಳಿಸುವವನೇ ಗುರುವೆಂದು ಪಂಡಿತರು ಹೇಳುವರು.

೫೯. ಹೀಗೆ ವಿಧಿಗನುಸಾರವಾಗಿ ಕೊಟ್ಟು, ಆ ದ್ವಾದಶಿಯಲ್ಲಿ ವಿಷ್ಣುವನ್ನು ಪೂಜಿಸಿ, ಶಕ್ತಿಗನುಸಾರವಾಗಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ ದಕ್ಷಿಣೆಯನ್ನೂ ಕೊಡಬೇಕು.

೬೦-೬೧. ಕಲಶದಮೇಲೆ ಇರಿಸಿದ್ದ ಎಳ್ಳು ತುಂಬಿದ ತಾಮ್ರದ ಪಾತ್ರೆಯನ್ನೂ, ನೀರಿನಪಾತ್ರೆಯಲ್ಲಿರುವ ದೇವನನ್ನೂ, ಉಳಿದುದೆಲ್ಲವನ್ನೂ ಕುಟುಂಬಿಯಾದ ಬ್ರಾಹ್ಮಣನಿಗೆ ಕೊಡಬೇಕು. ಆಮೇಲೆ ಹೆಚ್ಚಾದ ಪರಮಾನ್ನ

ದೇವಂ ದದ್ಯಾನ್ಮಹಾಭಾಗಸ್ತತೋ ವಿಪ್ರಾಂಶ್ಚ ಭೋಜಯೇತ್ ।
ಭೂರಿಣಾಪರಮಾನ್ನೇನ ತತಃ ಪಶ್ಚಾತ್ಸ್ವಯಂ ನರಃ ।
ಭುಂಜೀತ ಸಹಿತೋ ಬಾಲೈರ್ವಾಗ್ಯತಃ ಸಂಯತೇಂದ್ರಿಯಃ ॥ ೬೧ ॥

ಅನೇನ ವಿಧಿನಾ ಯಸ್ತು ಧರಣೀವ್ರತಕೃನ್ನರಃ ।
ತಸ್ಯ ಪುಣ್ಯಫಲಂ ಚಾಗ್ರ್ಯಂ ಶೃಣು ಬುದ್ಧಿಮತಾಂ ವರ ॥ ೬೨ ॥

ಯದಿ ವಕ್ತ್ರಸಹಸ್ರಾಣಿ ಭವಂತಿ ಮಮ ಸುವ್ರತ ।
ಆಯುಶ್ಚ ಬ್ರಹ್ಮಣಸ್ತುಲ್ಯಂ ಭವೇದ್ಯದಿ ಮಹಾವ್ರತ ॥ ೬೩ ॥

ತದಾನೀಮಸ್ಯ ಧರ್ಮಸ್ಯ ಫಲಂ ಕಥಯಿತುಂ ಭವೇತ್ ॥ ೬೪ ॥

ತಥಾಪ್ಯುದ್ದೇಶತೋ ಬ್ರಹ್ಮನ್ಕಥಯಿಷ್ಯಾಮಿ ತಚ್ಛೃಣು ॥ ೬೫ ॥

ದಿಂದ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು. ಬಳಿಕ ವ್ರತಿಯಾದವನು ತಾನು ಮಕ್ಕಳೊಡನೆ, ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡು, ಮೌನದಿಂದ ಊಟಮಾಡಬೇಕು

೬೨. ಅರಿವುಳ್ಳವರಲ್ಲಿ ಮೇಲಾದವನೇ, ಈ ವಿಧಾನದಿಂದ ಭೂದೇವಿಯು ಮಾಡಿದ ವ್ರತವನ್ನು ಮಾಡುವವನಿಗೆ ದೊರೆಯುವ ಉತ್ತಮವಾದ ಪುಣ್ಯಫಲವನ್ನು ಕೇಳು.

೬೩-೬೪. ಸುವ್ರತನೇ, ಮಹಾವ್ರತನೇ, ನನಗೆ ಸಾವಿರ ಬಾಯಿಗಳೂ, ಬ್ರಹ್ಮನಷ್ಟು ಆಯುಸ್ಸೂ ಆದರೆ ಆಗ ಈ ಧರ್ಮದ ಫಲವನ್ನು ಹೇಳುವುದಕ್ಕಾದೀತು.

೬೫. ಬ್ರಹ್ಮನೇ, ಆದರೂ ಉದ್ದೇಶಪೂರ್ವಕವಾಗಿ ಸಂಗ್ರಹವಾಗಿ ಹೇಳುವೆನು. ಅದನ್ನು ಕೇಳು.

ದಶ ಸಪ್ತದಶಾಬ್ದೇ ಚ ಅಷ್ಟೌ ಚತ್ವಾರ ಏವ ಚ।
ಲಕ್ಷಾಯುತಾನಿ ಚತ್ವಾರಿ ಏಕಸ್ಯಾಸ್ಯ ಚತುರ್ಯುಗಂ ॥
ತ್ರೈರೇಕಸಪ್ತತಿಯುಗಂ ಭವೇನ್ಮನ್ವಂತರಂ ಮುನೇ ॥ ೬೬ ॥

ಚತುರ್ದಶಾಹೋರಾತ್ರಸ್ತು ತಾವತೀ ರಾತ್ರಿರಿಷ್ಯತೇ।
ಏವಂ ತ್ರಿಂಶದ್ದಿನೋ ಮಾಸಃ ತೇ ದ್ವಾದಶಸಮಾಃ ಸ್ಮೃತಾಃ ॥ ೬೭ ॥

ತೇಷಾಂ ಶತಂ ಬ್ರಹ್ಮಣಸ್ತು ಆಯುರ್ನಾಸ್ತ್ಯತ್ರ ಸಂಶಯಃ ॥ ೬೮ ॥

ಯಃ ಸಕೃದ್ದ್ವಾದಶೀಮೇತಾಮನೇನ ವಿಧಿನಾಕ್ಷಿಪೇತ್।
ಸ ಬ್ರಹ್ಮಲೋಕಮಾಪ್ನೋತಿ ತಾವತ್ಕಾಲಂ ಚ ತಿಷ್ಠತಿ ॥
ತತೋ ಬ್ರಹ್ಮೋಪಸಂಹಾರಃ ಸಂಹಾರೇ ತಲ್ಲಯೋಽಚಿರಂ ॥ ೬೯ ॥

---

೬೬. ಮುನಿಯೇ, ಒಂದು ಚತುರ್ಯುಗಕ್ಕೆ ನಲವತ್ತುಮೂರು ಲಕ್ಷದ ಇಪ್ಪತ್ತುಸಾವಿರ ವರ್ಷಗಳಾಗುವುವು. ಎಪ್ಪತ್ತೊಂದು ಚತುರ್ಯುಗವು ಒಂದು ಮನ್ವಂತರವೆನಿಸಿಕೊಳ್ಳುವುದು.

೬೭. ಹದಿನಾಲ್ಕು ಮನ್ವಂತರವು ಬ್ರಹ್ಮನ ಒಂದು ಹಗಲು. ಮತ್ತೂ ಅಷ್ಟುಕಾಲವಾದರೆ ಬ್ರಹ್ಮನ ರಾತ್ರಿ ಹಗಲು ರಾತ್ರಿಗಳು ಸೇರಿದ ಇಂತಹ ಮೂವತ್ತು ದಿನಗಳು ಅವನ ಒಂದು ತಿಂಗಳು. ಅಂತಹ ತಿಂಗಳುಗಳು ಹನ್ನೆರಡಾದರೆ ವರ್ಷವಾಗುವುದು

೬೮. ಅಂತಹ ನೂರುವರ್ಷಗಳು ಬ್ರಹ್ಮನ ಆಯುಸ್ಸೆಂಬುದರಲ್ಲಿ ಸಂಶಯವಿಲ್ಲ.

೬೯. ಈ ಮತ್ಸ್ಯದ್ವಾದಶೀವ್ರತವನ್ನು ಮಾಡುವವನು ಬ್ರಹ್ಮಲೋಕವನ್ನು ಪಡೆದು, ಅಲ್ಲಿ ಬ್ರಹ್ಮನ ಆಯುಸ್ಸಿನಷ್ಟುಕಾಲ ನಿಲ್ಲುವನು. ಬಳಿಕ ಬ್ರಹ್ಮನ ಉಪಸಂಹಾರವಾಗುವುದು. ಆಗ ಒಡನೆಯೇ ಆ ವ್ರತಿಗೂ ಲಯವುಂಟಾಗುವುದು.

ಪುನಃ ಸ್ಪೃಷ್ಟೋ ಭವೇದ್ದೇವೋ ರಾಜಾನಾವು ಮಹಾತಪಾಃ ।
ಬ್ರಹ್ಮಹತ್ಯಾದಿಪಾಪಾನಿ ಇಹಲೋಕಕೃತಾನ್ಯಪಿ ।
ಅಕಾಮಃ ಕಾಮತೋ ವಾಪಿ ತಾನಿ ನಶ್ಯಂತಿ ತತ್ಕ್ಷಣಾತ್ ॥ ೭೦ ॥

ಇಹಲೋಕೇ ದರಿದ್ರೋ ಯೋ ಭ್ರಷ್ಟರಾಜ್ಯೋಥವಾ ನೃಪಃ ।
ಉಪೋಷ್ಯ ತಾಂ ವಿಧಾನೇನ ಸ ರಾಜಾ ಜಾಯತೇ ಧ್ರುವಂ ॥ ೭೧ ॥

ವಂಧ್ಯಾ ನಾರೀ ಭವೇದ್ಯಾತು ಅನೇನ ವಿಧಿನಾ ಶುಭಾ ।
ಉಪೋಷ್ಯತಿ ಭವೇತ್ತಸ್ಯಾಃ ಪುತ್ರಃ ಪರಮಧಾರ್ಮಿಕಃ ॥ ೭೨ ॥

ಅಗಮ್ಯಾಗಮನಂ ಯೇನ ಕೃತಂ ಜಾನಾತಿ ಮಾನವಃ ।
ಸ ಇಮಂ ವಿಧಿಮಾಸಾದ್ಯ ತಸ್ಮಾತ್ಪಾಪಾದ್ವಿಮುಚ್ಯತೇ ॥ ೭೩ ॥

---

೭೦. ಬ್ರಹ್ಮದೇವನೂ, ಮಹಾತಪಮುನಿಯೂ, ಆ ರಾಜನೂ ತಿರುಗಿ ಉದಿಸುವರು. ಈ ಲೋಕದಲ್ಲಿ ಅರಿತಾಗಲಿ, ಅರಿಯದೆಯಾಗಲಿ ಬ್ರಹ್ಮಹತ್ಯಾದಿ ಪಾಪಗಳನ್ನು ಮಾಡಿದರೂ ಈ ವ್ರತೋಪವಾಸವನ್ನು ಮಾಡಿದರೆ, ಒಡನೆಯೇ ಆ ಪಾಪಗಳು ನಾಶವಾಗುವುವು.

೭೧. ಈ ಲೋಕದಲ್ಲಿ ದರಿದ್ರನೋ, ರಾಜ್ಯವನ್ನು ಕಳೆದುಕೊಂಡ(ವನೋ) ದೊರೆಯೋ, ವಿಧಿಪೂರ್ವಕವಾಗಿ, ಮತ್ಸ್ಯೈಕಾದಶಿಯ ಉಪವಾಸ ಮಾಡಿದರೆ ಅವನು ನಿಜವಾಗಿಯೂ ರಾಜನಾಗುವನು.

೭೨. ಬಂಜೆಯಾದ ಸುಮಂಗಲಿಯಾದ ಹೆಂಗಸು ಈ ನಿಯಮದಿಂದ ಉಪವಾಸಮಾಡಿದರೆ ಅವಳಿಗೆ ಪರಮಧಾರ್ಮಿಕನಾದ ಮಗನು ಜನಿಸುವನು.

೭೩. ಅಗಮ್ಯಾಗಮನವನ್ನು ಮಾಡಿದವನೂ, ಅದನ್ನರಿತು ಪಾಪಕ್ಕೊಳಗಾದ ಸಾಧುವೂ ಈ ವ್ರತವನ್ನು ಮಾಡಿ, ಆ ಪಾಪವನ್ನು ಕಳೆದುಕೊಳ್ಳುವರು

ಬ್ರಹ್ಮಕ್ರಿಯಯಾಯಾ ಲೋಪೇನ ಬಹುವರ್ಷಕೃತೇನಚ ।
ಉಪೋಷ್ಯೇಮಾಂ ಸಕೃದ್ಭಕ್ತ್ಯಾ ವೇದಸಂಸ್ಕಾರಮಾಪ್ನುಯಾತ್ ॥ ೭೪ ॥

ಕಿಮತ್ರ ಬಹುನೋಕ್ತೇನ ನ ತದಸ್ತಿ ಮಹಾಮುನೇ ।
ಅಪ್ರಾಪ್ಯಂ ಪ್ರಾಪಯತಿ ಯಾ ಅತಃ ಕಾರ್ಯಾ ಸದಾ ನರೈಃ ॥ ೭೫ ॥

ಅನೇನ ವಿಧಿನಾ ಬ್ರಹ್ಮನ್ಸ್ವಯಮೇವ ಹ್ಯುಪೋಷಿತಾ ।
ಧರಣ್ಯಾ ಮಗ್ನಯಾ ತಾತ ನಾತ್ರ ಕಾರ್ಯಾ ವಿಚಾರಣಾ ॥ ೭೬ ॥

ಅದೀಕ್ಷಿತಾಯ ನೋ ದೇಯಂ ವಿಧಾನಂ ನಾಸ್ತಿಕಾಯ ಚ ।
ದೇವಬ್ರಹ್ಮದ್ವಿಷೇ ವಾಪಿ ನ ಶ್ರಾವ್ಯಂತು ಕದಾಚನ ॥ ೭೭ ॥

ಗುರುಭಕ್ತಾಯ ದಾತವ್ಯಂ ಸದ್ಯಃ ಪಾಪಪ್ರಣಾಶನಂ ॥ ೭೮ ॥

---

೭೪. ಬಹುವರ್ಷಗಳ ಕಾಲ ಬ್ರಾಹ್ಮಣಕರ್ಮಗಳನ್ನು ಮಾಡದೆ ಇರುವವನು ಭಕ್ತಿಯಿಂದ ಒಂದಾವೃತ್ತಿ ಈ ಮತ್ಸ್ಯೈಕಾದಶಿಯಲ್ಲಿ ಉಪವಾಸಮಾಡಿದರೆ ವೇದಸಂಸ್ಕಾರವನ್ನು ಪಡೆಯುವನು.

೭೫. ಮಹಾಮುನಿಯೇ, ಹೆಚ್ಚಾಗಿ ಹೇಳುವುದರಿಂದೇನು! ಈ ವ್ರತದಿಂದ ಎಲ್ಲವನ್ನೂ ಪಡೆಯಬಹುದು. ಪಡೆಯಲಾಗದುದು ಯಾವುದೂ ಇಲ್ಲ. ಆದುದರಿಂದ ಮನುಷ್ಯರು ಇದನ್ನು ಯಾವಾಗಲೂ ಮಾಡಬೇಕು.

೭೬. ಬ್ರಹ್ಮನೇ, ಈ ಕ್ರಮದಿಂದ ರಸಾತಲದಲ್ಲಿ ಮುಳುಗಿದ್ದ ಭೂದೇವಿಯೇ ಉಪವಾಸಮಾಡಿದಳು. ಈ ವಿಷಯದಲ್ಲಿ ವಿಮರ್ಶೆಮಾಡಬೇಕಾದುದಿಲ್ಲ.

೭೭. ಈ ವ್ರತದ ವಿಧಾನವನ್ನು ನಿಯಮವಿಲ್ಲದವನಿಗೂ, ನಾಸ್ತಿಕನಿಗೂ, ದೇವಬ್ರಾಹ್ಮಣದ್ವೇಷಿಗೂ, ಎಂದಿಗೂ ತಿಳಿಸಬಾರದು.

೭೮. ಒಡನೆಯೇ ಪಾಪವನ್ನು ನಾಶಮಾಡುವ ಇದನ್ನು ಗುರುಭಕ್ತನಾದವನಿಗೆ ಹೇಳಬೇಕು.

ಇಹಜನ್ಮನಿ ಸೌಭಾಗ್ಯಂ ಧನಂ ಧಾನ್ಯಂ ವರಸ್ತ್ರಿಯಃ ।
ಭವಂತಿ ವಿವಿಧಾಸ್ತಸ್ಯ ಯ ಉಪೋಷತಿ ಮಾನವಃ || ೭೯ ||

ಯ ಇಮಾಂ ಶ್ರಾವಯೇದ್ಭಕ್ತ್ಯಾ ದ್ವಾದಶೀ ಕಲ್ಪಮುತ್ತಮಂ ।
ಶೃಣೋತಿ ವಾ ಸ ಪಾಪೈಸ್ತು ಸರ್ವೈರೇವ ಪ್ರಮುಚ್ಯತೇ || ೮೦ ||

ಇತಿ ಶ್ರೀ ವರಾಹಪುರಾಣೇ ಧರಣೀವ್ರತೇ ಮತ್ಸ್ಯದ್ವಾದಶೀವ್ರತಂ ನಾಮ ಊನಚತ್ವಾರಿಂಶೋಽಧ್ಯಾಯಃ

---

೭೯. ಈ ವ್ರತೋಪವಾಸವನ್ನು ಮಾಡುವ ಮನುಷ್ಯನು ಈ ಜನ್ಮದಲ್ಲಿ ಧನಧಾನ್ಯ ಸೌಭಾಗ್ಯಗಳನ್ನೂ, ಉತ್ತಮ ಸ್ತ್ರೀಯರನ್ನೂ ಪಡೆಯುವನು.

೮೦. ಉತ್ತಮವಾದ ಈ ದ್ವಾದಶೀ ವಿಧಾನವನ್ನು ಭಕ್ತಿಯಿಂದ ಹೇಳುವವರೂ, ಕೇಳುವವರೂ ಎಲ್ಲಾ ಪಾಪಗಳನ್ನೂ ಕಳೆದುಕೊಳ್ಳುವರು.

ಅಧ್ಯಾಯದ ಸಾರಾಂಶ :—

ಜೇಡನಾಗಿದ್ದು ಸತ್ಯತಪನೆಂಬ ಋಷಿಯೆನಿಸಿಕೊಂಡವನಿಗೂ ದುರ್ವಾಸ ಮುನಿಗೂ ನಡೆದ ಸಂಭಾಷಣೆ–ದುರ್ವಾಸಮುನಿಯು, ಅವಸ್ಥಾ(ಸ್ಥಿತಿ)ಭೇದದಿಂದ ಬ್ರಹ್ಮವಾದಿಗಳು ಒಂದೇ ಶರೀರದಲ್ಲಿ, ಅಧರ್ಮದೇಹ, ಧರ್ಮದೇಹ, ಭೋಗ ಅಥವಾ ಮುಕ್ತಿದೇಹ ಎಂಬ ಮೂರು ಭೇದಗಳನ್ನು ಹೇಳುವರೆಂಬುದನ್ನೂ, ಬ್ರಾಹ್ಮಣರೇ ಮೊದಲಾದವರಿಗೆ ವಿಹಿತವಾಗಿರುವ ನಾಲ್ಕು ಬಗೆಯ ಕರ್ಮಗಳನ್ನೂ ಧನಿಕರು ಯಜ್ಞದಾನಾದಿ ಕರ್ಮಗಳಿಂದಲೂ, ಅನುಕೂಲವಿಲ್ಲದವರು ಸಾಮಾನ್ಯವ್ರತಗಳಿಂದಲೂ ನಾರಾಯಣನನ್ನು ಪಡೆಯಬಹುದೆಂದೂ ಹೇಳಿ, ರಸಾತಲದಲ್ಲಿ ಮುಳುಗಿದ್ದ ಭೂದೇವಿಯು ಮಾಡಿದ ಹಲವು ವ್ರತಗಳಲ್ಲಿ ಮತ್ಸ್ಯದ್ವಾದಶೀವ್ರತದ ವಿಚಾರವನ್ನೂ, ಅದರ ವಿಧಾನವನ್ನೂ ಫಲಗಳನ್ನೂ ಹೇಳುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಮೂವತ್ತೊಂಬತ್ತನೆಯ ಅಧ್ಯಾಯ.

॥ ಶ್ರೀಃ ॥

-X-

ಚತ್ವಾರಿಂಶೋಽಧ್ಯಾಯಃ

ಅಥ ಕೂರ್ಮದ್ವಾದಶೀವ್ರತಮ್

॥ ದುರ್ವಾಸಾ ಉವಾಚ ॥

ತಥೈವ ಪೌಷಮಾಸೇ ತು ಅಮೃತಂ ಮಥಿತಂ ಸುರೈಃ ।
ತತ್ರ ಕೂರ್ಮೋಽಭವೇದ್ದೇವಃ ಸ್ವಯಮೇವ ಜನಾರ್ದನಃ ॥ ೧ ॥

ತಸ್ಯೇಯಂ ತಿಥಿರುದ್ದಿಷ್ಟಾ ಮಹತೀ ಕೂರ್ಮರೂಪಿಣಃ ।
ಪೌಷಮಾಸಸ್ಯ ಯಾ ಶುಕ್ಲಾ ದಶಮೀತಿ ನಿಗದ್ಯತೇ ॥ ೨ ॥

ತಸ್ಯಾಂ ಪ್ರಾಗೇವ ಸಂಕಲ್ಪ್ಯ ಪ್ರಾಗ್ವತ್ ಸ್ನಾನಾದಿಕಾಃ ಕ್ರಿಯಾಃ ।
ನಿರ್ವರ್ತ್ಯಾರಾಧಯೇದ್ಭಕ್ತ್ಯಾ ಏಕಾದಶ್ಯಾಂ ಜನಾರ್ದನಂ ॥ ೩ ॥

ನಲವತ್ತನೆಯ ಅಧ್ಯಾಯ

ಕೂರ್ಮದ್ವಾವಶೀವ್ರತ

೧. ದುರ್ವಾಸಮುನಿ—ಪುಷ್ಯಮಾಸದಲ್ಲಿ ದೇವತೆಗಳು ಅಮೃತವನ್ನು ಕಡೆದರು. ಆ ಸಂದರ್ಭದಲ್ಲಿ ದೇವನಾದ ಜನಾರ್ದನನು ತಾನೇ ಕೂರ್ಮ ರೂಪವನ್ನು ಧರಿಸಿದನು.

೨. ಕೂರ್ಮರೂಪಿಯಾದ ಅವನಿಗೆ ಪುಷ್ಯಮಾಸದ ಶುಕ್ಲಪಕ್ಷದ ದಶಮೀ ತಿಥಿಯು(ಆ ಅವತಾರಕ್ಕೆ)ಉತ್ತಮವಾದುದೆಂದು ಉದ್ದಿಷ್ಟವಾಗಿದ್ದಿತೆಂದು ಹೇಳಿದೆ.

೩. ಆ ದಶಮಿಯ ದಿನ ಹಿಂದಿನಂತೆ(ಮತ್ಸ್ಯದ್ವಾದಶೀ ವ್ರತದಂತೆಯೇ) ಸಂಕಲ್ಪಮಾಡಿ, ಏಕಾದಶಿಯ ದಿನ ಸ್ನಾನವೇ ಮೊದಲಾದ ನಿತ್ಯಕರ್ಮಗಳನ್ನು ಮಾಡಿ, ಭಕ್ತಿಯಿಂದ ವಿಷ್ಣುವನ್ನು ಆರಾಧಿಸಬೇಕು.

ಕೂರ್ಮಾಯ ಪಾದೌ ಪ್ರಥಮಂ ಪ್ರಪೂಜ್ಯ
ನಾರಾಯಣಾಯೇತಿ ಹರೇಃ ಕಟಿಶ್ಚ ।
ಸಂಕರ್ಷಣಾಯೇತ್ಯುದರಂ ವಿಶೋಕೇ
ತ್ಯುರೋ ಭವಾಯೇತಿ ತಥೈವ ಕಂಠಂ ॥ ೪ ॥

ಸುಬಾಹವೇ ಚೈವ ಭುಜೌ ಶಿರಶ್ಚ
ನಮೋ ವಿಶಾಲಾಯ ನಮೋಽಸ್ತು ದೇವಃ ॥ ೫ ॥

ಸ್ವನಾಮಮಾತ್ರೇಣ ಸುಗಂಧಪುಷ್ಪೈಃ
ಧೂಪಾದಿ ನೈವೇದ್ಯ ಫಲೈರ್ವಿಚಿತ್ರೈಃ ।
ಅಭ್ಯರ್ಚ್ಯ ದೇವಂ ಕಲಶಂ ತದಗ್ರೇ
ಸಂಸ್ಥಾಪ್ಯ ಮಾಲಾಸಿತವಸ್ತ್ರಯುಕ್ತಂ ॥
ತಂ ರತ್ನಗರ್ಭಂ ತು ಪುರೇವ ಕೃತ್ವಾ
ಸ್ವಶಕ್ತಿತೋ ಹೇಮಮಯಂ ಚ ದೇವಂ ॥ ೬ ॥

೪–೫. ಆರಾಧನೆಯಲ್ಲಿ ಕೂರ್ಮಾಯ ನಮಃ ಎಂದು ಮೊದಲು ದೇವನ ಪಾದಗಳನ್ನು ಪೂಜಿಸಿ, ನಾರಾಯಣಾಯನಮಃ ಎಂದು ಹರಿಯ ನಡುವನ್ನೂ, ಸಂಕರ್ಷಣಾಯ ನಮಃ ಎಂದು ಉದರವನ್ನೂ, ವಿಶೋಕಾಯ ನಮಃ ಎಂದು ಹೃದಯವನ್ನೂ, ಭವಾಯ ನಮಃ ಎಂದು ಕಂಠವನ್ನೂ, ಸುಬಾಹವೇ ನಮಃ ಎಂದು ಭುಜಗಳನ್ನೂ, ವಿಶಾಲಾಯ ನಮಃ ಎಂದು ಶಿರಸ್ಸನ್ನೂ ಅರ್ಚಿಸಬೇಕು.

೬–೭ ದೇವನಿಗೆ ನಮಸ್ಕಾರ ಎಂದು ಅವನ ನಾಮದಿಂದ ಸುಗಂಧ ಪುಷ್ಪಗಳಿಂದಲೂ, ಧೂಪಾದಿಗಳಿಂದಲೂ, ಭಕ್ಷ್ಯ ಭೋಜ್ಯಫಲಾದಿಯಾದ ಬಗೆ ಬಗೆಯ ನೈವೇದ್ಯಗಳಿಂದಲೂ ದೇವನನ್ನು ಚೆನ್ನಾಗಿ ಪೂಜಿಸಿ, ದೇವನೆದುರಿಗೆ ಪೂರ್ಣಕಲಶವನ್ನು ಇಟ್ಟು ಅದರೊಳಗೆ ರತ್ನವನ್ನು ಹಾಕಿ, ಬಿಳಿಯವಸ್ತ್ರ ಗಳಿಂದಲೂ, ಮಾಲೆಗಳಿಂದಲೂ ಹಿಂದಿನಂತೆ ಅಲಂಕರಿಸಿ, ತನ್ನ ಶಕ್ತಿಗನು ಸಾರವಾಗಿ, ಚಿನ್ನದಿಂದ ದೇವನ ಕೂರ್ಮಮೂರ್ತಿಯನ್ನು ಮಂದರ ಪರ್ವತ

ಸಮಂದರಂ ಕೂರ್ಮರೂಪೇಣಕೃತ್ವಾ
ಸಂಸ್ಥಾಪ್ಯ ತಾಮ್ರೇ ಘೃತಪೂರ್ಣಪಾತ್ರೇ ।
ಪೂರ್ಣೇ ಘಟಸ್ಯೋಪತಿ ಸಂನಿವೇಶ್ಯ
ತದ್ಬ್ರಾಹ್ಮಣಂ ಪೂಜ್ಯ ತಥೈವ ದದ್ಯಾತ್ || ೭ ||

ಶ್ವೋ ಬ್ರಾಹ್ಮಣಾನ್ಪೂಜ್ಯ ಚ ದಕ್ಷಿಣಾದಿಭಿ
ರ್ಯಥಾಶಕ್ತ್ಯಾ ಪ್ರೀಣಯೇದ್ದೇವದೇವಂ ।
ನಾರಾಯಣಂ ಕೂರ್ಮರೂಪೇಣಯುಕ್ತಂ
ಪಶ್ಚಾತ್ತು ಭುಂಜೀತ ಸ ಭೃತ್ಯವರ್ಗಃ || ೮ ||

ಏವಂ ಕೃತೇ ವಿಪ್ರ ಸಮಸ್ತಪಾಪಂ
ವಿನಾಶ್ಯತೇ ನಾತ್ರ ಕುರ್ಯಾದ್ವಿಚಾರಂ ।
ಸಂಸಾರಚಕ್ರಂ ಸ ವಿಹಾಯ ಶುದ್ಧಂ
ಪ್ರಾಪ್ನೋತಿ ಲೋಕಂ ಚ ಹರೇಃ ಪುರಾಣಂ || ೯ ||

ಸಹಿತನಾಗಿರುವಂತೆ ಮಾಡಿಸಿ, ತುಪ್ಪದಿಂದ ತುಂಬಿದ ತಾಮ್ರಪಾತ್ರೆಯಲ್ಲಿ ಆ ಮೂರ್ತಿಯನ್ನು ಸ್ಥಾಪಿಸಿ, ಪೂರ್ಣಕಲಶದಮೇಲೆ ಕೂರ್ಮಮೂರ್ತಿ ಸಹಿತವಾದ ಆ ತಾಮ್ರದ ಪಾತ್ರೆಯನ್ನು ಇಟ್ಟು, ಪೂಜಿಸಿ, ಹಿಂದಿನಂತೆಯೇ ಕುಟುಂಬಿಯಾದ ಬ್ರಾಹ್ಮಣನನ್ನು ಪೂಜಿಸಿ, ಅವನಿಗೆ ದಾನಮಾಡಬೇಕು.

೮. ಮಾರನೆಯ ದಿನ(ದ್ವಾದಶಿಯಲ್ಲಿ)ಯಥಾಶಕ್ತಿಯಾಗಿ ಬ್ರಾಹ್ಮಣರನ್ನು ದಕ್ಷಿಣೆಯೇ ಮೊದಲಾದುವುಗಳಿಂದ ಪೂಜಿಸಿ, ದೇವದೇವನೂ, ಕೂರ್ಮರೂಪಿಯೂ ಆದ ನಾರಾಯಣನನ್ನು ಸಂತೋಷಪಡಿಸಬೇಕು. ಬಳಿಕ ಸೇವಕಸಮೂಹದೊಡನೆ ವ್ರತಿಯಾದವನು ಊಟಮಾಡಬೇಕು.

೯. ವಿಪ್ರ(ಸತ್ಯತಪ)ನೇ, ಭಕ್ತಿಯಿಂದ ಹೀಗೆ ಮಾಡಿದರೆ ಸಮಸ್ತ ಪಾಪವೂ ಪರಿಹಾರವಾಗುವುದು. ಇದರಲ್ಲಿ ವಿಚಾರಮಾಡಲೇಬಾರದು. ಈ ವ್ರತವನ್ನು ಮಾಡುವವನು ಸಂಸಾರಚಕ್ರವನ್ನು ಬಿಟ್ಟು ಶುದ್ಧವೂ ಪುರಾತನವೂ ಆದ ವಿಷ್ಣುಲೋಕವನ್ನು ಪಡೆಯುವನು.

ಪ್ರಯಾಂತಿ ಪಾಪಾನಿ ವಿನಾಶಮಾಶು
ಶ್ರೀಮಾಂಸ್ತಥಾ ಜಾಯತೇ ಸತ್ಯಧರ್ಮಃ ।
ಅನೇಕಜನ್ಮಾಂತರಸಂಚಿತಾನಿ
ನಶ್ಯಂತಿ ಪಾಪಾನಿ ನರಸ್ಯ ಭಕ್ತ್ಯಾ ॥ ೧೦ ॥

ಪ್ರಾಗುಕ್ತರೂಪಂತು ಫಲಂ ಲಭೇತ
ನಾರಾಯಣಸ್ತುಷ್ಟಿಮಾಯಾತಿ ಸದ್ಯಃ ॥ ೧೧ ॥

ಇತಿ ಶ್ರೀವರಾಹಪುರಾಣೇ ಧರಣೀವ್ರತೇ ಕೂರ್ಮದ್ವಾದಶೀವ್ರತಂ ನಾಮ ಚತ್ವಾರಿಂಶೋಽಧ್ಯಾಯಃ

---

೧೦. ಅನೇಕ ಜನ್ಮಾಂತರಗಳಲ್ಲಿ ಮಾಡಿದ ಪಾಪರಾಶಿಯು ಒಡನೆಯೇ ನಾಶವಾಗುವುದು. ಈ ಲೋಕದಲ್ಲಿ ಅವನು ಶ್ರೀಮಂತನೂ, ಸತ್ಯಧರ್ಮವುಳ್ಳವನೂ ಆಗುವನು.

೧೧. ಅಲ್ಲದೆ ಹಿಂದೆ ಹೇಳಿರುವ ಫಲವೆಲ್ಲವನ್ನೂ ಪಡೆಯುವನು. ನಾರಾಯಣನು ಕೂಡಲೆ(ಈ ವ್ರತದಿಂದ)ತೃಪ್ತನಾಗುವನು.

ಅಧ್ಯಾಯದ ಸಾರಾಂಶ:—

ಪಾತಾಳದಲ್ಲಿದ್ದ ಧರಣೀದೇವಿಯು ಮಾಡಿದ ಕೂರ್ಮದ್ವಾದಶೀವ್ರತವನ್ನೂ, ಅದರ ಕ್ರಮ, ಫಲ ಮೊದಲಾದುವುಗಳನ್ನೂ, ದುರ್ವಾಸಮುನಿಯು ಸತ್ಯತಪನಿಗೆ ವಿವರವಾಗಿ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನಲವತ್ತನೆಯ ಅಧ್ಯಾಯ.

|| ಶ್ರೀಃ ||

-X-

ಏಕಚತ್ವಾರಿಂಶೋಽಧ್ಯಾಯಃ

ಅಥ ವರಾಹದ್ವಾದಶೀವ್ರತಂ

|| ದುರ್ವಾಸಾ ಉವಾಚ ||

ಏವಂ ಮಾಘೇ ಸಿತೇ ಪಕ್ಷೇ ದ್ವಾದಶೀ ಧರಣೀಭೃತಃ ।
ವರಾಹಸ್ಯ ಶೃಣುಷ್ವಾದ್ಯಾಂ ಮುನೇ ಪರಮಧಾರ್ಮಿಕ || ೧ ||

ಪ್ರಾಗುಕ್ತೇನ ವಿಧಾನೇನ ಸಂಕಲ್ಪ್ಯ ಸ್ನಾನಮೇವ ಚ ।
ಕೃತ್ವಾ ದೇವಂ ಸಮಭ್ಯರ್ಚ್ಯ ಏಕಾದಶ್ಯಾಂ ವಿಚಕ್ಷಣಃ || ೨ ||

ಧೂಪನೈವೇದ್ಯಗಂಧೈಶ್ಚ ಅರ್ಚಯಿತ್ವಾಚ್ಯುತಂ ನರಃ ।
ಪಶ್ಚಾತ್ತಸ್ಯಾಗ್ರತಃ ಕುಂಭಂ ಜಲಪೂರ್ಣಂ ತು ವಿನ್ಯಸೇತ್ || ೩ ||

ನಲವತ್ತೊಂದನೆಯ ಅಧ್ಯಾಯ

ವರಾಹ ದ್ವಾದಶೀವ್ರತ

೧. ದುರ್ವಾಸಮುನಿ— ಪರಮಧಾರ್ಮಿಕನಾದ, ಮುನಿಯೇ, ಹೀಗೆಯೇ ಮಾಘಮಾಸದ ಶುಕ್ಲಪಕ್ಷದ ದ್ವಾದಶೀದಿನ ಮಾಡಬೇಕಾದ, ಭೂದೇವಿಯನ್ನು ಧ್ದರಿಸಿದ ಆಧಿವರಾಹದೇವನ ವ್ರತವಿಚಾರವನ್ನೂ ಕೇಳು.

೨–೩. ಹಿಂದೆ ಹೇಳಿದ ವಿಧಾನದಿಂದ ಸಂಕಲ್ಪಮಾಡಿ, ಸ್ಥಳವನ್ನೂ ಸಿದ್ಧಪಡಿಸಿ, ವಿದ್ವಾಂಸನಾದವನು ಏಕಾದಶಿಯ ದಿನ ಅಚ್ಯುತನನ್ನು ಗಂಧಧೂಪ ನೈವೇದ್ಯಾದಿಗಳಿಂದ ಚೆನ್ನಾಗಿ ಪೂಜಿಸಿ, ಬಳಿಕ ಆವನೆದುರಿಗೆ ನೀರು ತುಂಬಿದ್ದ ಕಲಶವನ್ನಿಡಬೇಕು.

ವರಾಹಾಯೇತಿ ಪಾದೌ ತು ಮಾಧವಾಯೇತಿವೈ ಕಟಿಂ ।
ಕ್ಷೇತ್ರಜ್ಞಾಯೇತಿ ಜಠರಂ ವಿಶ್ವರೂಪಾಯೇತ್ಯುರೋ ಹರೇಃ ॥ ೪ ॥

ಸರ್ವಜ್ಞಾಯೇತಿ ಕಂಠಂ ತು ಪ್ರಜಾನಾಂ ಪತಯೇ ಶಿರಃ ।
ಪ್ರದ್ಯುಮ್ನಾಯೇತಿ ಚ ಭುಜೌ ದಿವ್ಯಾಸ್ತ್ರಾಯ ಸುದರ್ಶನಂ ॥
ಅಮೃತೋದ್ಭವಾಯ ಶಂಖಂ ತು ಏಷ ದೇವಾರ್ಚನೇ ವಿಧಿಃ ॥ ೫ ॥

ಏವಮಭ್ಯರ್ಚ್ಯ ಮೇಧಾವೀ ತಸ್ಮಿನ್ಕುಂಭೇ ತು ವಿನ್ಯಸೇತ್ ॥ ೬ ॥

ಸೌವರ್ಣೇ ರೌಪ್ಯತಾಮ್ರೇವಾ ಪಾತ್ರೇ ವಿಭವಶಕ್ತಿತಃ ।
ಸರ್ವವಿತ್ತೈಸ್ತು ಸಂಪೂರ್ಣಂ ಸ್ಥಾಪಯಿತ್ವಾ ವಿಚಕ್ಷಣಃ ॥ ೭ ॥

ತತ್ರಶಕ್ತ್ಯಾತು ಸೌವರ್ಣಂ ವರಾಹಂ ಕಾರಯೇದ್ಬುಧಃ ।
ದಂಷ್ಟ್ರಾಗ್ರೇಣೋದ್ಧೃತಾಂ ಭೂಮಿಂ ಸಪರ್ವತವನದ್ರುಮಾಂ ॥ ೮ ॥

೪–೫. ವರಹಾಯನಮಃ ಎಂದು ಹರಿಯ ಪಾದಗಳನ್ನೂ, ಮಾಧವಾಯ ನಮಃ ಎಂದು ನಡುವನ್ನೂ, ಕ್ಷೇತ್ರಜ್ಞಾಯನಮಃ ಎಂದು ಉದರವನ್ನೂ, ವಿಶ್ವ ರೂಪಾಯನಮಃ ಎಂದು ಎದೆಯನ್ನೂ, 'ಸರ್ವಜ್ಞಾಯನಮಃ' ಎಂದು ಕಂಠ ವನ್ನೂ, 'ಪ್ರಜಾನಾಂ ಪತಯೇ ನಮಃ' ಎಂದು ಶಿರಸ್ಸನ್ನೂ, 'ಪ್ರದ್ಯುಮ್ನಾಯ ನಮಃ' ಎಂದು ಭುಜಗಳನ್ನೂ, 'ದಿವ್ಯಾಸ್ತ್ರಾಯ ನಮಃ' ಎಂದು ಚಕ್ರವನ್ನೂ, 'ಅಮೃತೋದ್ಭವಾಯ ನಮಃ' ಎಂದು ಶಂಖವನ್ನೂ ಅರ್ಚಿಸಬೇಕು. ಇದೇ ಅರ್ಚನೆಯ ಕ್ರಮ.

೬-೯. ಬುದ್ಧಿವಂತನಾದವನು ಹೀಗೆ ಪೂಜಿಸಿ, ದ್ರವ್ಯಾನುಕೂಲವಿದ್ದಂತೆ ಚಿನ್ನದ, ಬೆಳ್ಳಿಯ ಅಥವಾ ತಾಮ್ರದ ಬೇಕಾದ ಸರ್ವವಸ್ತುಗಳಿಂದ ಕೂಡಿದ ಪೂರ್ಣಕಲಶವನ್ನಿಟ್ಟು, ಪರ್ವತನದಿಗಳಿಂದ ಕೂಡಿದ ಭೂದೇವಿಯನ್ನು ಕೋರೆಯ

ಮಾಧವಂ ಮಧುಹಂತಾರಂ ವಾರಾಹಂ ರೂಪಮಾಸ್ಥಿತಂ |
ಸರ್ವಬೀಜಭೃತಂ ಪಾತ್ರಂ ರತ್ನಗರ್ಭಂ ಘಟೋಪರಿ ||
ಸ್ಥಾಪಯೇತ್ಪರಮಂ ದೇವಂ ಜಾತರೂಪಮಯಂ ಹರಿಂ || ೯ ||

ಸಿತವಸ್ತ್ರಯುಗಾಚ್ಛನ್ನಂ ತಾಮ್ರಪಾತ್ರೇ ತು ವೈ ಮುನೇ |
ಸ್ಥಾಪ್ಯಾರ್ಚಯೇದ್ಗಂಧಪುಷ್ಪೈರ್ನೈವೇದ್ಯೈರ್ವಿವಿಧೈಃ ಶುಭೈಃ || ೧೦ ||

ಪುಷ್ಪಮಂಡಲಿಕಾಂ ಕೃತ್ವಾ ಜಾಗರಂ ತತ್ರ ಕಾರಯೇತ್ |
ಪ್ರಾದುರ್ಭಾವಾದ್ಧರೇಸ್ತತ್ರ ವಾಚಯೇದ್ಭಾವಯೇಚ್ಛುಧಃ || ೧೧ ||

ಏವಂ ಪೂಜಾಂ ವಿಧಾಯಾಥ ಪ್ರಭಾತೇ ಉದಿತೇ ರವೌ || ೧೨ ||

ಶುಚಿಃ ಸ್ನಾತ್ವಾ ಹರಿಂ ಪೂಜ್ಯ ಬ್ರಾಹ್ಮಣಾಯ ನಿವೇದಯೇತ್ |
ವೇದವೇದಾಂಗವಿದುಷೇ ಸಾಧುವೃತ್ತಾಯ ಧೀಮತೇ || ೧೩ ||

ಹಲ್ಲಿನಅಗ್ರದಲ್ಲಿ ಧರಿಸಿರುವಂತೆ, ಲಕ್ಷ್ಮೀಪತಿಯೂ, ಮಧುನಾಶಕನೂ ಆದ ದೇವನ ವರಾಹಮೂರ್ತಿಯನ್ನು ಚಿನ್ನದಿಂದ ಅನುಕೂಲವಿದ್ದಷ್ಟು ಪರಿಮಾಣದಲ್ಲಿ ಮಾಡಿಸಿ ಸರ್ವವಿಧವಾದ ಧಾನ್ಯ(ಬೀಜ)ದಿಂದ ತುಂಬಿದ ರತ್ನಸಹಿತವಾದ ತಾಮ್ರದಪಾತ್ರೆಯಲ್ಲಿ ಸ್ಥಾಪಿಸಿ, ಮೂರ್ತಿಸಹಿತವಾದ ಆ ತಾಮ್ರದ ಪಾತ್ರೆಯನ್ನು ಕಲಶದ ಮೇಲಿಡಬೇಕು.

೧೦. ವರಾಹಮೂರ್ತಿಗೆ ಬಿಳಿಯ ವಸ್ತ್ರಗಳೆರಡನ್ನು ಧರಿಸಿ, ಗಂಧಪುಷ್ಪಗಳಿಂದಲೂ, ಬಗೆಬಗೆಯ ಶುಭಕರವಾದ ನೈವೇದ್ಯಗಳಿಂದಲೂ ಪೂಜಿಸಬೇಕು.

೧೧. ಅಲ್ಲಿಯೇ ಹೂವಿನಿಂದ ಮಂಡಲವನ್ನು ಮಾಡಿ, ಅದರಲ್ಲಿ ಜಾಗರಣೆಯನ್ನು ಮಾಡುತ್ತಾ, ಹರಿಯು ಅಲ್ಲಿ ಅವತರಿಸಿರುವುದರಿಂದ ಅವನನ್ನು ಧ್ಯಾನಿಸುತ್ತಲೂ, ಸ್ತುತಿಸುತ್ತಲೂ ಇರಬೇಕು.

೧೨-೧೩. ಹೀಗೆ ಪೂಜೆಮಾಡಿ, ರಾತ್ರಿಕಳೆದು, ಸೂರ್ಯೋದಯವಾಗುತ್ತಲೇ ಸ್ನಾನಮಾಡಿ, ಶುಚಿರ್ಭೂತನಾಗಿ, ಹರಿಯನ್ನು ಪೂಜಿಸಿ, ವೇದವೇದಾಂಗಗಳನ್ನು ಚೆನ್ನಾಗಿ ಅರಿತವನೂ, ಸಾಧುವೃತ್ತಿಯುಳ್ಳವನೂ, ವಿದ್ಯಾ

ವಿಷ್ಣುಭಕ್ತಾಯ ಶಾಂತಾಯ ಶ್ರೋತ್ರಿಯಾಯ ಕುಟುಂಬಿನೇ ।
ಏವಂ ಸಕುಂಭಂ ತಂ ದತ್ವಾ ಹರಿಂ ವಾರಾಹರೂಪಿಣಂ ॥ ೧೪ ॥

ದತ್ವಾ ಚಾಥ ಲಭೇದ್ಯತ್ತು ಫಲಂ ತನ್ಮೇ ನಿಶಾಮಯ ॥ ೧೫ ॥

ಇಹ ಜನ್ಮನಿ ಸೌಭಾಗ್ಯಂ ಶ್ರೀಃ ಕಾಂತಿಸ್ತುಷ್ಟಿರೇವ ಚ ।
ದರಿದ್ರೋ ವಿತ್ತವಾನ್ಸದ್ಯ ಅಪುತ್ರೋ ಲಭತೇ ಸುತಂ ॥
ಅಲಕ್ಷ್ಮೀರ್ನಶ್ಯತೇ ಸದ್ಯೋ ಲಕ್ಷ್ಮೀ ಸ್ಸಂವಿಶತೇ ಬಲಾತ್ ॥ ೧೬ ॥

ಇಹಜನ್ಮನಿ ಸೌಭಾಗ್ಯಂ ಪರಲೋಕೇ ನಿಶಾಮಯ ।
ಅಸ್ಮಿನ್ನರ್ಥೇ ಪುರಾವೃತ್ತಮಿತಿಹಾಸಂ ಪುರಾತನಂ ॥ ೧೭ ॥

ಪ್ರತಿಷ್ಠಾನೇಽಭವದ್ರಾಜಾ ವೀರಧನ್ವೇತಿವಿಶ್ರುತಃ ।
ಸ ಕದಾಚಿದ್ವನಂ ಪ್ರಾಯಾತ್ ಮೃಗಹೇತೋಃ ಪರಂತಪಃ ॥ ೧೮ ॥

ವಂತನೂ, ವಿಷ್ಣುಭಕ್ತನೂ, ಶಾಂತನೂ, ಶ್ರೋತ್ರಿಯನೂ, ಕುಟುಂಬಿಯೂ, ಆದ ಬ್ರಾಹ್ಮಣನಿಗೆ ಕಲಶದೊಡನೆ ವರಾಹರೂಪಿಯಾದ ಆ ಹರಿಯನ್ನೂ ಸಮರ್ಪಿಸಬೇಕು.

೧೫. ಹಾಗೆ ಅರ್ಪಿಸಿದವನು ಬಳಿಕ ಯಾವ ಫಲವನ್ನು ಪಡೆಯುವನೆಂಬುದನ್ನು ನಾನು ಹೇಳುತ್ತೇನೆ. ಕೇಳು.

೧೬. ಈ ಜನ್ಮದಲ್ಲಿ ಸೌಭಾಗ್ಯವನ್ನೂ, ಕಾಂತಿಯನ್ನೂ, ತೃಪ್ತಿಯನ್ನೂ, ಶ್ರೀಯನ್ನೂ ಪಡೆಯುವನು. ದರಿದ್ರನು ಕೂಡಲೇ ಧನಿಕನಾಗುವನು. ಪುತ್ರನಿಲ್ಲದವನು ಪುತ್ರವಂತನಾಗುವನು. ಅಲಕ್ಷ್ಮಿಯು ಕೂಡಲೆ ತೊಲಗಿ, ಲಕ್ಷ್ಮಿಯು ತಾನಾಗಿ ಬಲಾತ್ಕಾರದಿಂದ ಅವನ ಮನೆಯನ್ನು ಪ್ರವೇಶಿಸುವಳು.

೧೭. ಈ ಜನ್ಮದಲ್ಲಿ ಈ ಸೌಭಾಗ್ಯಗಳೆಲ್ಲವೂ ಲಭಿಸುವುವು. ಪರಲೋಕದಲ್ಲಿ ಲಭಿಸುವ ಫಲವಿಚಾರದಲ್ಲಿ, ಹಿಂದೆ ನಡೆದ ಪುರಾತನೇತಿಹಾಸವನ್ನು ಕೇಳು.

೧೮. ಪ್ರತಿಷ್ಠಾನ(ಪೈಠಣ)ದಲ್ಲಿ ವೀರಧನ್ವನೆಂಬ ಪ್ರಸಿದ್ಧನಾದ ದೊರೆಯಿದ್ದನು. ಶತ್ರುಸಂತಾಪಕನಾದ ಆತನು ಒಂದಾನೊಂದು ಸಾರಿ ಬೇಟೆಗಾಗಿ ಕಾಡಿಗೆ ಹೋದನು.

ವ್ಯಾಪಾದಯನ್ಮೃಗಗಣಾನ್ ತತ್ರರ್ಷಿವನಮಧ್ಯಗಃ ॥ ೧೯ ॥

ಜಘಾನಸಮೃಗರೂಪಾನ್ಸೋಽಜ್ಞಾನತೋ ಬ್ರಾಹ್ಮಣಾನ್ನೃಪಃ ।
ಭ್ರಾತರಸ್ತತ್ರ ಪಂಚಾಶನ್ಮೃಗರೂಪೇಣ ಸಂಸ್ಥಿತಾಃ ॥
ಸಂವರ್ತಸ್ಯ ಸುತಾಬ್ರಹ್ಮನ್ ವೇದಾಧ್ಯಯನತತ್ಪರಾಃ ॥ ೨೦ ॥

॥ ಸತ್ಯತಪಾ ಉವಾಚ ॥

ಕಾರಣಂ ಕಿಂ ಸಮಾಶ್ರಿತ್ಯ ತೇ ಚಕ್ರುರ್ಮೃಗರೂಪತಾಂ ।
ಏತನ್ಮೇ ಕೌತುಕಂ ಬ್ರಹ್ಮನ್ ಪ್ರಣತಸ್ಯ ಪ್ರಸೀದ ಮೇ ॥ ೨೧ ॥

॥ ದುರ್ವಾಸಾ ಉವಾಚ ॥

ತೇ ಕದಾಚಿದ್ವನಂ ಯಾತಾ ದೃಷ್ಟ್ವಾಹರಿಣಪೋತಕಾನ್ ।
ಜಾತಮಾತ್ರಾನ್ ಸ್ವಮಾತ್ರಾತು ವಿಹೀನಾನ್ ನೃಪಸತ್ತಮ ॥
ಏಕೈಕಂ ಜಗೃಹುಸ್ತೇ ಹಿ ತೇ ಮೃತಾಃ ಕಂದರಸ್ಥಿತಾಃ ॥ ೨೨ ॥

---

೧೯. ಅಲ್ಲಿ ಋಷಿಗಳು ವಾಸಿಸುತ್ತಿದ್ದ ಪ್ರದೇಶದ ಮಧ್ಯಕ್ಕೆ ಹೋಗಿ, ಮೃಗಗಣವನ್ನು ಕೊಲ್ಲುತ್ತಿದ್ದನು.

೨೦. ಅಲ್ಲಿ ಸಂವರ್ತನೆಂಬ ಋಷಿಯ ಪುತ್ರರೂ, ವೇದಾಧ್ಯಯನಾಸಕ್ತರೂ, ಆದ ಐವತ್ತು ಜನ ಸಹೋದರರು ಜಿಂಕೆಗಳ ರೂಪದಿಂದ ವಾಸಿಸುತ್ತಿದ್ದರು. ವೀರಧನ್ವರಾಜನು ಅರಿಯದೆ, ಮೃಗವೇಷದಿಂದಿದ್ದ ಆ ಬ್ರಾಹ್ಮಣರನ್ನು ಕೊಂದನು.

೨೧. ಸತ್ಯತಪ—ಬ್ರಹ್ಮನೇ, ಅವರು ಯಾವಕಾರಣದಿಂದ ಮೃಗರೂಪವನ್ನು ಧರಿಸಿದ್ದರು ? ಇದನ್ನು ತಿಳಿಯಲು ನನಗೆ ಬಹಳ ಕುತೂಹಲವಾಗಿದೆ. ನಮಸ್ಕರಿಸುತ್ತೇನೆ. ದಯೆಯಿಟ್ಟು ಹೇಳು.

೨೨. ದುರ್ವಾಸಮುನಿ—ಮುನಿಯೇ, ಒಂದಾನೊಂದುವೇಳೆ ಅವರು ಕಾಡಿಗೆ ಹೋಗಿ, ಅಲ್ಲಿ ಆಗತಾನೇ ಹುಟ್ಟಿದ್ದ ತಬ್ಬಲಿಗಳಾದ ಜಿಂಕೆಯಮರಿಗಳನ್ನು ನೋಡಿ, ಒಬ್ಬೊಬ್ಬರು ಒಂದೊಂದನ್ನು ಎತ್ತಿಕೊಂಡರು. ಗುಹೆಯಲ್ಲಿಟ್ಟಿದ್ದ ಅವು ಸತ್ತುಹೋದುವು.

ತತಸ್ತೇ ದುಃಖಿತಾಸ್ಸರ್ವೇ ಯಯುಃ ಪಿತರಮಂತಿಕಂ ।
ಊಚುಶ್ಚ ವಚನಂ ಚೇದಂ ಮೃಗಹಿಂಸಾಮೃತೇ ಮುನೇ ॥ ೨೩ ॥

॥ ಋಷಿಪುತ್ರಾ ಊಚುಃ ॥

ಜಾತಮಾತ್ರಾ ಮೃಗಾಃ ಪಂಚ ಅಸ್ಮಾಭಿರ್ನಿಹತಾಮುನೇ ।
ಅಕಾಮತಸ್ತತೋಽಸ್ಮಾಕಂ ಪ್ರಾಯಶ್ಚಿತ್ತಂ ವಿಧೀಯತಾಂ ॥ ೨೪ ॥

॥ ಸಂವರ್ತ ಉವಾಚ ॥

ಮತ್ಪಿತಾ ಹಿಂಸಕಶ್ಚಾಸೀದಹಂ ತಸ್ಮಾದ್ವಿಶೇಷತಃ ।
ಭವಂತಃ ಪಾಪಕರ್ಮಾಣಃ ಸಂಜಾತಾ ಮಮ ಪುತ್ರಕಾಃ ॥ ೨೫ ॥

ಇದಾನೀಂ ಮೃಗಚರ್ಮಾಣಿ ಪರಿಧಾಯ ಯತವ್ರತಾಃ ।
ಚರಧ್ವಂ ಪಂಚವರ್ಷಾಣಿ ತತಃ ಶುದ್ಧಾ ಭವಿಷ್ಯಥ ॥ ೨೬ ॥

ಏವಮುಕ್ತಾಸ್ತು ತೇ ಪುತ್ರಾಃ ಮೃಗಚರ್ಮೋಪವೀತಿನಃ ।
ವನಂ ವಿವಿಶುರವ್ಯಗ್ರಾಃ ಜಪಂತೋ ಬ್ರಹ್ಮ ಶಾಶ್ವತಂ ॥ ೨೭ ॥

---

೨೩. ಅದರಿಂದ ದುಃಖಿತರಾದ ಅವರೆಲ್ಲರೂ ಸಮೀಪದಲ್ಲಿಯೇ ಇದ್ದ ತಂದೆಯಬಳಿಗೆ ಹೋಗಿ ತಾವು ಮಾಡಿದ ಮೃಗಹಿಂಸೆಯನ್ನು ನಿಜವಾಗಿ ಹೇಳಿದರು.

೨೪ ಋಷಿಪುತ್ರರು—ಮುನಿಯೇ, ನಮಗೆ ಕೊಲ್ಲಬೇಕೆಂದು ಮನಸ್ಸಿರಲಿಲ್ಲವಾದರೂ, ಅಕಸ್ಮಾತ್ತಾಗಿ, ಆಗತಾನೇ ಹುಟ್ಟಿದ ಐದು ಜಿಂಕೆಯಮರಿಗಳನ್ನು ನಾವು ಕೊಂದಿದ್ದೇವೆ. ನಮಗೆ ತಕ್ಕ ಪ್ರಾಯಶ್ಚಿತ್ತವನ್ನು ವಿಧಿಸು

೨೫. ಸಂವರ್ತ—ನಮ್ಮ ತಂದೆಯು ಹಿಂಸಕನಾಗಿದ್ದನು. ನಾನು ಅವನಿಗಿಂತ ಹೆಚ್ಚಾಗಿ ಆದೆನು. ನನ್ನ ಮಕ್ಕಳಾದ ನೀವೂ ಪಾಪಕರ್ಮಿಗಳಾದಿರಿ.

೨೬. ಈಗ ನೀವು ಜಿಂಕೆಯ ಚರ್ಮವನ್ನು ಧರಿಸಿ ವ್ರತಿಗಳಾಗಿ ಐದು ವರ್ಷಕಾಲ ನಡೆಯಿರಿ. ಬಳಿಕ ಶುದ್ಧರಾಗುವಿರಿ.

೨೭. ಹೀಗೆ ಹೇಳಿಸಿಕೊಂಡ ಆ ಮಕ್ಕಳು ಜಿಂಕೆಯ ಚರ್ಮವನ್ನು ಹೊದೆದುಕೊಂಡು ವ್ಯಾಕುಲವಿಲ್ಲದೆ ಶಾಶ್ವತಬ್ರಹ್ಮಜಪಮಾಡುತ್ತಾ ಕಾಡಿನಲ್ಲಿದ್ದರು.

ತಥಾ ವರ್ಷೇ ವ್ಯತಿಕ್ರಾಂತೇ ವೀರಧನ್ವಾ ಮಹೀಪತಿಃ |
ತತ್ರಾಜಗಾಮ ಯಸ್ಮಿಂಸ್ತೇ ಚರಂತಿ ಮೃಗರೂಪಿಣಃ || ೨೮ ||

ತೇಚಾಪ್ಯೇಕತರೋರ್ಮೂಲೇ ಮೃಗಚರ್ಮೋಪವೀತಿನಃ |
ಜಪಂತ ಸ್ಸಂಸ್ಥಿತಾಸ್ತೇಹಿ ರಾಜ್ಞಾ ದೃಷ್ಟ್ವಾ ಮೃಗಾ ಇತಿ || ೨೯ ||

ಮತ್ವಾ ವಿದ್ಧಾಸ್ತು ಯುಗಪನ್ಮೃತಾಸ್ತೇ ಬ್ರಹ್ಮವಾದಿನಃ || ೩೦ ||

ತಾನ್ದೃಷ್ಟ್ವಾ ತು ಮೃತಾನ್ರಾಜಾ ಬ್ರಾಹ್ಮಣಾನ್ ಶಂಸಿತವ್ರತಾನ್ |
ಭಯೇನ ವೇಪಮಾನಸ್ತು ದೇವರಾತಾಶ್ರಮಂಯಯೌ || ೩೧ ||

ತತ್ರಾಪೃಚ್ಛದ್ಬ್ರಹ್ಮಹತ್ಯಾ ಮಮ ಜಾತಾ ಮಹಾಮುನೇ |
ಆಮೂಲಾತ್ತದ್ವಧಂ ವೃತ್ತಂ ಕಥಯಿತ್ವಾನರಾಧಿಪಃ ||
ಭೃಶಂ ಶೋಕಪರೀತಾತ್ಮಾ ರುರೋದಾತೀವ ದುಃಖಿತಃ || ೩೨ ||

---

೨೮. ಹಾಗೆ ವರ್ಷಕಳೆಯಲು, ವೀರಧನ್ವರಾಜನು, ಅವರು ಮೃಗ ರೂಪಿಗಳಾಗಿ ಚರಿಸುತ್ತಿದ್ದಲ್ಲಿಗೆ ಬಂದನು.

೨೯. ಅವರೆಲ್ಲರೂ ಕೃಷ್ಣಾಜಿನವನ್ನು ಧರಿಸಿದವರಾಗಿ ಒಂದು ಮರದ ಕೆಳಗೆ ಜಪಮಾಡುತ್ತಿದ್ದರು. ರಾಜನು ಅವರನ್ನು ಜಿಂಕೆಗಳೆಂದೇ ತಿಳಿದುಕೊಂಡನು

೩೦. ಜಿಂಕೆಗಳೆಂದುಕೊಂಡೇ, ರಾಜನು ಹೊಡೆಯಲಾಗಿ ಆ ಬ್ರಹ್ಮವಾದಿ ಗಳೆಲ್ಲರೂ ಒಟ್ಟಿಗೆ ಮೃತರಾದರು.

೩೧. ಶ್ಲಾಘ್ಯವಾದ ವ್ರತಗಳನ್ನು ಮಾಡುವ ಬ್ರಾಹ್ಮಣರಾದ ಅವರು ಸತ್ತುದನ್ನು ನೋಡಿ, ರಾಜನು ಭಯದಿಂದ ನಡುಗುತ್ತಾ ದೇವರಾತಾಶ್ರಮಕ್ಕೆ ಹೋದನು.

೩೨. ಅಲ್ಲಿ ರಾಜನು, ಬ್ರಾಹ್ಮಣರ ಕೊಲೆಯ ವೃತ್ತಾಂತವನ್ನು ಮೊದ ಲಿಂದಲೂ ಹೇಳಿ, ಅತಿ ದುಃಖಿತನಾಗಿ, ಮಹಾಮುನಿಯೇ, ನನಗೆ ಬ್ರಹ್ಮಹತ್ಯಾ ದೋಷವು ಬಂದಿತು. ಏನು ಮಾಡಲಿ ! ಎಂದು ಬಹಳ ಅತ್ತನು.

ಸ ಋಷಿರ್ದೇವರಾತಸ್ತು ರುದಂತಂ ನೃಪಸತ್ತಮಂ ।
ಉವಾಚ ಮಾಭೈರ್ನೃಪತೇ ಅಪನೇಷ್ಯಾಮಿ ಪಾತಕಂ ॥ ೩೩ ॥

ಪಾತಾಲೇ ಸುತಲಾಖ್ಯೇಚ ಯಥಾ ಧಾತ್ರೀ ನಿಮಜ್ಜತೀ ।
ಉದ್ಧೃತಾ ದೇವದೇವೇನ ವಿಷ್ಣುನಾ ಕ್ರೋಡಮೂರ್ತಿನಾ ॥ ೩೪ ॥

ತಸ್ಮಾದ್ಭವಂತಂ ರಾಜೇಂದ್ರ ಬ್ರಹ್ಮವಧ್ಯಾಪರಿಪ್ಲುತಂ ।
ಉದ್ಧರಿಷ್ಯತಿ ದೇವೋಽಸೌ ಸ್ವಯಮೇವ ಜನಾರ್ದನಃ ॥ ೩೫ ॥

ಏವಮುಕ್ತಸ್ತತೋ ರಾಜಾ ಹರ್ಷಿತೋ ವಾಕ್ಯಮಬ್ರವೀತ್ ॥ ೩೬ ॥

ಕತರೇಣ ಪ್ರಕಾರೇಣ ಸ ಮೇ ದೇವಃ ಪ್ರಸೀದತಿ ।
ಪ್ರಸನ್ನೇ ಚಾಶುಭಂ ಸರ್ವಂ ಯೇನ ನಶ್ಯತಿ ಸತ್ತಮ ॥ ೩೭ ॥

॥ ದುರ್ವಾಸಾ ಉವಾಚ ॥

ಏವಮುಕ್ತೋ ಮುನಿಸ್ತೇನ ದೇವರಾತ ಇದಂ ವ್ರತಂ ।
ಆಚಖ್ಯೌ ಸೋಽಪಿ ತತ್ಕೃತ್ವಾ ಭುಕ್ತ್ವಾ ಭೋಗಾನ್ಸುಪುಷ್ಕಲಾನ್ ॥ ೩೮ ॥

---

೩೩. ಋಷಿಯಾದ ದೇವರಾತನು ಅಳುತ್ತಿದ್ದ ರಾಜೋತ್ತಮನಿಗೆ— "ದೊರೆಯೇ ಹೆದರಬೇಡ. ನಿನ್ನ ಪಾಪವನ್ನು ಹೋಗಲಾಡಿಸುವೆನು.

೩೪-೩೫. ರಾಜೇಂದ್ರನೇ, ವರಾಹರೂಪಿಯೂ, ದೇವದೇವನೂ, ವಿಷ್ಣುವೂ ಆದ ಆ ಜನಾರ್ದನನು ಸುತಲವೆಂಬ ಹೆಸರಿನ ಪಾತಾಳದಲ್ಲಿ ಮುಳುಗಿದ್ದ ಭೂದೇವಿಯನ್ನು, ಉದ್ಧರಿಸಿದ ಹಾಗೆಯೇ ಬ್ರಹ್ಮಹತ್ಯ ಪಾಪದಿಂದ ಕಳವಳ ಪಡುತ್ತಿರುವ ನಿನ್ನನ್ನೂ ತಾನಾಗಿಯೇ ಉದ್ಧರಿಸುವನು."ಎಂದನು.

೩೬-೩೭ ಹೀಗೆ ಹೇಳಿಸಿಕೊಂಡ ರಾಜನು ಸಂತೋಷವುಳ್ಳವನಾಗಿ, "ಸಜ್ಜನೋತ್ತಮನೇ, ಆ ದೇವನು ನನಗೆ ಯಾವವಿಧದಿಂದ ಪ್ರಸನ್ನನಾಗುವನು ? ಪ್ರಸನ್ನನಾದರೆ ಏತರಿಂದ ಸರ್ವಾಶುಭವೂ(ಪಾಪವೂ) ನಾಶವಾಗುವುದು?" ಎಂದು ಕೇಳಿದನು.

೩೮-೩೯. ದುರ್ವಾಸಮುನಿ—ಮುನಿಶ್ರೇಷ್ಠನೇ, ಆ ವೀರಧನ್ವರಾಜನು ಹೀಗೆ ಕೇಳಲು ಈ ವರಾಹದ್ವಾದಶೀವ್ರತವನ್ನು ದೇವರಾತಋಷಿಯು ಹೇಳಿದನು.

ಮೃತ್ಯುಕಾಲೇ ಮುನಿಶ್ರೇಷ್ಠ ಸೌವರ್ಣೇನ ವಿರಾಜತಾ ।
ವಿಮಾನೇನಾಗಮತ್ಸ್ವರ್ಗಂ ಇಂದ್ರಲೋಕಂ ಸ ಪಾರ್ಥಿವಃ ॥ ೩೯ ॥

ತಸ್ಯೇಂದ್ರಸ್ತ್ವರ್ಘಮಾದಾಯ ಪ್ರತ್ಯುತ್ಥಾನೇನ ನಿರ್ಯಯೌ ।
ಆಯಾಂತಮಿಂದ್ರಂ ದೃಷ್ಟ್ವಾತು ತಮೂಚುರ್ವಿಷ್ಣುಕಿಂಕರಾಃ ॥
ನ ದ್ರಷ್ಟವ್ಯೋ ದೇವರಾಜ ತ್ವಂ ಹೀನಸ್ತಪಸಾ ಇತಿ ॥ ೪೦ ॥

ಏವಂ ಸರ್ವೇ ಲೋಕಪಾಲಾ ನಿರ್ಯಯುಸ್ತಸ್ಯ ತೇಜಸಾ ।
ಪ್ರತ್ಯಾಖ್ಯಾತಾಶ್ಚ ತೈರ್ವಿಷ್ಣುಕಿಂಕರೈರ್ಹೀನಕರ್ಮಣಃ ॥ ೪೧ ॥

ಏವಂ ಸ ಸತ್ಯ ಲೋಕಾಂತಂ ಗತೋ ರಾಜಾ ಮಹಾಮುನೇ ॥ ೪೨ ॥

ಅಪುನರ್ಮಾರಕೇ ಲೋಕೇ ದಾಹಪ್ರಲಯವರ್ಜಿತೇ ।
ಅದ್ಯಾಪಿ ತಿಷ್ಠತೇ ದೇವೈಸ್ತೂಯಮಾನೋ ಮಹಾನೃಪಃ ॥ ೪೩ ॥

ಆ ರಾಜನೂ ಅದನ್ನು ಮಾಡಿ, ಈ ಲೋಕದಲ್ಲಿ ಪುಷ್ಕಳವಾಗಿ ಭೋಗಗಳನ್ನನುಭವಿಸಿ, ಮರಣಕಾಲದಲ್ಲಿ ಹೊಳೆಯುವ ಹೊನ್ನಿನ ವಿಮಾನದಲ್ಲಿ ಕುಳಿತು, ಇಂದ್ರಲೋಕವಾದ ಸ್ವರ್ಗದ ಹತ್ತಿರ ಹೋದನು.

೪೦. ಇಂದ್ರನು ಪೂಜಾದ್ರವ್ಯಗಳನ್ನು ತೆಗೆದುಕೊಂಡು ಅವನನ್ನು ಎದುರುಗೊಳ್ಳಲು ಹೋದನು. ಇಂದ್ರನು ಬರುತ್ತಿರುವುದನ್ನು ನೋಡಿ, ವಿಮಾನವನ್ನು ತಂದಿದ್ದ ವಿಷ್ಣುದೂತರು, "ದೇವರಾಜನೇ, ತಪಸ್ಸಿಲ್ಲದವನಾದ ನೀನು ಈ ವೀರಧನ್ವನನ್ನು ನೋಡಕೂಡದು" ಎಂದರು.

೪೧. ಹೀಗೆ ಲೋಕಪಾಲರೆಲ್ಲರೂ ಅವನ ತೇಜಸ್ಸಿನಿಂದ ವಿಸ್ಮಿತರಾಗಿ ಎದುರುಗೊಂಡು ಹೊರಟರು. ಹೀನಕರ್ಮರಾದುದರಿಂದ ಅವರೆಲ್ಲರನ್ನೂ. ವಿಷ್ಣುದೂತರು ನಿರಾಕರಿಸಿಬಿಟ್ಟರು

೪೨–೪೩. ಮಹಾಮುನಿಯೇ. ವೀರಧನ್ವಮಹಾರಾಜನು ಹೀಗೆ ಸತ್ಯಲೋಕದವರೆಗೂ ಹೋಗಿ, ಪುನರ್ಮರಣವಿಲ್ಲದುದೂ, ಸುಡುವ ಪ್ರಳಯವಿಲ್ಲದುದೂ, ಆದ ಆ ಲೋಕದಲ್ಲಿ ದೇವತೆಗಳಿಂದ ಸ್ತೋತ್ರಮಾಡಿಸಿಕೊಳ್ಳುತ್ತಾ ಈಗಲೂ ಇದ್ದಾನೆ.

ಪ್ರಸನ್ನೇ ಯಜ್ಞಪುರುಷೇ ಕಿಂ ಚಿತ್ರಂ ಯೋನ ತದ್ಭವೇತ್ || ೪೪ ||

ಇಹ ಜನ್ಮನಿ ಸೌಭಾಗ್ಯಮಾಯುರಾರೋಗ್ಯಸಂಪದಃ |
*ಏಕೈಕವಿಧಿನೋಪಾಸ್ತಃ ದದಾತ್ಯಮೃತಮುತ್ತಮಂ ॥
ಕಿಂ ಪುನಸ್ಸರ್ವಸಂಪೂರ್ಣಃ ಸ ದದಾತಿ ಸ್ವಕಂ ಪದಂ || ೪೫ ||

ನಾರಾಯಣಶ್ಚತುರ್ಮೂರ್ತಿಃ ಪರಾರ್ಧ್ಯಶ್ಚ ನ ಸಂಶಯಃ || ೪೬ ||

ಯಥೈವೋದ್ಧೃತವಾನ್ವೇದಾನ್ಮತ್ಸ್ಯರೂಪೇಣ ಕೇಶವಃ |
ಕ್ಷೀರಾಂಬುಧೌ ಮಥ್ಯಮಾನೇ ಮಂದರಂ ಧೃತವಾನ್ಪ್ರಭುಃ ||
ತದ್ವಚ್ಚ ಕೂರ್ಮರೂಪೀ ಸ್ಯಾದ್ದ್ವಿತೀಯಾಂ ಪಶ್ಯ ವೈಷ್ಣವೀಂ || ೪೭ ||

---

೪೪. ಯಜ್ಞಪುರುಷನಾದ ಆ ನಾರಾಯಣನು ಪ್ರಸನ್ನನಾದರೆ ಯಾವುದಾಗುವದರಲ್ಲಿ ತಾನೆ ಆಶ್ಚರ್ಯವೇನು !

೪೫. ಒಂದೊಂದು ದ್ವಾದಶೀವ್ರತವನ್ನು ವಿಧಿಪೂರ್ವಕವಾಗಿ ಮಾಡಿದರೆ ಈ ಲೋಕದಲ್ಲಿ ಸೌಭಾಗ್ಯವನ್ನೂ, ಆಯುರಾರೋಗ್ಯ ಸಂಪತ್ತುಗಳನ್ನೂ, ಬಳಿಕ ಉತ್ತಮವಾದ ಮುಕ್ತಿಯನ್ನೂ ಕೊಡುತ್ತಾನೆ. ಎಲ್ಲಾ ದ್ವಾದಶೀವ್ರತಗಳಿಂದಲೂ ಸಂಪೂರ್ಣತೃಪ್ತನಾದ ಅವನು ತನ್ನ ಪದ (ಸ್ಥಾನ) ವನ್ನೇ ಅನುಗ್ರಹಿಸುವನೆಂಬುದರಲ್ಲಿ ಏನಾಶ್ಚರ್ಯ !

೪೬. ವೇದಗಳೆಂಬ ನಾಲ್ಕು ಮೂರ್ತಿಗಳುಳ್ಳ ನಾರಾಯಣನು ಶ್ರೇಷ್ಠನು. ಸಂಶಯವಿಲ್ಲ

೪೭. ಆ ಕೇಶವನು ಮತ್ಸ್ಯರೂಪದಿಂದ ವೇದಗಳನ್ನು ಹೇಗೆ ಉದ್ಧರಿಸಿದನೋ ಹಾಗೆಯೇ, ಕ್ಷೀರಸಾಗರವನ್ನು ಕಡೆಯುವಾಗ ಕೂರ್ಮರೂಪಿಯಾಗಿ ಮಂದರಪರ್ವತವನ್ನು ಧರಿಸಿದನು. ಎರಡನೆಯನಾದ ಈ ವೈಷ್ಣವಮೂರ್ತಿಯನ್ನು ನೋಡು.

---

* ಏಕೈಕಾವಿಧಿನೋಪಾಸ್ತಾ.

ಯಥಾರಸಾತಲಾತ್ ಕ್ಷ್ಮಾಂಚ ಧೃತವಾನ್ಪುರುಷೋತ್ತಮಃ।
ವರಾಹರೂಪೀ ತದ್ವಜ್ಜ ತೃತೀಯಾಂ ಪಶ್ಯ ವೈಷ್ಣವೀಂ ॥ ೪೮ ॥

ಇತಿ ಶ್ರೀವರಾಹಪುರಾಣೇ ಧರಣೀವ್ರತೇ ವರಾಹದ್ವಾದಶೀವ್ರತಂ ನಾಮ ಏಕಚತ್ವಾರಿಂಶೋಽಧ್ಯಾಯಃ

---

೪೮. ಅದರಂತೆಯೇ, ವರಾಹರೂಪಿಯಾದ ಆ ಪುರುಷೋತ್ತಮನು ರಸಾತಲದಿಂದ ಭೂದೇವಿಯನ್ನೂ ಉದ್ಧರಿಸಿದನಲ್ಲವೆ! ಮೂರನೆಯದಾದ ಇದೂ ವೈಷ್ಣವಮೂರ್ತಿಯೇ. ನೋಡು.

ಅಧ್ಯಾಯದ ಸಾರಾಂಶ:—

ಭೂದೇವಿಯು ಆಚರಿಸಿದ ವರಾಹದ್ವಾದಶೀವ್ರತವನ್ನೂ, ಆ ವ್ರತದಿಂದಾಗುವ ಫಲವನ್ನೂ, ದುರ್ವಾಸಮುನಿಯು ಸತ್ಯತಪನಿಗೆ ಹೇಳುತ್ತಾ, ವೀರಧನ್ವನೆಂಬ ರಾಜನು ಬೇಟೆಗೆ ಹೋಗಿದ್ದಾಗ ಅರಿಯದೆ, ಜಿಂಕೆಗಳ ವೇಷದಲ್ಲಿದ್ದ ಬ್ರಾಹ್ಮಣರನ್ನು ಕೊಂದು, ಆ ಬ್ರಹ್ಮಹತ್ಯಾಪಾತಕವನ್ನು, ವರಾಹದ್ವಾದಶೀವ್ರತವನ್ನು ಮಾಡಿ ಕಳೆದುಕೊಂಡುದಲ್ಲದೆ ಮುಕ್ತಿಯನ್ನೂ ಪಡೆದನೆಂದು ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನಲವತ್ತೊಂದನೆಯ ಅಧ್ಯಾಯ.

॥ ಶ್ರೀಃ ॥

-X-

ದ್ವಾಚತ್ವಾರಿಂಶೋಽಧ್ಯಾಯಃ

ಅಥ ನರಸಿಂಹದ್ವಾದಶೀವ್ರತಂ

॥ ದುರ್ವಾಸಾ ಉವಾಚ ॥

ತದ್ವತ್ಫಾಲ್ಗುನಮಾಸೇತು ಯಾ ಶುಕ್ಲೈಕಾದಶೀ ಭವೇತ್ ।
ತಾಮುಪೋಷ್ಯ ವಿಧಾನೇನ ಹರಿಮಾರಾಧಯೇತ್ಸುಧೀಃ ॥ ೧ ॥

ನರಸಿಂಹಾಯಪಾದೌತು ಗೋವಿಂದಾಯೇತ್ಯುರೂ ತಥಾ ।
ಕಟಿಂ ವಿಶ್ವಭುಜೇ ಪೂಜ್ಯ ಅನಿರುದ್ಧೇತ್ಯುರಸ್ತಥಾ ॥ ೨ ॥

ಕಂಠಂತು ಶಿತಿಕಂಠಾಯ ಪಿಂಗಕೇಶಾಯ ವೈಶಿರಃ ।
ಅಸುರಧ್ವಂಸನಾಯೇತಿ ಚಕ್ರಂ ತೋಯಾತ್ಮನೇ ತಥಾ ॥ ೩ ॥

ನಲವತ್ತೆರಡನೆಯ ಅಧ್ಯಾಯ.

ನರಸಿಂಹದ್ವಾದಶೀವ್ರತ.

೧ ದುರ್ವಾಸಮುನಿ—ತಿಳಿದವನು, ಫಾಲ್ಗುನಮಾಸದ ಶುಕ್ಲಪಕ್ಷದ ಏಕಾದಶಿಯದಿನ ಹಿಂದಿನ ಹಾಗೆಯೇ, ಉಪವಾಸಮಾಡಿ, ಶಾಸ್ತ್ರೋಕ್ತವಾಗಿ ಹರಿಯನ್ನು ಆರಾಧಿಸಬೇಕು.

೨-೪. ನರಸಿಂಹಾಯನಮಃ ಎಂದು ಹರಿಯ ಪಾದಗಳನ್ನೂ, ಗೋವಿಂದಾಯನಮಃ ಎಂದು ತೊಡೆಗಳನ್ನೂ, ವಿಶ್ವಭುಜೇ ನಮಃ ಎಂದು ನಡುವನ್ನೂ, ಅನಿರುದ್ಧಾಯನಮಃ ಎಂದು ಎದೆಯನ್ನೂ, ಶಿತಿಕಂಠಾಯನಮಃ ಎಂದು ಕತ್ತನ್ನೂ, ಪಿಂಗಕೇಶಾಯನಮಃ ಎಂದು ತಲೆಯನ್ನೂ, ಅಸುರಧ್ವಂಸನಾಯನಮಃ ಎಂದು ಚಕ್ರವನ್ನೂ, ತೋಯಾತ್ಮನೇ ನಮಃ ಎಂದು ಶಂಖವನ್ನೂ

ಶಂಖಮಿತ್ಯೇವ ಸಂಪೂಜ್ಯ ಗಂಧಪುಷ್ಪಫಲೈಸ್ತಥಾ |
ತದಗ್ರೇ ಘಟಮಾದಾಯ ಸಿತವಸ್ತ್ರಯುಗಾನ್ವಿತಂ || ೪ ||

ತಸ್ಯೋಪರಿ ನೃಸಿಂಹಂ ತು ಸೌವರ್ಣಂ ತಾಮ್ರಭಾಜನೇ |
ಯಥಾ ವಿಭವತಃ ಕೃತ್ವಾ ದಾರುವಂಶಮಯೇಪಿವಾ || ೫ ||

ರತ್ನಗರ್ಭಘಟೇ ಸ್ಥಾಪ್ಯ ತಂ ಸಂಪೂಜ್ಯ ಚ ಮಾನವಃ |
ದ್ವಾದಶ್ಯಾಂ ವೇದವಿದುಷೇ ಬ್ರಾಹ್ಮಣಾಯ ನಿವೇದಯೇತ್ || ೬ ||

ಏವಂ ಕೃತೇ ಫಲಂ ಪ್ರಾಪ್ತಂ ಯತ್ಪುರಾ ಪಾರ್ಥಿವೇನ ತು |
ತಸ್ಯಾಹಂ ಸಂಪ್ರವಕ್ಷ್ಯಾಮಿ ವತ್ಸನಾಮ್ನಾ ಮಹಾಮುನೇ || ೭ ||

ಆಸೀತ್ಕಿಂಪುರುಷೇ ವರ್ಷೇ ರಾಜಾ ಪರಮಧಾರ್ಮಿಕಃ |
ಭಾರತೇತಿಚ ವಿಖ್ಯಾತಸ್ತಸ್ಯ ವತ್ಸ ಸ್ಸುತೋಭವತ್ || ೮ ||

ಅರ್ಚಿಸಿ, ಗಂಧಪುಷ್ಪಫಲಾದಿಗಳನ್ನೂ ಅರ್ಪಿಸಿ, ಆ ದೇವನ ಮುಂದುಗಡೆಯಲ್ಲಿ ಬಿಳಿಯ ವಸ್ತ್ರಗಳೆರಡರಿಂದಲಂಕೃತವಾದ ಪೂರ್ಣಕಲಶವನ್ನು ಇಡಬೇಕು.

೫–೬. ರತ್ನಗರ್ಭವಾದ ಆ ಕಲಶದ ಮೇಲೆ, ಸುವರ್ಣದ ನರಸಿಂಹ ಮೂರ್ತಿಯನ್ನು ಅನುಕೂಲವಿದ್ದಂತೆ ಮಾಡಿಸಿ, ತಾಮ್ರದ ಪಾತ್ರೆಯಲ್ಲಾಗಲಿ, ಮರದ ಅಥವಾ ಬಿದಿರಿನ ಪಾತ್ರೆಯಲ್ಲಾಗಲಿ ಇರುವಂತೆ ಸ್ಥಾಪಿಸಿ, ಆದಿನ ಚೆನ್ನಾಗಿ ಪೂಜಿಸಿ, ದ್ವಾದಶಿಯದಿನ ವೇದವಿದ್ವಾಂಸನಾದ ಬ್ರಾಹ್ಮಣನಿಗೆ ಅರ್ಪಿಸಬೇಕು.

೭. ಹೀಗೆ ವ್ರತವನ್ನು ಮಾಡಿ ಹಿಂದೆ ವತ್ಸನೆಂಬ ದೊರೆಯೊಬ್ಬನು ಏನು ಫಲವನ್ನು ಪಡೆದನೋ ಅದನ್ನು ಹೇಳುವೆನು. ಕೇಳು.

೮. ಮಹಾಮುನಿಯೇ, ಕಿಂಪುರುಷವರ್ಷದಲ್ಲಿ ಭಾರತನೆಂದು ಪ್ರಸಿದ್ಧನೂ, ಪರಮಧಾರ್ಮಿಕನೂ ಆದ ದೊರೆಯಿದ್ದನು. ಅವನಿಗೆ ವತ್ಸನೆಂಬ ಮಗನುದಿಸಿದನು.

ಸ ಶತ್ರುಭಿರ್ಜಿತಃ ಸಂಖ್ಯೇ ಹೃತಕೋಶೋ ದ್ವಿಪಾದವಾನ್ ।
ವನಂ ಪ್ರಾಯಯಾತ್ಸಪತ್ನೀಕೋ ವಸಿಷ್ಠಸ್ಯಾಶ್ರಮೇऽವಸತ್ ॥ ೯ ॥

ಕಾಲೇನ ಮಹತಾ ಸೋऽಥ ವಸಿಷ್ಠೇನ ಮಹಾತ್ಮನಾ ।
ಕಿಂಕಾರ್ಯಮಿತಿ ಸಪ್ರೋಕ್ತೋ ವಸಸ್ಯಸ್ಮಿನ್ಮಹಾಶ್ರಮೇ ॥ ೧೦ ॥

॥ ರಾಜೋವಾಚ ॥

ಭಗವನ್ ಹೃತಕೋಶೋऽಹಂ ಹೃತರಾಜ್ಯೋऽಸಹಾಯವಾನ್
ಶತ್ರುಭಿರ್ಹೃತಸರ್ವಸ್ವೋ ಭವಂತಂ ಶರಣಂಗತಃ ॥
ಉಪದೇಶಪ್ರದಾನೇನ ಪ್ರಸಾದಂ ಕರ್ತುಮರ್ಹಸಿ ॥ ೧೧ ॥

॥ ದುರ್ವಾಸಾ ಉವಾಚ ॥

ಏವಮುಕ್ತೋ ವಸಿಷ್ಠಸ್ತು ತಸ್ಯೇಮಾಂ ದ್ವಾದಶೀಂ ಮುನೇ ।
ಆದಿದೇಶ ವಿಧಾನೇನ ಸೋऽಪಿ ಸರ್ವಮಥಾಕರೋತ್ ॥ ೧೨ ॥

---

೯. ಶತ್ರುಗಳು ವತ್ಸನನ್ನು ಯುದ್ಧದಲ್ಲಿ ಸೋಲಿಸಿ, ಅವನ ಕೋಶವನ್ನೂ ಅಪಹರಿಸಿಬಿಟ್ಟರು. ವತ್ಸನು ಕಾಲುನಡಿಗೆಯಿಂದ ಪತ್ನಿಯೊಡನೆ ವಸಿಷ್ಠಾಶ್ರಮಕ್ಕೆ ಹೋಗಿ ನಿಂತನು.

೧೦. ಬಹುಕಾಲದಮೇಲೆ, ಮಹಾತ್ಮನಾದ ವಸಿಷ್ಠನು ವತ್ಸನನ್ನು "ಏತಕ್ಕಾಗಿ ಈ ಮಹಾಶ್ರಮದಲ್ಲಿ ವಾಸಿಸುತ್ತೀಯೆ?" ಎಂದು ಕೇಳಿದನು.

೧೧. ದೊರೆ—"ಪೂಜ್ಯನೇ, ಹಗೆಗಳು ನನ್ನ ರಾಜ್ಯಕೋಶಗಳೇ ಮೊದಲಾದುವೆಲ್ಲವನ್ನೂ ಕಿತ್ತುಕೊಂಡರು. ಅಸಹಾಯನಾದ ನಾನು ನಿನ್ನನ್ನು ಮರೆಹೊಕ್ಕಿದ್ದೇನೆ. ನನಗೆ ಉಪದೇಶಮಾಡುವುದರಿಂದ ಅನುಗ್ರಹಿಸಬೇಕು" ಎಂದು ಹೇಳಿದನು.

೧೨. ದುರ್ವಾಸ–ಸತ್ಯತಪನೇ, ಹೀಗೆ ಹೇಳಿಕೊಂಡ ವಸಿಷ್ಠಮುನಿಯು ಅವನಿಗೆ ಈ ನರಸಿಂಹದ್ವಾದಶೀವ್ರತವನ್ನು ಉಪದೇಶಿಸಿದನು. ವತ್ಸರಾಜನೂ ಎಲ್ಲವನ್ನೂ ವಿಧಿಯಂತೆ ಮಾಡಿದನು.

ತಸ್ಯ ವ್ರತಾಂತೇ ಭಗವಾನ್ ನರಸಿಂಹಸ್ತುತೋಽಷ ಹ ।
ಚಕ್ರಂ ಪ್ರಾದಾಚ ಶತ್ರೂಣಾಂ ವಿಧ್ವಂಸನಕರಂ ಮೃಧೇ ॥ ೧೩ ॥

ತೇನಾಸ್ತ್ರೇಣ ಸ್ವಕಂ ರಾಜ್ಯಂ ಜಿತವಾನ್ಸ ನೃಪೋತ್ತಮಃ ॥ ೧೪ ॥

ರಾಜ್ಯೇ ಸ್ಥಿತ್ವಾಶ್ವಮೇಧಾನಾಂ ಸಹಸ್ರಮಕರೋತ್ಪ್ರಭುಃ ।
ಅಂತೇ ಚ ವಿಷ್ಣುಲೋಕಾಖ್ಯಂ ಪದಮಾಗಾಚ್ಚ ಸತ್ತಮಃ ॥ ೧೫ ॥

ಏಷಾ ಧನ್ಯಾ ಪಾಪಹರಾ ದ್ವಾದಶೀ ಭವತೋ ಮುನೇ ।
ಕಥಿತೇಮಾಂ ಪ್ರಸನ್ನೇನ ಶ್ರುತ್ವಾ ಕುರು ಯಥೇಪ್ಸಿತಂ ॥ ೧೬ ॥

ಇತಿ ಶ್ರೀ ವರಾಹಪುರಾಣೇ ಧರಣೀವ್ರತೇ ನರಸಿಂಹದ್ವಾದಶೀವ್ರತಂ ನಾಮ ದ್ವಾಚತ್ವಾರಿಂಶೋಽಧ್ಯಾಯಃ

---

೧೩. ವ್ರತದಕಡೆಯಲ್ಲಿ ಭಗವಂತನಾದ ನರಸಿಂಹನು ಸಂತಸಗೊಂಡು ಒಲಿದು, ಅವನಿಗೆ ಯುದ್ಧದಲ್ಲಿ ಶತ್ರುಗಳನ್ನು ಧ್ವಂಸಮಾಡುವ ಚಕ್ರವನ್ನು ಅನುಗ್ರಹಿಸಿದನು.

೧೪. ಆ ರಾಜನು ಆ ಚಕ್ರಾಸ್ತ್ರದಿಂದ ತನ್ನ ರಾಜ್ಯವನ್ನು ಮತ್ತೆ ಜಯಿಸಿದನು.

೧೫. ರಾಜ್ಯದಲ್ಲಿದ್ದುಕೊಂಡು, ಪ್ರಭುವಾದ ಆ ವತ್ಸನು ಸಾವಿರ ಅಶ್ವಮೇಧಯಜ್ಞಗಳನ್ನು ಮಾಡಿದನು. ಸತ್ಪುರುಷರಲ್ಲಿ ಮೇಲಾದ ಅವನು ಕೊನೆಗೆ ವಿಷ್ಣುಲೋಕವೆಂಬ ಸ್ಥಾನವನ್ನು ಪಡೆದನು.

೧೬. ಸತ್ಯತಪನೇ, ಪುಣ್ಯಪ್ರದವೂ, ಪಾಪಹರವೂ ಆದ ಈ ದ್ವಾದಶಿಯನ್ನು ನಿನಗೆ ಹೇಳಿದ್ದೇನೆ. ಶುದ್ಧವಾದ ಮನಸ್ಸಿನಿಂದ ಇದನ್ನು ಕೇಳಿ ನೀನು, ಹೇಗೆ ಇಷ್ಟವೋ ಹಾಗೆ ಮಾಡು.

ಅಧ್ಯಾಯದ ಸಾರಾಂಶ:—

ದುರ್ವಾಸಮುನಿಯು, ಭೂದೇವಿಯು ಆಚರಿಸಿದ್ದ ನರಸಿಂಹದ್ವಾದಶಿಯ ವ್ರತದ ಬಗೆಯನ್ನು ಸತ್ಯತಪನಿಗೆ ವಿವರಿಸಿದನು. ಆ ವ್ರತವನ್ನು ಮಾಡಿ, ಕಳೆದುಕೊಂಡ ರಾಜ್ಯವನ್ನೂ, ಕಡೆಯಲ್ಲಿ ವಿಷ್ಣುಲೋಕವನ್ನೂ ಪಡೆದ ವತ್ಸರಾಜನ ಕಥೆಯನ್ನೂ ಹೇಳಿದನು. ಎಂಬಲ್ಲಿಗೆ ಶ್ರೀವರಾಹಪುರಾಣದಲ್ಲಿ ನಲವತ್ತೆರಡನೆಯ ಅಧ್ಯಾಯ.

|| ಶ್ರೀಃ ||

–X–

ತ್ರಯಶ್ಚತ್ವಾರಿಂಶೋಽಧ್ಯಾಯಃ

ಅಥ ವಾಮನದ್ವಾದಶೀವ್ರತಂ

|| ದುರ್ವಾಸಾ ಉವಾಚ ||

ಏವಮೇವ ಮುನೇ ಮಾಸಿ ಚೈತ್ರೇ ಸಂಕಲ್ಪ್ಯ ದ್ವಾದಶೀಂ ।
ಉಪೋಷ್ಯಾರಾಧಯೇದ್ಭಕ್ತ್ಯಾ ದೇವದೇವಂ ಜನಾರ್ದನಂ || ೧ ||

ವಾಮನಾಯೇತಿ ಪಾದೌ ತು ವಿಷ್ಣವೇ ಕಟಿಮರ್ಚಯೇತ್ ।
ವಾಸುದೇವಾಯ ಜಠರಂ ಉರಸ್ಸಂಕರ್ಷಣಾಯ ಚ || ೨ ||

ಕಂಠಂ ವಿಶ್ವಭೃತೇ ಪೂಜ್ಯ ಶಿರೋ ವ್ಯೋಮರೂಪಿಣೇ ।
ಬಾಹೂ ವಿಶ್ವಜಿತೇ ಪೂಜ್ಯೌ ಸ್ವನಾಮ್ನಾ ಶಂಖಚಕ್ರಕೌ || ೩ ||

ನಲವತ್ತಮೂರನೆಯ ಆಧ್ಯಾಯ

ವಾಮನದ್ವಾದಶೀವ್ರತ.

೧. ದುರ್ವಾಸಮುನಿ—ಮುನಿಯೇ, ಹೀಗೆಯೇ ಚೈತ್ರಮಾಸದ ದ್ವಾದಶಿ ವ್ರತವನ್ನು ಮಾಡುವೆನೆಂದು ಸಂಕಲ್ಪಮಾಡಿ, ಏಕಾದಶಿಯದಿನ ಉಪವಾಸ ಮಾಡಿ, ಭಕ್ತಿಯಿಂದ ದೇವದೇವನಾದ ನಾರಾಯಣನನ್ನು ಆರಾಧಿಸಬೇಕು.

೨-೩. 'ವಾಮನಾಯನಮಃ' ಎಂದು ಅವನ ಪಾದಗಳನ್ನೂ, 'ವಿಷ್ಣವೇ ನಮಃ' ಎಂದು ಉದರವನ್ನೂ, 'ಸಂಕರ್ಷಣಾಯ ನಮಃ' ಎಂದು ಹೃದಯ ವನ್ನೂ, 'ವಿಶ್ವಭೃತೇ ನಮಃ' ಎಂದು ಕಂಠವನ್ನೂ, 'ವ್ಯೋಮರೂಪಿಣೇನಮಃ' ಎಂದು ಶಿರಸ್ಸನ್ನೂ, 'ವಿಶ್ವಜಿತೇ ನಮಃ' ಎಂದು ತೋಳುಗಳನ್ನೂ, ಅವುಗಳ ಹೆಸರಿನಿಂದಲೇ ಶಂಖಚಕ್ರಗಳನ್ನೂ ಕ್ರಮವಾಗಿ ಪೂಜಿಸಬೇಕು.

ಅನೇನ ವಿಧಿನಾಭ್ಯರ್ಚ್ಯ ದೇವದೇವಂ ಸನಾತನಂ ।
ಪ್ರಾಗ್ವದ್ರತ್ನೋದಕಂ ಕುಂಭಂ ಸಂಪೂತಂ ಪುರತೋನ್ಯಸೇತ್ ॥ ೪ ॥

ಪ್ರಾಗುಕ್ತಪಾತ್ರೇ ಸಂಸ್ಥಾಪ್ಯ ಕಾಂಚನಂ ವಾಮನಂ ಬುಧಃ ।
ಯಥಾಶಕ್ತ್ಯಾ ಕೃತಂ ಸರ್ವಂ ಸಿತಯಜ್ಞೋಪವೀತಿನಂ । ೫ ॥

ಕುಂಡಿಕಾಂ ಸ್ಥಾಪಯೇತ್ಪಾರ್ಶ್ವೇ ಛತ್ರಿಕಾಂ ಪಾದುಕೇ ತಥಾ ।
ಅಕ್ಷಮಾಲಾಂಚ ಸಂಸ್ಥಾಪ್ಯ ವೃಷಿಕಾಂ ಚ ವಿಶೇಷತಃ ॥ ೬ ॥

ಏತೈರುಪಸ್ಕರೈರ್ಯುಕ್ತಂ ಪ್ರಭಾತೇ ಬ್ರಾಹ್ಮಣಾಯ ಚ ।
ದಾಪಯೇತ್ಪ್ರೀಯತಾಂ ವಿಷ್ಣುಃ ಹ್ರಸ್ವರೂಪೀತ್ಯುದೀರಯೇತ್ ॥ ೭ ॥

---

೪. ಹೀಗೆ ಸನಾತನನಾದ ದೇವದೇವನನ್ನು ಆರಾಧಿಸಿ, ಹಿಂದಿನಂತೆ ರತ್ನಸಹಿತವೂ, ಪವಿತ್ರವೂ ಆದ ಪೂರ್ಣಕುಂಭವನ್ನು ಅವನಮುಂದೆ ಇಡಬೇಕು.

೫. ವಿದ್ವಾಂಸನಾದವನು ತನ್ನ ಶಕ್ತಿಗನುಸಾರವಾಗಿ ಮಾಡಿಸಿದ ಸುವರ್ಣದ ವಾಮನ ಮೂರ್ತಿಯನ್ನು ಬೆಳ್ಳಗಿರುವ ಯಜ್ಞೋಪವೀತವುಳ್ಳವನನ್ನಾಗಿ ಹಿಂದೆ ಹೇಳಿರುವ ಪಾತ್ರದಲ್ಲಿ ಬಿಜಮಾಡಿಸಿ, ಆ ಪಾತ್ರೆಯನ್ನು ಕಲಶದ ಮೇಲಿಡಬೇಕು.

೬. ವಾಮನಮೂರ್ತಿಯ ಪಕ್ಕದಲ್ಲಿ ಕಮಂಡಲುವನ್ನೂ, ಛತ್ರಿಯನ್ನೂ, ಪಾದುಕೆಗಳನ್ನೂ ಇಡಬೇಕು. ಜಪಮಾಲೆಯನ್ನು ದೇವನಿಗೆ ಧರಿಸಬೇಕು ಮುಖ್ಯವಾಗಿ ಕೃಷ್ಣಾಜಿನದ ಆಸನವನ್ನು ಇಡಬೇಕು.

೭. ಬೆಳಗಾಗುತ್ತಲೇ (ದ್ವಾದಶಿಯಲ್ಲಿ) ಈ ಸಾಮಗ್ರಿಗಳೆಲ್ಲವುಗಳೊಡನೆ ವಾಮನ ಮೂರ್ತಿಯನ್ನು ಬ್ರಾಹ್ಮಣನಿಗೆ ಅರ್ಪಿಸಬೇಕು. ಅರ್ಪಿಸಿ 'ವಾಮನ ರೂಪಿಯಾದ ವಿಷ್ಣುವು ತೃಪ್ತನಾಗಲಿ' ಎಂದು ಹೇಳಬೇಕು.

ಮಾಸನಾಮ್ನಾ ತು ಸಂಯುಕ್ತಂ ಪ್ರಾದುರ್ಭಾವಾಭಿಧಾನಕಂ ।
ಪ್ರೀಯತಾಮಿತಿ ಸರ್ವತ್ರ ವಿಧಿರೇಷ ಪ್ರಕೀರ್ತಿತಃ ॥ ೮ ॥

ಶ್ರೂಯತೇ ಚ ಪುರಾ ರಾಜಾ ಹರ್ಯಶ್ವಃ ಪೃಥಿವೀಪತಿಃ ।
ಅಪುತ್ರಸ್ಸ ತಪಸ್ತೇಪೇ ಪುತ್ರಮಿಚ್ಛಂಸ್ತಪೋಧನಃ ॥ ೯ ॥

ತಸ್ಯೈವಂ ಕುರ್ವತಸ್ತ್ವಿಷ್ಟಿಂ ಪುತ್ರಾರ್ಥೇ ಮುನಿಸತ್ತಮ ।
ಆಜಗಾಮ ಹರಿರ್ದೇವೋ ದ್ವಿಜರೂಪಂ ಸಮಾಶ್ರಿತಃ ॥ ೧೦ ॥

ಸ ಉವಾಚ ನೃಪಂ ರಾಜನ್ ಕಿಂ ತೇ ವ್ಯವಸಿತಂ ತ್ವಿತಿ ।
ಪುತ್ರಾರ್ಥಮಿತಿಸೋವಾಚ ತಂ ವಿಪ್ರಃ ಪ್ರತ್ಯುವಾಚ ಹ ॥ ೧೧ ॥

---

೮. ಮಾಸದ ಹೆಸರಿನಿಂದ ಕೂಡಿದವನೂ,(ಜನ್ಮ)ಹುಟ್ಟು ಹೆಸರಿನಿಂದ ಕೂಡಿದವನೂ ಎಂದರೆ ಚೈತ್ರಿಕವಾಮನನು ಪ್ರೀತನಾಗಲಿ ಎಂದು ಹೇಳಬೇಕೆಂದು ಈ ನಿಯಮವನ್ನು ಎಲ್ಲೆಲ್ಲಿಯೂ ಹೇಳಿದೆ.

೯. ಹಿಂದೆ ಹರ್ಯಶ್ವನೆಂಬ ದೊರೆಯಿದ್ದನೆಂದು ಕೇಳಿದ್ದೇವೆ. ಮಕ್ಕಳಿಲ್ಲದ ಅವನು ಪುತ್ರನನ್ನು ಬಯಸಿ, ತಪಸ್ಸನ್ನು ಮಾಡಿದನು.

೧೦. ಮುನಿಶ್ರೇಷ್ಠನೇ, ಪುತ್ರನನ್ನ ಬಯಸಿ ಹಾಗೆ ಇಷ್ಟಿ*ಯನ್ನು ಮಾಡುತ್ತಿದ್ದ ಅವನ ಬಳಿಗೆ ದೇವನಾದ ಹರಿಯು ಬ್ರಾಹ್ಮಣ ರೂಪವನ್ನು ಧರಿಸಿ ಬಂದನು.

೧೧-೧೨. ಅವನು ದೊರೆಯನ್ನು "ರಾಜನೇ ನಿನ್ನ ಪ್ರಯತ್ನವೇಕೆ ?" ಎಂದು ಕೇಳಿದನು. "ಮಗನನ್ನು ಪಡೆಯುವುದಕ್ಕೆ" ಎಂದು ಅವನು ಹೇಳಿದನು.

---

* ಇಷ್ಟಿ = ದೇವಪೂಜೆ, ದಾನ, ಯಜ್ಞವಿಶೇಷ.

ಇದಮೇವ ವಿಧಾನಂ ತು ಕುರುರಾಜನ್ಪ್ರಯತ್ನತಃ ।
ಏವಮುಕ್ತ್ವಾ ತು ರಾಜಾನಂ ಕ್ಷಣಾದಂತರ್ಹಿತಃ ಪ್ರಭುಃ ॥ ೧೨ ॥

ರಾಜಾಪಿ ತಂ ಚಕಾರಾಶು ಮಂತ್ರವಿತ್ತಂ ದ್ವಿಜಾತಯೇ ।
ದರಿದ್ರಾಯ ತಥಾಪ್ರಾದಾಜ್ಯೋತಿರ್ಗರ್ಭಾಯ ಧೀಮತೇ ॥ ೧೩ ॥

ಯಥಾದಿತೇರಪುತ್ರಾಯಾಃ ಸ್ವಯಂ ಪುತ್ರತ್ವಮಾಗತಃ ।
ಭಗವಂಸ್ತೇನ ಸತ್ಯೇನ ಮಮಾಪ್ಯಸ್ತು ಸುತೋ ವರಃ ॥ ೧೪ ॥

ಅನೇನ ವಿಧಿನೋಕ್ತೇನ ತಸ್ಯ ಪುತ್ರೋಽಭವನ್ಮುನೇ ।
ಉಗ್ರಾಶ್ವ ಇತಿ ವಿಖ್ಯಾತಃ ಚಕ್ರವರ್ತೀಮಹಾಬಲಃ ॥ ೧೫ ॥

ಅಪುತ್ರೋ ಲಭತೇ ಪುತ್ರಂ ಧನಾರ್ಥೀ ಲಭತೇ ಧನಂ ।
ಭ್ರಷ್ಟರಾಜ್ಯೋ ಲಭೇದ್ರಾಜ್ಯಂ ಮೃತೋ ವಿಷ್ಣುಪುರಂ ವ್ರಜೇತ್ ॥ ೧೬ ॥

ಬ್ರಾಹ್ಮಣನು ರಾಜನಿಗೆ "ದೊರೆಯೇ ಪ್ರಯತ್ನ ಪೂರ್ವಕವಾಗಿ ಈ (ವಾಮನ) ವ್ರತವನ್ನೇ ಮಾಡು" ಎಂದು ಹೇಳಿ, ಕ್ಷಣದೊಳಗೆ ಕಣ್ಮರೆಯಾದನು.

೧೩. ರಾಜನು ಮಂತ್ರೋಕ್ತವಾಗಿ ಆ ವ್ರತವನ್ನು ಕೂಡಲೇ ಮಾಡಿ, ಜ್ಯೋತಿರ್ಗರ್ಭನೂ, ವಿದ್ವಾಂಸನೂ, ದರಿದ್ರನೂ ಆದ ಬ್ರಾಹ್ಮಣನಿಗೆ ವಾಮನ ಮೂರ್ತಿಯೇ ಮೊದಲಾದುವನ್ನು ಒಪ್ಪಿಸಿದನು.

೧೪. "ಭಗವಂತನೇ, ಅಪುತ್ರವತಿಯಾದ ಅದಿತಿಗೆ ನೀನೇ ಪುತ್ರ(ವಾಮನ) ನಾಗಿ ಉದಿಸಿದೆ. ಸತ್ಯದಿಂದ ನನಗೂ ಉತ್ತಮನಾದ ಪುತ್ರನಾಗಲಿ". ಎಂದು ಪ್ರಾರ್ಥಿಸಿದನು.

೧೫ ಹೇಳಿದ ಈ ನಿಯಮದಿಂದ ಆ ರಾಜನಿಗೆ ಉಗ್ರಾಶ್ವನೆಂದು ಪ್ರಸಿದ್ಧನೂ, ಮಹಾಬಲನೂ, ಚಕ್ರವರ್ತಿಯೂ ಆದ ಪುತ್ರನುದಿಸಿದನು.

೧೬. ಈ ವಾಮನ ದ್ವಾದಶಿಯ ವ್ರತದಿಂದ ಮಗನಿಲ್ಲದವನು ಮಗನನ್ನೂ ಹಣವಿಲ್ಲದವನು ಹಣವನ್ನೂ, ರಾಜ್ಯವನ್ನು ಕಳೆದುಕೊಂಡ ದೊರೆಯು ರಾಜ್ಯವನ್ನೂ ಪಡೆಯುವನು. ಮೃತನಾದ ಬಳಿಕ ವಿಷ್ಣುಲೋಕವನ್ನೈದುವನು.

ಕ್ರೀಡಿತ್ವಾ ಸುಚಿರಂ ತತ್ರ ಇಹಮರ್ತ್ಯಮುಪಾಗತಃ ।
ಚಕ್ರವರ್ತೀ ಭವೇದ್ಧೀಮಾನ್ ಯಯಾತಿರಿವನಾಹುಷಃ ॥ ೧೭ ॥

ಇತಿ ಶ್ರೀವರಾಹಪುರಾಣೇ ಧರಣೀವ್ರತೇ ವಾಮನದ್ವಾದಶೀವ್ರತಂ
ನಾಮ ತ್ರಯಶ್ಚತ್ವಾರಿಂಶೋಽಧ್ಯಾಯಃ

---

೧೭. ಅಲ್ಲಿ ಬಹುಕಾಲ ವಿಹರಿಸಿ, ಮತ್ತೆ ಇಹಲೋಕಕ್ಕೆ ಬಂದು ನಹುಷ ಪುತ್ರನಾದ ಯಯಾತಿಯಂತೆ ಬುದ್ಧಿವಂತನೂ ಚಕ್ರವರ್ತಿಯೂ ಆಗುವನು.

ಅಧ್ಯಾಯದ ಸಾರಾಂಶ:—

ದುರ್ವಾಸ ಋಷಿಯು ಸತ್ಯತಪನಿಗೆ ವಾಮನ ದ್ವಾದಶೀವ್ರತದ ವಿಚಾರವನ್ನು ಹೇಳುತ್ತಾ, ಆ ವ್ರತವನ್ನು ಮಾಡಿ ಪುತ್ರನನ್ನು ಪಡೆದ ಹರ್ಯಶ್ವನೆಂಬರಾಜನ ವಿಚಾರವನ್ನು ಹೇಳಿ, ಅವನ ಮಗನು ಉಗ್ರಾಶ್ವನೆಂಬ ಪ್ರಖ್ಯಾತ ನಾದ ಚಕ್ರವರ್ತಿಯಾಗಿದ್ದನೆಂದು ಹೇಳಿದನು. ಇಲ್ಲಿಗೆ ಶ್ರೀ ವರಾಹಪುರಾಣ ದಲ್ಲಿ ನಲವತ್ತಮೂರನೆಯ ಅಧ್ಯಾಯ.

॥ ಶ್ರೀಃ ॥

-X-

ಚತುಶ್ಚತ್ವಾರಿಂಶೋಽಧ್ಯಾಯಃ

ಅಥ ಜಾಮದಗ್ನ್ಯದ್ವಾದಶೀವ್ರತಂ

॥ ದುರ್ವಾಸಾ ಉವಾಚ ॥

ವೈಶಾಖೇಪ್ಯೇವಮೇವಂತು ಸಂಕಲ್ಪ್ಯ ವಿಧಿನಾ ನರಃ ।
ತದ್ವತ್ಸ್ನಾನಂ ಮೃದಾಕೃತ್ವಾ ತತೋ ದೇವಾಲಯಂ ವ್ರಜೇತ್ ॥ ೧ ॥

ತತ್ರಾರಾಧ್ಯ ಹರಿಂ ಭಕ್ತ್ಯಾ ಏಭಿರ್ಮಂತ್ರೈರ್ವಿಚಕ್ಷಣಃ ।
ಜಾಮದಗ್ನ್ಯಾಯ ಪಾದೌತು ಚೋದರಂ ಸರ್ವಧಾರಿಣೇ ॥ ೨ ॥

ಮಧುಸೂದನಾಯೇತಿ ಕಟಿಮೂರೂ ಶ್ರೀವತ್ಸಧಾರಿಣೇ ।
ಕ್ಷರಾಂತಕಾಯೇತಿ ಭುಜೌ ಶಿತಿಕಂಠಾಯ ಕೂರ್ಚಕಂ ॥ ೩ ॥

ನಲವತ್ತನಾಲ್ಕನೆಯ ಅಧ್ಯಾಯ.

ಪರಶುರಾಮದ್ವಾದಶೀವ್ರತ.

೧. ದುರ್ವಾಸಮುನಿ—ವೈಶಾಖಮಾಸದ ಶುಕ್ಲಪಕ್ಷದ ದಶಮಿಯಲ್ಲಿಯೂ ವ್ರತಮಾಡುವವನು ವಿಧಿಯಂತೆ ಸಂಕಲ್ಪವನ್ನು ಮಾಡಿ, ಮತ್ಸ್ಯದ್ವಾದಶಿವ್ರತದಲ್ಲಿ ಹೇಳಿರುವಂತೆ ಏಕಾದಶಿಯದಿನ ಮೃತ್ತಿಕೆಯನ್ನು ಹಚ್ಚಿಸಿಕೊಂಡು ಸ್ನಾನಮಾಡಿ, ಬಳಿಕ ದೇವಗೃಹಕ್ಕೆ ಹೋಗಬೇಕು.

೨-೪. ಅಲ್ಲಿ ವಿದ್ವಾಂಸನಾದ ವ್ರತಿಯು ಭಕ್ತಿಯಿಂದ ಹರಿಯನ್ನು ಆರಾಧಿಸಿ ಈ ಮಂತ್ರಗಳಿಂದ ಎಂದರೆ, 'ಜಾಮದಗ್ನ್ಯಾಯನಮಃ' ಎಂದು ಸ್ವಾಮಿಯ ಪಾದಗಳನ್ನೂ, 'ಸರ್ವಧಾರಣೇನಮಃ' ಎಂದು ಉದರವನ್ನೂ, 'ಮಧೂಸೂದನಾಯನಮಃ' ಎಂದು ನಡುವನ್ನೂ, 'ಶ್ರೀವತ್ಸಧಾರಣೇ ನಮಃ' ಎಂದು ತೊಡೆಗಳನ್ನೂ, 'ಕ್ಷರಾಂತಕಾಯನಮಃ' ಎಂದು ತೋಳು ಗಳನ್ನೂ, 'ಶಿತಿಕಂಠಾಯನಮಃ' ಎಂದು ಹುಬ್ಬುಗಳಮಧ್ಯವನ್ನೂ ಅವುಗಳ

ಸ್ವನಾಮ್ನಾ ಶಂಖಚಕ್ರೌತು ಶಿರೋ ಬ್ರಹ್ಮಾಂಡಧಾರಿಣೇ ।
ಏವಮಭ್ಯರ್ಚ್ಯ ಮೇಧಾವೀ ಪ್ರಾಗ್ವತ್ತಸ್ಯಾಗ್ರತೋ ಘಟಂ ॥ ೪ ॥

ವಿನ್ಯಸೇತ್ ಸ್ಥಾಪಿತಂ ತದ್ವದ್ವಸ್ತ್ರಯುಗ್ಮಂ ವಿಶೇಷತಃ ।
ವೈಣವೇನತು ಪಾತ್ರೇಣ ತಸ್ಮಿಂಸ್ತು ಸ್ಥಾಪಯೇದ್ಧರಿಂ ॥ ೫ ॥

ಜಾಮದಗ್ನ್ಯೇನ ರೂಪೇಣ ಕೃತ್ವಾ ಸೌವರ್ಣಮಗ್ರತಃ ।
ದಕ್ಷಿಣೇ ಪರಶುಂ ಹಸ್ತೇ ತಸ್ಯ ದೇವಸ್ಯ ಕಾರಯೇತ್ ॥ ೬ ॥

ಅರ್ಘಗಂಧೈಸ್ತು ಸಂಪೂಜ್ಯ ಪುಷ್ಪೈರ್ನಾನಾವಿಧೈಸ್ತಥಾ ।
ತತಸ್ತಸ್ಯಾಗ್ರತಃ ಕೃತ್ವಾ ಜಾಗರಂ ಭಕ್ತಿಭಾವಿತಃ ॥ ೭ ॥

ಪ್ರಭಾತೇ ವಿಮಲೇ ಸೂರ್ಯೇ ಬ್ರಾಹ್ಮಣಾಯ ನಿವೇದಯೇತ್ ।
ಏವಂ ನಿಯಮಯುಕ್ತಸ್ಯ ತತ್ಫಲಂ ತು ನಿಬೋಧ ಮೇ ॥ ೮ ॥

ಹೆಸರಿನಿಂದಲೇ ಶಂಖಚಕ್ರಗಳನ್ನೂ, 'ಬ್ರಹ್ಮಾಂಡಧಾರಿಣೇನಮಃ' ಎಂದು ತಲೆಯನ್ನೂ ಅರ್ಚಿಸಿ, ಹಿಂದಿನಂತೆ ದೇವನೆದುರಿಗೆ ಪೂರ್ಣಕಲಶವನ್ನು ಸ್ಥಾಪಿಸಬೇಕು.

೫-೬. ಆ ಕಲಶದಮೇಲೆ ಬಿದಿರಿನಪಾತ್ರೆಯಲ್ಲಿ ಸುವರ್ಣದಿಂದ ಪರಶುರಾಮಮೂರ್ತಿಯನ್ನು ಮಾಡಿಸಿ, ಸ್ಥಾಪಿಸಿ ಶುದ್ಧವಸ್ತ್ರಗಳೆರಡನ್ನು ಧರಿಸಬೇಕು. ಆ ದೇವನ ಬಲಗೈಯಲ್ಲಿ ಪರಶು(ಗಂಡುಗೊಡಲಿ)ಇರುವಂತೆ ಮಾಡಿಸಿರಬೇಕು.

೭. ಅರ್ಘ್ಯಪಾದ್ಯಾದಿಗಳಿಂದಲೂ, ಬಗೆಬಗೆಯ ಹೂಗಳಿಂದಲೂ, ಗಂಧಾದಿಗಳಿಂದಲೂ ಚೆನ್ನಾಗಿ ಪೂಜಿಸಿ, ಅವನೆದಿರುಗಡೆಯಲ್ಲಿ ಭಕ್ತಿಯಿಂದ ಧ್ಯಾನಿಸುತ್ತಾ ಜಾಗರಣೆಯನ್ನು ಮಾಡಬೇಕು.

೮. ಆ ರಾತ್ರಿ ಕಳೆದು ಸೂರ್ಯೋದಯವಾಗಲಾಗಿ ಹಿಂದಿನಂತೆ ಬ್ರಾಹ್ಮಣನಿಗೆ ಎಲ್ಲವನ್ನೂ ಅರ್ಪಿಸಬೇಕು. ಹೀಗೆ ವ್ರತವನ್ನು ಮಾಡಿದವನಿಗೆ ಆಗುವ ಫಲವನ್ನು ಹೇಳುವೆನು. ಕೇಳು.

ಆಸೀದ್ರಾಜಾಮಹಾಭಾಗೋ ವೀರಸೇನೋ ಮಹಾಬಲಃ ।
ಅಪುತ್ರಸ್ಸ ಪುರಾ ತೀವ್ರಂ ತಪಸ್ತೇಪೇ ಮಹಾಮನಾಃ ॥ ೯ ॥

ಚರತಸ್ತು ತಪೋ ಘೋರಂ ಯಾಜ್ಞವಲ್ಕ್ಯೋ ಮಹಾಮುನಿಃ ।
ಆ ಜಗಾಮ ಮಹಾಮಯೋಗೀ ತಂ ದ್ರಷ್ಟುಂ ನಾತಿದೂರತಃ ॥ ೧೦ ॥

ತಮಾಯಾಂತಮಥೋದೃಷ್ಟ್ವಾ ಋಷಿಂ ಪರಮವರ್ಚಸಂ ।
ಕೃತಾಂಜಲಿಪುಟೋ ಭೂತ್ವಾ ರಾಜಾಭ್ಯುತ್ಥಾನ ಮಾಕರೋತ್ ॥ ೧೧ ॥

ಸ ಪೂಜಿತೋ ಮುನಿಃ ಪ್ರಾಹ ಕಿಮರ್ಥಂ ಕ್ರಿಯತೇ ತಪಃ ।
ರಾಜನ್ಕಥಯ ಧರ್ಮಜ್ಞ ಕಿಂ ಕಾರ್ಯಂ ತೇ ವಿವಕ್ಷಿತಂ ॥ ೧೨ ॥

॥ ರಾಜೋವಾಚ ॥

ಅಪುತ್ರೋಽಹಂ ಮಹಾಭಾಗ ನಾಸ್ತಿಮೇ ಪುತ್ರಸಂತತಿಃ ।
ತೇನೇದಂ ತಪ ಆಸ್ಥಾಯ ಕ್ಷಯಿಷ್ಯೇ ಸ್ವತನುಂ ದ್ವಿಜ ॥ ೧೩ ॥

---

೯. ಹಿಂದೆ ಅತಿಬಲಶಾಲಿಯೂ, ಭಾಗ್ಯವಂತನೂ, ಆದ ವೀರಸೇನನೆಂಬ ದೊರೆಯಿದ್ದನು. ಬಲು ಒಳ್ಳೆಯ ಮನಸ್ಸುಳ್ಳ ಅವನು ಮಕ್ಕಳಿಲ್ಲದುದರಿಂದ ಕಠಿಣವಾದ ತಪಸ್ಸನ್ನು ಮಾಡುತ್ತಿದ್ದನು.

೧೦-೧೧. ಆಗ ಅವನನ್ನು ನೋಡಲು ಯಾಜ್ಞವಲ್ಕ್ಯಮಹಾಮುನಿಯು ಅಲ್ಲಿಗೆ ಬಂದನು. ಸ್ವಲ್ಪದೂರದಲ್ಲಿ ಬರುತ್ತಿದ್ದ ಪರಮತೇಜಸ್ವಿಯಾದ ಅವನನ್ನು ಕಂಡು ವೀರಸೇನನು ಕೈಮುಗಿದುಕೊಂಡು, ಎದಿರುಗೊಂಡಿದ್ದನು.

೧೨. ಪೂಜಿತನಾದ ಆ ಮುನಿಯು "ಧರ್ಮಜ್ಞನಾದ ರಾಜನೇ, ಏಕೆ ತಪಸ್ಸನ್ನು ಮಾಡುತ್ತೀಯೆ ? ನಿನಗಿಷ್ಟವಾದ ಕಾರ್ಯವೇನು "? ಎಂದು ಕೇಳಿದನು.

೧೩. ದೊರೆಯು—"ಮಹಾಭಾಗನೇ, ನನಗೆ ಪುತ್ರ ಸಂತಾನವಿಲ್ಲ. ಆದುದರಿಂದ ತಪಸ್ಸನ್ನು ಮಾಡಿ ದೇಹವನ್ನು ಕ್ಷಯಿಸುವೆನು" ಎಂದು ಹೇಳಿದನು.

॥ ಯಾಜ್ಞವಲ್ಕ್ಯ ಉವಾಚ ॥
ಅಲಂ ತೇ ತಪಸಾನೇನ ಮಹಾಕ್ಲೇಶೇನ ಪಾರ್ಥಿವ ।
ಅಲ್ಪಾಯಾಸೇನ ತೇ ಪುತ್ರೋ ಭವಿಷ್ಯತಿ ನ ಸಂಶಯಃ ॥ ೧೪ ॥

॥ ರಾಜೋವಾಚ ॥
ಕಥಂ ಮೇ ಭವಿತಾಪುತ್ರಃ ಸ್ವಲ್ಪಾಯಾಸೇನ ವೈ ದ್ವಿಜ ।
ಏತನ್ಮೇ ಕಥಯ ಪ್ರೀತ್ಯಾ ಭಗವನ್ ಪ್ರಣತಸ್ಯ ವೈ ॥ ೧೫ ॥

॥ ದುರ್ವಾಸಾ ಉವಾಚ ॥
ಏವಮುಕ್ತೋ ಮುನಿಸ್ತೇನ ಪಾರ್ಥಿವೇನ ಯಶಸ್ವಿನಾ ।
ಆಚಖ್ಯೌ ದ್ವಾದಶೀಂ ಚೇಮಾಂ ವೈಶಾಖೇ ಸಿತಪಕ್ಷಜಾಂ ॥ ೧೬ ॥

ಸ ಹಿ ರಾಜಾ ವಿಧಾನೇನ ಪುತ್ರಕಾಮೋ ವಿಶೇಷತಃ ।
ಉಪೋಷ್ಯ ಲಬ್ಧವಾನ್ಪುತ್ರಂ ನಲಂ ಪರಮಧಾರ್ಮಿಕಂ ॥
ಯೋದ್ಯಾಪಿ ಕೀರ್ತ್ಯತೇ ಲೋಕೇ ಪುಣ್ಯಶ್ಲೋಕೋ ನರೋತ್ತಮಃ ॥ ೧೭ ॥

---

೧೪. ಯಾಜ್ಞವಲ್ಕ್ಯನು—"ದೊರೆಯೇ, ಬಹುಕ್ಲೇಶದ ಈ ತಪವು ಸಾಕು. ಅಲ್ಪಾಯಾಸದಿಂದಲೇ ನಿನಗೆ ಮಗನು ಜನಿಸುವನು. ಸಂಶಯವಿಲ್ಲ" ಎಂದನು.

೧೫. ರಾಜನು—"ಪೂಜ್ಯನಾದ ಬ್ರಾಹ್ಮಣನೇ, ಸ್ವಲ್ಪ ಶ್ರಮದಿಂದಲೇ ಹೇಗೆ ನನಗೆ ಪುತ್ರನುದಿಸುವನು ? ನಮಸ್ಕರಿಸುವ ನನಗೆ ಪ್ರೀತಿಯಿಂದ ಇದನ್ನು ಹೇಳು" ಎಂದನು.

೧೬. ದುರ್ವಾಸಮುನಿ—ಕೀರ್ತಿವಂತನಾದ ವೀರಸೇನರಾಜನು ಹೀಗೆ ಕೇಳಲು ಯಾಜ್ಞವಲ್ಕ್ಯಮುನಿಯು ವೈಶಾಖ ಶುಕ್ಲಪಕ್ಷದ ಈ ದ್ವಾದಶಿಯ (ನ್ನು) ವ್ರತವನ್ನು ಉಪದೇಶಿಸಿದನು.

೧೭. ಪುತ್ರನನ್ನು ಪಡೆಯಬೇಕೆಂಬ ಹೆಚ್ಚಾದ ಆಸೆಯುಳ್ಳ ಆ ರಾಜನು ಉಪವಾಸವ್ರತವನ್ನು ಮಾಡಿ, ಪರಮಧಾರ್ಮಿಕನೂ, ಪುಣ್ಯಶ್ಲೋಕನೆಂದೂ ನರೋತ್ತಮನೆಂದೂ ಈಗಲೂ ಹೊಗಳಿಸಿಕೊಳ್ಳುವನೂ ಆದ ನಳನೆಂಬ ಪುತ್ರನನ್ನು ಪಡೆದನು.

ಪ್ರಾಸಂಗಿಕಂ ಫಲಂ ಹ್ಯೇತದ್ವ್ರತಸ್ಯಾಸ್ಯ ಮಹಾಮುನೇ ॥ ೧೮ ॥

ಸುಪುತ್ರೋ ಜಾಯತೇ ತಸ್ಯ ವಿದ್ಯಾಶ್ರೀಃ ಕಾಂತಿರುತ್ತಮಾ ।
ಇಹ ಜನ್ಮನಿ ಕಿಂ ಚಿತ್ರಂ ಪರಲೋಕೇ ಶೃಣುಷ್ವ ಮೇ ॥ ೧೯ ॥

ಕಲ್ಪಮೇಕಂ ಬ್ರಹ್ಮಲೋಕ ಉಷಿತ್ವಾಪ್ಸರಸಾಂ ಗಣೈಃ ।
ಕ್ರೀಡಂತಿ ತೇ ಪುನಃ ಸೃಷ್ಟೌ ಜಾಯಂತೇ ಚಕ್ರವರ್ತಿನಃ ॥ ೨೦

ತ್ರಿಂಶತ್ಕಲ್ಪಸಹಸ್ರಾಣಿ ಜೀವಂತೇ ನಾತ್ರ ಸಂಶಯಃ ॥ ೨೧

ಇತಿ ಶ್ರೀವರಾಹಪುರಾಣೇ ದ್ವಾದಶೀಮಾಹಾತ್ಮ್ಯೇ ಜಾಮದಗ್ನ್ಯ
ದ್ವಾದಶೀವ್ರತಂ ನಾಮ ಚತುಶ್ಚತ್ವಾರಿಂಶೋಽಧ್ಯಾಯಃ

---

೧೮. ಮಹಾಮುನಿಯೇ, ಈ ವ್ರತಕ್ಕೆ ಇದು ಅಮುಖ್ಯವಾದ ಫಲ (ಇದೇ ಮುಖ್ಯಫಲವಲ್ಲ)

೧೯. ವ್ರತಿಗೆ ಈ ಜನ್ಮದಲ್ಲಿ ಸುಪುತ್ರನುದಿಸುವನು. ಅವನು ಕೀರ್ತಿವಂತನೂ, ಶ್ರೀಮಂತನೂ, ವಿದ್ಯಾವಂತನೂ ಆಗುವನೆಂಬುದರಲ್ಲಿ ಆಶ್ಚರ್ಯವೇನು? ಪರಲೋಕದಲ್ಲಾಗುವುದನ್ನು ಕೇಳು.

೨೦-೨೧. ಈ ವ್ರತವನ್ನು ಮಾಡುವವರು ಒಂದು ಕಲ್ಪಕಾಲ ಬ್ರಹ್ಮಲೋಕದಲ್ಲಿದ್ದು ಅಪ್ಸರಸ್ತ್ರೀಯರ ಸಮೂಹಗಳೊಡನೆ ವಿಹರಿಸುವರು. ತಿರುಗಿ, ಸೃಷ್ಟಿಯಲ್ಲಿ ಚಕ್ರವರ್ತಿಗಳಾಗಿ ಹುಟ್ಟಿ, ಮೂವತ್ತುಸಾವಿರಕಲ್ಪಕಾಲ ಜೀವಿಸುವರು. ಇದರಲ್ಲಿ ಸಂದೇಹವಿಲ್ಲ.

ಅಧ್ಯಾಯದ ಸಾರಾಂಶ:—

ದುರ್ವಾಸಮುನಿಯು ಸತ್ಯತಪನಿಗೆ—ಪರುಶುರಾಮದ್ವಾದಶೀವ್ರತಕ್ರಮವನ್ನೂ, ಮಹಿಮೆಯನ್ನೂ ಹೇಳುತ್ತ, ಆ ವ್ರತದಿಂದ ವೀರಸೇನನೆಂಬ ಮಹಾರಾಜನು ನಳಚಕ್ರವರ್ತಿಯೆಂದು ಪ್ರಸಿದ್ಧನಾಗಿರುವ ಪುತ್ರನನ್ನು ಪಡೆದನು. ಎಂದು ಹೇಳಿದನು. ಇಲ್ಲಿಗೆ ಶ್ರೀವರಾಹ ಪುರಾಣದಲ್ಲಿ ನಲವತ್ತನಾಲ್ಕನೆಯ ಅಧ್ಯಾಯ.

|| ಶ್ರೀಃ ||

–X–

ಪಂಚಚತ್ವಾರಿಂಶೋಽಧ್ಯಾಯಃ

ಅಥ ಶ್ರೀರಾಮದ್ವಾದಶೀವ್ರತಂ

|| ದುರ್ವಾಸಾ ಉವಾಚ ||

ಜ್ಯೇಷ್ಠಮಾಸೇಪ್ಯೇವಮೇವ ಸಂಕಲ್ಪ್ಯ ವಿಧಿನಾ ನರಃ ।
ಅರ್ಚಯೇತ್ಪರಮಂ ದೇವಂ ಪುಷ್ಪೈರ್ನಾನಾವಿಧೈಶ್ಶುಭೈಃ || ೧ ||

ನಮೋ ರಾಮಾಭಿರಾಮಾಯ ಪಾದೌ ಪೂರ್ವಂ ಸಮರ್ಚಯೇತ್ || ೨ ||

ತ್ರಿವಿಕ್ರಮಾಯೇತಿ ಕಟಿಂ ಧೃತವಿಶ್ವಾಯ ಚೋದರಂ ।
ಉರಸ್ಸಂವತ್ಸರಾಯೇತಿ ಕಂಠಂ ಸಂವರ್ತಕಾಯ ಚ ||
ಸರ್ವಾಸ್ತ್ರಧಾರಿಣೇ ಬಾಹೂ ಸ್ವನಾಮ್ನಾಬ್ಜರಥಾಂಗಕೌ || ೩ ||

ನಲವತ್ತೈದನೆಯ ಅಧ್ಯಾಯ

ಶ್ರೀರಾಮದ್ವಾದಶೀ ವ್ರತ

೧. ದುರ್ವಾಸಋಷಿ—ವ್ರತಮಾಡುವವನು, ಜ್ಯೇಷ್ಠಮಾಸದಲ್ಲಿ ಹೀಗೆಯೇ ಸಂಕಲ್ಪಮಾಡಿ, ಪರಮದೇವ ಶ್ರೀರಾಮನನ್ನು ಬಗೆಬಗೆಯ ಶುಭಪುಷ್ಪಾದಿಗಳಿಂದ ವಿಧಿಯಂತೆ ಪೂಜಿಸಬೇಕು.

೨. ರಾಮಾಭಿರಾಮಾಯ ನಮಃ ಎಂದು ದೇವನ ಪಾದಗಳನ್ನು ಪೂಜಿಸಬೇಕು.

೩-೫. ಅನಂತರ ತ್ರಿವಿಕ್ರಮಾಯ ನಮಃ ಎಂದು ನಡುವನ್ನೂ, ಧೃತ ವಿಶ್ವಾಯ ನಮಃ ಎಂದು ಉದರವನ್ನೂ, ಸಂವತ್ಸರಾಯ ನಮಃ ಎಂದು ಎದೆ ಯನ್ನೂ ಸಂವರ್ತಕಾಯ ನಮಃ ಎಂದು ಕಂಠವನ್ನೂ, ಸರ್ವಾಸ್ತ್ರಧಾರಿಣೇ ನಮಃ

ಸಹಸ್ರಶಿರಸೇಭ್ಯರ್ಚ್ಯ ಶಿರಸ್ತಸ್ಯ ಮಹಾತ್ಮನಃ ।
ಏವಮಭ್ಯರ್ಚ್ಯ ವಿಧಿವತ್ ಪ್ರಾಗ್ವತ್ಕುಂಭಂತು ವಿನ್ಯಸೇತ್ ॥ ೪ ॥

ಪ್ರಾಗ್ವದ್ವಸ್ತ್ರೇಣ ಸಂಛನ್ನಂ ಸೌವರ್ಣೌ ರಾಮಲಕ್ಷ್ಮಣೌ
ಅರ್ಚಯಿತ್ವಾ ವಿಧಾನೇನ ಪ್ರಭಾತೇ ಬ್ರಾಹ್ಮಣಾಯ ತೌ ॥
ದಾತವ್ಯೌ ಮನಸಾ ಕಾಮಮೀಹತಾ ಪುರುಷೇಣ ತು ॥ ೫ ॥

ಅಪುತ್ರೇಣ ಪುರಾ ಪೃಷ್ಟೋ ರಾಜ್ಞಾ ದಶರಥೇನ ಚ ॥ ೬ ॥

ಪುತ್ರಕಾಮಪರಃ ಪಶ್ಚಾದ್ವಸಿಷ್ಠಃ ಪರಮಾರ್ಚಿತಃ ।
ಇದಮೇವ ವಿಧಾನಂ ತು ಕಥಯಾಮಾಸ ಸ ದ್ವಿಜಃ ॥ ೭ ॥

ಪ್ರಾಗ್ರಹಸ್ಯಂ ವಿದಿತ್ವಾ ತು ಸ ರಾಜಾ ಕೃತವಾನಿದಂ ॥ ೮ ॥

ಎಂದು ತೋಳುಗಳನ್ನೂ, ಶಂಖಾಯನಮಃ ಚಕ್ರಾಯನಮಃ ಎಂದು ಶಂಖಚಕ್ರಗಳನ್ನೂ, ಸಹಸ್ರಶಿರಸೇ ನಮಃ ಎಂದು ಆ ಮಹಾತ್ಮನ ಶಿರಸ್ಸನ್ನೂ ಅರ್ಚಿಸಿ, ವಿಧಿಪೂರ್ವಕವಾಗಿ, ಹಿಂದಿನಂತೆ ವಸ್ತ್ರದಿಂದಲಂಕೃತವಾದ ಕುಂಭವನ್ನು ಸ್ಥಾಪಿಸಬೇಕು. ಚಿನ್ನದಿಂದ ಮಾಡಿಸಿದ ರಾಮಲಕ್ಷ್ಮಣರ ಮೂರ್ತಿಗಳನ್ನು ಹಿಂದಿನಂತೆ ಪೂಜಿಸಿ, ಇಷ್ಟಾರ್ಥವನ್ನು ಬಯಸುವವನು, ದ್ವಾದಶಿಯದಿನ ಬೆಳಗ್ಗೆ ಆ ಮೂರ್ತಿಗಳನ್ನು ಬ್ರಾಹ್ಮಣನಿಗೆ ಅರ್ಪಿಸಬೇಕು.

೬-೭. ಪೂರ್ವದಲ್ಲಿ ಗಂಡುಮಕ್ಕಳಿಲ್ಲದ ದಶರಥ ರಾಜನು ವಸಿಷ್ಠ ಋಷಿಯನ್ನು ಚೆನ್ನಾಗಿ ಪೂಜಿಸಿ, ಕೇಳಲು, ರಾಜನಿಗೆ ಮಕ್ಕಳಾಗಬೇಕೆಂಬುದರಲ್ಲಿ ಆಸಕ್ತಿಯುಳ್ಳ ಆ ಮುನಿಯು ಇದೇ ವಿಧಾನವನ್ನು ಹೇಳಿದನು.

೮. ರಹಸ್ಯವನ್ನರಿತ ಆ ದಶರಥರಾಜನು ಮೊದಲು ಈ ವ್ರತವನ್ನು ಮಾಡಿದನು.

ತಸ್ಯ ಪುತ್ರಃ ಸ್ವಯಂ ಜಜ್ಞೇ ರಾಮನಾಮಾ ಮಹಾಬಲೀ ।
ಚತುರ್ಧಾ ಸೋಽವ್ಯಯೋ ವಿಷ್ಣುಃ ಪರಿತುಷ್ಟೋ ಮಹಾಮುನೇ ॥
ಏತದೈಹಿಕಮಾಖ್ಯಾನಂ ಪಾರತ್ರಿಕಮಥೋ ಶೃಣು ॥ ೯ ॥

ತಾವದ್ಭೋಗಾನ್ಭುಂಜತೇ ಸ್ವರ್ಗಲೋಕೇ ।
ಯಾವದಿಂದ್ರೋ ದೇವಸಂಘಾಶ್ಚ ಸರ್ವೇ
ಅತೀತಕಾಲೇ ಪುನರೇತ್ಯ ಮರ್ತ್ಯಂ
ಭವೇತ್ಸರಾಜಾ ಶತಯಜ್ಞ ಯಾಜೀ ॥ ೧೦ ॥

ನಿಷ್ಕಾಮ ಏವಂ ವ್ರತಮಸ್ಯ ಕೃತ್ವಾ ।
ನಶ್ಯಂತಿ ಪಾಪಾನಿ ಚ ತಸ್ಯ ಪುಂಸಃ ॥
ಪ್ರಾಪ್ನೋತಿ ನಿರ್ವಾಣಮಲಂ ಚ ಶಾಶ್ವತಂ ॥ ೧೧ ॥

ಇತಿ ಶ್ರೀವರಾಹಪುರಾಣೇ ಶ್ರೀರಾಮದ್ವಾದಶೀವ್ರತಂ ನಾಮ
ಪಂಚಚತ್ವಾರಿಂಶೋಽಧ್ಯಾಯಃ

---

೯. ನಾಶರಹಿತನಾದ ಆ ವಿಷ್ಣುವು ಪರಿತುಷ್ಟನಾಗಿ, ತಾನೇ ನಾಲ್ಕು ಅಂಶಗಳಿಂದ ಆ ದಶರಥನಿಗೆ ಮಹಾಬಲಶಾಲಿಯಾಗಿ ರಾಮನೆಂಬ ಹೆಸರಿನಿಂದ ಪುತ್ರನಾಗಿ ಜನಿಸಿದನು. ಮುನಿಯೇ ಇದು ಇಹಲೋಕದ ಕಥೆ. ಇನ್ನು ಪರಲೋಕದ್ದನ್ನು ಕೇಳು.

೧೦. ಈ ವ್ರತವನ್ನು ಮಾಡಿದವನು, ಇಂದ್ರನೂ ದೇವತೆಗಳ ಗುಂಪುಗಳೆಲ್ಲವೂ ಇರುವವರೆಗೂ ಸ್ವರ್ಗಲೋಕದಲ್ಲಿ ಸುಖಗಳನ್ನು ಅನುಭವಿಸುತ್ತಾನೆ. ಅಲ್ಲಿಯ ಕಾಲವು ಕಳೆಯಲು ಮತ್ತೆ ಭೂಮಿಗೆ ಬಂದು ರಾಜನಾಗಿ ನೂರುಯಜ್ಞಗಳನ್ನು ಮಾಡುವನು.

೧೧. ಯಾವ ಆಸೆಯೂ ಇಲ್ಲದೆ ಈ ವ್ರತವನ್ನು ಮಾಡುವವನ ಪಾಪವೆಲ್ಲವೂ ನಾಶವಾಗುವುದು. ಅವನು ಸಮರ್ಥನಾಗಿ ಶಾಶ್ವತವಾದ ಲೋಕವನ್ನು ಪಡೆಯುವನು.

ಅಧ್ಯಾಯದ ಸಾರಾಂಶ :—

ದುರ್ವಾಸಮುನಿಯು ಸತ್ಯತಪನಿಗೆ ಶ್ರೀರಾಮದ್ವಾದಶೀವ್ರತಕ್ರಮವನ್ನು ಹೇಳಿ, ಆ ವ್ರತದಿಂದಲೇ ದಶರಥ ಮಹಾರಾಜನು ಶ್ರೀರಾಮಾದಿಗಳಾದ ಪುತ್ರರನ್ನು ಪಡೆದನೆಂದೂ, ಅದರಿಂದ ಮೋಕ್ಷವೂ ಲಭಿಸುವುದೆಂದೂ ಹೇಳಿದನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನಲವತ್ತೈದನೆಯ ಅಧ್ಯಾಯ.

॥ ಶ್ರೀಃ ॥

-x-

ಷಟ್ಚತ್ವಾರಿಂಶೋಽಧ್ಯಾಯಃ

ಅಥ ಶ್ರೀಕೃಷ್ಣದ್ವಾದಶೀವ್ರತಂ

॥ ದುರ್ವಾಸಾ ಉವಾಚ ॥

ಆಷಾಢೇಷ್ಯೇವಮೇವಸ್ಯಾತ್ಸಂಕಲ್ಪ್ಯ ವಿಧಿನಾ ನರಃ ।
ಚಕ್ರಪಾಣಯೇತಿ ಭುಜೌ ಕಂಠಂ ಭೂಪತಯೇ ತಥಾ ॥ ೧ ॥

ಸ್ವನಾಮ್ನಾ ಶಂಖಚಕ್ರೌ ತು ಪುರುಷಾಯೇತಿ ವೈ ಶಿರಃ ।
ಏವಮಭ್ಯರ್ಚ್ಯ ಮೇಧಾವೀ ಪ್ರಾಗ್ವತ್ತಸ್ಯಾಗ್ರತೋ ಘಟಂ ॥ ೨ ॥

ವಿನ್ಯಸ್ಯ ವಸ್ತ್ರಸಂಯುಕ್ತಂ ತಸ್ಯೋಪರಿ ತತೋ ನ್ಯಸೇತ್ ।
ಕಾಂಚನಂ ವಾಸುದೇವಂ ತು ಚತುರ್ವ್ಯೂಹಂ ಸನಾತನಂ ॥ ೩ ।

ನಲವತ್ತಾರನೆಯ ಅಧ್ಯಾಯ

ಶ್ರೀಕೃಷ್ಣದ್ವಾದಶೀ ವ್ರತ

೧-೩. ದುರ್ವಾಸಮುನಿ—ವ್ರತಮಾಡುವ ಬುದ್ಧಿವಂತನು, ಆಷಾಢ ಮಾಸದ ಶುಕ್ಲಪಕ್ಷ ದಶಮಿಯಲ್ಲಿಯೂ ಹಿಂದೆ ಹೇಳಿರುವಂತೆಯೇ(ವಿಧ್ಯುಕ್ತವಾಗಿ) ಸಂಕಲ್ಪಮಾಡಿ, ಏಕಾದಶಿಯದಿನ, ಚಕ್ರಪಾಣಯೇ ನಮಃ ಎಂದು ಸ್ವಾಮಿಯ ತೋಳುಗಳನ್ನೂ, ಭೂಪತಯೇ ನಮಃ ಎಂದು ಕಂಠವನ್ನೂ, ಶಂಖಾಯನಮಃ ಎಂದು ಶಂಖವನ್ನೂ, ಚಕ್ರಾಯನಮಃ ಎಂದು ಚಕ್ರವನ್ನೂ, ಪುರುಷಾಯ ನಮಃ ಎಂದು ಶಿರಸ್ಸನ್ನೂ ಅರ್ಚಿಸಿ, ಹಿಂದಿನಂತೆ ದೇವನೆದುರಿಗೆ ವಸ್ತ್ರಯುತವಾದ ಪೂರ್ಣ ಕಲಶವನ್ನು ಸ್ಥಾಪಿಸಬೇಕು. ಸನಾತನನೂ, ಚತುರ್ವ್ಯೂಹನೂ ಆದ ಶ್ರೀಕೃಷ್ಣನ ಸುವರ್ಣಮಯವಾದ ಮೂರ್ತಿಯನ್ನು ಕಲಶದಮೇಲೆ ಬಿಜಮಾಡಿಸಬೇಕು.

ತಮಭ್ಯರ್ಚ್ಯ ವಿಧಾನೇನ ಗಂಧಪುಷ್ಪಾದಿಭಿಃ ಕ್ರಮಾತ್ ।
ಪ್ರಾಗ್ವತ್ತೈಃ ಬ್ರಾಹ್ಮಣೇ ದದ್ಯಾದ್ವೇದವಾದರತೇ ತಥಾ ॥ ೪ ॥

ಏನಂ ನಿಯಮಯುಕ್ತಸ್ಯ ಯತ್ಪುಣ್ಯಂ ತಚ್ಛೃಣುಷ್ವಮೇ ॥ ೫ ॥

ವಸುದೇವೋಭವಚ್ಛ್ರೇಷ್ಠೋ ಯದುವಂಶವಿವರ್ಧನಃ ।
ದೇವಕೀ ತಸ್ಯ ಭಾರ್ಯಾ ತು ಸಮಾನವ್ರತಧಾರಿಣೀ ॥
ಸಾ ತ್ವಪುತ್ರಾಭವತ್ಸಾಧ್ವೀ ಪತಿಧರ್ಮಪರಾಯಣಾ ॥ ೬ ॥

ತಸ್ಯ ಕಾಲೇನಮಹತಾ ನಾರದೋಭ್ಯಗಮದ್ಗೃಹಂ ।
ಪೂಜಿತೋ ವಸುದೇವೇನ ಭಕ್ತ್ಯಾಸೌ ವಾಕ್ಯಮಬ್ರವೀತ್ ॥ ೭ ॥

ವಸುದೇವ ಶೃಣುಷ್ವೇದಂ ದೇವಕಾರ್ಯಂ ಮಮಾನಘ ।
ಶ್ರುತ್ವೈತಾಂ ಚ ಕಥಾಂ ಶೀಘ್ರಮಾಗತೋಸ್ಮಿ ತವಾಂತಿಕಂ ॥ ೮ ॥

---

೪. ವಿಧ್ಯುಕ್ತವಾಗಿ ಆ ದೇವನನ್ನು ಗಂಧಪುಷ್ಪಾದಿಗಳಿಂದ ಕ್ರಮವಾಗಿ ಪೂಜಿಸಿ, ದ್ವಾದಶಿಯದಿನ, ಹಿಂದಿನಂತೆ ವೇದಾಧ್ಯಯನಾಸಕ್ತನಾದ ಬ್ರಾಹ್ಮಣನಿಗೆ ಒಪ್ಪಿಸಬೇಕು.

೫. ಹೀಗೆ ಈ ವ್ರತವನ್ನು ಮಾಡುವವನಿಗೆ ಏನುಪುಣ್ಯವೆಂಬುದನ್ನು ನಾನು ತಿಳಿಸುತ್ತೇನೆ.

೬. ಶ್ರೇಷ್ಠನೂ, ಯದುವಂಶವರ್ಧನನೂ ಆದ ವಸುದೇವನಿದ್ದನಷ್ಟೆ, ಅವನ ಪತ್ನಿಯಾದ ದೇವಕಿಯು ಪತಿಯಂತೆಯೇ ವ್ರತನಿಷ್ಠಳು. ಪತಿವ್ರತೆಯೂ ಧರ್ಮಪರಾಯಣೆಯೂ ಆದ ಅವಳು ಅಪುತ್ರವತಿಯಾಗಿದ್ದಳು.

೭. ಬಹುಕಾಲದಮೇಲೆ ನಾರದಮುನಿಯು ಆ ವಸುದೇವನ ಮನೆಗೆ ಬಂದನು. ವಸುದೇವನಿಂದ ಭಕ್ತಿಪೂರ್ವಕವಾಗಿ ಪೂಜಿತನಾದ ಆತನು ಮುಂದಿನ ಮಾತನ್ನು ಹೇಳಿದನು.

೮. "ಪಾಪರಹಿತನಾದ ವಸುದೇವನೇ, ನಾನು ಹೇಳುವ ದೇವತೆಗಳ ಈ ಕಾರ್ಯವನ್ನು ಕೇಳು. ಈ ಕಥೆಯನ್ನು ಕೇಳಿಯೇ ನಾನು ಬೇಗನೆ ನಿನ್ನ ಬಳಿಗೆ ಬಂದಿದ್ದೇನೆ.

ಪೃಥಿವೀ ದೇವಸಮಿತಿಂ ಮಯಾ ದೃಷ್ಟ್ವಾ ಯದೂತ್ತಮ ।
ಗತ್ವಾಚ ಜಲ್ಪತೀ ಭಾರಂ *ವೋಢುಂ ಶಕ್ತಾ ನ ದಾನವಾಃ ॥ ೯ ॥

ಪೀಡಯಂತಿ ಸಮೇತಾಮಾಂ ತಾನ್ ಹನಧ್ವಂ ಸುರೋತ್ತಮಾಃ ।
ಏವಮುಕ್ತಾ ಪೃಥಿವ್ಯಾ ತೇ ದೇವಾ ನಾರಾಯಣಂ ಗತಾಃ ॥ ೧೦ ॥

ಮನಸಾ ಧ್ಯಾತಮಾತ್ರ ಸ್ಸ ದೇವಃ ಪ್ರತ್ಯಕ್ಷತಾಂ ಯಯೌ ।
ಉವಾಚ ಸ ಸುರಶ್ರೇಷ್ಠಃ ಸ್ವಯಂ ಕಾರ್ಯಮಿದಂ ಸುರಾಃ ॥
ಸಾಧಯಾಮಿ ನ ಸಂದೇಹೋ ಮರ್ತ್ಯಂ ಗತ್ವಾ ಮನುಷ್ಯವತ್ ॥ ೧೧ ॥

ಕಿಂತ್ವಾಷಾಢೇ ಶುಕ್ಲಪಕ್ಷೇ ಯಾ ನಾರೀ ಸಹ ಭರ್ತೃಣಾ ।
ಉಪೋಷ್ಯತಿ ಮನುಷ್ಯೇಷು ತಸ್ಯಾ ಗರ್ಭೇ ಭವಾಮ್ಯಹಂ ॥ ೧೨ ॥

ಏವಮುಕ್ತ್ವಾ ಗತಾ ದೇವಾಃ ಸ್ವಯಂ ಚಾಹಮಿಹಾಗತಃ ।
ಉಪದಿಷ್ಟಂತು ಭವತಃ ಅಪುತ್ರಸ್ಯ ವಿಶೇಷತಃ ॥ ೧೩ ॥

೯-೧೦. ಯದೂತ್ತಮನೇ, ಭೂದೇವಿಯು ದೇವತೆಗಳ ಸಭೆಗೆಹೋಗಿ ಮಾತನಾಡುತ್ತಿದುದನ್ನು ನಾನು ನೋಡಿದ್ದೇನೆ- ಅವಳು "ದೇವತೆಗಳೇ, ನಾನು ಭಾರವನ್ನು ಹೊರಲಾರೆನು. ದುಷ್ಟರಾಕ್ಷಸರು ಒಟ್ಟಿಗೆ ಸೇರಿಕೊಂಡು ನನ್ನನ್ನು ಪೀಡಿಸುತ್ತಾರೆ. ಸುರೋತ್ತಮರೇ, ಅವರನ್ನು ಕೊಲ್ಲಿರಿ" ಎಂದು ಹೇಳಲಾಗಿ ಆ ದೇವತೆಗಳು ನಾರಾಯಣನ ಹತ್ತಿರಕ್ಕೆ ಹೋದರು.

೧೧-೧೨. ಅಲ್ಲಿ ಅವರು ಮನಸ್ಸಿನಿಂದ ಧ್ಯಾನಿಸಿದ ಮಾತ್ರಕ್ಕೇ ಆ ನಾರಾಯಣನು ಅವರಿಗೆ ಕಾಣಿಸಿಕೊಂಡನು. ಸುರೋತ್ತಮನಾದ ಆತನು "ದೇವತೆಗಳೇ, ಈ ಕಾರ್ಯವನ್ನು, ನಾನೇ ಮನುಷ್ಯನಂತೆ ಭೂಲೋಕಕ್ಕೆ ಹೋಗಿ ಸಾಧಿಸುತ್ತೇನೆ. ಸಂಶಯವಿಲ್ಲ. ಆದರೆ ಆಷಾಢಮಾಸದ ಶುಕ್ಲಪಕ್ಷದ ಏಕಾದಶಿಯಲ್ಲಿ ಮನುಷ್ಯಸ್ತ್ರೀಯರಲ್ಲಿ ಯಾರು ಪತಿಯೊಡನೆ ಉಪವಾಸಮಾಡುವಳೋ ಅವಳ ಗರ್ಭದಲ್ಲಿ ನಾನು ಜನಿಸುವೆನು" ಎಂದು ಹೇಳಿದನು.

೧೩. ನಾರಾಯಣನಿಂದ ಹೀಗೆ ಹೇಳಿಸಿಕೊಂಡ ದೇವತೆಗಳು ಅವರೆಡೆಗೆ ಹೊರಟು ಹೋದರು. ನಾನಾದರೋ ಉದ್ದೇಶಪೂರ್ವಕವಾಗಿ ಇಲ್ಲಿಗೆ ಬಂದೆನು ಪುತ್ರರಿಲ್ಲದಿರುವ ನಿನಗೆ ಅತ್ಯವಶ್ಯಕವೆಂದು ಉಪದೇಶಿಸಿದ್ದೇನೆ.

---

* **ನೋಶಕ್ತಾ ಊಹಿತುಂ ಸುರಾಃ**

ಏತಾಂ ಚ ದ್ವಾದಶೀಂ ಕೃತ್ವಾ ವಸುದೇವೋ ಮಹಾಯಶಾಃ ।
ಪುತ್ರಂ ಲೇಭೇ ಸ ಕೃಷ್ಣಾಖ್ಯಂ ಮಹತೀಂ ಚ ಶ್ರಿಯಂ ತಥಾ ॥ ೧೪ ॥

ಭುಕ್ತ್ವಾಪ್ರಾಜ್ಯಶ್ರಿಯಂ ಸೋಽಥ ಗತಿಂ ಪರಮಿಕಾಂ ಯಯೌ ।
ಏಷತೇ ವಿಧಿರುದ್ದಿಷ್ಟ ಆಷಾಢೇಮಾಸಿ ವೈ ಮುನೇ ॥ ೧೫ ॥

ಇತಿ ಶ್ರೀವರಾಹಪುರಾಣೇ ಶ್ರೀಕೃಷ್ಣದ್ವಾದಶೀವ್ರತಂ ನಾಮ
ಷಟ್ಚತ್ವಾರಿಂಶೋಽಧ್ಯಾಯಃ

---

೧೪. ಮಹಾಕೀರ್ತಿವಂತನಾದ ವಸುದೇವನು ನಾರದನ ಉಪದೇಶದಿಂದ ಶ್ರೀಕೃಷ್ಣದ್ವಾದಶೀ ವ್ರತವನ್ನು ಮಾಡಿ ಕೃಷ್ಣನೆಂದು ಹೆಸರುಳ್ಳ ಪುತ್ರನನ್ನೂ, ಹೆಚ್ಚಾದ ಐಶ್ವರ್ಯವನ್ನೂ ಪಡೆದನು.

೧೫. ವಸುದೇವನು ಬಹುವಾದ ಐಶ್ವರ್ಯವನ್ನು ಅನುಭವಿಸಿ, ಬಳಿಕ ಪರಮ ಪದವಿಯನ್ನು ಪಡೆದನು. ಸತ್ಯತಪಮುನಿಯೇ, ಈ ವ್ರತವು ನೀನು ಆಷಾಢಮಾಸದಲ್ಲಿ ಮಾಡಬೇಕಾದುದು.

ಅಧ್ಯಾಯದ ಸಾರಾಂಶ :—

ದುರ್ವಾಸಮುನಿಯು ಸತ್ಯತಪನಿಗೆ ಶ್ರೀಕೃಷ್ಣದ್ವಾದಶೀವ್ರತದ ವಿಚಾರವನ್ನು ಹೇಳಿ, ಆ ವ್ರತವನ್ನು ಯದುವಂಶದ ವಸುದೇವನು ಮಾಡಿ, ಶ್ರೀಕೃಷ್ಣನನ್ನು ಪುತ್ರನನಾಗಿ ಪಡೆದನು ಎಂದು ತಿಳಿಸಿದನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನಲವತ್ತಾರನೆಯ ಅಧ್ಯಾಯ.

॥ ಶ್ರೀಃ ॥

-x-

ಸಪ್ತಚತ್ವಾರಿಂಶೋಽಧ್ಯಾಯಃ

ಅಥ ಬುದ್ಧದ್ವಾದಶೀವ್ರತಮ್

॥ ದುರ್ವಾಸಾ ಉವಾಚ ॥

ಶ್ರಾವಣೇ ಮಾಸಿ ಶುಕ್ಲಾಯಾಮೇಕಾದಶ್ಯಾಂ ಚರೇದ್ವ್ರತಂ ।
ಅರ್ಚಯೇತ್ಪೂರ್ವವಿಧಿನಾ ಗಂಧಪುಷ್ಪೈರ್ಜನಾರ್ದನಂ ॥ ೧ ॥

ದಾಮೋದರಾಯ ಪಾದೌ ತು ಹೃಷೀಕೇಶಾಯ ವೈ ಕಟಿಂ ।
ಸನಾತನೇತಿ ಜಠರಮುರಃ ಶ್ರೀವತ್ಸಧಾರಿಣೇ । ॥ ೨ ॥

ಚಕ್ರಪಾಣಯೇತಿಭುಜೌ ಕಂಠಂ ಚ ಹರಯೇ ತಥಾ ।
ಮುಂಜಿಕೇಶಾಯೇತಿ ಶಿರೋ ಭದ್ರಾಯೇತಿ ಶಿಖಾಂ ತಥಾ ॥ ೩ ॥

ನಲವತ್ತೇಳನೆಯ ಅಧ್ಯಾಯ

ಬುದ್ಧದ್ವಾದಶೀವ್ರತ

೧. ದುರ್ವಾಸಋಷಿ—ಶ್ರಾವಣಮಾಸದಲ್ಲಿ ಶುಕ್ಲಪಕ್ಷದ ಏಕಾದಶಿಯಲ್ಲಿ ಈ ವ್ರತವನ್ನು ಮಾಡಬೇಕು. ಹಿಂದಿನ ನಿಯಮದಂತೆ ಜನಾರ್ದನನನ್ನು ಗಂಧ ಪುಷ್ಪಾದಿಗಳಿಂದ ಅರ್ಚಿಸಬೇಕು.

೨-೩. ದಾಮೋದರಾಯ ನಮಃ ಎಂದು ದೇವನ ಪಾದಗಳನ್ನೂ ಹೃಷೀಕೇಶಾಯ ನಮಃ ಎಂದು ನಡುವನ್ನೂ, ಸನಾತನಾಯ ನಮಃ ಎಂದು ಉದರವನ್ನೂ, ಶ್ರೀವತ್ಸಧಾರಿಣೇ ನಮಃ ಎಂದು ಹೃದಯವನ್ನೂ, ಚಕ್ರಪಾಣಯೇ ನಮಃ ಎಂದು ತೋಳುಗಳನ್ನೂ, ಹರಯೇನಮಃ ಎಂದು ಕೊರಳನ್ನೂ ಮುಂಜಿಕೇಶಾಯ ನಮಃ ಎಂದು ಶಿರಸ್ಸನ್ನೂ, ಭದ್ರಾಯನಮಃ ಎಂದು ಜುಟ್ಟನ್ನೂ ಅರ್ಚಿಸಬೇಕು.

ಏವಂ ಸಂಪೂಜ್ಯ ಸಂಸ್ಥಾಪ್ಯ ಕುಂಭಂ ಪೂರ್ವವದೇವತು ।
ಸಂವೇಷ್ಟ್ಯ ವಸ್ತ್ರಯುಗ್ಮೇನ ತಸ್ಯೋಪರಿ ತತೋನ್ಯಸೇತ್ ॥
ಕಾಂಚನಂ ದೇವದೇವಂ ತು ದಾಮೋದರಸನಾಮಕಂ ॥ ೪ ॥

ತಮಭ್ಯರ್ಚ್ಯ ವಿಧಾನೇನ ಗಂಧಪುಷ್ಪಾದಿಭಿಃ ಕ್ರಮಾತ್ ।
ಪ್ರಾಗ್ವತ್ತಂ ಬ್ರಾಹ್ಮಣೇ ದದ್ಯಾತ್ ವೇದವೇದಾಂಗಪಾರಗೇ ॥ ೫ ॥

ಏವಂ ನಿಯಮಯುಕ್ತಸ್ಯ ಪ್ರಭಾವಂ ತಚ್ಛೃಣುಷ್ವ ಮೇ ॥ ೬ ॥

ಏಷ ವೈ ವಿಧಿರುದ್ದಿಷ್ಟಃ ಶ್ರಾವಣೇ ಮಾಸಿ ವೈ ಮುನೇ ।
ಯತ್ತಸ್ಯಾಶ್ವಪ್ರಭಾವಂ ತಚ್ಛೃಣುಪಾಪಪ್ರಣಾಶನಂ ॥ ೭ ॥

ಪುರಾಕೃತಯುಗೇ ರಾಜಾ ನೃಗೋ ನಾಮ ಮಹಾಬಲಃ ।
ಬಭ್ರಾಮ ಸ ವನಂ ಘೋರಂ ಮೃಗಯಾಸಕ್ತಮಾನಸಃ ॥ ೮ ॥

---

೪. ಹೀಗೆ ಪೂಜಿಸಿ, ಸ್ವಾಮಿಯೆದುರಿಗೆ ಹಿಂದಿನಂತೆಯೇ ಒಂದು ಜತೆಯ ವಸ್ತ್ರದಿಂದ ಅಲಂಕೃತವಾದ ಕಲಶವನ್ನು ಸ್ಥಾಪಿಸಿ, ಅದರಮೇಲೆ, ದಾಮೋದರ ನೆಂಬ ಹೆಸರಿನ ದೇವದೇವನ ಸುವರ್ಣಮೂರ್ತಿಯನ್ನು ಬಿಜಮಾಡಿಸಬೇಕು.

೫. ಬಳಿಕ ಆ ದೇವನನ್ನು ಶಾಸ್ತ್ರೋಕ್ತವಾಗಿ ಗಂಧಪುಷ್ಪಗಳಿಂದ ಕ್ರಮವಾಗಿ ಪೂಜಿಸಿ, ಮೊದಲಿನಂತೆಯೇ ವೇದವೇದಾಂಗಪಾರಂಗತನಾದ, ಬ್ರಾಹ್ಮಣನಿಗೆ(ದ್ವಾದಶಿಯದಿನ)ಅರ್ಪಿಸಬೇಕು.

೬. ಹೀಗೆ ವ್ರತವನ್ನು ಮಾಡುವವನ ಮಹಿಮೆಯನ್ನು ನಾನು ಹೇಳುವೆನು ಕೇಳು.

೭. ಸತ್ಯತಪಮುನಿಯೇ, ಈ ವ್ರತವು ಶ್ರಾವಣಮಾಸದಲ್ಲಿ ಮಾಡತಕ್ಕದು, ಪಾಪವನ್ನು ನಿರ್ಮೂಲಮಾಡುವ ಇದರ ಪ್ರಭಾವನ್ನು ಕೇಳು.

೮. ಹಿಂದೆ ಕೃತಯುಗದಲ್ಲಿ ಮಹಾಬಲಶಾಲಿಯಾದ ನೃಗನೆಂಬ ದೊರೆಯಿದ್ದನು. ಒಂದುಸಾರಿ, ಬೇಟೆಯಲ್ಲಿ ಆಸಕ್ತಿಯುಳ್ಳ ಅವನು ಘೋರವಾದ ಅಡವಿಯಲ್ಲಿ ತಿರುಗುತ್ತಿದ್ದನು.

ಸ ಕದಾಚಿತ್ತುರಂಗೇಣ ಗತೋ ದೂರಂ ಮಹದ್ವನಂ ।
ವ್ಯಾಘ್ರಸಿಂಹಗಜಾಕೀರ್ಣಂ ದಸ್ಯುಸರ್ಪನಿಷೇವಿತಂ ॥ ೯ ॥

ಏಕಾಕೀ ತತ್ರ ರಾಜಾತು ಅಶ್ವಂ ಮುಚ್ಯ ತರೋರಧಃ ।
ಸ್ವಯಂ ಕುಶಮಥಾಸ್ತೀರ್ಯ ಸುಷ್ವಾಪ ದುಃಖಸಮನ್ವಿತಃ ॥ ೧೦ ॥

ತಾವತ್ತತ್ರೈವ ಲುಬ್ಧಾನಾಂ ಸಹಸ್ರಾಣಿ ಚತುರ್ದಶ ।
ಆಗತಾನಿ ಮೃಗಾನ್ ಹಂತುಂ ರಾತ್ರೌರಾಜ್ಞಃ ಸಮಂತತಃ ॥ ೧೧ ॥

ತತ್ರಾಪಶ್ಯನ್ ತತಃ ಸುಪ್ತಂ ಹೇಮರತ್ನವಿಭೂಷಿತಂ ।
ನೃಗಂ ರಾಜಾನಮತ್ಯುಗ್ರಂ ಶ್ರಿಯಾ ಪರಮಯಾ ಯುತಂ ॥ ೧೨ ॥

ತೇ ಗತ್ವಾತ್ವರಿತಂ ವ್ಯಾಧಾಃ ಸ್ವಭರ್ತ್ರೇ ತಂ ನ್ಯವೇದಯನ್ ॥ ೧೩ ॥

ಸೋಽಪಿ ರತ್ನಸುವರ್ಣಾರ್ಥಂ ರಾಜಾನಂ ಹಂತುಮುದ್ಯತಃ ।
ತುರಗಸ್ಯ ಚ ಹೇತೋಸ್ತು ನಿಸ್ತ್ರಿಂಶಾನ್ವನಚಾರಿಣಃ ।
ರಾಜಾನಂ ಸುಪ್ತಮಾಸಾದ್ಯ ನಿಗೃಹೀತುಂ ಪ್ರಚಕ್ರಮುಃ ॥ ೧೪ ॥

---

೯. ಆಗ ಅಕಸ್ಮಾತ್ತಾಗಿ ಅವನು ಕುದುರೆಯಮೇಲೆ, ಆನೆ ಹುಲಿ ಸಿಂಹ ಸರ್ಪಗಳಿಂದ ನಿಬಿಡವೂ, ಕಳ್ಳರ ನೆಲೆಯೂ ಆದ ದೂರದ ದೊಡ್ಡಕಾಡಿಗೆ ಹೋಗಿಬಿಟ್ಟನು.

೧೦. ಒಂಟಿಗನಾದ ಆ ದೊರೆಯು ಅತಿದುಃಖಿತನಾಗಿ ಕುದುರೆಯನ್ನು ಮರದಕೆಳಗೆ(ಕಟ್ಟಿ)ಬಿಟ್ಟು, ತಾನೂ ದರ್ಭೆಯ ಹುಲ್ಲನ್ನು ಹಾಸಿಕೊಂಡು, ಅಲ್ಲಿಯೇ ಮಲಗಿ ನಿದ್ದೆಹೋದನು.

೧೧. ಅಷ್ಟರಲ್ಲಿ ಹದಿನಾಲ್ಕು ಸಾವಿರಮಂದಿ ಬೇಡರು ರಾತ್ರಿಯಲ್ಲಿ ಮೃಗಗಳನ್ನು ಕೊಲ್ಲುವುದಕ್ಕಾಗಿ ಅಲ್ಲಿಗೇ ರಾಜನ ಸುತ್ತುಮುತ್ತಲೂ ಬಂದರು.

೧೨-೧೩. ಸುವರ್ಣರತ್ನಾಲಂಕೃತನೂ, ಅತಿಕಾಂತಿವಂತನೂ, ಭಯಂಕರನೂ ಆಗಿ, ನಿದ್ರಿಸುತ್ತಿರುವ ನೃಗರಾಜನನ್ನು ನೋಡಿದ ಆ ಬೇಡರು ಬೇಗನೆ ಹೋಗಿ ತಮ್ಮೊಡೆಯನಿಗೆ ತಿಳಿಸಿದರು

೧೪. ಅವನು, ಸ್ವರ್ಣರತ್ನಗಳಿಗಾಗಿಯೂ ಕುದುರೆಗಾಗಿಯೂ ದೊರೆಯನ್ನು ಕೊಲ್ಲಲು ಉದ್ಯುಕ್ತನಾದನು. ಬೇಡರು ನಿದ್ರಿಸುತ್ತಿರುವ ದೊರೆಯನ್ನು ಸಮೀಪಿಸಿ, ಕತ್ತಿಗಳನ್ನು ಕೈಗೆ ತೆಗೆದುಕೊಳ್ಳಲು ಆರಂಭಿಸಿದರು.

ತಾವದ್ರಾಜ್ಞಃ ಶರೀರಾತ್ತು ಶ್ವೇತಾಭರಣಭೂಷಿತಾ ।
ನಾರೀ ಕಾಚಿತ್ಸಮುತ್ತಸ್ಥೌ ಸ್ರಕ್ಚಂದನವಿಭೂಷಿತಾ ॥ ೧೫ ॥

ಉತ್ಥಾಯ ಚಕ್ರಮಾದಾಯ ತೇ ಮ್ಲೇಚ್ಛಾ ವಿನಿಪಾತಿತಾಃ ।
ದಸ್ಯೂನ್ನಿಹತ್ಯ ಸಾ ದೇವೀ ತಸ್ಯ ರಾಜ್ಞಸ್ತನುಂ ಪುನಃ ।
ಪ್ರವಿಶತ್ಯಾಶು ರಾಜಾಪಿ ಪ್ರತಿಬುದ್ಧಃ ಪ್ರದಿಷ್ಟವಾನ್ ॥ ೧೬ ॥

ಮ್ಲೇಚ್ಛಾಂಸ್ತು ನಿಹತಾನ್ ದೃಷ್ಟ್ವಾ ತಾಂ ಸ್ವಮೂರ್ತೌ ಲಯಂಗತಾಮ್ ।
ಅಶ್ವಮಾರುಹ್ಯ ಸ ಪುನರ್ವಾಮದೇವಾಶ್ರಮಂ ಯಯೌ ॥ ೧೭ ॥

ತತ್ರಾಪೃಚ್ಛದೃಷಿಂ ಭಕ್ತ್ಯಾ ಕಾಸ್ತ್ರೀ ಕೇ ತೇ ನಿಪಾತಿತಾಃ ।
ಏತತ್ಕಾರ್ಯಂ ಋಷೇ ಮಹ್ಯಂ ಪ್ರಸೀದ ಕಥಯಸ್ವನೋ ॥ ೧೮ ॥

---

೧೫. ಅಷ್ಟರಲ್ಲಿ ರಾಜನ ದೇಹದಿಂದ ಗಂಧಮಾಲ್ಯಾಭರಣಗಳಿಂದ ಲಂಕೃತಳಾದ ಬೆಳ್ಳಗಿರುವ ವನಿತೆಯೊಬ್ಬಳು ಎದ್ದುನಿಂತಳು.

೧೬. ಎದ್ದು, ಚಕ್ರವನ್ನು ತೆಗೆದುಕೊಂಡು, ಆ ಬೇಡರನ್ನು ಉರುಳಿಸಿಬಿಟ್ಟಳು, ಆ ಕಳ್ಳರನ್ನು ಕೊಂದು, ಆ ದೇವಿಯು ಮತ್ತೆ ರಾಜನ ದೇಹವನ್ನೇ ಬೇಗನೆ ಪ್ರವೇಶಿಸುತ್ತಿರುವಾಗ ಆತನೂ ಎಚ್ಚರಗೊಂಡು ನೋಡಿಬಿಟ್ಟನು.

೧೭. ಅವಳು ತನ್ನ ದೇಹದಲ್ಲಿ ಐಕ್ಯವಾದುದನ್ನೂ ಕಳ್ಳಬೇಡರೆಲ್ಲರೂ ಕೊಲೆಯಾಗಿರುವುದನ್ನೂ ನೋಡಿ, ಮತ್ತೆ ಕುದುರೆಯನ್ನೇರಿ ಆ ದೊರೆಯು ವಾಮದೇವಾಶ್ರಮಕ್ಕೆ ಹೋದನು.

೧೮. ಅಲ್ಲಿ ಆ ಋಷಿಯನ್ನು ಭಕ್ತಿಯಿಂದ ವಂದಿಸಿ, "ಆ ಸ್ತ್ರೀಯು ಯಾರು? ಉರುಳಿಹೋದ ಅವರಾರು? ಋಷಿಯೇ, ಈ ಕಾರ್ಯವನ್ನು ದಯೆಯಿಂದ ನನಗೆ ಹೇಳು" ಎಂದನು.

॥ ವಾಸುದೇವ ಉವಾಚ ॥

ತ್ವಮಾಸೀಚ್ಛೂದ್ರಜಾತೀಯಃ ಅನ್ಯಜನ್ಮನಿ ಪಾರ್ಥಿವ ।
ತತ್ರ ತ್ವಯಾ ಬ್ರಾಹ್ಮಣೇಭ್ಯಃ ಶ್ರುತಾ ಚೇಯಂ ಕೃತಾಪುರಾ ॥ ೧೯ ॥

ಶ್ರಾವಣಸ್ಯ ತು ಮಾಸಸ್ಯ ಶುಕ್ಲಪಕ್ಷೇಷು ದ್ವಾದಶೀ ॥ ೨೦ ॥

ಸಾವಿಧಾನಾತ್ತ್ವಯಾರಾಜನ್ ಭಕ್ತ್ಯಾ ಚ ಸಮುಪೋಷಿತಾ ।
ಉಪೋಷಿತಾಯಾಂ ತಸ್ಯಾಂ ತು ರಾಜ್ಯಂ ಲಬ್ಧಂ ತ್ವಯಾನಘ ॥ ೨೧ ॥

ಸರ್ವಾಪತ್ಸು ಚ ಸಾ ದೇವೀ ಭವಂತಂ ಪರಿರಕ್ಷತಿ ।
ಯಯಾ ವಿನಿಹತಾಃ ಕ್ರೂರಾ ಮ್ಲೇಚ್ಛಾಃ ಪಾಪಸಮನ್ವಿತಾಃ ॥ ೨೨ ॥

ಭವಾಂಶ್ಚ ರಕ್ಷಿತೋ ರಾಜನ್ ಶ್ರಾವಣದ್ವಾದಶೀತಿ ಸಾ ॥ ೨೩ ॥

೧೯–೨೦. ವಾಸುದೇವ—ದೊರೆಯೇ, ನೀನು ಬೇರೆಯ ಜನ್ಮದಲ್ಲಿ ಶೂದ್ರಜಾತಿಯವನಾಗಿದ್ದೆ. ಹಿಂದೆ ಆಗ ನೀನು ಬ್ರಾಹ್ಮಣರಿಂದ ಶ್ರಾವಣ ಮಾಸದ ಶುಕ್ಲಪಕ್ಷದ ದ್ವಾದಶಿಯ ವ್ರತವನ್ನು ಕೇಳಿ, ಮಾಡಿದೆ.

೨೧. ರಾಜನೇ, ವಿಧಿಪೂರ್ವಕವಾಗಿ ಭಕ್ತಿಯಿಂದ(ಏಕಾದಶಿಯಲ್ಲಿ) ಉಪವಾಸಮಾಡಿ ಈ ವ್ರತವನ್ನು ಆಗ ಮಾಡಿದುದರಿಂದಲೇ ನಿನಗೆ ರಾಜ್ಯವೂ ದೊರೆಯಿತು.

೨೨–೨೩. ಪಾಪಿಗಳೂ, ಕ್ರೂರಿಗಳೂ ಆದ ಆ ಬೇಡರನ್ನು ಕೊಂದ ಆ ದ್ವಾದಶೀ(ವ್ರತ)ದೇವಿಯು ಸರ್ವಾಪತ್ತುಗಳಲ್ಲಿಯೂ ನಿನ್ನನ್ನು ಕಾಪಾಡುವಳು. ಈಗಲೂ ಕಾಪಾಡಿದಳು.

ಏಕೈವ ಪಾತಿ ಚಾಪತ್ಸು ರಾಜ್ಯಮೇಕೈವ ಯಚ್ಛತಿ ।
ಕಿಂ ಪುನರ್ದ್ವಾದಶೈತಾಸ್ತು ಯಾಭ್ಯ ಐಂದ್ರಂಚ ಗಚ್ಛತಿ ॥ ೨೪ ॥

ಇತಿ ಶ್ರೀವರಾಹಪುರಾಣೇ ಧರಣೀವ್ರತೇ ಬುದ್ಧದ್ವಾದಶೀವ್ರತಂ ನಾಮ ಸಪ್ತಚತ್ವಾರಿಂಶೋಽಧ್ಯಾಯಃ

---

೨೪. ಶ್ರಾವಣದ್ವಾದಶಿಯೆಂಬುವಳು ಒಬ್ಬಳೇ ಕೇಡುಗಳಲ್ಲಿ ರಕ್ಷಿಸುವಳು. ಒಬ್ಬಳೇ ರಾಜ್ಯವನ್ನು ಕೊಡುವಳು. ಹೀಗಿರುವಾಗ ಇಂದ್ರಪದವಿಯನ್ನು ದೊರೆಯುವಂತೆ ಮಾಡುವ ಆ ಹನ್ನೆರಡು ದ್ವಾದಶಿಗಳೂ ಅನುಕೂಲವಾದರೆ ಹೇಳುವುದೇನಿದೆ !

ಅಧ್ಯಾಯದ ಸಾರಾಂಶ:—

ದುರ್ವಾಸಮುನಿಯು ಸತ್ಯತಪನಿಗೆ, ಭೂದೇವಿಯು ಮಾಡಿದ ವ್ರತಗಳಲ್ಲಿ ಒಂದಾದ ಬುದ್ಧದ್ವಾದಶೀವ್ರತದ ಕ್ರಮವನ್ನು ಹೇಳಿ, ಅದೇ ವ್ರತವನ್ನು ಜನ್ಮಾಂತರದಲ್ಲಿ ಮಾಡಿದುದರಿಂದ ರಾಜನಾಗಿ ಉದಿಸಿ, ರಾಜನಾಗಿರುವಾಗಲೂ ಮರಣವಿಪತ್ತಿನಿಂದ ಪಾರಾದ ನೃಗನೆಂಬ ಮಹಾರಾಜನ ವಿಚಾರವನ್ನೂ ಹೇಳಿದನು. ಇಲ್ಲಿಗೆ ಶ್ರೀವರಾಹ ಪುರಾಣದಲ್ಲಿ ನಲವತ್ತೇಳನೆಯ ಅಧ್ಯಾಯ.

॥ ಶ್ರೀಃ ॥

–X–

ಅಷ್ಟಚತ್ವಾರಿಂಶೋಽಧ್ಯಾಯಃ

ಅಥ ಕಲ್ಕಿದ್ವಾದಶೀವ್ರತಂ

॥ ದುರ್ವಾಸಾ ಉವಾಚ ॥

ತದ್ವದ್ಭಾದ್ರಪದಸ್ಯಾಪಿ ಯಾ ಶುಕ್ಲೈಕಾದಶೀ ಭವೇತ್ ।
ತಸ್ಯಾಂ ಸಂಕಲ್ಪ್ಯವಿಧಿನಾ ದೇವದೇವಂ ಸಮರ್ಚಯೇತ್ ॥ ೧ ॥

ನಮೋಽಸ್ತು ಕಲ್ಕಿನೇ ಪಾದೌ ಹೃಷೀಕೇಶಾಯ ವೈ ಕಟಿಂ ।
ಮ್ಲೇಚ್ಛವಿಧ್ವಂಸನಾಯೇತಿ ಜಗನ್ಮೂರ್ತೇಃ ತಥೋದರಂ ॥ ೨ ॥

ಶಿತಿಕಂಠಾಯ ಕಂಠಂ ತು ಖಡ್ಗಪಾಣೇ ತಥಾ ಭುಜೌ ।
ಚತುರ್ಭುಜಾಯೇತಿ ಹಸ್ತೌ ವಿಶ್ವಮೂರ್ತೇ ತಥಾ ಶಿರಃ ॥ ೩ ॥

ನಲವತ್ತೆಂಟನೆಯ ಅಧ್ಯಾಯ.

ಕಲ್ಕಿದ್ವಾದಶೀವ್ರತ.

೧. ದುರ್ವಾಸಮುನಿ—ಹಿಂದಿನ ವ್ರತದಂತೆಯೇ ಭಾದ್ರಪದ ಮಾಸದ ಶುಕ್ಲೈಕಾದಶಿಯಲ್ಲಿಯೂ, ಸಂಕಲ್ಪಮಾಡಿ ಶಾಸ್ತ್ರೋಕ್ತವಾಗಿ ದೇವದೇವನನ್ನು ಚೆನ್ನಾಗಿ ಪೂಜಿಸಬೇಕು.

೨-೩. 'ಕಲ್ಕಿನೇನಮಃ' ಎಂದು ದೇವನ ಪಾದಗಳನ್ನೂ, 'ಹೃಷೀಕೇಶಾಯನಮಃ' ಎಂದು ನಡುವನ್ನೂ, 'ಮ್ಲೇಚ್ಛವಿಧ್ವಂಸನಾಯನಮಃ' ಎಂದು ಆ ಜಗನ್ಮೂರ್ತಿಯ ಉದರವನ್ನೂ, 'ಶಿತಿಕಂಠಾಯನಮಃ' ಎಂದು ಕಂಠವನ್ನೂ, 'ಖಡ್ಗಪಾಣಯೇನಮಃ' ಎಂದು ತೋಳುಗಳನ್ನೂ, 'ಚತುರ್ಭುಜಾಯನಮಃ' ಎಂದು ಕೈಗಳನ್ನೂ, 'ವಿಶ್ವಮೂರ್ತಯೇ ನಮಃ' ಎಂದು ಶಿರಸ್ಸನ್ನೂ ಅರ್ಚಿಸಬೇಕು.

ಏವಮಭ್ಯರ್ಚ್ಯ ಮೇಧಾವೀ ಪ್ರಾಗ್ವತ್ತಸ್ಯಾಗ್ರತೋ ಘಟಂ ।
ವಿನ್ಯಸೇತ್ಕಲ್ಕಿನಂ ದೇವಂ ಸೌವರ್ಣಂ ತತ್ರಕಾರಯೇತ್ ॥ ೪ ॥

ಸಿತವಸ್ತ್ರೇಣಸಂಯುಕ್ತಂ ಗಂಧಪುಷ್ಪೋಪಶೋಭಿತಂ ॥
ಕೃತ್ವಾ ಪ್ರಭಾತೇ ವಿಪ್ರಾಯ ಪ್ರದೇಯಂ ಶಾಸ್ತ್ರವಿತ್ತಮೇ ॥ ೫ ॥

ಏವಂ ಕೃತೇ ಭವೇದ್ಯತ್ತು ತನ್ನಿಬೋಧ ಮಹಾಮುನೇ ॥ ೬ ॥

ಪೂರ್ವಂ ರಾಜಾ ವಿಶಾಲೋಭೂತ್ಕಾಶೀಪುರ್ಯಾಂ ಮಹಾಬಲಃ ।
ಗೋತ್ರಜೈರ್ಹೃತರಾಜ್ಯೋಸೌ ಗಂಧಮಾದನಮಾವಿಶತ್ ॥ ೭ ॥

ತಸ್ಯ ದ್ರೋಣ್ಯಾಂ ಮಹಾರಾಜಃ ಬದರೀಂ ಪ್ರಾಪಶೋಭನಾಂ ।
ಹತರಾಜ್ಯೋ ವಿಶೇಷೇಣ ಗತಶ್ರೀಕೋ ನರೋತ್ತಮಃ ॥ ೮ ॥

ಕದಾಚಿದಾಗತೌ ತತ್ರ ಪುರಾಣಾವೃಷಿಸತ್ತಮೌ ।
ನರನಾರಾಯಣೌ ದೇವೌ ಸರ್ವದೇವನಮಸ್ಕೃತೌ ॥ ೯ ॥

೪–೫. ತಿಳಿದವನು ಹೀಗೆ ಅರ್ಚಿಸಿ ಹಿಂದಿನಂತೆ, ಅವನೆದುರಿಗೆ ಕಲಶವನ್ನಿಟ್ಟು, ಅದರಮೇಲೆ ಸುವರ್ಣದ ಕಲ್ಕಿದೇವಮೂರ್ತಿಯನ್ನೂ ವಸ್ತ್ರಾಲಂಕೃತನನ್ನಾಗಿ ಬಿಜಮಾಡಿಸಬೇಕು. ಗಂಧಪುಷ್ಪಾದಿಗಳಿಂದ ಆರಾಧಿಸಿ, ದ್ವಾದಶಿಯದಿನ ಬೆಳಗ್ಗೆ ಶಾಸ್ತ್ರಜ್ಞರಲ್ಲಿ ಉತ್ತಮನಾದ ಬ್ರಾಹ್ಮಣನಿಗೆ ಒಪ್ಪಿಸಬೇಕು.

೬. ಮಹಾಮುನಿಯೇ, ಹೀಗೆ ಮಾಡಿದರೆ ಏನಾಗುವುದೆಂಬುದನ್ನು ಕೇಳು.

೭. ಪೂರ್ವದಲ್ಲಿ ಕಾಶೀಪಟ್ಟಣದಲ್ಲಿ ಮಹಾಬಲವುಳ್ಳವನಾದ ವಿಶಾಲನೆಂಬ ರಾಜನಿದ್ದನು. ದಾಯಾದಿಗಳು ಅವನ ರಾಜ್ಯವನ್ನು ಕಿತ್ತುಕೊಳ್ಳಲಾಗಿ ಅವನು ಗಂಧಮಾದನವೆಂಬ ಪರ್ವತಕ್ಕೆ ಹೊರಟು ಹೋದನು.

೮. ರಾಜ್ಯವನ್ನೂ, ಐಶ್ವರ್ಯವನ್ನೂ ಕಳೆದುಕೊಂಡ ಆ ನರೋತ್ತಮನು ಕಂದಿದವನಾಗಿ, ಆ ಪರ್ವತದ ಕಣಿವೆಯಲ್ಲಿದ್ದ ಮಂಗಳಕರವೂ, ಸುಂದರವೂ ಆದ ಬದರಿಕಾಶ್ರಮವನ್ನು ಸೇರಿದನು.

೯. ಒಂದಾನೊಂದು ಕಾಲದಲ್ಲಿ, ಸರ್ವದೇವತೆಗಳಿಂದಲೂ ನಮಸ್ಕೃತರೂ ಪ್ರಾಚೀನರೂ, ಋಷಿವರ್ಯರೂ ಆದ ನರನಾರಾಯಣರು ಅಲ್ಲಿಗೆ ಬಂದರು.

ತೌ ದೃಷ್ಟ್ವಾ ತತ್ರರಾಜಾನಂ ಪೂರ್ವಾಗತಮರಿಂದಮೌ ।
ಧ್ಯಾಯಂತಂ ಪರಮಂ ಬ್ರಹ್ಮ ವಿಷ್ಣ್ವಾಖ್ಯಂ ಪರಮಂ ಪದಂ ॥ ೧೦ ॥

ತೌಪ್ರೀತಾವೂಚತುಶ್ಚೈವಂ ರಾಜಾನಂ ಕ್ಷೀಣಕಲ್ಮಷಂ ।
ವರಂ ವೃಣೀಷ್ವ ರಾಜೇಂದ್ರ ವರದೌ ಸ್ವಸ್ತ್ವಾಗತೌ ॥ ೧೧ ॥

॥ ರಾಜೋವಾಚ ॥

ಭವಂತೌ ಕೌ ನಜಾನಾಮಿ ಕಸ್ಯ ಗೃಹ್ಣಾಮ್ಯಹಂ ವರಂ ।
ಆರಾಧಯಾಮಿ ಯಂ ತಸ್ಮಾದ್ವರಮಿಚ್ಛಾಮಿ ಶೋಭನಂ ॥ ೧೨ ॥

ಏವಮುಕ್ತೌತು ತೌ ಪ್ರೋಚುಃ ಕಮಾರಾಧಯಸೇ ಪ್ರಭೋ ।
ಕಂ ವಾ ವರಂ ವೃಣೀಷೇ ತ್ವಂ ಕಥಯಸ್ವ ಕುತೂಹಲಾತ್ ॥ ೧೩ ॥

ಏವಮುಕ್ತಸ್ತತೋ ರಾಜಾ ವಿಷ್ಣುಮಾರಾಧಯಾಮ್ಯಹಂ ।
ಕಥಯಿತ್ವಾ ಸ್ಥಿತಸ್ತೂಷ್ಣೀಂ ತತಸ್ತಾವೂಚತುಃ ಪುನಃ ॥ ೧೪ ॥

೧೦-೧೧. ಶತ್ರುನಾಶಕರಾದ ಅವರು ಅಲ್ಲಿಗೆ ತಮಗಿಂತ ಮೊದಲು ಬಂದು ಪರಮಪದವುಳ್ಳ ವಿಷ್ಣುವೆಂಬ ಹೆಸರಿನ ಪರಬ್ರಹ್ಮನನ್ನು ಧ್ಯಾನಿಸುತ್ತಾ ಇದ್ದ ದೊರೆಯನ್ನು ನೋಡಿ, ಪ್ರೀತಿಯುಳ್ಳವರಾಗಿ ಪಾಪರಹಿತನಾದ ಅವನಿಗೆ, " ರಾಜೇಂದ್ರನೇ ನಿನಗೆ ವರವನ್ನು ಕೊಡುವವರು ಬಂದಿದ್ದೇವೆ. ವರವನ್ನು ಬೇಡು " ಎಂದು ಹೇಳಿದರು.

೧೨. ದೊರೆ—ನೀವಾರೋ ನಾನರಿಯೆನು. ಯಾರಿಗೆ(ಯಾವ)ವರವನ್ನು ತೆಗೆದುಕೊಳ್ಳಲಿ! ನಾನು ಯಾರನ್ನು ಆರಾಧಿಸುತ್ತೇನೋ ಅವನಿಂದಲೇ ಮನೋಹರವೂ ಸಾಧುವೂ ಆದ ವರವನ್ನು ನಾನು ಬಯಸುವೆನು

೧೩. ಹೀಗೆ ಹೇಳಿಸಿಕೊಂಡ ಅವರು " ಪ್ರಭುವೇ ನೀನು ಯಾರನ್ನು ಆರಾಧಿಸುತ್ತೀಯೆ ? ಯಾವ ವರವನ್ನು ಬೇಡುತ್ತೀಯೆ ? ನಮಗೆ ಕುತೂಹಲವಾಗಿರುವುದರಿಂದ ಹೇಳು " ಎಂದರು.

೧೪-೧೫. ಹೀಗೆ ಹೇಳಿಸಿಕೊಂಡ ರಾಜನು " ನಾನು ವಿಷ್ಣುವನ್ನು ಆರಾಧಿಸುತ್ತೇನೆ." ಎಂದು ಹೇಳಿ ಸುಮ್ಮನಾದನು. ಬಳಿಕ ಅವರು ಮತ್ತೆ

ರಾಜಂಸ್ತಸ್ಯೈವ ದೇವಸ್ಯ ಪ್ರಸಾದಾದಾವಯೋರ್ವರಃ ।
ದಾತವ್ಯಸ್ತೇ ವರಂ ಬ್ರೂಹಿ ಕಸ್ತೇ ಮನಸಿ ವರ್ತತೇ ॥ ೧೫ ॥

॥ ರಾಜೋವಾಚ ॥

ಯಥಾಯಜ್ಞೇಶ್ವರಂ ದೇವಂ ಯಜ್ಞೈರ್ವಿವಿಧದಕ್ಷಿಣೈಃ ।
ಯಷ್ಟುಂ ಸಮರ್ಥತಾ ಮೇ ಸ್ಯಾತ್ತಥಾಮೇ ದದತಾಂ ವರಂ ॥ ೧೬ ॥

ಸ್ವಯಂ ನಾರಾಯಣೋ ದೇವೋ ಲೋಕಮಾರ್ಗಪ್ರದರ್ಶಕಃ ।
ಮಯಾ ಸಹ ತಪಃ ಕುರ್ವನ್ ಬದರ್ಯಾಂ ಲೋಕಭಾವನಃ ॥ ೧೭ ॥

ಅಯಂ ಮತ್ಸ್ಯೋಽಭವತ್ಪೂರ್ವಂ ಪುನಃ ಕೂರ್ಮಃ ಸುರೂಪವಾನ್ ।
ವರಾಹಶ್ಚಾಭವದ್ದೇವೋ ನರಸಿಂಹಸ್ತತೋಽಭವತ್ ॥ ೧೮ ॥

ವಾಮನಸ್ತು ತತೋ ಜಾತೋ ಜಾಮದಗ್ನ್ಯೋಽಮಹಾಬಲಃ ।
ಪುನರ್ದಾಶರಥಿರ್ಭೂತ್ವಾ ಮೋಹಯಾಮಾಸ ಪಾರ್ಥಿವಃ ॥ ೧೯ ॥

"ರಾಜನೇ, ಆ ದೇವನ ಅನುಗ್ರಹದಿಂದಲೇ ನಾವು ವರ ಕೊಡುವುದು. ನಿನ್ನ ಮನಸ್ಸಿನಲ್ಲೇನಿದೆಯೋ ಆ ವರವನ್ನು ಹೇಳು" ಎಂದರು.

೧೬–೧೭. ದೊರೆ— ಯಜ್ಞೇಶ್ವರನಾದ ದೇವನನ್ನು ಬಗೆಬಗೆಯ ದಕ್ಷಿಣೆಗಳುಳ್ಳ ಯಜ್ಞಗಳಿಂದ ಪೂಜಿಸಲು ನನಗೆ ಸಾಮರ್ಥ್ಯವುಂಟಾಗುವಂತೆ ಲೋಕರಕ್ಷಕನಾದ ನಾರಾಯಣದೇವನು ಲೋಕಕ್ಕೆ ದಾರಿಯನ್ನು ತೋರಿಸುವನಾಗಿ ನನ್ನೊಡನೆ ಈ ಬದರಿಕಾಶ್ರಮದಲ್ಲಿ ತಪಸ್ಸನ್ನು ಮಾಡುವನಾಗಿ ತಾನೇ ವರವನ್ನು ಕೊಡಲಿ.

೧೮. ಈ ನಾರಾಯಣನು ಮೊದಲು ಮತ್ಸ್ಯಾವತಾರಮಾಡಿದನು. ಬಳಿಕ ಸುಂದರವಾದ ಕೂರ್ಮರೂಪನಾದನು. ಅನಂತರ ವರಾಹ ದೇವನಾದನು. ಆಮೇಲೆ ನರಸಿಂಹನಾದನು.

೧೯. ಬಳಿಕ ವಾಮನನಾದನು. ಅನಂತರ ಮಹಾಬಲಶಾಲಿಯಾದ ಪರಶುರಾಮನಾದನು. ತಿರುಗಿ ಶ್ರೀರಾಮನೆಂಬ ರಾಜನಾಗಿ ಎಲ್ಲರನ್ನೂ ಮೋಹಗೊಳಿಸಿದನು.

ಸಕಲಾನ್ ದಸ್ಯವೋ ಮ್ಲೇಚ್ಛಾನ್ಹಾತಯಿತ್ವಾ ಮಹೀಮಿಮಾಂ |
ಪ್ರಕೃತಿಸ್ಥಾಂ ಚಕಾರಾಯಂ ಸ ಏಷ ಭಗವಾನ್ ಹರಿಃ ॥ ೨೦ ॥

ನಾರಸಿಂಹೇನ ರೂಪೇಣ ತದ್ವತ್ಪಾಪಭಯಾನ್ನರೈಃ |
ವಾಮನಂ ಮೋಹನಾಶಾಯ ವಿತ್ತಾರ್ಥೇ ಜಮದಗ್ನಿಜಂ ॥
ಕ್ರೂರಶತ್ರುವಿನಾಶಾಯ ಯಜೇದ್ದಾಶರಥಿಂ ಬುಧಃ ॥ ೨೧ ॥

ಬಲಕೃಷ್ಣೌ ಯಜೇದ್ಧೀಮಾನ್ ಪುತ್ರಕಾಮೋ ನ ಸಂಶಯಃ |
ರೂಪಕಾಮೋ ಯಜೇದ್ಬುದ್ಧಂ ಶತ್ರುಘಾತಾಯ ಕಲ್ಕಿನಂ ॥ ೨೨ ॥

ಏವಮುಕ್ತ್ವಾ ನರಸ್ತಸ್ಮೈ ಇಮಮೇವಾಬ್ರವೀನ್ಮುನಿಃ |
ದ್ವಾದಶೀಂ ಕೃತವಾನ್ಸೋಽಪಿ ಚಕ್ರವರ್ತೀ ಬಭೂವ ಹ ॥ ೨೩ ॥

---

೨೦. ಎಲ್ಲಾ ಕಳ್ಳರನ್ನೂ, ಮ್ಲೇಚ್ಛರನ್ನೂ ಸಂಹರಿಸಿ, ಈ ಭೂಮಿಯನ್ನು ಸಹಜವಾದ ಸ್ಥಿತಿಯುಳ್ಳದನ್ನಾಗಿ ಮಾಡಿದ ಆ ಹರಿನಾರಾಯಣನು ಈ ಪೂಜ್ಯನೇ.

೨೧ ಅದರಂತೆ ಪಾಪದಿಂದ ಭೀತರಾದರೆ ಮನುಷ್ಯರು ಆ ನಾರಾಯಣನ ನರಸಿಂಹರೂಪವನ್ನೂ, ಮೋಹನಾಶಕ್ಕಾಗಿ ವಾಮನಮೂರ್ತಿಯನ್ನೂ, ದ್ರವ್ಯಕ್ಕಾಗಿ ಪರಶುರಾಮನನ್ನೂ, ಕ್ರೂರಶತ್ರುಗಳವಿನಾಶವಾಗಬೇಕಾದರೆ ಶ್ರೀರಾಮನನ್ನೂ ಪೂಜಿಸಬೇಕು.

೨೨. ಪುತ್ರರನ್ನು ಬಯಸುವ ಬುದ್ಧಿವಂತನು ಬಲರಾಮಕೃಷ್ಣರನ್ನು ಪೂಜಿಸಬೇಕೆಂಬುದರಲ್ಲಿ ಸಂದೇಹವಿಲ್ಲ. ರೂಪವನ್ನು ಬಯಸುವವರು ಬುದ್ಧನನ್ನು ಪೂಜಿಸಬೇಕು. ಶತ್ರುಗಳ ಕೊಲೆಗೆ ಕಲ್ಕಿಯನ್ನರ್ಚಿಸಬೇಕು.

೨೩. ನರಮುನಿಯು ಹೀಗೆ ಆ ವಿಶಾಲರಾಜನಿಗೆ ಹೇಳಿ ಈ ಕಲ್ಕಿದ್ವಾದಶೀವ್ರತವನ್ನೇ ಉಪದೇಶಿಸಿದನು. ಆ ರಾಜನೂ ಈ ವ್ರತವನ್ನು ಮಾಡಿ ಚಕ್ರವರ್ತಿಯಾದನು.

ತಸ್ಯೈವ ನಾಮ್ನಾ ಬದರೀ ವಿಶಾಲಾಖ್ಯಾಭವನ್ಮುನೇ ।
ಇಹ ಜನ್ಮನಿ ರಾಜಾಸೌ ರಾಜ್ಯಂ ಕೃತ್ವಾತ್ರಿಯಾದ್ಧನಂ ॥
ಯಜ್ಞೈಶ್ಚ ವಿವಿಧೈರಿಷ್ಟ್ವಾ ಪರಂ ನಿರ್ವಾಣಮಾಪ್ತವಾನ್ ॥ ೨೪ ॥

ಇತಿ ಶ್ರೀವರಾಹಪುರಾಣೇ ಕಲ್ಕಿದ್ವಾದಶೀವ್ರತಂ ನಾಮ ಅಷ್ಟಚತ್ವಾರಿಂಶೋಽಧ್ಯಾಯಃ

---

೨೪. ಮುನಿಯೆ, ಅವನ ಹೆಸರಿನಿಂದಲೇ ಬದರಿಕಾಶ್ರಮಕ್ಕೆ ವಿಶಾಲೆಯೆಂಬ ಹೆಸರಾಯಿತು. ಆ ರಾಜನು ಆ ಮನುಷ್ಯಜನ್ಮದಲ್ಲಿ ರಾಜ್ಯಭಾರಮಾಡಿ, ಧನವನ್ನು ಸಂಪಾದಿಸಿದನು. ಬಗೆಬಗೆಯ ಯಜ್ಞಗಳನ್ನು ಮಾಡಿ ಬಳಿಕ ಪರಮ ನಿರ್ವಾಣವನ್ನು ಪಡೆದನು.

ಅಧ್ಯಾಯದ ಸಾರಾಂಶ:—

ದುರ್ವಾಸಮುನಿಯು ಸತ್ಯತಪನಿಗೆ ಕಲ್ಕಿದ್ವಾದಶೀವ್ರತದ ಕ್ರಮವನ್ನು ಹೇಳುವಾಗ ಕಾಶಿಯಲ್ಲಿ ರಾಜನಾಗಿದ್ದು, ರಾಜ್ಯವನ್ನು ಕಳೆದುಕೊಂಡು, ಬದರಿಕಾಶ್ರಮಕ್ಕೆ ಹೋಗಿ ತಪಸ್ಸನ್ನು ಮಾಡುತ್ತಿದ್ದ ವಿಶಾಲನೆಂಬ ರಾಜನು ನರನಾರಾಯಣರ ಉಪದೇಶದಂತೆ ಕಲ್ಕಿದ್ವಾದಶೀವ್ರತವನ್ನು ಮಾಡಿ, ಅದರ ಫಲವಾಗಿ ಮತ್ತೆ ಚಕ್ರವರ್ತಿಯಾದುದಲ್ಲದೇ ಕಡೆಯಲ್ಲಿ ಮುಕ್ತಿಯನ್ನು ಪಡೆದನು. ಎಂದು ತಿಳಿಸಿದನು. ಎಂಬಲ್ಲಿಗೆ ಶ್ರೀವರಾಹಪುರಾಣದಲ್ಲಿ ನಲವತ್ತೆಂಟನೆಯ ಅಧ್ಯಾಯ.

|| ಶ್ರೀಃ ||

–X–

ಊನಪಂಚಾಶೋಽಧ್ಯಾಯಃ

ಅಥ ಪದ್ಮನಾಭದ್ವಾದಶೀವ್ರತಂ

|| ದುರ್ವಾಸಾ ಉವಾಚ ||

ತದ್ವದಾಶ್ವಯುಜೇ ಮಾಸಿ ದ್ವಾದಶೀ ಶುಕ್ಲಪಕ್ಷಜಾ |
ತಸ್ಯಾಮಭ್ಯರ್ಚಯೇದ್ದೇವಂ ಪದ್ಮನಾಭಂ ಸನಾತನಂ || ೧ ||

ಪದ್ಮನಾಭಾಯ ಪಾದೌ ತು ಕಟಿಂ ವೈ ಪದ್ಮಯೋನಯೇ |
ಉದರಂ ಸರ್ವದೇವಾಯ ಪುಷ್ಕರಾಕ್ಷಾಯ ವೈ ಉರಃ || ೨ ||

ಅವ್ಯಯಾಯ ತಥಾ ಪಾಣಿಂ ಪ್ರಾಗ್ವದಸ್ತ್ರಾಣಿಪೂಜಯೇತ್ |
ಪ್ರಭವಾಯ ಶಿರಃ ಪೂಜ್ಯ ಪ್ರಾಗ್ವದಗ್ರೇ ಘಟಂ ನ್ಯಸೇತ್ || ೩ ||

ನಲವತ್ತೊಂಬತ್ತನೆಯ ಅಧ್ಯಾಯ

ಪದ್ಮನಾಭದ್ವಾದಶೀವ್ರತ

೧. ದುರ್ವಾಸಮುನಿ—ಹಿಂದಿನಂತೆಯೇ, ಆಶ್ವಯುಜಮಾಸದ ಶುಕ್ಲ ಪಕ್ಷದ ದ್ವಾದಶಿಯಲ್ಲಿ ಸನಾತನನಾದ ಪದ್ಮನಾಭದೇವನನ್ನು ಆರಾಧಿಸಬೇಕು.

೨–೩. ದೇವನ ಪಾದಗಳಿಗೆ ಪದ್ಮನಾಭಾಯನಮಃ ಎಂದೂ, ಉದರಕ್ಕೆ, ಸರ್ವದೇವಾಯನಮಃ ಎಂದೂ, ಹೃದಯಕ್ಕೆ ಪುಷ್ಕರಾಕ್ಷಾಯನಮಃ ಎಂದೂ, ಕೈಗೆ ಅವ್ಯಯಾಯನಮಃ ಎಂದೂ, ಅಸ್ತ್ರಗಳಿಗೆ ಹಿಂದಿನಂತೆಯೂ, ಶಿರಸ್ಸಿಗೆ ಪ್ರಭವಾಯನಮಃ ಎಂದೂ, ಅರ್ಚನೆಯನ್ನು ಮಾಡಿ, ಮೊದಲಿನಂತೆಯೇ ಎದುರಿಗೆ ಕಲಶವನ್ನಿಡಬೇಕು.

ತಸ್ಮಿನ್ ಸೌವರ್ಣಕಂ ದೇವಂ ಪದ್ಮನಾಭಂತು ವಿನ್ಯಸೇತ್ ।
ತಮೇವ ದೇವಂ ಸಂಪೂಜ್ಯ ಗಂಧಪುಷ್ಪಾದಿಭಿಃ ಕ್ರಮಾತ್ ॥
ಪ್ರಭಾತಾಯಾಂತು ಶರ್ವರ್ಯಾಂ ಬ್ರಾಹ್ಮಣಾಯ ನಿವೇದಯೇತ್ ॥ ೪ ॥
ಏವಂ ಕೃತೇ ತು ಯತ್ಪುಣ್ಯಂ ತನ್ನಿಬೋಧ ಮಹಾಮತೇ ॥ ೫ ॥
ಆಸೀತ್ಕೃತಯುಗೇ ರಾಜಾ ಭದ್ರಾಶ್ವೋ ನಾಮ ವೀರ್ಯವಾನ್ ।
ತಸ್ಯ ನಾಮ್ನಾ ಭವದ್ವರ್ಷಂ ಭದ್ರಾಶ್ವಂ ನಾಮ ನಾಮತಃ ॥ ೬ ॥

ತಸ್ಯಾಗಸ್ತ್ಯಃ ಕದಾಚಿತ್ತು ಗೃಹಮಾಗತ್ಯ ಸತ್ತಮಃ ।
ಉವಾಚ ಸಪ್ತರಾತ್ರಂ ತು ವಸಾಮಿ ಭವತೋ ಗೃಹೇ ॥
ತಂ ರಾಜಾ ಶಿರಸಾ ನತ್ವಾ ಸ್ಥೀಯತಾಮಿತ್ಯಭಾಷತ ॥ ೭ ॥

ತಸ್ಯ ಕಾಂತಿಮತೀ ನಾಮ ಭಾರ್ಯಾ ಪರಮಶೋಭನಾ ।
ತಸ್ಯಾಸ್ತೇಜಃ ಸಮಭವತ್ ದ್ವಾದಶಾದಿತ್ಯಸನ್ನಿಭಂ ॥ ೮ ॥

---

೪. ಅದರಮೇಲೆ ಹೊನ್ನಿನ ಪದ್ಮನಾಭದೇವನ ಮೂರ್ತಿಯನ್ನು ಬಿಜಮಾಡಿಸಬೇಕು. ಆ ದೇವನನ್ನೇ ಗಂಧಪುಷ್ಪಾದಿಗಳಿಂದ ಕ್ರಮವಾಗಿ ಚೆನ್ನಾಗಿ ಪೂಜಿಸಿ, ರಾತ್ರಿಯು ಕಳೆದು ಬೆಳಗಾಗಲಾಗಿ, ಬ್ರಾಹ್ಮಣನಿಗೆ ಅರ್ಪಿಸಬೇಕು.

೫. ಚತುರನೇ, ಹೀಗೆ ಮಾಡಿದರೆ ಯಾವ ಪುಣ್ಯವೋ ಅದನ್ನು ಕೇಳು.

೬. ಕೃತಯುಗದಲ್ಲಿ ವೀರ್ಯವಂತನಾದ ಭದ್ರಾಶ್ವನೆಂಬ ರಾಜನಿದ್ದನು. ಅವನ ಹೆಸರಿನಿಂದಲೇ ಒಂದು ಭೂಖಂಡವು ಭದ್ರಾಶ್ವವರ್ಷವೆಂಬ ಹೆಸರುಳ್ಳದಾಯಿತು.

೭. ಒಂದಾನೊಂದು ದಿನ ಸತ್ಪುರುಷೋತ್ತಮನಾದ ಅಗಸ್ತ್ಯಮುನಿಯು ಅವನ ಮನೆಗೆ ಬಂದು "ನಿನ್ನ ಮನೆಯಲ್ಲಿ ಏಳುದಿನ ವಾಸಮಾಡುತ್ತೇನೆ." ಎಂದು ಭದ್ರಾಶ್ವನಿಗೆ ಹೇಳಿದನು. ದೊರೆಯು ಋಷಿಯನ್ನು ತಲೆವಾಗಿ ವಂದಿಸಿ, 'ಇರೋಣವಾಗಲಿ' ಎಂದು ಹೇಳಿದನು.

೮. ಆ ದೊರೆಗೆ ಅತಿಸುಂದರಿಯಾದ ಕಾಂತಿಮತಿಯೆಂಬ ಹೆಂಡತಿಯಿದ್ದಳು. ಅವಳು ದ್ವಾದಶಾದಿತ್ಯರಿಗೆ ಸಮಾನವಾದ ತೇಜಸ್ಸುಳ್ಳವಳಾಗಿದ್ದಳು.

ಶತಾನಿ ಪಂಚ ತಸ್ಯಾಸನ್ ಸಪತ್ನೀನಾಂ ಯತವ್ರತಾಃ |
ತಾ ದಾಸ್ಯ ಇವ ಕರ್ಮಾಣಿ ಕುರ್ವಂತ್ಯಹರಹಃ ಶುಭಾಃ || ೯ ||

ಮಹಾಭಾಗಾ ಕಾಂತಿಮತೀ ಭಾರ್ಯಾ ತಸ್ಯ ವಿಶೇಷತಃ || ೧೦ ||

ತಾಮಗಸ್ತ್ಯಸ್ತಥಾ ದೃಷ್ಟ್ವಾ ರೂಪತೇಜೋನ್ವಿತಾಂ ಶುಭಾಂ |
ಸಪತ್ನ್ಯಶ್ಚ ಭಯಾತ್ತಸ್ಯಾಃ ಕುರ್ವಂತ್ಯಃ ಕರ್ಮ ಶೋಭನಾಃ || ೧೧ ||

ರಾಜಾ ತು ತಸ್ಯಾ ಮುದಿತಂ ಮುಖಮ್ನೇನಾವಲೋಕಯತ್ |
ಏವಂ ಭೂತಾಮಥೋ ದೃಷ್ಟ್ವಾ ರಾಜ್ಞೀಂ ಪರಮಶೋಭನಾಂ |
ಸಾಧು ಸಾಧು ಜಗನ್ನಾಥೇತ್ಯಾಹಾಗಸ್ತ್ಯಃ ಪ್ರಹರ್ಷಿತಃ || ೧೨ ||

ದ್ವಿತೀಯೇ ದಿವಸೇಪ್ಯೇವಂ ರಾಜ್ಞೀಂ ದೃಷ್ಟ್ವಾ ಮಹಾಪ್ರಭಾಂ |
ಅಹೋ ಮುಷ್ಟಮಹೋ ಮುಷ್ಟಂ ಜಗದೇತಚ್ಚರಾಚರಂ || ೧೩ ||

---

೯. ಆ ರಾಜನಿಗೆ ಪತ್ನಿಯು ಅವಳೊಬ್ಬಳೇ ಅಲ್ಲ. ವ್ರತಶೀಲೆಯರಾದ ಐನೂರುಜನ ರಾಣಿಯರಿದ್ದರು. ಮಂಗಳಾಂಗಿಯರಾದ ಅವರು ದಿನದಿನವೂ ದಾಸಿಯರಂತೆ ಕೆಲಸ ಮಾಡುತ್ತಿದ್ದರು.

೧೦. ಮಹಾಭಾಗ್ಯಶಾಲಿನಿಯಾದ ಕಾಂತಿಮತಿಯೇ ದೊರೆಗೆ ಅತಿಪ್ರೀತಿ ಪಾತ್ರಳಾದ ರಾಣಿಯಾಗಿದ್ದಳು.

೧೧-೧೨. ಅಗಸ್ತ್ಯನು ಕಾಂತಿಮತಿಯ ಭಯದಿಂದ ಕೆಲಸಮಾಡುತ್ತಾ ಕಷ್ಟಪಡುತ್ತಿರುವ ಆ ಮಂಗಳಾಂಗಿಯರನ್ನೂ(ಸಪತ್ನಿಯರನ್ನೂ), ದೊರೆಯು ಕಾಂತಿಮತಿಯ ಸಂತೋಷಯುತವಾದ ನಗುಮುಖವನ್ನೇ ನೋಡುತ್ತಿರುವುದನ್ನೂ ರೂಪದಿಂದಲೂ, ತೇಜಸ್ಸಿನಿಂದಲೂ ಒಪ್ಪುತ್ತ ಪರಮಶೋಭನಾಂಗಿಯಾಗಿರುವ ಕಾಂತಿಮತಿಯನ್ನೂ ನೋಡಿ, ಬಹಳ ಸಂತೋಷವುಳ್ಳವನಾಗಿ " ಜಗನ್ನಾಥನೇ, ಚೆನ್ನಾಗಿದೆ! ಚೆನ್ನಾಗಿದೆ! " ಎಂದನು.

೧೩-೧೪. ಎರಡನೆಯ ದಿವಸವೂ ಹಾಗೇಯೇ, ಮಹಾಕಾಂತಿವಂತಳಾದ

ಇತ್ಯಗಸ್ತ್ಯೋ ದ್ವಿತೀಯೇಹ್ನಿ ರಾಜ್ಞೀಂ ದೃಷ್ಟ್ವಾಭ್ಯುವಾಚ ಹ ॥ ೧೪ ॥

ತೃತೀಯೇಹನಿ ತಾಂ ದೃಷ್ಟ್ವಾ ಪುನರೇವಮುವಾಚ ಹ ।
ಅಹೋ ಮೂಢಾ ನ ಜಾನಂತಿ ಗೋವಿಂದಂ ಪರಮೇಶ್ವರಂ ।
ಯ ಏಕೇನ ದಿನೇನ್ಯೈವ ರಾಜ್ಞಸ್ತುಷ್ಟಃ ಪ್ರದತ್ತವಾನ್ ॥ ೧೫ ॥

ಚತುರ್ಥೇ ದಿವಸೇ ಹಸ್ತಾವುತ್‌ಕ್ಷಿಪ್ಯ ಪುನರಬ್ರವೀತ್ ॥ ೧೬ ॥

ಸಾಧು ಸಾಧು ಜಗನ್ನಾಥ ಸ್ತ್ರೀಶೂದ್ರಾಃ ಸಾಧು ಸಾಧ್ವಿತಿ ।
ದ್ವಿಜಾಃ ಸಾಧು ನೃಪಾಃ ಸಾಧು ವೈಶ್ಯಾಃ ಸಾಧು ಪುನಃ ಪುನಃ ॥ ೧೭ ॥

ಸಾಧು ಭದ್ರಾಶ್ವ ಸಾಧುಸ್ತ್ವಂ ಸಾಧುಭೋಽಗಸ್ತ್ಯ ಸಾಧುತೇ ।
ಸಾಧು ಪ್ರಹ್ಲಾದ ಸಾಧುಸ್ತೇ ಧ್ರುವ ಸಾಧೋ ಮಹಾವ್ರತ ॥ ೧೮ ॥

ಏವಮುಕ್ತ್ವಾ ನನರ್ತೋಚ್ಚೈರಗಸ್ತ್ಯೋ ರಾಜಸನ್ನಿಧೌ ॥ ೧೯ ॥

ರಾಣಿಯನ್ನು ನೋಡಿ ಅಗಸ್ತ್ಯನು, “ ಆಶ್ಚರ್ಯ, ಆಶ್ಚರ್ಯ ! ಚರಾಚರಾತ್ಮಕವಾದ ಈ ಜಗತ್ತು ಕಳವಾಯಿತು. ಹೋ ! ಕಳವಾಯಿತು ! ” ಎಂದು ಹೇಳಿದನು.

೧೫. ಮೂರನೆಯ ದಿನ ಆ ಕಾಂತಿಮತಿಯನ್ನು ನೋಡಿ, ಅಗಸ್ತ್ಯನು ತಿರುಗಿ “ ಆಶ್ಚರ್ಯ! ಯಾರು ಒಂದೇ ದಿನದಲ್ಲಿ ತೃಪ್ತನಾಗಿ ರಾಜನಿಗೆ ಎಲ್ಲವನ್ನೂ ಕೊಟ್ಟಿರುವನೋ, ಗೋವಿಂದನಾದ ಆ ಪರಮೇಶ್ವರನನ್ನು ಮೂಢರು ಅರಿಯುವುದಿಲ್ಲ ! ” ಎಂದು ಹೇಳಿದನು.

೧೬. ನಾಲ್ಕನೆಯ ದಿವಸ ತಿರುಗಿ ಕೈಯನ್ನು ಮೇಲೆತ್ತಿ ಹೀಗೆ ಹೇಳಿದನು.

೧೭-೧೯ “ ಜಗನ್ನಾಥನೇ ಚೆನ್ನಾಗಿದೆ, ಚೆನ್ನಾಗಿದೆ ! ಸ್ತ್ರೀಯರೇ, ಶೂದ್ರರೇ, ಚೆನ್ನಾಗಿದೆ ಚೆನ್ನಾಗಿದೆ ! ಬ್ರಾಹ್ಮಣರೇ, ಚೆನ್ನಾಯಿತು ! ದೊರೆಗಳೇ, ಒಳ್ಳೆಯದಾಯಿತು ! ವೈಶ್ಯರೇ ಚೆನ್ನಾಯಿತು ! ” ಎಂದು ಮತ್ತೆಮತ್ತೆ “ ಭದ್ರಾಶ್ವನೇ ಚೆನ್ನಾಯಿತು ! ನೀನು ಒಳ್ಳೆಯವನು. ಎಲೈ ಅಗಸ್ತ್ಯ ನಿನಗೂ ಚೆನ್ನಾಯಿತು ! ಚೆನ್ನಾಯಿತು ಪ್ರಹ್ಲಾದ ! ಧ್ರುವನೇ, ನಿನಗೆ ಸೊಗಸು ! ಮಹಾವ್ರತನೇ ಸೊಗಸಾಗಿದೆ.” ಎಂದು ಹೇಳುತ್ತಾ ಅಗಸ್ತ್ಯನು ದೊರೆಯ ಸಮೀಪದಲ್ಲಿ ಮೇಲಕ್ಕೆ ಹಾರಿಹಾರಿ, ಕುಣಿದಾಡಿದನು.

ಏವಂ ಭೂತಂ ಚ ತಂ ದೃಷ್ಟ್ವಾ ಸಪತ್ನೀಕೋ ನೃಪೋತ್ತಮಃ |
ಕಿಂ ಹರ್ಷಕಾರಣಂ ಬ್ರಹ್ಮನ್ಯೇನೇತ್ಥಂನೃತ್ಯತೇ ಭವಾನ್ || ೨೦ ||

|| ಅಗಸ್ತ್ಯ ಉವಾಚ ||
ಅಹೋ ಮೂರ್ಖಃ ಕುರಾಜಾ ತ್ವಂ ಅಹೋ ಮೂರ್ಖಾನುಗಾಸ್ತ್ವಮೀ |
ಅಹೋ ಪುರೋಹಿತಾ ಮೂರ್ಖಾ ಯೇ ನ ಜಾನಂತಿ ಮೇ ಮತಂ || ೨೧ ||

ಏವಮುಕ್ತೇ ತತೋ ರಾಜಾ ಕೃತಾಂಜಲಿರಭಾಷತ |
ನ ಜಾನೀಮೋ ವಯಂ ಬ್ರಹ್ಮನ್ಪ್ರಶ್ನಮೇತತ್ತ್ವಯೇರಿತಂ ||
ಕಥಯಸ್ವ ಮಹಾಭಾಗ ಯದ್ಯನುಗ್ರಹಕೃದ್ಭವಾನ್ || ೨೨ ||

|| ಅಗಸ್ತ್ಯ ಉವಾಚ ||
ಇಯಂ ರಾಜ್ಞೀ ಪುರಾ ಚಾಭೂದ್ದಾಸೀ ವೈಶ್ಯಸ್ಯ ವೈ ಗೃಹೇ |
ನಗರೇ ಹರಿದತ್ತಸ್ಯ ತ್ವಮಸ್ಯಾಃ ಪತಿರೇವ ಚ ||
ತಸ್ಯೈವ ಕರ್ಮಕಾರೋಽಭೂಚ್ಛೂದ್ರಸ್ಸೇವನತತ್ಪರಃ || ೨೩ ||

---

೨೦. ರಾಣಿಯೊಡಗೂಡಿದ ರಾಜೋತ್ತಮನು, ಆ ರೀತಿಯ ಅಗಸ್ತ್ಯ ಮುನಿಯನ್ನು ನೋಡಿ, “ಬ್ರಾಹ್ಮಣನೇ, ಈ ಸಂತೋಷಕ್ಕೇನು ಕಾರಣ? ನೀನು ಹೀಗೆ ಕುಣಿಯುತ್ತೀಯಲ್ಲಾ!” ಎಂದನು.

೨೧. ಅಗಸ್ತ್ಯ—“ಆಶ್ಚರ್ಯ! ನೀನು ಮೂರ್ಖ, ಕೆಟ್ಟದೊರೆ. ಅಯ್ಯೋ! ನಿನ್ನ ಹಿಂಬಾಲಕರೂ ಮೂರ್ಖರು. ಅಯ್ಯೋ! ಪುರೋಹಿತರೂ ಮೂರ್ಖರು. ಯಾರೂ ನನ್ನ ಅಭಿಪ್ರಾಯವನ್ನು ತಿಳಿಯುವುದಿಲ್ಲ.” ಎಂದನು.

೨೨. ಆತನು ಹಾಗೆ ಹೇಳಲು ದೊರೆಯು ಕೈಮುಗಿದುಕೊಂಡು, “ಮಹಾಭಾಗನೇ, ಬ್ರಹ್ಮನೇ, ನೀನು ಹೇಳಿದ ಈ ಪ್ರಶ್ನೆಯೇ ನಮಗೆ ತಿಳಿಯಲಿಲ್ಲ. ನಿನಗೆ ದಯೆ ಬಂದರೆ ತಿಳಿಯುವಂತೆ ಹೇಳು.” ಎಂದನು.

೨೩. ಅಗಸ್ತ್ಯ ಋಷಿ—ಈ ರಾಣಿಯು ಹಿಂದೆ *ನಗರದಲ್ಲಿ ಹರಿದತ್ತನೆಂಬ ವೈಶ್ಯನ ಮನೆಯಲ್ಲಿ ಸೇವಕಳಾಗಿದ್ದಳು. ನೀನು ಅವಳ ಪತಿಯಾಗಿದ್ದೆ. ಶೂದ್ರನಾದ ನೀನು ಸೇವೆಯಲ್ಲಿ ಆಸಕ್ತನಾಗಿ ಅದೇ ವೈಶ್ಯನ ಮನೆಯಲ್ಲಿ ಕೆಲಸ ಮಾಡುತ್ತಿದ್ದೆ.

---

* ಹರಿದತ್ತನಗರದಲ್ಲಿ ಎಂದೂ ಅರ್ಥವಾಗುತ್ತದೆ.

ಸ ವೈಶ್ಯೋಽಶ್ವಯುಜೇ ಮಾಸಿ ದ್ವಾದಶ್ಯಾಂ ನಿಯತಃ ಸ್ಥಿತಃ ॥ ೨೪ ॥

ಸ್ವಯಂ ವಿಷ್ಣ್ವಾಲಯಂ ಗತ್ವಾ ಪುಷ್ಪಧೂಪಾದಿಭಿರ್ಹರಿಂ ।
ಅಭ್ಯರ್ಚ್ಯ ಸ್ವಗೃಹಂ ಪ್ರಾಯಾದ್ಭವಂತೌ ರಕ್ಷಪಾಲಕೌ ॥ ೨೫ ॥

ಸ್ಥಾಪ್ಯ ದ್ವಾವಪಿ ದೀಪಾನಾಂ ಜ್ವಲನಾರ್ಥಂ ಮಹಾಮತೇ ॥ ೨೬ ॥

ಗತೇ ವೈಶ್ಯೇ ಭವಂತೌ ತೌ ದೀಪಾನ್ಪ್ರಜ್ವಾಲ್ಯ ಸಂಸ್ಥಿತೌ ।
ಯಾವತ್ಪ್ರಭಾತಾ ರಜನೀ ನಿಶಾಮೇಕಾಂ ನರೋತ್ತಮ ॥ ೨೭ ॥

ತತಃ ಕಾಲೇ ಮೃತೌ ತೌ ತು ಉಭೌ ದ್ವಾವಪಿ ದಂಪತೀ ।
ತೇನ ಪುಣ್ಯೇನ ತೇ ಜನ್ಮ ಪ್ರಿಯವ್ರತಗೃಹೇಭವತ್ ।
ಇಯಂ ಪತ್ನೀ ತು ತೇ ಜಾತಾ ಪುರಾ ವೈಶ್ಯಸ್ಯ ದಾಸಿಕಾ ॥ ೨೮ ॥

---

೨೪. ಆ ವೈಶ್ಯನು ಆಶ್ವಯುಜ ಮಾಸದಲ್ಲಿ ದ್ವಾದಶೀವ್ರತದಲ್ಲಿದ್ದನು.

೨೫–೨೬. ಅವನು ತಾನೇ ವಿಷ್ಣುದೇವಾಲಯಕ್ಕೆ ಹೋಗಿ, ಪುಷ್ಪದೀಪ ಧೂಪಾದಿಗಳಿಂದ ಆ ಹರಿಯನ್ನು ಪೂಜಿಸಿ, ಮಹಾಮತಿಯೇ, ದಂಪತಿಗಳಾದ ನಿಮ್ಮನ್ನು ಇಬ್ಬರನ್ನೂ ಅಲ್ಲಿ ದೀಪಗಳನ್ನು ಸರಿಯಾಗಿ ಉರಿಸುವುದಕ್ಕಾಗಿ ಕಾವಲಿಟ್ಟು, ತನ್ನ ಮನೆಗೆ ಹೋದನು.

೨೭. ವೈಶ್ಯನು ಹೊರಟುಹೋದ ಮೇಲೆ, ನರೋತ್ತಮನೇ, ನೀವಿಬ್ಬರೂ ದೀಪಗಳು ಚೆನ್ನಾಗಿ ಉರಿಯುವಂತೆ ಮಾಡಿ, ಬೆಳಗಾಗುವವರೆಗೂ ಒಂದು ರಾತ್ರಿಯೆಲ್ಲಾ ಅಲ್ಲಿಯೇ ಇದ್ದಿರಿ.

೨೮. ಬಳಿಕ ಕಾಲಾಂತರದಲ್ಲಿ ನೀವು ದಂಪತಿಗಳಿಬ್ಬರೂ, ಮೃತರಾಗಲು ಆ ದೀಪವನ್ನು ದೊಡ್ಡದು ಮಾಡಿದ ಪುಣ್ಯದಿಂದ ಪ್ರಿಯವ್ರತನ ಮನೆಯಲ್ಲಿ ನೀನು ಜನ್ಮವೆತ್ತಿದೆ. ಹಿಂದೆ ವೈಶ್ಯನ ಸೇವಕಳಾಗಿದ್ದ ಇವಳು ನಿನಗೆ ಪತ್ನಿಯಾಗಿ ಆದಳು.

ಪಾರಕ್ಯಸ್ಯಾಪಿ ದೀಪಸ್ಯ ಜ್ವಾಲಿತಸ್ಯ ಹರೇರ್ಗೃಹೇ ।
ಯಃ ಪುನಃ ಸ್ವೇನ ವಿತ್ತೇನ ವಿಷ್ಣೋರಗ್ರೇ ಪ್ರದೀಪಕಂ ॥ ೨೯ ॥

ಜ್ವಾಲಯೇತ್ತಸ್ಯ ಯತ್ಪುಣ್ಯಂ ತತ್ಸಂಖ್ಯಾತುಂ ನ ಶಕ್ಯತೇ ।
ತೇನ ಸಾಧೋ ಹರೇಃ ಸಾಧು ಚೇತ್ಯುಕ್ತಂ ವಚನಂ ಮಯಾ ॥ ೩೦ ॥

ಪೂರ್ಣೇ ಸಂವತ್ಸರೇ ಭಕ್ತಿಂ ಹರೇಃ ಕೃತ್ವಾ ವಿಚಕ್ಷಣಃ ।
ಸಂವತ್ಸರಾರ್ಧೇ ತ್ರೇತಾಯಾಂ ಸಮಮೇತನ್ನ ಸಂಶಯಃ ॥ ೩೧ ॥

ತ್ರಿಮಾಸೇ ದ್ವಾಪರೇ ಭಕ್ತ್ಯಾ ಪೂಜ್ಯ ಯಲ್ಲಭತೇ ಫಲಂ ।
ನಮೋ ನಾರಾಯಣೇತ್ಯುಕ್ತ್ವಾ ಕಲೌ ತು ಲಭತೇ ಫಲಂ ॥ ೩೨ ॥

ತೇನ ಮುಷ್ಟಂ ಜಗತ್ಸರ್ವಂ ಭಕ್ತಿಮಾತ್ರಂ ಮಯೇರಿತಂ ॥ ೩೩ ॥

೨೯–೩೦. ಹರಿಯ ಸನ್ನಿಧಿಯಲ್ಲಿ ಪರರು ಹತ್ತಿಸಿದ ದೀಪವನ್ನು ದೊಡ್ಡದನ್ನಾಗಿ ಮಾಡಿ ಉರಿಸಿದುದಕ್ಕೇ ಇಷ್ಟಾದರೆ, ತನ್ನ ದುಡ್ಡನ್ನು(ಹಣವನ್ನು) ವೆಚ್ಚಮಾಡಿ, ಹರಿಗೃಹದಲ್ಲಿ ದೀಪವನ್ನು ಹತ್ತಿಸುವವರ ಪುಣ್ಯವನ್ನು ಗಣಿಸಲು ಸಾಧ್ಯವೇ! ಇಲ್ಲ. ಆದುದರಿಂದ 'ಚೆನ್ನಾಗಿದೆ! ಹರಿಯೇ, ಚೆನ್ನಾಗಿದೆ.' ಎಂದು ನಾನು ಹೇಳಿದೆನು.

೩೧–೩೨. ತಿಳಿದವನು ಕೃತಯುಗದಲ್ಲಿ ಒಂದು ವರ್ಷಕಾಲ ಪೂರ್ತಿಯಾಗಿ ಹರಿಯಲ್ಲಿ ಭಕ್ತಿಯನ್ನು ಮಾಡುವುದು ತ್ರೇತಾಯುಗದಲ್ಲಿ ಅರ್ಧವರ್ಷ ಕಾಲ ಮಾಡುವ ಭಕ್ತಿಗೆ ಸಮವಾಗುವುದು. ದ್ವಾಪರಯುಗದಲ್ಲಿ ಮೂರುತಿಂಗಳು ಭಕ್ತಿಯಿಂದ ಪೂಜಿಸಿ, ಯಾವ ಫಲವನ್ನು ಪಡೆಯುವನೋ ಅದೇಫಲವನ್ನು ಕಲಿಯುಗದಲ್ಲಿ 'ನಮೋ ನಾರಾಯಣಾಯ' (ನಾರಾಯಣನಿಗೆ ನಮಸ್ಕಾರ) ಎಂದು ಹೇಳಿ, ಪಡೆಯುವುದರಲ್ಲಿ ಸಂದೇಹವಿಲ್ಲ.

೩೩. ಆದುದರಿಂದಲೇ, ಜಗತ್ತೆಲ್ಲದರಲ್ಲೂ ಭಕ್ತಿಯು ಮಾತ್ರ ಕಳವಾಯಿತು. ಎಂದು ನಾನು ಹೇಳಿದೆನು.

ಪಾರಕ್ಯದೀಪಸ್ಯೋತ್ಕರ್ಷಾದ್ದೇವಾಗ್ರೇ ಫಲಮೀದೃಶಂ ।
ಭೋ ರಾಜನ್ ಯತ್ತ್ವಯಾ ಪ್ರಾಪ್ತಂ ಫಲಮೇತನ್ಮಯೇರಿತಂ ॥
ಅಹೋ ಮೂಢಾ ನ ಜಾನಂತಿ ಹರೇರ್ದೀಪಕ್ರಿಯಾಫಲಂ ॥ ೩೪ ॥

ಏವಂ ವಿಧಾ ದ್ವಿಜಾಗ್ರೇಚ ರಾಜಾನೋ ಯೇ ಚ ಭಕ್ತಿತಃ ।
ಯಜಂತೇ ವಿವಿಧೈರ್ಯಜ್ಞೈಸ್ತೇನ ತೇ ಸಾಧವಃ ಸ್ಮೃತಾಃ ॥ ೩೫ ॥

ಅಹಂ ತಮೇವ ಮುಕ್ತ್ವಾನ್ಯಂ ನ ಪಶ್ಯಾಮಿ ಮಹೀತಲೇ ।
ತೇನ ಸಾಧೋ ಅಗಸ್ತ್ಯೇತಿ ಮಯಾಚಾತ್ಮಾ ಪ್ರಶಂಸಿತಃ ॥ ೩೬ ॥

ಸಾಸ್ತ್ರೀ ಧನ್ಯಾ ಸ ಶೂದ್ರಸ್ತು ತಥಾ ಧನ್ಯತರೋ ಮತಃ ।
ಭರ್ತುಃ ಶುಶ್ರೂಷಣಂ ಕೃತ್ವಾ ತತ್ಪರೋಕ್ಷೇ ಹರೇರಿತಿ ॥ ೩೭ ॥

---

೩೪. ದೊರೆಯೇ, ಮತ್ತೊಬ್ಬರು ದೇವರೆದುರಿಗೆ ಹತ್ತಿಸಿದ್ದ ದೀಪವನ್ನು ದೊಡ್ಡದನ್ನಾಗಿ ಮಾಡಿದುದರಿಂದ, ನೀನು ಇಂತಹ ಫಲವನ್ನು ಪಡೆದೆ. ಆದರೂ ಅದನ್ನು ನೀವರಿಯದುದರಿಂದ 'ಅಯ್ಯೋ, ಮೂಢರು. ಹರಿಗೆ ದೀಪಹತ್ತಿಸುವ ಕಾರ್ಯದ ಫಲವನ್ನು ತಿಳಿಯುವುದಿಲ್ಲ' ಎಂದು ನಾನು ಹೇಳಿದೆನು.

೩೫. ಇಂತಹ ರಾಜರು ಯಾರು ಬ್ರಾಹ್ಮಣರನ್ನು ಮುಂದಿಟ್ಟುಕೊಂಡು, ಭಕ್ತಿಯಿಂದ ಬಗೆಬಗೆಯ ಯಜ್ಞಗಳನ್ನೂ ಮಾಡುವರೋ ಅವರು ಸಾಧುಗಳೆನಿಸಿ ಕೊಳ್ಳುವರು.

೩೬. ನಾನು ಭೂತಲದಲ್ಲಿ ನಾರಾಯಣನನ್ನು ಹೊರತು ಬೇರಾವುದನ್ನೂ ಕಾಣೆನು. ಆದುದರಿಂದ 'ಸಾಧುವೇ, ಅಗಸ್ತ್ಯ' ಎಂದು ನನ್ನನ್ನು ನಾನೇ ಹೊಗಳಿಕೊಂಡೆನು.

೩೭–೩೮. ಒಡೆಯನ ಸೇವೆಯನ್ನೂ, ಅವನೆದುರಿಗಿಲ್ಲದಾಗ ಹರಿಸೇವೆಯನ್ನೂ ಮಾಡಿದ ಆ ಸ್ತ್ರೀಯು ಧನ್ಯಳು. ನಿಜವಾಗಿ ಧನ್ಯಳು. ಅಲ್ಲದೆ ದ್ವಿಜ ಶುಶ್ರೂಷೆಯಲ್ಲಿ ಆಸಕ್ತನಾದ ಆ ಶೂದ್ರನೂ ಧನ್ಯನು. ಬಹು ಧನ್ಯನೆನಿಸಿ

ಸಾಸ್ತ್ರೀ ಧನ್ಯಾ ತಥಾ ಶೂದ್ರೋ ದ್ವಿಜಶುಶ್ರೂಷಣೇ ರತಃ ।
ತದಾಜ್ಞಯಾ ಹರೇರ್ಭಕ್ತಿಃ ಸ್ತ್ರೀಶೂದ್ರೌ ತೇನ ಸಾಧ್ವಿತಿ ॥ ೩೮ ॥

ಆಸುರಂ ಭಾವಮಾಶ್ರಿತ್ಯ ಪ್ರಹ್ಲಾದಃ ಪುರುಷೋತ್ತಮಂ ।
ಮುಕ್ತ್ವಾ ಚಾನ್ಯಂ ನ ಜಾನಾತಿ ತೇನಾಸೌ ಸಾಧುರುಚ್ಯತೇ ॥ ೩೯ ॥

ಪ್ರಜಾಪತಿಕುಲೇ ಭೂತ್ವಾ ಬಾಲ ಏವ ವನಂ ಗತಃ ।
ಆರಾಧ್ಯ ವಿಷ್ಣುಂ ಪ್ರಾಪ್ತಶ್ಚ ಸ್ಥಾನಂ ಪರಮಶೋಭನಂ ॥
ತೇನ ಸಾಧೋ ಧ್ರುವೇತ್ಯೇವಂ ಮಯೋಕ್ತಂ ರಾಜಸತ್ತಮ ॥ ೪೦ ॥

ಇತಿ ರಾಜಾ ವಚಃ ಶ್ರುತ್ವಾ ತ್ವಗಸ್ತ್ಯಸ್ಯ ಮಹಾತ್ಮನಃ ।
ಅಲ್ಪೋಪದೇಶಂ ರಾಜಾಸೌ ಪಪ್ರಚ್ಛ ಮುನಿಪುಂಗವಂ ॥ ೪೧ ॥

ಕೊಳ್ಳುವನು. ದ್ವಿಜನ ಅಪ್ಪಣೆಯಿಂದ ಅವರಿಗೆ ಹರಿಭಕ್ತಿ. ಆದುದರಿಂದ 'ಸ್ತ್ರೀಶೂದ್ರರೇ, ಚೆನ್ನಾಗಿದೆ, ಒಳ್ಳೆಯದು!, ಎಂದೆನು.

೩೯. ರಾಕ್ಷಸನಾಗಿ ಉದಿಸಿದ್ದೂ ಪ್ರಹ್ಲಾದನು ಪುರುಷೋತ್ತಮನಾದ ನಾರಾಯಣನನ್ನು ಹೊರತು ಬೇರಾವುದನ್ನೂ ತಿಳಿಯನು. ಆದುದರಿಂದ ಅವನು ಸಾಧುವೆನಿಸಿಕೊಳ್ಳುವನು.

೪೦. ಬ್ರಹ್ಮನ ವಂಶದಲ್ಲಿ ಹುಟ್ಟಿ, ಧ್ರುವನು ಬಾಲ್ಯದಲ್ಲಿಯೇ ವನಕ್ಕೆ ಹೋಗಿ ವಿಷ್ಣುವನ್ನಾರಾಧಿಸಿ, ಪರಮೋತ್ಕೃಷ್ಟವಾದ ಸ್ಥಾನವನ್ನು ಪಡೆದನು. ರಾಜೋತ್ತಮನೇ, ಆದುದರಿಂದ 'ಸಾಧುವೇ, ಧ್ರುವ' ಎಂದು ನಾನು ಹೇಳಿದೆನು.

೪೧. ಭದ್ರಾಶ್ವರಾಜನು, ಮಹಾತ್ಮನಾದ ಅಗಸ್ತ್ಯನ ಈ ಮಾತನ್ನು ಕೇಳಿ, ಆ ಮುನಿಯನ್ನೇ ಸ್ವಲ್ಪವಾಗಿ ಉಪದೇಶಮಾಡಬೇಕೆಂದು ಕೇಳಿದನು.

ಅಗಸ್ತ್ಯಶ್ಚ ಮಹಾಭಾಗಃ ಕಾರ್ತಿಕ್ಯಾಂ ಪುಷ್ಕರಂ ವ್ರಜನ್ ॥ ೪೨ ॥

ಗತೇಗಸ್ತ್ಯೇ ಪ್ರಗಚ್ಛನ್ತ್ಯೆ ಭದ್ರಾಶ್ವಸ್ಯ ನಿವೇಶನಂ ।
ಪೃಷ್ಟಶ್ಚ ರಾಜ್ಞಾ ತಾಮೇವ ದ್ವಾದಶೀಂ ಮುನಿಸತ್ತಮಃ ॥ ೪೩ ॥

॥ ದುರ್ವಾಸಾ ಉವಾಚ ॥

ಇದಮೇವ ಮಯಾ ತುಭ್ಯಂ ಕಥಿತಂ ತೇ ತಪೋಧನ ।
ತಥಯಿತ್ವಾ ಪುನರ್ವಾಕ್ಯಮಗಸ್ತ್ಯೋ ನೃಪಸತ್ತಮಂ ॥ ೪೪ ॥

ಉವಾಚ *ಪುಷ್ಕರಂ ಯಾಮಿ ಸಪುತ್ರಂ ಚಾಸ್ತು ತೇ ಗೃಹಂ ।
ಏವಮುಕ್ತ್ವಾ ಜಗಾಮಾಶು ಸದ್ಯೋದರ್ಶನತಾಂ ಮುನಿಃ ॥ ೪೫ ॥

ದ್ವಾದಶೀಂ ಪದ್ಮನಾಭಸ್ಯ ರಾಜಾ ಸವಿಧಿನಾತತಃ ।
ಉಪೋಷ್ಯ ಪರಮಂ ಕಾಮಮಿಹ ಜನ್ಮನಿ ಚಾಪ್ತವಾನ್ ॥ ೪೬ ॥

೪೨-೪೩. ಮಹಾಭಾಗನಾದ ಅಗಸ್ತ್ಯನು ಕಾರ್ತಿಕಮಾಸದ ಹುಣ್ಣಿಮೆಯಲ್ಲಿ ಪುಷ್ಕರಕ್ಕೆ ಹೋಗಬೇಕೆಂದು ಭದ್ರಾಶ್ವನ ಮನೆಯಿಂದ ಹೊರಟುಹೋಗುತ್ತಿರುವಾಗ ರಾಜನು ಮತ್ತೆ ಕೇಳಲು, ಋಷಿವರ್ಯನು ಪದ್ಮನಾಭದ್ವಾದಶೀವ್ರತವನ್ನೇ ಉಪದೇಶಿಸಿದನು.

೪೪-೪೫. ದುರ್ವಾಸಮುನಿ—ತಪೋಧನನಾದ ಸತ್ಯತಪನೇ, ಅದನ್ನೇ ನಾನು ನಿನಗೆ ಹೇಳಿದೆನು. ಅಗಸ್ತ್ಯನು ರಾಜೋತ್ತಮನಿಗೆ ವ್ರತವನ್ನು ಉಪದೇಶಿಸಿ, 'ನಾನು ಪುಷ್ಕರಕ್ಕೆ ಹೋಗುತ್ತೇನೆ. ನಿನ್ನ ಮನೆಯು ಸಪುತ್ರವಾಗಲಿ.' ಎಂದು ಹೇಳಿ ಒಡನೆಯೇ ಬೇಗನೆ ಕಣ್ಮರೆಯಾದನು.

೪೬. ಭದ್ರಾಶ್ವರಾಜನು ಬಳಿಕ ಪದ್ಮನಾಭದ್ವಾದಶೀವ್ರತವನ್ನು ಶಾಸ್ತ್ರೋಕ್ತವಿಧಾನದಿಂದ ಮಾಡಿ, ಈ ಜನ್ಮದಲ್ಲಿ ಬೇಕಾದ ಉತ್ತಮವಾದ ಪ್ರಯೋಜನವನ್ನೆಲ್ಲಾ ಪಡೆದನು.

---

* ಪುಷ್ಕರ= ಒಂದು ಪರ್ವತ. ಸರೋವರವಿರುವ ಒಂದುಕ್ಷೇತ್ರ (ಅಜ್ಮೀರಿಗೆ ಸಮೀಪದಲ್ಲಿದೆ.) ಏಳು ಮಹಾದ್ವೀಪಗಳಲ್ಲಿ ಒಂದು.

ಪುತ್ರಪೌತ್ರೈಃ ಪರಿವೃತೋ ಭುಕ್ತ್ವಾಭೋಗಾನಥೋತ್ತಮಾನ್ ।
ಪದ್ಮನಾಭಪ್ರಸಾದೇನ ವೈಷ್ಣವಂ ಸ್ಥಾನಮಾಪ ಸಃ ॥ ೪೭ ॥

ಇತಿ ಶ್ರೀವರಾಹಪುರಾಣೇ ಪದ್ಮನಾಭದ್ವಾದಶೀವ್ರತಂ
ನಾಮ ಊನಪಂಚಾಶೋಧ್ಯಾಯಃ

---

೪೭. ಆತನು ಮಕ್ಕಳುಗಳೊಡಗೂಡಿ, ಉತ್ತಮಭೋಗಗಳನ್ನನುಭವಿಸಿ, ಕೊನೆಗೆ ಪದ್ಮನಾಭನ ಅನುಗ್ರಹದಿಂದ ವಿಷ್ಣುಲೋಕವನ್ನು ಪಡೆದನು.

ಅಧ್ಯಾಯದ ಸಾರಾಂಶ:—

ದುರ್ವಾಸಮುನಿಯು ಸತ್ಯತಪಸಿಗೆ ಆಶ್ವಯುಜಮಾಸದ ಶುಕ್ಲಪಕ್ಷದ ದ್ವಾದಶಿಯದಿನ ಪದ್ಮನಾಭ(ದ್ವಾದಶೀ) ವ್ರತವನ್ನು ಮಾಡುವ ವಿಧಾನವನ್ನು ತಿಳಿಸಿ, ಆ ವ್ರತದ ಮಹಿಮೆಯನ್ನು ತಿಳಿಸಲು ಹಿಂದೆ ಅಗಸ್ತ್ಯಮುನಿಯು ಕೃತಯುಗದಲ್ಲಿ ಭದ್ರಾಶ್ವನೆಂಬ ರಾಜನ ಹತ್ತಿರಕ್ಕೆ ಬಂದು, ಭದ್ರಾಶ್ವರಾಜನೂ ಆತನ ರಾಣಿಯೂ ಅವರ ಹಿಂದಿನ ಜನ್ಮದಲ್ಲಿ ಶೂದ್ರರಾಗಿ ಒಬ್ಬ ವೈಶ್ಯನು ಮಾಡಿದ ಪದ್ಮನಾಭದ್ವಾದಶೀವ್ರತದಲ್ಲಿ ವಿಷ್ಣುದೇವಾಲಯದಲ್ಲಿ ಹತ್ತಿಸಿದ್ದ ದೀಪಗಳನ್ನು ರಾತ್ರಿಯೆಲ್ಲಾ ಚೆನ್ನಾಗಿ ಉರಿಯುವಂತೆ ಮಾಡಿ, ನಿದ್ದೆಮಾಡದೆ ನೋಡಿಕೊಳ್ಳುತ್ತಿದ್ದ ಪುಣ್ಯದಿಂದ ರಾಜರಾಣಿಯರಾಗಿ ಉದಿಸಿದರೆಂದು ತಿಳಿಸಿ, ಮತ್ತೆ ಅವರು ಪದ್ಮನಾಭದ್ವಾದಶೀವ್ರತವನ್ನು ಆಚರಿಸುವಂತೆ ಮಾಡಿದ ಕಥೆಯನ್ನು ಹೇಳುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನಲವತ್ತೊಂಬತ್ತನೆಯ ಅಧ್ಯಾಯವು.

॥ ಶ್ರೀಃ ॥

–X–

ಪಂಚಾಶೋಽಧ್ಯಾಯಃ

ಅಥ ಧರಣೀವ್ರತಂ

॥ ದುರ್ವಾಸಾ ಉವಾಚ ॥

ಗತ್ವಾತು ಪುಷ್ಕರಂ ತೀರ್ಥಂ ಅಗಸ್ತ್ಯೋ ಮುನಿಪುಂಗವಃ ।
ಕಾರ್ತಿಕ್ಯಾಮಾಜಗಾಮಾಶು ಪುನರ್ಭದ್ರಾಶ್ವಮಂದಿರಂ ॥ ೧ ॥

ತಮಾಗತಂ ಮುನಿಂ ಪ್ರೇಕ್ಷ್ಯ ರಾಜಾ ಪರಮಧಾರ್ಮಿಕಃ ।
ಅರ್ಘ್ಯಪಾದ್ಯಾದಿಭಿಃ ಪೂಜ್ಯ ಕೃತಾಸನಪರಿಗ್ರಹಂ ॥
ಉವಾಚ ಹೃಷಿತೋ ರಾಜಾ ತಮೃಷಿಂ ಶಂಸಿತವ್ರತಂ ॥ ೨ ॥

ಐವತ್ತನೆಯ ಅಧ್ಯಾಯ.

ಧರಣೀವ್ರತ.

೧. ದುರ್ವಾಸಮುನಿ—ಮುನಿವರ್ಯನಾದ ಅಗಸ್ತ್ಯನು ಪುಷ್ಕರತೀರ್ಥಕ್ಕೆ ಕಾರ್ತಿಕಮಾಸದ ಹುಣ್ಣಿಮೆಯಲ್ಲಿ ಹೋಗಿದ್ದು, ಮತ್ತೆ ಬೇಗನೆ ಭದ್ರಾಶ್ವನ ಅರಮನೆಗೆ ಬಂದನು.

೨. ಅವನು ಬಂದುದನ್ನು, ಪರಮಧಾರ್ಮಿಕನಾದ ಆ ದೊರೆಯು ಕಂಡು, ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿ, ಪೀಠದಲ್ಲಿ ಕುಳಿತುಕೊಂಡಿರುವ ಶ್ಲಾಘ್ಯವ್ರತನಿಷ್ಠನಾದ ಆ ಋಷಿಯನ್ನು ಕುರಿತು (ಮುಂದಿನ) ಮಾತನಾಡಿದನು.

॥ ರಾಜೋವಾಚ ॥

ಭಗವನ್ಕಥಿತಂ ಪೂರ್ವಂ ತ್ವಯಾ ಋಷಿವರೋತ್ತಮ ।
ಆಶ್ವಿನೇ ಮಾಸಿ ದ್ವಾದಶ್ಯಾ ವಿಧಾನಂ ತತ್ಕೃತಂ ಮಯಾ ॥ ೩ ॥

ಇದಾನೀಂ ಕಾರ್ತಿಕೇ ಮಾಸಿ ಯತ್ಸ್ಯಾತ್ಪುಣ್ಯಂ ವದಸ್ವಮೇ ॥ ೪ ॥

॥ ಅಗಸ್ತ್ಯ ಉವಾಚ ॥

ಕಾರ್ತಿಕೀದ್ವಾದಶೀ ರಾಜನ್ನುಕ್ತಾ ಪರಮಪಾವನೀ ।
ಉಪೋಷ್ಯ ವಿಧಿನಾ ಯೇನ ಯಚ್ಚಾಸ್ಯಾಃ ಪ್ರಾಪ್ಯತೇ ಫಲಂ ।
ತದಹಂ ಸಂಪ್ರವಕ್ಷ್ಯಾಮಿ ಶೃಣೋತ್ವವಹಿತೋ ಭವಾನ್ ॥ ೫ ॥

ಪೂರ್ವೋಕ್ತವಿಧಿನಾ ಸಮ್ಯಕ್ ಸಂಕಲ್ಪ್ಯ ಸ್ನಾನಮಾಚರೇತ್ ।
ತಮೇವ ಪೂಜಯೇದ್ದೇವಂ ನಾರಾಯಣಮಕಲ್ಮಷಂ ॥ ೬ ॥

---

೩. ದೊರೆ—ಋಷಿವರೋತ್ತಮನೇ, ಮೊದಲು ನೀನು ಹೇಳಿದ ಆಶ್ವಯುಜಮಾಸದ ದ್ವಾದಶೀವ್ರತವನ್ನು ನಾನು ಮಾಡಿದೆನು.

೪. ಈಗ ಕಾರ್ತಿಕಮಾಸದಲ್ಲಿ ಯಾವುದು ಪುಣ್ಯಪ್ರದವಾದುದೋ ಅದನ್ನು ಹೇಳು.

೫. ಅಗಸ್ತ್ಯಮುನಿ—ದೊರೆಯೇ, ಕಾರ್ತಿಕಮಾಸದ ದ್ವಾದಶಿಯು ಪರಮಪಾವನವಾದುದು. ಅದರಲ್ಲಿ, ಉಪವಾಸಮಾಡಿ, ವ್ರತಮಾಡುವುದರಿಂದ ಯಾವ ಫಲವು ದೊರೆಯುವುದೋ ಅದನ್ನು ವಿವರವಾಗಿ ಹೇಳುವೆನು. ನೀನು ಗಮನವಿಟ್ಟು ಕೇಳು.

೬. ಈ ವ್ರತವನ್ನು ಮಾಡುವವನು ಹಿಂದೆ ಹೇಳಿರುವ ನಿಯಮದಂತೆ ಸರಿಯಾಗಿ ಸಂಕಲ್ಪಮಾಡಿ, ಸ್ನಾನಮಾಡಬೇಕು. ದೋಷರಹಿತನಾದ ಆ ನಾರಾಯಣದೇವನನ್ನೇ ಪೂಜಿಸಬೇಕು.

ನಮಃ ಸಹಸ್ರಶಿರಸೇ ಶಿರಃ ಸಂಪೂಜಯೇದ್ಧರೇಃ || ೭ ||

ಪುರುಷಾಯೇತಿ ಚ ಭುಜೌ ಕಂಠಂ ವೈ ವಿಶ್ವರೂಪಿಣೇ |
ಜ್ಞಾನಾಸ್ತ್ರಾಯೇತಿ ಚಾಸ್ತ್ರಾಣಿ ಶ್ರೀವತ್ಸಾಯ ತಥಾಹ್ಯುರಃ || ೮ ||

ಜಗದ್ಗ್ರಸಿಷ್ಣವೇ ತುಭ್ಯಮುದರಂ ದಿವ್ಯಮೂರ್ತಯೇ |
ಕಟಿಂ ಸಹಸ್ರಪಾದಾಯ ಪಾದೌ ದೇವಸ್ಯ ಪೂಜಯೇತ್ || ೯ ||

ಅನುಲೋಮೇನ ದೇವೇಶಂ ಪೂಜಯಿತ್ವಾ ವಿಚಕ್ಷಣಃ |
ನಮೋ ದಾಮೋದರಾಯೇತಿ ಸರ್ವಾಂಗಂ ಪೂಜಯೇದ್ಧರೇಃ || ೧೦ ||

ಏವಂ ಸಂಪೂಜ್ಯ ವಿಧಿನಾ ತಸ್ಯಾಗ್ರೇ ಚತುರೋ ಘಟಾನ್ |
ಸ್ಥಾಪಯೇದ್ರತ್ನಗರ್ಭಾಂಸ್ತು ಸಿತಚಂದನಚರ್ಚಿತಾನ್ ||
ಸ್ರಗ್ದಾಮಬದ್ಧಗ್ರೀವಾಂಸ್ತು ಸಿತವಸ್ತ್ರಾವಗುಂಠಿತಾನ್ || ೧೧ ||

---

೭ ಸಹಸ್ರಶಿರಸೇನಮಃ ಎಂದು ಹರಿಯ ಶಿರಸ್ಸನ್ನು ಪೂಜಿಸಬೇಕು.

೮-೯. ಪುರುಷಾಯನಮಃ ಎಂದು ತೋಳುಗಳನ್ನೂ, ವಿಶ್ವರೂಪಿಣೇ ನಮಃ ಎಂದು ಕಂಠವನ್ನೂ, ಜ್ಞಾನಾಸ್ತ್ರಾಯನಮಃ ಎಂದು ಶಂಖಚಕ್ರಾದ್ಯಸ್ತ್ರಗಳನ್ನೂ, ಶ್ರೀವತ್ಸಾಯ ನಮಃ ಎಂದು ಹೃದಯವನ್ನೂ, ಜಗದ್ಗ್ರಸಿಷ್ಣವೇ ತುಭ್ಯಂನಮಃ ಎಂದು (ಲೋಕವನ್ನು ನುಂಗುವ ನಿನಗೆ ನಮಸ್ಕಾರ ಎಂದು) ಉದರವನ್ನೂ, ದಿವ್ಯಮೂರ್ತಯೇನಮಃ ಎಂದು ನಡುವನ್ನೂ, ಸಹಸ್ರಪಾದಾಯನಮಃ ಎಂದು ದೇವನ ಪಾದಗಳನ್ನೂ ಪೂಜಿಸಬೇಕು.

೧೦. ತಿಳಿವಳಿಕೆಯುಳ್ಳವನು, ಹೀಗೆ ದೇವೇಶನನ್ನು, ತಲೆಯಿಂದ ಆರಂಭಿಸಿ, ಪಾದದವರೆಗೆ (ಅನುಲೋಮವಾಗಿ) ಪೂಜಿಸಿ, ದಾಮೋದರಾಯ ನಮಃ ಎಂದು ಹರಿಯ ಸರ್ವಾಂಗವನ್ನೂ ಪೂಜಿಸಬೇಕು.

೧೧. ಹೀಗೆ ಪೂಜಿಸಿ, ದೇವನೆದುರಿಗೆ ರತ್ನಗರ್ಭಗಳಾದ ನಾಲ್ಕು ಕಲಶಗಳನ್ನು, ಗಂಧವನ್ನು ಲೇಪಿಸಿ, ಹೂಮಾಲೆಗಳನ್ನು ಕಂಠಕ್ಕೆ ಸುತ್ತಿ, ಬಿಳಿಯ ವಸ್ತ್ರದಿಂದ ಅಲಂಕರಿಸಿ ಸ್ಥಾಪಿಸಬೇಕು.

ಸ್ಥಾಪಿತಾಂಸ್ತಾಮ್ರಪಾತ್ರೈಸ್ತು ತಿಲಪೂರ್ಣೈಃ ಸಕಾಂಚನೈಃ ।
ಚತ್ವಾರಃ ಸಾಗರಾಶ್ಚೈವ ಕಲ್ಪಯೇದ್ರಾಜಸತ್ತಮ ॥ ೧೨ ॥

ತನ್ಮಧ್ಯೇ ಪ್ರಾಗ್ವಿಧಾನೇನ ಸೌವರ್ಣಂ ಸ್ಥಾಪಯೇದ್ಧರಿಂ ॥ ೧೩ ॥

ಯೋಗೀಶ್ವರಂ ಯೋಗಿಗಮ್ಯಂ ಪೀತಾಂಬರಧರಂ ವಿಭುಂ ।
ಏವಂ ಸಂಪೂಜ್ಯ ವಿಧಿವಜ್ಜಾಗರಂ ತತ್ರ ಕಾರಯೇತ್ ॥ ೧೪ ॥

ಕುರ್ಯಾಚ್ಚ ವೈಷ್ಣವಂ ಯಜ್ಞಂ ಯಜೇದ್ಯೋಗೀಶ್ವರಂ ಹರಿಂ ।
ಷೋಡಶಾರೇ ತಥಾಚಕ್ರೇ ಯೋಗಿಭಿರ್ಬಹುಭಿಃ ಕೃತೇ ॥
ಏವಂ ಕೃತ್ವಾ ಪ್ರಭಾತೇಷು ಬ್ರಾಹ್ಮಣಾಯ ನಿವೇದಯೇತ್ ॥ ೧೫ ॥

ಚತ್ವಾರಸ್ಸಾಗರಾ ದೇಯಾಶ್ಚತುರ್ಣಾಂ ಪಂಚಮಸ್ಯ ಚ ।
ಯೋಗೀಶ್ವರಂ ತು ದೇವೇಶಂ ದದ್ಯಾತ್ಶ್ರುಯತಮಾನಸಃ ॥ ೧೬ ॥

---

೧೨. ರಾಜೋತ್ತಮನೇ, ಎಳ್ಳಿನಿಂದ ತುಂಬಿದ ಸುವರ್ಣನಾಣ್ಯಗಳುಳ್ಳ ತಾಮ್ರದ ಪಾತ್ರೆಗಳನ್ನು ಕಲಶಗಳಮೇಲೆ ಇಟ್ಟು, ಆ ನಾಲ್ಕು ಕಲಶಗಳನ್ನೇ ಆ ನಾಲ್ಕು ಸಮುದ್ರಗಳೆಂದು ಭಾವಿಸಬೇಕು.

೧೩. ಆ ನಾಲ್ಕುಕಲಶಗಳ ನಡುವೆ ಹಿಂದಿನ ಕ್ರಮದಲ್ಲಿಯೇ ಸುವರ್ಣದ ಹರಿಮೂರ್ತಿಯನ್ನು ಸ್ಥಾಪಿಸಬೇಕು.

೧೪. ಯೋಗೀಶ್ವರನೂ, ಯೋಗಿಗಳಿಗೆ ಗೋಚರನೂ, ಪೀತಾಂಬರಧಾರಿಯೂ ಆದ ಆ ಪ್ರಭುವನ್ನು ಹೀಗೆ ವಿಧ್ಯುಕ್ತವಾಗಿ ಪೂಜಿಸಿ, (ಏಕಾದಶಿಯಾದ ಆ ರಾತ್ರಿ) ಅಲ್ಲಿಯೇ ಜಾಗರಣೆಯನ್ನು ಮಾಡಬೇಕು.

೧೫. ಹಲವರು ಯೋಗಿಗಳು ಮಾಡಿರುವಂತೆ ಹದಿನಾರು ಅರಗಳುಳ್ಳ ಚಕ್ರವನ್ನು ರಚಿಸಿ, ಅದರಲ್ಲಿ ವಿಷ್ಣುಸಂಬಂಧವಾದ ಯಜ್ಞವನ್ನು ಮಾಡಬೇಕು. ಯೋಗೀಶ್ವರನಾದ ಆ ಹರಿಯನ್ನು ಪೂಜಿಸಬೇಕು. ನಿಯಮದಂತೆ ಪೂಜಿಸಿ, ಆ ರಾತ್ರಿಯು ಕಳೆದು ಬೆಳಗಾಗುತ್ತಲೇ ಬ್ರಾಹ್ಮಣನಿಗೆ ಅರ್ಪಿಸಬೇಕು.

೧೬. ನಾಲ್ಕು ಸಾಗರಗಳೆಂದು ಭಾವಿಸಿದ ಕಲಶಗಳನ್ನು ನಾಲ್ಕುಜನ ಬ್ರಾಹ್ಮಣರಿಗೆ ಕೊಟ್ಟು, ಯೋಗೀಶ್ವರನಾದ ದೇವನನ್ನು ಐದನೆಯ ಬ್ರಾಹ್ಮಣನಿಗೆ ಪರಿಶುದ್ಧವಾದ ಮನಸ್ಸುಳ್ಳವನಾಗಿ ಅರ್ಪಿಸಬೇಕು.

ವೇದಾರ್ಥಂ ತು ಸಮಂ ದತ್ತಂ ದ್ವಿಗುಣಂ ದದ್ವಿದೇ ತಥಾ ।
ಆಚಾರ್ಯೇ ಪಂಚರಾತ್ರಾಣಾಂ ಸಹಸ್ರಗುಣಿತಂ ಭವೇತ್ ॥ ೧೭ ॥

ಯಸ್ತ್ವಿಮಂ ಸರಹಸ್ಯಂತು ಸಮಂತ್ರಂ ಚೋಪಪಾದಯೇತ್ ।
ವಿಧಾನಂ ತಸ್ಯ ವೈ ದತ್ತಂ ಕೋಟಿಕೋಟಿಗುಣೋತ್ತರಂ ॥ ೧೮ ॥

ಗುರೌ ಸತಿತು ಯಶ್ಚಾನ್ಯಂ ಆಶ್ರಯೇತ್ಪೂಜಯೇತ್ಕುಧೀಃ ।
ಸ ದುರ್ಗತಿಮವಾಪ್ನೋತಿ ದತ್ತಮಸ್ಯಚ ನಿಷ್ಫಲಂ ॥ ೧೯ ॥

ಪ್ರಯತ್ನೇನ ಗುರೌ ಪೂರ್ವಂ ಪಶ್ಚಾದನ್ಯಸ್ಯ ದಾಪಯೇತ್ ॥ ೨೦ ॥

ಅವಿದ್ಯೋ ವಾ ಸವಿದ್ಯೋ ವಾ ಗುರುರೇವ ಜನಾರ್ದನಃ ।
ಮಾರ್ಗಸ್ಥೋ ವಾಪ್ಯಮಾರ್ಗಸ್ಥೋ ಗುರುರೇವ ಪರಾಗತಿಃ ॥ ೨೧ ॥

---

೧೭. ವೇದಕ್ಕೆಂದು ಕೊಡುವುದರ ಎರಡರಷ್ಟು ಗುಣವು ವೇದವನ್ನು ತಿಳಿದವನಿಗೆ ಕೊಟ್ಟರೆ ಆಗುವುದು.

೧೮. ಯಾರು ಈ ವ್ರತದ ರಹಸ್ಯವನ್ನೂ, ವಿಧಾನವನ್ನೂ ಸಮಂತ್ರಕವಾಗಿ ಹೇಳುವನೋ ಅವನಿಗೆ ಕೊಟ್ಟರೆ ಕೋಟಿಯಷ್ಟು ಫಲವಾಗುವುದು.

೧೯. ಗುರುವಿದ್ದರೂ, ಕೆಟ್ಟಬುದ್ಧಿಯುಳ್ಳ ಯಾರು ಬೇರೆಯವನನ್ನು ಆಶ್ರಯಿಸುವನೋ, ಪೂಜಿಸುವನೋ, ಅವನು ದುರ್ಗತಿಯನ್ನು ಪಡೆಯುವನು. ಅವನು ಕೊಟ್ಟುದೂ ನಿಷ್ಫಲವಾಗುವುದು.

೨೦. ಆದುದರಿಂದ ಮೊದಲು ಗುರುವಿಗೆ ಕೊಟ್ಟು, ಆಮೇಲೆ ಬೇರೆಯವನಿಗೆ ಕೊಡಬೇಕು.

೨೧. ಅವಿದ್ಯಾವಂತನಾಗಲಿ, ವಿದ್ಯಾವಂತನಾಗಲಿ, ಗುರುವೇ ಜನಾರ್ದನನು (ಎಂದರೆ ದೇವರು). ಸನ್ಮಾರ್ಗದಲ್ಲಿರುವನಾಗಲಿ, ಅಮಾರ್ಗದಲ್ಲಿರುವನಾಗಲಿ ಗುರುವೇ ಉತ್ತಮವಾದ ಗತಿ.

ಪ್ರತಿಪದ್ಯ ಗುರುಂ ಯಸ್ತು ಮೋಹಾದ್ವಿಪ್ರತಿಪದ್ಯತೇ ।
ಯುಗಕೋಟಿಂ ಸ ನರಕೇ ಪಚ್ಯತೇ ಪುರುಷಾಧಮಃ ॥ ೨೨ ॥

ಏವಂ ದತ್ವಾ ವಿಧಾನೇನ ದ್ವಾದಶ್ಯಾಂ ವಿಷ್ಣುಮರ್ಚ್ಯ ಚ ।
ವಿಪ್ರಾಣಾಂ ಭೋಜನಂ ದದ್ಯಾದ್ಯಥಾಶಕ್ತಿ ಸದಕ್ಷಿಣಂ ॥ ೨೩ ॥

ಧರಣೀವ್ರತಮೇತದ್ಧಿ ಪುರಾಕೃತ್ವಾ ಪ್ರಜಾಪತಿಃ ।
ಪ್ರಾಜಾಪತ್ಯಂ ತಥಾ ಲೇಭೇ ಮುಕ್ತಿಂ ಬ್ರಹ್ಮ ಚ ಶಾಶ್ವತಂ ॥ ೨೪ ॥

ತಥಾ ಚ ಹೈಹಯೋ ರಾಜಾ ಕೃತವೀರ್ಯೋ ನರಾಧಿಪಃ ।
ಕಾರ್ತವೀರ್ಯಂ ಸುತಂ ಲೇಭೇ ಪರಂ ಬ್ರಹ್ಮ ಚ ಶಾಶ್ವತಂ ॥ ೨೫ ॥

---

೨೨. ಯಾರು ಗುರುವನ್ನು ಪಡೆದೂ, ಅಜ್ಞಾನದಿಂದ ಅವನನ್ನು ಗೌರವಿಸದಿರುವನೋ ಆ ಪುರುಷಾಧಮನು ಕೋಟಿಯುಗಗಳಕಾಲ ನರಕದಲ್ಲಿ ಬೇಯುವನು.

೨೩. ಹೀಗೆ ದ್ವಾದಶಿಯಲ್ಲಿ ವಿಷ್ಣುವನ್ನು ಪೂಜಿಸಿ, ಮೇಲೆ ಹೇಳಿದಂತೆ ಕಲಶಾದಿಗಳನ್ನು ಬ್ರಾಹ್ಮಣರಿಗೆ ಅರ್ಪಿಸಿ, ತನ್ನ ಶಕ್ತಿಗನುಸಾರವಾಗಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ, ದಕ್ಷಿಣೆಯನ್ನೂ ಕೊಡಬೇಕು.

೨೪. ಪೂರ್ವದಲ್ಲಿ ಬ್ರಹ್ಮನು, ಭೂದೇವಿಯು ಮಾಡಿದ ಈ ವ್ರತವನ್ನು ತಾನೂ ಮಾಡಿ, ಪ್ರಜಾಧಿಪತ್ಯವನ್ನು ಪಡೆದನು. ಮುಕ್ತಿಯೆಂಬ ಶಾಶ್ವತಬ್ರಹ್ಮನನ್ನೂ ಪಡೆದನು.

೨೫. ಹಾಗೆಯೇ ಹೈಹಯರಾಜನಾದ ಕೃತವೀರ್ಯನು ಈ ವ್ರತದಿಂದ ಕಾರ್ತವೀರ್ಯಾರ್ಜುನನೆಂಬ ಮಗನನ್ನೂ, ಶಾಶ್ವತಪರಬ್ರಹ್ಮವನ್ನೂ ಪಡೆದನು.

ಶಕುಂತಲಾಪ್ಯೇವಮೇವ ವ್ರತಂ ಕೃತ್ವಾ ಮಹಾಮತೇ ।
ಲೇಭೇ ಚ ಭರತಂ ಪುತ್ರಂ ದೌಷ್ಯಂತಂ ಚಕ್ರವರ್ತಿನಂ ॥ ೨೬ ॥

ತಥಾತೀತಾಶ್ಚ ರಾಜಾನೋ ವೇದೋಕ್ತಾಶ್ಚಕ್ರವರ್ತಿನಃ ।
ಅನೇನ ವಿಧಿನಾ ಪ್ರಾಪ್ತಾಶ್ಚಕ್ರವರ್ತಿತ್ವಮುತ್ತಮಂ ॥ ೨೭ ॥

ಧರಣ್ಯಾ ಚಾಪಿ ಪಾತಾಲೇ ಮಗ್ನಯಾ ಚ ಪುರಾಕೃತಂ ।
ವ್ರತಮೇತತ್ತತೋ ನಾಮ್ನಾ ಧರಣೀವ್ರತಮುತ್ತಮಂ ॥ ೨೮ ॥

ಸಮಾಪ್ತೇಽಸ್ಮಿನ್ ಧರಾದೇವೀ ಹರಿಣಾ ಕ್ರೋಡಮೂರ್ತಿನಾ ।
ಉದ್ಧೃತಾ ಚಾಪಿ ತುಷ್ಟೇನ ಸ್ಥಾಪಿತಾ ನೌರಿವಾಂಭಸಿ ॥ ೨೯ ॥

ಧರಣೀವ್ರತಮೇತದ್ಧಿ ಕೀರ್ತಿತಂ ತೇ ಮಯಾ ಮುನೇ ॥ ೩೦ ॥

---

೨೬. ಶಕುಂತಲೆಯು ಹೀಗೆಯೇ ವ್ರತವನ್ನು ಮಾಡಿ, ಚಕ್ರವರ್ತಿಯಾದ ಭರತನನ್ನು ದುಷ್ಯಂತನಿಂದ ಮಗನನ್ನಾಗಿ ಪಡೆದಳು.

೨೭. ಅಲ್ಲದೆ, ಗತಿಸಿದ ಹಲವರು ರಾಜರೂ, ವೇದದಲ್ಲಿ ಹೇಳಿರುವ ಚಕ್ರ ವರ್ತಿಗಳೂ' ಈ ವ್ರತದಿಂದ ಉತ್ತಮವಾದ ಚಕ್ರವರ್ತಿತ್ವವನ್ನು ಪಡೆದರು.

೨೮. ಪಾತಾಳದಲ್ಲಿ ಮುಳುಗಿದ್ದ ಧರಣೀದೇವಿ(ಭೂದೇವಿ)ಯು ಪೂರ್ವ ದಲ್ಲಿ ಉತ್ತಮವಾದ ಈ ವ್ರತವನ್ನು ಮಾಡಿದಳು. ಆದುದರಿಂದಲೇ ಇದಕ್ಕೆ ಧರಣೀವ್ರತವೆಂದು ಹೆಸರಾಯಿತು.

೨೯. ಈವ್ರತವು ನೆರವೇರಲು (ಮುಗಿಯಲು), ವರಾಹರೂಪಿಯಾದ ಹರಿಯು ತೃಪ್ತನಾಗಿ ಭೂದೇವಿಯನ್ನು ಉದ್ಧರಿಸಿ, ಸಮುದ್ರದಲ್ಲಿ ಹಡಗಿನಂತೆ ನಿಲ್ಲಿಸಿದನು.

೩೦. ಮಹಾಮುನಿಯೇ, ಈ ಧರಣೀವ್ರತವನ್ನು ನಾನು ನಿನಗೆ ಹೇಳಿದ್ದೇನೆ.

ಯ ಇದಂ ಶೃಣುಯಾದ್ಭಕ್ತ್ಯಾ ಯಶ್ಚ ಕುರ್ಯಾನ್ನರೋತ್ತಮಃ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಸಾಯುಜ್ಯಮಾಪ್ನುಯಾತ್ ॥ ೩೧ ॥

ಇತಿ ಶ್ರೀವರಾಹಪುರಾಣೇ ಧರಣೀವ್ರತಂ ನಾಮ
ಪಂಚಾಶೋಧ್ಯಾಯಃ

---

೩೧. ಇದನ್ನು ಕೇಳುವ ಮತ್ತು ಮಾಡುವ ಉತ್ತಮ ಮನುಷ್ಯನು ಪಾಪವೆಲ್ಲವನ್ನೂ ಕಳೆದುಕೊಂಡು, ವಿಷ್ಣುಸಾಯುಜ್ಯವನ್ನು ಪಡೆಯುವನು.

ಅಧ್ಯಾಯದ ಸಾರಾಂಶ:—

ದುರ್ವಾಸಋಷಿಯು ಸತ್ಯತಪನಿಗೆ, ಭೂದೇವಿಯು ಮಾಡಿದ ಧರಣೀವ್ರತವೆಂಬ ಹೆಸರಿನ ದಾಮೋದರದ್ವಾದಶೀವ್ರತವನ್ನು ಉಪದೇಶಿಸುತ್ತ, ಅದೇ ವ್ರತವನ್ನು ಬ್ರಹ್ಮನೂ, ಕೃತವೀರ್ಯನೆಂಬ ರಾಜನೂ, ಶಕುಂತಲೆಯೂ, ಬೇರೆಯ ಹಲವರು ರಾಜರೂ ಮಾಡಿ, ತಮ್ಮ ಇಷ್ಟಾರ್ಥಗಳನ್ನೂ ಮುಕ್ತಿಯನ್ನೂ ಪಡೆದರೆಂದು ಹೇಳಿದನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಐವತ್ತನೆಯ ಅಧ್ಯಾಯ.

॥ ಶ್ರೀಃ ॥

-x-

ಏಕಪಂಚಾಶೋಽಧ್ಯಾಯಃ

ಅಥ ಅಗಸ್ತ್ಯಗೀತಾರಭ್ಯತೇ

॥ ಶ್ರೀವರಾಹ ಉವಾಚ ॥

ಶ್ರುತ್ವಾ ದುರ್ವಾಸಸೋ ವಾಕ್ಯಂ ಧರಣೀವ್ರತಮುತ್ತಮಂ ।
ಯಯೌ ಸತ್ಯತಪಾಃ ಸದ್ಯೋ ಹಿಮವತ್ಪಾರ್ಶ್ವಮುತ್ತಮಂ ॥ ೧ ॥

ಪುಷ್ಪಭದ್ರಾ ನದೀ ಯತ್ರ ಶಿಲಾ ಚಿತ್ರಶಿಲಾ ತಥಾ ।
ವಟೋ ಭದ್ರವಟೋ ಯತ್ರ ತತ್ರ ತಸ್ಯಾಶ್ರಮೋ ಬಭೌ ।
ತತ್ರೋಪರಿ ಮಹತ್ತಸ್ಯ ಚರಿತಂ ಸಂಭವಿಷ್ಯತಿ ॥ ೨ ॥

॥ ಧರಣ್ಯುವಾಚ ॥

ಬಹುಕಲ್ಪಸಹಸ್ರಾಣಿ ವ್ರತಸ್ಯಾಸ್ಯ ಸನಾತನ ।
ಮಯಾಕೃತಸ್ಯ ತಪಸಸ್ತನ್ಮಯಾ ವಿಸ್ಮೃತಂ ಪ್ರಭೋ ॥ ೩ ॥

ಐವತ್ತೊಂದನೆಯ ಅಧ್ಯಾಯ

ಅಗಸ್ತ್ಯಗೀತೆ

೧. ಶ್ರೀವರಾಹ—ಸತ್ಯತಪನು, ದುರ್ವಾಸಮುನಿಯು ಹೇಳಿದ ಮಾತನ್ನೂ ನಿನ್ನ ಉತ್ತಮವಾದ ವ್ರತವನ್ನೂ ಕೇಳಿ, ಒಡನೆಯೇ ಒಳ್ಳೆಯದಾದ ಹಿಮಾಲಯ ಪರ್ವತದ ತಪ್ಪಲಿಗೆ ಹೊರಟು ಹೋದನು.

೨. ಎಲ್ಲಿ ಪುಷ್ಪಭದ್ರೆಯೆಂಬ ನದಿಯು ಹರಿಯುವುದೋ, ವಿಚಿತ್ರತರವಾದ ಕಲ್ಲುಬಂಡೆಗಳಿರುವುವೋ, ಭದ್ರವಟವೆಂಬ ಆಲದಮರವಿರುವುದೋ ಆ ಯೆಡೆಯಲ್ಲಿ ಅವನ ಆಶ್ರಮವು ಪ್ರಕಾಶಿಸುತ್ತಿತ್ತು ಅಲ್ಲಿ ಅವನ ಮುಂದಿನ ಚರಿತ್ರೆಯು ದೊಡ್ಡದಾಗುವುದು.

೩. ಭೂದೇವಿ—ಸನಾತನ, ಪ್ರಭುವೇ, ನಾನು ಈ ವ್ರತವನ್ನೂ ತಪಸ್ಸನ್ನೂ ಮಾಡಿ, ಅನೇಕ ಸಹಸ್ರಕಲ್ಪಗಳಾದುದರಿಂದ ನನಗೆ ಮರೆತು ಹೋಗಿದ್ದಿತು.

ಇದಾನೀಂ ತ್ವತ್ಪ್ರಸಾದೇನ ಪ್ರಾಕ್ತನಂ ಸ್ಮಾರಿತಂ ಮಮ ॥ ೪ ॥

ಜಾತಂ ಜಾತಿಸ್ಮರತ್ವಂ ಚ ವಿಶೋಕಾ ಪರಮೇಶ್ವರ ॥ ೫ ॥

ಯದಿ ನಾಮ ಪರಂ ದೇವ ಕೌತುಕಂ ಹೃದಿವರ್ತತೇ ।
ಅಗಸ್ತ್ಯಃ ಪುನರಾಗತ್ಯ ಭದ್ರಾಶ್ವಸ್ಯ ನಿವೇಶನಂ ॥
ಯಚ್ಚಕಾರ ಸ ರಾಜಾ ತು ತನ್ಮಮಾಚಕ್ಷ್ವ ಭೂಧರ ॥ ೬ ॥

॥ ಶ್ರೀವರಾಹ ಉವಾಚ ॥

ಪ್ರತ್ಯಾಗತಮೃಷಿಂ ದೃಷ್ಟ್ವಾ ಭದ್ರಾಶ್ವಃ ಶ್ವೇತವಾಹನಃ ।
ವೀರಾಸನಗತಂ ದೃಷ್ಟ್ವಾ ಕೃತ್ವಾ ಪೂಜಾಂ ವಿಶೇಷತಃ ।
ಅಪೃಚ್ಛನ್ಮೋಕ್ಷಧರ್ಮಾಖ್ಯಂ ಪ್ರಶ್ನಂ ಸಕಲಧಾರಿಣಿ ॥ ೭ ॥

॥ ಭದ್ರಾಶ್ವ ಉವಾಚ ॥

ಭಗವನ್ಕರ್ಮಣಾ ಕೇನ ಛಿದ್ಯತೇ ಭವಸಂತತಿಃ ।
ಕಿಂ ವಾ ಕೃತ್ವಾ ನ ಶೋಚಂತಿ ಮೂರ್ತಾಮೂರ್ತೋಪಪತ್ತಿಷು ॥ ೮ ॥

---

೪. ಈಗ ನಿನ್ನ ಅನುಗ್ರಹದಿಂದ ಹಿಂದಿನದು ನನಗೆ ಜ್ಞಾಪಕಕ್ಕೆ ಬಂದಿತು.

೫. ಜನ್ಮಾಂತರಸ್ಮರಣೆಯೂ ಉಂಟಾಯಿತು. ನಾನು ದುಃಖವಿಲ್ಲದವಳಾದೆನು.

೬. ಪರಮೇಶ್ವರನೇ, ಭೂಧರನೇ, ದೇವನೇ, ನಿನಗೆ ಮನಸ್ಸಿನಲ್ಲಿ ಕುತೂಹಲವು ಅಧಿಕವಾಗಿದ್ದರೆ, ಅಗಸ್ತ್ಯನು ಭದ್ರಾಶ್ವರಾಜನ ಅರಮನೆಗೆ ಮತ್ತೆ ಬಂದು ಏನುಮಾಡಿದನು? ರಾಜನೇನು ಮಾಡಿದನು? ಅದನ್ನು ನನಗೆ ಹೇಳು.

೭. ಶ್ರೀವರಾಹ—ಸಕಲಧಾರಿಣಿ, ಬಿಳಿಯವಾದ ವಾಹನಗಳುಳ್ಳ ಆ ಭದ್ರಾಶ್ವನು, ಪುಷ್ಕರತೀರ್ಥಕ್ಕೆ ಹೋಗಿ ಮತ್ತೆ ಬಂದ ಅಗಸ್ತ್ಯಋಷಿಯನ್ನು ಕಂಡು, ವೀರಾಸನದಲ್ಲಿ ಕುಳ್ಳಿರಿಸಿ, ವಿಶೇಷವಾಗಿ ಪೂಜಿಸಿ, ಮೋಕ್ಷಧರ್ಮವೆಂಬ ಪ್ರಶ್ನೆಯನ್ನು ಕೇಳಿದನು.

೮. ಭದ್ರಾಶ್ವ—ಪೂಜ್ಯನೇ, ಯಾವ ಕರ್ಮದಿಂದ ಅಥವಾ ಏನು ಮಾಡಿದರೆ ಜನ್ಮಪರಂಪರೆಯು ಕತ್ತರಿಸಿ ಹೋಗುವುದು? ಅಥವಾ ಏನುಮಾಡಿದರೆ ದೇಹಸಂಬಂಧವನ್ನು ಪಡೆದಿರುವಾಗಲೂ, ದೇಹಸಂಬಂಧವಿಲ್ಲದಿರುವಾಗಲೂ ಆತ್ಮನು ದುಃಖಿಸುವುದಿಲ್ಲ?

॥ ಅಗಸ್ತ್ಯ ಉವಾಚ ॥

ಶೃಣುರಾಜನ್ಕಥಾಂ ದಿವ್ಯಾಂ ದುರಾಸನ್ನವ್ಯವಸ್ಥಿತಾಂ ।
ದೃಶ್ಯಾದೃಶ್ಯವಿಭಾಗೋತ್ಥಾಂ ಸಮಾಹಿತಮನಾ ನೃಪ ॥ ೯ ॥

ನಾಹೋ ನರಾತ್ರಿರ್ನದೃಶೋ ದಿಶಶ್ಚ
ನ ದ್ಯೌರ್ನದೇವಾ ನದಿನಂ ನಸೂರ್ಯಃ ।
ತಸ್ಮಿನ್ಕಾಲೇ ಪಶುಪಾಲೇತಿ ರಾಜಾ
ಸ ಪಾಲಯಾಮಾಸ ಪಶೂನನೇಕಾನ್ ॥ ೧೦ ॥

ತಾನ್ಪಾಲಯನ್ಸಕದಾಚಿದ್ದಿದೃಕ್ಷುಃ
ಪೂರ್ವಂ ಸಮುದ್ರಂ ಚ ಜಗಾಮ ತೂರ್ಣಂ ।
ಅನಂತಪಾರಸ್ಯ ಮಹೋದಧೇಸ್ತು
ತೀರೇ ವನಂ ತತ್ರ ವಸಂತಿ ಸರ್ಪಾಃ ॥ ೧೧ ॥

---

೯. ಅಗಸ್ತ್ಯಮುನಿ—ದೊರೆಯೇ, ಕಷ್ಟದಿಂದ ತಿಳಿದುಕೊಳ್ಳಬೇಕಾದ ರೀತಿಯಲ್ಲಿರುವ, ಕಣ್ಣಿಗೆ ಕಾಣಿಸುವ ಮತ್ತು ಕಾಣಿಸದಿರುವ ಬಗೆಯಿಂದುಂಟಾಗಿರುವ ದಿವ್ಯವಾದ ಕಥೆಯನ್ನು ಗಮನವಿಟ್ಟು ಕೇಳು.

೧೦. ಹಗಲುರಾತ್ರಿಗಳಾಗಲಿ, ಕಣ್ಣುಗಳಾಗಲಿ, ದಿಕ್ಕುಗಳಾಗಲಿ, ಆಕಾಶವಾಗಲಿ, ದೇವತೆಗಳಾಗಲಿ, ಬೆಳಕಾಗಲಿ, ಸೂರ್ಯನೇ ಆಗಲಿ ಇಲ್ಲದಿದ್ದಾಗ ಪಶುಪಾಲನೆಂಬ ದೊರೆಯು ಅನೇಕ ಪಶುಗಳನ್ನು ಕಾಪಾಡುತ್ತಿದ್ದನು.

೧೧. ಅವುಗಳನ್ನು ಕಾಯುತ್ತಿದ್ದ ಅವನು ಒಂದಾನೊಂದುವೇಳೆ, ನೋಡಲು ಬಯಸಿ ಪೂರ್ವಸಮುದ್ರಕ್ಕೆ ಬೇಗನೆ ಹೋದನು. ಅಪಾರವಾದ ಆ ಮಹಾಸಮುದ್ರತೀರದಲ್ಲಾದರೋ ಒಂದು ವನ. ಅಲ್ಲಿ ಸರ್ಪಗಳು ವಾಸಿಸುತ್ತಿದ್ದುವು.

ಅಷ್ಟೌದ್ರುಮಾಃ ಕಾಮವಹಾನದೀ ಚ
ತಿರ್ಯಕ್ಚೋರ್ಧ್ವಂ ಬಭ್ರಮುಸ್ತತ್ರ ಚಾನ್ಯೇ ।
ಪಂಚಪ್ರಧಾನಾಃ ಪುರುಷಾಸ್ತಥೈಕಃ
ಸ್ತ್ರಿಯಂ ಬಿಭ್ರತೇ ತೇಜಸಾ ದೀಪ್ಯಮಾನಾಂ ॥ ೧೨ ॥

ಸಾಪಿ ಸ್ತ್ರೀ ಸ್ವೇ ವಕ್ಷಸಿ ಧಾರಯಂತೀ
ಸಹಸ್ರಸೂರ್ಯಪ್ರತಿಮಂ ವಿಶಾಲಂ ।
ತಸ್ಯಾಧರಸ್ತ್ರಿವಿಕಾರಸ್ತ್ರಿವರ್ಣಃ
ತಂ ರಾಜಾನಂ ಪಶ್ಯ ಪರಿಭ್ರಮಂತಂ ॥ ೧೩ ॥

ತೂಷ್ಣೀಭೂತಾ ಮೃತಕಲ್ಪಾ ಇವಾಸನ್
ನೃಪೋಽಪ್ಯಸೌ ತದ್ವನಂ ಸಂವಿವೇಶ ।
ತಸ್ಮಿನ್ಪ್ರವಿಷ್ಟೇ ವಿವಿಶುಃ ಸರ್ವ ಏತೇ
ಭಯಾದೈಕ್ಯಂಗತವಂತಃ ಕ್ಷಣೇನ ॥ ೧೪ ॥

---

೧೨. ಅಲ್ಲಿ ಎಂಟು ಮರಗಳು. ಇಷ್ಟದಂತೆ ಹರಿಯುವ ನದಿ. ಜೇರೆ ಐದು ಜನ ಮುಖ್ಯಪುರುಷರು. ಪಕ್ಕಗಳಿಗೂ ಮೇಲಕ್ಕೂ ತಿರುಗುತ್ತಿದ್ದರು. ಅವರಲ್ಲಿ ಒಬ್ಬನು ತೇಜಸ್ಸಿನಿಂದ ಹೊಳೆಯುತ್ತಿರುವ ಸ್ತ್ರೀಯನ್ನು ಧರಿಸಿದ್ದನು.

೧೩-೧೪. ಆ ವನಿತೆಯಾದರೋ, ಸಹಸ್ರಸೂರ್ಯರಿಗೆ ಸಮವಾದ ವಿಶಾಲವಾದ ಸ್ತನಗಳುಳ್ಳವಳಾಗಿದ್ದಳು. ಅವಳನ್ನು ಹಿಡಿದುಕೊಂಡಿದ್ದವನು ಮೂರು ಬಗೆಯ ವಿಕಾರಗಳೂ, ಮೂರು ಬಣ್ಣಗಳೂ ಉಳ್ಳ ಪುರುಷನು. ಅವರೆಲ್ಲರೂ, ಅಲ್ಲಿ ಸಂಚರಿಸುತ್ತಿದ್ದ ದೊರೆಯನ್ನು ನೋಡಿ, ಮೌನದಿಂದ ಸತ್ತವರಂತೆ ಇದ್ದರು. ದೊರೆಯು ಆ ವನಕ್ಕೆ ಹೋಗಿಯೇ ಬಿಟ್ಟನು. ಅವನು ಪ್ರವೇಶಿಸಲು ಆ ಸರ್ಪಗಳು ಹೆದರಿಕೆಯಿಂದ ಸ್ವಲ್ಪಹೊತ್ತಿನಲ್ಲಿಯೇ ಒಟ್ಟಿಗೆ ಸೇರಿಕೊಂಡುವು.

ತೈಃ ಸರ್ಪೈಸ್ಸ ನೃಪೋ ದುರ್ವಿನೀತೈಃ
ಸಂವೇಷ್ಟಿತೋ ದಸ್ಯುಭಿಶ್ಚಿಂತಯಾನಃ ।
ಕಥಂ ಚೈತೇ ನ ಭವಿಷ್ಯಂತಿ ಯೇನ
ಕಥಂ ಚೈತೇ ಸಂಸ್ಮೃತಾಸ್ಸಂಭವೇಯುಃ || ೧೫ ||

ಏವಂ ರಾಜ್ಞಶ್ಚಿಂತಯತಸ್ತ್ರಿವರ್ಣಃ ಪುರುಷೋಽಪರಃ ।
ಶ್ವೇತಂ ರಕ್ತಂ ತಥಾಪೀತಂ ತ್ರಿವರ್ಣಂ ಧಾರಯನ್ನರಃ || ೧೬ ||

ಸ ಸಂಜ್ಞಾಂ ಕೃತವಾನ್ಮಹ್ಯಮುಪರೋಧ ಕ್ವಯಾಸ್ಯಸಿ ।
ಏವಂ ತಸ್ಯಬ್ರುವಾಣಸ್ಯ ಮಹಸ್ನಾಮ ವ್ಯಜಾಯತ || ೧೭ ||

ತೇನಾಪಿ ರಾಜಾ ಸಂವೀತಃ ಸ ಬುಧ್ಯಸ್ವೇತಿ ಚಾಬ್ರವೀತ್ ।
ಏವಮುಕ್ತೇ ತತಃಸ್ತ್ರೀತು ತಂ ರಾಜಾನಂ ರುರೋಧ ಹ || ೧೮ ||

---

೧೫. ಕೆಟ್ಟವೂ, ಹಗೆಗಳೂ ಆದ ಆ ಹಾವುಗಳು ರಾಜನನ್ನು ಸುತ್ತಿಕೊಂಡುವು. ರಾಜನು ಇವು ಇಲ್ಲದಂತಾಗುವುದು ಅಥವಾ ಇವುಗಳಿಂದ ತಪ್ಪಿಸಿಕೊಳ್ಳುವುದು ಹೇಗೆ? ಇವುಗಳ ಸ್ಮರಣೆಯೂ ಬಾರದಂತಾಗುವುದು ಹೇಗೆ? ಎಂದು ಚಿಂತಿಸುತ್ತಿದ್ದನು.

೧೬–೧೭. ರಾಜನು ಹಾಗೆ ಚಿಂತಿಸುತ್ತಿರಲು, ಬಿಳುಪು, ಕೆಂಪು, ಹಳದಿಗಳೆಂಬ ಮೂರು ಬಣ್ಣಗಳನ್ನು ಧರಿಸಿರುವ ಮತ್ತೊಬ್ಬ ಮನುಷ್ಯನು, ರಾಜನನ್ನು "ನನ್ನಿಂದ ತಪ್ಪಿಸಿಕೊಂಡು, ಎಲ್ಲಿ ಹೋಗುವೆ?" ಎಂದು ಕೈಸನ್ನೆಯಿಂದ ಕೇಳಿದನು. ಹಾಗೆ ಕೇಳುತ್ತಿದ್ದ ಅವನಿಂದ ಮಹತ್ತೆಂಬ ಹೆಸರಿನ ಮತ್ತೊಬ್ಬನುದಿಸಿದನು.

೧೮. ಅವನೂ ದೊರೆಯನ್ನು ಸುತ್ತಿಕೊಂಡು, "ತಿಳಿದುಕೋ(ಎಚ್ಚರಗೊಳ್ಳು)" ಎಂದು ಹೇಳಿದನು. ಅವನು ಹಾಗೆ ಹೇಳಲು ಬಳಿಕ ಆ ಸ್ತ್ರೀಯೂ ರಾಜನನ್ನು ತಡೆದಳು.

ಮಾಯಾತತಂ ತಂ ಮಾಭೈಷ್ಟ ತತೋಽನ್ಯಃ ಪುರುಷೋ ನೃಪಂ ।
ಸಂವೇಷ್ಟ್ಯಾಸ್ಥಿತವಾನ್ವೀರಸ್ತತಸ್ಸರ್ವೇಶ್ವರೇಶ್ವರಃ ॥ ೧೯ ॥

ತತೋಽನ್ಯೇ ಪಂಚಪುರುಷಾ ಆಗತ್ಯ ನೃಪಸತ್ತಮಂ ।
ಸಂವೇಷ್ಟ್ಯ ಸಂಸ್ಥಿತಾಸ್ಸರ್ವೇ ತತೋ ರಾಜಾಽವರೋಧಿತಃ ॥ ೨೦ ॥

ರುಧ್ವಾ ರಾಜನ್ನಿತಃ ಸರ್ವೇ ಏಕೀಭೂತಾಸ್ತು ದಸ್ಯವಃ ।
ಮಥಿತಂ ಶಸ್ತ್ರಮಾದಾಯ ಲಿನಾನ್ಯೋಽನ್ಯಂ ತತೋಭಯಾತ್ ॥ ೨೧ ॥

ತೈರ್ಲೀನೈರ್ನೃಪತೇರ್ವೇಶ್ಮ ಬಭೌ ಪರಮಶೋಭನಂ ।
ಅನ್ಯೇಷಾಮಪಿ ಪಾಪಾನಾಂ ಕೋಟಿಸ್ಸಾಗ್ರಾಭವನ್ನೃಪ ॥ ೨೨ ॥

ಗೃಹೇ ಭೂಃ ಸಲಿಲಂ ವಹ್ನಿಃ ಸುಖಶೀತಶ್ಚ ಮಾರುತಃ ।
ಸಾವಕಾಶಾನಿ ಶುಭ್ರಾಣಿ ಪಂಚೈಕ್ಯೇ ಸುಗುಣಾನಿ ಚ ॥ ೨೩ ॥

---

೧೯. ಬಳಿಕ ಸರ್ವೇಶ್ವರೇಶ್ವರನು ಮತ್ತೊಬ್ಬ ವೀರಪುರುಷನಾಗಿ ಬಂದು ಮಾಯಾವೃತನಾದ ಆ ರಾಜನನ್ನು ಹೆದರಬೇಡವೆಂದು, ಮರೆಹಾಕಿಕೊಂಡು (ವಹಿಸಿಕೊಂಡು)ನಿಂತನು.

೨೦. ಆಮೇಲೆ ಬೇರೆ ಐವರು ಪುರುಷರು ಬಂದು ಎಲ್ಲರೂ ದೊರೆಯನ್ನು ಸುತ್ತಿನಿಂತರು. ರಾಜನು ತಡೆಯುಳ್ಳವನಾದನು.

೨೧. ದೊರೆಯೇ, ಪಶುಪಾಲನನ್ನು ಹಾಗೆ ತಡೆದು, ಇತ್ತಕಡೆ ಆ ಕಳ್ಳ ಹಗೆಗಳೆಲ್ಲರೂ ಒಟ್ಟಿಗೆ ಆಯುಧಗಳನ್ನು ತೆಗೆದುಕೊಂಡು ಒಬ್ಬರೊಡನೊಬ್ಬರು ಹೊಡೆದಾಡಲು ತೊಡಗಿ, ಬಳಿಕ ಹೆದರಿಕೆಯಿಂದ ಅಡಗಿದರು.

೨೨. ಅವರು ಅಡಗಲು ಪಶುಪಾಲರಾಜನ ಗೃಹವು ಅತಿಸುಂದರವಾಗಿ ಹೊಳೆಯಿತು. ದೊರೆಯೇ, ಬೇರೆಯ ಪಾಪಗಳ ಕೋಟಿಯೂ ಕೊನೆಗೊಂಡಿತು.

೨೩. ಗೃಹದಲ್ಲಿ, ಭೂಮಿ, ನೀರು, ಅಗ್ನಿ, ಸುಖಶೀತಲವಾದ ವಾಯು ಇವೆಲ್ಲವೂ ಅವಕಾಶ(ಆಕಾಶ)ದೊಡಗೂಡಿ, ಪರಿಶುದ್ಧವಾದುವುಗಳಾಗಿ ಐದೂ ಒಕ್ಕಟ್ಟಿನಿಂದ ಸುಗುಣವುಳ್ಳವುಗಳಾಗಿದ್ದುವು.

ಏಕೈವ ತೇಷಾಂ ಸುಚಿರಂ ಸಂವೇಷ್ಟ್ಯಾಸಜ್ಯ ಸಂಸ್ಥಿತಂ ।
ಏವಂ ಸ ಪಶುಪಾಲೋಽಸೌ ಕೃತವಾನಂಜಸಾ ನೃಪ ॥ ೨೪ ॥

ತಸ್ಯ ತಲ್ಲಾಘವಂ ದೃಷ್ಟ್ವಾ ರೂಪಂ ಚ ನೃಪತೇರ್ಮೃಧೇ ।
ತ್ರಿವರ್ಣಃ ಪುರುಷೋ ರಾಜನ್ನಬ್ರವೀದ್ರಾಜಸತ್ತಮಂ ॥ ೨೫ ॥

ತ್ವತ್ಪುತ್ರೋಽಸ್ಮಿ ಮಹಾರಾಜ ಬ್ರೂಹಿ ಕಿಂಕರವಾಣಿ ತೇ ।
ಅಸ್ಮಾಭಿರ್ಬದ್ಧುಮಿಚ್ಛದ್ಭಿಃ ಭವಂತಂ ನಿಶ್ಚಯಃ ಕೃತಃ ॥ ೨೬ ॥

ಯದಿ ನಾಮ ಕೃತಾಸ್ಸರ್ವೇ ವಯಂ ದೇವ ಪರಾಜಿತಾಃ ।
ಏವಮೇವ ಶರೀರೇಷು ಲೀನಾಸ್ತಿಷ್ಠಾಮ ಪಾರ್ಥಿವ ॥
ಮಯ್ಯೇಕೇ ತವ ಪುತ್ರತ್ವಂ ಗತೇ ಸರ್ವೇಷು ಸಂಭವಃ ॥ ೨೭ ॥

ಏವಮುಕ್ತಸ್ತತೋ ರಾಜಾ ತನ್ನರಂ ಪುನರಬ್ರವೀತ್ ॥ ೨೮ ॥

---

೨೪. ಅವುಗಳಲ್ಲಿ ಒಂದು ಮಾತ್ರವೇ ಬಹುಕಾಲ ಸುತ್ತಿ(ಆವರಿಸಿ)ಕೊಂಡು ಸಿದ್ಧವಾಗಿದ್ದಿತು. ದೊರೆಯೇ, ಆ ಪಶುಪಾಲನು ಬೇಗನೆ ಹೀಗಾದನು.

೨೫. ಭದ್ರಾಶ್ವರಾಜನೇ, ಯುದ್ಧದಲ್ಲಿ ಆ ಪಶುಪಾಲರಾಜನ ಚಟುವಟಿಕೆಯನ್ನೂ, ಅವನ ರೂಪವನ್ನೂ ನೋಡಿ ಆ ರಾಜೋತ್ತಮನನ್ನು ಕುರಿತು ತ್ರಿವರ್ಣ ಪುರುಷನು ಮುಂದಿನಂತೆ ಹೇಳಿದನು.

೨೬–೨೭."ಮಹಾರಾಜನೇ, ನಾನು ನಿನ್ನ ಮಗನಾಗಿದ್ದೇನೆ. ನಿನಗೆ ನಾನು ಏನು ಮಾಡಲಿ ? ಹೇಳು. ನಿನ್ನನ್ನು ಬಂಧಿಸಲು ಬಯಸಿದ ನಾವೆಲ್ಲರೂ ಸೋತು ಹೋದರೆ ನಿನ್ನಲ್ಲೇ ಹೀಗೆಯೇ ಲೀನರಾಗಿರುತ್ತೇವೆ. ಎಂದು ನಿಶ್ಚಯ ಮಾಡಿದ್ದೆವು. ನಾನೊಬ್ಬನು ನಿನಗೆ ಪುತ್ರನಾದರೆ ಎಲ್ಲರೂ ಆಗುವರು."

೨೮-೨೯. ಹೀಗೆ ಹೇಳಿಸಿಕೊಂಡ ಪಶುಪಾಲರಾಜನು ಆ ಪುರುಷನಿಗೆ "ಸದುತ್ತಮನೇ, ನನಗೆ ಪುತ್ರನು ಇತರರಿಗೂ ಅನುಕೂಲಕರ್ತೃವಾಗುವನು.

ಪುತ್ರೋ ಭವತಿ ಮೇ ಕರ್ತಾ ಅನ್ಯೇಷಾಮಪಿಸತ್ತಮ ।
ಪುಷ್ಯೈನ್ಸುಖೈರ್ನರೈರ್ಭಾವೈರ್ನಾಹಂ ಲಿಪ್ಯೇ ಕದಾಚನ ॥ ೨೯ ॥

ಏವಮುಕ್ತ್ವಾ ಸ ನೃಪತಿಸ್ತಮಾತ್ಮಜಮಥಾಕರೋತ್ ।
ತೈರ್ವಿಮುಕ್ತ ಸ್ಸ್ವಯಂ ತೇಷಾಂ ಮಧ್ಯೇ ಸ ವಿರರಾಮ ಹ ॥ ೩೦ ॥

ಇತಿ ಶ್ರೀ ವರಾಹಪುರಾಣೇ ಽಗಸ್ತ್ಯಗೀತಾಸುಮೋಕ್ಷಧರ್ಮನಿರೂಪಣಂ ನಾಮ ಏಕಪಂಚಾಶೋಽಧ್ಯಾಯಃ

ನಾನು ಮನುಷ್ಯರಿಂದ ಸುಖಗಳಿಂದಲೂ, ಭಾವಗಳಿಂದಲೂ ಪೋಷಿತನಾಗಿ ಎಂದಿಗೂ ಅವುಗಳಿಂದ ಲಿಪ್ತನಾಗಲು ಇಷ್ಟಪಡುವುದಿಲ್ಲ." ಎಂದನು.

೩೦. ಹಾಗೆ ಹೇಳಿ, ಬಳಿಕ ಆ ದೊರೆಯು ಆ ಪುರುಷನನ್ನು ಪುತ್ರನನ್ನಾಗಿ ಮಾಡಿಕೊಂಡನು. ಅವರಿಂದ ಬಿಡುವನ್ನು ಪಡೆದು, ಅವರ ನಡುವೆ ತಾನು ವಿಶ್ರಾಂತನಾದನು.

ಅಧ್ಯಾಯದ ಸಾರಾಂಶ:—

ದುರ್ವಾಸನಿಂದ ವ್ರತಗಳ ವಿಚಾರವನ್ನೆಲ್ಲಾ ಕೇಳಿದ ಬಳಿಕ ಸತ್ಯತಪನು ಹಿಮಾಲಯ ಪರ್ವತಕ್ಕೆ ಹೊರಟುಹೋದನು. ಪುಷ್ಕರ ತೀರ್ಥಕ್ಕೆ ಹೋಗಿ ಪುನಃ ಭದ್ರಾಶ್ವನ ಅರಮನೆಗೆ ಬಂದ ಅಗಸ್ತ್ಯಮುನಿಯು ಪಶುಪಾಲನೆಂಬ ರಾಜನ ಕಥೆಯಮೂಲಕ ದೇಹೇಂದ್ರಿಯಾತ್ಮಾದಿಸ್ವರೂಪವನ್ನೂ, ಮೋಕ್ಷಧರ್ಮವನ್ನೂ ರೂಪಕಾತಿಶಯೋಕ್ತಿಯ ಮೂಲಕ ತಿಳಿಸುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಐವತ್ತೊಂದನೆಯ ಅಧ್ಯಾಯ.

|| ಶ್ರೀಃ ||

-X-

ದ್ವಾಪಂಚಾಶೋಽಧ್ಯಾಯಃ

ಅಥ ಅಗಸ್ತ್ಯಗೀತಾಪುರೋಗಮನಂ

|| ಅಗಸ್ತ್ಯ ಉವಾಚ ||

ಸ ತ್ರಿವರ್ಣೋಽ ನೃಪಃ ಸೃಷ್ಟಃ ಸ್ವತಂತ್ರತ್ವಾಚ್ಚ ಪಾರ್ಥಿವಃ ।
ಅಹಂನಾಮಾನಮಸೃಜತ್ಪುತ್ರಂ ಪುತ್ರಸ್ತ್ರಿವರ್ಣಕಃ || ೧ ||

ತಸ್ಯಾಪಿ ಚಾಭವತ್ಕನ್ಯಾಪ್ಯವಬೋಧಸ್ವರೂಪಿಣೀ ।
ಸಾತು ವಿಜ್ಞಾನದಂ *ಪುತ್ರಂ ಮನಸ್ಸಂಜ್ಞಂ ಸಸರ್ಜ ಹ || ೨ ||

ಐವತ್ತೆರಡನೆಯ ಅಧ್ಯಾಯ

ಅಗಸ್ತ್ಯಗೀತೆ ಮುಂದುವರೆದುದು

೧. ಅಗಸ್ತ್ಯಮುನಿ—ಆ ಮೂರು ಬಣ್ಣದ ಪ್ರಧಾನನೆಂಬ ದೊರೆಯು ಸ್ವತಂತ್ರವಾಗಿ ಉದಿಸಿದ್ದನು. ಪಶುಪಾಲನಿಗೆ ಪುತ್ರನಾದ ಆ ತ್ರಿವರ್ಣಕನು ಅಹಂ ಎಂಬ ಹೆಸರಿನಮಗನನ್ನು ಪಡೆದನು.

೨. ಆತನಿಗೆ ಅವಬೋಧಸ್ವರೂಪಿಣಿಯಾದ (ಬುದ್ಧಿಸ್ವರೂಪಿಣಿಯಾದ) ಮಗಳುದಿಸಿದಳು. ಆಕೆಯು ಮನಸ್ಸೆಂಬ ವಿಜ್ಞಾನಪ್ರದನಾದ ಮಗನನ್ನು ಪಡೆದಳು.

---

* ಪುತ್ರಮನೋಽಜ್ಞಂ ವಿಸಸರ್ಜ ಹ.

ತಸ್ಯಾಪಿ ಸರ್ವರೂಪಾಃ ಸ್ಯುಸ್ತನಯಾಃ ಪಂಚಭೋಗಿನಃ ।
ಯಥಾಸಂಖ್ಯೇನ ಪುತ್ರಾಸ್ತು ತೇಸ್ಯುರಕ್ಷಾಭಿಧಾನಕಾಃ ॥ ೩ ॥

ಏತೇ ಪೂರ್ವಂ *ದಸ್ಯವಸ್ತು ತತೋ ರಾಜ್ಞಾ ವಶೀಕೃತಾಃ ॥ ೪ ॥

ಅಮೂರ್ತಾ ಇವ ತೇ ಸರ್ವೇ ಚಕ್ರುರಾಯತನಂ ಶುಭಂ ।
ನವದ್ವಾರಂ ಪುರಂ ತಸ್ಯ ತ್ವೇಕಸ್ತಂಭಂ ಚತುಷ್ಪಥಂ ॥
ನದೀಸಹಸ್ರಸಂಕೀರ್ಣಂ ಜಲಕೃತ್ಯಸಮಾಶ್ರಿತಂ ॥ ೫ ॥

ತತ್ಪುರಂ ತೇ ಪ್ರವಿವಿಶುರೇಕೀಭೂತಾಸ್ತತೋ ನವ ।
ಪುರುಷೋ ಮೂರ್ತಿಮಾನ್ರಾಜಾ ಪಶುಪಾಲೋಭವತ್ ಕ್ಷಣಾತ್ ॥ ೬ ॥

ತತಸ್ತತ್ಪುರಸಂಸ್ಥಸ್ತು ಪಶುಪಾಲೋ ಮಹಾನೃಪಃ ।
ಸಂಸೂಚ್ಯ ವಾಚಕಾನ್‌ಶಬ್ದಾನ್ವೇದಾನ್ಸಸ್ಮಾರ ತತ್ಪುರೇ ॥ ೭ ॥

ಆತ್ಮಸ್ವರೂಪಿಣೋ ನಿತ್ಯಾಂಸ್ತದುಕ್ತಾನಿ ವ್ರತಾನಿ ಚ ।
ನಿಯಮಾಸ್ಕ್ರತವಶ್ಚೈವ ಸರ್ವಾನ್ರಾಜಾ ಚಕಾರ ಹ ॥ ೮ ॥

೩. ಆ ವಿಜ್ಞಾನದನಿಗೆ ಸರ್ವವಿಷಯಭೋಗಿಗಳಾದ ಐವರು ಪುತ್ರರುದಿಸಿದರು. ಅನುಕ್ರಮವಾಗಿ ಆ ಐವರು ಮಕ್ಕಳು ಅಕ್ಷ (ಇಂದ್ರಿಯ)ಗಳೆಂಬ ಹೆಸರುಳ್ಳವರಾದರು.

೪. ಅವರು ಮೊದಲು *ದಸ್ಯುಗಳಾಗಿದ್ದರು. ಬಳಿಕ ದೊರೆಯು ಅವರನ್ನು ವಶಪಡಿಸಿಕೊಂಡನು.

೫-೬. ಅವರು ಎಲ್ಲರೂ ನಿರಾಕಾರರಂತೆ ಒಂದು ಕಂಬವೂ, ಒಂಬತ್ತು ಬಾಗಿಲುಗಳೂ, ನಾಲ್ಕು ದಾರಿಗಳೂ ಉಳ್ಳ, (ನಾಡಿಗಳೆಂಬ) ಸಹಸ್ರ ನದಿಗಳಿಂದ ಕೂಡಿದ, ಶುಭಕರವಾದ ಪುರ(ದೇಹ)ವನ್ನು ವಾಸಸ್ಥಾನವನ್ನಾಗಿ ಮಾಡಿಕೊಂಡರು. ಬಳಿಕ ಎಲ್ಲರೂ ಒಂದಾಗಿ, ಹೊಸದಾದ ಆ ಪುರವನ್ನು ಹೊಕ್ಕರು. ಕ್ಷಣಮಾತ್ರದಲ್ಲಿ ಆ ಪುರುಷನು, ಮೂರ್ತಿಮಂತನಾದ ಪಶುಪಾಲರಾಜನಾದನು.

೭-೮. ಬಳಿಕ ಆ ಪುರದಲ್ಲಿರುವ ಪಶುಪಾಲಮಹಾರಾಜನು ವಾಚಕಶಬ್ದಗಳನ್ನು ತಿಳಿಸಿ, ಆತ್ಮಸ್ವರೂಪಿಗಳೂ, ನಿತ್ಯಗಳೂ ಆದ ವೇದಗಳನ್ನೂ ಸ್ಮರಿಸಿದನು. ಆ ವೇದದಲ್ಲಿ ಹೇಳಿರುವ ವ್ರತಗಳನ್ನೂ, ಎಲ್ಲಾ ನಿಯಮಗಳನ್ನೂ, ಯಜ್ಞಗಳನ್ನೂ ಮಾಡಿದನು.

* ದಸ್ಯು=ಕಳ್ಳ, ಹಗೆ.

ಸ ಕದಾಚಿನ್ನೃಪಃ ಖಿನ್ನಃ ಕರ್ಮಕಾಂಡಮರೋಚಯತ್ ॥ ೯ ॥

ಸರ್ವಜ್ಞೋ ಯೋಗನಿದ್ರಾಯಾಂ ಸ್ಥಿತ್ವಾ ಪುತ್ರಂ ಸಸರ್ಜ ಹ ।
ಚತುರ್ವಕ್ತ್ರಂ ಚತುರ್ಬಾಹುಂ ಚತುರ್ವೇದಂ ಚತುಷ್ಪದಂ ।
ತಸ್ಮಾದಾರಭ್ಯ ನೃಪತೇರ್ವಿಷಯಃ ಸ್ವ*ಪದಾ ಸ್ಥಿತಃ ॥ ೧೦ ॥

ತಸ್ಮಿನ್ಸಮುದ್ರೇ ಸ ನೃಪೋ ವನೇ ತಸ್ಮಿಂಸ್ತಥೈವ ಚ ।
ತೃಷ್ಣಾದಿಷು ನೃಪಶ್ಚೈವ ಹಸ್ತ್ಯಾದಿಷು ತಥೈವ ಚ ॥
ಸಮೋऽಭವತ್ಕರ್ಮಕಾಂಡಾದನುಜಾನನ್ಮಹಾಮತೇ ॥ ೧೧ ॥

ಇತಿ ಶ್ರೀವರಾಹಪುರಾಣೇ ಆಗಸ್ತ್ಯಗೀತಾಸು ಮೋಕ್ಷಧರ್ಮನಿರೂಪಣಂ ನಾಮ ದ್ವಾಪಂಚಾಶೋಽಧ್ಯಾಯಃ

---

೯. ಒಂದಾನೊಂದುವೇಳೆ, ಖಿನ್ನನಾದ ಆ ದೊರೆಯು ಕರ್ಮಕಾಂಡದಲ್ಲಿ ಆಸಕ್ತನಾದನು.

೧೦. ಸರ್ವಜ್ಞನಾದ ಅವನು ಯೋಗನಿದ್ರೆಯಲ್ಲಿದ್ದು, ನಾಲ್ಕು ಮುಖಗಳೂ, ನಾಲ್ಕು ತೋಳುಗಳೂ, ನಾಲ್ಕು ವೇದಗಳೂ, ನಾಲ್ಕು ಕಾಲುಗಳೂ ಉಳ್ಳ ಒಬ್ಬ ಮಗನನ್ನು ಸೃಷ್ಟಿಸಿದನು. ಅದು ಮೊದಲುಗೊಂಡು ರಾಜನ ವಿಷಯವು ತನ್ನ ಪದದಿಂದ ನಿಂತಿತು.

೧೧. ಮಹಾಮತಿಯೇ, ಆ ರಾಜನು ಕರ್ಮಕಾಂಡಗಳನ್ನು ಅನುಸರಿಸುತ್ತ, ಆ ಸಮುದ್ರದಲ್ಲಿಯೂ, ವನದಲ್ಲಿಯೂ, ಆಸೆ ಮೊದಲಾದುವುಗಳಲ್ಲೂ, ಆನೆ ಮೊದಲಾದುವುಗಳಲ್ಲೂ ಸಮನಾಗಿದ್ದನು.

ಅಧ್ಯಾಯದ ಸಾರಾಂಶ:—

ಅಗಸ್ತ್ಯಮುನಿಯು ಭದ್ರಾಶ್ವರಾಜನಿಗೆ ಆತ್ಮ, ಶರೀರ, ಇಂದ್ರಿಯಗಳು, ಕರ್ಮ, ಜ್ಞಾನ ಮೊದಲಾದುವುಗಳ ವಿಚಾರವನ್ನು ಗೂಢವಾಗಿ ರೂಪಕಾತಿಶಯೋಕ್ತಿಯೆಂಬ ಅಲಂಕಾರದಿಂದ ತಿಳಿಸುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಐವತ್ತೆರಡನೆಯ ಅಧ್ಯಾಯ.

---

* ಪದ=ಉದ್ಯೋಗ, ಸ್ಥಳ, ಹೆಜ್ಜೆ, ಕಾಲು, ಸಂರಕ್ಷಣೆ, ಭಾಷೆಯ ಪದ.

॥ ಶ್ರೀಃ ॥

–X–

ತ್ರಿಪಂಚಾಶೋಽಧ್ಯಾಯಃ

ಅಥ ಪಶುಪಾಲೋಪಾಖ್ಯಾನಂ

॥ ಭದ್ರಾಶ್ವ ಉವಾಚ ॥

ಮತ್ಪ್ರಶ್ನವಿಷಯೇ ಬ್ರಹ್ಮನ್ ಕಥೇಯಂ ಕಥಿತಾ ತ್ವಯಾ ।
ತಸ್ಯಾವಿರ್ಭೂತಿರಭವತ್ ಕಸ್ಯ ಕೇನ ಕೃತೇನ ಹ ॥ ೧ ॥

ಐವತ್ತಮೂರನೆಯ ಅಧ್ಯಾಯ

ಪಶುಪಾಲೋಪಾಖ್ಯಾನ

೧. ಭದ್ರಾಶ್ವ—ಬ್ರಹ್ಮನೇ, ನನ್ನ ಪ್ರಶ್ನೆಗೆ ಉತ್ತರವಾಗಿ ನೀನು ಕಥೆಯನ್ನು ಹೇಳಿದೆಯಷ್ಟೆ. ಆ ಕಥೆಯು ಯಾರಿಗಾಗಿ ಏತಕ್ಕೆ ಉಂಟಾಯಿತು ?

ಈ ಪುರಾಣದ ೫೧, ೫೨ ಮತ್ತು ೫೩ ನೆಯ ಅಧ್ಯಾಯಗಳಲ್ಲಿರುವ ಪಶುಪಾಲೋಪಾಖ್ಯಾನದ ಬಹು ಭಾಗಕ್ಕೆ ನಿಷ್ಕೃಷ್ಟವೂ ಏಕ ರೀತಿಯೂ ಆದ ಅರ್ಥವು ತತ್ವಶಾಸ್ತ್ರವಿಶಾರದರಿಗೂ ಆಗುವಂತಿಲ್ಲ. ಶ್ಲೋಕಗಳಿಗೆ ಸಾಮಾನ್ಯವಾಗಿ ಬಾಹ್ಯಾರ್ಥವಾದರೂ ಒಗಟುಗಳಂತಿರುವ ಅವುಗಳ ಅಂತರಾರ್ಥ ಅಥವಾ ವಿಷಯವು ಏನೆಂಬುದು ನಿರ್ಧರವಾಗುವುದಿಲ್ಲ. ೫೩ ನೆಯ ಅಧ್ಯಾಯದ ಅನೇಕ ಶ್ಲೋಕಗಳು ಬೊಂಬಾಯಿ ಕಲ್ಕತ್ತಾಗಳಲ್ಲಿ ಮುದ್ರಿತವಾಗಿರುವ ಪ್ರತಿಗಳಲ್ಲಿ ಅಶುದ್ಧವಾಗಿವೆ. ಮೈಸೂರಿನ ಪ್ರಾಚ್ಯಕೋಶಾಲಯದಲ್ಲಿರುವ ತಾಳಪ್ರತಿಯೊಂದರ ಆಧಾರದಿಂದಲೂ ಕೆಲವೆಡೆ ಸ್ವತಂತ್ರವಾಗಿಯೂ ಅವುಗಳನ್ನು ತಿದ್ದಿಕೊಂಡು ಅನುವಾದವನ್ನು ಬರೆದಿದೆ. *ನಕ್ಷತ್ರ ಚಿಹ್ನೆಯಿಂದ ಕೂಡಿದ ಭಾಗವು, ಮುದ್ರಿತಪುಸ್ತಗಳಲ್ಲಿದ್ದ ಆವರಣ ಚಿಹ್ನೆಯೊಳಗಿರುವ ಭಾಗಕ್ಕೆ ಬದಲಾಗಿ ತಿದ್ದಿಬರೆದುದಾಗಿದೆ. ಅಗಸ್ತ್ಯರೇ ಭದ್ರಾಶ್ವರಾಜನಿಗೆ 'ಪಶುಪಾಲನ ಕಥೆಯು ಕಷ್ಟದಿಂದ ತಿಳಿದುಕೊಳ್ಳಬೇಕಾದುದು' ಎಂದು ೫೧ನೆಯ ಅಧ್ಯಾಯದ ೯ನೆಯ ಶ್ಲೋಕದಲ್ಲೂ 'ಈ ಪಶುಪಾಲೋಪಾಖ್ಯಾನವನ್ನು ತಾತ್ವಿಕ(ನಿಜ)ವಾಗಿ ತಿಳಿದುಕೊಳ್ಳುವವನು ಬ್ರಹ್ಮಸಾಕ್ಷಾತ್ಕಾರಪರನಾಗುವನು' ಎಂದು ೫೩ ನೆಯ ಅಧ್ಯಾಯದ ಕಡೆಯಲ್ಲೂ ಹೇಳಿರುವರು. ಆದುದರಿಂದ ಬ್ರಹ್ಮಸಾಕ್ಷಾತ್ಕಾರಕ್ಕೆ ಸಿದ್ಧನಾಗಿರುವ ಜ್ಞಾನಿಗೆ ಮಾತ್ರವೇ ಪಶುಪಾಲೋಪಾಖ್ಯಾನದ ತತ್ವಾರ್ಥವು ತಿಳಿಯುವುದೆಂದು ತೋರುತ್ತದೆ.

೬೨

|| ಅಗಸ್ತ್ಯ ಉವಾಚ ||

ಆಗತೇಯಂ ಕಥಾ ಚಿತ್ರಾ ಸರ್ವಸ್ಯ ವಿಷಯೇ ಸ್ಥಿತಾ ।
ತ್ವದ್ದೇಹೇ ಮಮ ದೇಹೇ ಚ ಸರ್ವಜಂತು(ದೇಹೇ)ಷು ಸಾ ಸಮಾ ॥ ೨ ॥

ತಸ್ಯಾಸ್ಸಂಭೂತಿಮಿಚ್ಛನ್ಯಸ್ತಸ್ಯೋಪಾಯಂ ಸ್ವಯಂ ಪರಂ ।
ಪಶುಪಾಲಾತ್ಸಮುತ್ಪನ್ನೋ ಯಶ್ಚತುಷ್ಪಾಚ್ಚತುರ್ಮುಖಃ || ೩ ||

*ಸ ಗುರುಃ ಸರ್ವವೇದಾನಾಂ ಶಾಸ್ತ್ರಾಣಾಂಚೋಪದೇಶಕೃತ್ ।
(ಸ ಗುರುಃ ಸ ಕಥಾಯಾಸ್ತು ತಸ್ಯಾಶ್ಚೈವ ಪ್ರವರ್ತಕಃ) ||
ತಸ್ಯ ಪುತ್ರಃ ಸ್ವರೋ ನಾಮ ಸತ್ಯಮೂರ್ತಿರಿತಿ ಸ್ಮೃತಃ || ೪ ॥

ತೇನ ಪ್ರೋಕ್ತಂ ತು ಯತ್ಕಿಂಚಿತ್ ಚತುರ್ಣಾಂ ಸಾಧನಂ ನೃಪ ।
ಋಗರ್ಥಾನಾಂ ಚತುರ್ಭಿಸ್ತೇ+ತದುಕ್ತ್ಯಾಸಾಧ್ಯ(ರಾಧ್ಯ) ತಾಂ ಯಯುಃ
|| ೫ ||

---

೨. ಅಗಸ್ತ್ಯ—ಎಲ್ಲರ ವಿಷಯದಲ್ಲೂ ಬಂದಿರುವ ಈ ವಿಚಿತ್ರವಾದ ಕಥೆಯು ನಿನ್ನ ದೇಹದಲ್ಲೂ, ನನ್ನ ದೇಹದಲ್ಲೂ ಸರ್ವದೇಹಗಳಲ್ಲೂ ಸಮವಾಗಿದೆ.

೩–೪. ಪಶುಪಾಲರಾಜನಿಂದ ಯಾರು ಚತುಷ್ಪಾದವೂ, ಚತುರ್ಮುಖವೂ, ಉಳ್ಳ ಪುರುಷನಾಗಿ ಉದಿಸಿದನೋ, ಆ ಕಥೆಯ ಉದಯವನ್ನೂ, ಅದಕ್ಕೆ ತಕ್ಕ ಉಪಾಯವನ್ನೂ ತಾನೇ ಅಧಿಕವಾಗಿ ಯಾರು ಬಯಸಿದನೋ ಅವನೇ ಸರ್ವ ವೇದಶಾಸ್ತ್ರೋಪದೇಶಕನಾದ ಗುರುವು. ಆ ಕಥೆಗೆ ಅವನೇ ಪ್ರವರ್ತಕನು. ಅವನ ಮಗ ಸ್ವರವೆಂಬ ಹೆಸರಿನವನು ಸತ್ಯಮೂರ್ತಿಯೆನಿಸಿಕೊಳ್ಳುವನು.

೫. ದೊರೆಯೇ ಅತನು ಚತುರ್ವಿಧಪುರುಷಾರ್ಥಗಳಿಗೆ ಮತ್ತು ನಾಲ್ಕು ಆಶ್ರಮಗಳಿಗೆ ಸಾಧನವನ್ನು ಸ್ವಲ್ಪಮಟ್ಟಿಗೆ ನಾಲ್ಕು ವೇದಾರ್ಥಗಳಿಂದ ಹೇಳಿದನು. ಅವು ಅವನ ಉಕ್ತಿಯಿಂದ ಪೂಜ್ಯತೆಯನ್ನೂ, ಸಾಧ್ಯತೆಯನ್ನೂ ಪಡೆದುವು.

+ ತದ್ಭಕ್ತ್ಯಾರಾಧ್ಯತಾಂ.

ಚತುರ್ಣಾಂ ಪ್ರಥಮೋ ಯಸ್ತು ಚತುಃಶೃಂಗಃ ಸಮಃಸ್ಥಿರಃ
(ವೃಷದ್ವಿತೀಯಸ್ತತ್ಪ್ರೋಕ್ತಮಾರ್ಗೇಣೈವ ತೃತೀಯಕಃ) ।
***ವೃಷೋದ್ವಿತೀಯೋಽರ್ಥೋಯಸ್ತತ್ಪ್ರೋಕ್ತಮಾರ್ಗೇ ತೃತೀಯಕಃ**
***ಚತುರ್ಥಸ್ತು ತತೋಮೋಕ್ಷಃ ತಾನ್ಪೂಜ್ಯ ಚ ಶುಭಂವ್ರಜೇತ್**
(ಚತುರ್ಥಸ್ತತ್ಪ್ರಣೀತಸ್ತಾಂ ಪೂಜ್ಯ ಭಕ್ತ್ಯಾಶು ತಂ ವ್ರಜೇತ್) ॥ ೬ ॥

ಬ್ರಹ್ಮಚರ್ಯೇಣ ವರ್ತೇತ ದ್ವಿತೀಯೋಽಸ್ಯ ಸನಾತನಃ ॥ ೭ ॥
ತತೋ ಭೃತ್ಯಾದಿಭರಣಂ ವೃಷಭಾರೋಹಣಂ(ನೃಷು)ತ್ರಿಷು ।

ವನವಾಸಶ್ಚ ನಿರ್ದಿಷ್ಟ ಆತ್ಮಸ್ಥೇ ವೃಷಭೇ ಸತಿ ॥ ೮ ॥
ಸತ್ಯ(ಸಪ್ತ)ಮೂರ್ತೇಸ್ತು ಚರಿತಂ ಶುಶ್ರುವಃ ಪ್ರಥಮಂ ನೃಪ
***ಅಹಂಸೋಽಸ್ಮಿ ಚ ವೇದಾಖ್ಯಃ+ಚತುರ್ಧಾಸ್ಯೈಕಧಾ ತ್ರಿಧಾ ।**
(ಅಹಮತ್ಮಿನ್ನದತ್ಮನ್ಯಶ್ಚತುರ್ಧಾ ಚೈಕಧಾ ದ್ವಿಧಾ
ಭೇದಭಿನ್ನೋಽಹಮುತ್ಪನ್ನೋಽಮಮಾಪತ್ಯಾನಿ ಜಜ್ಞಿರೇ ॥ ೯ ॥

---

೬. ಆ ನಾಲ್ಕರಲ್ಲಿ ಮೊದಲನೆಯದು ನಾಲ್ಕುಶೃಂಗ(ಕೊಂಬು)ಗಳುಳ್ಳದೂ ಸಮವೂ ಸ್ಥಿರವೂ ಆದ ಧರ್ಮ. ಎರಡನೆಯದು ಅರ್ಥ. ಮೂರನೆಯದು ಕಾಮವೆನಿಸುವುದು. ನಾಲ್ಕನೆಯದು ಮೋಕ್ಷ. ಅವುಗಳನ್ನು ಗೌರವಿಸಿ ಸಾಧಿಸಿ, ಶುಭವನ್ನು ಪಡೆಯಬೇಕು.

೭–೮. ಬ್ರಹ್ಮಚರ್ಯದಲ್ಲಿರುವುದು ಮೊದಲನೆಯ ಆಶ್ರಮ. ಎರಡನೆಯದು ಪ್ರಾಚೀನಕಾಲದಿಂದಲೂ ಬಂದಿರುವ ಗೃಹಸ್ಥಧರ್ಮ. ಆ ಗೃಹಸ್ಥಾಶ್ರಮದಲ್ಲಿ ಭೃತ್ಯಾದಿಗಳಿಂದ ಕೂಡಿದ ಕುಂಟುಂಬಭರಣವು ವಿಹಿತವಾದುದು. ಮೂರನೆಯದಾದ ವಾನಪ್ರಸ್ಥಾಶ್ರಮದಲ್ಲಿ ಧರ್ಮವು ಮೇಲೇರುವುದು. ಪುರುಷನು ಧರ್ಮಸ್ವರೂಪನೇ ಆದಾಗ ವನವಾಸವನ್ನು ಹೇಳಿದೆ.

೯. ದೊರೆಯೇ, ಸತ್ಯ(ಸಪ್ತ)ಮೂರ್ತಿಯ ಚರಿತ್ರೆಯನ್ನು ಮೊದಲು ತಿಳಿದುಕೊಳ್ಳೋಣ. ವೇದವು ನಾನೇ ಪರಮಾತ್ಮನೆಂದು ಹೇಳುತ್ತದೆ. ಅದೇ ಎಂಟು(ಏಳು)ವಿಧವಾಗಿ ಜನಿಸಿದೆ. ಅದಕ್ಕೆ ನಿತ್ಯಾನಿತ್ಯಸ್ವರೂಪರಾದ ಮಕ್ಕಳು

+ ಇಲ್ಲಿ ಚತುರ್ವಿಂಶತಿ (ಇಪ್ಪತ್ತನಾಲ್ಕು) ತತ್ವಗಳ ವಿಚಾರವನ್ನು ಎಂದರೆ ಪ್ರಕೃತಿ, ಮಹತ್, ಅಹಂಕಾರ, ಪಂಚತನ್ಮಾತ್ರೆಗಳು ಎಂಬಿವು ಎಂಟು ಪ್ರಕೃತಿಗಳೆಂದೂ, ಏಕಾದಶೇಂದ್ರಿಯಗಳೇ ಮೊದಲಾದ ಉಳಿದ ಹದಿನಾರು ತತ್ವಗಳು ಅವುಗಳ ನಿತ್ಯಾನಿತ್ಯಸ್ವರೂಪರಾದ ಪುತ್ರರು ಎಂದರೆ ವಿಕೃತಿಗಳೂ ಎಂದೂ ಹೇಳಿರುವಂತೆ ತೋರುತ್ತದೆ.

ನಿತ್ಯಾನಿತ್ಯಸ್ವರೂಪಾಣಿ ದೃಷ್ಟ್ವಾ ಪೂರ್ವಂ ಚತುರ್ಮುಖಃ |
ಚಿಂತಯಾಮಾಸ ಜನಕಂ ಕಥಂ ಪಶ್ಯಾಮ್ಯಹಂ ಸುಖಂ(ನೃಪ) ‖ ೧೦ ‖

ಮದೀಯಸ್ಯ ಪಿತುರ್ಯೇ ಹಿ ಗುಣಾಹ್ಯಾಸನ್ಮಹಾತ್ಮನಃ ।
ನ ತೇ ಸಂಪ್ರತಿ ದೃಶ್ಯಂತೇ ಸ್ವರಾಪತ್ಯೇಷು ಕೇಷುಚಿತ್ ‖ ೧೧ ‖

ಪಿತುಃ ಪುತ್ರಸ್ಯ ಯಃ ಪುತ್ರಃ ಸ ಪಿತಾಮಹನಾಮಭಾಕ್ ।
ಏವಂ ಶ್ರುತಿಃ ಸ್ಥಿತಾ ಚೇಯಂ ಸ್ವರಾಪತ್ಯೇಷು ನಾಸ್ತಿತತ್ ‖ ೧೨ ‖

*ಕೋಸೌ ಕ್ವದೃಶ್ಯತೇ ನಾಥಃ ದ್ರಷ್ಟವ್ಯಶ್ಚಾಪಿ ಮೇ ಪಿತಾ |
(ಕ್ವಾಪಿ ಸಂಪತ್ಸ್ಯತೇ ಭಾವೋ ದ್ರಷ್ಟವ್ಯಶ್ಚಾಪಿ ತೇ ಪಿತಾ) ‖
ಏವಂ ಗತೇಽಪಿ ಕಿಂ ಕಾರ್ಯಮಿತಿ ಚಿಂತಾಪರೋಽಭವತ್ ‖ ೧೩ ‖

ದಿಸಿದರು. (ಅಥವಾ ನಾನು ವೇದವೆಂಬ ಹೆಸರಿನವನು. ಎಂಟು(ಏಳು)ಬಗೆಯಾದ ಭೇದದಿಂದ ವಿಭಾಗಿಸಲ್ಪಟ್ಟವನಾಗಿ ಅವತರಿಸಿದ್ದೇನೆ. ನಿತ್ಯಾನಿತ್ಯಸ್ವರೂಪರಾದ ಪುತ್ರರು ನನಗೆ ಜನಿಸಿದರು. ಎಂದು ವೇದವು ಹೇಳುತ್ತದೆ.)

೧೦. ಪೂರ್ವದಲ್ಲಿ ಉದಿಸಿದ ಆ ಚತುರ್ಮುಖನು ನಿತ್ಯಾನಿತ್ಯಸ್ವರೂಪರಾದ ಆ ಸ್ವರಪುತ್ರರನ್ನು ನೋಡಿ, ಸಮಾಧಾನವಿಲ್ಲದವನಾಗಿ "ನನ್ನ ತಂದೆಯನ್ನು ನಾನು ಸುಖದಿಂದ ಹೇಗೆ ನೋಡಿಯೇನು !

೧೧. ಮಹಾತ್ಮನಾದ ನನ್ನ ತಂದೆಯಲ್ಲಿ ಯಾವ ಗುಣಗಳಿದ್ದುವೋ ಆ ಗುಣಗಳು ಸ್ವರಪುತ್ರರು ಕೆಲವರಲ್ಲಿ ಕಾಣಿಸುವುದಿಲ್ಲ.

೧೨. 'ಮೊಮ್ಮಗನು ಪಿತಾಮಹ(ಅಜ್ಜ)ನ ಹೆಸರನ್ನು ಪಡೆಯತಕ್ಕವನು' ಎಂದು ಈ ಶ್ರುತಿಯಿದೆ. ಆದರೆ ಸ್ವರಪುತ್ರರಲ್ಲಿ ನನ್ನ ತಂದೆಯ ಗುಣಗಳಾಗಲೀ ಹೆಸರಾಗಲಿ ಇಲ್ಲ.

೧೩. ನಾನು ನನ್ನ ತಂದೆಯನ್ನು ಸಂದರ್ಶಿಸಲೇಬೇಕು. ಆ ನಾಥನನ್ನು ಎಲ್ಲಿ ನೋಡಬಹುದೊ !" ಎಂದು ಯೋಚಿಸುತ್ತ ಸ್ವಲ್ಪಕಾಲ ಕಳೆಯಲಾಗಿ, 'ಈಗ ನಾನು ಮಾಡಬೇಕಾದುದೇನು !' ಎಂದು ಚಿಂತಾಸಕ್ತನಾದನು.

ತಸ್ಯ ಚಿಂತಯತಃ ಶಸ್ತ್ರಂ ಪೈತೃಕಂ ಪುರತೋ ಬಭೌ ।
ತೇನ +ಶಸ್ತ್ರೇಣ ತಂ ರೋಷಾತ್ ಮಮಂಥ ಸ್ವರಮಂತಿಕೇ || ೧೪ ||

ತಸ್ಮಿನ್ಮಥಿತ‡ಮಾತ್ರೇತು ಶಿರಸ್ತಸ್ಯಾತಿದುರ್ಗ್ರಹಂ ।
ನಾರಿಕೇಳಫಲಾಕಾರಂ ಚತುರ್ವಕ್ತ್ರೋನ್ವಪಶ್ಯತ ॥ ೧೫ ॥

ತಚ್ಚಾವೃತಂ ಪ್ರಧಾನೇನ ದಶಧಾ ಸಂವೃತೋ ಬಭೌ ।
ಚತುಷ್ಪಾತ್ರೇನ ಶಸ್ತ್ರೇಣ ಚಿಚ್ಛೇದ ತಿಲಖಂಡವತ್ || ೧೬ ॥

(ಪ್ರಕಾಮಂತಿಲಶಚ್ಛಿನ್ನೇತದಮೂಲೋನಮೋ ಬಭೌ)
***ಪ್ರಧಾನೇತಿಲಶಚ್ಛಿನ್ನೇ ತದ್ದಶಾಂಶೋನಮಾ ಬಭೌ ।**
***ತಸ್ಮಿನ್ ಛಿನ್ನೇ ತದ್ದಶಾಂಶಹ್ರಸ್ವಮನ್ಯಮುಪಶ್ಯತ**
(ಅಹಂತ್ವಹಂ ವದನ್ಭೂತಂ ತಮಪ್ಯೇವ ಮಥಾಚ್ಛಿನತ್) || ೧೭ ||

---

೧೪. ಹಾಗೆ ಚಿಂತಿಸುತ್ತಿದ್ದ ಆತನೆದಿರುಗಡೆಯಲ್ಲಿ ತಂದೆಯ ಶಸ್ತ್ರವೊಂದು ಹೊಳೆಯಿತು. ಆ ಶಸ್ತ್ರವನ್ನು ತೆಗೆದುಕೊಂಡು, ಅದರಿಂದ ಹತ್ತಿರದಲ್ಲಿದ್ದ ಆ ಸ್ವರ ಪುತ್ರನನ್ನು ರೋಷದಿಂದ ಮಥಿಸಿದನು.

೧೫. ಅವನನ್ನು ಮಥಿಸಿದೊಡನೆಯೇ ಚತುರ್ಮುಖನು, ತೆಂಗಿನಕಾಯ ಆಕಾರವಾದ ಮತ್ತೆ ಮಥಿಸಲು ಅತಿ ಕಷ್ಟವಾದ ಅವನ ಶಿರಸ್ಸನ್ನು ಕಂಡನು.

೧೬. ಅದು ಹತ್ತು ಬಗೆಯಾಗಿ ಪರಿಣಮಿಸಿದ ಪ್ರಕೃತಿಯಿಂದ ಆವೃತವಾಗಿ ಹೊಳೆಯುತ್ತಿದ್ದಿತು. ಚತುರ್ಮುಖನು ಅದೇ ಶಸ್ತ್ರದಿಂದ ಅದನ್ನು ಎಳ್ಳು ಕಾಳಿನಂತೆ ಕತ್ತರಿಸಿದನು.

೧೭. ಆ ಪ್ರಕೃತಿಯನ್ನು ಎಳ್ಳಿನಂತೆ ಕತ್ತರಿಸಲು ಅದು ಒಂಬತ್ತು ಬಗೆಯುಳ್ಳದಾಗಿ ಕಾಣಿಸಿತು. ಅದನ್ನೂ ಮಥಿಸಲು ಮತ್ತೆ ಹತ್ತರಲ್ಲೊಂದುಭಾಗ್ಯ ಕಡಿಮೆಯಾದ ಪದಾರ್ಥವನ್ನು ಸಮೀಪದಲ್ಲೇ ನೋಡಿದನು.

\+ ಶಸ್ತ್ರ=ವಿವೇಕರೂಪವಾದ ಜ್ಞಾನ. ‡ ಮಥನ=ವಿಮರ್ಶೆ.

ತಸ್ಮಿನ್ ಭಾಗೇ ದಶಂಕೃತ್ವಾ ಹ್ರಸ್ವಮನ್ಯಮವೈಕ್ಷತ ।
ಅಹಂಭೂತಾಧಿರಿತಿಚ ವದಂತಂ ಭೂತಮಂತಿಕಾತ್ ॥ ೧೮ ॥

ತಮಪ್ಯೇವಮಥೋ ಛಿತ್ವಾ ಪಂಚಾಸೂನ್ಯಾನ್ದದರ್ಶಸಃ
(ತಮಪ್ಯೇವ ಮಥೋಽಚಿತ್ವಾ ಪಂಚಾಕ್ಷಾನಿ ದದರ್ಶನಃ) ।
*ತಮಪ್ಯೇವಮಥೋ ಛಿತ್ವಾ ದ್ವಿಪಂಚಾನನ್ವವೈಕ್ಷತ
(ಕೃತ್ವಾವಕಾಶಂತೇ ಸರ್ವೇಽಜ್ವಲಂತಮಿದಮಂತಿಕಾತ್) ॥ ೧೯ ॥

ತಮಪ್ಯಸಂಗಶಸ್ತ್ರೇಣ ಚಿಚ್ಛೇದ ತಿಲಖಂಡವತ್ ।
ತಸ್ಮಿಂಶ್ಛಿನ್ನೇ ದಶಾಂಶೇನ ಹ್ರಸ್ವಮನ್ಯಮಪಶ್ಯತ ॥ ೨೦ ॥

ಪುರುಷಂ ಕ್ಷೀರೂಪಶಸ್ತ್ರೇಣ ತಂಛಿತ್ವಾನ್ಯಮಪಶ್ಯತ ।
ತದ್ವದ್ಧ್ರಸ್ವಂ ಸಿತಂ ಸೌಮ್ಯಂ ತಮಪ್ಯೇವಮಥಾಕರೋತ್ ॥ ೨೧ ॥

೧೮-೧೯. ಅದರಲ್ಲೂ ಹತ್ತುಭಾಗವನ್ನು ಮಾಡಿ, ಹ್ರಸ್ವವಾದ ಮತ್ತೊಂದನ್ನು ಕಂಡನು. ನಾನೇ ಭೂತಾದಿಯೆಂದು ಹೇಳಿಕೊಳ್ಳುವ ಹತ್ತಿರದಲ್ಲೇ ಇದ್ದ ಆ ಭೂತವನ್ನೂ ಹಾಗೆಯೇ ಮಥಿಸಿ, ಪಂಚಪ್ರಾಣಗಳನ್ನು (ಅಥವಾ ಪಂಚೇಂದ್ರಿಯಗಳನ್ನು ಅಥವಾ ಹತ್ತು ತತ್ವಗಳನ್ನು) ನೋಡಿದನು.

೨೦. ಅದನ್ನೂ ಅಸಂಗ(ವಿರಕ್ತಿ)ಶಸ್ತ್ರದಿಂದ ಎಳ್ಳಿನಂತೆ ಭೇದಿಸಿದನು. ಭೇದಿಸಿದ ಅದರಲ್ಲೂ ಹತ್ತರಲ್ಲೊಂದುಭಾಗ ಕಡಿಮೆಯಾಗಿರುವ ಮತ್ತೊಬ್ಬನನ್ನು ಕಂಡನು.

೨೧. ಆ ಪುರುಷನನ್ನೂ ‡ರೂಪಶಸ್ತ್ರದಿಂದ ಭೇದಿಸುವುದರಿಂದಲೂ ಹಾಗೆಯೇ ಹ್ರಸ್ವನೂ ಬೆಳ್ಳಗಿರುವನೂ ಸೌಮ್ಯನೂ ಆದ ಮತ್ತೊಬ್ಬನನ್ನು ನೋಡಿ ಅವನನ್ನೂ ಹಾಗೆಯೇ ಭೇದಿಸಿದನು.

---

* ೧೦ ಬಗೆಯಾಗಿ ಪರಿಣಮಿಸಿದ ಪ್ರಕೃತಿ=ಪಂಚಭೂತಗಳು ಮತ್ತು ಪಂಚತನ್ಮಾತ್ರೆಗಳು.
‡ ರೂಪ=ಸ್ವಭಾವ, ಸೌಂದರ್ಯ, ನೋಡುವಿಕೆ, ಪ್ರಮಾಣ.

ಏವಂಕೃತೇ ಶರೀರಂತು ದದರ್ಶ ಸಪುನಃ ಪ್ರಭುಃ |
ಸ್ವಕೀಯಮೇವ ತಸ್ಯಾಂತಃ ಪಿತರಂ ನೃಪಸತ್ತಮ ||
ತ್ರಸರೇಣುಸಮಂ ಮೂರ್ತ್ಯಾತ್ವವ್ಯಕ್ತಂ ಸುರುತಸ್ವಜಂ || ೨೨ ||

***ಸತಂ ದೃಷ್ಟ್ವಾ ಪರಂಹರ್ಷಂ ಲೇಭೇ ಚೈವ ಸ್ವರಾಂತವಿತ್ |**
(ಸವೋ ದೃಷ್ಟ್ವಾ ಪರಂಹರ್ಷಮುಭೌಹಿ ಸಸ್ವರೋಭವತ್) || ೨೩ ||

ಏವಂವಿಧೋಸೌ ಪುರುಷಃ ಸ್ವರನಾಮಾ ಮಹಾತಪಾಃ |
ಮೂರ್ತಿಸ್ತಸ್ಯ ಪ್ರವೃತ್ತ್ಯಾಖ್ಯಂ ನಿವೃತ್ತ್ಯಾಖ್ಯಂ ಶಿರೋಮ(ಹತ್)ತಂ || ೨೪ ||

ಏತಸ್ಮಾದೇವ ತಸ್ಯಾ(ಶು)ಸ್ತು ಕ(ಥ)ಥಾಯಾ ರಾಜಸತ್ತಮ |
ಸಂಭೂತಿರಭವದ್ರಾಜನ್ ವಿವೃತಸ್ತೇಷ ಏವತು || ೨೫ ||

---

೨೨. ನೃಪೋತ್ತಮನೇ, ಪ್ರಭುವಾದ ಆ ಚತುರ್ಮುಖನು ಮತ್ತೆ ಅವನ ಶರೀರವನ್ನು ಹಾಗೆ ಛೇದನಮಾಡಲು ಅದರೊಳಗೆ ಸರ್ವಜಂತುಗಳ ದೇಹದಲ್ಲೂ ತ್ರಸರೇಣುವಿನಂತಿರುವುದರಿಂದ ಅವ್ಯಕ್ತನಾಗಿರುವ ತನ್ನ ತಂದೆಯನ್ನೇ (ಪರಮಾತ್ಮ ಪಶುಪಾಲನನ್ನೇ) ಕಂಡನು.

೨೩. ಸ್ವರ(ಸತ್ಯ)ಮೂರ್ತಿಯ ವಿಚಾರವನ್ನೂ ಕೊನೆಯವರಿಗೂ ಅರಿತ ಆ ಚತುರ್ಮುಖನು, ಆ ತಂದೆಯಾದ ಪರಮಾತ್ಮ ಅಥವಾ ಪಶುಪಾಲನನ್ನು ನೋಡಿ, ಅತಿಸಂತೋಷವನ್ನು ಪಡೆದನು

೨೪. ಮಹಾತಪನಾದ ಸ್ವರ(ಸತ್ಯಮೂರ್ತಿ) ಎಂಬ ಹೆಸರಿನ ಆ ಪುರುಷನು ಮೇಲೆ ಹೇಳಿದ ರೀತಿಯುವನು. ಪ್ರವೃತ್ತಿಯೆಂಬುದೇ ಆತನ ದೇಹವೆಂದೂ ನಿವೃತ್ತಿಯೆಂಬುದೇ ಶಿರಸ್ಸೆಂದೂ ಎನಿಸುವುದು.

೨೫. ರಾಜೋತ್ತಮನೇ, ಅವ(ಇವ)ನಿಂದಲೇ ಆ ಕಥೆಯು ಸಂಭವಿಸಿತು. ಆ ಇದನ್ನೇ ವಿವರಿಸಿದುದಾಯಿತು.

ಏಷೇತಿಹಾಸಃಪ್ರಥಮಃ ಸರ್ವಸ್ಯ ಜಗತೋಽಭ್ಯಶಂ ।
ಯ ಇಮಂ ವೇತ್ತಿ ತತ್ತ್ವೇನ ಸಾಕ್ಷಾತ್ಕರ್ಮಪರೋಽ ಭವೇತ್ ॥ ೨೬ ॥

ಇತಿ ಶ್ರೀವರಾಹಪುರಾಣೇ ಅಗಸ್ತ್ಯಗೀತಾಸು ಪಶುಪಾಲೋಪಾಖ್ಯಾನಂ ನಾಮ ತ್ರಿಪಂಚಾಶೋಽಧ್ಯಾಯಃ

---

೨೬. ಸರ್ವಲೋಕಕ್ಕೂ ಈ ಇತಿಹಾಸ (ಪೂರ್ವದಲ್ಲಿ ನಡೆದ ವಿಚಾರ) ವು ಮೊತ್ತಮೊದಲನೆಯದು. ಇದನ್ನು ತಾತ್ವಿಕ(ನಿಜ)ವಾಗಿ ಅರಿಯುವವನು, ಸತ್ಕರ್ಮಪರನೂ ಬ್ರಹ್ಮಸಾಕ್ಷಾತ್ಕಾರಪರನೂ ಆಗುವನು.

ಅಧ್ಯಾಯದ ಸಾರಾಂಶ:—

ಅಗಸ್ತ್ಯಮುನಿಯು, ಪಶುಪಾಲರಾಜನ ಕಥೆಯ ವಿಚಾರವನ್ನು ಪೂರ್ಣವಾಗಿ ತಿಳಿಯದೆ ಮತ್ತೆ ಪ್ರಶ್ನಿಸಿದ ಭದ್ರಾಶ್ವರಾಜನಿಗೆ— ಪರಮಾತ್ಮ ಜೀವಾತ್ಮದೇಹಚತುರ್ವಿಂಶತಿತತ್ವಧರ್ಮಾದಿಪುರುಷಾರ್ಥಚತುಷ್ಟಯಬ್ರಹ್ಮಚರ್ಯಾದಿಆಶ್ರಮಚತುಷ್ಟಯತತ್ವಜ್ಞಾನಮೋಕ್ಷಗಳ ವಿಚಾರವನ್ನು ರೂಪಕಾತಿಶಯೋಕ್ತಿ ಮೂಲಕ ಗೂಢವಾಗಿ ತಿಳಿಸುವನು. ಇಲ್ಲಿಗೆ ಶ್ರೀವರಾಹ ಪುರಾಣದಲ್ಲಿ ಐವತ್ತಮೂರನೆಯ ಅಧ್ಯಾಯ.

PRINTED BY N. NARAYANA RAJU,
PROPRIETOR, SREE HANUMAN PRESS, SIVARAMPET, MYSORE.